ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೨೫

ಶ್ರೀ ವ್ಯಾಸಮಹರ್ಷಿಪ್ರಣೀತಂ

ಶ್ರೀ ವಾಮನಪುರಾಣಂ

(ಸಂಸ್ಕೃತದಲ್ಲಿ ಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

(ವಾಮನಾವತಾರವೆಂಬ ಮೂರನೆಯ ಸಂಪುಟ)

ಅನುವಾದಕ :

ಆಸ್ಥಾನ ಮಹಾವಿದ್ವಾನ್

ಸಂಕೀಘಟ್ಟಂ ವೆಂಕಟಾಚಾರ್ಯ.

ಮೈಸೂರು

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

೧೯೪೬

ಅವತರಣಿಕೆ

ಕುರುಕ್ಷೇತ್ರವೇ ಮೊದಲಾದ ಕ್ಷೇತ್ರಗಳ ಮತ್ತು ತೀರ್ಥಗಳ ಮಾಹಾತ್ಮ್ಯವನ್ನು ಮೊದಲನೆಯ ಮತ್ತು ಎರಡನೆಯ ಸಂಪುಟಗಳಲ್ಲಿ ವಿಸ್ತಾರವಾಗಿ ನಿರೂಪಿಸಲಾಯಿತು. ಪ್ರಾಸಂಗಿಕವಾಗಿ ಬಂದ ಇತರ ಉಪಾಖ್ಯಾನಗಳೂ ನಿರೂಪಿಸಲ್ಪಟ್ಟವು. ಈ ಮೂರನೆಯ ಸಂಪುಟದಲ್ಲಿ ಪ್ರಧಾನ ಪ್ರಶ್ನೆಗೆ ಉತ್ತರವಾಗಿ ವಾಮನಾವತಾರವು ವಿವರಿಸಲ್ಪಟ್ಟಿದೆ.

ಈ ವಿಧವಾದ ವಿಷಯ ಪ್ರಾಧಾನ್ಯದೃಷ್ಟಿಯಿಂದ ಈ ಸಂಪುಟವನ್ನು ವಾಮನಾವತಾರವೆಂದು ಕರೆಯಲಾಗಿದೆ.

ಈ ಸಂಪುಟದಲ್ಲಿ ದೇವದಾನವರ ಯುದ್ಧಪ್ರಸಂಗದಿಂದ ದೇವತೆಗಳಿಗೆ ಉಂಟಾದ ಪರಾಜಯವನ್ನೂ ಆ ಮೂಲಕ ದಾನವಪತಿಯಾದ ಬಲಿಗೆ ಉಂಟಾದ ಸ್ವರ್ಗಸಾಮ್ರಾಜ್ಯವನ್ನೂ ವಿವರಿಸಿ ಪ್ರಹ್ಲಾದನಿಂದ ಬಲಿಚಕ್ರವರ್ತಿಗೆ ಉಪದೇಶಿಸಲ್ಪಟ್ಟ ರಾಜಧರ್ಮ ವೈಷ್ಣವಧರ್ಮಗಳನ್ನೂ ವಿಶೇಷವಾಗಿ ವಿವರಿಸಲಾಗಿದೆ. ತೀರ್ಥಯಾತ್ರೆ ಮೊದಲಾದವು ಕರ್ಮಯೋಗಕ್ಕೆ ಸಹಕಾರಿಗಳೆಂಬುದನ್ನು ಪ್ರಹ್ಲಾದನ ಅನುಷ್ಠಾನದಿಂದ ದೃಢಪಡಿಸಲಾಗಿದೆ.

ಸಾಮ್ರಾಜ್ಯಲಕ್ಷ್ಮಿಯ ಪ್ರವೇಶದಿಂದ ತೇಜಸ್ವಿಯಾದ ಬಲಿಚಕ್ರವರ್ತಿಗೆ ಭಾಗವತೋತ್ತಮನಾದ ಪ್ರಹ್ಲಾದನ ಉಪದೇಶವೂ ಲಭಿಸಿ ಅವನು ಮತ್ತೂ ಧರ್ಮಿಷ್ಠನಾಗಿ ಪರಿಣಮಿಸಲು ಅವಕಾಶವಾಯಿತು. ಬಲಿಚಕ್ರವರ್ತಿಯ ರಾಜ್ಯದಲ್ಲಿ ಉಂಟಾದ ಧರ್ಮಾಭಿವೃದ್ಧಿಯನ್ನು ಇಲ್ಲಿ ಬಹಳಮಟ್ಟಿಗೂ ಕೊಂಡಾಡಿರುವರು.

ಈ ಸಂಪುಟದ ಕೊನೆಯಲ್ಲಿ ಸೇರಿರುವ ಗಜೇಂದ್ರಮೋಕ್ಷಣ ಪಾಪನಾಶನಸ್ತುತಿ ಮುಂತಾದುವು ವೇದಾಂತಾರ್ಥದಿಂದ ಕೂಡಿ ಗಂಭೀರವಾಗಿವೆ. ಅವನ್ನು ಸಾಧ್ಯವಾದಷ್ಟು ಸುಲಭರೀತಿಯಲ್ಲಿ ಅನುವದಿಸಲಾಗಿದೆ. ಇನ್ನೂ ಸುಲಭಶೈಲಿಯಲ್ಲಿ ಬರೆಯುವುದಾದರೆ ಅದೂ ಒಂದು ಮಹಾಗ್ರಂಥವೇ ಆದೀತೆಂಬ ಭಯದಿಂದ ಸಂಗ್ರಹಿಸಲಾಗಿದೆ. ಶಾಸ್ತ್ರಮರ್ಯಾದೆಗೂ ವಿಷಯಗಾಂಭೀರ್ಯಕ್ಕೂ ತಕ್ಕಂತೆ ಕೆಲವುಕಡೆಗಳಲ್ಲಿ ಸ್ವಲ್ಪ ಕಠಿನವಾಗಿ ಕಂಡರೂ ವಾಚಕರ ಭಾವನೆಗೆ ನಿಲುಕಿಸದಷ್ಟು ಕಷ್ಟಕರವಾಗಲಾರದೆಂದು ನಂಬುತ್ತೇನೆ.

ಇಹಲೋಕದ ಭೋಗಗಳಲ್ಲಿಯೂ ಭೋಗಸಾಮಗ್ರಿಗಳಲ್ಲಿಯೂ ನಿರತ ವಾಗಿರುವ ಈ ವಿಜ್ಞಾನಯುಗದಲ್ಲಿ ಪುಣ್ಯಪಾಪ, ಧರ್ಮಾಧರ್ಮ, ಸ್ವರ್ಗನರಕಗಳ ಕಥೆಯೇ ಅಸ್ತವಾಗುತ್ತಿದೆ ಈ ವಿಷಯದಲ್ಲಿ

ವಂಗಾಃ ಕಥಮಂಗಾಃ ಕಥಮಿತ್ಯನುಯುಂಜ್ತೇ ವೃಥಾ ದೇಶಾನ್ ।
ಕೀದೃಕ್ಕೃತಾಂ ತಪುರಮಿತಿ ಕೋಽಪಿ ನಜಿಜ್ಞಾಸತಿ ಲೋಕಃ ॥

ಎಂಬ ನೀತಿ ಶ್ಲೋಕವನ್ನು ಯಾರೂ ಸ್ಮರಿಸದಿರಲಾರರು, ಇಂತಹ ಈ ಕಾಲದಲ್ಲಿ ಧರ್ಮಾಧರ್ಮವಿವೇಚನೆಯಿಂದ ಮನುಷ್ಯಜೀವನವನ್ನು ಸಾರ್ಥಕಗೊಳಿಸುವ ಇಂತಹ ಗ್ರಂಥಗಳು ಅತ್ಯವಶ್ಯಕಗಳೆಂಬ ವಿಷಯದಲ್ಲಿ ಯಾರೂ ಸಂದೇಹಪಡಲಾರರು.

ಭರತಖಂಡದ ಭಾರತೀಯರ ಜೀವನವು ಐಹಿಕಭೋಗಗಳಿಗೆ ಪ್ರಾಧಾನ್ಯ ಕೊಡದೆ ಶಾಸ್ತ್ರೀಯವಾದ ಧರ್ಮಾಧರ್ಮದೃಷ್ಟಿಯಿಂದ ಪರಲೋಕ ಸುಖವೆಂಬ ಚೇತನೋದ್ಧಾರಕ್ಕಾಗಿಯೇ ಉಂಟಾಗಿದೆ ಎಂಬುವುದಕ್ಕೆ ಇಂತಹ ಗ್ರಂಥಗಳು ಬಹಳ ಮಟ್ಟಿಗೂ ನಿದರ್ಶನವಾಗಿವೆ.

ಮನುಷ್ಯ ಸಾಮಾನ್ಯಕ್ಕೂ ಅವಶ್ಯಕಗಳೆಂದು ಹೇಳಲಾಗಿರುವ ಕೆಲವು ಅಹಿಂಸಾದಿ ಧರ್ಮಗಳು ಪಾಶ್ಚಾತ್ಯರ ಆಚಾರಣೆಯಲ್ಲಿದ್ದರೂ ಅವು ಐಹಿಕಭೋಗಕ್ಕೆ ಸಾಧನವಾಗಿ ಕಂಡುಬರುತ್ತಿವೆಯೇ ಹೊರತು ಪರಲೋಕದ ಸುಖಕ್ಕೆ ಸಾಧಕವಾಗುವಂತಹ ಧರ್ಮದೃಷ್ಟಿಯಿಂದ ಉಂಟಾದುದಲ್ಲ. ಒಂದುವೇಳೆ ಕೆಲವು ಹಾಗಿದ್ದರೂ ಅವು ಭಾರತೀಯ ಗ್ರಂಥಗಳ ಪರಿಚಯದ ಫಲವೆಂದೇ ಹೇಳಬಹುದಾಗಿದೆ. ಇತ್ತೀಚಿಗೆ ನಮ್ಮ ಅನೇಕ ಗ್ರಂಥಗಳ ಭಾಷಾಂತರೀಕರಣದಿಂದ ಅವರು ಹೊಂದುತ್ತಿರುವ ಪರಿಶ್ರಮವೇ ಇದಕ್ಕೆ ನಿದರ್ಶನ.

ಇಂತಹ ಪುರಾಣಗ್ರಂಥಗಳ ಅನೇಕ ವಚನಗಳು ಧರ್ಮಶಾಸ್ತ್ರಕ್ಕೆ ಅನುಬಂಧಿಸುವ ನಿಬಂಧನ ಗ್ರಂಥಗಳಲ್ಲಿ ಮೂಲಪ್ರಮಾಣವಾಗಿ ಉದಹರಿಸಲ್ಪಟ್ಟಿವೆ. ವೇದ [illegible]ಳ ಅರ್ಥವನ್ನೇ ಪ್ರಕಾಶಗೊಳಿಸಲು ಪ್ರಯತ್ನಿಸಿರುವ ಈ ಪುರಾಣ ಗ್ರಂಥಗಳು (ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ಎಂಬ ಪ್ರಮಾಣದಿಂದ) ವೇದದಲ್ಲಿ ಅಧಿಕಾರಹೊಂದದಿರುವ ಬಹು ಜನಗಳಿಗೆ ತತ್ತ್ವಜ್ಞಾನವನ್ನುಂಟುಮಾಡುವುದರ ಮೂಲಕ ಹೆಚ್ಚು ಪ್ರಯೋಜನಕಾರಿಗಳಾಗಿವೆ ಎಂದರೆ ಇದೂ ಅನೃತವಲ್ಲ.

ಇಂತಹ ಪುರಾಣಗಳು ಸಂಸ್ಕೃತಭಾಷೆಯಲ್ಲಿದ್ದುದರಿಂದಲೇ ಇವುಗಳ ಪರಿಪೂರ್ಣ ಫಲವು ಲಭಿಸಲು ಅಡಚಣೆ ಇತ್ತೆಂದೂ ಹೇಳಬಹುದು. ಏಕೆಂದರೆ ಈಗ ಸಂಸ್ಕೃತವು ಮನೆಯ ಮಾತಾಗಿಲ್ಲ. ಕೇವಲ ಗ್ರಾಂಥಿಕಭಾಷೆಯಾಗಿ ಉಳಿದಿದೆ.

ಇವುಗಳನ್ನು ಭಾಷಾಂತರೀಕರಿಸಿ ಎಲ್ಲರಿಗೂ ಇವುಗಳ ಉಪಯೋಗವು ಲಭಿಸುವಂತೆ ಪ್ರಚುರಪಡಿಸಲು ಉದ್ಯಮಗೊಂಡಿರುವ ನಮ್ಮ ಮಹಾಪ್ರಭುಗಳವರ ಉದಾರಾಶ್ರಯವು ಒಂದು ದೊಡ್ಡ ಧರ್ಮೋದ್ಧಾರ ಕಾರ್ಯದಲ್ಲಿಯೇ ನಿರತವಾಗಿದೆ ಎಂದರೆ ಇದು ಅತಿಶಯೋಕ್ತಿಯಾಗಲಾರದು. ಅರ್ಥಸಹಿತವಾದ ಈ ಪುರಾಣದ ಶ್ರವಣಮನನಾದಿಗಳು ಸರ್ವಚೇತನರಿಗೂ ಇಷ್ಟಾರ್ಥಪ್ರದವೆಂಬುದನ್ನು ಈ ಪುರಾಣದ ಕೊನೆಯಲ್ಲಿ ಹೇಳಿರುವ ಫಲಪ್ರಶಂಸಾ ಸಂದರ್ಭದಲ್ಲಿಯೂ ನೋಡಬಹುದು.

ಇಂತಹ ಧಾರ್ಮಿಕ ಗ್ರಂಥಗಳ ಪ್ರಚಾರದಿಂದಲೂ ಸ್ವಯಂ ಧರ್ಮಾನುಷ್ಠಾನದಿಂದಲೂ ರಾಜರ್ಷಿಯಂತೆ ದಯಮಾಡಿಸಿರುವ ಪ್ರಭುವರ್ಯರಾದ **ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್,** ಜಿ.ಸಿ.ಬಿ., ಜಿ.ಸಿ.ಎಸ್.ಐ. ರವರಿಗೆ ಜಗದ್ರಕ್ಷಕನಾದ ತ್ರಿವಿಕ್ರಮಮೂರ್ತಿಯು ಇನ್ನೂ ಅತಿಶಯವಾದ ಆಯುರಾರೋಗ್ಯ ಸತ್ಸಂತಾನಾದಿಗಳನ್ನು ದಯಪಾಲಿಸಿ ರಕ್ಷಿಸುತ್ತಿರಲೆಂದು ಭಗವಂತನನ್ನು ಅನನ್ಯ ಮನಸ್ಕತೆಯಿಂದ ಪ್ರಾರ್ಥಿಸುತ್ತೇನೆ.

ರಾಜಾ ಧಾರ್ಮಿಕೋ ವಿಜಯೀ ಚ ಭವತು.

ಕಲ್ಯಾಣೀಮತಿ ರಾತ್ಮಸಂಯಮರತಿಃ
ರಾಜ್ಯಾಧಿಕಾರೇಧೃತಿಃ
ಸೌಜನ್ಯಂ ಸ್ವಜನೇಷು ದುಃಖಿಷು ದಯಾ
ಭೂಯ್ಸಾ ಚ ಭವ್ಯೋದಯಃ ॥

ಭೂಯಾಸುಃ ಜಯಚಾಮಭೂಪತಿಮಣೇಃ
ದೇವಸ್ಯ ಲಕ್ಷ್ಮೀಪತೇಃ ।
ಕಾರುಣ್ಯಾತ್ಪುರುಷಾಯುಷಂ ಸುವಿಮಲಾ
ಕೀರ್ತಿಶ್ಚ ಸತ್ಸಂತತಿಃ ॥

ಅನುವಾದಕ,
ಆಸ್ಥಾನ ಮಹಾವಿದ್ವಾನ್
ಸಂಕೇಘಟ್ಟಂ ವೆಂಕಟಾಚಾರ್ಯ.

ಮೈಸೂರು
3—4—46

ಶ್ರೀ ವಾಮನಪುರಾಣದ

ವಿ ಷ ಯಾ ನು ಕ್ರ ಮ ಣಿ ಕೆ

ಅರವತ್ತೇಳನೆಯ ಅಧ್ಯಾಯ—

ಅಂಧಕನು ಸೇನೆಯೊಡನೆ ಮಂದರಪರ್ವತಕ್ಕೆ ಬಂದುದು. ಅಲ್ಲಿ ಶಂಕರನ ಆಜ್ಞೆಯಂತೆ ನಂದಿಯು ಗಣಗಳನ್ನೆಲ್ಲಾ ಆಹ್ವಾನ ಮಾಡಿದುದು. ಆ ಗಣಗಳಲ್ಲಿ ಮಹಾಪಾಶುಪತರ ವಿಷಯದಲ್ಲಿ ಶಂಕರನು ತೋರಿಸಿದ ಆದರ. ಭೇದಬುದ್ಧಿಯಿಂದ ಇದ್ದ ಇತರರ ವಿಷಯದಲ್ಲಿ ಅನಾದರ. ಇವುಗಳ ಪ್ರಸಂಗದಲ್ಲಿ ವಿಷ್ಣುವಿನ ವಿಷಯದಲ್ಲಿ ಭೇದಬುದ್ಧಿ ಇಲ್ಲದೆ, ಹರಿಹರರಿಗೆ ಅಭೇದವೇ ಇದೆ ಯೆಂಬ ಉಪದೇಶ, ಅನಂತರ ಎಲ್ಲರನ್ನೂ ಸತ್ಕರಿಸಿದ ಶಂಕರನ ಯುದ್ಧಸನ್ನಾಹ. 1-12

ಅರವತ್ತೆಂಟನೆಯ ಅಧ್ಯಾಯ—

ಅಂಧಕನೊಡನೆ ಯುದ್ಧಹೂಡಲು ಗಣಪತಿಯು, ಶಂಕರನಲ್ಲಿ ಪ್ರಾರ್ಥಿಸಲು, ಶಂಕರನೂ ದೇವಿಯ ಅನುಮತಿಯಿಂದ, ತಾನೂ ಅಲಂಕೃತನಾಗಿ ಶಿವೆಯೊಡನೆ ಯುದ್ಧಕ್ಕೆ ಹೊರಡುವುದು, ಮತ್ತು ಮನೆಯಲ್ಲಿ ದೇವಿಯನ್ನು ಜಾಗರೂಕತೆಯಿಂದ ರಕ್ಷಿಸಬೇಕೆಂದು ಹೇಳಿ ಶುಭಶಕುನಗಳಿಂದ ಸಂತುಷ್ಟನಾದುದು. ಇಂದ್ರಾದಿಗಳೂ ಪ್ರೇಕ್ಷಕರಾಗಿ ಆಕಾಶದಲ್ಲಿ ನಿಂತಿರುವಾಗಲೇ ಪರಾಜಿತವಾದ ದಾನವಸೈನ್ಯವು ಶುಕ್ರಾಚಾರ್ಯನಲ್ಲಿ ಶರಣಾಗತವಾದುದು. 14-27

ಅರವತ್ತೊಂಭತ್ತನೆಯ ಅಧ್ಯಾಯ—

ಅಂಧಕನು ಶುಕ್ರಾಚಾರ್ಯರಲ್ಲಿ ಶರಣಾಗತನಾಗಿ ವಿಜಯೋಪಾಯ ವನ್ನು ಪ್ರಾರ್ಥಿಸಲು ಶುಕ್ರಾಚಾರ್ಯನೂ ಸಂಜೀವಿನೀ ಮಂತ್ರದ ಆವರ್ತಿಯಿಂದ ದೈತ್ಯರನ್ನು ಬದುಕಿಸಿದುದು. ನಂದಿಯಿಂದ ಈ ವೃತ್ತಾಂತವನ್ನು ತಿಳಿದ ಶಂಕರನು ಶುಕ್ರನನ್ನು ಕರೆತರಿಸಿ ಅವನನ್ನು ನುಂಗಿದುದು. ಶಂಕರನ ಜಠರವನ್ನು ಸೇರಿದ ಶುಕ್ರನ

ಸ್ತುತಿ, ಪ್ರಸನ್ನನಾದ ಶಂಕರನಿಂದ ಪುನಃ ಅವನ ಬಿಡುಗಡೆ, ಶುಕ್ರನ ಆಗಮನಾನಂತರ ಘೋರವಾದ ದೈತ್ಯದಾನವ ಯುದ್ಧ. ವಿಷ್ಣುವಿನ ಅನುಗ್ರಹದಿಂದ ಬದುಕಿ ಎದ್ದ ದೇವತೆಗಳ ಮಹಾ ಯುದ್ಧದಲ್ಲಿ ದಾನವರಿಗೆ ಉಂಟಾದ ಪರಾಭವ. ಅನಂತರ, ಕಪಟೋಪಾಯದಿಂದ ವಿಜಯಗಳಿಸಲು ಹರನ ವೇಷದಿಂದ ಕೂಡಿದ ಅಂಧಕನು ನಂದಿಯ ವೇಷದಿಂದ ಕೂಡಿದ ಸುಂದ ನೊಡನೆ ಮಂದರಕ್ಕೆ ಬಂದು ಮನೆಯಲ್ಲಿದ್ದ ಪಾರ್ವತಿಯನ್ನು ವಂಚಿಸಲು ಪ್ರಯತ್ನಪಟ್ಟುದುದು. ಅದರಿಂದಲೂ ಮನೋರಥ ಸಿದ್ಧಿ ಇಲ್ಲದೆ ಅಂಧಕನು ಹಿಂದೆ ಬಂದನಂತರ ಪುನಃ ಮಹಾಯುದ್ಧ. ಹರಿ, ಇಂದ್ರ ಮೊದಲಾದ ದೇವತೋತ್ತಮರೂ ಯುದ್ಧದಲ್ಲಿ ಭಾಗವಹಿಸಿದುದು. ಇಂದ್ರನಿಗೆ ಮಾತಲಿ ಎಂಬ ಸಾರಥಿಯು ಲಭಿಸಿದುದು. ಜಂಭನವಧ, ವಿಷ್ಣುವಿನಿಂದ ಕುಜಂಭನವಧ, ದೇವತೆಗಳ ವಿಜಯದಿಂದ ಸಂತುಷ್ಟರಾದ ಇಂದ್ರಾದಿಗಳು ಶಂಕರ ನಲ್ಲಿ ಬಂದು ಸೇರಿದುದು. 29-59

ಎಪ್ಪತ್ತನೆಯ ಅಧ್ಯಾಯ—

ದೈತ್ಯಬಲವೆಲ್ಲವೂ ಭಗ್ನವಾದ ನಂತರ ಇಂದ್ರನ ಪ್ರೋತ್ಸಾಹ ವಚನ ದಿಂದ ಅಂಧಕನ ಯುದ್ಧಾವತರಣ, ಏಕಾಕಿಯಾಗಿ ಯುದ್ಧಕ್ಕೆ ನಿಂತ ಅಂಧಕನೊಡನೆ ಹರನೂ ಏಕಾಕಿಯಾಗಿ ನಿಂತು ಯುದ್ಧ ಮಾಡಿದುದು. ಅಂಧಕನ ಮೇಲೆ ಹರನು ಮಾಡಿದ ಶೂಲಾಯುಧ ಪ್ರಯೋಗ, ಅಂಧಕನ ಗದಾಪ್ರಹಾರದಿಂದ ಹರನ ತಲೆಯಲ್ಲಿ ಉಂಟಾದ ರಕ್ತಧಾರೆಯಿಂದ ಭೈರವರ ಉತ್ಪತ್ತಿ. ಹರನ ಬೆವರಿ ನಿಂದ ಚರ್ಚಿಕಾ ಮತ್ತು ಕುಜರ ಉತ್ಪತ್ತಿ. ಶೂಲಾಯುಧದಲ್ಲಿ ಛತ್ರಿಯಂತೆ ಮೇಲಕ್ಕೆ ಎತ್ತಿ ಹಿಡಿಯಲ್ಪಟ್ಟ ಅಂಧಕ ದೇಹವನ್ನು ಹರನು ನೇತ್ರಾಗ್ನಿಯಿಂದ ಒಣಗಿಸಿದುದು. ಜ್ಞಾನಹೊಂದಿದ ಅಂಧಕನಿಂದ ಮಾಡಲ್ಪಟ್ಟ ಹರನ ಸ್ತುತಿ ಮತ್ತು ಅವನ ವಿಷಯ ದಲ್ಲಿ ಶಂಕರನ ಅನುಗ್ರಹವಚನ, ಭೃಂಗಿಯೆಂಬ ಭಕ್ತನಾದ ಅವನೊಡನೆ ಶಂಕರನು ಮಂದರಕ್ಕೆ ಬಂದು ಪಾರ್ವತಿಯೊಡನೆ ಇವನ ವಿಚಾರವನ್ನು ಹೇಳಿದುದು. ಪಾರ್ವತಿಯನ್ನು ನಮಸ್ಕರಿಸಿ ನಿಂತು ಸ್ತೋತ್ರಮಾಡಿದ ಅಂಧಕನಿಗೆ ಅವಳಿಂದಲೂ ಅನುಗ್ರಹ

ಲಾಭ, ಭೃಂಗಿ ಎಂಬ ಹೆಸರಿನಿಂದ ಗಣಗಳಲ್ಲಿ ಸೇರಿ ಅಂಧಕನು ಹರಭಕ್ತನಾದುದು. 62-83

ಎಪ್ಪತ್ತೊಂದನೆಯ ಅಧ್ಯಾಯ—

ದೇವತೆಗಳಿಂದ ಪರಾಜಯಹೊಂದಿ ಪಾತಾಲಕ್ಕೆ ಓಡಿಹೋದ ದೈತ್ಯರಲ್ಲಿ ಮಯ, ತಾರ ಮೊದಲಾದವರನ್ನು ಶಂಕರನ ಆಜ್ಞೆಯಿಂದ ಇಂದ್ರನು ಮಲಯಪರ್ವತಕ್ಕೆ ಹೋಗಿ ನಾಶಮಾಡಿದುದು. ದಿತಿಯ ಗರ್ಭವನ್ನು ನಾಶಪಡಿಸಿದುದರಿಂದ ಇಂದ್ರನಿಗೆ ಗೋತ್ರಭಿತ್ ಎಂಬ ನಾಮಧೇಯವು ಉಂಟಾದುದು. 86-94

ಎಪ್ಪತ್ತೆರಡನೆಯ ಅಧ್ಯಾಯ—

ದಿತಿಯ ಗರ್ಭವು ಮರುತ್ತುಗಳಾದುವೆಂಬ ಪ್ರಸಂಗದಿಂದ ಸ್ವಾಯಂಭುವಮನ್ವಂತರದಿಂದ ಚಾಕ್ಷುಷಮನ್ವಂತರದವರಿಗೂ ಉತ್ಪನ್ನರಾದ ಮರುತ್ತುಗಳ ವಿವರಣೆ. 96-110

ಎಪ್ಪತ್ತಮೂರನೆಯ ಅಧ್ಯಾಯ—

ಅಂಧಕನ ತರುವಾಯ ಬಲಿಯ ರಾಜ್ಯಭಾರ ದೇವತೆಗಳ ಅಪಕಾರದಿಂದ ಕ್ರುದ್ಧನಾದ ಬಲಿಯ ಯುದ್ಧವ್ಯಾಪಾರ, ಭಯಂಕರವಾದ ದೇವದಾನವ ಯುದ್ಧದಲ್ಲಿ ವಿಷ್ಣುವು ಕಾಲನೇಮಿಯನ್ನು ನಾಶಮಾಡಿದ ವಿವರಣೆ. 111-123

ಎಪ್ಪತ್ತನಾಲ್ಕನೆಯ ಅಧ್ಯಾಯ—

ದೈತ್ಯದಾನವ ಯುದ್ಧದಲ್ಲಿ ವಿಷ್ಣುವು ಅಂತರ್ಧಾನಹೊಂದಲು ದುರ್ಬಲರಾದ ದೇವತೆಗಳು ದೈತ್ಯರಿಂದ ಪರಾಜಿತರಾಗಿ ಇಂದ್ರಾದಿಗಳೆಲ್ಲರೂ ಸತ್ಯಲೋಕಕ್ಕೆ ಹೋಗಿ ಸೇರಿದುದು. ಬಲಿಗೆ ಉಂಟಾದ ಸ್ವರ್ಗಸಾಮ್ರಾಜ್ಯ. ಪ್ರಹ್ಲಾದನಿಂದ ಬಲಿಗೆ ರಾಜಧರ್ಮದ ಉಪದೇಶ. 125-134

ಎಪ್ಪತ್ತೈದನೆಯ ಅಧ್ಯಾಯ—

ಬಲಿಯು ಲೋಕಾಧಿಪತಿಯಾಗಿ ಸ್ವರ್ಗವನ್ನಾಳುತ್ತಿರುವಾಗ ಧರ್ಮಾಭಿವೃದ್ಧಿಯಿಂದ ಕೃತಯುಗದ ಚಿಹ್ನೆಗಳೇ ಹೆಚ್ಚಾಗಲು ತನಗೆ ಅವಕಾಶವಿಲ್ಲದೆ ಕಲಿಯು ಬ್ರಹ್ಮನಲ್ಲಿ ಮೊರೆಯಿಟ್ಟು

ಅಲ್ಲಿಯೂ ಕೃತಕೃತ್ಯನಾಗದೆ ವಿಭೀತಕ ವನಕ್ಕೆ ತೆರಳಿದುದು. ಇಂದ್ರನ ಜಯಲಕ್ಷ್ಮಿಯು ಬಲಿಯ ಪರಾಕ್ರಮಕ್ಕೆ ಮೆಚ್ಚಿ ಅವನನ್ನು ಪ್ರಶಂಸಿಸಿ ಬಂದು ಸೇರಿದುದು. 136-146

ಎಪ್ಪತ್ತಾರನೆಯ ಅಧ್ಯಾಯ—

ತನ್ನ ರಾಜ್ಯವೆಲ್ಲವೂ ದಾನವರ ಕೈಸೇರಿದನಂತರ ಇಂದ್ರನು ಬ್ರಹ್ಮ ಲೋಕಕ್ಕೆ ಹೋಗಿ ಚತುರ್ಮುಖ ಕಶ್ಯಪರೇ ಮೊದಲಾದವರಲ್ಲಿ ತನಗೆ ಉಂಟಾದ ತೊಂದರೆಯನ್ನು ಹೇಳಿಕೊಂಡುದು. ಅವರ ಅಪ್ಪಣೆಯಂತೆ ದಿತಿಯ ಗರ್ಭಚ್ಛೇದದಿಂದುಂಟಾದ ಭ್ರೂಣ ಹತ್ಯೆಯ ಶಾಂತಿಗಾಗಿ ಇಂದ್ರನು ಹಿಮವತ್ಪರ್ವತದಲ್ಲಿ ನಾರಾಯಣ ನನ್ನು ಕುರಿತು ತಪಸ್ಸುಮಾಡಿ ಪಾಪನಿವೃತ್ತಿಹೊಂದಿದ ವಿವರಣೆ. ಅನಂತರ ದಿತಿಯ ಆಶ್ರಮಕ್ಕೆ ತೆರಳಿದ ಇಂದ್ರನ ಕೋರಿಕೆಯಂತೆ ಅದಿತಿಯು ಮಹಾವಿಷ್ಣುವಿನಲ್ಲಿ ಶರಣಾಗತಳಾಗಿ ಪ್ರಾರ್ಥಿಸಿದುದು. ಮತ್ತು ಅವಳ ಪ್ರಾರ್ಥನೆಯಂತೆ ಇಂದ್ರನ ರಾಜ್ಯಲಾಭಕ್ಕಾಗಿ ಬಲಿಯನ್ನೂ ಬಂಧಿಸಲು ಮಹಾವಿಷ್ಣುವು ತಾನೇ ಅದಿತಿಯ ಗರ್ಭದಲ್ಲಿ ಪ್ರವೇಶಿಸಿದುದು. 148-160

ಎಪ್ಪತ್ತೇಳನೆಯ ಅಧ್ಯಾಯ—

ವಾಮನನು ದಿತಿಯ ಗರ್ಭದಲ್ಲಿ ಅವತರಿಸಿದೊಡನೆಯೇ ದೈತ್ಯರಿಗೆ ಉಂಟಾದ ತೇಜೋಹಾನಿಯಿಂದ ಕಾತರಗೊಂಡ ಬಲಿಯು ಪ್ರಹ್ಲಾದನನ್ನು ಕುರಿತು ಕಾರಣವನ್ನು ಕೇಳಿದುದು. ಯೋಗ ಬಲದಿಂದ ವಿಷಯವನ್ನು ಸಾಕಾ ತ್ಕರಿಸಿ ಪ್ರಹ್ಲಾದನು ಹೇಳಲಾಗಿ ಕುಪಿತನಾದ ಬಲಿಯು ಹರಿಯನ್ನು ಜರಿದುದು. ಇದಕ್ಕಾಗಿ ಪ್ರಹ್ಲಾದನೂ ಬಲಿಗೆ ಶಾಪಕೊಟ್ಟದ್ದು. ಅನಂತರ ಕ್ಷಮೆಬೇಡಿದ ಬಲಿಯ ಪ್ರಾರ್ಥನೆಯಿಂದ ಶಾಂತನಾದ ಪ್ರಹ್ಲಾದನು ವಿವೇಕ ವನ್ನುಪದೇಶಿಸಿ ಹರಿಯನ್ನೇ ಆಶ್ರಯಿಸಿಕೊಂಡಿರುವಂತೆ ಹೇಳಿ ತಾನೂ ತೀರ್ಥಯಾತ್ರೆಗೆ ಹೊರಟುದುದು. 162-174

ಎಪ್ಪತ್ತೆಂಟನೆಯ ಅಧ್ಯಾಯ—

ಪ್ರಹ್ಲಾದನ ತೀರ್ಥಯಾತ್ರಾ ಪ್ರಸಂಗದಲ್ಲಿ ಹಿಂದೆಯೂ ಪರಮಾತ್ಮನು ಧುಂಧುವೆಂಬ ದಾನವನನ್ನು ಬಂಧಿಸಲು ತ್ರಿವಿಕ್ರಮಾವತಾರವನ್ನು ಹೊಂದಿದ್ದನೆಂಬ ಉಪಾಖ್ಯಾನ, ಧುಂಧುವಿನ ದಿಗ್ವಿಜಯ ಮತ್ತು ಅವನನ್ನು ತ್ರಿವಿಕ್ರಮನು ಬಂಧಿಸಿದ ರೀತಿ. 176-194

ಎಪ್ಪತ್ತೊಂಭತ್ತನೆಯ ಅಧ್ಯಾಯ—

ಪ್ರಹ್ಲಾದನ ತೀರ್ಥಯಾತ್ರಾ ಪ್ರಸಂಗದಲ್ಲಿ ರೂಪಧಾರಿ ಎಂಬ ಹರಿಯ ಸೇವನೆಯಿಂದ ಪ್ರಹ್ಲಾದನು ಈಶ್ವರನಿಗೆ ಸಮಾನರೂಪವನ್ನು ಹೊಂದಿದ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಬಂದ ಪುರೂರವನ ಉಪಾಖ್ಯಾನ, (ಸಧರ್ಮನೆಂಬ ವೈಶ್ಯನು ಶ್ರವಣದ್ವಾದಶ್ರೀವ್ರತದ ಆಚರಣೆಯಿಂದ ಅನೇಕ ಜನ್ಮಗಳನ್ನು ಹೊಂದಿ ಕೊನೆಗೆ ಕುರೂಪಿ ಬ್ರಾಹ್ಮಣನಾಗಿ ಹುಟ್ಟಿ ರೂಪಧಾರಿಯ ಅನುಗ್ರಹದಿಂದ ಸುರೂಪ ನಾದುದು. ಕೊನೆಗೆ ಅವನೇ ಪುರೂರವನಾಗಿ ಹುಟ್ಟಿದುದು). 197-212

ಎಂಭತ್ತನೆಯ ಅಧ್ಯಾಯ—

ಪುರೂರವನು ರೂಪಧಾರಿಯನ್ನು ನಕ್ಷತ್ರಪುರುಷನ ರೂಪದಿಂದ ಆರಾಧಿಸಿದ ಕ್ರಮ, ನಕ್ಷತ್ರ ಪುರುಷನಿಗೆ ಆಶ್ರಯವಾದ ಪರ ಮಾತ್ಮನ ಅಂಗೋಪಾಂಗ ವರ್ಣನೆ ಮತ್ತು ಪೂಜಾವಿಧಾನ. 216-233

ಎಂಭತ್ತೊಂದನೆಯ ಅಧ್ಯಾಯ—

ಪ್ರಹ್ಲಾದನ ತೀರ್ಥಯಾತ್ರೆಯಲ್ಲಿ ಅವನು ಸೇವಿಸಿದ ತೀರ್ಥಗಳ ವಿವರಣೆ. ಹರಿಯು ಶೂಲವನ್ನು ಧರಿಸಿ ಜಲೋದ್ಭವನೆಂಬ ದಾನವನನ್ನು ವಧಿಸಿದುದು. 224-231

ಎಂಭತ್ತೆರಡನೆಯ ಅಧ್ಯಾಯ—

ಹರನು ವಿಷ್ಣುವಿಗೆ ಚಕ್ರಾಯುಧವನ್ನು ಕೊಟ್ಟನೆಂಬ ಪ್ರಸಂಗದಲ್ಲಿ ಶ್ರೀದಾಮನ ವಧವರ್ಣನ, ಧರ್ಮಶೀಲೆಯು ಉಪಮನ್ಯುವಿಗೆ. ಹೇಳಿದ ವಿರೂಪಾಕ್ಷನ ಸ್ವರೂಪ. 232-240

ಎಂಭತ್ತಮೂರನೆಯ ಅಧ್ಯಾಯ—

ಪ್ರಹ್ಲಾದನ ತೀರ್ಥಯಾತ್ರೆಯ ವಿವರಣೆ. 242-248

ಎಂಭತ್ತನಾಲ್ಕನೆಯ ಅಧ್ಯಾಯ—

ಕೋಟಿತೀರ್ಥವೇ ಮೊದಲಾದ ಕ್ಷೇತ್ರಗಳ ವರ್ಣನೆ ಮತ್ತು ಸರ್ವ ಪಾಪನಾಶನ ಕ್ಷೇತ್ರದಲ್ಲಿ ಪ್ರಹ್ಲಾದನು ಹರಿಯನ್ನುದ್ದೇಶಿಸಿ ಗಜೇಂದ್ರಮೋಕ್ಷಣ ಪಾಪನಾಶನ ಸ್ತುತಿಗಳನ್ನು ಪಠಿಸಿದುದು. 249-258

ಎಂಭತ್ತ ಐದನೆಯ ಅಧ್ಯಾಯ—

ಪಾಪಪ್ರಣಾಶ ಕ್ಷೇತ್ರದಲ್ಲಿ ಪ್ರಹ್ಲಾದನು ಪಠಿಸಿದ ಸ್ತೋತ್ರಗಳಲ್ಲಿ ಗಜೇಂದ್ರಮೋಕ್ಷ ಸ್ತೋತ್ರದ ವಿವರಣೆ, ತ್ರಿಕೂಟದರ್ವತದ ವರ್ಣನೆ ಅಲ್ಲಿ ವಿಹರಿಸುತ್ತಿದ್ದ ಗಜೇಂದ್ರನಿಗೆ ಸರೋವರಕ್ಕೆ ಬಂದಾಗ ಮೊಸಳೆಯಿಂದ ಉಂಟಾದ ಗ್ರಹಣ,ಇದಕ್ಕಾಗಿ ನಿರ್ವೇದ ಹೊಂದಿದ ಗಜೇಂದ್ರನಿಂದ ಮಾಡಲ್ಪಟ್ಟ ಹರಿಯ ಸ್ತೋತ್ರ, ಪ್ರಸನ್ನನಾದ ಹರಿಯಿಂದ ಗಜೇಂದ್ರನ ಮತ್ತು ಗ್ರಾಹದ ಶಾಪ ವಿಮೋಚನ ಪೂರ್ವಕವಾಗಿ ಅವರಿಗೆ ಉಂಟಾದ ಅನುಗ್ರಹ. 259-282

ಎಂಭತ್ತಾರನೆಯ ಅಧ್ಯಾಯ—

ರಾಕ್ಷಸನಾಗಿ ಹುಟ್ಟಿದ ಕ್ಷತ್ರಿಯಾಧಮನ ವೃತ್ತಾಂತ ವಿಷ್ಣುಪಂಜರ ವೆಂಬ ಮಂತ್ರವಿಧಾನದಿಂದ ತಪಸ್ಸಿನಲ್ಲಿ ನಿರತನಾದ ಬ್ರಾಹ್ಮಣ ನನ್ನು ಭಕ್ಷಿಸಲು ಬಂದ ಆ ರಾಕ್ಷಸನಿಗೆ ವಿಷ್ಣುಪಂಜರದ ಸಂಬಂಧ ದಿಂದುಂಟಾದ ಜ್ಞಾನೋದಯ, ಹಾಗೆಯೇ ತನ್ನ ಪಾಪನಾಶಕ್ಕೆ ಉಪಾಯವನ್ನು ಹುಡುಕುತ್ತಿದ್ದ ಆ ರಾಕ್ಷಸನಿಂದ ಬ್ರಹ್ಮಚಾರಿ ಯಾಗಿದ್ದ ಬ್ರಾಹ್ಮಣ ಬಾಲಕ ಬಂಧನ. ಆ ಬ್ರಾಹ್ಮಣನಿಗೆ ಅಗ್ನಿಯ ಅನುಗ್ರಹದಿಂದುಂಟಾದ ಸಾರಸ್ವತ ಸ್ತೋತ್ರದಿಂದ ಹಾಗೂ ಅದರ ಉಪದೇಶದಿಂದ ರಾಕ್ಷಸನಿಗೆ ಸರ್ವಪಾಪನಾಶವಾಗಿ ಅವನೂ ತಪಸ್ಸಿಗೆ ತೆರಳಿದುದು. 285-312

ಎಂಭತ್ತೇಳನೆಯ ಅಧ್ಯಾಯ—

ಶಂಕರನಿಂದ ಹೇಳಲ್ಪಟ್ಟ ಪಾಪಪ್ರಶಮನ ಸ್ತೋತ್ರ, ವಿಷ್ಣುವಿನ ಸರ್ವವ್ಯಾಪಕತ್ವಾದಿ ನಿರೂಪಣ. 315-327

ಎಂಭತ್ತೆಂಟನೆಯ ಅಧ್ಯಾಯ—

ಎರಡನೆಯ ಪಾಪಶಮನ ಸ್ತೋತ್ರ. 329-334

ಎಂಭತ್ತೊಂಭತ್ತನೆಯ ಅಧ್ಯಾಯ—

ಪ್ರಹ್ಲಾದನು ತೀರ್ಥಯಾತ್ರೆಗೆ ಹೊರಟನಂತರ ಬಲಿಯು ಶುಕ್ರಾಚಾರ್ಯನೊಡನೆ ಕುರುಕ್ಷೇತ್ರಕ್ಕೆ ಬಂದು ಯಜ್ಞದಲ್ಲಿ ದೀಕ್ಷಿತನಾದುದು, ಶುಕ್ರಾಚಾರ್ಯರ ಆಹ್ವಾನದಿಂದ ಅಲ್ಲಿ ಬಂದ ಅತ್ರೇಯರೇ ಮೊದಲಾದ ಬ್ರಾಹ್ಮಣರು ಪಯೋಷ್ಣೀ ನದಿಯಲ್ಲಿ ಸ್ನಾನ ಮಾಡಿ ಧರ್ಮಾಶ್ರಮವನ್ನು ಕಂಡು ಅಲ್ಲಿಯೇ ಮಹಾವಿಷ್ಣುವನ್ನು ಪೂಜಿಸುತ್ತಿರುವಾಗ ಕುರುಕ್ಷೇತ್ರದಲ್ಲಿ ವಾಮನರೂಪದಿಂದ ಮಹಾವಿಷ್ಣುವು ದಿತಿಯ ಗರ್ಭದಿಂದ ಅವತರಿಸಿದುದು, ಅವನನ್ನು ಕುರಿತು ಚತುರ್ಮುಖನು ಮಾಡಿದ ಸ್ತೋತ್ರ, ಭಗವಂತನ ಅಪ್ಪಣೆಯಂತೆ ಭರದ್ವಾಜನು ವಾಮನನಿಗೆ ಉಪನಯನಾದಿಗಳನ್ನು ನೆರವೇರಿಸಿದುದು, ಆ ಭರದ್ವಾಜನ ಕೋರಿಕೆಯಂತೆ ಭಗವಂತನು ತನ್ನ ಆವಾಸಸ್ಥಾನಗಳನ್ನೆಲ್ಲಾ ಹೇಳಿ ಬಲಿಯ ಯಜ್ಞಶಾಲೆಗೆ ಗಮನೋನ್ಮುಖನಾದುದು. 335-348

ತೊಂಭತ್ತನೆಯ ಅಧ್ಯಾಯ—

ಹಿಂದಿನ ಅಧ್ಯಾಯದಲ್ಲಿ ಹೇಳಿರುವ ಕ್ರಮದಂತೆ ಭಗವಂತನು ಸರ್ವತೀರ್ಥಗಳಲ್ಲಿಯೂ ಸರ್ವಕ್ಷೇತ್ರಗಳಲ್ಲಿಯೂ ಆಯಾಯ ದೇವತಾದಿರೂಪದಿಂದ ಇರುತ್ತಾನೆಂಬ ಸರ್ವವ್ಯಾಪ್ತಿಯ ವಿಸ್ತಾರವಾದ ವಿವರಣೆ. 351-360

ತೊಂಭತ್ತೊಂದನೆಯ ಅಧ್ಯಾಯ—

ವಾಮನನು ಬಲಿಯ ಯಜ್ಞಶಾಲೆಗೆ ಬಂದುದು, ಅವನು ಬರುವಾಗ ಆದ ಭೂಕಂಪದಿಂದ ಭಯಪಟ್ಟ ಬಲಿಯು ಶುಕ್ರಾಚಾರ್ಯನನ್ನು ಕುರಿತು ಪ್ರಶ್ನೆಮಾಡಿದುದು, ಶುಕ್ರನ ಉತ್ತರ ಮತ್ತು ಹರಿಯಲ್ಲಿ ಉಂಟಾಗಿರುವ ಅಪರಾಧದ ಶಾಂತಿಗಾಗಿ ಶುಕ್ರಾಚಾರ್ಯನ ಉಪಾಯೋಪದೇಶ, ಅದನ್ನು ಕೇಳಿದ ಬಲಿಯು ತನಗೆ ಉಂಟಾಗಿರುವ ದಾನೋತ್ಸಾಹದಿಂದ ಶುಕ್ರನ ಉಪದೇಶಕ್ಕೆ ಸಮ್ಮತಿಸದೆ ಪೂರ್ವಾಭ್ಯಾಸದಿಂದ ತನಗೂ ಉಂಟಾಗಿರುವ ದಾನೋತ್ಸಾಹಕ್ಕೆ ನಿದರ್ಶನವಾಗಿ ಮಲಯದಲ್ಲಿ ನಡೆದ ಕೋಶಕಾರಸುತನ ವೃತ್ತಾಂತವನ್ನು ನಿದರ್ಶನಕ್ಕಾಗಿ ಹೇಳಿದುದು, ದಿವಾಕರ ಮತ್ತು ನಿಶಾಕರರೆಂಬ ಕೋಶಕಾರಸುತರ ವೃತ್ತಾಂತ. 362-386

ತೊಂಭತ್ತೆರಡನೆಯ ಅಧ್ಯಾಯ—

ಈ ಸಮಯಕ್ಕೆ ಸರಿಯಾಗಿ ವಾಮನನು ಬಲಿಯ ಯಜ್ಞಶಾಲೆಗೆ ಬರಲು ಬಲಿಯು ಸತ್ಕಾರ, ಎಲ್ಲವನ್ನೂ ತಿರಸ್ಕರಿಸಿ ವಾಮನನು ಮೂರು ಹೆಜ್ಜೆಯ ಭೂಮಿಯನ್ನು ಯಾಚಿಸಿದುದು, ಬಲಿಯು ಆಶ್ಚರ್ಯದಿಂದ ಬಹಳ ಸಂಕೋಚದಿಂದಲೂ ವಾಮನನಿಗೆ ಆ ಮೂರು ಹೆಜ್ಜೆಯ ಪ್ರದೇಶವನ್ನು ದಾನಮಾಡಿದುದು, ಒಡನೆಯೇ ಮಹಾರೂಪವನ್ನು ಹೊಂದಿದ ವಾಮನನು ತ್ರಿವಿಕ್ರಮರೂಪದಿಂದ ಎಲ್ಲಾ ಪ್ರಪಂಚವನ್ನೂ ಎರಡೇ ಹೆಜ್ಜೆಗೆ ಅಳೆದು ಉಳಿದ ಒಂದು ಹೆಜ್ಜೆಗಾಗಿ ಬಲಿಯನ್ನು ಋಣಿಯನ್ನಾಗಿ ಮಾಡಿ ಬಂಧಿಸಿದುದು ಬಲಿಪುತ್ರನಾದ ಬಾಣ ಮತ್ತು ತ್ರಿವಿಕ್ರಮ ಮೂರ್ತಿಯ ಸಂವಾದ ಅದಕ್ಕೆ ತ್ರಿವಿಕ್ರಮನ ಪ್ರತ್ಯುತ್ತರ, ಮೂರು ಲೋಕವನ್ನೂ ಹೊಂದಿದ ತ್ರಿವಿಕ್ರಮನಿಂದ ಪತ್ನೀ ಸಹಿತನಾದ ಬಲಿಯು ಸುತಲವೆಂಬ ಪಾತಾಲಕ್ಕೆ ಹೋಗಿ ಸೇರಿದುದು ಆ ಬಲಿಯ ವಿಷಯದಲ್ಲಿ ಭಗವಂತನ ಶುಭಾಶಂಸನ. **392-411**

ತೊಂಭತ್ತಮೂರನೆಯ ಅಧ್ಯಾಯ—

ಚತುರ್ಮುಖಬ್ರಹ್ಮನು ತ್ರಿವಿಕ್ರಮನ ಈ ಲೀಲೆಯನ್ನು ನೋಡಿ ಅವನನ್ನು ಸ್ವಾಗತಿಸಿ ಮಾಡಿದ ವಿಸ್ತಾರವಾದ ಸ್ತೋತ್ರ, ಬ್ರಹ್ಮನ ಕೋರಿಕೆಯಂತೆ ತ್ರಿವಿಕ್ರಮನು ತನ್ನ ವಿಶ್ವವ್ಯಾಪಿಯಾದ ರೂಪವನ್ನು ತೋರಿಸಿದುದು, ಇಂದ್ರನಿಂದಲೂ ಸ್ವರ್ಗದಲ್ಲಿ ಆರಾಧಿಸಲ್ಪಟ್ಟ ಆ ವಾಮನಮೂರ್ತಿಯು ಸತ್ಯಲೋಕದಲ್ಲಿ ಬ್ರಹ್ಮನ ಕೋರಿಕೆಯಂತೆ ಮನೆಯಲ್ಲಿ ಸಾನ್ನಿಧ್ಯ ಹೊಂದಿದುದು. **412-423**

ತೊಂಭತ್ತನಾಲ್ಕನೆಯ ಅಧ್ಯಾಯ—

ಭಗವಂತನ ಅಪ್ಪಣೆಯಂತೆ ಸುತಲದಲ್ಲಿ ವಾಸಿಸುತ್ತಿರುವ ಬಲಿಯು ದಾನವರೊಡನೆ ಸುಖದಿಂದಿರುವಾಗ ಅಲ್ಲಿಗೆ ವಿಷ್ಣುಚಕ್ರದ ಆಗಮನ. ಆಗ ಪತ್ನಿಯಾದ ವಿಂಧ್ಯಾವಲಿಯಿಂದ ಸಮಾಧಾನ ಹೊಂದಿದ ಬಲಿಯು ಆ ಚಕ್ರವನ್ನು ಪೂಜಿಸಿ ಸ್ತುತಿಸಿದುದು. ಅವರೂ ದಾನವರ ತೇಜಸ್ಸನ್ನು ಅಪಹರಿಸಿಕೊಂಡು ಚಕ್ರವು ಹೊರಟುಹೋದನಂತರ ಬಲಿಯು ದುಃಖಿತನಾಗಿ ಪ್ರಹ್ಲಾದನನ್ನು ಸ್ಮರಿಸಿದುದು. ಪ್ರಹ್ಲಾದನಿಂದ ಬಲಿಗೆ ವಿಸ್ತಾರವಾದ ವೈಷ್ಣವಧರ್ಮೋಪದೇಶ. **424-442**

ತೊಂಭತ್ತೈದನೆಯ ಅಧ್ಯಾಯ—

ಭಗವಂತನ ಪೂಜೆಯನ್ನು ಹೇಗೆ ಮಾಡಬೇಕೆಂಬ ಬಲಿಯ ಪ್ರಶ್ನೆಗೆ ತಕ್ಕಂತೆ ವಿಷ್ಣುಮಂದಿರದ ನಿರ್ಮಾಣ. ಪೂಜೆಗೆ ಅರ್ಹವಾದ ಹೂವುಗಳು, ಗಂಧ, ನೈವೇದ್ಯ ಮೊದಲಾದ ವಿವರಣೆಯಿಂದ ಪ್ರಹ್ಲಾದನ ಉಪದೇಶ. ಅದರಂತೆಯೇ ವಿಷ್ಣುಮಂದಿರವನ್ನು ನಿರ್ಮಿಸಿ ಬಲಿಯು ಪತ್ನಿಯೊಡನೆ ಸೇವೆಯನ್ನು ನಡೆಸುತ್ತಾ ವೃದ್ಧರವಚನವನ್ನು ಪ್ರಶಂಸಿಸಿದುದು. ಫಲಶ್ರುತಿ. ಉಪಸಂಹಾರ. 443-466

॥ ಶ್ರೀಃ ॥

ಶ್ರೀ ಹಯಗ್ರೀವಾಯನಮಃ

ಶ್ರೀ ವಾ ಮ ನ ಪು ರಾ ಣ ಂ

ಸಪ್ತಷಷ್ಟಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಹರೋಽಪಿ ಸಮರಾಸನ್ನಃ ಸಮಾಹೂಯಾಥ ನಂದಿನಂ ।
ಪ್ರಾಹ ಮಂತ್ರಯ ಶೈಲಾದ್ಯಾನ್ಯೇ ಸ್ಥಿತಾಃ ತವಶಾಸನೆ ॥ ೧ ॥

ತತೋ ಮಹೇಶವಚನಾನ್ನಂದೀತೂರ್ಣತರಂ ಗತಃ ।
ಉಪಸ್ಪೃಶ್ಯ ಜಲಂ ಶ್ರೀಮಾನ್ ಸಸ್ಮಾರಗಣನಾಯಕಾನ್ ॥ ೨ ॥

ನಂದಿನಾ ಸಂಸ್ಮೃತಾಃ ಸರ್ವೆ ಗಣನಾಥಾಃ ಸಹಸ್ರಶಃ ।
ಸಮುತ್ಪತ್ಯತ್ವರಾಯುಕ್ತಾಃ ಪ್ರಣತಾಃ ತ್ರಿದಶೇಶ್ವರಂ ॥ ೩ ॥

ಅರವತ್ತೇಳನೆಯ ಅಧ್ಯಾಯವು

೧-೪. ಆ ಸಮಯದಲ್ಲಿ ಶಂಕರನೂ ಸಹ ಯುದ್ಧಹೂಡುವ ಸಮಾಲೋಚನೆಗಾಗಿ ನಂದಿಯನ್ನು ಬರಮಾಡಿ ನಿನ್ನ ಆಜ್ಞೆಯಲ್ಲಿರುವ ಶೈಲಾದಿ ಮೊದಲಾದವರೊಡನೆ ಪ್ರಕೃತಯುದ್ಧ ಸಮಯದಲ್ಲಿ ಮಂತ್ರಾಲೋಚನೆಯನ್ನು ನಡೆಸು ಎಂದು ಅಪ್ಪಣೆ ಮಾಡಿದನು. ಈಶ್ವರನ ಆಜ್ಞೆಯನ್ನನುಸರಿಸಿ ನಂದಿಯು ತ್ವರೆಯಿಂದ ಬಂದು ಶುದ್ಧಾಚಮನಮಾಡಿ ಗಣನಾಯಕರೆಲ್ಲರನ್ನೂ ಸ್ಮರಿಸಿದನು. ಹಾಗೆ ಸ್ಮರಿಸಿದೊಡನೆಯೇ ಸಾವಿರಾರು ಗಣಾಧಿಪತಿಗಳು ತ್ವರಿತವಾಗಿ ಹಾರಿಬಂದು ನಮಸ್ಕರಿಸಿ ಶಂಕರನ ಮುಂದೆ

ವಿ.—ವಿಶೇಷಾರ್ಥ ಅಥವಾ ತಾತ್ಪರ್ಯಾರ್ಥವನ್ನು ( ) ಈ ಚಿಹ್ನೆಯಲ್ಲಿ ಸೇರಿಸಲಾಗಿದೆ.

ಆಗತಾಂಶ್ಚ ಗಣಾನ್ನಂದೀ ಕೃತಾಂಜಲಿಪುಟೋಽವ್ಯಯಃ ।
ಸರ್ವಾನ್ನಿವೇದಯಾಮಾಸ ಶಂಕರಾಯ ಮಹಾತ್ಮನೆ ॥ ೪ ॥

ನಂದಿರುವಾಚ

ಯೇನತಾನ್ಪಶ್ಯಸೆ ಶಂಭೋ ತ್ರಿನೇತ್ರಾನ್ ಜಟಿಲಾನ್ ಶುಚೀನ್ ।
ಏತೆ ರುದ್ರಾ ಇತಿ ಖ್ಯಾತಾಃ ಕೋಟ್ಯಸ್ತ್ರ್ಯೇಕಾದಶೈವ ತು ॥ ೫ ॥

ವಾನರಾಸ್ಯಾನ್ಪಶ್ಯಸೆ ಯಾನ್ ಶಾರ್ದೂಲಸಮವಿಕ್ರಮಾನ್ ।
ಏತೇಷಾಂ ದ್ವಾರಪಾಲಾಶ್ಚ ಸಜ್ಜಮಾನಾ ಯಶೋಧನಾಃ ॥ ೬ ॥

ಷಣ್ಮುಖಾನ್ಪಶ್ಯಸೆ ಯಾಂಶ್ಚ ಶಕ್ತಿಪಾಣೀನ್ ಶಿಖಿಧ್ವಜಾನ್ ।
ಷಟ್‌ಚ ಷಷ್ಟಿಸ್ತಥಾ ಕೋಟ್ಯಃ ಸ್ಕಂದನಾಮ್ನಃ ಕುಮಾರಕಾನ್ ॥ ೭ ॥

ಏತಾವತ್ಯಸ್ತಥಾ ಕೋಟ್ಯಃ ಶಾಖನಾಮ್ನಃ ಷಡಾನನಾಃ ।
ವಿಶಾಲಾಸ್ತಾವದೇವೋಕ್ತಾ ನೈಗಮೇಯಾಶ್ಚ ಶಂಕರ ॥ ೮ ॥

ನಿಂತರು. ಹಾಗೆ ಬಂದ ಗಣನಾಥರೆಲ್ಲರನ್ನೂ ನಂದಿಯು ಶಂಕರನ ಮುಂದೆ ಅಂಜಲಿ ಬಂಧಪೂರ್ವಕವಾಗಿ ನಿಂತು ಅವನಲ್ಲಿ ಅರಿಕೆಮಾಡಿದನು.

೫-೯. ಶಂಭುವೇ, ತ್ರಿನೇತ್ರರಾಗಿಯೂ ಜಟಾಧಾರಿಗಳಾಗಿಯೂ ಶುಚಿಯಾಗಿಯೂ ನಮಸ್ಕರಿಸುತ್ತಿರುವ ಯಾರನ್ನು ನೀನು ನೋಡುತ್ತಿರುವೆಯೋ ಇವರು ಹನ್ನೊಂದುಕೋಟಿ ಸಂಖ್ಯೆಯುಳ್ಳ ರುದ್ರರೆಂದು ಪ್ರಸಿದ್ಧಿಹೊಂದಿರುವ ಗಣಗಳು ವಾನರರಂತೆ ಮುಖವುಳ್ಳವರಾಗಿಯೂ ಶಾರ್ದೂಲದಂತೆ ಪರಾಕ್ರಮಶಾಲಿಗಳಾಗಿಯೂ ಇರುವ ಯಾರನ್ನು ನೋಡುತ್ತಿರುವೆಯೋ ಇವರು ಯಾವಾಗಲೂ ಸಿದ್ಧರಾಗಿ ನಿಂತಿರುವ ಇವರ ಯಶಸ್ವಿಗಳಾದ ದ್ವಾರಪಾಲಕರು, ಷಣ್ಮುಖರಾಗಿರುವ ಯಾರನ್ನು ನೀನು ನೋಡುತ್ತಿರುವೆಯೋ ಇವರು ಶಕ್ತಿಧಾರಿಗಳಾಗಿಯೂ ಮಯೂರಧ್ವಜರಾಗಿಯೂ ಇರುವ ಅರವತ್ತಾರುಕೋಟಿ ಸಂಖ್ಯೆಯುಳ್ಳ ಸ್ಕಂದರೆಂಬ ಕುಮಾರರು ಇಷ್ಟೇಕೋಟಿ ಸಂಖ್ಯೆಯುಳ್ಳ ಶಾಖನಾಮಕರಾದ ಷಡಾನನರೂ ಅಷ್ಟೇ ಸಂಖ್ಯೆಯುಳ್ಳ

ಸಪ್ತಕೋಟಿಶತಂ ಶಂಭೋ ಅಮೀ ವೈ ಪ್ರಮಥೋತ್ತಮಾಃ ।
ಏಕೈಕಂ ಪ್ರತಿ ದೇವೇಶ ತಾವಂತೋ ಹ್ಯಪಿ ಮಾತರಃ ॥ ೯ ॥

ಭಸ್ಮಾರುಣಿತದೇಹಾಶ್ಚ ತ್ರಿನೇತ್ರಾಃ ಶೂಲಪಾಣಯಃ ।
ಏತೇ ಶೈವಾ ಇತಿ ಪ್ರೋಕ್ತಾಃ ತತ್ರ ಚೋಕ್ತಾಗಣೇಶ್ವರಾಃ ॥ ೧೦ ॥

ತಥಾ ಪಾಶುಪತಾಶ್ಚಾನ್ಯೇ ಭಸ್ಮಪ್ರಹರಣಾ ವಿಭೋ ।
ಏತೇ ಗಣಾಸ್ತ್ವಸಂಖ್ಯಾತಾಃ ಸಾಹಾಯ್ಯಾರ್ಥಂ ಸಮಾಗತಾಃ ॥ ೧೧॥

ಪಿನಾಕಧಾರಿಣೋ ರೌದ್ರಾ ಗಣಾಃ ಕಾಲಮುಖಾಃ ಪರೇ ।
ತವ ಭಕ್ತಾಸ್ಸಮಾಯಾತಾ ಜಟಾಮುಂಡಲಿನೋಽಧುನಾ ॥ ೧೨ ॥

ಖಟ್ವಾಂಗಯೋಧಿನೋ ವೀರಾ ರಕ್ತಚಂದನಭೂಷಿತಾಃ ।
ಇಮೇ ಪ್ರಾಪ್ತಾ ಗಣಾ ಯೋದ್ಧುಂ ಮಹಾವ್ರತಿನ ಉತ್ತಮಾಃ ॥ ೧೩ ॥

ದಿಗ್ವಾಸಸೋ ಮೌಲಿನಶ್ಚ ಘಂಟಾಪ್ರಹರಣಾಃ ಪರೇ ।
ನಿರಾಶ್ರಯಾ ನಾಮ ಗಣಾಃ ಸಮಾಯಾತಾಶ್ಚ ಹೇ ವಿಭೋ ॥ ೧೪ ॥

ವಿಶಾಲರು ನೈಗಮೇಯರೂ ಸಹ ಅಲ್ಲಿರುವರು. ಪ್ರಭುವೇ, ಈ ಪ್ರಮಥೋತ್ತಮರು ಏಳನೂರುಕೋಟಿ ಸಂಖ್ಯೆಯುಳ್ಳವರಿದ್ದಾರೆ. ಪ್ರತಿಯೊಬ್ಬರಿಗೂ ಅದೇ ಸಂಖ್ಯೆಯುಳ್ಳ ಮಾತೃಗಳೂ ಇರುವರು.

೧೦-೧೩. ಭಸ್ಮದಿಂದ ಕೂಡಿದ ದೇಹವುಳ್ಳವರಾಗಿಯೂ ತ್ರಿನೇತ್ರರಾಗಿಯೂ ಶೂಲಧಾರಿಗಳಾಗಿಯೂ ಇರುವ ಇವರು ಶೈವರೆಂದು ಕರೆಯಲ್ಪಡುತ್ತಾರೆ. ಹೀಗೆಯೇ ಹಿಂದೆ ಹೇಳಿದ ಗಣೇಶ್ವರರೂ ಭಸ್ಮಾಯುಧರಾದ ಪಾಶುಪತರೂ ಈ ಅಸಂಖ್ಯಾತ ಗಣಗಳೆಲ್ಲವೂ ಸಹಾಯಕ್ಕಾಗಿ ಬಂದಿದೆ. ಇದೂ ಅಲ್ಲದೆ ಪಿನಾಕಧಾರಿಗಳಾಗಿಯೂ ರೌದ್ರರಾಗಿಯೂ ಇರುವ ಕಾಲನೇ ಮೊದಲಾದವರೂ ಜಟಾಧಾರಿಗಳಾಗಿ ನಿನ್ನ ಭಕ್ತರಾಗಿ ಈಗತಾನೇ ಬಂದಿರುವರು. ಇವರೆಲ್ಲರೂ ಉತ್ತಮವಾದ ಮಹಾವ್ರತಧಾರಿಗಳಾಗಿ ರಕ್ತಚಂದನದಿಂದ ಅಲಂಕೃತರಾಗಿ ಯೋಗದಂಡಧಾರಿಗಳಾಗಿ ಶೌರ್ಯದಿಂದ ಯುದ್ಧಮಾಡಲು ಬಂದಿರುವರು.

೧೪. ದಿಗಂಬರರಾಗಿಯೂ ಜಟಾಧರರಾಗಿಯೂ ಘಂಟಾಯುಧರಾಗಿಯೂ ಇರುವ ನಿರಾಶ್ರಯರೆಂಬ ಅಭಿಧಾನವುಳ್ಳ ಮತ್ತೆ ಕೆಲವು ಗಣಗಳೂ ಬಂದು ನಿಂತಿವೆ.

ಸಾರ್ಧದ್ವಿನೇತ್ರಾಃ ಪದ್ಮಾಕ್ಷಾಃ ಶ್ರೀವತ್ಸಾಂಕಿತವಕ್ಷಸಃ ।
ಸಮಾಯಾತಾಃ ಖಗಾರೂಢಾಃ ವೃಷಭಧ್ವಜಿನೋಽವ್ಯಯಾಃ ॥ ೧೫ ॥

ಮಹಾಪಾಶುಪತಾ ನಾಮ ಚಕ್ರಶೂಲಧರಾಸ್ತಥಾ ।
ಭೈರವೋ ವಿಷ್ಣುನಾಸಾರ್ಧ ಮಭೇದೇನಾರ್ಚಿತೋಽಹಿ ಯೈಃ ॥ ೧೬ ॥

ಇಮೆ ಮೃಗೇಂದ್ರವದನಾಃ ಶೂಲಬಾಣಧನುರ್ಧರಾಃ ।
ಗಣಾಸ್ತ್ವದ್ರೋಮಸಂಭೂತಾ ವೀರಭದ್ರಪುರೋಗಮಾಃ ॥ ೧೭ ॥

ಏತೆ ಚಾನ್ಯೇಚ ಬಹವಃ ಶತಶೋಽಥ ಸಹಸ್ರಶಃ ।
ಸಾಹಾಯ್ಯಾರ್ಥಂ ತವಾಯಾತಾ ಯಥಾಪ್ರೀತ್ಯಾದಿಶಸ್ವ ತಾನ್ ॥ ೧೮ ॥

ತತೋಽಭ್ಯೇತ್ಯ ಗಣಾಸ್ಸರ್ವೆ ಪ್ರಣೇಮುಃ ವೃಷಕೇತನಂ ।
ಸತ್ಕಾರೇಣೈವ ಚ ಗಣಾನ್ ಸಮಾಶ್ವಾಸ್ಯೋಪವೇಶಯುತ್ ॥ ೧೯ ॥

೧೫-೧೮. ಯಾವ ಗಣದವರು ಭೈರವನನ್ನು ವಿಷ್ಣುವಿಗೆ ಅಭಿನ್ನನೆಂದು ತಿಳಿದು ಹಾಗೆಯೇ ಪೂಜಿಸಿ ಆ ಉಪಾಸನೆಯಲ್ಲಿಯೇ ನಿರತರಾಗಿರುವರೋ ಅವರೂ ಸಹ ತ್ರಿನೇತ್ರರಾಗಿಯೂ ಪದ್ಮಾಕ್ಷಧಾರಿಗಳಾಗಿಯೂ ಶ್ರೀವತ್ಸದಿಂದ ಪ್ರಕಾಶಮಾನವಾದ ಹೃದಯವುಳ್ಳವರಾಗಿಯೂ ಪಕ್ಷಿವಾಹನರಾಗಿಯೂ ವೃಷಭಧ್ವಜವುಳ್ಳವರಾಗಿಯೂ ಚಕ್ರಶೂಲಗಳೆರಡನ್ನೂ ಧರಿಸಿ ಮಹಾಪಾಶುಪತರೆಂಬ ಪ್ರಸಿದ್ಧಿಯಿಂದ ಉಭಯ ಲಿಂಗಗಳನ್ನೂ ಧರಿಸಿ ಸನ್ನಿಹಿತರಾಗಿದ್ದಾರೆ. ಅಲ್ಲದೆ ವೀರಭದ್ರಪ್ರಮುಖರಾದ ನಿನ್ನ ರೋಮದಿಂದ ಉತ್ಪನ್ನರಾಗಿ ಸಿಂಹ ಮುಖರಾಗಿಯೂ ಶೂಲ ಮತ್ತು ಧನುರ್ಬಾಣ ಧಾರಿಗಳಾಗಿಯೂ ಇರುವ ಮತ್ತೊಂದು ಗಣದವರೂ ಇಲ್ಲಿ ಬಂದಿರುತ್ತಾರೆ. (ವೀರಭದ್ರಾದಿಗಳ ಉತ್ಪತ್ತಿಯು ದಕ್ಷಯಜ್ಞಧ್ವಂಸ ಪ್ರಕರಣದಲ್ಲಿ ಹೇಳಲ್ಪಟ್ಟಿದೆ) ಇವರೂ ಮತ್ತು ಇನ್ನೂ ಇತರರೂ ಸಹ ಸಾವಿರಾರು ಗಣದವರು ನಿನ್ನ ಸಹಾಯಕ್ಕಾಗಿ ಬಂದಿರುತ್ತಾರೆ. ಇವರನ್ನು ಪ್ರೀತಿಯಿಂದ ಅನುಗ್ರಹಿಸಿ ಉಚಿತವಾದ ಕಾರ್ಯದಲ್ಲಿ ಅಪ್ಪಣೆಮಾಡು.

೧೯. ಅನಂತರ ಆ ಗಣಗಳೆಲ್ಲವೂ ಬಂದು ಶಂಕರನಿಗೆ ವಂದಿಸಿದವು. ಅವರೆಲ್ಲರನ್ನೂ ನಂದಿಯು ಸತ್ಕರಿಸಿ ಸಮಾಧಾನಪಡಿಸಿ ಕುಳ್ಳಿರಿಸಿದನು.

ಮಹಾಪಾಶುಪತಾನ್ ದೃಷ್ಟ್ವಾ ಸಮುತ್ಥಾಪ್ಯ ಮಹೇಶ್ವರಂ ।
ಸಂಪರ್ಯಷ್ವಜತಾಧ್ಯಕ್ಷಾಂಸ್ತೇ ಪ್ರಣೇಮುರ್ಮಹೇಶ್ವರಂ ॥ ೨೦ ॥

ತತಸ್ತದದ್ಭುತತಮಂ ದೃಷ್ಟ್ವಾ ಸರ್ವೆ ಗಣೇಶ್ವರಾಃ ।
ಸುವಿಸ್ಮಿತಾಸ್ತದಾ ಹ್ಯಾಸನ್ ಕಿಮಿದಂ ಚಿಂತಯಂಸ್ತ್ವಿತಿ ॥ ೨೧ ॥

ವಿಸ್ಮಿತಾಕ್ಷಾನ್ಗಣಾದೃಷ್ಟ್ವಾ ಶೈಲಾದಿರ್ಯೋಗಿನಾಂ ವರಃ ।
ಪ್ರಾಹ ಪ್ರಹಸ್ಯ ದೇವೇಶಂ ಶೂಲಪಾಣಿಂ ಗಣಾಧಿಪಂ ॥ ೨೨ ॥

ವಿಸ್ಮಿತಾಹಿ ಗಣಾ ದೇವ ಸರ್ವಏವ ಮಹೇಶ್ವರ ।
ಮಹಾಪಾಶುಪತಾನಾಂ ಯದ್ದತ್ತಮಾಲಿಂಗನಂ ಯತಃ ॥ ೨೩ ॥

ಜಾತಂ ತೇಷಾಂ ಮಹಾದೇವ ಸ್ಫುಟಂ ತ್ರೈಲೋಕ್ಯಬೃಂಹಕಂ ।
ರೂಪಂ ಜ್ಞಾನಂ ವಿವೇಕಂ ಚ ತದ್ವದಸ್ವೇಚ್ಛಯಾ ವಿಭೋ ॥ ೨೪ ॥

ಪ್ರಮಥಾಧಿಪತೇರ್ವಾಕ್ಯಂ ವಿದಿತ್ವಾ ಭೂತಭಾವನಃ ।
ಬಭಾಷೆ ತಾನ್ಗಣಾನ್ಸರ್ವಾನ್ ಭಾವಾಭಾವವಿಚಾರಿಣಃ ॥ ೨೫ ॥

೨೦-೨೨. ಆಗ ಶಂಕರನು ಮಹಾಪಾಶುಪತರನ್ನು ನೋಡಿ ಎದ್ದು ಬಂದು ಅವರನ್ನು ಸಂತೋಷದಿಂದ ಆಲಂಗಿಸಲು ಅವರೂ ಪ್ರಣಾಮಮಾಡಿ ಕುಳಿತರು. ಆಗ ಆ ಗಣಾಧಿಪರೆಲ್ಲರೂ ಈ ಆಶ್ಚರ್ಯವನ್ನು ನೋಡಿ ಬಹಳ ವಿಸ್ಮಯದಿಂದ ಇದೇನೆಂದು ಚಿಂತಿಸತೊಡಗಿದರು. ಗಣಗಳೆಲ್ಲವೂ ಆಶ್ಚರ್ಯಭರಿತವಾದುದನ್ನು ಕಂಡು ಯೋಗಿಯಾದ ನಂದಿಯು ನಗುತ್ತಾ ಶೂಲಪಾಣಿಯಾದ ಶಂಕರನನ್ನು ಕುರಿತು ಹೀಗೆಂದನು.

೨೩-೨೫. ಎಲೈ ಮಹೇಶ್ವರನೇ, ಎಲ್ಲಾ ಗಣಗಳೂ ಬಹಳ ಆಶ್ಚರ್ಯದಿಂದ ಕೂಡಿವೆ. ಮಹಾಪಾಶುಪತರಿಗೆ ನೀನು ಕೊಟ್ಟ ಆಲಿಂಗನವೇ ಇದಕ್ಕೆ ಕಾರಣವಾಗಿದೆ. ಅವರಿಗೆ ನಿನ್ನ ಈ ಆಲಿಂಗನದಿಂದ ಮೂರುಲೋಕಕ್ಕೂ ಮೇಲಾದ ಗೌರವವು ಬಂದಂತಾಗಿದೆ. ಇಂತಹ ಉನ್ನತಿಗೆ ಕಾರಣವಾದ ಅವರ ಸ್ವರೂಪ, ಜ್ಞಾನ, ವಿವೇಕವೇನೆಂಬುದನ್ನು ದಯವಿಟ್ಟು ಅಪ್ಪಣೆಕೊಡಿಸು ಎಂದು ಪ್ರಾರ್ಥಿಸಲು ಆ ಮಾತನ್ನು ಲಾಲಿಸಿ ಎಲ್ಲಾ ಪ್ರಾಣಿಗಳ ಸುಖದುಃಖವನ್ನೂ ತನ್ಮೂಲಕವಾದ ಉತ್ಕರ್ಷಾಪಕರ್ಷಗಳನ್ನೂ ತಿಳಿದಿರುವ ಗಣಾಧಿಪತಿಯಾದ ಶಂಕರನು ಈ ಆಲಿಂಗನದ ಸದ್ಭಾವವನ್ನೂ ಇತರರಲ್ಲಿ ಅದರ ಅಭಾವವನ್ನೂ ಚಿಂತಿಸುತ್ತಿರುವ ಗಣಗಳನ್ನು ಕುರಿತು ಹೀಗೆ ಹೇಳುತ್ತಾನೆ.

ರುದ್ರ ಉವಾಚ

ಭವದ್ಭಿಃ ಭಕ್ತಿಸಂಯುಕ್ತೈಃ ಹರೋ ಭಾವೇನ ಪೂಜಿತಃ ।
ಅಹಂಕಾರವಿಮೂಢೈಶ್ಚ ನಿಂದದ್ಭಿರ್ವೈಷ್ಣವಂ ಪದಂ ॥ ೨೬ ॥

ತೇನ ಜ್ಞಾನೇನ ಭವತಾಂ ಸಾದೃಶ್ಯಂ ಹಿ ನಿವಾರಿತಂ ।
ಯೋಽಹಂ ಸ ಭಗವಾನ್ ವಿಷ್ಣುಃ ಯಶ್ಚಾಸೌ ಸೋಽಹಮವ್ಯಯಃ ॥ ೨೭ ॥

ನಾವಾಭ್ಯಾಂ ವೈ ವಿಶೇಷೋಽಸ್ತಿ ಏಕಾ ಮೂರ್ತಿರ್ದ್ವಿಧಾ ಸ್ಥಿತಾ ।
ತದಮೀಭಿರ್ನರವ್ಯಾಘ್ರೈಃ ಭಕ್ತಿಭಾವಯುತೈರ್ಗಣಾಃ ॥ ೨೮ ॥

ಯಥಾಹಂ ವೈ ಪರಿಜ್ಞಾತೋ ನ ಭವದ್ಭಿಸ್ತಥಾ ಹರಿಃ ।
ಯಥಾ ವಿನಿಂದಿತೋಽಹ್ಯಸ್ಮಾದ್ಭವದ್ಭಿಃ ಮೂಢಬುದ್ಧಿಭಿಃ ॥ ೨೯ ॥

೨೬-೨೯. ಭಕ್ತಿಯುಕ್ತರಾದ ನೀವುಗಳು ಶುದ್ಧವಾದ ಮನಸ್ಸಿನಿಂದ ಹರನನ್ನು ಪೂಜಿಸಿದ್ದೀರಿ. ಆದರೆ ಅಹಂಕಾರದಿಂದ ಮೂಢರಾಗಿ ವಾಸ್ತವಾಂಶವನ್ನರಿಯದೆ ವಿಷ್ಣುವನ್ನು ನಿಂದಿಸಿದ್ದೀರಿ. ಆ ವಿಷ್ಣುವಿನ ವಿಷಯದಲ್ಲಿ ತಿರಸ್ಕಾರದಿಂದ ಕೂಡಿರುವ ನಿಮ್ಮ ಜ್ಞಾನವು ವಿಷ್ಣುವಿಗೂ ನನಗೂ ಇರುವ ಸಾಮ್ಯವನ್ನು ನಿರಾಕರಿಸುತ್ತಿದೆ. ವಿಚಾರದೃಷ್ಟಿಯಿಂದ ನೋಡಿದರೆ ಮಹಾವಿಷ್ಣುವೇ ನಾನೆಂದೂ ನಾನೇ ಮಹಾವಿಷ್ಣುವಾಗಿರುವೆನೆಂದೂ ನಮ್ಮ ಒಂದೇ ಮೂರ್ತಿಯು ಎರಡು ರೂಪದಲ್ಲಿರುವುದೆಂದೂ ಯಾವ ಭೇದವೂ ನಮ್ಮಗಳಿಗೆ ಇಲ್ಲವೆಂದೂ ತಿಳಿಯತಕ್ಕದ್ದಾಗಿದೆ. ಆದುದರಿಂದ ವಸ್ತು ತತ್ವವನ್ನು ತಿಳಿದ ಈ ಪುರುಷಶ್ರೇಷ್ಠರು (ಮಹಾಪಾಶುಪತರು) ನನ್ನನ್ನು ಹೇಗೆ ತಿಳಿದಿರುವರೋ ನೀವು ಹರಿಯನ್ನು ಆರೀತಿ ತಿಳಿದಿಲ್ಲ. ಹರಿಯಲ್ಲಿ ನೀವು ಮಾಡಿದ ತಿರಸ್ಕಾರವು ನನಗೇ ನಿಂದೆಯನ್ನುಂಟುಮಾಡಿದೆ. ಈ ಕಾರಣದಿಂದ ಮೂಢರಾದ ನಿಮಗೆ ಜ್ಞಾನವು ನಷ್ಟವಾಗಿದೆ. ಆದುದರಿಂದ ನಿಮಗೆ ನನ್ನ ಆಲಿಂಗನವು ಲಭಿಸಲಿಲ್ಲ. (ಇಲ್ಲಿ ಹರಿಹರಮೂರ್ತಿಗಳ ಐಕ್ಯವು ವ್ಯಕ್ತಿಭೇದವನ್ನು ಸ್ಥಾಪಿಸುವ ವೈಷ್ಣವ ಸಿದ್ಧಾಂತಕ್ಕೆ ವಿರುದ್ಧವೆಂದು ಆಪಾತತಃ ತೋರಬಹುದು. ವಸ್ತು ತತ್ವದಲ್ಲಿ ವಿರೋಧಕ್ಕೆ ಅವಕಾಶವಿಲ್ಲ. ವಿಶ್ವರೂಪಿಯಾದ ವಿಷ್ಣುವು ಆಯಾ ಭಕ್ತರ ರುಚಿಭೇದದಿಂದ ಅವರವರಿಗೆ ಭಕ್ತಿಪ್ರದವಾದ ಅರ್ಧಶಿವಾಕಾರವುಳ್ಳ ಈ ವಿಧವಾದ ಮೂರ್ತಿಯನ್ನೂ ಹೊಂದಬಹುದು. "ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ" ಎಂಬ ಗೀತಾ ವಚನವೂ ಇದನ್ನು ಸಮರ್ಥಿಸುತ್ತದೆ.)

ತೇನ ಜ್ಞಾನಂ ಹಿ ವೋ ನಷ್ಟಂ ನಾತಸ್ತ್ವಾಲಿಂಗಿತೋ ಮಯಾ ।
ಇತ್ಯೇವಮುಕ್ತೆ ವಚನೆ ಗಣಾಃ ಪ್ರೋಚುರ್ಮಹೇಶ್ವರಂ ॥ ೩೦ ॥

ಕಥಂ ಭವಾನ್ ಸಹ್ಯೈಕ್ಯಂ ಹಿ ಸಂಸ್ಥಿತೋ ಜ್ಞಾನನಿರ್ಮಲಃ ।
ಶುದ್ಧಸ್ಫಟಿಕಸಂಕಾಶಃ ಶಾಂತಃ ಶುಕ್ಲೋ ನಿರಂಜನಃ ॥ ೩೧ ॥

ಸ ಚಾಪ್ಯಂಜನಸಂಕಾಶಃ ಕಥಂ ತೇನೇಹ ಯುಜ್ಯತೆ ।
ತೇಷಾಂ ವಚನಮರ್ಥಾಢ್ಯಂ ಶ್ರುತ್ವಾ ಜೀಮೂತಕೇತನಃ ॥ ೩೨ ॥

ವಿಹಸ್ಯ ಮೇಘಗಂಭೀರಂ ಗಣಾನೇವಮುವಾಚ ಹ ।
ಶ್ರೂಯತಾಂ ಸರ್ವಮಾಖ್ಯಾಸ್ಯೆ ಸ್ವಯಶೋವರ್ಧನಂ ವಚಃ ॥ ೩೩ ॥

ನತ್ವಯೋಗ್ಯಾಃ ಖ್ಲ ಯೂಯಂ ಹಿ ಮಹಾಜ್ಞಾನಸ್ಯ ಕರ್ಹಿಚಿತ್ ।
ಅಪವಾದಭಯಾದ್ಗುಹ್ಯಂ ಭವತಾಂ ಹಿ ಪ್ರಕಾಶ್ಯತೆ ॥ ೩೪ ॥

ಪ್ರೀತ್ಯೈವಮಪಿ ವೈ ತೇನ ಯುಗ್ಮೆ ಚೇತಸಿ ನಿತ್ಯಶಃ ।
ಏಕರೂಪಂ ಚೈಕದೇಹಂ ಕುರುಧ್ವಂ ಯತ್ರಚಾಶ್ರಿತಾಃ ॥ ೩೫ ॥

೩೦-೩೩. ಮಹೇಶ್ವರನು ಈರೀತಿ ಹೇಳಲಾಗಿ ಆ ಗಣಗಳು ಈಶ್ವರನನ್ನು ಕುರಿತು ಜ್ಞಾನದಿಂದ ನಿರ್ಮಲನಾಗಿಯೂ ಸ್ಫಟಿಕದಂತೆ ಶುದ್ಧನಾಗಿಯೂ ದೋಷ ಮತ್ತು ಪಾಪಗಳ ಸಂಬಂಧವಿಲ್ಲದೆಯೂ ಇರುವ ನೀನು ಕಾಡಿಗೆಯಂತೆ ಕಪ್ಪಾಗಿರುವ ವಿಷ್ಣುವಿನೊಡನೆ ಐಕ್ಯಹೊಂದಿರೋಣವೆಂಬುದು ಹೇಗೆ ಸರಿಹೋದೀತು ಎಂದು ಪ್ರಶ್ನೆ ಮಾಡಲು ಅವರ ಮಾತನ್ನು ಕೇಳಿ ಹರನು ಗಂಭೀರವಾಗಿ ನಗುತ್ತಾ ಎಲ್ಲವನ್ನೂ ಹೇಳುತ್ತೇನೆ ಕೇಳಿರಿ ಎಂದು ಯಶೋಭಿವೃದ್ಧಿಗೆ ಕಾರಣವಾದ ತತ್ವಜ್ಞಾನವನ್ನು ಸೂಚಿಸುವ ಈ ಮಾತನ್ನು ಪ್ರಾರಂಭಿಸಿದನು.

೩೪-೩೫. ಇಂತಹ ಮಹಾಜ್ಞಾನಕ್ಕೆ ನೀವೇನೂ ಅನರ್ಹರಲ್ಲ. ನಿಮಗೂ ಹೇಳದೆ ಇದ್ದಲ್ಲಿ ಲೋಕಾಪವಾದವು ಬರಬಹುದೆಂಬ ಭಯದಿಂದ ಬಹಳ ರಹಸ್ಯವಾಗಿದ್ದರೂ ಅದನ್ನು ನಿಮಗೆ ತಿಳಿಸುತ್ತೇನೆ. ನೀವುಗಳು ಹೇಗಿದ್ದರೂ ನನ್ನ ಸಂತೋಷಕ್ಕಾಗಿ ನಿತ್ಯವೂ ಮನಸ್ಸಿನಲ್ಲಿ ನನ್ನನ್ನು ವಿಷ್ಣುವಿನೊಡನೆ ಏಕದೇಹವುಳ್ಳವನನ್ನಾಗಿಯೂ ಏಕರೂಪವುಳ್ಳವನನ್ನಾಗಿಯೂ ಭಾವಿಸಿರಿ.

ಪಯಸಾ ಹವಿರಾದ್ಯೈಶ್ಚ ಸ್ನಾಪಯೇತ್ತತ್ಪ್ರಯತ್ನತಃ ।
ಚಂದನಾದಿಭಿರೇವಾಗ್ರ್ಯೈಃ ನಮೇ ಪ್ರೀತಿಃ ಪ್ರಜಾಯತೇ ॥ ೩೬ ॥

ಯತ್ನಾತ್ಕ್ರಕಚಮಾದಾಯ ಭಿಂದಧ್ವಂ ಮಮವಿಗ್ರಹಂ ।
ತಥಾಪಿ ದೃಶ್ಯತೇ ವಿಷ್ಣುಃ ಮಮ ದೇಹೇ ಸನಾತನಃ ॥ ೩೭ ॥

ಏಕಾಹಾರೋ ಭವೇದ್ಯಸ್ತು ವಿಷ್ಣುಭಕ್ತಶ್ಚ ಯೋ ಭವೇತ್ ।
ಉಭೌ ತೌ ಸದೃಶೌ ಲೋಕೇ ನಾತ್ರ ಕಾರ್ಯಾ ವಿಚಾರಣಾ ॥ ೩೮ ॥

ನಾಯಂ ವದಿಷ್ಯತೇ ಲೋಕೋ ಭೇದಂ ಚೈವ ಕದಾಚನ ।
ಅತೋಽರ್ಥಂ ನಕ್ಷಿಪಾಮ್ಯದ್ಯ ಭವತೋ ನರಕೇದ್ಭೃತೇ ॥ ೩೯ ॥

ಯನ್ನಿಂದಧ್ವಂ ಜಗನ್ನಾಥಂ ಪುಷ್ಕರಾಕ್ಷಂ ಚ ಮನ್ಮಥಂ ।
ಸದೈವ ಭಗವಾನ್ ಸರ್ವಃ ಸರ್ವವ್ಯಾಪೀ ಗಣೇಶ್ವರಃ ॥ ೪೦ ॥

೩೬-೩೭. ಹಾಗೆ ಭಾವನೆಯಿಂದ ಸಿದ್ಧವಾದ ಆ ಮೂರ್ತಿಯನ್ನು ಹಾಲಿನಿಂದಲೂ ಆಜ್ಯಾದಿಗಳಿಂದಲೂ ಅಭಿಷೇಕಮಾಡಿರಿ. ಈರೀತಿಯಾದ ಭಾವನೆ ಇಲ್ಲದವರು ಚಂದನವೇ ಮೊದಲಾದ ಉತ್ತಮಪೂಜಾದ್ರವ್ಯದಿಂದ ನನ್ನನ್ನು ಪೂಜಿಸಿದರೂ ನನಗೆ ಪ್ರೀತಿಯುಂಟಾಗುವುದಿಲ್ಲ. ಈ ನನ್ನ ದೇಹವನ್ನು ಗರಗಸದಿಂದ ಎರಡಾಗಿ ಛೇದಿಸಿದರೂ ಸನಾತನನಾದ ವಿಷ್ಣುವು ಕಾಣಿಸುತ್ತಾನೆ.

೩೮-೪೦. ಯಾವನು ಲೋಕದಲ್ಲಿ ಏಕಾಹಾರನಾಗಿ ಹರಭಕ್ತನಾಗಿರುವನೋ ಯಾವನು ವಿಷ್ಣುಭಕ್ತನಾಗಿರುವನೋ ಅವರಿಬ್ಬರೂ ಸಮಾನರೇ ಹೊರತು ಅವರಲ್ಲಿ ಉಚ್ಚನೀಚಭಾವವಿಲ್ಲ. ಇದರಲ್ಲಿ ವಿಚಾರಮಾಡಬೇಕಾದುದಿಲ್ಲ. ಲೋಕದಲ್ಲಿ ಯಾರೂ ಯಾವಾಗಲೂ ಇವರಿಗೆ ತರತಮಭಾವವನ್ನು ಹೇಳುವದಿಲ್ಲ. ಆದುದರಿಂದ ಇಂತಹ ಭೇದಜ್ಞಾನದಿಂದ ನಿಮ್ಮನ್ನು ನರಕಕ್ಕೆ ಬೀಳದಂತೆ ತಪ್ಪಿಸಲು ನಾನು ಈ ಉಪದೇಶವನ್ನು ಮಾಡಿರುವೆನು. ಜಗನ್ನಾಥನಾಗಿಯೂ ಪುಂಡರೀಕಾಕ್ಷನಾಗಿಯೂ ಸುಂದರರೂಪಿಯಾಗಿಯೂ ಇರುವ ಆ ವಿಷ್ಣುವಿನ ನಿಂದೆಯು ನಿಮಗೆ ನರಕಪಾತವನ್ನೇ ಉಂಟುಮಾಡೀತು. ಯಾವಾಗಲೂ ಸರ್ವವ್ಯಾಪಿಯಾಗಿಯೂ ಗಣೇಶ್ವರನಾಗಿಯೂ ಸರ್ವಜಗನ್ಮಯನೂ ಆಗಿರುವ ಮಹಾಪುರುಷನು ಅವನೊಬ್ಬನೇ. ಅವನಿಗೆ ಸಮಾನರಾದವರು ಲೋಕದಲ್ಲಿ ಯಾರೂ ಇಲ್ಲ. ಆ ಜಗನ್ನಾಥನು ತನ್ನ ಇಚ್ಛೆಯಿಂದ ಶ್ವೇತ

ನ ತಸ್ಯ ಸದೃಶೋ ಲೋಕೇ ವಿದ್ಯತೇ ಸಚರಾಚರೇ ।
ಶ್ವೇತಮೂರ್ತಿಃ ಸ ಭಗವಾನ್ ಪೀತೋ ರಕ್ತೋ ಜಗತ್ಪತಿಃ ॥ ೪೧ ॥

ತಸ್ಮಾತ್ಪರತರಂ ಲೋಕೇ ನಾನ್ಯತ್ಸತ್ಯಂ ಚ ವಿದ್ಯತೇ ।
ಸಾತ್ವಿಕಂ ರಾಜಸಂಚೈವ ತಾಮಸಂ ಮಿಶ್ರಕಂ ತಥಾ ॥ ೪೨ ॥

ಸ ಏವ ಧತ್ತೇ ಭಗವಾನ್ ಸರ್ವಪೂಜ್ಯಃ ಸದಾಶಿವಃ ।
ಶಂಕರಸ್ಯ ವಚಃ ಶ್ರುತ್ವಾ ಶೈಲಾದ್ಯಾಃ ಪ್ರಮಥೋತ್ತಮಾಃ ॥ ೪೩ ॥

ಪ್ರತ್ಯೂಚುಃ ಭಗವನ್ ಬ್ರೂಹಿ ಸದಾಶಿವ ವಿಶೇಷಣಂ ।
ತೇಷಾಂ ತದ್ಭಾಷಿತಂ ಶ್ರುತ್ವಾ ಪ್ರಮಥಾನಾಂ ಸುರೇಶ್ವರಃ ॥ ೪೪ ॥

ದರ್ಶಯಾಮಾಸ ತದ್ರೂಪಂ ಸ ಚ ಶೈವಂ ನಿರಂಜನಂ ।
ಸಹಸ್ರಚಕ್ರಚರಣಂ ಸಹಸ್ರಭುಜಮೈಶ್ವರಂ ॥ ೪೫ ॥

ದಂಡಪಾಣಿಂ ಸುದುರ್ದರ್ಶ್ಯಂ ಲೋಕೈರ್ವ್ಯಾಪ್ತಂ ಸಮಂತತಃ ।
ದಂಡಸಂಸ್ಥಾನಿ ದೃಶ್ಯಂತೇ ದೇವಪ್ರಹರಣಾನಿ ಚ ॥ ೪೬ ॥

ಮೂರ್ತಿಯಾಗಿಯೂ ಪೀತ (ಹಳದಿ) ಮೂರ್ತಿಯಾಗಿಯೂ, ರಕ್ತ (ಕೆಂಪು) ಮೂರ್ತಿಯಾಗಿಯೂ ಆಗುತ್ತಾನೆ. ಅವನಿಗಿಂತಲೂ ಬೇರೆಯಾದ ಉತ್ಕೃಷ್ಟವಾದ ಸತ್ಯವಸ್ತುವು ಲೋಕದಲ್ಲಿ ಯಾವುದೂ ಇಲ್ಲ.

೪೨-೪೪. ಯಾವಾಗಲೂ ಮಂಗಲಮೂರ್ತಿಯಾಗಿಯೂ ದೇಹರಹಿತನಾಗಿಯೂ ಇರುವ ಆ ಮಹಾತ್ಮನು ಸ್ವೇಚ್ಛೆಯಿಂದ ಸಾತ್ವಿಕರೂಪವನ್ನೂ ರಾಜಸ್ವರೂಪವನ್ನೂ ತಾಮಸ ರೂಪವನ್ನೂ ಅವುಗಳ ಪರಸ್ಪರ ಸಂಬಂಧದಿಂದುಂಟಾದ ಮಿಶ್ರರೂಪವನ್ನೂ ತಾನೇ ಧರಿಸುತ್ತಾನೆ ಎಂದನು. ಶಂಕರನ ಆ ಮಾತನ್ನು ಕೇಳಿ ಶೈಲಾದಿಯೇ ಮೊದಲಾದ ಪ್ರಮಥೋತ್ತಮರು ಅವನನ್ನು ಕುರಿತು ಅಂತಹ ಸದಾಶಿವನ ರೂಪವೆಂತಹುದು ಎಂದು ಕೇಳಲು ಅವರ ಆ ಮಾತನ್ನು ಕೇಳಿದ ಶಂಕರನು ಅಂತಹ ಶೈವರೂಪವನ್ನು ಅವರಿಗೆ ತೋರಿಸಿದನು.

೪೫-೪೬. ಆ ರೂಪವು ಸಹಸ್ರಚಕ್ರಗಳಿಂದಲೂ ಸಹಸ್ರಪಾದಗಳಿಂದಲೂ ಸಹಸ್ರಭುಜಗಳಿಂದಲೂ ಕೂಡಿ ದಂಡಧಾರಿಯಾಗಿಯೂ ಲೋಕವ್ಯಾಪಕವಾಗಿಯೂ ಇದ್ದು ಕಣ್ಣಿನಿಂದ ನೋಡಲು ಸಾಧ್ಯವಿಲ್ಲದಷ್ಟು ತೇಜಸ್ವಿಯಾಗಿಯೂ ಮೆರೆಯಿತು. ದೇವತೆಗಳ ಪ್ರಸಿದ್ಧವಾದ ಆಯುಧಗಳೆಲ್ಲವೂ ಆ ದಂಡದಲ್ಲಿ ತೋರಿಬರುತ್ತಿದ್ದವು.

ತತಸ್ತ್ವೇಕಮುಖಂ ಭೂಯೋದದೃಶುಃ ಶಂಕರಂ ಗಣಾಃ ।
ರೌದ್ರೈಶ್ಚ ವೈಷ್ಣವೈಶ್ಚೈವ ಧೃತಂ ಚಿಹ್ನೈಃ ಸಹಸ್ರಶಃ ॥ ೪೭ ॥

ಅರ್ಧೇನ ವೈಷ್ಣವವಪುರರ್ಧೇನ ಹರವಿಗ್ರಹಃ ।
ಖಗಧ್ವಜಂ ವೃಷಾರೂಢಂ ಖಗಾರೂಢಂ ವೃಷಧ್ವಜಂ ॥ ೪೮ ॥

ಯಥಾಯಥಾ ತ್ರಿನಯನೋ ರೂಪಂ ಧತ್ತೇ ಗುಣಾಗ್ರಣೀಃ ।
ತಥಾತಥಾ ಚ ಜಾಯಂತೇ ಮಹಾಪಾಶುಪತಾ ಗಣಾಃ ॥ ೪೯ ॥

ತತೋಽಭವಚ್ಚೈಕರೂಪೀ ಶಂಕರೋ ಬಹುರೂಪವಾನ್ ।
ಕ್ಷಣಾಚ್ಛ್ವೇತಃ ಕ್ಷಣಾದ್ರಕ್ತಃ ಪೀತೋ ನೀಲಃ ಕ್ಷಣಾದಪಿ ॥ ೫೦ ॥

ಮಿಶ್ರಕೋ ವರ್ಣಹೀನಶ್ಚ ಮಹಾಪಾಶುಪತಸ್ತಥಾ ।
ಕ್ಷಣಾದ್ಭವತಿ ರುದ್ರೇಂದ್ರಃ ಕ್ಷಣಾಚ್ಛಂಭುಃ ಪ್ರಭಾಕರಃ ॥ ೫೧ ॥

೪೭-೪೯. ಅನಂತರ ಏಕಮುಖವಾಗಿಯೂ ರುದ್ರನ ಮತ್ತು ವಿಷ್ಣುವಿನ ಅನೇಕಾನೇಕ ಚಿಹ್ನೆಗಳಿಂದಲೂ ಕೂಡಿರುವ ಮತ್ತು ಅರ್ಧ ವಿಷ್ಣುಶರೀರದಿಂದಲೂ ಅರ್ಧ ಹರಶರೀರದಿಂದಲೂ ಕೂಡಿ ಪಕ್ಷಿಧ್ವಜ ಮತ್ತು ವೃಷಭವಾಹನವಾಗಿಯೂ ಗರುಡವಾಹನ ಮತ್ತು ವೃಷಭಧ್ವಜದಿಂದ ಕೂಡಿಯೂ ಇದ್ದ ಆ ವಿಗ್ರಹವನ್ನು ಗಣಗಳೆಲ್ಲವೂ ಆಶ್ಚರ್ಯದಿಂದ ನೋಡಿದವು. ಗಣಾಧಿಪನಾದ ತ್ರಿನೇತ್ರನು ಇಂತಹ ರೂಪವನ್ನು ಧರಿಸುತ್ತ ಬಂದಹಾಗೆಲ್ಲಾ ಮಹಾಪಾಶುಪತಗಣಗಳು ಹಾಗೆಯೇ ಉತ್ಪನ್ನವಾಗಿ ಹೆಚ್ಚುತ್ತ ಬಂದುವು.

೫೦-೫೧ ಹಾಗೆ ಬಹುರೂಪಿಯಾಗಿದ್ದ ಶಂಕರನು ಅನಂತರ ಏಕರೂಪಿಯಾಗಿ ಆದನು. ಕ್ಷಣಕ್ಷಣದಲ್ಲಿಯೂ ಶ್ವೇತನಾಗಿಯೂ ರಕ್ತನಾಗಿಯೂ ಪೀತನಾಗಿಯೂ ನೀಲನಾಗಿಯೂ ಮಿಶ್ರವರ್ಣವುಳ್ಳವನಾಗಿಯೂ ಅನೇಕ ವರ್ಣಗಳನ್ನು ಧರಿಸಿ ಕ್ರಮೇಣ ವರ್ಣಹೀನನೂ ಆಗಿ ಮಹಾಪಾಶುಪತನಾಗಿಯೂ ಪರಿಣಮಿಸಿದನು. ಕ್ಷಣಕಾಲದಲ್ಲಿ ಆ ರುದ್ರನು ಇಂದ್ರರೂಪಿಯಾಗಿಯೂ ಮುಂದಿನಕ್ಷಣದಲ್ಲೇ ಶಂಭು ರೂಪಿಯಾಗಿಯೂ ಅನಂತರ ಸೂರ್ಯರೂಪಿಯಾಗಿಯೂ ಪುನಃ ಶಂಕರನಾಗಿಯೂ

ಕ್ಷಣಾರ್ಧಾಚ್ಛಂಕರೋ ವಿಷ್ಣುಃ ಕ್ಷಣಾಚ್ಛರ್ವಃ ಪಿತಾಮಹಃ ।
ತತಸ್ತದದ್ಭುತತಮಂ ದೃಷ್ಟ್ವಾ ಶೈವಾದಯೋ ಗಣಾಃ ॥ ೫೨ ॥

ಅಥಾಜಾನಂತ ಚೈಕ್ಯೇನ ಬ್ರಹ್ಮವಿಷ್ಣ್ವಿಂದ್ರಭಾಸ್ಕರಾನ್ ।
ಯದಾತ್ವಭೇದೇನಾಜಾನನ್ ದೇವದೇವಂ ಸನಾತನಂ ॥ ೫೩ ॥

ತದಾ ನಿರ್ಧೂತಪಾಪಾಸ್ತೇ ಸಮಜಾಯಂತ ಪಾರ್ಷದಾಃ ।
ತೇಷ್ವೇವಂ ಧೂತಪಾಪೇಷು ಅಭಿನ್ನೇಷು ಹರೀಶ್ವರಃ ॥ ೫೪ ॥

ಪ್ರೀತಾತ್ಮಾ ವಿಬಭೌ ಶಂಭುಃ ಪ್ರೀತ್ಯಾ ಯುಕ್ತೋಽಬ್ರವೀದ್ವಚಃ ।
ಪರಿತುಷ್ಟೋಽಸ್ಮಿ ಸರ್ವೇಷಾಂ ಜ್ಞಾನೇನಾನೇನ ಸುವ್ರತಾಃ ॥ ೫೫ ॥

ವೃಣುಧ್ವಂ ವರಮಾನಂತ್ಯಂ ದಾಸ್ಯೇ ವೋ ಮನಸೇಪ್ಸಿತಂ ।
ಊಚುಸ್ತೇ ದೇಹಿ ಭಗವನ್ ವರಮಸ್ಮಾಕಮೀಶ್ವರ ।
ಭಿನ್ನದೃಷ್ಟ್ಯಾ ಮಹತ್ಪಾಪಂ ಯದಾಪ್ತಂ ತತ್ಪ್ರಯಾತು ನಃ ॥ ೫೬ ॥

ಅನಂತರ ವಿಷ್ಣುರೂಪಿಯಾಗಿಯೂ ಪುನಃ ಶಂಕರನಾಗಿಯೂ ಅನಂತರ ಬ್ರಹ್ಮರೂಪಿಯಾಗಿಯೂ ತನ್ನ ನಾನಾರೂಪಗಳನ್ನು ವ್ಯಕ್ತಿಗೊಳಿಸಿದನು. ಆಶ್ಚರ್ಯಕರವಾದ ಆ ರೂಪವನ್ನು ನೋಡಿ ಶೈವರೇ ಮೊದಲಾದ ಗಣಗಳು ಬ್ರಹ್ಮ, ವಿಷ್ಣು, ಇಂದ್ರ, ಭಾಸ್ಕರ ಇವರನ್ನೆಲ್ಲಾ ಐಕ್ಯಬುದ್ಧಿಯಿಂದಲೇ ಗ್ರಹಿಸಿದರು. ಈರೀತಿ ಅಭೇದಜ್ಞಾನದಿಂದ ಈಶ್ವರನನ್ನು ಅವರು ತಿಳಿದೊಡನೆಯೇ ಸರ್ವಪಾಪನಿರ್ಮುಕ್ತರಾಗಿ ರುದ್ರನ ಪರಿವಾರಗೋಷ್ಠಿಯಲ್ಲಿ ಸೇರಿದರು.

೫೪-೫೬. ಅವರೆಲ್ಲರೂ ಹೀಗೆ ಅಭೇದಜ್ಞಾನದಿಂದ ನಿಷ್ಪಾಪರಾದೊಡನೆಯೇ ಹರಿಹರರೂಪಿಯಾದ ಆ ಶಂಭುವು ಸಂತುಷ್ಟನಾಗಿ ಅವರನ್ನು ಕುರಿತು ಪ್ರೀತಿಯಿಂದ ಎಲೈ ಸುವ್ರತರೇ, ನಿಮ್ಮ ಈ ಜ್ಞಾನದಿಂದ ನಾನು ಸಂತುಷ್ಟನಾಗಿರುವೆನು. ನಿಮಗೆ ಬೇಕಾದ ಶಾಶ್ವತವಾದ ಯಾವುದಾದರೊಂದು ವರವನ್ನು ಕೇಳಿಕೊಳ್ಳಿರಿ. ಅದನ್ನು ಕೊಡುವೆನೆಂದನು. ಆಗ ಅವರೆಲ್ಲರೂ ಪ್ರಭುವೇ, ಈ ಭೇದಜ್ಞಾನದಿಂದ ನಮಗೆ ಇದುವರಿಗೆ ಉಂಟಾಗಿರುವ ಪಾಪವೆಲ್ಲವೂ ಹೋಗುವಂತೆ ವರವನ್ನು ಅನುಗ್ರಹಿಸು ಎಂದರು.

ಪುಲಸ್ತ್ಯ ಉವಾಚ

ಬಾಢಮಿತ್ಯಬ್ರವೀಚ್ಛರ್ವಶ್ಚಕ್ರೇ ನಿರ್ಧೂತಕಲ್ಮಷಾನ್ ।
ಸಂಪರ್ಯಷ್ವಜತಾವ್ಯಕ್ತಸ್ತಾನ್ಸರ್ವಾನ್ಗಣಯೂಥಪಾನ್ ॥ ೫೭ ॥

ಇತಿ ವಿಭುನಾಪ್ರಣತಾರ್ತಿಹರೇಣ ಗಣಪತಯಃ
ಸಹ ಪ್ರೋಕ್ಷಿತಮೇಘರಥೇನ ।
*ಶ್ರುತಿಗದಿತಾನ್ಸ್ಯಗಮೇನ ವಿಭುಧಾವತಂಸೇನ
ಗಿರಿಮುಪೇತ್ಯ ॥ ೫೮ ॥

ಆಚ್ಛಾದಿತೋ ಗಿರಿವರಃ ಪ್ರಮಥೈರ್ಘನಾಭೈ ರಾಭಾತಿ
ಶುಕ್ಲತನುರೀಶ್ವರಪಾದಜುಷ್ಟಃ ।
ನೀಲಾಜಿನಾತತತನುಃ ಶರದಭ್ರವರ್ಣೋ
ಯದ್ವದ್ವಿಭಾತಿ ಬಲವಾನ್ ವೃಷಭೋ ಹರಸ್ಯ ॥ ೫೯ ॥

ಇತಿ ಶ್ರೀ ವಾಮನಪುರಾಣೇ ಭೈರವಪ್ರಾದುರ್ಭಾವೇ ಸದಾಶಿವದರ್ಶನಂ ನಾಮ ಸಪ್ತಷಷ್ಟಿತಮೋಽಧ್ಯಾಯಃ.

೫೭-೫೯. ಪುಲಸ್ತ್ಯರು ಹೇಳುತ್ತಾರೆ. ಆಗ ಶಂಭುವು ಹಾಗೇ ಆಗಲೆಂದು ಹೇಳಿ ಅವರೆಲ್ಲರನ್ನೂ ಪಾಪರಹಿತರನ್ನಾಗಿ ಮಾಡಿ ಅವರೆಲ್ಲರನ್ನೂ ಅನುಗ್ರಹಿಸಿದನು. ಹೀಗೆ ಹರನಿಂದ ಸತ್ಕರಿಸಲ್ಪಟ್ಟ ಆ ಗಣಾಧಿಪರೆಲ್ಲರೂ ಮೇಘವೆಂಬ ರಥಾರೂಢನಾದ ಆ ಶಂಭುವಿನೊಡನೆ ವೇದಪ್ರತಿಪಾದ್ಯವಾದ ಆ ಮಹಾಗಿರಿಯನ್ನು ಹೊಂದಿದರು. ಆಗ ಮೇಘದಂತೆ ಕಪ್ಪಾಗಿರುವ ಆ ಪ್ರಮಥಗಣಗಳಿಂದ ಆವರಿಸಲ್ಪಟ್ಟು ಈಶ್ವರನ ಪಾದದಿಂದ ಕೂಡಿ ಶುಭ್ರವಾಗಿರುವ ಆ ಮಂದರಪರ್ವತವು ಶರತ್ಕಾಲದ ಮೇಘದಂತೆ ಶುಭ್ರವಾಗಿರುವ ಹರನ ವೃಷಭವು ನೀಲವಾದ ಚರ್ಮದಿಂದ ಹೊದಿಸಲ್ಪಟ್ಟಲ್ಲಿ ಹೇಗೆ ತೋರಬಹುದೋ ಹಾಗೆ ತೋರಿಬರುತ್ತಿತ್ತು.

ಇಲ್ಲಿಗೆ ಶ್ರೀ ವಾಮನಪುರಾಣದ ಭೈರವಪ್ರಾದುರ್ಭಾವದಲ್ಲಿ ಸದಾಶಿವದರ್ಶನವೆಂಬ ಅರವತ್ತೇಳನೆಯ ಅಧ್ಯಾಯವು ಮುಗಿದಿದೆ.

---

* ಈ ಪದ್ಯವು ಅಶುದ್ಧಪಾಠದಿಂದಲೂ ವೃತ್ತಭಂಗದಿಂದಲೂ ಕೂಡಿದೆ. ಪೂರ್ವಾರ್ಧವನ್ನು ಸ್ವಲ್ಪ ಮಟ್ಟಿಗೆ ಸರಿಪಡಿಸಲಾಗಿದೆ. ಉಳಿದ ಭಾಗವು ಬೇರೆ ಪಾಠದಿಂದಲೇ ಸರಿಪಡಿಸತಕ್ಕದ್ದಾಗಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಅಂಧಕನು ಸೇನಾಸಮೇತನಾಗಿ ಮಂದರಪರ್ವತವನ್ನು ಮುತ್ತಲು ಸಿದ್ಧನಾದಾಗ ಶಂಕರನು ಗಣಾಧಿಪನಾದ ನಂದಿಯೊಡನೆ ನಿನ್ನ ಅನುಯಾಯಿಗಳನ್ನೆಲ್ಲಾ ಬರಮಾಡಿಕೊಂಡು ಯುದ್ಧದ ವಿಚಾರದಲ್ಲಿ ಸಮಾಲೋಚನೆಯನ್ನು ನಡೆಸು ಎಂದು ಅಪ್ಪಣೆಮಾಡಲು ಆ ನಂದಿಯು ಸ್ಮರಣಮಾತ್ರದಿಂದ ಶೈವರೇ ಮೊದಲಾದ ನಾನಾಮುಖರಾದ ಗಣಾಧಿಪತಿಗಳನ್ನು ಬರಮಾಡಿಕ್ಕೊಂಡನೆಂದು ಹೇಳಲಾಯಿತು. ಆ ಸಮಯದಲ್ಲಿ ಅವರನ್ನು ಸತ್ಕರಿಸುವ ಸಮಾರಂಭದಲ್ಲಿ ಶಂಭುವು ಮಹಾಪಾಶುಪತರೆಂಬ ಗಣಗಳನ್ನು ನೋಡಿ ಸಂತೋಷದಿಂದ ಅವರನ್ನು ಆಲಿಂಗಿಸಲಾಗಿ ಉಳಿದ ಗಣಗಳೆಲ್ಲವೂ ವಿಸ್ಮಯಭರಿತರಾಗಿರುವಾಗ ನಂದಿಯು ಶಂಕರನನ್ನು ಕುರಿತು ಇದಕ್ಕೆ ಕಾರಣವನ್ನು ಪ್ರಶ್ನೆಮಾಡಲು ಶಂಕರನು ಹರಿಹರಮೂರ್ತಿಗಳ ಭೇದಜ್ಞಾನದಿಂದಲೂ ಹರಿಯಲ್ಲಿ ತಿರಸ್ಕಾರಬುದ್ಧಿಯಿಂದಲೂ ಇತರರೆಲ್ಲರೂ ಪಾಪಿಗಳಾಗಿರುತ್ತಾರೆಂದೂ ಉಭಯ ಚಿಹ್ನೆಯನ್ನೂ ಧರಿಸಿ ಭೇದಭಾವನೆಯಿಲ್ಲದೆ ಐಕ್ಯಬುದ್ಧಿಯನ್ನು ಹೊಂದಿರುವ ಮಹಾಪಾಶುಪತರು ಪ್ರಶಸ್ತರೆಂದೂ ಹೇಳಿ ಆ ಹರಿಹರಮೂರ್ತಿಗಳ ಏಕತೆಯನ್ನೂ ತೋರ್ಪಡಿಸಿ ಅವರಿಗೆ ಏಕತಾಬುದ್ಧಿಯನ್ನುಂಟುಮಾಡಿ ಇತರರಿಗೂ ಪಾಪನಾಶವನ್ನೂ ಅನುಗ್ರಹಿಸಿದನೆಂದೂ ಹೇಳಲಾಯಿತು. ಹಾಗೆ ಅನುಗ್ರಹಕ್ಕೆ ಪಾತ್ರರಾದ ಗಣಗಳನ್ನೆಲ್ಲಾ ಆಲಿಂಗನದಿಂದ ಸಂತೋಷಪಡಿಸಿ ಅವರೊಡನೆ ತಾನೂ ಯುದ್ಧಸನ್ನಾಹದಲ್ಲಿದ್ದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಅಷ್ಟಷಷ್ಟಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಏತಸ್ಮಿನ್ನಂತರೆ ಪ್ರಾಪ್ತಃ ಸಮಂ ದೈತ್ಯೈಸ್ತಥಾಂಧಕಃ ।
ಮಂದರಂ ಪರ್ವತಶ್ರೇಷ್ಠಂ ಪ್ರಮಥಾಶ್ರಿತಕಂದರಂ ॥ ೧ ॥

ಪ್ರಮಥಾ ದಾನವಾನ್ ದೃಷ್ಟ್ವಾ ಚಕ್ರುಃ ಕಿಲಕಿಲಾಧ್ವನಿಂ ।
ಪ್ರಮಥಾಶ್ಚಾಪಿ ಸಂರಬ್ಧಾ ಜಘ್ನುಸ್ತೂರ್ಯಾಣ್ಯನೇಕಶಃ ॥ ೨ ॥

ಸ ಚಾ ವ್ಯಣೋನ್ಮಹಾನಾದೋ ರೋದಸೀ ಪ್ರಲಯೋಪಮಃ ।
ಶುಶ್ರಾವ ವಾಯುಮಾರ್ಗಸ್ಥೋ ವಿಘ್ನನಾಥೋ ವಿನಾಯಕಃ ॥ ೩ ॥

ಸಮಭ್ಯಯಾತ್ಸಮಂ ಕ್ರುದ್ಧಃ ಪ್ರಮಥೈರಭಿಸಂವೃತಃ ।
ಮಂದರಂ ಪರ್ವತಶ್ರೇಷ್ಠಂ ದದೃಶೆ ಪಿತರಂ ತಥಾ ॥ ೪ ॥

ಅರವತ್ತೆಂಟನೆಯ ಅಧ್ಯಾಯವು

೧-೪. ಈ ಸಮಯಕ್ಕೆ ಸರಿಯಾಗಿ ಅಂಧಕನೂ ದೈತ್ಯರೊಡನೆ ಗುಹೆಗಳಲ್ಲಡಗಿರುವ ಪ್ರಮಥರಿಂದ ಕೂಡಿದ ಆ ಮಂದರಪರ್ವತಕ್ಕೆ ಬಂದು ಸೇರಿದನು. ಆಗ ಪ್ರಮಥಗಣಗಳೆಲ್ಲವೂ ದಾನವರನ್ನು ನೋಡಿ ಕಿಲಕಿಲಧ್ವನಿಯನ್ನು ಮಾಡಿದವು. ದಾನವರೂ ಸಹ ಕೋಪದಿಂದ ತಮ್ಮ ಯುದ್ಧಸೂಚಕವಾದ ತೂರ್ಯಧ್ವನಿಯನ್ನು ವಿಸ್ತರಿಸಿದರು. ಪ್ರಳಯಕಾಲದ ಧ್ವನಿಯಂತೆ ಭಯಂಕರವಾಗಿದ್ದ ಆ ಧ್ವನಿಯೂ ಭೂಮ್ಯಾಕಾಶಗಳನ್ನಾಕ್ರಮಿಸಿತು. ಆ ಧ್ವನಿಯನ್ನು ವಾಯುಮಾರ್ಗದಲ್ಲಿ ಸಂಚರಿಸುತ್ತಿದ್ದ ವಿನಾಯಕನು ಕೇಳಿ ಕೋಪದಿಂದ ಪ್ರಮಥರೊಡನೆ ಮಂದರಪರ್ವತಕ್ಕೆ ಬಂದು ಅಲ್ಲಿದ್ದ ತಂದೆಯಾದ ಶಂಕರನನ್ನು ನೋಡಿ ನಮಸ್ಕರಿಸಿ ಭಕ್ತಿಭಾವದಿಂದ

ಪ್ರಣಿಪತ್ಯ ತಥಾ ಭಕ್ತ್ಯಾ ವಾಕ್ಯಮಾಹ ಮಹೇಶ್ವರಂ ।
ಕಿಂ ತಿಷ್ಠಸಿ ಜಗನ್ನಾಥ ಸಮುತಿಷ್ಠ ರಣೋತ್ಸುಕ ॥ ೫ ॥

ತತೋ ವಿಘ್ನೇಶ್ವರವಚೋ ಜಗನ್ನಾಥೋಂಬಿಕಾಂ ಪ್ರತಿ ।
ಪ್ರಾಹ ಯಾಮೋಂಧಕಂ ಹಂತುಂ ಸ್ವಯಮೇವಾಪ್ರಮತ್ತಯಾ ॥ ೬ ॥

ತತೋ ಗಿರಿಸುತಾ ದೇವಂ ಸಮಾಲಿಂಗ್ಯ ಪುನಃಪುನಃ ।
ಹರಂ ನಿರೀಕ್ಷ್ಯ ಸಸ್ನೇಹಂ ಪ್ರಾಹ ಗಚ್ಛ ತಥಾಂಧಕಂ ॥ ೭ ॥

ತತೋಮರಗುರೋರ್ಗೌರೀ ಚಂದನಂ ರೋಚನೋಜ್ವಲಂ ।
ಪ್ರತಿವಂದ್ಯ ಸುಸಂಪ್ರೀತಾ ಪಾದಾವೇವತ್ವವಂದತ ॥ ೮ ॥

ತತೋ ಹರಃ ಪ್ರಾಹ ವಚೋವಯಸ್ಯಾಂ ಮಾಲಿನೀಮಿತಿ ।
ಜಯಾಂ ಚ ವಿಜಯಾಂ ಚೈವ ಜಯಂತೀಂ ಚಾಪರಾಜಿತಾಂ ॥ ೯ ॥

ಯುಷ್ಮಾಭಿರಪ್ರಮತ್ತಾಭಿಃ ಸ್ಥೇಯಂ ಗೇಹೆ ಸುರಕ್ಷಿತೆ ।
ರಕ್ಷಣೀಯಾ ಪ್ರಯತ್ನೇನ ಗಿರಿಪುತ್ರೀ ಪ್ರಮಾದತಃ ॥ ೧೦ ॥

ಎಲೈ ಜಗನ್ನಾಥನೇ, ಏಕೆ ಹೀಗೆ ಕುಳಿತಿದ್ದೀಯೆ ಯುದ್ಧೋತ್ಸಾಹದಿಂದ ಹೊರಡು ಎಂದು ಪ್ರಾರ್ಥಿಸಿದನು.

೬-೧೦. ಅನಂತರ ಶಂಕರನು ಆ ವಿಘ್ನೇಶ್ವರನ ಮಾತನ್ನು ಅಂಬಿಕೆಗೆ ತಿಳಿಸಿ ಅಂಧಕನನ್ನು ಕೊಲ್ಲಲು ಹೋಗೋಣ ಅಥವಾ ನೀನೇ ಜಾಗರೂಕತೆಯಿಂದ ಹೋಗುವಿಯಾ ಎಂದು ಕೇಳಲು ಪಾರ್ವತಿಯು ಈಶ್ವರನನ್ನು ಪುನಃ ಪುನಃ ಆಲಿಂಗಿಸಿ ಪ್ರೀತಿಯಿಂದ ಕಟಾಕ್ಷಿಸಿ ಅಂಧಕನನ್ನು ಕೊಲ್ಲಲು ಹೊರಡು ಎಂದು ಹೇಳಿ ಈಶ್ವರನಿಗೆ ಗೋರೋಚನದಿಂದ ಪ್ರಕಾಶಮಾನವಾದ ಚಂದನವನ್ನು ಲೇಪಿಸಿ ಸಂತೋಷದಿಂದ ಪಾದಗಳಿಗೆ ವಂದಿಸಿದಳು. ಆಗ ಹರನು ಪಾರ್ವತಿಯ ಸಖಿಯಾದ ಮಾಲಿನಿಯನ್ನೂ ಮತ್ತು ಜಯಾ, ವಿಜಯಾ, ಜಯಂತೀ, ಅಪರಾಜಿತಾ ಎಂಬ ಸಖಿಗಳನ್ನೂ ಕುರಿತು ನೀವುಗಳು ಸುರಕ್ಷಿತವಾಗಿರುವ ಈ ಮನೆಯಲ್ಲಿ ಜಾಗರೂಕತೆಯಿಂದಿರಬೇಕು, ಪ್ರಮಾದವೇನಾದರೂ ಒದಗಿದಲ್ಲಿ ಪಾರ್ವತಿಯನ್ನು ಪ್ರಯತ್ನದಿಂದ ರಕ್ಷಿಸಬೇಕು.

ಇತಿ ಸಂದಿಶ್ಯ ತಾಸ್ಸರ್ವಾಃ ಸಮಾರುಹ್ಯ ವೃಷಂ ಪ್ರಭುಃ ।
ನಿರ್ಜಗಾಮ ಗೃಹಾದ್ಧೃಷ್ಟೋ ಜಗ್ಮುಸ್ತೇ ಪೃಷ್ಠತೋ ಗಣಾಃ ॥ ೧೧ ॥

ಆಗಚ್ಛನ್ ತಸ್ಯ ಭವನಾದೀಶ್ವರಸ್ಯ ಗಣಾಧಿಪಾಃ ।
ಸಮಾಯಾತಾಃ ಪರೀವಾರ್ಯ ಜಯಶಬ್ದಾಂಶ್ಚ ಚಕ್ರಿರೆ ॥ ೧೨ ॥

ರಣಾಯ ನಿರ್ಗಚ್ಛತಿ ಲೋಕಪಾಲೆ
ಮಹೇಶ್ವರೆ ಶೂಲಧರೆ ಮಹರ್ಷೆ ।
ಶುಭಾನಿ ಸೌಮ್ಯಾನಿ ಸುಮಂಗಲಾನಿ
ಚಿಹ್ನಾನಿ ಶಂಸಂತಿ ಜಯಂ ಹಿ ತಸ್ಯ ॥ ೧೩ ॥

ಶಿವಾಸ್ಥಿತಾ ವಾಮತರೆ ಚ ಭಾಗೆ
ಪ್ರಾಯಾತ್ತಥಾಗ್ರೆ ಸುರಸಂ ನದಂತೀ ।
ಕ್ರವ್ಯಾದಸಂಘಾಶ್ಚ ತಥಾಮಿಷೈಷಿಣಃ
ಪ್ರಯಾಂತಿ ಹೃಷ್ಟಾಸ್ತೃಷಿತಾಸ್ಸೃಗರ್ಥೆ ॥ ೧೪ ॥

ದಕ್ಷಿಣಾಂಗಂ ನಖಾಂತಂ ವೈ ಸಮಕಂಪತ ಶೂಲಿನಃ ।
ಶಕುನಿಶ್ಚಾಪಿ ಹಾರೀತೋ ಮೌನೀ ಯಾತಿ ಪರಾಙ್ಮುಖಃ ॥ ೧೫ ॥

೧೧-೧೪. ಈರೀತಿ ಆ ಸಖಿಗಳೆಲ್ಲರಿಗೂ ಅಪ್ಪಣೆಮಾಡಿ ವೃಷಭಾರೂಢನಾಗಿ ಮನೆಯನ್ನು ಬಿಟ್ಟು ಸಂತೋಷದಿಂದ ಹೊರಟನು. ಗಣಗಳೆಲ್ಲವೂ ಅವನನ್ನು ಹಿಂಬಾಲಿಸಿ ಹೊರಟವು. ಗಣಾಧಿಪತಿಗಳೆಲ್ಲರೂ ಆ ಈಶ್ವರ ಗೃಹದಿಂದ ಹೊರಟು ಬಂದು ಆ ಶಂಕರನೊಡನೆ ಸೇರಿ ಸುತ್ತುವರಿದು ಜಯಶಬ್ದ ಮಾಡತೊಡಗಿದರು. ಆ ಪ್ರಕಾರ ಲೋಕಪತಿಯಾದ ಆ ಹರನು ಶೂಲಧರನಾಗಿ ಯುದ್ಧಕ್ಕಾಗಿ ಹೊರಡುವಾಗ ಶುಭವಾಗಿಯೂ ಮಂಗಲಪ್ರದವಾಗಿಯೂ ಇರುವ ಸೌಮ್ಯ ಚಿಹ್ನೆಗಳೆಲ್ಲವೂ ಆ ಪ್ರಭುವಿನ ಜಯವನ್ನು ಸೂಚಿಸುತ್ತಿದ್ದುವು. ಆಗ ಶಿವೆಯು ಹರನ ಎಡಭಾಗದಲ್ಲಿ ಕುಳಿತು ಸಮರಸಿಂಹನಾದವನ್ನು ಮಾಡುತ್ತಾ ಮುಂದೆ ನಡೆದಳು. ಮಾಂಸಾರ್ಥಿಗಳಾದ ಎಲ್ಲಾ ಪ್ರಾಣಿಗಳೂ ಬಾಯಾರಿ ರಕ್ತಪಾನಕ್ಕಾಗಿ ಸಂತೋಷದಿಂದ ಕಾದು ನಿಂತವು.

೧೫. ಆಗ ಹರನ ಬಲಭಾಗದ ಶರೀರವು ಕಾಲಿನ ಉಗುರಿನವರೆಗೂ ಅದುರಿತು. ಹಾರೀತವೆಂಬ ಪಕ್ಷಿಯೂ ಸಹ ನಿಶ್ಶಬ್ದವಾಗಿ ಪರಾಙ್ಮುಖವಾಗಿ ನಡೆಯಿತು.

ನಿಮಿತ್ತಾನ್ಯೀದೃಶಂ ದೃಷ್ಟ್ವಾ ಭೂತಭವ್ಯಭವೋ ವಿಭುಃ ।
ಶೈಲಾದಿಂ ಪ್ರಾಹ ವಚನಂ ಸಸ್ಮಿತಂ ಶಶಿಶೇಖರಃ ॥ ೧೬ ॥

ಶಶಿಶೇಖರ ಉವಾಚ

ನಂದಿನ್ ಜಯೋ ಭಾವ್ಯತ್ರೈದ್ಯ ನ ಕಥಂಚಿತ್ಪರಾಜಯಃ ।
ನಿಮಿತ್ತಾನೀಹ ದೃಶ್ಯಂತೇ ಸಂಭೂತಾನಿ ಗಣೇಶ್ವರ ॥ ೧೭ ॥

ತಚ್ಛಂಭುವಚನಂ ಶ್ರುತ್ವಾ ಶೈಲಾದಿಃ ಪ್ರಾಹ ಶಂಕರಂ ।
ಸಂದೇಹಃ ಕೋ ಮಹಾದೇವ ಜಯ ತ್ವಂ ಶತ್ರುವರ್ಗ ಬಹೂನ್ ॥ ೧೮ ॥

ಇತ್ಯೇವಮುಕ್ತ್ವಾ ವಚನಂ ನಂದೀ ರುದ್ರಗಣಾಂಸ್ತಥಾ ।
ಸಮಾದಿದೇಶ ಯುದ್ಧಾಯ ಮಹಾಪಾಶುಪತೈಸ್ಸಹ ॥ ೧೯ ॥

ತೇಃಭ್ಯೇತ್ಯ ದಾನವಬಲಂ ವಿನಿಘ್ನಂತಶ್ಚ ವೇಗಿನಃ ।
ನಾನಾಶಸ್ತ್ರಧರಾ ವೀರಾ ವೃಕ್ಷಾನಶನಯೋ ಯಥಾ ॥ ೨೦ ॥

ತೇ ಭಿದ್ಯಮಾನಾ ಬಲಿಭಿಃ ಪ್ರಮಥೈಃ ದೈತ್ಯದಾನವಾಃ ।
ಪ್ರವೃತ್ತಾಃ ಪ್ರಮಥಾನ್ ಹಂತುಂ ಕೂಟಮುದ್ಗರಪಾಣಯಃ ॥ ೨೧ ॥

೧೬-೧೮. ಈರೀತಿಯಾದ ಶುಭನಿಮಿತ್ತಗಳನ್ನು ನೋಡಿ ಹರನು ಶೈಲಾದಿಯನ್ನು ಕುರಿತು ಮಂದಸ್ಮಿತಮುಖನಾಗಿ ಹೇಳುತ್ತಾನೆ. ಎಲೈ ನಂದಿಯೇ ಈ ಯುದ್ಧದಲ್ಲಿ ನಮಗೆ ಜಯವೇ ಉಂಟಾಗುತ್ತದೆ. ಪರಾಜಯವು ಎಂದಿಗೂ ಆಗಲಾರದು. ಶುಭನಿಮಿತ್ತಗಳೂ ಕಾಣುತ್ತಿವೆ ಎನ್ನಲು ನಂದಿಯು ಆ ಮಾತನ್ನು ಕೇಳಿ ಪ್ರಭುವೇ ಇದರಲ್ಲಿ ಸಂದೇಹವೇನಿದೆ. ಈ ಶತ್ರುಗಳೆಲ್ಲರನ್ನೂ ಜಯಿಸಿ ನೀನು ಸರ್ವೋತ್ಕೃಷ್ಟನಾಗಿರು ಎಂದು ಶುಭಾಶಂಸನವನ್ನು ಮಾಡಿದನು.

೧೯-೨೧. ನಂದಿಯು ಈ ರೀತಿ ಶುಭಾಶಂಸನ ಮಾಡಿ ರುದ್ರಗಣಗಳನ್ನೂ ಪಾಶುಪತರೊಡನೆ ಸೇರಿ ಯುದ್ಧಮಾಡಲು ಅಪ್ಪಣೆಮಾಡಿದನು. ಅವರೆಲ್ಲರೂ ಬಂದು ವೇಗದಿಂದ ದಾನವ ಸೈನ್ಯವನ್ನು ಹೊಕ್ಕು ನಾನಾಯುಧಗಳಿಂದ ಅವರನ್ನು ಅಶನಿಪಾತವು ಮರಗಳನ್ನು ನಾಶಪಡಿಸುವಂತೆ ನಾಶಮಾಡಲು ಮೊದಲುಮಾಡಿದರು. ಆಗ ಆ ದೈತ್ಯದಾನವರೆಲ್ಲರೂ ಬಲಿಷ್ಠರಾದ ಪ್ರಮಥರಿಂದ ಹೊಡೆಯಲ್ಪಟ್ಟು ಮುದ್ಗರಾದಿ ನಾನಾಯುಧಗಳಿಂದ ಪ್ರಮಥರನ್ನೂ ಕೊಲ್ಲಲು ಹೊರಟರು.

ತತೋಽಂಬರತಲೇ ದೇವಾಃ ಸೇಂದ್ರವಿಷ್ಣುಪಿತಾಮಹಾಃ ।
ಸಸೂರ್ಯಾರ್ಗಭಿಪುರೋಗಾಶ್ಚ ಸಮಾಯಾತಾ ದಿದೃಕ್ಷವಃ ॥ ೨೨ ॥

ತತೋಽಂಬರತಲೇ ಘೋಷಃ ಸಸ್ವನಃ ಸಮಜಾಯತ ।
ಗೀತವಾದ್ಯಾದಿಸಂಮಿಶ್ರೋ ದುಂದುಭೀನಾಂ ಕಲಪ್ರಿಯಃ ॥ ೨೩ ॥

ತತಃ ಪಶ್ಯತ್ಸು ದೇವೇಷು ಮಹಾಪಾಶುಪತಾದಯಃ ।
ಗಣಾಸ್ತದ್ದಾನವಂ ಸೈನ್ಯಂ ನಿಘ್ನಂತಿಸ್ಮ ಸುಕೋಪಿತಾಃ ॥ ೨೪ ॥

ಚತುರಂಗಂ ಬಲಂ ದೃಷ್ಟ್ವಾ ವಧ್ಯಮಾನಂ ಗಣೇಶ್ವರೈಃ ।
ಕ್ರೋಧಾನ್ವಿತಸ್ತು ದಂಡಸ್ತು ವೇಗೇನಾಭಿಸಸಾರ ಹ ॥ ೨೫ ॥

ಆದಾಯ ಪರಿಘಂ ಘೋರಂ ಪಟ್ಟೋದ್ಬದ್ಧಮಯಸ್ಮಯಂ ।
ರಾಜತೇ ತಸ್ಯ ಹಸ್ತಸ್ಥಮಿಂದ್ರಧ್ವಜಮಿವೋದ್ಧೃತಂ ॥ ೨೬ ॥

ತಂ ಭ್ರಾಮಯಾನೋ ಬಲವಾನ್ನಿಜಘಾನ ರಣೇ ಗಣಾನ್ ।
ರುದ್ರಾದೀನ್ ಸ್ಕಂದಪರ್ಯಂತಾಂಸ್ತೇಽಭಂಜತ ಭಯಾತುರಾಃ ॥ ೨೭ ॥

---

೨೨. ಅನಂತರ ಆ ಮಹಾಯುದ್ಧವನ್ನು ನೋಡಲು ಇಚ್ಛೆಯಿಂದ ಇಂದ್ರ, ವಿಷ್ಣು, ಬ್ರಹ್ಮ, ಸೂರ್ಯ ಇವರೂ ಇವರ ಅನುಯಾಯಿಗಳೂ ಇತರ ದೇವತೆಗಳೊಡನೆ ಆಕಾಶಮಾರ್ಗದಲ್ಲೇ ಬಂದು ನಿಂತರು.

೨೩-೨೬. ಅನಂತರ ಆಕಾಶದಲ್ಲಿ ಗೀತವಾದ್ಯಾದಿಗಳಿಂದ ಕೂಡಿದ ಮಂಗಲ ಧ್ವನಿಯೂ ಯುದ್ಧಪ್ರೋತ್ಸಾಹದಿಂದ ದುಂದುಭಿಧ್ವನಿಯೂ ಸಹ ಮಹಾಘೋಷವಾಗಿ ಮೊಳಗಿತು. ಆಗ ದೇವತೆಗಳು ನೋಡುತ್ತಿರುವಾಗಲೇ ಮಹಾಪಾಶುಪತಾದಿ ಗಣಗಳು ಆ ದಾನವ ಸೈನ್ಯವನ್ನೆಲ್ಲಾ ಕೋಪದಿಂದ ಪ್ರಹರಿಸಿದವು. ಆಗ ತಮ್ಮ ಚತುರಂಗ ಸೈನ್ಯವೂ ಸಹ ಗಣಪತಿಗಳಿಂದ ನಾಶಮಾಡಲ್ಪಡುತ್ತಿರುವುದನ್ನು ನೋಡಿ ದಂಡನು ಕೋಪದಿಂದ ವೇಗವಾಗಿ ಎದುರಿಸಲು ಅಭಿಮುಖನಾಗಿ ಬಂದನು. ಆಗ ಅವನು ಹಿಡಿದ ಪಟ್ಟಬದ್ಧವಾದ ಉಕ್ಕಿನ ಮುದ್ಗರಾಯುಧವು ಕೈಯ್ಯಿನಿಂದ ಮೇಲಕ್ಕೆ ಎತ್ತಿ ಹಿಡಿಯಲ್ಪಟ್ಟಿರುವ ಇಂದ್ರಧ್ವಜವೋ ಎಂಬಂತೆ ತೋರಿತು.

೨೭-೩೦. ಆ ಮುದ್ಗರಾಯುಧವನ್ನು ವೇಗದಿಂದ ತಿರುಗಿಸಿ ಗಣಗಳನ್ನೆಲ್ಲಾ ದಂಡನು ಗಾಸಿಪಡಿಸಿದನು. ರುದ್ರರೇ ಮೊದಲಾಗಿ ಸ್ಕಂದಪರ್ಯಂತ ಎಲ್ಲಾ ಗಣಗಳೂ

ತಚ್ಚ ಭಗ್ನಂ ಬಲಂ ದೃಷ್ಟ್ವಾ ಗಣನಾಥೋ ವಿನಾಯಕಃ ।
ಸಮಾಭ್ರವತ ವೇಗೇನ ತುಹುಂಡಂ ದನುಪುಂಗವಂ ॥ ೨೮ ॥

ಆಪತಂತಂ ಗಣಪತಿಂ ದೃಷ್ಟ್ವಾ ದೈತ್ಯೋ ದುರಾತ್ಮವಾನ್ ।
ಪರಿಘಂ ಪಾತಯಾಮಾಸ ಕುಂಭಮಧ್ಯೆ ಮಹಾಬಲಃ ॥ ೨೯ ॥

ವಿನಾಯಕಸ್ಯ ಮಿಷತಃ ಪರಿಘಂ ವಜ್ರಭೂಷಣಂ ।
ಶತಧಾನ್ವಗಮದ್ಬ್ರಹ್ಮನ್ ಮೇರೋಃ ಕೂಟಮಿವಾಶನಿಃ ॥ ೩೦ ॥

ಪರಿಘಂ ವಿಫಲಂ ದೃಷ್ಟ್ವಾ ಸಮಾಯಾತಂ ಚ ಪಾರ್ಷದಂ ।
ಬಬಂಧ ಬಾಹುಪಾಶೇನ ಬಲಾದಾಕೃಷ್ಯ ದಾನವಃ ॥ ೩೧ ॥

ತಂ ಜಘಾನಾಥ ಶಿರಸಿ ಮುದ್ಗರೇಣ ಮಹೋದರಂ ।
ಪರಶ್ವಧೇನ ದೈತ್ಯೇಂದ್ರಂ ಗಣೇಶೋ ಹಿ ಮಹೋದರಃ ॥ ೩೨ ॥

ಕಾಷ್ಠವತ್ಸದ್ವಿಧಾ ಭೂತೋ ನಿಪಪಾತ ಧರಾತಲೆ ।
ತಥಾಪಿ ನಾತ್ಯಜದ್ಬಾಹುಂ ಬಲವಾನ್ ದಾನವೇಶ್ವರಃ ।
ಮೋಕ್ಷಾರ್ಥಮಕರೋದ್ಯತ್ನಂ ನಶಶಾಕ ಮಹೌದರಃ । ॥ ೩೩ ॥

ಗಾಸಿಪಟ್ಟು ಭಯದಿಂದ ಓಡಿದರು. ಆ ರೀತಿ ಭಗ್ನವಾಗಿ ಓಡುತ್ತಿರುವ ಗಣಗಳನ್ನು ನೋಡಿ ಗಣಾಧಿಪತಿಯಾದ ವಿನಾಯಕನು ತುಹುಂಡನೆಂಬ ದೈತ್ಯನನ್ನು ಎದುರಿಸಲು ವೇಗದಿಂದ ಎದುರಾಗಿ ಓಡಿದನು. ಹಾಗೆ ಬರುತ್ತಿರುವ ಗಣಪತಿಯನ್ನು ನೋಡಿ ದುಷ್ಟನಾದ ಆ ದೈತ್ಯನು ಪರಿಘಾಯುಧದಿಂದ ಕುಂಭಸ್ಥಲದ ಮಧ್ಯದಲ್ಲಿ ಪ್ರಹರಿಸಿದನು. ವಜ್ರಘಟಿತವಾದ ಆ ಪರಿಘಾಯುಧವು ವಿನಾಯಕನು ನೋಡುತ್ತಿರುವಾಗಲೇ ಮೇರುಶಿಖರದಲ್ಲಿ ಬಿದ್ದ ಅಶನಿಯು ಚೂರಾಗುವಂತೆ ಭಿನ್ನಾಭಿನ್ನವಾಗಿ ಒಡೆದು ಹೋಯಿತು.

೩೧-೩೪. ಪರಿಘಾಯುಧವು ವ್ಯರ್ಥವಾದುದನ್ನೂ ಗಣಪತಿಯು ಬಪುಕಿ ಬಂದುದನ್ನೂ ನೋಡಿ ಆ ಗಣಪತಿಯನ್ನು ಬಲಾತ್ಕಾರದಿಂದ ಸೆಳೆದು ತುಹುಂಡನು ಬಾಹುಗಳಿಂದ ಬಂಧಿಸಿದನು. ಆಗ ವಿನಾಯಕನು ಮುದ್ಗರಾಯುಧದಿಂದ ಮಹೋದರನನ್ನು ತಲೆಯ ಮೇಲೆ ಹೊಡೆದು ತುಹುಂಡನನ್ನೂ ಕೊಡಲಿಯಿಂದ ಹೊಡೆದು ಎದುರಿಸಿದನು. ಆಗ ತುಹುಂಡನು ಕಟ್ಟಿಗೆಯಂತೆ ಎರಡುಭಾಗವಾಗಿ ಕೆಳಗೆಬಿದ್ದನು. ಆದರೂ ಆ ದಾನವನು ಬಾಹುಬಂಧವನ್ನು ಬಿಡಲೇ ಇಲ್ಲ. ಅದನ್ನು ಬಿಡಿಸಿಕೊಳ್ಳಲು

ವಿನಾಯಕಂ ಸಂಯತಮೀಕ್ಷ್ಯ ಬಾಹುನಾ
ಕುಂಡೋದರೋ ನಾಮ ಗಣೇಶ್ವರೋಽಥ ।
ಪ್ರಗೃಹ್ಯ ತೂರ್ಣಂ ಮುಸಲಂ ಮಹಾತ್ಮಾ
ಬಾಹುಂ ಸಮುಂತಾತ್ಸ ಜಘಾನ ತಸ್ಯ ॥ ೩೪ ॥

ತತೋ ಗಣೇಶಃ ಕಲಶಧ್ವಜಸ್ತು
ಪ್ರಾಸೇನ ರಾಹುಂ ಹೃದಯೇ ಬಿಭೇದ ।
ಹತೇ ತುಹುಂಡೇ ವಿಮುಖೇ ತು ರಾಹೌ
ಗಣೇಶ್ವರಾಃ ಕ್ರೋಧವಿಷಂ ಮುಮುಕ್ಷವಃ ॥ ೩೫ ॥

ಪಂಚೈಕಕಾಲಾನಲ ಸನ್ನಿಕಾಶಾ
ವಿಶಂತಿ ಸೇನಾಂ ದನುಪುಂಗವಾನಾಂ ।
ತಾಂ ವಧ್ಯಮಾನಾಂ ಸ್ವಚಮೂಂ ಸಮೀಕ್ಷ್ಯ
ಬಲಿರ್ಬಲೀ ಮಾರುತವೇಗತುಲ್ಯಃ ॥ ೩೬ ॥

ವಿನಾಯಕನು ಪ್ರಯತ್ನಪಟ್ಟರೂ ವಿಫಲನಾದನು. ಹಾಗೆ ವಿನಾಯಕನು ಬದ್ಧನಾದುದನ್ನು ನೋಡಿ ಕುಂಡೋದರನೆಂಬ ಗಣಾಧಿಪತಿಯು ಮುಸಲಾಯುಧವನ್ನು ಹಿಡಿದು ವೇಗದಿಂದ ಬಂದು ಆ ತಹುಂಡನ ಬಾಹುಗಳನ್ನು ಎಲ್ಲಾ ಕಡೆಯಲ್ಲಿಯೂ ಹೊಡೆದನು.

೩೫-೩೬. ಅನಂತರ ಕಲಶಧ್ವಜನೆಂಬ ಗಣಾಧಿಪನು ರಾಹುವೆಂಬ ದೈತ್ಯನನ್ನು ಪ್ರಾಸಾಯುಧದಿಂದ ಎದೆಯಲ್ಲಿ ಭೇದಿಸಿದನು. ಆಗ ರಾಹುವೂ ವಿಮುಖನಾಗಿ ತುಹುಂಡನೂ ಹತನಾಗಿ ದುರ್ಬಲವಾದ ದಾನವಸೈನ್ಯವನ್ನು ನೋಡಿ ತಮ್ಮ ಕೋಪ ವೆಂಬ ವಿಷವನ್ನು ಬಿಡಲು ಇಚ್ಛೆಯಿಂದ ವಿನಾಯಕ, ಕುಂಡೋದರ, ಮಹೋದರ, ಕುಂಭಧ್ವಜ, ಘಟೋದರರೆಂಬ ಐದು ಜನ ಗಣಪತಿಗಳೂ ಕಾಲಾಗ್ನಿಯಂತೆ ಕ್ರೂರರಾಗಿ ಆ ದಾನವ ಸೈನ್ಯಕ್ಕೆ ನುಗ್ಗಿ ಕಲಕಿದರು. ಆ ರೀತಿ ಪ್ರಬಲಪ್ರಹಾರಕ್ಕೆ ಪಾತ್ರವಾದ ದಾನವಸೈನ್ಯವನ್ನು ನೋಡಿ ಬಲಿಷ್ಠನಾದ ಬಲಿಯೆಂಬ ದಾನವನು ವಾಯುವೇಗದಿಂದ ಬಂದು ಗದೆಯನ್ನು ಎತ್ತಿ ವಿನಾಯಕನನ್ನು ತಲೆಯ ಮೇಲೂ

ಗದಾಂ ಸಮಾವಿಧ್ಯ ಜಘಾನ ಮೂರ್ಧ್ನಿ
 ವಿನಾಯಕಂ ಕುಂಭಕಟೇ ಕರೇಚ ।
ಕುಂಡೋದರಂ ಭಗ್ನಕರಂ ಮಹೋದರಂ
 ಶೀರ್ಣಂ ಶಿರಸ್ಕನ್ನಮಹಾಕಪಾಲಂ ॥ ೩೭ ॥

ಕುಂಭಧ್ವಜಂ ಘೂರ್ಣಿತಸಂಧಿಬಂಧಂ
 ಘಟೋದರಂ ಚೋರುವಿಪನ್ನಸಂಧಿಂ ।
ಗಣಾಧಿಪಾಂಸ್ತಾನ್ವಿಮುಖಾಂಸ್ತು ದೃಷ್ಟ್ವಾ
 ಬಲಾನ್ವಿತೋ ವೀರತರಃ ಸುರೇಂದ್ರಃ ॥ ೩೮ ॥

ಸಮೇತ್ಯ ಧಾವಂಸ್ತ್ವರಿತೋ ನಿಹಂತುಂ
 ಗಣೇಶ್ವರಾನ್ ಸ್ಕಂದವಿಶಾಖಮುಖ್ಯಾನ್ ।
ತಮಾಪತಂತಂ ಭಗವಾನ್ ಸಮೀಕ್ಷ್ಯ
 ಮಹೇಶ್ವರಃ ಶ್ರೇಷ್ಠತಮಂ ಗಣಾನಾಂ ॥ ೩೯ ॥

ಶೈಲಾದಿಮಾಮಂತ್ರ್ಯ ತದಾಬಭಾಷೆ
 ತ್ವಂ ಗಚ್ಛ ದೈತ್ಯಂ ಜಹಿ ವೀರ ಯುದ್ಧೇ ।

ಕುಂಭಸ್ಥಲದ ಮೇಲೂ ಗಂಡಸ್ಥಲದಲ್ಲಿಯೂ ಸೊಂಡಲಿನ ಮೇಲೂ ವೇಗದಿಂದ ಹೊಡೆದನು ಮತ್ತು ಅವನ ಪ್ರಹಾರದಿಂದ ಕುಂಡೋದರನು ಭಗ್ನಹಸ್ತನಾಗಿಯೂ ಮಹೋದರನು ತಲೆಹೊಡೆದು ಕಳೆಚಿಬಿದ್ದ ಕಪಾಲವುಳ್ಳವನಾಗಿಯೂ ಕುಂಭಧ್ವಜನು ಶಿಥಿಲವಾದ ಸಂಧಿಬಂಧವುಳ್ಳವನಾಗಿಯೂ, ಘಟೋದರನು ಮುರಿದ ತೊಡೆಯುಳ್ಳವನಾಗಿಯೂ ಆದರು.

೩೮-೪೧. ಈರೀತಿ ಗಣಾಧಿಪರೆಲ್ಲರೂ ವಿಮುಖರಾದುದನ್ನು ನೋಡಿ ಬಲಶಾಲಿಯಾದ ಸುರೇಂದ್ರನೆಂಬ ದಾನವನು ತ್ವರೆಯಿಂದ ಓಡಿಬಂದು ಸ್ಕಂದ ವಿಶಾಖನೇ ಮೊದಲಾದ ಗಣಪತಿಗಳನ್ನು ಕೊಲ್ಲಲು ಪ್ರಯತ್ನಿಸಿದನು. ಹಾಗೆ ವೇಗದಿಂದ ಬರುತ್ತಿರುವ ಆ ದಾನವನನ್ನು ನೋಡಿ ಮಹೇಶ್ವರನು ಗಣಗಳಲ್ಲಿ ಶ್ರೇಷ್ಠನಾದ ಶೈಲಾದಿಯನ್ನು ಕರೆದು ಎಲೈ ಶೂರನೇ ನೀನು ಹೋಗು. ಈ ದೈತ್ಯನನ್ನು ಯುದ್ಧದಲ್ಲಿ ನಾಶಮಾಡು ಎಂದು ಅಪ್ಪಣೆಮಾಡಿದನು. ಹೀಗೆ ಶಂಕರನಿಂದ ಆಜ್ಞಾಪಿಸಲ್ಪಟ್ಟ ಶೈಲಾದಿಯು ಚಕ್ರಾಯುಧವನ್ನು ಧರಿಸಿ ಬಲಿಯ ಸಮೀಪಕ್ಕೆ ಹೋಗಿ ಅವನ ತಲೆಯ

ಇತ್ಯೇವಮುಕ್ತ್ವೋ ವೃಷಭಧ್ವಜೇನ
ಚಕ್ರಂ ಸಮಾದಾಯ ಶಿಲಾದಸೂನುಃ ॥ ೪೦ ॥

ಬಲಿಂ ಸಮಭ್ಯೇತ್ಯ ಜಘಾನ ಮೂರ್ಧ್ನಿ
ಸಂಮೋಹಿತಶ್ಚಾವನಿಮಾಸಸಾದ ।
ಸಂಮೋಹಿತಂ ಭ್ರಾತೃಸುತಂ ವಿದಿತ್ವಾ
ಬಲೀ ಕುಜಂಭೋ ಮುಸಲಂ ಪ್ರಗೃಹ್ಯ ॥ ೪೧ ॥

ಸಂಭ್ರಾಮಯನ್ ಘೂರ್ಣತರಂ ಸವೇಗಾ
ತ್ಸಸರ್ಜ ನಂದಿಂ ಪ್ರತಿ ಜಾತಕೋಪಃ ।
ತಮಾಪತಂತಂ ಮುಸಲಂ ಪ್ರಗೃಹ್ಯ
ಕರೇಣ ತೂರ್ಣಂ ಭಗವಾನ್ ಸ ನಂದೀ ॥ ೪೨ ॥

ಜಘಾನ ತೇನೈವ ಕುಜಂಭಮಾಹವೇ
ಸಪ್ರಾಣಹೀನೋನಿಪಪಾತ ಭೂಮ್ಯಾಂ ।
ಹತ್ವಾ ಕುಜಂಭಂ ಮುಸಲೇನ ನಂದೀ
ವ್ರಜೇಣ ನಂದೀ ಶತಶೋ ಜಘಾನ ॥ ೪೩ ॥

ಮೇಲೆ ಹೊಡೆಯಲು ಆ ಬಲಿಯು ಮೂರ್ಛಿತನಾಗಿ ಭೂಮಿಯಲ್ಲಿ ಬಿದ್ದನು. ಹಾಗೆ ಮೂರ್ಛಿತನಾದ ಅಣ್ಣನ ಮಗನನ್ನು ನೋಡಿ ಬಲಶಾಲಿಯಾದ ಕುಜಂಭನು ಮುಸಲಾಯುಧವನ್ನು ಪರಿಗ್ರಹಿಸಿ ಅದನ್ನು ವೇಗದಿಂದ ತಿರುಗಿಸಿ ಬಹಳ ಕೋಪಾವೇಶದಿಂದ ನಂದಿಯ ಮೇಲೆ ಪ್ರಯೋಗಿಸಿದನು.

೪೨-೪೩. ಆ ಪ್ರಕಾರ ಮುಸಲಾಯುಧವನ್ನು ಧರಿಸಿ ಬರುತ್ತಿರುವ ಕುಜಂಭನನ್ನು ಸಮರ್ಥನಾದ ನಂದಿಯು ಅವನ ಆಯುಧದಿಂದಲೇ ಅವನನ್ನು ಹೊಡೆಯಲು ಅವನೂ ಪ್ರಾಣಹೀನನಾಗಿ ನೆಲದಲ್ಲಿ ಬಿದ್ದನು. ಆ ರೀತಿ ಕುಜಂಭನನ್ನು ಹೊಡೆದು ಪುನಃ ವಜ್ರಾಯುಧದಿಂದ ಎಲ್ಲರನ್ನೂ ಹೊಡೆದು ಘಾಸಿಪಡಿಸಿದನು. ಹಾಗೆ ನಂದಿಯಿಂದ ಪೀಡಿತರಾದ ದಾನವರೆಲ್ಲರೂ ದುರ್ಯೋಧನನನ್ನು ಶರಣು ಹೊಕ್ಕರು.

ಶೀ ವಧ್ಯಮಾನಾ ಗಣನಾಯಕೇನ
ದುರ್ಯೋಧನಂ ವೈ ಶರಣಂ ಪ್ರಪನ್ನಾಃ ।
ದುರ್ಯೋಧನಃ ಪ್ರೇಕ್ಷ್ಯ ಗಣಾಧಿಪೇನ
ವಜ್ರಪ್ರಹಾರೈರ್ನಿಹತಾನ್ ದಿತೀಶಾನ್ ॥ ೪೪ ॥

ಪಾಶಂ ಸಮಾವಿಧ್ಯ ತಡಿತ್ಪ್ರಕಾಶಂ
ನಂದಿಂ ಪ್ರಚಿಕ್ಷೇಪ ಹತಸ್ತ್ವಿತಿ ಬ್ರುವನ್ ।
ತಮಾಪತ್ತನಂ ಕುಲಿಶೇನ ನಂದೀ ಬಿಭೇದ
ಗುಹ್ಯಂ ಪಿಶುನೋ ಯಥಾ ನರಃ ॥ ೪೫ ॥

ತಂ ಪಾಶಮಾಲಕ್ಷ್ಯ ತದಾ ತು ಕೃತ್ತಂ
ಸಂವರ್ತ್ಯ ಮುಷ್ಟಿಂ ಗಣಮಾಸಸಾದ ।
ತತೋಽಸ್ಯ ವಜ್ರೀ ಕುಲಿಶೇನ ತೂರ್ಣಂ
ಶಿರೋಚ್ಛಿನತ್ತಾಲಫಲಪ್ರಕಾಶಂ ॥ ೪೬ ॥

ಹತೋಽಥ ಭೂಮೌ ನಿಪಪಾತ ವೇಗಾ
ದ್ದೈತ್ಯಾಶ್ಚ ಭೀತಾ ವಿಗತಾ ದಿಶೋ ದಶ ।
ತತೋಹತಂ ಸ್ವಂ ತನಯಂ ನಿರೀಕ್ಷ್ಯ
ಹಸ್ತೀ ತದಾ ನಂದಿನಮಾಜಗಾಮ ॥ ೪೭ ॥

೪೪-೪೫. ಆಗ ದುರ್ಯೋಧನನು ನಂದಿಯಿಂದ ವಜ್ರಪ್ರಹಾರದಿಂದ ನಾಶ ಪಡಿಸಲ್ಪಟ್ಟ ದೈತ್ಯರನ್ನು ನೋಡಿ ಮಿಂಚಿನಂತೆ ಹೊಳೆಯುತ್ತಿರುವ ಪಾಶಾಯುಧ ವನ್ನು ತೆಗೆದು ಇದರಿಂದ ಇವನು ಹತನಾದನೆಂದು ಹೇಳುತ್ತಾ ನಂದಿಯ ಮೇಲೆ ಪ್ರಯೋಗಿಸಿದನು. ಹಾಗೆ ಬರುತ್ತಿರುವ ಆ ಪಾಶಾಯುಧವನ್ನು ನಂದಿಯು ವಜ್ರಾ ಯುಧದಿಂದ ಪಿಶುನನಾದ ನರನಂತೆ ಗುಹ್ಯಪ್ರದೇಶದಲ್ಲಿ ಭೇದಿಸಿದನು. ಆ ರೀತಿ ಪಾಶಾಯುಧವೂ ಭಿನ್ನವಾದುದನ್ನು ಕಂಡು ದಾನವನು ದೃಢವಾದ ಮುಷ್ಟಿಬಂಧದಿಂದ ಗಣವನ್ನು ಪ್ರವೇಶಿಸಿದನು.

೪೬-೪೭. ಅನಂತರ ವಜ್ರಧಾರಿಯಾದ ನಂದಿಯು ವೇಗದಿಂದ ಆ ದುರ್ಯೋ ಧನನ ತಲೆಯನ್ನೇ ತಾಲಫಲದಂತೆ ಕತ್ತರಿಸಿ ಕೆಡವಿದನು. ದುರ್ಯೋಧನನು ಹತನಾಗಿ ಬೀಳಲು ದೈತ್ಯರೆಲ್ಲಾ ದಿಕ್ಕುದಿಕ್ಕಿಗೆ ಓಡಿದರು. ಅನಂತರ ತನ್ನ ಮಗನು ಹತನಾದುದನ್ನು ನೋಡಿ ಹಸ್ತಿಯು ನಂದಿಯನ್ನು ಎದುರಿಸಲು ಬಂದನು.

ಪ್ರಗೃಹ್ಯ ಬಾಣಾಶನಿಮುಗ್ರವೇಗಂ
ಬಿಭೇದ ಬಾಣೈರ್ಯಮದಂಡಕಲ್ಪೈಃ ।
ಗಣಾನ್ ಸನಂದೀನ್ ವೃಷಭಧ್ವಜಾಂಸ್ತಾಂ
ನ್ಧಾರಾಭಿರೇವಾಂಬುಧರಾಸ್ತು ಶೈಲಂ ॥ ೪೮ ॥

ತೇ ಭಾದ್ಯಮಾನಾ ದನುಬಾಣಜಾಲೈಃ
ವಿನಾಯಕಾದ್ಯಾ ಬಲಿನೋಽಪಿ ವೀರಾಃ ।
ಸಿಂಹಪ್ರಣುನ್ನಾ ವೃಷಭಾ ಯಥೈವ
ಭಯಾತುರಾ ದುದ್ರುವಿರೆ ಸಮಂತಾತ್ ॥ ೪೯ ॥

ಪರಸ್ಪರಾನ್ ಪ್ರೇಕ್ಷ್ಯ ಗಣಾನ್ ಕುಮಾರಃ
ಶಕ್ತಿಂ ನಿಶಾತಾಮಥ ಧಾರಯಿತ್ವಾ ।
ತೂರ್ಣಂ ಸಮುಭ್ಯೇತ್ಯ ರಿಪುವಂಗವೇಷು
ಪ್ರಗೃಹ್ಯ ಶಕ್ತಿಂ ಹೃದಯಂ ಬಿಭೇದ ॥ ೫೦ ॥

ಶಕ್ತಿನಿರ್ಭಿನ್ನಹೃದಯೋ ಹಸ್ತೀ ಭೂಮ್ಯಾಂ ಪಪಾತ ಹ ।
ಸಮರೆ ಚಾಪಿ ಪೃತನಾಮಧ್ಯೇಽಸೌ ದನುಪುಂಗವಃ ॥ ೫೧ ॥

---

೪೮. ಯಮದಂಡದಂತೆ ಭಯಂಕರವಾದ ಬಾಣಗಳಿಂದ ನಂದಿಯೊಡಗೂಡಿರುವ ವೃಷಭಧ್ವಜರಾದ ಆ ಗಣಗಳನ್ನೆಲ್ಲಾ ಪರ್ವತವನ್ನು ಮೇಘಗಳು ವೃಷ್ಟಿಧಾರೆಯಿಂದ ಸುರಿಸುವಂತೆ ಮುಚ್ಚಿದನು.

೪೯-೫೦. ಪ್ರಬಲವಾದ ಬಾಣಪರಂಪರೆಗಳಿಂದ ಹಾಗೆ ಮುಚ್ಚಲ್ಪಟ್ಟ ವಿನಾಯಕನೇ ಮೊದಲಾದವರು ಬಲಿಷ್ಠರಾಗಿದ್ದರೂ ಸಿಂಹದಿಂದ ಚದುರಿಸಲ್ಪಟ್ಟ ವೃಷಭಗಳಂತೆ ಎಲ್ಲರೂ ಓಡಿದರು. ಹೀಗೆ ಓಡುತ್ತಿರುವ ಗಣಗಳನ್ನೆಲ್ಲಾ ನೋಡಿ ಷಣ್ಮುಖನು ನಿಶಿತವಾದ ಶಕ್ತ್ಯಾಯುಧವನ್ನು ಧರಿಸಿ ಶತ್ರುಗಳ ಆ ಗುಂಪಿಗೆ ಓಡಿ ಬಂದು ಹೃದಯವನ್ನೇ ಭೇದಿಸಿದನು.

೫೧. ಶಕ್ತ್ಯಾಯುಧದಿಂದ ಹೃದಯಭೇದನವನ್ನು ಹೊಂದಿದ ಹಸ್ತಿಯು ಯುದ್ಧಭೂಮಿಯಲ್ಲಿ ಸೇನೆಯ ಮಧ್ಯದಲ್ಲಿಯೇ ಹತನಾಗಿ ನೆಲಕ್ಕೆ ಉರುಳಿದನು.

ತಮರಾತಿಗಣಂ ದೃಷ್ಟ್ವಾ ಭಗ್ನಂ ಕ್ರುದ್ಧಾ ಗಣೇಶ್ವರಾಃ ।
ಪುರತೋ ನಂದಿನಂ ಕೃತ್ವಾ ಜಿಘಾಂಸಂತಶ್ಚ ದಾನವಾನ್ ॥ ೫೨ ॥

ತೇ ವಧ್ಯಮಾನಾಃ ಪ್ರಮಥೈರ್ದೈತ್ಯಾಶ್ಚಾಪಿ ಪರಾಙ್ಮುಖಾಃ ।
ಭೂಯೋ ನಿವೃತ್ತಾ ಬಲಿನಃ ಕುರ್ವಂತಶ್ಚ ಪುರೋ ಗಣಾನ್ ॥ ೫೩ ॥

ತಾನ್ನಿವೃತ್ತಾನ್ ಸಮೀಕ್ಷ್ಯೈವ ಕ್ರೋಧದೀಪ್ತೇಕ್ಷಣಃ ಶ್ವಸನ್ ।
ನಂದಿಷೇಣೋ ವ್ಯಾಘ್ರಮುಖೋ ನಿವೃತ್ತಶ್ಚಾಪಿ ವೇಗವಾನ್ ॥ ೫೪ ॥

ತಸ್ಮಿನ್ನಿವೃತ್ತೇ ಗಣಪೇ ಪಟ್ಟಿಶಾಗ್ರಕರೇ ತದಾ ।
ಕಾಂತಸ್ವರೋ ನಿವವೃತೇ ಗದಾಮಾದಾಯ ನಾರದ ॥ ೫೫ ॥

ತಮಾಪತಂತಂ ಜ್ವಲನಪ್ರಕಾಶಂ
ಗಣಃ ಸಮೀಕ್ಷ್ಯೈವ ಮಹಾಸುರೇಂದ್ರಂ ।
ತಂ ಪಟ್ಟಿಶಂ ಭ್ರಾಮ್ಯ ಜಘಾನ ಮೂರ್ಧ್ನಿ
ಕಾಂತಸ್ವರಂ ವಿಸ್ವರಮುನ್ನದಂತಂ ॥ ೫೬ ॥

೫೨-೫೪. ಹಾಗೆ ಭಗ್ನರಾದ ಶತ್ರುಗಳನ್ನು ನೋಡಿ ಗಣಾಧಿಪರೆಲ್ಲರೂ ನಂದಿಯನ್ನು ಮುಂದೆ ಮಾಡಿಕೊಂಡು ದಾನವರೆಲ್ಲರನ್ನೂ ಕೋಪದಿಂದ ಪ್ರಹರಿಸಿದರು. ಹಾಗೆ ಪ್ರಮಥಗಣಗಳಿಂದ ಪ್ರಹರಿಸಲ್ಪಟ್ಟ ದೈತ್ಯರೆಲ್ಲರೂ ಪರಾಙ್ಮುಖರಾಗಿ ಚದುರಿದರು. ಪುನಃ ಗಣಗಳನ್ನೇ ಪುರಸ್ಕರಿಸಿ ಪರಾಙ್ಮುರಾಗುತ್ತ ಬಂದರು. ಹಾಗೆ ಓಡುತ್ತಿರುವ ಆ ದಾನವರನ್ನುನೋಡಿ ಕೋಪದಿಂದ ವ್ಯಾಘ್ರಮುಖನಾದ ನಂದಿಷೇಣನು ನಿಟ್ಟುಸುರುಬಿಡುತ್ತಾ ಆ ದಾನವ ಸೈನ್ಯದಮೇಲೆಯೇ ಪುನಃ ಹಿಂತಿರುಗಿದನು.

೫೫-೫೬. ಗಣಪತಿಯಾದ ನಂದಿಷೇಣನು ಪಟ್ಟಿಶಾಯುಧಧಾರಿಯಾಗಿ ಪುನಃ ಯುದ್ಧಕ್ಕಾಗಿ ಹಿಂದೆ ತಿರುಗಿದುದನ್ನು ನೋಡಿ ಕಾಂತಸ್ವರನೆಂಬ ದಾನವನು ಗದಾಧಾರಿಯಾಗಿ ಹಿಂತಿರುಗಿದನು. ಹಾಗೆ ಅಗ್ನಿಯಂತೆ ತೀಕ್ಷ್ಣನಾಗಿ ಬರುತ್ತಿರುವ ಆ ದಾನವನನ್ನು ನೋಡಿ ಪಟ್ಟಿಶಾಯುಧವನ್ನು ತಿರುಗಿಸಿ ನಂದಿಷೇಣನು ತಲೆಯಮೇಲೆ ಹೊಡೆಯಲು ಅವನು ವಿಕೃತಸ್ವರದಿಂದ ಅರಚುತ್ತಾ ಬಿದ್ದನು.

ತಸ್ಮಿನ್ ಹತೇ ಭ್ರಾತರಿ ಮಾತುಲೇಯೇ
ಪಾಶಂ ಸಮಾವಿಧ್ಯ ತುರಂಗಕಧ್ವಜಃ ।
ಬಬಂಧ ವೀರಂ ಸಹಪಟ್ಟಿಶೇನ
ಗಣೇಶ್ವರಂ ಚಾಪ್ಯಥ ನಂದಿಷೇಣಂ ॥ ೫೭ ॥

ನಂದಿಷೇಣಂ ತಥಾ ಬದ್ಧಂ ಸಮೀಕ್ಷ್ಯ ಬಲಿನಾಂ ವರಃ ।
ವಿಶಾಖಃ ಕುಪಿತೋಽಭ್ಯೇತ್ಯ ಶಕ್ತಿಪಾಣಿರುಪಸ್ಥಿತಃ ॥ ೫೮ ॥

ತಂ ದೃಷ್ಟ್ವಾ ಬಲಿನಾಂ ಶ್ರೇಷ್ಠಃ ಪಾಶಪಾಣಿರಯಃಶಿರಾಃ ।
ಸಂಯೋಧಯಾಮಾಸ ಬಲಿಂ ವಿಶಾಖಂ ಕುಕ್ಕುಟಧ್ವಜಂ ॥ ೫೯ ॥

ವಿಶಾಖಂ ಸನಿರುದ್ಧಂ ವೈ ರಣೇ ದೃಷ್ಟ್ವಾ ಗಣೋತ್ತಮಾಃ ।
ಶಾಖಶ್ಚ ನೈಗಮೇಯಶ್ಚ ತೂರ್ಣಂ ದುದ್ರುವತುರಿಪು ॥ ೬೦ ॥

ಏಕತೋ ನೈಗಮೇಯೇನ ಭಗ್ನಃ ಶಕ್ತ್ಯಾ ತ್ವಯಃಶಿರಾಃ ।
ಏಕತಶ್ಚೈವ ಶಾಖೇನ ವಿಶಾಖಪ್ರಿಯಕಾಮ್ಯಯಾ ॥ ೬೧ ॥

---

೫೭. ಮಾವನ ಮಗನಾಗಿಯೂ ಜ್ಯೇಷ್ಠನಾಗಿಯೂ ಇದ್ದ ಆ ಕಾಂತಸ್ವರನು ಸತ್ತಮೇಲೆ ತುರಂಗಕಧ್ವಜನೆಂಬ ದಾನವನು ಪಾಶಾಯುಧವನ್ನು ಸಜ್ಜುಗೊಳಿಸಿ ಶೂರನಾದ ನಂದಿಷೇಣನನ್ನು ಅವನ ಆಯುಧದೊಡನೆ ಬಂಧಿಸಿದನು.

೫೮-೬೧. ನಂದಿಷೇಣನು ಬಂಧಿತನಾದುದನ್ನು ನೋಡಿ ಷಣ್ಮುಖನು ಕೋಪದಿಂದ ಶಕ್ತಿಪಾಣಿಯಾಗಿ ಬಂದು ನಿಂತನು. ಹಾಗೆ ಬಂದ ಷಣ್ಮುಖನನ್ನು ನೋಡಿ ಅಯಃಶಿರಾ ಎಂಬ ದಾನವನು ಪಾಶಪಾಣಿಯಾಗಿ ಕುಕ್ಕುಟಧ್ವಜಧಾರಿಯಾದ ಷಣ್ಮುಖನೊಡನೆ ಯುದ್ಧಮಾಡಿ ಅವನನ್ನು ಪಾಶದಿಂದ ಬಂಧಿಸಿದನು. ಆ ರೀತಿ ಷಣ್ಮುಖನು ಯುದ್ಧದಲ್ಲಿ ಬದ್ಧನಾದುದನ್ನು ನೋಡಿ ಗಣಾಧಿಪತಿಗಳಲ್ಲೊಬ್ಬನಾದ ಶಾಖನೂ ಮತ್ತೊಬ್ಬನಾದ ನೈಗಮೇಯನೂ ಸಹ ತ್ವರಿತರಾಗಿ ದಾನವನನ್ನು ಎದುರಿಸಲು ಹೊರಟರು. ಒಂದು ಕಡೆಯಲ್ಲಿ ನೈಗಮೇಯನಿಂದಲೂ ಮತ್ತೊಂದು ಕಡೆಯಲ್ಲಿ ಶಾಖನಿಂದಲೂ ಸುತ್ತುವರಿಯಲ್ಪಟ್ಟ ಅಯಃಶಿರನು ಯುದ್ಧದಲ್ಲಿ ಭಗ್ನನಾದನು.

ಸ ತ್ರಿಭಿಃ ಶಂಕರಸುತೈಃ ಪೀಡ್ಯಮಾನೋ ಜಹೌ ರಣಂ ।
ಸ ಪ್ರಾಹ್ಯ ಶಂಬರಂ ತೂರ್ಣಂ ರಕ್ಷ ಮಾಂ ಹಿ ಗಣೇಶ್ವರಾತ್ ॥ ೬೨ ॥

ಪಾಶಂ ಶಕ್ತ್ಯಾ ಸಮಾಹತ್ಯ ಚತುರ್ಭಿಃ ಶಂಕರಾತ್ಮಜೈಃ ।
ಜಗಾಮ ನಿಲಯಂ ತೂರ್ಣಮಾಕಾಶಾದಿವ ಭೂತಲಂ ॥ ೬೩ ॥

ಪಾಶೆ ನಿಕೃತ್ತೆ ಯಾತೆ ಚ ಶಂಬರಃ ಕಾತರೇಕ್ಷಣಃ ।
ದಿಶೋಽಥ ಭೇಜೆ ದೇವರ್ಷೆ ಕುಮಾರಃ ಸೈನ್ಯಮರ್ದಯತ್ ॥ ೬೪ ॥

ಸಾ ವಧ್ಯಮಾನಾ ಪೃಥನಾ ಮಹರ್ಷೆ
ಸದಾನವಾ ಶರ್ವಸುತೈರ್ಗಣೈಶ್ಚ ।
ವಿವರ್ಣರೂಪಾ ಭಯವಿಹ್ವಲಾಙ್ಗೀ
ಜಗಾಮ ಶುಕ್ರಂ ಶರಣಂ ಭಯಾರ್ತಾ ॥ ೬೫ ॥

ಇತಿ ಶ್ರೀ ವಾಮನಪುರಾಣೇ ದೈತ್ಯಪರಾಜಯೋ ನಾಮಾಷ್ಟ
ಷಷ್ಟಿತಮೋಽಧ್ಯಾಯಃ

೬೨-೬೫. ಆ ಅಯಃಶಿರನು ನೈಗಮೇಯ, ಶಾಖ, ವಿಶಾಖರೆಂಬ ಶಂಕರಪುತ್ರರಿಂದ ಪೀಡಿತನಾಗಿ ಯುದ್ಧವನ್ನೇ ಬಿಟ್ಟು ಓಡಿದನು. ಹಾಗೆ ಓಡಿದ ಅವನು ಶಂಬರನಲ್ಲಿ ಹೋಗಿ ಈ ಗಣಾಧಿಪತಿಗಳಿಂದ ನನ್ನನ್ನು ರಕ್ಷಿಸೆಂದು ಅವನನ್ನು ಬೇಡಿದನು. ಇತ್ತ ಶಂಕರಪುತ್ರರು ಶಕ್ತ್ಯಾಯುಧದಿಂದ ಪಾಶವನ್ನು ನಾಶಪಡಿಸಿ ಆಕಾಶದಿಂದ ಭೂಮಿಗೆ ಬರುವಂತೆ ಅನಾಯಾಸದಿಂದ ತಮ್ಮ ಸ್ಥಾನವನ್ನು ಹೊಂದಿದರು. ಪಾಶವು ಕತ್ತರಿಸಲ್ಪಟ್ಟು ಹೋದಮೇಲೆ ಶಂಬರನೂ ಭಯದಿಂದ ಕಣ್ಣುಬಿಡುತ್ತಾ ದೂರವಾಗಿ ಓಡಿದನು. ಆಗ ಕುಮಾರಸ್ವಾಮಿಯು ಬಂದು ದಾನವಸೈನ್ಯವನ್ನೆಲ್ಲಾ ನಾಶಮಾಡತೊಡಗಿದನು. ಹಾಗೆ ಗಣಾಧಿಪನಿಂದಲೂ ಶಂಕರನ ಪುತ್ರರಿಂದಲೂ ಪೀಡಿಸಲ್ಪಟ್ಟ ಆ ದಾನವಸೈನ್ಯವು ಭಯದಿಂದ ವಿವರ್ಣವಾಗಿ ಶುಕ್ರಾಚಾರ್ಯನಲ್ಲಿ ಶರಣಾಗತವಾಯಿತು.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ದೈತ್ಯಪರಾಜಯವೆಂಬ ಅರವತ್ತೆಂಟನೆಯ
ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಅಂಧಕನು ಸೇನಾಸಮೇತನಾಗಿ ಮಂದರಪರ್ವತಕ್ಕೆ ಬಂದು ಸೇರಿದಾಗ ಅಲ್ಲಿದ್ದ ಗಣಗಳ ಮತ್ತು ದಾನವಸೈನ್ಯದ ಕೋಲಾಹಲವನ್ನು ಕೇಳಿ ಗಣಪತಿಯು ಶಂಕರನಲ್ಲಿ ಬಂದು ಯುದ್ಧಕ್ಕಾಗಿ ಹೊರಡಬೇಕೆಂದು ಪ್ರಾರ್ಥಿಸಲು ಶಂಕರನೂ ಸಹ ದೇವಿಯ ಅನುಮತಿಯಿಂದ ಹೊರಡಲು ಸಿದ್ಧನಾದನೆಂದೂ ಅನಂತರ ದೇವಿಯಿಂದ ಅಲಂಕರಿಸಲ್ಪಟ್ಟು ಸನ್ಮಾನಿತನಾದ ಶಂಕರನು ದೇವಿಯ ಸಖಿಗಳಿಗೆ ಮನೆಯಲ್ಲಿ ಜಾಗರೂಕತೆಯಿಂದಿರಬೇಕೆಂದು ಹೇಳಿ ಶಿವೆಯೊಡನೆ ಸಮರಸನ್ನಾಹದಿಂದ ಹೊರಟು ಶುಭಶಕುನಗಳಿಂದ ತಮಗೆ ಜಯವು ಸಿದ್ಧವೆಂದು ನಂದಿಯನ್ನೂ ಪ್ರೋತ್ಸಾಹಪಡಿಸಿದನೆಂದೂ ಆಗ ಆಕಾಶದಲ್ಲಿ ಪ್ರೇಕ್ಷಕರಾಗಿ ಇಂದ್ರ ವಿಷ್ಣ್ವಾದಿಗಳೂ ಬಂದು ನಿಲ್ಲಲು ಗಣಗಳಿಗೂ ದಾನವರಿಗೂ ಮಹಾಯುದ್ಧವು ಪ್ರಾರಂಭವಾಯಿತೆಂದೂ ಆ ಮಹಾಯುದ್ಧದಲ್ಲಿ ಗಣಾಧಿಪತಿಗಳಿಂದ ಪರಾಜಿತವಾದ ದಾನವಸೈನ್ಯವು ಶುಕ್ರಾಚಾರ್ಯರಲ್ಲಿ ಶರಣಾಗತವಾಯಿತೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀ ವಾ ಮ ನ ಪು ರಾ ಣಂ

ನವಷಷ್ಟಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ತತಃ ಕುಜಂಭೇ ಚ ಯಮಾಲಯಂ ಗತೆ
ಹತೇ ಚ ಸೈನ್ಯೆ ಪ್ರಮಥೈರ್ಮಹಾರಥಃ ।
ತ್ರಸ್ತೋಽಂಧಕೋಽಭ್ಯೇತ್ಯ ಗುರುಂ ಚ ಶುಕ್ರ
ಮಿದಂ ವಚಃ ಸಾನುನಯಸ್ತದಾಬ್ರವೀತ್ ॥ ೧ ॥

ಭಗವಂಸ್ತ್ವಾಂ ಸಮಾಶ್ರಿತ್ಯ ವಯಂ ಬಾಧಾಮ ದೇವತಾಃ ।
ಅಥಾನ್ಯಾನಪಿ ವಿಪ್ರರ್ಷೆ ಗಂಧರ್ವಸುರಕಿನ್ನರಾನ್ ॥ ೨ ॥

ತದಿಮಾಂ ಪಶ್ಯ ಭಗವನ್ ಮಮ ಗುಪ್ತಾಂ ವರೂಥಿನೀಂ ।
ಅನಾಥೇವ ಯಥಾ ನಾರೀ ಪ್ರಮಥೈರಪಿ ಕಾಲ್ಯತೆ ॥ ೩ ॥

ಅರವತ್ತೊಂಭತ್ತನೆಯ ಅಧ್ಯಾಯವು

೧-೩. ಪುಲಸ್ತ್ಯರು ಹೇಳುತ್ತಾರೆ.—ಕುಜಂಭನು ನಾಶಹೊಂದಿ ಸೈನ್ಯವೂ ಪ್ರಮಥಗಳಿಂದ ನಷ್ಟಹೊಂದಿದನಂತರ ಮಹಾರಥನಾದ ಅಂಧಕನು ಭಯಪಟ್ಟು ಗುರುವಾದ ಶುಕ್ರಾಚಾರ್ಯರಲ್ಲಿ ಹೋಗಿ ವಿನಯದಿಂದ ಈ ರೀತಿ ಪ್ರಾರ್ಥಿಸಿದನು. ಪೂಜ್ಯರೇ ನಿಮ್ಮ ಆಶ್ರಯದಿಂದಲೇ ಬಲಶಾಲಿಗಳಾದ ನಾವು ದೇವತೆಗಳನ್ನೂ ಗಂಧರ್ವ, ಕಿನ್ನರ ಕಿಂಪುರುಷಾದಿಗಳನ್ನೂ ಬಾಧಿಸುತ್ತಿದ್ದೇವೆ. ಅಂತಹ ನಮ್ಮ ಸೈನ್ಯವು ಅನಾಥೆಯಾದ ಯುವತಿಯಂತೆ ಪ್ರಮಥಗಳಿಂದ ಓಡಿಸಲ್ಪಟ್ಟು ಎಲ್ಲಿಯೋ ಗುಪ್ತವಾಗಿ ಅವಿತುಕೊಂಡಿದೆ ನೋಡಿರಿ.

ಕುಜಂಭಾದ್ಯಾಶ್ಚ ನಿಹತಾಃ ಭ್ರಾತರೋ ಮಮ ಭಾರ್ಗವ ।
ಅಸಂಖ್ಯಾತಾಸ್ತು ಪ್ರಮಥಾಃ ಕುರುಕ್ಷೇತ್ರಫಲಂ ಯಥಾ ॥ ೪ ॥

ತಸ್ಮಾತ್ಕುರುಷ್ವ ಚ ತಥಾ ಯಥಾ ನ ಜ್ಞಾಯತೇ ಪರೈಃ ।
ಜಯೇಮ ಚ ಪರಾನ್ಯುದ್ಧೇ ತಥಾ ತ್ವಂ ಕರ್ತುಮರ್ಹಸಿ ॥ ೫ ॥

ಪುಲಸ್ತ್ಯ ಉವಾಚ

ಶುಕ್ರೋಂಧಕವಚಃ ಶ್ರುತ್ವಾ ಸಾಂತ್ವಯನ್ ಪರಮೋ ಗುರುಃ ।
ವಚನಂ ಪ್ರಾಹ ದೇವರ್ಷೇ ಹರ್ಷಯನ್ ದಾನವೇಶ್ವರಂ ॥ ೬ ॥

ತದ್ಧಿ ತೀರ್ಥಂ ಗಮಿಷ್ಯಾಮಿ ಕರಿಷ್ಯಾಮಿ ತವ ಪ್ರಿಯಂ ।
ಇತ್ಯೇವಮುಕ್ತ್ವಾ ವಚನಂ ವಿದ್ಯಾಂ ಸಂಜೀವಿನೀಂ ಕವಿಃ ।
ಆವರ್ತಯಾಮಾಸ ತದಾ ವಿಧಾನೇನ ಶುಚಿವ್ರತಃ ॥ ೭ ॥

ತಸ್ಯಾಮಾವರ್ತಮಾನಾಯಾಂ ವಿದ್ಯಾಯಾಮಾಸುರೇಶ್ವರಾಃ ।
ಯೇ ಹತಾಃ ಪ್ರಮಥೈರ್ಯುದ್ಧೇ ತೇ ಚ ಸರ್ವೇ ಸಮುತ್ಥಿತಾಃ ॥ ೮ ॥

೪-೫. ಗುರುವೇ ನನ್ನ ಭ್ರಾತೃಗಳಾದ ಕುಜಂಭನೇ ಮೊದಲಾದವರೆಲ್ಲಾ ಯುದ್ಧದಲ್ಲಿ ಕೊಲ್ಲಲ್ಪಟ್ಟರು. ಪ್ರಮಥಗಣಗಳು ಮಾತ್ರ ಕುರುಕ್ಷೇತ್ರದ ಫಲದಂತೆ ಈಗಲೂ ಅಸಂಖ್ಯಾತವಾಗಿ ಶಾಶ್ವತವಾಗಿಯೇ ಇವೆ. ಆದುದರಿಂದ ಇತರರಿಗೆ ಯಾರಿಗೂ ತಿಳಿಯದಿರುವ ರೀತಿಯಲ್ಲಿ ನಾವು ಶತ್ರುಗಳನ್ನು ಜಯಿಸಲು ಗೂಢವಾದ ಉಪಾಯವನ್ನು ತಾವು ಆಲೋಚಿಸಿ ನಮ್ಮನ್ನು ಜಯಶೀಲರನ್ನಾಗಿ ವ ... ಕು

೬-೮. ಅಂಧಕನ ಮಾತುಗಳನ್ನೆಲ್ಲಾ ಕೇಳಿ ಶುಕ್ರಾಚಾರ್ಯನು ಪರಮಗುರುವಾದುದರಿಂದ ಅವನನ್ನು ಸಮಾಧಾನಪಡಿಸಿ ದಾನವರಾಜನಾದ ಅವನಿಗೆ ಹರ್ಷವುಂಟಾಗುವಂತೆ ನಾನು ಅಂತಹ ತೀರ್ಥಕ್ಕೆ ಹೋಗಿ ನಿನ್ನ ಪ್ರಿಯವನ್ನು ಬಯಸಿ ಕಾರ್ಯವನ್ನು ಸಾಧಿಸುತ್ತೇನೆಂದು ಹೇಳಿ ತನಗೆ ತಿಳಿದಿದ್ದ ಸಂಜೀವಿನೀ ವಿದ್ಯೆಯನ್ನು ಶುಚಿಯಾಗಿದ್ದು ಯಥಾವಿಧಿಯಾಗಿ ಆವರ್ತಿಮಾಡಿದನು. ಆ ವಿದ್ಯೆಯ ಆವರ್ತಿಯಿಂದ ಪ್ರಮಥರಿಂದ ಹತರಾಗಿದ್ದ ದೈತ್ಯಶ್ರೇಷ್ಠರೆಲ್ಲರೂ ಬದುಕಿಕೊಂಡು ಪುನಃ ಮೇಲಕ್ಕೆ ಬಂದರು.

ಕುಜಂಭಾದಿಷು ದೈತ್ಯೇಷು ಭೂಯ ಏವೋತ್ಥಿತೇಷ್ವಥ ।
ಯೋದ್ಧುಂ ಸಮಾಗತೇಷ್ವೇವ ನಂದೀ ಶಂಕರಮಬ್ರವೀತ್ ॥ ೯ ॥

ಯೇ ಹತಾಃ ಪ್ರಮಥೈರ್ದೈತ್ಯಾ ಯಥಾಶಕ್ತ್ಯಾ ರಣಾಜಿರೇ ।
ತೇ ಸಮುಜ್ಜೀವಿತಾ ಭೂಯೋ ಭಾರ್ಗವೇಣಾಥ ವಿದ್ಯಯಾ ॥ ೧೦ ॥

ತದಿದಂ ಯನ್ಮಹಾದೇವ ಮಹತ್ಕರ್ಮ ಕೃತಂ ರಣೇ ।
ನ ಜಾತಂ ಸ್ವಲ್ಪಮೇವೇಶ ಶುಕ್ರವಿದ್ಯಾಬಲಾಶ್ರಯಾತ್ ॥ ೧೧ ॥

ಇತ್ಯೇವಮುಕ್ತೇ ವಚನೇ ನಂದಿನಂ ಕುಲನಂದಿನಂ ।
ಪ್ರತ್ಯುವಾಚ ಪ್ರಭುಃ ಪ್ರೀತ್ಯಾ ಸ್ವಾರ್ಥಸಾಧನಮುತ್ತಮಂ ॥ ೧೨ ॥

ಗಚ್ಛ ಶುಕ್ರಂ ಗಣಪತೇ ಮಮಾಂತಿಕಮುಪಾನಯ ।
ಅಹಂ ತಂ ಸಂಯಮಿಷ್ಯಾಮಿ ಯಥಾಯೋಗಂ ಸಮೇತ್ಯಹಿ ॥ ೧೩ ॥

ಇತ್ಯೇವಮುಕ್ತೋ ರುದ್ರೇಣ ನಂದೀ ಗಣಪತಿಸ್ತತಃ ।
ಸಮಾಜಗಾಮ ದೈತ್ಯಾನಾಂ ಚಮೂಂ ಶುಕ್ರಜಿಘೃಕ್ಷಯಾ ॥ ೧೪ ॥

೯-೧೨. ಕುಜಂಭಾದಿ ದೈತ್ಯರೆಲ್ಲರೂ ಪುನಃ ಎದ್ದು ಯುದ್ಧಮಾಡಲು ಬಂದು ಸೇರಲಾಗಿ ಇದನ್ನು ತಿಳಿದ ನಂದಿಯು ಶಂಕರನನ್ನು ಕುರಿತು ಪ್ರಭುವೇ ಯುದ್ಧದಲ್ಲಿ ಪ್ರಮಥರಿಂದ ಶಕ್ತ್ಯನುಸಾರ ಯಾವ ಯಾವ ದೈತ್ಯರು ಕೊಲ್ಲಲ್ಪಟ್ಟಿದ್ದರೋ ಅವರೆಲ್ಲರನ್ನೂ ಭಾರ್ಗವನು ತನ್ನ ವಿದ್ಯೆಯಿಂದ ಬದುಕಿಸಿರುವನು. ಆದುದರಿಂದ ನಾವು ಯುದ್ಧದಲ್ಲಿ ಮಾಡಿದ ಮಹಾಕಾರ್ಯವೆಲ್ಲಾ ಈ ಶುಕ್ರನ ವಿದ್ಯಾಬಲದಿಂದ ಅಲ್ಪವೂ ಆಗಲಿಲ್ಲವೆಂದು ವಿಜ್ಞಾಪಿಸಲು ಪಿತೃಭಕ್ತನಾದ ಆ ನಂದಿಯನ್ನು ಕುರಿತು ಶಂಕರನು ಸ್ವಾರ್ಥಸಾಧಕವಾದ ಈ ಮಾತನ್ನಾಡಿದನು.

೧೩-೧೪. ಎಲೈ ಗಣಪತಿಯೇ ಆ ಶುಕ್ರನನ್ನು ನನ್ನ ಸಮೀಪಕ್ಕೆ ಬರಮಾಡಿಕೊಂಡು ಬಾ, ಹೋಗು. ಅವನನ್ನು ನಾನು ಯೋಗಶಕ್ತಿಯಿಂದ ಬಂಧನ ಮಾಡುತ್ತೇನೆ. ಈ ರೀತಿ ರುದ್ರನಿಂದ ಹೇಳಲ್ಪಟ್ಟ ನಂದಿಯು ಶುಕ್ರನನ್ನು ಹಿಡಿದು ತರಲು ದೈತ್ಯಸೈನ್ಯಕ್ಕೆ ಪ್ರವೇಶಿಸಿದನು.

ತಂ ದದರ್ಶಾಸುರಶ್ರೇಷ್ಠೋ ಬಲವಾಂಸ್ತು ಭಯಂಕರಃ ।
ಸ ರುರೋಧ ತದಾ ಮಾರ್ಗಂ ಸಿಂಹಸ್ಯೇವ ಪಶುರ್ವನೇ ॥ ೧೫ ॥

ಸಮುಪೇತ್ಯಾಹನನ್ನಂದೀ ಚಕ್ರೇಣಾಶನಿತೇಜಸಾ ।
ಸಂಪಪಾತಾಥ ನಿಸ್ಸಂಜ್ಞೋ ಯಯೌ ನಂದೀ ತತಸ್ತ್ವರನ್ ॥ ೧೬ ॥

ತತಃ ಕುಜಂಭೋ ಜಂಭಶ್ಚ ಬಲೋ ವೃತ್ರಶ್ಚ ರಾಕ್ಷಸಾಃ ।
ಸ್ವಯಂ ಚ ರಣಶಾರ್ದೂಲಾ ನಂದಿನಂ ಸಮುಪಾದ್ರವನ್ ॥ ೧೭ ॥

ತಥಾನ್ಯೇ ದಾನವಶ್ರೇಷ್ಠಾ ಮಯಹ್ರಾದಪುರೋಗಮಾಃ ।
ನಾನಾಪ್ರಹರಣಾ ಯುದ್ಧೇ ಗಣನಾಥಮಭಿದ್ರವನ್ ॥ ೧೮ ॥

ತತೋ ಗಣಾನಾಮಧಿಪಂ ಕುಟ್ಯಮಾನಂ ಮಹಾಬಲೈಃ ।
ಸಮಪಶ್ಯಂತ ದೇವಾಸ್ತಂ ಪಿತಾಮಹಪುರೋಗಮಾಃ ॥ ೧೯ ॥

ತಂ ದೃಷ್ಟ್ವಾ ಭಗವಾನ್ ಪ್ರಾಹ ದೇವಾನ್ ಶಕ್ರಪುರೋಗಮಾನ್ ।
ಸಾಹಾಯ್ಯಂ ಕ್ರಿಯತಾಂ ಶಂಭೋರೇತದಂತರಮುತ್ತಮಂ ॥ ೨೦ ॥

೧೫-೧೬. ಆಗ ಬಲಶಾಲಿಯಾದ ಭಯಂಕರನೆಂಬ ಅಸುರನು ಸಿಂಹದ ಮಾರ್ಗವನ್ನು ವನದಲ್ಲಿ ಪಶುವು ನೋಡುವಂತೆ ನೋಡಿ ಆ ನಂದಿಯನ್ನು ತಡೆದನು. ಆಗ ನಂದಿಯು ವಜ್ರಸದೃಶವಾದ ತನ್ನ ಚಕ್ರಾಯುಧದಿಂದ ಅವನನ್ನು ಪ್ರಹರಿಸಲು ಅವನು ಪ್ರಜ್ಞೆ ತಪ್ಪಿ ಕೆಳಗೆ ಬಿದ್ದನು. ನಂದಿಯು ತ್ವರೆಯಿಂದ ಸೈನ್ಯದಲ್ಲಿ ನುಗ್ಗಿದನು.

೧೭-೨೦, ಅನಂತರ ಕುಜಂಭ, ಜಂಭ, ಬಲ, ವೃತ್ರ ಎಂಬ ರಾಕ್ಷಸಾಗ್ರೇಸರರು ತಮ್ಮ ಅನುಯಾಯಿಗಳೊಡನೆ ತಾವೂ ನಂದಿಯನ್ನು ಎದುರಿಸಲು ನಿಂತರು. ಹಾಗೆಯೇ ಮಯ, ಹ್ರಾದ ಮೊದಲಾದ ಇತರ ದಾನವಾಗ್ರೇಸರರೂ ಸಹ ನಾನಾ ಯುಧಧಾರಿಗಳಾಗಿ ಗಣಾಧಿಪನಾದ ನಂದಿಯನ್ನು ಅಟ್ಟಿದರು. ಆಗ ಮಹಾಬಲರಾದ ದಾನವರಿಂದ ಪ್ರಹರಿಸಲ್ಪಡುತ್ತಿರುವ ಆ ನಂದಿಯನ್ನು ಬ್ರಹ್ಮನೇ ಮೊದಲಾದ ಎಲ್ಲಾ ದೇವತೆಗಳೂ ನೋಡಿದರು. ಆಗ ಬ್ರಹ್ಮನು ಇಂದ್ರಾದಿ ದೇವತೆಗಳನ್ನು ಕುರಿತು ಈ ಯುದ್ಧದಲ್ಲಿ ನೀವು ಶಂಕರನಿಗೆ ಸಹಾಯಮಾಡಿರಿ. ನೀವು ಮಾಡುವ ಸಹಾಯಕ್ಕೆ ಇದು ಉತ್ತಮವಾದ ಸಮಯವೆಂದನು.

ಪಿತಾಮಹೋಕ್ತಂ ವಚನಂ ಶ್ರುತ್ವಾ ದೇವಾಃ ಸವಾಸವಾಃ ।
ಸಮಾಪೇತಂತ ವೇಗೇನ ಶಿವಸೈನ್ಯಮಥಾಂಬರಾತ್ ॥ ೨೧ ॥

ತೇಷಾಮಾಪತತಾಂ ವೇಗಃ ಪ್ರಮಥಾನಾಂ ಬಲೆ ಬಭೌ ।
ಆಪಗಾನಾಂ ಮಹಾವೇಗಃ ಪತಂತೀನಾಂ ಮಹಾರ್ಣವೆ ॥ ೨೨ ॥

ತತೋ ಹಲಹಲಾಶಬ್ದಃ ಸಮಜಾಯತ ಚೋಭಯೋಃ ।
ಬಲಯೋರ್ಘೋರಸಂಕಾಶೋ ಸುರಪ್ರಮಥಯೋರಥ ॥ ೨೩ ॥

ತದಂತರಮುಪಾಗಮ್ಯ ನಂದೀ ಸಂಗೃಹ್ಯ ವೇಗವಾನ್ ।
ತಂ ಭಾರ್ಗವಂ ಸಮಾಕ್ರಾಮತ್ಸಿಹ್ಮೋ ವನಮೃಗಂ ಯಥಾ ॥ ೨೪ ॥

ತಮಾದಾಯ ಹರಾಭ್ಯಾಶಮಾಗಮದ್ಗಣನಾಯಕಃ ।
ನಿಪಾತ್ಯ ರಕ್ಷಿಣಃ ಸರ್ವಾನ್ ಅಥಶುಕ್ರಂ ನ್ಯವೇದಯತ್ ॥ ೨೫ ॥

ತಮಾನೀತಂ ಕವಿಂ ಶರ್ವಃ ಪ್ರಾಕ್ಷಿಪದ್ವದನೆ ಪ್ರಭುಃ ।
ಭಾರ್ಗವಂ ವ್ಯಾಪೃತಂ ತುಂಡೆ ದದೃಶುಸ್ತೆ ಸುರಾರಯಃ ॥ ೨೬ ॥

೨೧-೨೪. ಬ್ರಹ್ಮನ ಈ ಮಾತನ್ನು ಕೇಳಿ ಇಂದ್ರನೇ ಮೊದಲಾದ ದೇವತೆಗಳು ಆಕಾಶಮಾರ್ಗದಿಂದ ಶಿವಸೈನ್ಯಕ್ಕೆ ಧುಮಿಕಿದರು. ಪ್ರಮಥಗಣಸೈನ್ಯದಲ್ಲಿ ಬಂದು ಬೀಳುತ್ತಿರುವ ಆ ದೇವಸೈನ್ಯದ ವೇಗವು ಮಹಾಸಮುದ್ರದಲ್ಲಿ ಬೀಳುತ್ತಿರುವ ನದಿಗಳ ವೇಗವನ್ನು ಅನುಕರಿಸುತ್ತಿತ್ತು. ಅನಂತರ ಎರಡು ಸೈನ್ಯದ ಘರ್ಷಣೆಯಿಂದ ಹಲಹಲಾಕಾರವಾದ ಮಹಾಶಬ್ದವು ಉಂಟಾಯಿತು. ಅದೇ ಸಮಯವೆಂದು ತಿಳಿದು ನಂದಿಯು ವೇಗದಿಂದ ನುಗ್ಗಿ ಆ ಭಾರ್ಗವನನ್ನು ಸಿಂಹವು ಕಾಡುಮೃಗವನ್ನು ಆಕ್ರಮಿಸುವಂತೆ ಆಕ್ರಮಿಸಿದನು.

೨೫-೨೬. ಆ ಶುಕ್ರನನ್ನು ತೆಗೆದುಕೊಂಡು ನಂದಿಯು ಹರನ ಸಮೀಪಕ್ಕೆ ಬಂದು ಅಲ್ಲಿದ್ದ ರಕ್ಷಕರನ್ನೆಲ್ಲಾ ಧಿಕ್ಕರಿಸಿ ಆವನನ್ನು ಹರನಿಗೆ ಒಪ್ಪಿಸಿ ಅರಿಕೆಮಾಡಿದನು. ಹಾಗೆ ತಂದ ಶುಕ್ರನನ್ನು ಪ್ರಭುವಾದ ಶಂಕರನು ಬಾಯಿನಲ್ಲಿ ಹಾಕಿಕೊಂಡನು. ಆಗ ಭಾರ್ಗವನು ಆ ರುದ್ರನ ಬಾಯಿನಲ್ಲಿ ವ್ಯಾಕುಲನಾಗಿ ಬಿದ್ದುದನ್ನು ದಾನವರೆಲ್ಲರೂ

ಸ ಶಂಭುನಾ ಕವಿಶ್ರೇಷ್ಠೋ ಗ್ರಸ್ತೋ ಜಠರಮಾಸ್ಥಿತಃ ।
ತುಷ್ಟಾವ ಭಗವಂತಂ ತಂ ವಾಗ್ಭಿರ್ಭಾರ್ಗವ ಆದರಾತ್ ॥ ೨೭ ॥

*ವರದಾಯ ನಮಸ್ತುಭ್ಯಂ ಹರಾಯ ಗುಣಶಾಲಿನೆ ।
ಶಂಕರಾಯ ಮಹೇಶಾಯ ವಿಶ್ವೇಶಾಯ ನಮೋನಮಃ ॥ ೨೮ ॥

ಜೀವನಾಯ ನಮಸ್ತುಭ್ಯಂ ಲೋಕನಾಥ ವೃಷಾಕಪೆ ।
ಮದನಾಗ್ನೆ ಕಾಲಶತ್ರೋ ವಾಮದೇವಾಯ ತೇ ನಮಃ ॥ ೨೯ ॥

ಸವಿತ್ರೆ ವಿಶ್ವರೂಪಾಯ ವಾಮನಾಯ ಸದಾಗತೆ ।
ಮಹಾದೇವಾಯ ಶರ್ವಾಯ ಈಶ್ವರಾಯ ನಮೋನಮಃ ॥ ೩೦ ॥

ಗದ್ಯ—ತ್ರಿನಯನ, ಹರ, ಭವ, ಶಂಕರ, ಉಮಾಪತೆ, ಜೀಮೂತಕೇತೊ, ಗುಹಾಶ್ಮಶಾನನಿರತ, ಭೂತಿವಿಲೇಪನ, ಶೂಲಪಾಣೆ, ಪಶುಪತೆ, ಗೋಪತೆ, ತತ್ಪುರುಷ, ಸತ್ತಮ, ನಮೋನಮಸ್ತೆ.

ನೋಡಿದರು. ಅನಂತರ ಶಂಭುವಿನಿಂದ ನುಂಗಲ್ಪಟ್ಟ ಶುಕ್ರನು ಅವನ ಜಠರವನ್ನೇ ಸೇರಿದನು. ಆಗ ಭಾರ್ಗವನು ಶಂಭುವಿನ ಜಠರದಲ್ಲಿಯೇ ಇದ್ದುಕೊಂಡು ಅವನನ್ನು ಭಕ್ತಿಯಿಂದ ಸ್ತೋತ್ರಮಾಡಿದನು.

೨೮-೩೦. ವರಪ್ರದನಾಗಿಯೂ ಹರನಾಗಿಯೂ ಸಕಲಗುಣಶಾಲಿಯಾಗಿಯೂ ಶಂಕರನಾಗಿಯೂ ಮಹೇಶನಾಗಿಯೂ ವಿಶ್ವಪತಿಯಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು. ಎಲೈ ಲೋಕನಾಥನೇ, ವೃಷಾಕಪಿಯೇ, ಮನ್ಮಥನಿಗೆ ಅಗ್ನಿಯಾದವನೇ, ಯಮನಿಗೂ ಶತ್ರುವಾದವನೇ, ವಾಮದೇವನೇ, ಜಗತ್ತಿಗೆ ಜೀವನರೂಪನಾದ ನಿನಗೆ ಅನಂತನಮಸ್ಕಾರಗಳು. ಜಗದುತ್ಪತ್ತಿಗೆ ಕಾರಣನಾಗಿಯೂ ಮಹಾದೇವನಾಗಿಯೂ ಸರ್ವಸ್ವರೂಪನಾಗಿಯೂ ಈಶ್ವರನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು. ಎಲೈ ತ್ರಿಲೋಚನನೇ, ಹರನೇ, ಭವನೇ, ಶಂಕರನೇ, ಪಾರ್ವತೀಪತಿಯೇ, ಜೀಮೂತಕೇತುವೇ, ಗುಹೆಗಳಲ್ಲಿಯೂ ಶ್ಮಶಾನದಲ್ಲಿಯೂ ವಾಸಿಸಲು ಪ್ರೀತಿಯುಳ್ಳವನೇ, ವಿಭೂತಿಲೇಪನನೇ, ಶೂಲಧಾರಿಯೇ, ಸರ್ವರಕ್ಷಕನೇ, ವಾಕ್ಪತಿಯೇ, ಪರಮಪುರುಷನೇ, ಸದ್ವಸ್ತುಸ್ವರೂಪನೇ ನಿನಗೆ ಅನಂತನಮಸ್ಕಾರಗಳು.

---

* ಇಲ್ಲಿ ಸ್ತುತಿಪರವಾದ ಶಬ್ದಗಳೆಲ್ಲವೂ ಅನ್ವಯವಶಕ್ತಿಯಿಂದ ಗುಣವರ್ಣನಪರವಾಗುತ್ತವೆ.

ಇತ್ಥಂ ಸ್ತುತಃ ಕವಿವರೇಣ ಹರೋಽಥ ಭಕ್ತ್ಯಾ
ಪ್ರೀತೋಽವರಂ ವರಯ ಭಾರ್ಗವ ಇತ್ಯುವಾಚ ।
ತಂ ಪ್ರಾಹ ದೇಹಿ ಭಗವಂಸ್ತು ವರಂ ಮಮಾದ್ಯ
ಯದ್ವೈತವೈವ ಜಠರಾನ್ಮಮ ನಿರ್ಗಮೋಽಸ್ತು ॥ ೩೧ ॥

ತತೋ ಹರೋಽಕ್ಷಿಣೀ ತದಾ ನಿರುಧ್ಯ
ಪ್ರಾಹ ದ್ವಿಜೇಂದ್ರಂ ಕಿಲ ನಿರ್ಗಮಸ್ವ ।
ಇತ್ಯುಕ್ತಮಾತ್ರೋ ವಿಭುನಾ ಚಚಾರ
ದೇವೋದರೇ ಭಾರ್ಗವಪುಂಗವಸ್ತು ॥ ೩೨ ॥

ಪರಿಕ್ರಾಮನ್ದದರ್ಶಾಸೌ ಶಂಕರೋದರಕೋಟರೇ ।
ಭುವನಾರ್ಣವಪಾತಾಲಾನ್ ಸ್ಥಿತಾನ್ ಸ್ಥಾವರಜಂಗಮೈಃ ॥ ೩೩ ॥

ಆದಿತ್ಯವಸುರುದ್ರಾಂಶ್ಚ ವಿಶ್ವೇದೇವಗಣಾಂಸ್ತಥಾ
ಯಕ್ಷಾನ್ ಕಿಂಪುರುಷಾಂಶ್ಚೈವ ಗಂಧರ್ವಾಪ್ಸರಸಾಂ ಗಣಾನ್ ॥ ೩೪ ॥

೩೧-೩೩. ಹೀಗೆ ಕವಿಯಾದ ಶುಕ್ರನಿಂದ ಭಕ್ತಿಪೂರ್ವಕವಾಗಿ ಸ್ತೋತ್ರ ಮಾಡಲ್ಪಟ್ಟ ಹರನು ಸಂತುಷ್ಟನಾಗಿ ಭಾರ್ಗವ ನಿನಗೆ ಬೇಕಾದ ವರವನ್ನು ಕೇಳಿಕೋ ಎಂದನು. ಆಗ ಭಾರ್ಗವನು ಹರನನ್ನು ಕುರಿತು ಪೂಜ್ಯನೇ ಈ ನಿನ್ನ ಜಠರದಿಂದ ನನ್ನನ್ನು ಹೊರಗೆಡಹು ಎಂದು ವರವನ್ನು ಬೇಡಿದನು. ಆಗ ಹರನು ತನ್ನ ಕಣ್ಣುಗಳನ್ನು ತಡೆದು (ಯೋಗದೃಷ್ಟಿಯಿಂದ ಅಂತರ್ಮುಖಮಾಡಿ) ಬ್ರಾಹ್ಮಣೋತ್ತಮನೇ ಹೊರಗೆ ಬಾ ಎಂದನು. ಹೀಗೆ ಹರನು ಹೇಳಿದೊಡನೆಯೇ ಭಾರ್ಗವನು ಹರನ ಹೊಟ್ಟೆಯೊಳಗೇ ಸಂಚರಿಸಲಾರಂಭಿಸಿದನು. ಆ ಪ್ರಕಾರದಲ್ಲಿಯೇ ಸುತ್ತುತ್ತಿದ್ದ ಭಾರ್ಗವನು ಆ ಶಂಕರನ ಉದರದ ಪೊಟ್ಟರೆಯಲ್ಲಿಯೇ ಭೂಮಿ, ಸಮುದ್ರ, ಪಾತಾಲವೆಲ್ಲವನ್ನೂ ಸ್ಥಾವರಜಂಗಮ ಪ್ರಾಣಿಗಳೊಡನೆ ನೋಡಿದನು.

೩೪-೩೬. ಹಾಗೆಯೇ ದ್ವಾದಶಾದಿತ್ಯರನ್ನೂ ಅಷ್ಟವಸುಗಳನ್ನೂ ಏಕಾದಶ ರುದ್ರರನ್ನೂ ವಿಶ್ವೇದೇವತೆಗಳನ್ನೂ ಯಕ್ಷ, ಕಿಂಪುರುಷ, ಗಂಧರ್ವ, ಅಪ್ಸರೆ ಇತ್ಯಾದಿ ದೇವತಾ ವಿಶೇಷಗಳನ್ನೂ, ಋಷಿಗಳನ್ನೂ ಮನುಷ್ಯರನ್ನೂ, ಸಾಧ್ಯರನ್ನೂ ಪಶುಗಳು

ಮುನೀನ್ಮನುಜಸಾಧ್ಯಾಂಶ್ಚ ಪಶುಕೀಟಪಿಪೀಲಿಕಾಃ ।
ಸರೀಸೃಪಾನ್ ವೃಕ್ಷಗುಲ್ಮಫಲಮೂಲೌಷಧಾನಿ ಚ ॥ ೩೫ ॥

ಜಲಸ್ಥಾಂಶ್ಚ ಸ್ಥಲಸ್ಥಾಂಶ್ಚ ನಿಮೇಷಾನ್ನಿಮಿಷಾನಪಿ ।
ಅವ್ಯಕ್ತಾಂಶ್ಚೈವ ವ್ಯಕ್ತಾಂಶ್ಚ ದ್ವಿಪದೋಽಥ ಚತುಷ್ಪದಃ ॥ ೩೬ ॥

ಸ ದೃಷ್ಟ್ವಾ ಕೌತುಕಾವಿಷ್ಟಃ ಪರಿಬಭ್ರಾಮ ಭಾರ್ಗವಃ ।
ತತ್ರಾಸ್ಯತೋ ಭಾರ್ಗವಸ್ಯ ದಿವ್ಯಃ ಸಂವತ್ಸರೋ ಗತಃ ॥ ೩೭ ॥

ನಚೈವಾಂತಮಸೌ ಲೇಭೇ ತತಃ ಶ್ರಾನ್ತೋಽಭವತ್ಕವಿಃ ।
ಸಶ್ರಾಂತಂ ವೀಕ್ಷ್ಯ ಚಾತ್ಮಾನಂ ನಚ ಲೇಭೇಽಥ ನಿರ್ಗಮಂ ।
ಭಕ್ತಿನಮ್ರೋ ಮಹಾದೇವಂ ತತಸ್ತತ್ಸಮುಪಾಗಮತ್ ॥ ೩೮ ॥

ಶುಕ್ರ ಉವಾಚ

ವಿಶ್ವರೂಪ ಮಹಾರೂಪ ವಿಶ್ವರೂಪಾಕ್ಷ ರೂಪಧೃಕ್ ।
ಸಹಸ್ರಾಕ್ಷ ಮಹಾದೇವ ತ್ವಾಮಹಂ ಶರಣಂ ಗತಃ ॥ ೩೯ ॥

ಕೀಟಗಳು, ಇರುವೆಗಳು, ಸರ್ಪಗಳು ಇವೇ ಮೊದಲಾದ ಪ್ರಾಣಿಗಳನ್ನೂ ಮರ, ಪೊದರು, ಫಲಮೂಲಾದಿಗಳು ಇವುಗಳನ್ನೂ ಜಲಸ್ಥವಾಗಿಯೂ ಸ್ಥಲವಾಸಿಗಳಾಗಿಯೂ ಇರುವ ನಿಮೇಷ ರಹಿತವಾದ ಮತ್ತು ನಿಮೇಷ ಸಹಿತವಾದ ಪ್ರಾಣಿಗಳನ್ನೂ ಅವ್ಯಕ್ತವಾಗಿಯೂ ಪ್ರಕಾಶಮಾನವಾಗಿಯೂ ಇರುವ ವಸ್ತುಗಳನ್ನೂ ಎರಡು ಕಾಲಿನ ಮತ್ತು ನಾಲ್ಕು ಕಾಲಿನ ಪ್ರಾಣಿಗಳನ್ನೂ ಎಲ್ಲವನ್ನೂ ನೋಡಿ ಕುತೂಹಲದಿಂದ ಪುನಃಪುನಃ ಭಾರ್ಗವನು ಅಲ್ಲಿಯೇ ಅಲೆದಾಡಿದನು.

೩೭-೩೮. ಅಲ್ಲಿಯೇ ನೆಲಸಿದ್ದ ಆ ಭಾರ್ಗವನಿಗೆ ಒಂದು ದಿವ್ಯಸಂವತ್ಸರವೂ ಕಳೆಯಿತು. ಅಲ್ಲಿ ಎಲ್ಲವನ್ನೂ ನೋಡಿ ಮುಗಿಯದೆ ತಾನೇ ಆಯಾಸದಿಂದ ಬಳಲಿ ನಿಂತನು. ಹಾಗೆ ಬಳಲಿ ಹೊರಗೆ ಬರುವದಕ್ಕೂ ಮಾರ್ಗವನ್ನು ಹೊಂದಲಿಲ್ಲ. ಪುನಃ ಆ ಭಾರ್ಗವನು ಬ್ರಹ್ಮರೂಪಿಯಾದ ಮಹಾದೇವನನ್ನೆ ಶರಣು ಹೊಂದಿ ಸ್ತೋತ್ರಮಾಡತೊಡಗಿದನು.

೩೯-೪೦. ಎಲೈ ಜಗದ್ರೂಪಿಯೇ, ಮಹಾರೂಪವುಳ್ಳವನೇ ವಿಶ್ವರೂಪವೆಲ್ಲವೂ ಕಣ್ಣಿನಲ್ಲಿರುವ ದಿವ್ಯರೂಪಧಾರಿಯೇ. (ಇಲ್ಲಿ ಯಾವನ ನೇತ್ರಗಳ ಪ್ರಕಾಶದಿಂದ ಬಾಹ್ಯಜಗತ್ತು ಪ್ರಕಾಶಹೊಂದುತ್ತಿದೆಯೋ ಅದರ ಮುಚ್ಚುವಿಕೆಯಿಂದ ಜಗತ್ತು

ನಮೋಽಸ್ತು ತೇ ಶಂಕರ ಶರ್ವ ಶಂಭೋ
ಸಹಸ್ರನೇತ್ರಾಂಘ್ರಿಭುಜಂಗಭೂಷಣ ।
ದೃಷ್ಟ್ವೈವ ಸರ್ವಂ ಭುವನಂ ತವೋದರೆ
ಭ್ರಾಂತೋಽಭವಂ ತ್ವಾಂ ಶರಣಂ ಪ್ರಪನ್ನಃ ॥ ೪೦ ॥

ಇತ್ಯೇವಮುಕ್ತೇ ವಚನೆ ಮಹಾತ್ಮಾ
ಶಂಭುರ್ವಚಃ ಪ್ರಾಹ ತದಾ ವಿಹಸ್ಯ ।
ನಿರ್ಗಚ್ಛ ಪುತ್ರೋಽಸಿ ಮಮಾಧುನಾ ತ್ವಂ
ಶಿಶ್ನೇನ ಭೋ ಭಾರ್ಗವ ವಂಶಚಂದ್ರಃ ॥ ೪೧ ॥

ನಾಮ್ನಾತು ಶುಕ್ರೇತಿ ಚರಾಚರಾಸ್ತ್ವಾಂ
ಸ್ತೋಷ್ಯಂತಿ ನೈವಾತ್ರ ವಿಚಾರಣಾ ಸ್ಯಾತ್ ।
ಇತ್ಯೇವಮುಕ್ತ್ವಾ ಭಗವಾನ್ಮನೋಚ
ಶಿಶ್ನೇನ ಶುಕ್ರಃ ಸಚ ನಿರ್ಜಗಾಮ ॥ ೪೨ ॥

ವಿನಿರ್ಗತೋ ಭಾರ್ಗವವಂಶಚಂದ್ರಃ
ಶುಕ್ರತ್ವಮಾಸಾದ್ಯ ಮಹಾನುಭಾವಃ ।

ಅಪ್ರಕಾಶ ಹೊಂದುತ್ತದೆಯೋ ಅಂತಹ ಮೂರ್ತಿಯುಳ್ಳವನೆಂಬ ಅಧ್ಯಾತ್ಮ ದೃಷ್ಟಿಯು ತೋರಿಬರುತ್ತದೆ) ಸಹಸ್ರಾಕ್ಷನೇ ಮಹಾದೇವನೇ ನಾನು ನಿನ್ನನ್ನೇ ಶರಣಾಗತನಾಗಿದ್ದೇನೆ. ಎಲೈ ಶಂಕರನೇ, ಶರ್ವನೇ ಶಂಭುವೇ ಸಹಸ್ರನೇತ್ರನೇ ಸಹಸ್ರ ಚರಣನೇ ಸರ್ಪಭೂಷಣನೇ ನಿನ್ನ ಈ ಉದರದಲ್ಲಿ ಎಲ್ಲಾ ಪ್ರಪಂಚವನ್ನೂ ನೋಡಿ ಭ್ರಾಂತನಾಗಿರುವೆನು. ನಿನ್ನಲ್ಲೇ ಶರಣಾಗತನಾಗಿರುವೆನು.

೪೧-೪೩. ಈ ಪ್ರಕಾರ ಶುಕ್ರನು ಸ್ತೋತ್ರಮಾಡಿದನಂತರ ಮಹಾತ್ಮನಾದ ಶಂಕರನು ನಗುತ್ತಾ ಎಲೈ ಭಾರ್ಗವನೇ ನೀನು ಈಗ ನನಗೆ ಪುತ್ರನಾಗಿರುವೆ. ನನ್ನ ಶಿಶ್ನದಿಂದ ಹೊರಗೆ ಬಾ. ಇನ್ನು ಮುಂದೆ ಶುಕ್ರನೆಂಬ ಹೆಸರಿನಿಂದ ಎಲ್ಲಾ ಪ್ರಪಂಚವು ನಿನ್ನನ್ನು ಕರೆಯುತ್ತದೆ. ಎಲ್ಲರೂ ನಿನ್ನನ್ನು ಹೊಗಳುತ್ತಾರೆ, ಇದರಲ್ಲಿ ಸಂದೇಹವಿಲ್ಲ ಎಂದು ಹೇಳಿ ಅವನನ್ನು ಶಿಶ್ನದಿಂದ ಹೊರಗೆ ಬಿಟ್ಟನು. ಶುಕ್ರನೂ ಹೊರಗೆ ಬಂದನು.

ಪ್ರಣಮ್ಯ ಶಂಭುಂ ಸ ಜಗಾಮ ತೂರ್ಣಂ
ಮಹಾಸುರಾಣಾಂ ಬಲಮುತ್ತಮೌಜಾಃ ॥ ೪೩ ॥

ಭಾರ್ಗವೇ ಪುನರಾಯಾತೇ ದಾನವಾ ಮುದಿತಾಭವನ್ ।
ಪುನರ್ಯುದ್ಧಾಯ ವಿದಧುರ್ಮತಿಂ ಸಹ ಗಣೇಶ್ವರೈಃ ॥ ೪೪ ॥

ಗಣೇಶ್ವರಾಸ್ತಾನಸುರಾನ್ ಸಹಾಮರಗಣೈರಥ ।
ಯುಯುಧುಃ ಸಂಕುಲಂ ಯುದ್ಧಂ ಸರ್ವಏವ ಜಯೇಪ್ಸವಃ ॥ ೪೫ ॥

ತತೋಽಸುರಗಣಾನಾಂ ಚ ಯುಧ್ಯತಾಂ ದ್ವಂದ್ವಯುದ್ಧವತ್ ।
ದ್ವಂದ್ವಯುದ್ಧಂ ಸಮಭವದ್ಘೋರರೂಪಂ ತಪೋಧನ ॥ ೪೬ ॥

ಅಂಧಕೋ ನಂದಿನಂ ಯುದ್ಧೇ ಶಂಕುಕರ್ಣಂ ತ್ವಯಃಶಿರಾಃ ।
ಕುಂಭಧ್ವಜಂ ಬಲಿರ್ಧೀಮಾನ್ನಂದಿಷೇಣಂ ವಿರೋಚನಃ ॥ ೪೭ ॥

ಅಶ್ವಗ್ರೀವೋ ವಿಶಾಖಂ ಚ ಶಾಖೋ ವೃತ್ರಮಯೋಧಯತ್ ।
ಬಾಣಂ ತಥಾ ನೈಗಮೇಯೋ ಬಲೋ ರಾಕ್ಷಸಪುಂಗವಃ ॥ ೪೮ ॥

ಹಾಗೆ ಬಂದ ಭಾರ್ಗವವಂಶಭೂಷಣನು ಶುಕ್ರನೆಂಬ ನಾಮಧೇಯದಿಂದ ಪ್ರಸಿದ್ಧಿ ಹೊಂದಿ ಶಂಭುವನ್ನೂ ವಂದಿಸಿ ತ್ವರೆಯಿಂದ ಅಸುರಸೈನ್ಯದಲ್ಲಿ ಹೋಗಿ ಸೇರಿದನು.

೪೪-೪೭. ಭಾರ್ಗವನು ಪುನಃ ಬಂದುಸೇರಿದುದರಿಂದ ದಾನವರೆಲ್ಲರೂ ಸಂತುಷ್ಟರಾಗಿ ಗಣಾಧಿಪತಿಗಳೊಡನೆ ಪುನಃ ಯುದ್ಧಮಾಡಲು ನಿಶ್ಚೈಸಿದರು. ಗಣಾಧಿಪತಿಗಳೂ ಸಹ ದೇವತೆಗಳೊಡನೆ ಸೇರಿ ಅಸುರರೊಡನೆ ವಿಜಯೇಚ್ಛೆಯಿಂದ ಬಲವಾದ ಯುದ್ಧವನ್ನೇ ಹೂಡಿದರು. ಆಗ ಅಸುರರಿಗೂ ಗಣಗಳಿಗೂ ದ್ವಂದ್ವಯುದ್ಧವೇ ಪ್ರಾರಂಭವಾಗಿ ಅದು ಕೊನೆಗೆ ಘೋರರೂಪವನ್ನು ತಾಳಿತು. ಅಂಧಕನು ನಂದಿಯೊಡನೆಯೂ ಅಯಃಶಿರನು ಶಂಕುಕರ್ಣನೊಡನೆಯೂ ಬಲಿಯು ಕುಂಭಧ್ವಜನೊಡನೆಯೂ ವಿರೋಚನನು ನಂದಿಷೇಣನೊಡನೆಯೂ

೪೮-೫೧. ಮತ್ತು ಅಶ್ವಗ್ರೀವನು ವಿಶಾಖನೊಡನೆಯೂ ವೃತ್ರನು ಶಾಖನೊಡನೆಯೂ ಬಾಣನು ನೈಗಮೇಯನೊಡನೆಯೂ ಬಲನು ಪರಾಕ್ರಮಿಯಾಗಿಯೂ

ವಿನಾಯಕಂ ಮಹಾವೀರ್ಯಂ ಪರಶ್ವಧಧರಂ ರಣೇ ।
ಸಂಕ್ರುದ್ಧಾ ರಾಕ್ಷಸಶ್ರೇಷ್ಠಾ ದಾನವಾಃ ಪ್ರಮುಥಾನಥ ॥ ೪೯ ॥

ಸಂಯೋಧಯಂತೋ ಬ್ರಹ್ಮರ್ಷೇ ದಾಯಾದಾನಾಂ ಶತಾನಿ ಷಟ್ ।॥ ೫೦ ॥

ಶತಕ್ರತುಂ ಸಮಾಧೀತಂ ವಜ್ರಪಾಣಿಮುಪಸ್ಥಿತಂ ।
ತಂ ಚಾಪಿ ದಾನವಶ್ರೇಷ್ಠಸ್ತುಹುಂಡಃ ಸಮಯೋಧಯತ್ ॥ ೫೧ ॥

ಹಸ್ತೀ ಚ ಕುಂಡಜಠರಂ ಹ್ರಾದೋ ವೀರಂ ಘಟೋದರಂ ।
ಏತೇ ಹಿ ಬಲಿನಾಂ ಶ್ರೇಷ್ಠಾ ದಾನವಾಃ ಪ್ರಮುಥಾನಥ
ಸಂಯೋಧಯಂತೋ ಬ್ರಹ್ಮರ್ಷೇ ದೈತೇಯಾನಾಂ ಶತಾನಿ ಷಟ್ ।॥ ೫೨ ॥

ಗಣೋತ್ಕಟಂ ಸಮಾಯಾಂತಂ ವಜ್ರಪಾಣಿಮುಪಸ್ಥಿತಂ ।
ವಾರಯಾಮಾಸ ಬಲವಾನ್ ಜಂಭೋ ನಾಮ ಮಹಾಸುರಃ ॥ ೫೩ ॥

ಶಂಭುರ್ನಾಮಾಸುರಪತಿಃ ಸ ಬ್ರಹ್ಮಾಣಮಯೋಧಯತ್ । ॥ ೫೪ ॥

ಮಾಯಾಮಯಃ ಕುಜಂಭಶ್ಚ ವಿಷ್ಣುಂ ದೈತ್ಯಾಧಿಪಸ್ತ್ವಯಾತ್
ವೈವಸ್ವತಂ ರಣೇ ಸೋಽಲ್ಕೋ ವರುಣಂ ತ್ರಿಶಿರಾಸ್ತಥಾ ॥ ೫೫ ॥

ಪರಶ್ವಧಧಾರಿಯಾಗಿಯೂ ಇರುವ ವಿನಾಯಕನೊಡನೆಯೂ ದ್ವಂದ್ವಯುದ್ಧದಲ್ಲಿ ಸೇರಿ ಎಲ್ಲಾ ದಾನವರೂ ಮಹಾಕೋಪದಿಂದ ಆರನೂರುಮಂದಿ ತಮ್ಮ ತಮ್ಮ ದಾಯಾದ ರೊಡನೆ ಯುದ್ಧಮಾಡಿದರು. ವಜ್ರಪಾಣಿಯಾಗಿ ಬಂದು ನಿಂತ ಇಂದ್ರನೊಡನೆ ದಾನವಾಗ್ರೇಸರನಾದ ತುಹುಂಡನು ಯುದ್ಧಮಾಡಿದನು.

೫೨-೫೪. ಹಸ್ತಿ ಎಂಬ ದಾನವನು ಕುಂಡಜಠರನೊಡನೆಯೂ ಹ್ರಾದನು ಶೂರನಾದ ಘಟೋದರನೊಡನೆಯೂ ವಜ್ರಪಾಣಿಯಾಗಿ ಬಂದುನಿಂತ ಗಣೋತ್ಕಟ ನೊಡನೆ ಜಂಭನೆಂಬ ಮಹಾದೈತ್ಯನೂ ಶಂಭುವೆಂಬ ದಾನವನು ಬ್ರಹ್ಮನೊಡನೆಯೂ ಮಾಯಾನಿಪುಣನಾದ ಕುಜಂಭನು ವಿಷ್ಣುವಿನೊಡನೆಯೂ ಬಲಿಷ್ಠರಾದ ಆರನೂರು ಮಂದಿ ದೈತ್ಯರು ದ್ವಂದ್ವಯುದ್ಧದಲ್ಲಿ ಭಾಗವಹಿಸಿದ್ದರು.

೫೫-೫೮. ಯಮನೊಡನೆ ಸೋಲ್ಕನೆಂಬ ದಾನವನೂ ವರುಣನೊಡನೆ ತ್ರಿಶಿರಸ್ಸೂ ವಾಯುವಿನೊಡನೆ ದ್ವಿಶಿರಸ್ಸೂ ಸಪರಿವಾರನಾದ ಸೋಮನೊಡನೆ ವಿರೂ

ದ್ವಿಮೂರ್ಧಾ ಪವನಂ ಸೋಮಂ ಸಹ ಮಿತ್ರಂ ವಿರೂಪಧೃಕ್ ।
ಏಕದೃಕ್ ಶರಣೋ ರೌದ್ರಃ ಕಾಲನೇಮಿರ್ಮಹಾಸುರಃ ॥ ೫೬ ॥

ಏಕಾದಶೈವ ರುದ್ರಾಂಸ್ತು ಯಚ್ಚೈಕೋಽಪಿ ರಣೋತ್ಕಟಃ ।
ಯೋಧಯಾಮಾಸ ತೇಜಸ್ವೀ ವಿದ್ಯುನ್ಮಾಲೀ ಮಹಾಸುರಃ ॥ ೫೭ ॥

ದ್ವಾವಶ್ವಿನೌ ಚ ನರಕೋ ಭಾಸ್ಕರಾನೇವ ಶಂಬರಃ ।
ಸಾಧ್ಯಾನ್ಮರುದ್ಗಣಾಂಶ್ಚೈವ ನಿವಾತಕವಚಾದಯಃ ॥ ೫೮ ॥

ಏವಂ ದ್ವಂದ್ವಸಹಸ್ರಾಣಿ ಪ್ರಮಥಾನಾಂ ಚ ದಾನವೈಃ ।
ಸಂಜಾತಾನಿ ಸುರಾಬ್ದಾನಾಂ ಷಟ್ ಶತಾನಿ ಮಹಾಮುನೇ ॥ ೫೯ ॥

ಯದಾ ಯೋದ್ಧುಂ ನ ಶಕ್ತಾಸ್ತೇ ದಾನವೈರಮರಾದಯಃ ।
ಮುಖಂ ವ್ಯಾದಾಯ ವೇಗೇನ ಗ್ರಸಂತಿ ಕ್ರಮಶೋಽಮರಾನ್ ॥ ೬೦ ॥

ತತೋಽಭವಚ್ಚ ತತ್ಸೈನ್ಯಂ ಶೂನ್ಯಂ ಪ್ರಮಥದೈವತೈಃ ।
ಆವೃತಂ ವರ್ಜಿತಂ ಸರ್ವೈಃ ಪ್ರಮಥೈರಮರೈರಪಿ ॥ ೬೧ ॥

ಪಾಕ್ಷನೂ ಒಂದೇ ಕಣ್ಣಿನಿಂದ ಭಯಂಕರವಾಗಿ ಸಂಚರಿಸುವ ಕಾಲನೇಮಿಯೂ ಯುದ್ಧೋನ್ಮತ್ತನಾದ ವಿದ್ಯುನ್ಮಾಲಿಯೂ ಸಹ ಏಕಾದಶರುದ್ರರೊಡನೆಯೂ ನರಕಾಸುರನು ಅಶ್ವಿನೀ ದೇವತೆಗಳಿಬ್ಬರೊಡನೆಯೂ ಶಂಬರನು ದ್ವಾದಶಾದಿತ್ಯರೊಡನೆಯೂ ನಿವಾತಕವಚರೇ ಮೊದಲಾದ ಅಸುರರು ಸಾಧ್ಯ ಮತ್ತು ಮರುದ್ಗಣಗಳೊಡನೆಯೂ ಈ ರೀತಿಯಾದ ಅನೇಕ ದ್ವಂದ್ವಯುದ್ಧಗಳು ಪ್ರಮಥರಿಗೂ ದಾನವರಿಗೂ ಜರುಗಿದವು.

೫೯-೬೨. ಈ ಮಹಾಯುದ್ಧವು ಆರುನೂರು ದೇವವರ್ಷಪರ್ಯಂತವೂ ನಡೆಯಿತು. ದೇವತೆಗಳೆಲ್ಲರೂ ಬಳಲಿ ಯುದ್ಧಮಾಡಲು ಅಶಕ್ತರಾಗಲು ದಾನವರೆಲ್ಲರೂ ಬಾಯನ್ನು ತೆರೆದು ದೇವತೆಗಳನ್ನು ನುಂಗಲಾರಂಭಿಸಿದರು. ಆಗ ಆ ಸೈನ್ಯವು ಪ್ರಮಥರಿಂದಲೂ ದೇವತೆಗಳಿಂದಲೂ ಪರಿಪೂರ್ಣವಾಗಿದ್ದು ಕ್ರಮವಾಗಿ ಶೂನ್ಯವಾಗುತ್ತ ಬಂದಿತು. ಆಗ ಪ್ರಮಥರೂ ದೇವತೆಗಳೂ ದಾನವರಿಂದ ನುಂಗಲ್ಪಟ್ಟು ಗಿರಿಪ್ರಸ್ಥ

ದೃಷ್ಟ್ವಾ ಶೂನ್ಯಂ ಗಿರಿಪ್ರಸ್ಥಂ ಗ್ರಸ್ತಾಂಶ್ಚ ಪ್ರಮಥಾಮರಾ೯ ।
ಕ್ರೋಧಾದುತ್ಪಾದಯಾಮಾಸ ರುದ್ರೋ ಜೃಂಭಾಂಬಿಕಾಂ ವಶೀ ॥ ೬೨ ॥

ತಯಾಕೃಷ್ಟಾ ದನುಸುತಾ ಅಲಸಾ ಮಂದಭಾಷಿಣಃ ।
ವದನಂ ವಿಕೃತಂ ಕೃತ್ವಾ ಮುಕ್ತಶಸ್ತ್ರಾ ವಿಜೃಂಭಿರೆ ॥ ೬೩ ॥

ವಿಜೃಂಭಮಾಣೇಷು ತದಾ ದಾನವೇಷು ಗಣೇಶ್ವರಾಃ ।
ಸುರಾಶ್ಚ ನಿರ್ಯಯು ಸ್ತೂರ್ಣಂ ದೈತ್ಯದೇಹೇಭ್ಯ ಆಕುಲಾಃ ॥ ೬೪ ॥

ಮೇಘಪ್ರಭೇಭ್ಯೋ ದೇಹೇಭ್ಯಃ ನಿರ್ಗಚ್ಛಂತೋಮರೇಶ್ವರಾಃ ।
ಶೋಭಂತೆ ಪದ್ಮಪತ್ರಾಕ್ಷಾ ಮೇಘೇಭ್ಯ ಇವ ವಿದ್ಯುತಃ ॥ ೬೫ ॥

ತತೋಽಮರಗಣಾಸ್ಸರ್ವೇ ನಿರ್ಗತಾಶ್ಚ ತಪೋಧನ ।
ಅಯುಧ್ಯಂತ ಮಹಾತ್ಮಾನೋ ಭೂಯ ಏವಾ ಭಿಕೋಪಿತಾಃ ॥ ೬೬ ॥

ತತೋ ದೇವವರೈಃ ಸರ್ವೇ ದಾನವಾಃ ಶರ್ವಪಾಲಿತೈಃ ।
ಪರಾಜೀಯಂತ ಸಂಗ್ರಾಮ್ಯೈಃ ಭೂಯೋಭೂಯಸ್ತ್ವಹರ್ನಿಶಂ ॥ ೬೭ ॥

ವೆಲ್ಲವೂ ಶೂನ್ಯವಾಗುತ್ತ ಬರಲು ರುದ್ರನು ಕೋಪದಿಂದ ಜೃಂಭಿಕಾ ಎಂಬ ಅಂಬಿಕೆಯನ್ನು ಯೋಗಶಕ್ತಿಯಿಂದ ನಿರ್ಮಿಸಿದನು.

೬೩-೬೬. ಆ ಜೃಂಭಿಕೆಯಿಂದ ಆಕೃಷ್ಟರಾದ ದಾನವರೆಲ್ಲರೂ ಆಲಸ್ಯದಿಂದ ಮೆಲ್ಲಮೆಲ್ಲಗೆ ಮಾತನಾಡುತ್ತಾ ಮುಖವಿಕಾರದಿಂದ ಶಸ್ತ್ರವನ್ನು ತ್ಯಜಿಸಿ ಆಕಳಿಸ ತೊಡಗಿದರು. ಅವರೆಲ್ಲರೂ ಮುಖವನ್ನು ತೆರೆದು ಆಕಳಿಸುವಾಗ ಗಣಾಧಿಪರೂ ದೇವತೆಗಳೂ ಸಹ ದೈತ್ಯದೇಹಗಳಿಂದ ವ್ಯಾಕುಲರಾಗಿ ಹೊರಗೆ ಜಾಗ್ರತೆಯಾಗಿ ಬಂದರು. ಮೇಘದಂತೆ ಕಪ್ಪಾಗಿರುವ ಆ ದೈತ್ಯದೇಹಗಳಿಂದ ಹೊರಗೆ ಬರುತ್ತಿರುವ ಆ ದೇವತೆಗಳು ಪ್ರಕಾಶವಾದ ಕಣ್ಣುಗಳಿಂದ ಕೂಡಿ ಮೇಘದಿಂದ ಹೊರಗೆ ಪ್ರಸರಿಸುವ ಮಿಂಚುಗಳಂತೆ ತೋರಿದರು. ಅನಂತರ ಹೊರಗೆ ಬಂದ ದೇವತೆಗಳೆಲ್ಲರೂ ಕೋಪದಿಂದ ಪುನಃ ಯುದ್ಧದಲ್ಲಿ ತೊಡಗಿದರು.

೬೭-೭೦. ಅನಂತರ ಶಂಕರನಿಂದ ರಕ್ಷಿಸಲ್ಪಟ್ಟ ಆ ದೇವತೆಗಳಿಂದ ದಾನವರೆಲ್ಲರೂ ಅಹೋರಾತ್ರವೂ ನಡೆದ ಅವಿಚ್ಛಿನ್ನಯುದ್ಧದಿಂದ ಪರಾಜಿತರಾದರು. ಆಗ

ತತ್ರ ತ್ರಿನೇತ್ರಃ ಸ್ವಾಂ ಸಂಧ್ಯಾಂ ಸಪ್ತಾಷ್ಟಶತಿಕೆ ಗತೆ ।
ಕಾಲೇಹ್ಯುಪಾಸತ ತದಾ ಸೋಽಷ್ಟಾದಶಭುಜೋಽವ್ಯಯಃ ॥ ೬೮ ॥

ಸಂಸ್ಪೃಶ್ಯಾಪಃ ಸರಸ್ವತ್ಯಾಃ ಸ್ನಾತ್ವಾ ಚ ವಿಧಿನಾ ಹರಃ ।
ಕೃತಾರ್ಥೋಽ ಭಕ್ತಿಮಾನ್ಮೂರ್ಧ್ನಿ ಪುಷ್ಪಾಂಜಲಿಮುಥಾಕ್ಷಿಪತ್ ॥ ೬೯ ॥

ತತೋಽ ನನಾಮ ಶಿರಸಾ ತತಶ್ಚಕ್ರೆ ಪ್ರದಕ್ಷಿಣಂ ।
ಹಿರಣ್ಯಗರ್ಭೇತ್ಯಾದಿತ್ಯಮುಪತಸ್ಥೆ ಜಜಾಪ ಹ ॥ ೭೦ ॥

ದೃಷ್ಟ್ವಾ ನಮೋ ನಮಸ್ತೇಽಸ್ತು ಸಮ್ಯಗುಚ್ಚಾರ್ಯ ಶೂಲಧೃಕ್ ।
ನನರ್ತ ಭಾವಗಂಭೀರೋ ದೋರ್ದಂಡಂ ಭ್ರಾಮಯನ್ ಬಲೀ ॥ ೭೧ ॥

ಪರಿನೃತ್ಯತಿ ದೇವೇಶೆ ಗಣಾಶ್ಚೈವ ಸುರಾಸ್ತಥಾ ।
ನೃತ್ಯಂತಿ ಭಾವಯುಕ್ತಾಸ್ತು ಹರಸ್ಯಾನುವಿಧಾಯಿನಃ ॥ ೭೨ ॥

ಸಂಧ್ಯಾಮುಪಾಸ್ಯ ದೇವೇಶಃ ಪರಿನೃತ್ಯ ಯಥೇಚ್ಛಯಾ ।
ಯುದ್ಧಾಯ ದಾನವೈಸ್ಸಾರ್ಧಂ ಮತಿಂ ಭೂಯಃ ಸಮಾದಧೆ ॥ ೭೩ ॥

ಹದಿನೈದು ನೂರು ವರ್ಷಗಳು ಕಳೆದನಂತರ ಶಂಕರನು ಹದಿನೆಂಟು ಭುಜಸಹಿತನಾಗಿ ತನ್ನ ಸಂಧ್ಯಾವಂದನ ಕಾರ್ಯವನ್ನು ನಡೆಸಿದನು. ಸರಸ್ವತೀ ನದಿಯಲ್ಲಿ ಯಥಾವಿಧಿಯಾಗಿ ಸ್ನಾನಮಾಡಿ ಆಚಮನವನ್ನೂ ಮಾಡಿ ಭಕ್ತಿಪೂರ್ವಕವಾಗಿ ಶಿರಸ್ಸಿನಲ್ಲಿ ಪುಷ್ಪಾಂಜಲಿಯನ್ನು ಇಟ್ಟು ಅದನ್ನು ಇಷ್ಟದೇವತೆಗೆ ಸಲ್ಲಿಸಿ ಕೃತಾರ್ಥನಾದನು. ಅನಂತರ ತಲೆಬಾಗಿ ನಮಸ್ಕರಿಸಿ ಪ್ರದಕ್ಷಿಣಮಾಡಿ "ಹಿರಣ್ಯಗರ್ಭ" ಎಂಬ ಮಂತ್ರದಿಂದ ಸೂರ್ಯೋಪಸ್ಥಾನಮಾಡಿದನು. ಅದೇ ಮಂತ್ರದಿಂದ ಜಪವನ್ನೂ ಮಾಡಿದನು.

೭೧-೭೩. ಸರ್ವಸಾಕ್ಷಿಯಾದ ನಿನಗೆ ನಮಸ್ಕಾರಗಳು ಎಂದು ಉಚ್ಚರಿಸಿ ಶೂಲಪಾಣಿಯು ಬಾಹುಗಳನ್ನು ತಿರುಗಿಸುತ್ತಾ ಗಂಭೀರಭಾವದಿಂದ ನರ್ತನಮಾಡತೊಡಗಿದನು. ದೇವಪತಿಯಾದ ಶಂಕರನು ನರ್ತನಮಾಡುವಾಗ ದೇವತೆಗಳೆಲ್ಲರೂ ಅವನನ್ನು ಅನುಕರಿಸಿ ಭಾವದಿಂದ ನರ್ತನಮಾಡಿದರು. ಈ ರೀತಿ ಸಂಧ್ಯೆಯನ್ನೂ ಮುಗಿಸಿ ಯಥೇಷ್ಟವಾಗಿ ನರ್ತನಮಾಡಿ ಪುನಃ ದಾನವರೊಡನೆ ಯುದ್ಧಮಾಡಲು

ತತಃ ಸುರಗಣೈಸ್ಸರ್ವೈಃ ತ್ರಿನೇತ್ರಭುಜಪಾಲಿತೈಃ ।
ದಾನವಾ ನಿರ್ಜಿತಾಸ್ಸರ್ವೇ ಬಲಿಭಿರ್ಭಯವರ್ಜಿತೈಃ ॥ ೭೪ ॥

ಸ್ವಬಲಂ ನಿರ್ಜಿತಂ ದೃಷ್ಟ್ವಾ ಮತ್ವಾಜೇಯಂ ಚ ಶಂಕರಂ ।
ಅಂಧಕಃ ಸುಂದಮಾಹೂಯ ವಚನಂ ಚೇದಮಬ್ರವೀತ್ ॥ ೭೫ ॥

ಸುಂದ ಭ್ರಾತಾಸಿ ಮೇ ವೀರ ವಿಶ್ವಾಸ್ಯಃ ಸರ್ವವಸ್ತುಷು ।
ತತ್ತ್ವಾಂ ವದಾಮಿ ಯದ್ವಾಕ್ಯಂ ತಚ್ಛ್ರುತ್ವಾ ಕುರು ಯತ್ ಕ್ಷಮಂ ॥

ದುರ್ಜಯೋಽಸೌ ರಣಪಟುಃ ಮಹಾತ್ಮಾ ಕಾರಣಾಂತರೈಃ ।
ಮಮಾಸ್ತಿ ಚಾಪಿ ಹೃದಯೆ ಪದ್ಮಾಕ್ಷೀ ಶೈಲನಂದಿನೀ ॥ ೭೭ ॥

ತದುತ್ತಿಷ್ಠಸ್ವ ಗಚ್ಛಾವೋ ಯತ್ರಾಸ್ತೇ ಚಾರುಹಾಸಿನೀ ।
ತತ್ರೈನಾಂ ಮೋಹಯಿಷ್ಯಾಮಿ ಶಂಭುರೂಪೇಣ ದಾನವ ॥ ೭೮ ॥

ಸಿದ್ಧನಾದನು. ಅನಂತರ ಶಂಕರನ ಭುಜಬಲದಿಂದ ರಕ್ಷಿಸಲ್ಪಟ್ಟ ದೇವತೆಗಳೆಲ್ಲರೂ ನಿರ್ಭಯರಾಗಿ ಯುದ್ಧಮಾಡಿ ದೈತ್ಯರನ್ನು ಪರಾಜಿತರನ್ನಾಗಿ ಮಾಡಿದರು.

೭೫-೭೬. ಆಗ ಅಂಧಕನು ತನ್ನ ಬಲವೆಲ್ಲವೂ ಪರಾಜಯ ಹೊಂದಿದುದನ್ನು ನೋಡಿ ಶಂಕರನನ್ನು ಹೇಗಾದರೂ ಜಯಿಸಬೇಕೆಂದು ತಿಳಿದು ಸುಂದನನ್ನು ಕುರಿತು ವೀರನಾದ ಸುಂದನೇ ನೀನು ನನಗೆ ತಮ್ಮನಾಗಿದ್ದೀಯೆ. ಎಲ್ಲಾ ವಿಷಯದಲ್ಲೂ ವಿಶ್ವಾಸಾರ್ಹನಾಗಿಯೂ ಇರುವೆ ಆದುದರಿಂದ ನಿನ್ನನ್ನು ಕುರಿತು ಒಂದು ಮಾತನ್ನು ಆಡುತ್ತೇನೆ. ಅದನ್ನು ಕೇಳಿ ಯಾವುದು ಉಚಿತವೋ ಅದನ್ನು ನಡಿಸು.

೭೭-೭೮. ಯುದ್ಧದಲ್ಲಿ ಸಮರ್ಥನಾಗಿಯೂ ಬೇರೆ ಕಾರಣಗಳಿಂದ ಮಹಾತ್ಮನಾಗಿಯೂ ಇರುವ ಈ ಶಂಕರನನ್ನು ಜಯಿಸಲು ಸಾಧ್ಯವಿಲ್ಲ. ಪದ್ಮಾಕ್ಷಿಯಾದ ಪಾರ್ವತಿಯಾದರೋ ನನ್ನ ಹೃದಯದಲ್ಲೇ ನೆಲಸಿರುವಳು. ಆದುದರಿಂದ ಆ ಪಾರ್ವತಿ ಇರುವ ಸ್ಥಲಕ್ಕೆ ಹೋಗಿ ಶಂಭುವಿನ ರೂಪವನ್ನು ಧರಿಸಿ ಮೋಹಗೊಳಿಸುತ್ತೇನೆ. ಏಳು ಹೋಗೋಣ.

ಭರ್ತಾರ ಭವಸ್ಯಾನುಚರೋ ಭವ ನಂದೀ ಗಣೇಶ್ವರಃ ।
ತತೋ ಗತ್ವಾಥ ಭುಕ್ತ್ವಾ ತಾಂ ಜೇಷ್ಯಾಮಿ ಪ್ರಮಥಾನ್ ಸುರಾನ್ ॥ ೭೯ ॥

ಇತ್ಯೇವಮುಕ್ತೇ ವಚನೇ ಬಾಢಂ ಸುಂದೋಽಭ್ಯಭಾಷತ ।
ಸಮಜಾಯತ ಶೈಲಾದಿರಂಧಕಃ ಶಂಕರೋಽಪ್ಯಭೂತ್ ॥ ೮೦ ॥

ನಂದಿರುದ್ರೌ ತತೋ ಭೂತ್ವಾ ಮಹಾಸುರಚಮೂಪತೀ ।
ಸಂಪ್ರಾಪ್ತೌ ಮಂದರಗಿರಿಂ ಪ್ರಹಾರೈಃ ಕೃತವಿಗ್ರಹೌ ॥ ೮೧ ॥

ನಂದಿನೋ ಹಸ್ತಮಾಲಂಬ್ಯ ಹ್ಯಂಧಕೋ ಹರಮಂದಿರಂ ।
ವಿವೇಶ ನಿರ್ವಿಶಂಕೇನ ಚಿತ್ತೇನಾಸುರಸತ್ತಮಃ ॥ ೮೨ ॥

ತತೋ ಗಿರಿಸುತಾ ದೂರಾದಾಯಾಂತಂ ವೀಕ್ಷ್ಯ ಚಾಂಧಕಂ ।
ಮಹೇಶ್ವರವಪುಶ್ಛನ್ನಂ ಪ್ರಹಾರೈಃ ಜರ್ಜರಚ್ಛವಿಂ ॥ ೮೩ ॥

ಸುಂದಂ ಶೈಲಾದಿರೂಪಸ್ಥಮವಷ್ಟಭ್ಯಾವಿಶತ್ತತಃ ।
ತಂ ದೃಷ್ಟ್ವಾ ಮಾಲಿನೀಂ ಪ್ರಾಹ ಯಶಸ್ಯಾಂ ವಿಜಯಾಂ ಜಯಾಂ ॥ ೮೪ ॥

೭೯-೮೨. ನೀನು ಶಂಕರನ ಭೃತ್ಯನಾದ ನಂದಿಯ ರೂಪವನ್ನು ಧರಿಸು. ಆ ರೂಪದಿಂದ ಹೋಗಿ ಆ ಪಾರ್ವತಿಯನ್ನು ಭೋಗಿಸಿ ಅವಳು ವಶಳಾದಮೇಲೆ ಈ ಪ್ರಮಥರನ್ನೂ ದೇವತೆಗಳನ್ನೂ ಜಯಿಸುತ್ತೇನೆ. ಹೀಗೆಂದು ಹೇಳಲು ಸುಂದನೂ ಆಗಬಹುದೆಂದು ಅಂಗೀಕರಿಸಿದನು. ಒಡನೆಯೇ ಆ ಸುಂದನು ನಂದಿಯಾದನು, ಅಂಧಕನೂ ಶಂಕರನಾದನು. ಈರೀತಿ ಅಸುರಸೇನಾನಾಯಕರಾದ ಅವರಿಬ್ಬರೂ ನಂದಿರುದ್ರರಾಗಿ ಶರೀರದಲ್ಲಿ ಪ್ರಹಾರ ಚಿಹ್ನೆಗಳನ್ನು ಧರಿಸಿ ಮಂದರಗಿರಿಗೆ ಹೋಗಿ ಸೇರಿದರು. ಹರರೂಪಿಯಾದ ಅಂಧಕನು ನಂದಿರೂಪದ ಸುಂದನ ಹಸ್ತವನ್ನು ಹಿಡಿದುಕೊಂಡು ನಿರ್ಭಯನಾಗಿ ಹರನ ಗೃಹಕ್ಕೆ ಹೊಕ್ಕನು.

೮೩-೮೪. ಅನಂತರ ಪಾರ್ವತಿಯು ಮಹೇಶ್ವರ ಶರೀರದಿಂದ ಕೂಡಿ ಪ್ರಹಾರಗಳಿಂದ ಗಾಯಹೊಂದಿರುವ ದೇಹವನ್ನು ಧರಿಸಿ ಬರುತ್ತಿರುವ ಅಂಧಕನನ್ನು ದೂರದಿಂದಲೇ ನೋಡಿ ನಂದಿಯರೂಪದಿಂದಿರುವ ಸುಂದನನ್ನೂ ನೋಡಿ ಸ್ವಲ್ಪ ಧೈರ್ಯವನ್ನು ತಾಳಿ ಎದುರಾಗಿ ಬಂದು ಮಾಲಿನೀ, ಯಶಸ್ಯಾ, ವಿಜಯಾ, ಜಯಾ ಎಂಬ ಸಖಿಗಳನ್ನು ಕರೆದು

ಜಯೇ ಪಶ್ಯಸ್ವ ದೇವಸ್ಯ ಮದರ್ಥೇ ವಿಗ್ರಹಂ ಕೃತಂ ।
ಶತ್ರುಭಿರ್ದಾರುಣತರೈಸ್ತದುತ್ತಿಷ್ಠಸ್ವ ಸತ್ವರಂ ॥ ೮೫ ॥

ಘೃತಮಾನಯ ಪೌರಾಣಂ ಚೀರಂ ಚ ಲವಣಂ ದಧಿ ।
ವ್ರಣಭಂಗಂ ಕರಿಷ್ಯಾಮಿ ಸ್ವಯಮೇವ ಪಿನಾಕಿನಃ ॥ ೮೬ ॥

ಕುರುಷ್ವ ಶೀಘ್ರಮಸ್ಯತ್ವಂ ಭರ್ತುರ್ವ್ರಣವಿನಾಶನಂ ।
ಇತ್ಯೇವಮುಕ್ತ್ವಾ ವಚನಂ ಸಮುತ್ಥಾಯ ವರಾಸನಾತ್ ॥ ೮೭ ॥

ಅಭ್ಯುದ್ಯಯೌ ತದಾ ಭಕ್ತ್ಯಾ ಮನ್ಯಮಾನಾ ವೃಷಧ್ವಜಂ ।
ಶರಪತ್ರೇಣ ತಚ್ಛಿತ್ವಾ ಭೂಯಶ್ಚಿಹ್ನಾನಿ ಯತ್ನತಃ ॥ ೮೮ ॥

ಅನ್ವಿಯೇಷ ತದಾಪಶ್ಯತ್ತಾವುಭೌ ಪಾರ್ಶ್ವತಸ್ಥಿತೌ ।
ಸಾ ಜ್ಞಾತ್ವಾ ದಾನವಂ ರೌದ್ರಂ ಮಾಯಾಚ್ಛಾದಿತವಿಗ್ರಹಂ ॥ ೮೯ ॥

ಅಪಯಾನಂ ತದಾ ಚಕ್ರೇ ಗಿರಿರಾಜಸುತಾ ಮುನೇ ।
ದೇವ್ಯಾಶ್ಚಿಂತಿತಮಾಜ್ಞಾಯ ಸುಂದಂ ತ್ಯಕ್ತ್ವಾಂಧಕೋಽಸುರಃ ॥ ೯೦ ॥

೮೫-೮೬. ಜಯೆ, ನೋಡು, ನನಗೋಸ್ಕರ ಕ್ರೂರಿಗಳಾದ ಶತ್ರುಗಳು ಪ್ರಭುವಿನ ದೇಹವನ್ನು ಹೇಗೆಮಾಡಿದ್ದಾರೆ, ಜಾಗ್ರತೆಯಾಗಿ ಏಳು, ಹಳೆಯದಾದ ತುಪ್ಪವನ್ನೂ ಚಿಂದಿಯ ಬಟ್ಟೆಯನ್ನೂ ಉಪ್ಪು, ಮೊಸರು ಇವುಗಳನ್ನೂ ಸಹ ತೆಗೆದುಕೊಂಡು ಬಾ, ಪಿನಾಕಿಯಾಗಿರುವ ಈ ಪ್ರಭುವಿನ ವ್ರಣಕ್ಕೆ ನಾನೇ ಮದ್ದುಮಾಡುತ್ತೇನೆ. ನೀನು ತ್ವರೆಯಿಂದ ವ್ರಣನಾಶಕವಾದ ಈ ಸಾಮಗ್ರಿಗಳನ್ನು ಸಿದ್ಧಗೊಳಿಸು.

೮೭-೯೦. ಹೀಗೆ ಸಖಿಗಳಿಗೆ ಆಜ್ಞಾಪಿಸಿ ಶಂಕರನೇ ಎಂದು ತಿಳಿದು ಭಕ್ತಿಯಿಂದ ಭದ್ರಾಸನದಿಂದೆದ್ದು ಅವನನ್ನು ಎದುರುಗೊಂಡಳು. ಸಮೀಪಕ್ಕೆ ಬಂದು ಬಾಣದ ಅಗ್ರಭಾಗದಿಂದ ವ್ರಣವನ್ನು ಶೋಧಿಸುತ್ತಾ ಚಿಹ್ನೆಗಳನ್ನೆಲ್ಲಾ ಪ್ರಯತ್ನದಿಂದ ಹುಡುಕುತ್ತಾ ಒಡನೆಯೇ ಪಕ್ಕದಲ್ಲಿ ನಿಂತ ಆ ಉಭಯದೈತ್ಯರನ್ನೂ ನೋಡಿದಳು. ಆಗ ಮಾಯೆಯಿಂದ ಶಂಭುಶರೀರವನ್ನು ಧರಿಸಿಬಂದ ರೌದ್ರರಾದ ದಾನವರೇ ಇವರು ಎಂದು ತಿಳಿದು ಪಾರ್ವತಿಯು ಭಯದಿಂದ ಓಡಿದಳು. ದೇವಿಗೆ ಈ ವಿಷಯವು ಗೊತ್ತಾಗಿದೆ ಎಂದು ತಿಳಿದು ಅಂಧಕನೂ ಸುಂದನನ್ನು ಬಿಟ್ಟು ಕಾಲರಾತ್ರಿರೂಪಳಾದ ಆ ಹರಪತ್ನಿಯನ್ನೇ ವೇಗದಿಂದ ಹಿಂಬಾಲಿಸಿ ಓಡಿದನು.

ಸಮಾದ್ರವತ ವೇಗೇನ ಹರಕಾಂತಾಂ ವಿಭಾವರೀಂ ।
ಸಮಾದ್ರವತ ದೈತೇಯೋ ಯೇನ ಮಾರ್ಗೇಣ ಸಾ ಗತಾ ॥೯೧॥

ಕುರ್ವತೀ ಚ ತಿರಸ್ಕಾರಂ ಪಾದಪ್ಲುತಿನಿರಾಕುಲಾ ।
ತಮಾಪತಂತಂ ದೃಷ್ಟ್ವೈವ ಗಿರಿಜಾ ಪ್ರಾದ್ರವದ್ಭಯಾತ್ ॥೯೨॥

ಗೃಹಂ ತ್ಯಕ್ತ್ವಾ ಹ್ಯುಪವನಂ ಸಖೀಭಿಃ ಸಹಿತಾ ತದಾ ।
ತತ್ರಾಪ್ಯನುಜಗಾಮಾಸೌ ಮದಾಂಧೋ ಮುನಿಪುಂಗವ ॥೯೩॥

ತಥಾಪಿ ನ ಶಶಾಪೈನಂ ತಪಸೋ ಗೋಪನಾಯ ಯತ್ ।
ತದ್ಭಯಾದಾವಿಶದ್ಗೌರೀ ಶ್ವೇತಾರ್ಕಕುಸುಮಂ ಶುಚಿ ॥೯೪॥

ವಿಜಯಾದ್ಯಾ ಮಹಾಗುಲ್ಮಂ ಸಂಪ್ರಯಾತಾ ಲಯಂ ಮುನೇ ।
ನಷ್ಟಾಯಾಮಥಪಾರ್ವತ್ಯಾಂ ಭೂಯೋ ಹೈರಣ್ಯಲೋಚನಿಃ ॥೯೫॥

ಸುಂದಂ ಹಸ್ತೇ ಸಮಾದಾಯ ಸ್ವಸೈನ್ಯಂ ಪುನರಾಗಮತ್ ।
ಅಂಧಕೇ ಪುನರಾಯಾತೇ ಸ್ವಬಲಂ ಮುನಿಸತ್ತಮ ॥೯೬॥

೯೧-೯೩. ಆಗ ಪಾರ್ವತಿಯು ಧಿಕ್ಕರಿಸುತ್ತಾ ಪ್ಲುತಗತಿಯಿಂದ ಜಾಗರೂಕಳಾಗಿ ಯಾವ ದಾರಿಯಿಂದ ಓಡಿದಳೋ ಅದೇ ದಾರಿಯನ್ನು ಹಿಡಿದು ದಾನವನೂ ಓಡಿಬಂದನು. ಹಾಗೆ ಅನುಸರಿಸಿ ಬರುತ್ತಿರುವ ಅವನನ್ನು ನೋಡಿ ಪಾರ್ವತಿಯು ಭಯದಿಂದ ಮನೆಯನ್ನು ಬಿಟ್ಟು ಸಖಿಗಳೊಡನೆ ಉದ್ಯಾನಕ್ಕೆ ಓಡಿದಳು. ಅಲ್ಲಿಯೂ ಈ ಮದಾಂಧನು ಅವಳನ್ನು ಅನುಸರಿಸಿಯೇ ಓಡಿದನು.

೯೪-೯೫. ಆದರೂ ತನ್ನ ತಪಸ್ಸಿನ ರಕ್ಷಣಾಬುದ್ಧಿಯಿಂದ ಆ ದೈತ್ಯನನ್ನು ಶಪಿಸಲಿಲ್ಲ. ಆಗ ಗೌರಿಯು ಭಯದಿಂದ ಅಲ್ಲಿದ್ದ ಶುಚಿಯಾದ ಬಿಳಿ ಎಕ್ಕದಹೂವುಗಳಲ್ಲಿ ಅಡಗಿ ಕುಳಿತಳು. ವಿಜಯೆಯೇ ಮೊದಲಾದ ಸಖಿಗಳೂ ಅಲ್ಲಿದ್ದ ಗೂಢವಾದ ಪೊದರಿನಲ್ಲಿ ಅಡಗಿ ಅದರ್ಶನಹೊಂದಿದರು. ಆಗ ಅಂಧಕನು ಪಾರ್ವತಿಯು ಅದೃಶ್ಯಳಾದುದನ್ನು ತಿಳಿದು ಸುಂದನ ಕೈಯ್ಯನ್ನು ಹಿಡಿದುಕೊಂಡು ಪುನಃ ದಾನವಸೈನ್ಯವನ್ನೇ ಬಂದು ಸೇರಿದನು.

೯೬-೯೮. ಅಂಧಕನು ಪುನಃ ಹಿಂದೆ ತಿರುಗಿ ತನ್ನ ಸೈನ್ಯವನ್ನು ಸೇರಿದನಂತರ ಪ್ರಮಥರಿಗೂ ಅಸುರರಿಗೂ ಮಹಾಘೋರವಾದ ಯುದ್ಧವೇ ಪ್ರಾರಂಭವಾಯಿತು.

ಪ್ರಾವರ್ತತ ಮಹಾಯುದ್ಧಂ ಪ್ರಮಥಾಸುರಯೋರಥ ।
ತತೋ ರಣೇ ಸುರಶ್ರೇಷ್ಠೋ ವಿಷ್ಣುಃ ಚಕ್ರಗದಾಧರಃ ॥ ೯೭ ॥

ನಿಜಘಾನಾಸುರಬಲಂ ಶಂಕರಪ್ರಿಯಕಾಮ್ಯಯಾ ।
ಶಾರ್ಙ್ಗಚಾಪಚ್ಯುತೈರ್ಬಾಣೈಃ ಸಂಸ್ಯೂತಾ ದಾನವರ್ಷಭಾಃ ॥ ೯೮ ॥

ಪಂಚ ಷಟ್ ಸಪ್ತ ಚಾಷ್ಟೌ ವಾ ಬ್ರಧ್ನಪಾದೈರ್ಘನಾ ಇವ ।
ಗದಯಾ ಕಾಂಶ್ಚಿದವಧೀಚ್ಚಕ್ರೇಣಾನ್ಯಾನ್ ಜನಾರ್ದನಃ ॥ ೯೯ ॥

ಖಡ್ಗೇನ ಚ ಚಕರ್ತಾನ್ಯಾನ್ ದೃಷ್ಟ್ಯಾನ್ಯಾನ್ ಭಸ್ಮಸಾತ್ಕೃತಾನ್ ।
ಹಲೇನಾಕೃಷ್ಯ ಚೈವಾನ್ಯಾನ್ ಮುಸಲೇನಾಪ್ಯಚೂರ್ಣಯತ್ ॥ ೧೦೦ ॥

ಗರುಡಃ ಪಕ್ಷಪಾತಾಭ್ಯಾಂ ತುಂಡೇನಾಪ್ಯುರಸಾಹನತ್ ।
ಸ ಚಾದಿಪುರುಷೋ ಧಾತಾ ಪುರಾಣಃ ಪ್ರಪಿತಾಮಹಃ ॥ ೧೦೧ ॥

ಆಗ ಸುರಾಗ್ರಗಣ್ಯನಾಗಿಯೂ ಚಕ್ರಗದಾಧರನಾಗಿಯೂ ಇರುವ ವಿಷ್ಣುವು ಶಂಕರನಿಗೆ ಪ್ರಿಯವನ್ನುಂಟುಮಾಡಲು ಯುದ್ಧದಲ್ಲಿ ಭಾಗವಹಿಸಿ ಅಸುರ ಸೈನ್ಯವನ್ನು ನಾಶಪಡಿಸ ಲಾರಂಭಿಸಿದನು. ಶಾರ್ಙ್ಗವೆಂಬ ಧನುಸ್ಸಿನಿಂದ ಹೊರಟ ಬಾಣಗಳಿಂದ ಐದು, ಆರು, ಏಳು, ಎಂಟು ಸಂಖ್ಯೆಯುಳ್ಳ ದಾನವರನ್ನು ಪೋಣಿಸಿದನು.

೯೯-೧೦೦. ಆ ರಾಕ್ಷಸರು ಸೂರ್ಯನ ಕಿರಣಗಳಿಂದ ಪೋಣಿಸಲ್ಪಟ್ಟ ಮೇಘ ಗಳಂತೆ ತೋರಿದರು. ಅನಂತರ ಕೆಲವು ದಾನವರನ್ನು ಗದೆಯಿಂದಲೂ ಕೆಲವರನ್ನು ಚಕ್ರಾಯುಧದಿಂದಲೂ ಮತ್ತೆ ಕೆಲವರನ್ನು ಕತ್ತಿಯಿಂದಲೂ ಇನ್ನೂ ಕೆಲವರನ್ನು ದೃಷ್ಟಿಪಾತಮಾತ್ರದಿಂದಲೂ ನಾಶಪಡಿಸಿದನು. ಹಾಗೂ ಕೆಲವರನ್ನು ಹಲಾಯುಧ ದಿಂದ ಸೆಳೆದೂ ಮತ್ತೆ ಕೆಲವರನ್ನು ಮುಸಲಾಯುಧದಿಂದ ಚೂರ್ಣಮಾಡಿಯೂ ಕೊಂದನು.

೧೦೧-೧೦೩. ಗರುಡನೂ ಸಹ ತನ್ನ ಎರಡು ರೆಕ್ಕೆಗಳ ಏಟಿನಿಂದಲೂ ಕೊಕ್ಕಿನ ಪ್ರಹಾರದಿಂದಲೂ ಎದೆಯಿಂದಲೂ ಸಿಕ್ಕಿದ ದಾನವರನ್ನೆಲ್ಲಾ ನಾಶಮಾಡಿದನು. ಆಗ ಆದಿಪುರುಷನಾಗಿ ಚತುರ್ಮುಖನಿಗೂ ತಂದೆಯಾದುದರಿಂದ ಪುರಾಣಪ್ರಪಿತಾ

ಭ್ರಾಮಯನ್ ವಿಪುಲಂ ಪದ್ಮಂ ಅಭ್ಯಷಿಂಚತ ವಾರಿಣಾ ।
ಸಂಸ್ಪೃಷ್ಟಾ ಬ್ರಹ್ಮತೋಯೇನ ಸರ್ವತೀರ್ಥಮಯೇನ ಹಿ ॥ ೧೦೨ ॥

ಗಣಾಮರಗಣಾಶ್ಚಾಸನ್ ನವಾ ಗಣಶತಾಧಿಕಾಃ ।
ದಾನವಾಸ್ತೇ ಚ ತೋಯೇನ ಸಂಸ್ಪೃಷ್ಟಾಶ್ಚಾಘಹಾರಿಣಾ ॥ ೧೦೩ ॥

ಸವಾಹನಾ ಲಯಂ ಜಗ್ಮುಃ ಕುಲಿಶೇನೇವ ಪರ್ವತಾಃ ।
ದೃಷ್ಟ್ವಾ ಬ್ರಹ್ಮಹರೀ ಯುದ್ಧೇ ಘಾತಯಂತೌ ಮಹಾಸುರಾನ್ ॥ ೧೦೪ ॥

ಶತಕ್ರತುಶ್ಚ ಸಂಪ್ರಾಪ್ತೋ ಯುದ್ಧಾಯ ಕೃತನಿಶ್ಚಯಃ ।
ತಮಾಪತಂತಂ ಸಂಪ್ರೇಕ್ಷ್ಯ ಬಲೋ ದಾನವಸತ್ತಮಃ ॥ ೧೦೫ ॥

ನತ್ವಾ ದೇವಂ ಗದಾಪಾಣಿಂ ವಿಮಾನಸ್ಥಂ ಚ ಪದ್ಮಜಂ ।
ಕ್ರಮೇಣಚಾದ್ರವದ್ಯೋದ್ಧುಂ ಮುಷ್ಟಿಮುದ್ಯಮ್ಯ ನಾರದ ।
ಬಲವಾನ್ ದಾನವಪತಿರಜೇಯೋ ದೇವದಾನವೈಃ ॥ ೧೦೬ ॥

ಮಹನಾಗಿಯೂ ಇರುವ ಮಹಾವಿಷ್ಣುವು ತನ್ನ ಹಸ್ತಕಮಲವನ್ನು ತಿರುಗಿಸುತ್ತಾ ಅದರ ತೀರ್ಥದಿಂದ ಎಲ್ಲರನ್ನೂ ಅಭಿಷೇಕಮಾಡಿದನು. ಸರ್ವತೀರ್ಥಮಯವಾದ ಆ ಬ್ರಹ್ಮತೀರ್ಥದಿಂದ ಸ್ಪರ್ಶಮಾತ್ರದಿಂದಲೇ ಪ್ರಮಥರೂ ಮತ್ತು ಅಮರರೂ ಹೊಸಬರಾಗಿ ಎದ್ದು ಮೊದಲಿಗಿಂತಲೂ ಶತಾಧಿಕರಾಗಿ ನಿಂತರು. ದಾನವರಾದರೋ ಪಾಪಿಗಳಾದುದರಿಂದ ಪಾಪನಾಶಕವಾದ ಆ ತೀರ್ಥದ ಸ್ಪರ್ಶದಿಂದ ವಜ್ರಾಯುಧದಿಂದ ಪರ್ವತಗಳು ನಾಶವಾಗುವಂತೆ ವಾಹನಸಹಿತರಾಗಿ ನಾಶಹೊಂದಿದರು.

೧೦೪-೧೦೬. ಬ್ರಹ್ಮ ಮತ್ತು ವಿಷ್ಣು ಇವರಿಬ್ಬರೂ ಯುದ್ಧದಲ್ಲಿ ಸೇರಿ ದೈತ್ಯರನ್ನು ನಾಶಪಡಿಸುತ್ತಿರುವುದನ್ನು ನೋಡಿ ಇಂದ್ರನೂ ಸಹ ಯುದ್ಧಮಾಡುವ ನಿಶ್ಚಯದಿಂದ ಬಂದು ಸೇರಿದನು. ಹಾಗೆ ಬರುತ್ತಿರುವ ಇಂದ್ರನನ್ನು ನೋಡಿ ಬಲನೆಂಬ ದಾನವನು ಗದಾಪಾಣಿಯಾಗಿ ವಿಮಾನದಲ್ಲಿದ್ದ ವಿಷ್ಣುವನ್ನೂ ಬ್ರಹ್ಮನನ್ನೂ ಕ್ರಮವಾಗಿ ನಮಸ್ಕರಿಸಿ ಮುಷ್ಟಿಯನ್ನು ಸಿದ್ಧಪಡಿಸಿಕೊಂಡು ಇಂದ್ರನನ್ನು ಎದುರಿಸಲು ಹೊರಟನು. ಆ ದಾನವೋತ್ತಮನು ಬಹಳ ಬಲಶಾಲಿಗಳಾದ ದೇವದಾನವರಿಂದಲೂ

ತಮಾಪತಂತಂ ತ್ರಿದಶೇಶ್ವರಸ್ತು
ದೋಷ್ಣಾಂ ಸಹಸ್ರೇಣ ಯಥಾಬಲೇನ ।
ವಜ್ರಂ ಪರಿಭ್ರಾಮ್ಯ ಬಲಸ್ಯ ಮೂರ್ಧ್ನಿ
ತನ್ನಿಪಾತಯಾಮಾಸ ಸುರೇಶ್ವರಸ್ತು ॥ ೧೦೭ ॥

ಬಾಢಂ ಸ ಚಾಸ್ತ್ರಪ್ರವರೋಽಪಿ ವಜ್ರೋ
ಜಗಾಮ ತೂರ್ಣಂ ಹಿ ಸಹಸ್ರಧಾ ಮುನೇ ।
ಬಲೋಽದ್ರವದ್ದೇವಪತಿಶ್ಚ ಭೀತಃ
ಪರಾಙ್ಮುಖೋಽಭೂತ್ಸುರರಾಣ್ಮಹರ್ಷೇ ॥ ೧೦೮ ॥

ತಂ ಚಾಪಿ ಜಂಭೋ ವಿಮುಖಂ ನಿರೀಕ್ಷ್ಯ
ಭೂತಾವೃತೋ ವಾಕ್ಯಮುವಾಚ ಚೇದಂ ।
ತಿಷ್ಠಸ್ವ ರಾಜಾಸಿ ಚರಾಚರಸ್ಯ
ನ ರಾಜಧರ್ಮೇ ಗದಿತಂ ಪಲಾಯನಂ ॥ ೧೦೯ ॥

ಸಹಸ್ರಾಕ್ಷೋ ಜಂಭವಾಕ್ಯಂ ನಿಶಮ್ಯ
ಭೀತಸ್ತೂರ್ಣಂ ವಿಷ್ಣುಮಾಗಾನ್ಮಹರ್ಷೇ ।
ಉಪೇತ್ಯಾಥ ಶ್ರೂಯತಾಂ ವಾಕ್ಯಮೀಶ
ತ್ವಂ ವೈ ನಾಥೋ ಭೂತಭಾವ್ಯಸ್ಯ ವಿಷ್ಣೋ ॥ ೧೧೦ ॥

ಅಜೇಯನಾಗಿದ್ದನು. ಹಾಗೆ ಬರುತ್ತಿರುವ ಆ ದಾನವನನ್ನು ಇಂದ್ರನು ತನ್ನ ಬಾಹು ಸಹಸ್ರದಿಂದಲೂ ಬಲವನ್ನೆಲ್ಲಾ ಉಪಯೋಗಿಸಿ ವಜ್ರಾಯುಧವನ್ನು ತಿರುಗಿಸಿ ತಲೆಯಮೇಲೆ ಹಾಕಿದನು.

೧೦೮-೧೦೯. ಅಸ್ತ್ರರಾಜನಾದ ಆ ವಜ್ರವೂ ಕೂಡ ಶತ್ರುವನ್ನು ಹೊಂದಿದೊಡನೆಯೆ ಸಾವಿರಪಾಲಾಗಿ ಒಡೆದುಹೋಯಿತು. ಆಗ ಬಲನು ಓಡಿಸಿಕೊಂಡು ಬರಲು ಇಂದ್ರನು ಭಯದಿಂದ ಪರಾಙ್ಮುಖನಾದನು. ಹಾಗೆ ಓಡುತ್ತಿದ್ದ ಇಂದ್ರನನ್ನು ನೋಡಿ ಜಂಭನು ಅಹಂಕಾರದಿಂದ ನಿಲ್ಲು ನಿಲ್ಲು ಚರಾಚರಕ್ಕೆಲ್ಲಾ ನೀನು ರಾಜನಾಗಿದ್ದೀಯೆ, ಯುದ್ಧದಲ್ಲಿ ಈ ಪಲಾಯನವು ರಾಜಧರ್ಮದಲ್ಲಿ ಹೇಳಿಲ್ಲ ಎಂದು ಗದರಿಸಲು

೧೧೦-೧೧೧. ಇಂದ್ರನು ಆ ಜಂಭನ ಮಾತನ್ನು ಕೇಳಿ ಮತ್ತೂ ಭಯಪಟ್ಟು ತ್ವರೆಯಿಂದ ವಿಷ್ಣುವಿನ ಸಮೀಪಕ್ಕೆ ಬಂದನು. ಅವನನ್ನು ಕುರಿತು ಎಲೈ ಪ್ರಭುವೇ

ಜಂಭಸ್ತ್ವರ್ಜಯತೇಽತ್ಯರ್ಥಂ ಮಾಂ ನಿರಾಯುಧಮಾದಿಶನ್ ।
ಆಯುಧಂ ದೇಹಿ ಭಗವನ್ ತ್ವಾಮಹಂ ಶರಣಂ ಗತಃ ॥ ೧೧೧ ॥

ತಮುವಾಚ ಹರಿಃ ಶಕ್ರಂ ತ್ಯಕ್ತ್ವಾ ವಜ್ರಂ ವ್ರಜಾಧುನಾ ।
ಪ್ರಾರ್ಥಯಸ್ವಾಯುಧಂ ವಹ್ನಿಂ ಸ ತೇ ದಾಸ್ಯತ್ಯಸಂಶಯಂ ॥ ೧೧೨ ॥

ಜನಾರ್ದನವಚಃ ಶ್ರುತ್ವಾ ಶಕ್ರಸ್ತ್ವಮಿತವಿಕ್ರಮಃ ।
ಶರಣಂ ಪಾವಕಮಗಾದಿದಂ ಚೋವಾಚ ನಾರದ ॥ ೧೧೩ ॥

ಶಕ್ರ ಉವಾಚ

ನಿಘ್ನತೋ ಮೇ ಬಲಂ ವಜ್ರಃ ಕೃಶಾನೋ ಶತಧಾ ಗತಃ ।
ಏಷ ಚಾಹೂಯತೇ ಜಂಭಃ ತಸ್ಮಾದ್ದೇಹ್ಯಾಯುಧಂ ಮಮ ॥ ೧೧೪ ॥

ಪುಲಸ್ತ್ಯ ಉವಾಚ

ತಮಾಹ ಭಗವಾನ್ ವಹ್ನಿಃ ಪ್ರೀತೋಽಸ್ಮಿ ತವ ವಾಸವ ।
ಯಸ್ತ್ವದರ್ಪಂ ಪರಿತ್ಯಜ್ಯ ಮಾಮೇವ ಶರಣಂ ಗತಃ ॥ ೧೧೫ ॥

ಭೂತಭವಿಷ್ಯತ್ಪದಾರ್ಥಗಳಿಗೆಲ್ಲಾ ನೀನು ನಾಥನಾಗಿರುವೆ, ಈ ನನ್ನ ಪ್ರಾರ್ಥನೆಯನ್ನು ದಯವಿಟ್ಟು ಲಾಲಿಸು, ನಿರಾಯುಧನಾದ ನನ್ನನ್ನು ನೋಡಿ ಈ ಜಂಭನು ಆಜ್ಞೆ ಮಾಡುವವನಂತೆ ಬೆದರಿಸುತ್ತಿರುವನು. ಪೂಜ್ಯನೇ, ನಾನು ನಿನ್ನಲ್ಲಿ ಶರಣಾಗತನಾಗಿದ್ದೇನೆ. ನನಗೆ ಆಯುಧವನ್ನು ಕೊಡು.

೧೧೨-೧೧೪. ಆಗ ಹರಿಯು ಇಂದ್ರನನ್ನು ಕುರಿತು ನೀನು ಈಗಲೇ ವಜ್ರವನ್ನು ಬಿಟ್ಟು ಅಗ್ನಿಯಲ್ಲಿ ಹೋಗಿ ಅವನನ್ನು ಆಯುಧವನ್ನು ಪ್ರಾರ್ಥಿಸು ಅವನೂ ಕೊಡುತ್ತಾನೆ ಎನ್ನಲು ಆ ಮಾತಿನಂತೆ ಇಂದ್ರನು ವೇಗದಿಂದ ಅಗ್ನಿಯಲ್ಲಿ ಶರಣಾಗತನಾಗಿ ಎಲೈ ಅಗ್ನಿದೇವನೇ ರಾಕ್ಷಸರನ್ನು ಪ್ರಹರಿಸುವ ಸಮಯದಲ್ಲಿ ನನ್ನ ವಜ್ರವು ಚೂರಾಗಿ ಹೋಯಿತು. ಈ ಜಂಭನೂ ನನ್ನನ್ನು ಯುದ್ಧಕ್ಕೆ ಕರೆಯುತ್ತಿದ್ದಾನೆ. ಆದುದರಿಂದ ನನಗೆ ಆಯುಧವನ್ನು ಕೊಡು ಎಂದು ಪ್ರಾರ್ಥಿಸಿದನು.

೧೧೫-೧೧೬. ಪುಲಸ್ತ್ಯರು ಹೇಳುತ್ತಾರೆ—ಆಗ ಅಗ್ನಿಯು ಇಂದ್ರನನ್ನು ಕುರಿತು ಇಂತಹ ನೀನು ದರ್ಪವನ್ನು ಬಿಟ್ಟು ನನ್ನನ್ನೇ ಶರಣಾಗತನಾದುದರಿಂದ ನಾನು

ಇತ್ಯುಚ್ಚಾರ್ಯ ಸ್ವಶಕ್ತ್ಯಾ ಸ ಶಕ್ತಿಂ ನಿಷ್ಕ್ರಾಮ್ಯ ಭಾವತಃ ।
ಪ್ರಾದಾದಿಂದ್ರಾಯ ಭಗವಾನ್ ರೋಚಮಾನೋ ದಿವಂ ಗತಃ ॥ ೧೧೬ ॥

ತಾಮಾದಾಯ ತದಾ ಶಕ್ತಿಂ ಶತಘಂಟಾಂ ಸುದಾರುಣಾಂ ।
ಪ್ರತ್ಯುದ್ಯಯೌ ತದಾ ಜಂಭಂ ಹಂತುಕಾಮೋಽರಿಮರ್ದನಃ ॥ ೧೧೭ ॥

ತಯಾಭಿಸಹಿತಃ ಶಕ್ರಃ ಸಹಸ್ಯೈನ್ಯೈರಭಿದ್ರುತಃ ।
ಕ್ರೋಧಂ ಚಕ್ರೇ ತದಾ ಜಂಭೋ ನಿಜಘಾನ ಗಜಾಧಿಪಂ ॥ ೧೧೮ ॥

ಜಂಭಮುಷ್ಟಿನಿಪಾತೇನ ಭಗ್ನಕುಂಭಕಟೋ ಗಜಃ ।
ನಿಪಪಾತ ಯಥಾ ಶೈಲಃ ಶಕ್ರವಜ್ರಹತಃ ಪುರಾ ॥ ೧೧೯ ॥

ಪತಮಾನಂ ಗಜೇಂದ್ರಂ ತು ಶಕ್ರಶ್ಚಾಪ್ಲುತ್ಯ ವೇಗವಾನ್ ।
ತ್ಯಕ್ತ್ವೈವ ಮಂದರಗಿರಿಂ ಪ್ರಯಾತೋ ವಸುಧಾತಲೇ ॥ ೧೨೦ ॥

ತಂ ಪತಂತಂ ಹರಿಂ ಸಿದ್ಧಾಶ್ಚಾರಣಾಶ್ಚ ತದಾಬ್ರುವನ್ ।
ಮಾ ಮಾ ಶಕ್ರ ಪತಸ್ವಾದ್ಯ ಭೂತಲೇ ತಿಷ್ಠ ವಾಸವ ॥ ೧೨೧ ॥

ಸಂತುಷ್ಟನಾಗಿರುವೆನು ಎಂದು ಹೇಳಿ ಸ್ವಶಕ್ತಿಯಿಂದ ಒಂದು ಶಕ್ತ್ಯಾಯುಧವನ್ನು ಭಾವನೆಯಿಂದಲೇ ಉತ್ಪಾದನಮಾಡಿ ಇಂದ್ರನಿಗೆ ಕೊಟ್ಟು ಸಂತೋಷದಿಂದ ಸ್ವರ್ಗಕ್ಕೆ ತೆರಳಿದನು.

೧೧೭-೧೧೮. ಅನಂತರ ನೂರಾರು ಘಂಟೆಗಳಿಂದ ಕೂಡಿ ಭಯಂಕರವಾಗಿದ್ದ ಆ ಶಕ್ತಿಯನ್ನು ಸ್ವೀಕರಿಸಿ ಇಂದ್ರನು ಜಂಭನನ್ನು ಕೊಲ್ಲಲು ಯುದ್ಧಾಭಿಮುಖನಾದನು. ಆ ಶಕ್ತಿಯೊಡನೆ ಸೇನಾಸಮೇತನಾಗಿ ಇಂದ್ರನು ಯುದ್ಧಾಭಿಮುಖನಾದ ಸಮಯದಲ್ಲಿ ಜಂಭನು ಬಹಳ ಕುಪಿತನಾಗಿ ಇಂದ್ರನ ವಾಹನವಾದ ಐರಾವತವನ್ನು ಪ್ರಹರಿಸಿದನು.

೧೧೯-೧೨೨. ಜಂಭನ ಮುಷ್ಟಿಪ್ರಹಾರದಿಂದ ಕುಂಭಪ್ರದೇಶದಲ್ಲಿಯೂ ಗಂಡ ಪ್ರದೇಶದಲ್ಲಿಯೂ ಭಗ್ನವಾಗಿ ಆ ಗಜವು ವಜ್ರದಿಂದ ಹೊಡೆಯಲ್ಪಟ್ಟ ಪರ್ವತದಂತೆ ನೆಲದಲ್ಲಿ ಬಿದ್ದಿತು. ಆಗ ಇಂದ್ರನು ಬೀಳುತ್ತಿರುವ ಆನೆಯನ್ನು ನೋಡಿ ಆನೆಯನ್ನು ಬಿಟ್ಟು ವೇಗದಿಂದ ಚಿಗಿದು ಮಂದರ ಪರ್ವತವನ್ನು ತ್ಯಜಿಸಿ ಭೂಮಿಯನ್ನು ಸೇರಿದನು. ಹಾಗೆ ಬೀಳುತ್ತಿರುವ ಇಂದ್ರನನ್ನು ನೋಡಿ ಆಕಾಶದಲ್ಲಿದ್ದ ಚಾರರೂ ಸಿದ್ಧರೂ

ಸ ತೇಷಾಂ ವಚನಂ ಶ್ರುತ್ವಾ ಯೋಗೀ ತಸ್ಥೌ ಕ್ಷಣಂ ತದಾ ।
ಪ್ರಾಹಚೈತಾನ್ ಕಥಂ ಯೋತ್ಸ್ಯೇ ಪತನ್ಸ್ಯೇ ಶತ್ರುಭಿಃ ಸಹ ॥ ೧೨೨ ॥

ತಮೂಚುಃ ದೇವಗಂಧರ್ವಾ ಮಾ ವಿಷಾದಂ ವ್ರಜೇಶ್ವರ ।
ಯುಧ್ಯಸ್ವ ತ್ವಂ ಸಮಾರುಹ್ಯ ಪ್ರೇಷಯಾಮೋ ಜಗದ್ರಥಂ ॥ ೧೨೩ ॥

ಇತ್ಯೇವಮುಕ್ತ್ವಾ ವಿಪುಲಂ ರಥಂ ಸ್ವಸ್ತಿಕಲಕ್ಷಣಂ ।
ವಾನರಧ್ವಜಸಂಯುಕ್ತಂ ಸಂಹತೈರ್ಹರಿಭಿರ್ಯುತಂ ॥ ೧೨೪ ॥

ಶುದ್ಧಜಾಂಬೂನದಮಯಂ ಕಿಂಕಿಣೀಜಾಲಮಂಡಿತಂ ।
ಶಕ್ರಾಯ ಪ್ರೇಷಯಾಮಾಸುರ್ವಿಶ್ವಾವಸುಪುರೋಗಮಾಃ ॥ ೧೨೫ ॥

ತಮಾಗತಮುದೀಕ್ಷ್ಯಾಥ ಹೀನಂ ಸಾರಥಿನಾ ಹರಿಃ ।
ಪ್ರಾಹ ಯೋತ್ಸ್ಯೇ ಕಥಂ ಯುದ್ಧೇ ಸಂಯಮಿಷ್ಯೇ ಕಥಂ ಹಯಾನ್ ॥ ೧೨೬ ॥

ಯದಿ ಕಶ್ಚಿಚ್ಚ ಸಾರಥ್ಯಂ ಕರಿಷ್ಯತಿ ಮಮಾಧುನಾ ।
ತತೋಽಹಂ ಘಾತಯೆ ಶತ್ರೂನ್ ನಾನ್ಯಥೇತಿ ಕಥಂಚನ ॥ ೧೨೭ ॥

ಇಂದ್ರನೇ ಭೂಮಿಯಲ್ಲಿ ಬೀಳಬೇಡ ಅಲ್ಲಿಯೇ ನಿಲ್ಲು ಎಂದು ತಡೆದರು. ಆ ಮಾತನ್ನು ಕೇಳಿದ ಇಂದ್ರನು ಯೋಗದೃಷ್ಟಿಯನ್ನಾಶ್ರಯಿಸಿ ಕ್ಷಣಕಾಲ ಹಾಗೆಯೇ ನಿಂತನು. ಹೀಗೆ ನಿಂತು ನಾನು ವಾಹನವಿಲ್ಲದೆ ಶತ್ರುಗಳೊಡನೆ ಹೇಗೆ ಯುದ್ಧಮಾಡಲಿ ಎಂದನು.

೧೨೩-೧೨೬. ಆಗ ದೇವಗಂಧರ್ವರುಗಳು ಪ್ರಭುವೇ ವಿಷಾದಪಡಬೇಡ. ನಾವು ಜಗದ್ರಥವನ್ನು ಕಳುಹಿಸುವೆವು. ನೀನು ಅದನ್ನು ಆರೋಹಣೆಮಾಡಿ ಯುದ್ಧ ಮಾಡು, ಹೀಗೆ ಹೇಳಿ ಸ್ವಸ್ತಿಕ ಲಕ್ಷಣವುಳ್ಳ ವಾನರಧ್ವಜದಿಂದಲೂ ಸರಿಯಾದ ಕುದುರೆಗಳಿಂದಲೂ ಕೂಡಿರುವ ಮತ್ತು ಸ್ವರ್ಣಮಯವಾಗಿಯೂ ಸಣ್ಣ ಘಂಟೆಗಳಿಂದ ಶೋಭಿಸುತ್ತಿರುವ ದೊಡ್ಡ ರಥವನ್ನು ವಿಶ್ವಾವಸುವೇ ಮೊದಲಾದವರು ಇಂದ್ರನಿಗೆ ಕಳುಹಿಸಿದರು. ಹಾಗೆ ಬಂದ ರಥವನ್ನು ನೋಡಿ ಇಂದ್ರನು ಸಾರಥಿ ಇಲ್ಲದಿರುವ ಈ ರಥದಲ್ಲಿ ಹೇಗೆ ಯುದ್ಧಮಾಡಲಿ, ಕುದುರೆಗಳನ್ನು ತಾನೆ ಹೇಗೆ ಹತೋಟಿಯಲ್ಲಿಟ್ಟು ಕೊಳ್ಳಲಿ ಎಂದನು.

೧೨೭-೧೩೦. ಈಗ ನನಗೆ ಯಾರಾದರೊಬ್ಬರು ಸಾರಥಿಯಾಗಿ ಲಭಿಸಿದಲ್ಲಿ ನಾನು ಶತ್ರುಗಳನ್ನು ನಾಶಮಾಡುತ್ತೇನೆ ಇಲ್ಲದಿದ್ದರೆ ಸಾಧ್ಯವಿಲ್ಲ. ಎಂದು ಇಂದ್ರನು ಹೇಳಲಾಗಿ ಆಗ ಗಂಧರ್ವರು ಪ್ರಭುವೇ ನಮಗೆ ಸಾರಥಿಯಾಗಿ ಯಾರೂ ಇಲ್ಲ ನೀನೇ

ತತೋಽಬ್ರುವಂಸ್ತೇ ಗಂಧರ್ವಾ ನಾಸ್ಮಾಕಂ ಸಾರಥಿರ್ವಿಭೋ ।
ವಿದ್ಯತೇ ಸ್ವಯಮೇವಾಶ್ವಾನ್ ಸ್ವಯಂ ಸಂಯಂತುಮರ್ಹಸಿ ॥ ೧೨೮ ॥

ಇತ್ಯೇವಮುಕ್ತೇ ಭಗವಾಂಸ್ತ್ಯಕ್ತ್ವಾ ಸ್ಯಂದನಮುತ್ತಮಂ ।
ಕ್ಷ್ಮಾತಲಂ ನಿಪಪಾತೈವ ಪರಿಭ್ರಷ್ಟಃ ಸುರೇಶ್ವರಃ ॥ ೧೨೯ ॥

ಚಲನ್ಮೌಲಿಂ ಮುಕ್ತಕಚಂ ಪರಿಭ್ರಷ್ಟಯುಧಾಸ್ಪದಂ ।
ತಂ ಪತಂತಂ ಸಹಸ್ರಾಕ್ಷಂ ದೃಷ್ಟ್ವಾ ಭೂಃ ಸಮಕಂಪತ ॥ ೧೩೦ ॥

ಪೃಥಿವ್ಯಾಂ ಕಂಪಮಾನಾಯಾಂ ಶಮೀಕರ್ಷೇಸ್ತಪಸ್ವಿನೀ ।
ಭಾರ್ಯಾಬ್ರವೀತ್ಪ್ರಭೋ ಬಾಲಂ ಬಹಿಃ ಕುರು ಯಥಾಸುಖಂ ॥ ೧೩೧ ॥

ಸತು ಭಾರ್ಯಾವಚಃ ಶ್ರುತ್ವಾ ಕಿಮರ್ಥಮಿತಿ ಚಾಬ್ರವೀತ್ ।
ಸಾಚಾಹ ಶ್ರೂಯತಾಂ ನಾಥ ದೈವಜ್ಞ ಪರಿಭಾಷಿತಂ ॥ ೧೩೨ ॥

ಯದೇಯಂ ಕಂಪತೇ ಭೂಮಿಃ ತದಾ ಪ್ರಕ್ಷಿಪ್ಯತೇ ಬಹಿಃ ।
ಯದ್ಬಾಹ್ಯತೋ ಮುನಿಶ್ರೇಷ್ಠ ತದ್ಭವೇದ್ದ್ವಿಗುಣೋ ಮುನೇ ॥ ೧೩೩ ॥

ಏತದ್ವಾಕ್ಯಂ ತದಾ ಶ್ರುತ್ವಾ ಬಾಲಮಾದಾಯ ಪುತ್ರಕಂ ।
ನಿರಾಶಂಕೋ ಬಹಿಃ ಶೀಘ್ರಂ ಪ್ರಾಕ್ಷಿಪತ್ ಕ್ಷ್ಮಾತಲೇ ದ್ವಿಜಃ ॥ ೧೩೪ ॥

ಸಾರಥ್ಯವನ್ನು ಮಾಡಿಕೊಂಡು ಯುದ್ಧಮಾಡಬೇಕೆಂದರು. ಹೀಗೆ ಅವರು ಹೇಳಿ ದೊಡನೆಯೇ ಇಂದ್ರನು ಆ ರಥವನ್ನು ತ್ಯಜಿಸಿ ಭ್ರಷ್ಟನಾಗಿ ಭೂಮಿಯಲ್ಲಿ ಬಿದ್ದನು. ಆಗ ಯುದ್ಧದ ವಿಚಾರವನ್ನೇ ಬಿಟ್ಟು ಚಲಿಸುತ್ತಿರುವ ತಲೆಯಿಂದಲೂ ಬಿಚ್ಚಿಹೋದ ಕೇಶಪಾಶಗಳಿಂದಲೂ ಕೂಡಿ ಕೆಳಗೆ ಬೀಳುತ್ತಿರುವ ಇಂದ್ರನನ್ನು ನೋಡಿ ಭೂಮಿಯು ನಡುಗಿತು.

೧೩೧-೧೩೪. ಭೂಮಿಯು ನಡುಗಲು ಇದನ್ನು ನೋಡಿ ಶಮೀಕನೆಂಬ ಋಷಿಯ ಪತ್ನಿಯಾದ ತಪಸ್ವಿನಿಯು ಪತಿಯನ್ನು ಕುರಿತು ಪ್ರಭುವೇ ಈ ಬಾಲನನ್ನು ಸುಖದಿಂದ ಹೊರಗೆ ಕಳುಹಿಸೆಂದಳು. ಪತ್ನಿಯ ಈ ಮಾತನ್ನು ಕೇಳಿ ಆ ಋಷಿಯು ಏತಕ್ಕೆಂದು ಕೇಳಲಾಗಿ ಪ್ರಭುವೇ ಜ್ಯೋತಿಷಿಕನು ಭೂಮಿಯು ನಡುಗಿದೊಡನೆಯೇ

ಇತ್ಯೇವಮುಕ್ತೇ ದೇವರ್ಷಿ ರ್ಬಹಿರ್ನಿರ್ಗಮ್ಯ ವೇಗವಾನ್ ।
ದದರ್ಶಬಾಲದ್ವಿತಯಂ ಸಮರೂಪಮುಪಸ್ಥಿತಂ ॥ ೧೩೫ ॥

ಭೂಯೋಽಗೋ ಯುಗಲಾರ್ಥಾಯ ಪ್ರವಿಷ್ಟೋ ಭಾರ್ಯಯಾ ದ್ವಿಜಃ ।
ನಿವಾರಿತೋ ಯದಾಯಾಸೀತ್ತ್ವಹಾನಿರ್ಭವಿಷ್ಯತಿ ॥ ೧೩೬ ॥

ತಂ ದೃಷ್ಟ್ವಾ ದೇವತಾಪೂಜ್ಯಂ ಭಾರ್ಯಾಂ ಚಾದ್ಭುತದರ್ಶನಾಂ ।
ಪ್ರಾಹ ತತ್ತ್ವಂ ನ ವಿಂದಾಮಿ ಯತ್ಪೃಚ್ಛಾಮಿ ವದಸ್ವ ತತ್ ॥ ೧೩೭ ॥

ಬಾಲಸ್ಯಾಸ್ಯ ದ್ವಿತೀಯಸ್ಯ ಕೇ ಭವಿಷ್ಯದ್ಗುಣಾಃ ಕಿಲ ।
ಗಾಲವೇನ ತು ಯಚ್ಚೋಕ್ತಂ ಕರ್ಮ ತತ್ಕಥಯಾಧುನಾ ॥ ೧೩೮ ॥

ಸಾಬ್ರವೀನ್ನಾದ್ಯ ವಕ್ಷ್ಯೇ ವೈ ವದಿಷ್ಯಾಮಿ ಪುನಃ ಪ್ರಭೋ ।
ಸೋಽಬ್ರವೀದ್ವದ ಚಾದ್ಯೈವ ನೋಚೇನ್ನಾಶ್ನಾಮಿ ಭೋಜನಂ ॥ ೧೩೯ ॥

ಇವನನ್ನು ಹೊರಗೆ ಹಾಕಿದಲ್ಲಿ ಇವನು ದ್ವಿಗುಣನಾಗುತ್ತಾನೆಂದು ಹೇಳಿರುವನೆಂದಳು. ಆ ಮಾತನ್ನು ಕೇಳಿ ಆ ಬ್ರಾಹ್ಮಣನು ಹುಡುಗನನ್ನು ನಿರ್ಭಯನಾಗಿ ಹೊರಗೆ ಹಾಕಿದನು.

೧೩೫-೧೩೭. ಹಾಗೆ ಹೊರಗೆ ಹಾಕಲ್ಪಟ್ಟ ಹುಡುಗನನ್ನು ವೇಗದಿಂದ ಹೊರಗೆ ಹೋಗಿ ನೋಡಲು ಅಲ್ಲಿ ಸಮರೂಪದ ಎರಡು ಬಾಲರಿದ್ದರು. ಅವರನ್ನು ಕರೆದು ಕೊಳ್ಳಲು ಹೋದ ಆ ತಪಸ್ವಿಯನ್ನು ಅವನ ಪತ್ನಿಯು ತಡೆದು ನಿನಗೆ ಇದರಿಂದ ಹಾನಿಯುಂಟಾಗುತ್ತದೆ ಎಂದಮೇಲೆ ಅವನು ಹಿಂದೆ ತಿರುಗಿ ದೇವತೆಗಳಿಂದಲೂ ಪೂಜ್ಯವಾದ ಆ ಬಾಲಕನನ್ನೂ ಪತ್ನಿಯನ್ನೂ ನೋಡಿ ಇದರ ವಿಚಾರವೇನೂ ನನಗೆ ತಿಳಿದಿಲ್ಲ. ನೀನಾದರೂ ನನ್ನ ಪ್ರಶ್ನೆಗೆ ಉತ್ತರ ಹೇಳು ಎಂದನು.

೧೩೮-೧೪೧. ಈ ಎರಡನೇ ಬಾಲಕನ ಭವಿಷ್ಯವೃತ್ತಾಂತವೇನು, ಗಾಲವನು ಈ ವಿಷಯದಲ್ಲಿ ಏನು ಹೇಳಿರುವನು ಅದನ್ನೆಲ್ಲಾ ಈಗ ಹೇಳು ಎಂದು ಕೇಳಲು ಆ ಭಾರ್ಯೆಯು ಪ್ರಭುವೇ ಇದಕ್ಕೆ ಉತ್ತರವನ್ನು ಈಗ ಹೇಳುವದಿಲ್ಲ. ಮುಂದೆ ಹೇಳುತ್ತೇನೆ ಎನ್ನಲು ಆ ಬ್ರಾಹ್ಮಣನು ಈಗಲೇ ಹೇಳು ಇಲ್ಲವಾದರೆ ನಾನು ಭೋಜನ ಮಾಡುವುದಿಲ್ಲವೆಂದು ಹಠತಾಳಿದನು. ಆಗ ಅವನ ಪತ್ನಿಯು ಬ್ರಾಹ್ಮಣೋತ್ತಮನೇ

ಸಾ ಪ್ರಾಹ ಶ್ರೂಯತಾಂ ಬ್ರಹ್ಮನ್ ವದಿಷ್ಯೇ ವಚನಂ ಹಿತಂ ।
ಕಾತರೇಣಾದ್ಯಯತ್ ಪೃಷ್ಟಂ ಭಾವ್ಯಂ ಕಾರಯಿತುಂ ಕಿಲ ॥ ೧೪೦ ॥

ಇತ್ಯುಕ್ತವತಿ ವಾಕ್ಯೇಚ ಬಾಲಏವತ್ವಚೇತನಃ ।
ಹರೇರ್ಜಗಾಮ ಸಾಹಾಯ್ಯಂ ಕರ್ತುಂ ರಥವಿಶಾರದಃ ॥ ೧೪೧ ॥

ತಂ ವ್ರಜಂತಂ ಹಿ ಗಂಧರ್ವಾ ವಿಶ್ವಾವಸುಪುರೋಗಮಾಃ ।
ಜ್ಞಾತ್ವೇಂದ್ರಸ್ಯೈವ ಸಾಹಾಯ್ಯಂ ತೇಜಸಾ ಸಮವರ್ಧಯನ್ ॥ ೧೪೨ ॥

ಗಂಧರ್ವತೇಜಸಾಯುಕ್ತಃ ಶಿಶುಃ ಶಕ್ರಂ ಸಮೇತ್ಯ ಹಿ ।
ಪ್ರೋವಾಚಾಭ್ಯೇಹಿ ದೇವೇಶ ಪ್ರಿಯೋ ಯಂತಾ ಭವಾಮಿ ತೇ ॥ ೧೪೩ ॥

ತಚ್ಛ್ರುತ್ವಾ ಚ ಹರಿಃ ಪ್ರಾಹ ಕಸ್ಯ ಪುತ್ರೋಽಸಿ ಬಾಲಕ ।
ತ್ವಂ ಯಂತಾಸಿ ಕಥಂ ಚಾಶ್ವಾನ್ ಸಂಶಯಃ ಪ್ರತಿಭಾತಿ ಮೇ ॥ ೧೪೪ ॥

ಸೋಽಹಂ ರೌಚ್ಯಶಮೀಕಪುತ್ರಂ ಮಾಂ ಕ್ಷ್ಮಾಭವಂ ವಿದ್ಧಿ ವಾಸವ ।
ಗಂಧರ್ವತೇಜಸಾ ಯುಕ್ತಂ ವಾಜಿಯಾನ ವಿಶಾರದಂ ॥ ೧೪೫ ॥

ಕೇಳು ನಿನಗೆ ಹಿತವನ್ನೇ ಹೇಳುತ್ತಿದ್ದೇನೆ ಕೇಳು ನೀನು ಈಗ ಭಯಪಟ್ಟು ಕೇಳಿದುದೇ ಮುಂದಿನ ದುಃಖಾನುಭವಕ್ಕೆ ಕಾರಣವಾಗಿದೆ ಎನ್ನಲು ಆಗಲೇ ಆ ಬಾಲಕನು ಅಚೇತನನಾಗಿ ಇಂದ್ರನಿಗೆ ಸಹಾಯಮಾಡಲು ರಥವಿಶಾರದನಾಗಿ ನಡೆದನು.

೧೪೨-೧೪೩. ಹಾಗೆ ಹೊರಟ ಅವನನ್ನು ವಿಶ್ವಾವಸುವೇ ಮೊದಲಾದ ಗಂಧರ್ವರು ಇಂದ್ರನಿಗೆ ಸಹಾಯವಾಗುವುದೆಂದು ತಿಳಿದು ತಮ್ಮ ತೇಜಸ್ಸಿನಿಂದ ಅಭಿವೃದ್ಧಿಗೊಳಿಸಿದರು. ಅನಂತರ ಗಂಧರ್ವರ ತೇಜಸ್ಸಿನಿಂದ ಕೂಡಿದ ಆ ಶಿಶುವು ಇಂದ್ರನ ಸಮೀಪಕ್ಕೆ ಹೋಗಿ, ದೇವರಾಜ ಬಾ, ನಾನು ನಿನಗೆ ಪ್ರಿಯನಾದ ಸಾರಥಿಯಾಗುತ್ತೇನೆ ಎಂದನು.

೧೪೪-೧೪೫. ಅದನು ಕೇಳಿ ಇಂದ್ರನು ಮಗುವೇ ನೀನು ಯಾರ ಮಗ ಸಾರಥಿಯಾಗಿ ಕುದುರೆಗಳನ್ನು ಹೇಗೆ ನೆಳೆಯುವೆ, ನನಗೆ ಈ ವಿಷಯದಲ್ಲಿ ಸಂಶಯ ವುಂಟಾಗಿದೆ ಎಂದು ಪ್ರಶ್ನೆಮಾಡಲು ಆ ಶಿಶುವು ನಾನು ಶಮೀಕನ ಮಗನೆಂದೂ ಭೂಮಿಯಲ್ಲಿ ಹುಟ್ಟಿದವನೆಂದೂ ಉತ್ತರಕೊಟ್ಟನು. ಮತ್ತು ನಾನು ಗಂಧರ್ವರ ತೇಜಸ್ಸಿನಿಂದ ಕೂಡಿರುವದ್ದರಿಂದ ಕುದುರೆಗಳನ್ನು ನಡೆಸುವ ವಿದ್ಯೆಯಲ್ಲಿ ಸಮರ್ಥ ನಾಗಿಯೂ ಇದ್ದೇನೆಂದು ತಿಳಿ ಎಂದನು.

ತಚ್ಛ್ರುತ್ವಾ ಭಗವಾನ್ ಶಕ್ರಃ ಖೆ ಬಭೌ ಯೋಗಿನಾಂ ವರಃ ।
ಸಚಾಪಿ ವಿಪ್ರತನಯೋ ಮಾತಲಿರ್ನಾಮ ವಿಶ್ರುತಃ ॥ ೧೪೬ ॥

ತತೋಽಧಿರೂಢಃ ಸುರಥಂ ಶಕ್ರಃ ತ್ರಿದಶಪುಂಗವಃ ।
ರಶ್ಮೀನ್ ಶಮೀಕತನಯೋ ಮಾತಲಿಃ ಪ್ರಗೃಹೀತವಾನ್ ॥ ೧೪೭ ॥

ತತೋ ಮಂದರಮಾಗಮ್ಯ ವಿವೇಶ ರಿಪುವಾಹಿನೀಂ ।
ಪ್ರವಿಶ್ಯ ದದೃಶೆ ಶ್ರೀಮಾನ್ ಕಥಿತಂ ಕಾರ್ಮುಕಂ ಮಹತ್ ॥ ೧೪೮ ॥

ಸಶರಂ ಪಂಚವರ್ಣಂ ತತ್ಸಿತರಕ್ತಾಸಿತಾರುಣಂ ।
ಪಾಂಡುಚ್ಛಾಯಂ ಸುರಶ್ರೇಷ್ಠಸ್ತಜ್ಜಗ್ರಾಹ ಸಮಾರ್ಗಣಂ ॥ ೧೪೯ ॥

ತತಸ್ತು ಮನಸಾ ದೇವಾನ್ ರಜಸ್ಸತ್ವತಮೋ ಮಯಾನ್ ।
ನಮಸ್ಕೃತ್ಯ ಶರಂ ಚಾಪೆ ಸಾಧಿಜ್ಯೆ ವಿನಿಯೋಜಯತ್ ॥ ೧೫೦ ॥

ತತೋ ನಿಶ್ಚೇರುರತ್ಯುಗ್ರಂ ಶರಾ ಬರ್ಹಿಣವಾಸಸಃ ।
ಬ್ರಹ್ಮೇಶವಿಷ್ಣುನಾಮಾಙ್ಕಾಃ ಸೂದಯಂತೋಽಸುರಾನ್ ರಣೆ ॥ ೧೫೧ ॥

ಆಕಾಶಂ ವಿದಿಶಃ ಪೃಥ್ವೀಂದಿಶಶ್ಚ ಸ ಶರೋತ್ಕರೈಃ ।
ಸಹಸ್ರಾಕ್ಷೋಽರಿಪಕ್ಷಾಂಶ್ಚ ಛಾದಯಾಮಾಸ ನಾರದ ॥ ೧೫೨ ॥

೧೪೬-೧೪೮. ಆ ಮಾತನ್ನು ಕೇಳಿ ಇಂದ್ರನು ಯೋಗಮಹಿಮೆಯಿಂದ ಆಕಾಶಕ್ಕೆ ಹಾರಿದನು. ಅನಂತರ ಬ್ರಾಹ್ಮಣಪುತ್ರನಾದ ಮಾತಲಿಯೂ ಅವನನ್ನು ಅನುಸರಿಸಿದನು. ಇಂದ್ರನು ರಥವನ್ನು ಹತ್ತಿದನು. ಮಾತಲಿಯು ಕುದುರೆಯ ಲಗಾಮನ್ನು ಹಿಡಿದು ಕುಳಿತನು. ಆ ರಥದಿಂದ ಇಂದ್ರನು ಮಂದರಪರ್ವತಕ್ಕೆ ಬಂದು ಶತ್ರುಸೈನ್ಯವನ್ನೂ ಪ್ರವೇಶಿಸಿ ಅಲ್ಲಿ ಅಗ್ನಿಯು ಹೇಳಿದ ಧನುಸ್ಸನ್ನೂ ನೋಡಿದನು.

೧೪೯-೧೫೨. ಅನಂತರ ಇಂದ್ರನು ಶರಗಳಿಂದ ಕೂಡಿಯೂ ಬಿಳುಪು, ಕೆಂಪು, ಕಪ್ಪು, ಬಿಳಿಯಕೆಂಪು, ಪಾಂಡು ಇವೇ ಮೊದಲಾದ ಪಂಚವರ್ಣಗಳಿಂದಲೂ ಶೋಭಿಸುತ್ತಿರುವ ಆ ಧನುಸ್ಸನ್ನು ಬಾಣಗಳೊಡನೆ ಸ್ವೀಕರಿಸಿದನು. ಮನಸ್ಸಿನಿಂದ ಸತ್ವರಜಸ್ತಮಃ ಪ್ರಧಾನರಾದ ವಿಷ್ಣು, ಬ್ರಹ್ಮ, ರುದ್ರ, ಇವರನ್ನು ನಮಸ್ಕರಿಸಿ ಸಿದ್ಧಮಾಡಿದ ಧನುಸ್ಸಿನಲ್ಲಿ ಬಾಣವನ್ನೇರಿಸಿದನು. ಅನಂತರ ಅವನ ಆ ಧನುಸ್ಸಿನಿಂದ ನವಿಲುಗರಿಗಳಿಂದ ವೇಗಗೊಳಿಸಿರುವ ಭಯಂಕರವಾದ ಮತ್ತು ಬ್ರಹ್ಮ ವಿಷ್ಣು ರುದ್ರ

ಗಜೋಽವಿದ್ಧೋ ಹಯೋ ಭಿನ್ನಃ ಪೃಥಿವ್ಯಾಂ ಪತಿತೋ ರಥೀ ।
ಮಹಾಮಾತ್ರೋಽಥರಾಂ ಪ್ರಾಪ್ತೋ ಜಂಭಶ್ಚಾಪಿ ಶರಾತುರಃ ॥ ೧೫೩ ॥

ಪದಾತಿಃ ಪತಿತೋ ಭೂಮೌ ಶಕ್ರಮಾರ್ಗಣತಾಡಿತಃ ।
ಹತಪ್ರಧಾನಭೂಯಿಷ್ಠಂ ಬಲಂ ತಚ್ಚಾಭವದ್ರಣೆ ॥ ೧೫೪ ॥

ತಂ ಶಕ್ರಬಾಣಾಭಿಹತಂ ದುರಾಸದಂ
ಸೈನ್ಯಂ ಸಮಾಲಕ್ಷ್ಯ ತದಾ ಕುಜಂಭಃ ।
ಜಂಭಾಸುರಶ್ಚಾಪಿ ಸುರೇಶಮವ್ಯಯಂ
ಪ್ರಜಗ್ಮತುರ್ಗೃಹ್ಯ ಗದೆ ಸುಘೋರೆ ॥ ೧೫೫ ॥

ತಾವಾಪತಂತೌ ಭಗವಾನ್ ನಿರೀಕ್ಷ್ಯ
ಸುದರ್ಶನೇನಾರಿವಿನಾಶನೇನ ।
ವಿಷ್ಣುಃ ಕುಜಂಭಂ ನಿಜಘಾನ ವೇಗಾತ್ಸ
ಸ್ಯಂದನಾದ್ಗಾಂ ನ್ಯಪತದ್ಗತಾಸುಃ ॥ ೧೫೬ ॥

ನಾಮಾಂಕಿತಗಳಾದ ಅನೇಕ ಬಾಣಗಳು ಅಸುರರನ್ನು ನಾಶಮಾಡುತ್ತಾ ಹೊರಗೆ ಹೊರಟವು. ಆಗ ಇಂದ್ರನು ತನ್ನ ಬಾಣಪರಂಪರೆಗಳಿಂದ ಆಕಾಶ, ಭೂಮಿ, ದಿಕ್ಕು, ವಿದಿಕ್ಕು ಇವುಗಳನ್ನೂ ಶತ್ರುಸೈನ್ಯವನ್ನೂ ಸಹ ಮುಚ್ಚಿದನು.

೧೫೩-೧೫೪. ಆ ರೀತಿಯಾದ ಇಂದ್ರನ ಬಾಣಪ್ರಯೋಗದಿಂದ ಜಂಭನ ಆನೆಯು ಭಗ್ನವಾಯಿತು. ರಥದ ಕುದುರೆಗಳೂ ನಾಶವಾದವು. ಅವನ ಅಮಾತ್ಯನೂ ಭೂಮಿಯಲ್ಲಿ ಬಿದ್ದನು. ರಥಿಯಾಗಿದ್ದ ಜಂಭನೂ ಸಹ ಬಾಣಗಳಿಂದ ಹೊಡೆಯಲ್ಪಟ್ಟು ಭೂಮಿಯಲ್ಲಿ ಬಿದ್ದನು. ಹೀಗೆ ಬಾಣಗಳಿಂದ ಹೊಡೆಯಲ್ಪಟ್ಟು ಕೇವಲ ಪದಾತಿಯಾಗಿ ಜಂಭನು ಬಿದ್ದ ಮೇಲೆ ಅವನ ಸೈನ್ಯವೆಲ್ಲವೂ ಯುದ್ಧದಲ್ಲಿ ಪ್ರಮುಖರನ್ನೆಲ್ಲಾ ಕಳೆದು ಕೊಂಡು ದುರ್ಬಲವಾಗಿ ನಿಂತಿತು.

೧೫೫-೧೫೬. ಇಂದ್ರನ ಬಾಣದಿಂದ ಬಲಿಷ್ಠವಾದ ತನ್ನ ಸೈನ್ಯವು ಹೀಗಾದು ದನ್ನು ನೋಡಿ ಕುಜಂಭನೂ ಜಂಭನೂ ಸಹ ಘೋರವಾದ ಗದೆಗಳನ್ನು ಗ್ರಹಿಸಿ ಇಂದ್ರನನ್ನು ಎದುರಿಸಲು ಬಂದರು. ಹಾಗೆ ವೇಗದಿಂದ ಬರುತ್ತಿರುವ ಆ ದಾನವರನ್ನು ನೋಡಿ ವಿಷ್ಣುವು ಶತ್ರುನಾಶಕವಾದ ತನ್ನ ಸುದರ್ಶನದಿಂದ ಕುಜಂಭನನ್ನು ವೇಗದಿಂದ ಪ್ರಹರಿಸಲು ಅವನು ಮೃತನಾಗಿ ರಥದಿಂದ ಕೆಳಗೆ ಬಿದ್ದನು.

ತಸ್ಮಿನ್ ಹತೇ ಭ್ರಾತರಿ ಮಾಧವೇನ
ಜಂಭಸ್ತತಃ ಕ್ರೋಧವಶಂ ಜಗಾಮ ।
ಕ್ರೋಧಾನ್ವಿತಃ ಶಕ್ರಮುಪಾದ್ರವದ್ರಣೇ ।
ಸಿಂಹಂ ಯಥೈಣೋ ಹಿ ವಿಪನ್ನಬುದ್ಧಿಃ ॥ ೧೫೭ ॥

ತಮಾಪತಂತಂ ಪ್ರಸಮೀಕ್ಷ್ಯ ಶಕ್ರಃ ।
ತ್ಯಕ್ತ್ವೈವ ಚಾಪಂ ಸಶರಂ ಮಹಾತ್ಮಾ ।
ಜಗ್ರಾಹ ಶಕ್ತಿಂ ಯಮದಂಡಕಲ್ಪಾಂ ।
ಪಶ್ಚಾತ್ತತೋ ಜಂಭವಧೇ ಸಸರ್ಜ ॥ ೧೫೮ ॥

ಶಕ್ತಿಂ ಚ ಘಂಟಾಸ್ವರಸಸ್ವನಾಂ ವೈ
ದೃಷ್ಟ್ವಾ ಪತಂತೀಂ ಗದಯಾ ಜಘಾನ ।
ಗದಾಂ ಚ ಕೃತ್ವಾ ಸಹಸೈವ ಭಸ್ಮಸಾದ್ಬಿಭೇದ
ಜಂಭಂ ಹೃದಯೇ ಚತೂರ್ಣಂ ॥ ೧೫೯ ॥

ಶಕ್ತ್ಯಾ ಸ ಭಿನ್ನೋ ಹೃದಯೇ ಸುರಾರಿಃ
ಪಪಾತ ಭೂಮ್ಯಾಂ ವಿಗತಾಸುರೇವ ।
ತಂ ವೀಕ್ಷ್ಯ ಭೂಮೌ ಪತಿತಂ ವಿಸಂಜ್ಞಂ
ದೈತ್ಯಾಸ್ತು ಭೀತಾ ವಿಮುಖಾ ಬಭೂವುಃ ॥ ೧೬೦ ॥

೧೫೭-೧೫೯. ಅಣ್ಣನಾದ ಕುಜಂಭನು ವಿಷ್ಣುವಿನಿಂದ ಹತನಾದುದನ್ನು ನೋಡಿ ಕ್ರೋಧವಶನಾದ ಜಂಭನು ಬುದ್ಧಿವಿಪರ್ಯಾಸಹೊಂದಿದ ಜಿಂಕೆಯು ಸಿಹ್ಮವನ್ನು ಎದುರಿಸ ಹೋಗುವಂತೆ ಯುದ್ಧದಲ್ಲಿ ಇಂದ್ರನನ್ನು ಎದುರಿಸಲು ಹೊರಟನು. ಹಾಗೆ ಬರುತ್ತಿರುವ ಜಂಭನನ್ನು ನೋಡಿ ಇಂದ್ರನು ಬಾಣಗಳೊಡನೆ ಧನುಸ್ಸನ್ನು ತ್ಯಜಿಸಿ ಯಮದಂಡದಂತಿರುವ ಶಕ್ತಿಯನ್ನು ಜಂಭನ ನಾಶಕ್ಕಾಗಿ ಪ್ರಯೋಗಿಸಿದನು. ಘಂಟೆಗಳ ಸ್ವರಸವಾದ ಧ್ವನಿಯೊಡನೆ ವೇಗದಿಂದ ಬರುತ್ತಿರುವ ಆ ಶಕ್ತಿಯನ್ನು ನೋಡಿ ಜಂಭನು ಗದೆಯಿಂದ ಪ್ರಹರಿಸಿದನು. ಆದರೂ ಶಕ್ತಿಯು ಆ ಗದೆಯನ್ನು ಭಸ್ಮಮಾಡಿ ಜಂಭನನ್ನು ವೇಗದಿಂದ ಹೃದಯದಲ್ಲಿ ಭೇದಿಸಿತು.

೧೬೦-೧೬೧. ಶಕ್ತಿಯಿಂದ ಆ ರೀತಿ ಹೃದಯದಲ್ಲಿ ಹೊಡೆಯಲ್ಪಟ್ಟ ಜಂಭನು ಮೃತನಾಗಿ ನೆಲದಲ್ಲಿ ಬಿದ್ದನು. ಹಾಗೆ ಬಿದ್ದ ಅವನನ್ನು ನೋಡಿ ದೈತ್ಯರೆಲ್ಲರೂ

ಜಂಭೆ ಹತೆ ದೈತ್ಯಬಲೆ ಚ ಭಗ್ನೆ
ಗಣಾಸ್ತು ಹೃಷ್ಟಾ ಹರಿಮರ್ಚಯಂತಃ ।
ವೀರ್ಯಂ ಪ್ರಶಂಸಂತಿ ಶತಕ್ರತೋಶ್ಚ
ಸಗೋತ್ರಭಿಚ್ಛರ್ವಮುಪೇತ್ಯ ತಸ್ಥೌ ॥ ೧೬೧ ॥

ಇತಿ ಶ್ರೀ ವಾಮನಪುರಾಣೇ ಭೈರವಪ್ರಾದುರ್ಭಾವೇ ಜಂಭಕುಜಂಭ ವಧೋನಾಮ ನವಷಷ್ಟಿತಮೋಽಧ್ಯಾಯಃ

ಭಯದಿಂದ ವಿಮುಖರಾಗಿ ಓಡಿದರು. ಜಂಭನೂ ನಷ್ಟನಾಗಿ ದೈತ್ಯರ ಸೈನ್ಯವೂ ಭಗ್ನವಾಗಲು ಆ ಗಣಗಳೆಲ್ಲಾ ವಿಷ್ಣುವನ್ನು ಪೂಜಿಸುತ್ತಾ ಇಂದ್ರನ ಪರಾಕ್ರಮವನ್ನೂ ಸಂತೋಷದಿಂದ ಪ್ರಶಂಸಿಸಿದರು. ಹೀಗೆ ಇಂದ್ರನು ದೈತ್ಯನಿಗ್ರಹ ಮಾಡಿದ ನಂತರ ಹರನ ಸಮೀಪಕ್ಕೆ ಬಂದು ನಿಂತನು.

ಇಲ್ಲಿಗೆ ಶ್ರೀ ವಾಮನಪುರಾಣದ ಭೈರವ ಪ್ರಾದುರ್ಭಾವದಲ್ಲಿ
ಜಂಭ ಕುಜಂಭರ ವಧವೆಂಬ ಅರವತ್ತೊಂಭತ್ತನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಕುಜಂಭನು ಹತನಾಗಿ ದೈತ್ಯಸೈನ್ಯಕ್ಕೆ ಪರಾಜಯವುಂಟಾದ ನಂತರ ಅಂಧಕನು ಶುಕ್ರಾಚಾರ್ಯರಲ್ಲಿ ಶರಣಾಗತನಾಗಿ ಪೂಜ್ಯರೇ, ನಿಮ್ಮ ಆಶ್ರಯದಿಂದ ನಾವು ದೇವತೆಗಳೆಲ್ಲರನ್ನೂ ಪೀಡಿಸುತ್ತ ವಿಜಯಶಾಲಿಗಳಾಗಿದ್ದೆವು. ಈಗ ನಮ್ಮ ಈ ಸೈನ್ಯವು ಪರಾಜಯ ಹೊಂದಿ ದುಃಖಪಡುತ್ತಿರುವುದನ್ನು ನೋಡಿರಿ. ಇತರರಿಗೆ ತಿಳಿಯದ ಯಾವುದಾದರೊಂದು ಉಪಾಯದಿಂದ ನಮಗೆ ಜಯವುಂಟಾಗುವಂತೆ ತಾವು ಮಾಡಬೇಕು ಎಂದು ಪ್ರಾರ್ಥಿಸಲು ಶುಕ್ರಾಚಾರ್ಯನು ಹಾಗೆಯೇ ಆಗಲೆಂದು ಒಪ್ಪಿ ಅವರ ಹಿತಕ್ಕಾಗಿ ಸಂಜೀವಿನೀ ವಿದ್ಯೆಯನ್ನು ಜಪಿಸಿ ಅದರ ಸಿದ್ಧಿಯಿಂದ ಯುದ್ಧದಲ್ಲಿ ಹತರಾಗಿದ್ದ ದಾನವರನ್ನೆಲ್ಲಾ ಬದುಕಿಸಿದನೆಂದು ಹೇಳಲಾಯಿತು. ಅನಂತರ ಕುಜಂಭಾದಿಗಳೆಲ್ಲರೂ ಎದ್ದು ಯುದ್ಧಕ್ಕೆ ನಿಲ್ಲಲು ಇದನ್ನು ತಿಳಿದ ನಂದಿಯು ಶಂಕರನಲ್ಲಿ ಈ ವಿಚಾರವನ್ನು ಅರಿಕೆಮಾಡಲು ಶಂಕರನು ಆ ಶುಕ್ರಾಚಾರ್ಯನನ್ನು ಹಿಡಿದು ತರುವಂತೆ ನಂದಿಗೆ ಆಜ್ಞೆಮಾಡಲು ನಂದಿಯು ಬಹು ಸಾಹಸದಿಂದ ಶತ್ರು

ಸೈನ್ಯಕ್ಕೆ ನುಗ್ಗಿ ಇಂದ್ರಾದಿಗಳ ಸಹಾಯದಿಂದ ಸಂಕುಲವಾದ ಯುದ್ಧ ಭೂಮಿಯಲ್ಲಿ ಶುಕ್ರನನ್ನು ಹಿಡಿದು ಶಂಕರನ ಸಮೀಪಕ್ಕೆ ತಂದನೆಂದೂ ಶಂಕರನು ಆ ಶುಕ್ರನನ್ನು ನುಂಗಲು ಅವನ ಜಠರದಲ್ಲಿ ಬಿದ್ದ ಶುಕ್ರನು ಶಂಕರನನ್ನು ಸ್ತೋತ್ರಮಾಡಿ ಅವನ ಅನುಗ್ರಹದಿಂದ ಅವನ ಜಠರದಲ್ಲಿ ಎಲ್ಲಾ ಲೋಕಗಳನ್ನೂ ನೋಡಿ ಪುನಃ ಅವನನ್ನು ಸ್ತುತಿಸಿ ಅವನ ಅನುಗ್ರಹದಿಂದ ಶಿಶ್ನದಿಂದ ಹೊರಗೆ ಬಂದು ಶುಕ್ರನೆಂದು ಪ್ರಸಿದ್ಧಿ ಪಡೆದನೆಂದೂ ಹೇಳಲಾಯಿತು. ಹಾಗೆ ಬಿಡುಗಡೆ ಹೊಂದಿದ ಶುಕ್ರನು ಪುನಃ ದೈತ್ಯಸೇನೆಯಲ್ಲಿ ಬಂದು ಸೇರಿದೊಡನೆಯೇ ದೈತ್ಯರಿಗೂ ದೇವತೆಗಳಿಗೂ ಬಲವಾದ ದ್ವಂದ್ವಯುದ್ಧವು ಪ್ರಾರಂಭವಾಗಲು ಯುದ್ಧದಲ್ಲಿ ಭಾಗವಹಿಸಿದ್ದ ವಿಷ್ಣುವಿನ ದಯೆಯಿಂದ ಅವನ ಹಸ್ತಕಮಲದ ದಿವ್ಯತೀರ್ಥದ ಸಂಸರ್ಗದಿಂದ ದೇವತೆಗಳೆಲ್ಲರೂ ಮೇಲೆ ಎದ್ದು ಬಲವಾಗಿ ಹೋರಾಡಲಾರಂಭಿಸಿದರೆಂದೂ ಹೇಳಲಾಯಿತು. ಆ ಸಮಯದಕ್ಕೆ ಸರಿಯಾಗಿ ಹರನ ಸಂಧ್ಯಾನುಷ್ಠಾನವೂ ನರ್ತನವೂ ಮುಗಿಯಲು ಪುನಃ ಯುದ್ಧಕ್ಕೆ ಸಿದ್ಧರಾದ ದೇವತೆಗಳಿಂದ ದಾನವರಿಗೆ ಬಹಳ ಪರಾಭವವುಂಟಾಯಿ ತೆಂದೂ ಹೇಳಲಾಯಿತು. ಆಗ ಅಂಧಕನು ಸುಂದನನ್ನು ಬರಮಾಡಿಕೊಂಡು ಮಾಯಾ ಬಲದಿಂದ ಪಾರ್ವತಿಯನ್ನು ವಶಪಡಿಸಿಕೊಂಡಾದರೂ ವಿಜಯವನ್ನು ಗಳಿಸುವ ಉದ್ದೇಶದಿಂದ ಆಲೋಚನೆಮಾಡಿ ನಂದಿಯ ರೂಪವನ್ನು ಹೊಂದಿದ ಸುಂದನೊಡನೆ ತಾನೂ ಶಂಕರರೂಪವನ್ನು ಹೊಂದಿ ಮಂದರಪರ್ವತಕ್ಕೆ ಹೋಗಿ ಒಳಗೆ ಪ್ರವೇಶಿಸಿದ ನೆಂದೂ ಆಗ ಪಾರ್ವತಿಯೂ ಮೋಸಕ್ಕೆ ಒಳಗಾಗಿ ಶರಪ್ರಹಾರದಿಂದ ಕೂಡಿದ ಶಂಕರ ರೂಪಧಾರಿಯಾದ ಅಂಧಕನ ಶರೀರವನ್ನು ನೋಡಿ ಬಾಣಾಗ್ರದಿಂದ ವ್ರಣಚಿಕಿತ್ಸೆಗಾಗಿ ಪ್ರಯತ್ನಿಸಿದಾಗ ಸಮೀಪದಲ್ಲಿ ನಿಂತ ಈ ದಾನವ ಯುಗ್ಮವನ್ನು ನೋಡಿ ಭಯದಿಂದ ಒಳಕ್ಕೆ ಪಲಾಯನಮಾಡಿದಳೆಂದೂ ಹೇಳಲಾಯಿತು. ಅಲ್ಲಿಯೂ ಅನುಸರಿಸಿ ಓಡಿಬಂದ ಅಂಧಕನಿಂದ ಪಾರಾಗಲು ಪಾರ್ವತಿಯು ಹೊರಗಿನ ಉದ್ಯಾನಕ್ಕೆ ಓಡಿ ಶ್ವೇತಾರ್ಕಕುಸುಮದಲ್ಲಿ ಮರೆಯಾಗಲು ಅವಳನ್ನು ನೋಡಲಾಗದೆ ನಿರಾಶೆಯಿಂದ ಅಂಧಕನು ಸುಂದನೊಡನೆ ಹಿಂದೆ ತಿರುಗಿಬಂದು ಯುದ್ಧಭೂಮಿಯನ್ನು ಸೇರಿದನೆಂದೂ ಹೇಳಲಾಯಿತು. ಅನಂತರ ದೈತ್ಯರು ಭಯಂಕರವಾದ ಮಹಾಯುದ್ಧವನ್ನು ಪ್ರಾರಂಭಿಸಲು ದೈತ್ಯಾರಿಯಾದ ಮಹಾವಿಷ್ಣುವಿನ ಅಪಾರವಾದ ಸಾಮರ್ಥ್ಯದಿಂದಲೂ ಅವನ ಪದ್ಮದ ದಿವ್ಯತೀರ್ಥದಿಂದಲೂ ದ್ವಿಗುಣರಾದ ಪ್ರಮಥರು ಪುನಃ ಯುದ್ಧ ಮಾಡಲುಪಕ್ರಮಿಸಿದರೆಂದೂ ಯುದ್ಧದಲ್ಲಿ ತೊಡಗಿದ ಹರಿ ಬ್ರಹ್ಮರುಗಳನ್ನು ನೋಡಿ ಇಂದ್ರನೂ ಯುದ್ಧಕ್ಕೆ ಬಂದು ನಿಲ್ಲಲು ಅವನನ್ನು ನೋಡಿ ಬಲನೆಂಬ ದಾನವನು ಇಂದ್ರನನ್ನು ಎದುರಿಸಲು ಬರುತ್ತಿರುವಾಗ ಇಂದ್ರನು ಆ ಬಲಾಸುರನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಲು ಆ ವಜ್ರವೂ ಚೂರುಚೂರಾಗಿ ಒಡೆದು ಹೋಗಲು

ಇಂದ್ರನೂ ವಿಮುಖನಾದನೆಂದೂ, ಆಗ ಜಂಭನ ಅಪಹಾಸಕ್ಕೆ ಗುರಿಯಾದ ಇಂದ್ರನು ವಿಷ್ಣುವಿನಲ್ಲಿ ಶರಣಾಗತನಾಗಿ ಆಯುಧವನ್ನು ಯಾಚಿಸಲು ವಿಷ್ಣುವು ವಜ್ರವನ್ನು ತ್ಯಜಿಸಿ ಅಗ್ನಿಯಲ್ಲಿ ಪ್ರಾರ್ಥಿಸಿ ಆಯುಧವನ್ನು ಹೊಂದು ಎಂದು ಆ ಇಂದ್ರನಿಗೆ ಆಜ್ಞಾಪಿಸಿದನೆಂದೂ ಅದೇ ಪ್ರಕಾರ ಇಂದ್ರನು ಅಗ್ನಿಯನ್ನು ಪ್ರಾರ್ಥಿಸಿ ಅದ್ಭುತವಾದ ಶಕ್ತಿಯನ್ನು ಹೊಂದಿದನೆಂದೂ ಹೇಳಲಾಯಿತು. ದಿವ್ಯಾಸ್ತ್ರಬಲದಿಂದ ಯುದ್ಧಕ್ಕೆ ಬಂದಾಗ ಇಂದ್ರನ ವಾಹನವಾದ ಗಜವನ್ನು ಜಂಭನು ಮುಷ್ಟಿಪ್ರಹಾರದಿಂದ ನಾಶ ಮಾಡಲು ಇಂದ್ರನು ವಾಹನವಿಲ್ಲದೆ ಭೂಮಿಯಲ್ಲಿ ಬಂದು ನಿಂತನು. ಆಗ ಆಕಾಶ ದಲ್ಲಿದ್ದ ಸಿದ್ಧಚಾರಣಾದಿಗಳು ಇಂದ್ರನನ್ನು ತಡೆದು ಅವನಿಗೆ ಲಕ್ಷಣೋಪೇತವಾದ ಜಗದ್ರಥವನ್ನು ಒದಗಿಸಲು ಸಾರಥಿ ಇಲ್ಲದ ಆ ರಥದಿಂದ ಪ್ರಯೋಜನವಿಲ್ಲವೆಂದು ಹೇಳಿ ಇಂದ್ರನು ಪುನಃ ಭೂಮಿಯನ್ನೇ ಆಶ್ರಯಿಸಿದನು. ಆಗ ಭೂಮಿಯು ನಡುಗಿತು. ಆ ಸಮಯದಲ್ಲಿ ಭಾರ್ಗಯು ಹೇಳಿದ ದೈವಜ್ಞವಚನದಂತೆ ಶಮೀಕನು ತನ್ನ ಪುತ್ರನನ್ನು ಹೊರಗೆ ಎಸೆಯಲು ಆ ಶಿಶುವು ದ್ವಿಗುಣವಾಯಿತು. ಆ ಎರಡನೆಯ ಮಗುವು ಗಂಧರ್ವಶಕ್ತಿಯಿಂದೊಡಗೂಡಿ ಇಂದ್ರನ ಸಾರಥ್ಯವನ್ನು ಸ್ವೀಕರಿಸಿತೆಂದೂ ಅವನೇ ಮಾತಲಿ ಎಂದು ಪ್ರಸಿದ್ಧನಾದನೆಂದೂ ಹೇಳಲಾಯಿತು. ಅನಂತರ ಆ ಸಾರಥಿ ಯೊಡನೆ ರಥವನ್ನೇರಿ ಮಂದರಪರ್ವತಕ್ಕೆ ಹೋಗಿ ಅಲ್ಲಿದ್ದ ಧನುಸ್ಸನ್ನು ಸ್ವೀಕರಿಸಿ ಇಂದ್ರನು ತ್ರಿಮೂರ್ತಿಗಳನ್ನು ನಮಸ್ಕರಿಸಿ ದಾನವ ಸೈನ್ಯವನ್ನೆಲ್ಲಾ ವ್ಯಾಕುಲ ಪಡಿಸಿದನು. ಆಗ ಕುಜಂಭ, ಜಂಭ ಇವರಿಬ್ಬರೂ ಇಂದ್ರನನ್ನು ಎದುರಿಸಲು ಬಂದರು. ವಿಷ್ಣುವು ಕುಜಂಭನನ್ನು ಚಕ್ರಾಯುಧದಿಂದ ನಾಶಮಾಡಲು ಜಂಭನು ಕ್ರೋಧದಿಂದ ಇಂದ್ರನನ್ನು ಎದುರಿಸಲು ಬಂದನು. ಆಗ ಇಂದ್ರನ ಶಕ್ತಿಯಿಂದ ಜಂಭನೂ ಹತನಾಗಿ ಬೀಳಲು ದಾನವ ಸೈನ್ಯವೆಲ್ಲವೂ ಭಯದಿಂದ ಓಡಿದವೆಂದೂ, ಶತ್ರುವಿಜಯದಿಂದ ಸಂತುಷ್ಟನಾದ ಇಂದ್ರನು ಗಣಗಳಿಂದ ಹೊಗಳಲ್ಪಡುತ್ತಾ ಶಂಕರನ ಸಮೀಪಕ್ಕೆ ಬಂದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಸಪ್ತತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ತಸ್ಮಿಂಸ್ತದಾ ದೈತ್ಯಬಲೇ ಚ ಭಗ್ನೇ
ಶಕ್ರೋಽಬ್ರವೀದಂಧಕಮಾಸುರೇಂದ್ರಂ ।
ಏಹ್ಯೇಹಿ ವೀರಾದ್ಯ ಗತಾ ಮಹಾಸುರಾ
ಯೋತ್ಸ್ಯಾಮ ಭೂಯೋ ಹರಮೇತ್ಯ ಶೈಲಂ ॥ ೧ ॥

ತಮುವಾಚಾಂಧಕೋ ಬ್ರಹ್ಮನ್ ಸಮ್ಯಕ್ ಭವತೋದಿತಂ ।
ರಣಾನ್ನೈವಾಪಯಾಸ್ಯಾಮಿ ಕುಲಂ ವ್ಯಪದಿಶನ್ ಸ್ವಯಂ ॥ ೨ ॥

ಪಶ್ಯ ತ್ವಂ ದ್ವಿಜಶಾರ್ದೂಲ ಮಮ ವೀರ್ಯಂ ಸುದುರ್ಧರಂ ।
ದೇವದಾನವಗಂಧರ್ವಾನ್ ಜೇಷ್ಯೇ ಸೇಂದ್ರಮಹೇಶ್ವರಾನ್ ॥ ೩ ॥

ಎಪ್ಪತ್ತನೆಯ ಅಧ್ಯಾಯವು

೧-೪ ಆ ದೈತ್ಯಬಲವೆಲ್ಲವೂ ನಷ್ಟವಾದನಂತರ ಇಂದ್ರನು ಅಂಧಕನನ್ನು ಕುರಿತು ಎಲೈ ವೀರನೇ ಬಾ. ಮಹಾದಾನವರೆಲ್ಲರೂ ಹೋದರು. ನೀನು ಉಳಿದಿರುವೆ. ಪುನಃ ಮಂದರಕ್ಕೇ ಹೋಗಿ ಹರನೊಡನೆ ಯುದ್ಧಮಾಡೋಣ ಬಾ ಎಂದು ಕರೆಯಲು ಅಂಧಕನು ಅವನನ್ನು ಕುರಿತು ಎಲೈ ಬ್ರಾಹ್ಮಣೋತ್ತಮನೇ, ನೀನು ಹೇಳಿದುದು ಸತ್ಯವಾದದ್ದು. ಯುದ್ಧಕ್ಕೆ ಬಂದು ನಿಂತ ನಾನು ನನ್ನ ವಂಶದ ಗೌರವಕ್ಕೆ ತಕ್ಕಂತೆ ಯುದ್ಧದಿಂದ ಪರಾಙ್ಮುಖನಾಗಿ ಹಿಂದೆ ಬರುವದಿಲ್ಲ. ಅಂತಹ ನನ್ನ ಪರಾಕ್ರಮವನ್ನಾದರೂ ನೋಡು. ಇಂದ್ರ ಮಹೇಶ್ವರರನ್ನೂ ದೇವದಾನವ ಗಂಧರ್ವರನ್ನೂ

ಇತ್ಯೇವಮುಕ್ತ್ವಾ ವಚನಂ ಹಿರಣ್ಯಾಕ್ಷಸುತೋಂಧಕಃ ।
ಸಮಾಶ್ವಾಸ್ಯಾಬ್ರವೀತ್ಕ್ರುದ್ಧಃ ಸಾರಥಿಂ ಮಧುರಾಕ್ಷರಂ ॥ ೪ ॥

ಸಾರಥೆ ವಾಹಯ ರಥಂ ಹರಾಭ್ಯಾಶಂ ಮಹಾಬಲ ।
ಯಾವನ್ನಿಹನ್ಮಿ ಬಾಣೋಘೈಃ ಪ್ರಮಥಾನಥ ವಾಹಿನೀಂ ॥ ೫ ॥

ಇತ್ಯಂಧಕವಚಃ ಶ್ರುತ್ವಾ ಸಾರಥಿಸ್ತುರಗಾಂಸ್ತದಾ ।
ಕೃಷ್ಣವರ್ಣಾನ್ಮಹಾಕಾಯಾನ್ ಪ್ರೇಷಯಾಮಾಸ ತಂ ಮುನೆ ॥ ೬ ॥

ತೇ ಯತ್ನತೋಽಪಿ ತುರಗಾ ಪ್ರೇರ್ಯಮಾಣಾ ಹರಂ ಪ್ರತಿ ।
ಜಘನೇಷ್ವವಸೀದಂತಃ ಕೃಚ್ಛ್ರೇಣೋಹುಶ್ಚ ತಂ ರಥಂ ॥ ೭ ॥

ವಹಂತಸ್ತುರಗಾ ದೈತ್ಯಂ ಪ್ರಾಪ್ತಾಃ ಪ್ರಮಥವಾಹಿನೀಂ ।
*ಸಂವತ್ಸರೇಣ ಸಾಗ್ರೇಣ ವಾಯುವೇಗಸಮಾ ಅಪಿ ॥ ೮ ॥

ಜಯಿಸುವೆನು ಎಂದು ಹೇಳಿ ಆ ಅಂಧಕನು ಸಾರಥಿಯನ್ನು ಸಮಾಧಾನಪಡಿಸಿ ಮೃದುವಾದ ಮಾತಿನಿಂದ ಹೀಗೆಂದನು.

೫-೮. ಎಲೈ ಶೂರಸಾರಥಿಯೇ ರಥವನ್ನು ಹರನ ಸಮೀಪಕ್ಕೆ ಬಿಡು. ಅಲ್ಲಿ ನನ್ನ ಬಾಣಗಳಿಂದ ಪ್ರಮಥರನ್ನೂ ಆ ಸೈನ್ಯವನ್ನೂ ನಾಶಪಡಿಸುವೆನು. ಅಂಧಕನ ಈ ಮಾತನ್ನು ಕೇಳಿದೊಡನೆಯೇ ಅವನ ಸಾರಥಿಯು ಎತ್ತರವಾಗಿಯೂ ಕಪ್ಪಾಗಿಯೂ ಇರುವ ಮಹಾಕಾಯವುಳ್ಳ ಕುದುರೆಗಳಿಂದ ಕೂಡಿದ ಆ ರಥವನ್ನು ಹರನ ಸಮೀಪಕ್ಕೆ ನಡೆಯಲು ಪ್ರೇರಿಸಿದನು. ಪ್ರಯತ್ನದಿಂದ ಪ್ರೇರಿಸಲ್ಪಟ್ಟರೂ ಆ ಕುದುರೆಗಳು ಹರನ ಸಮೀಪಕ್ಕೆ ಹೋಗಲು ಅನುತ್ಸಾಹದಿಂದ ಕುಸಿದುಹೋದ ಬೆನ್ನುನಡುವುಳ್ಳವು ಗಳಾಗಿ ಕ್ಲೇಶದಿಂದ ರಥವನ್ನು ಹೊತ್ತು ವಿಲಂಬದಿಂದ ನಡೆದವು. ಹಾಗೆ ದೈತ್ಯನಾದ ಅಂಧಕನನ್ನು ವಹಿಸಿಕೊಂಡು ಹೊರಟ ಕುದುರೆಗಳು ವಾಯುವಿನಂತೆ ವೇಗಶಾಲಿ ಗಳಾಗಿದ್ದರೂ ಒಂದು ದಿನಕ್ಕಿಂತಲೂ ಹೆಚ್ಚಾದ ಕಾಲಕ್ಕೆ ಪ್ರಮಥ ಸೈನ್ಯಕ್ಕೆ ಹೋಗಿ ಸೇರಿದವು.

---

* ಇಲ್ಲಿ ಸಂವತ್ಸರಪದವು ದಿನವಾಚಕವೆಂದು ಟಿಪ್ಪಣೀಕಾರರ ಅಭಿಪ್ರಾಯ.

ತತಃ ಕಾರ್ಮುಕಮಾನಮ್ಯ ಬಾಲೇಂದುಸದೃಶಂ ದೃಢಂ ।
ನಾರಾಚೈಃ ಸೂದಯಾಮಾಸ ಸೇಂದ್ರೋಪೇಂದ್ರಮಹೇಶ್ವರಾನ್ ॥ ೯ ॥

ಬಾಣೈಃ ಛಾದಿತಮಾಲೋಕ್ಯೈವ ಬಲಂ ತ್ರೈಲೋಕ್ಯರಕ್ಷಿತಾ ।
ಸುರಾನ್ ಪ್ರೋವಾಚ ಭಗವಾನ್ ಚಕ್ರಪಾಣಿರ್ಜನಾರ್ದನಃ ॥ ೧೦ ॥

ವಿಷ್ಣುರುವಾಚ

ಕಿಂ ತಿಷ್ಠಧ್ವಂ ಸುರಶ್ರೇಷ್ಠಾ *ಹತೇನಾನೇನ ಶೋಭನಂ ।
ತಸ್ಮಾದ್ಯತ್ತಾ ಭವಂತ್ವದ್ಯ ತ್ವರಿತಾ ವಿಜಯೇಪ್ಸವಃ ॥ ೧೧ ॥

ಶಾಸ್ಯಂತಾಮಸ್ಯ ತುರಗಾಃ ಸಮಂ ರಥಕುಟುಂಬಿನಾ ।
ಭಜ್ಯತಾಂ ಸ್ಯಂದನಶ್ಚಾಯಂ ವಿರಥಃ ಕ್ರಿಯತಾಂ ರಿಪುಃ ॥ ೧೨ ॥

ವಿರಥಂತು ಕೃತಂ ಪಶ್ಚಾದೇನಂ ಧಕ್ಷ್ಯತಿ ಶಂಕರಃ ।
ನೋಪೇಕ್ಷ್ಯಃ ಶತ್ರುರುದ್ರಿಕ್ತೋ ದೇವಾಚಾರ್ಯೇಣ ಧೀಮತಾ ॥ ೧೩ ॥

ಇತ್ಯೇವಮುಕ್ತಾಃ ಪ್ರಮಥಾಃ ವಾಸುದೇವೇನ ಸಾಮರಾಃ ।
ಚಕ್ರುರ್ವೇಗಂ ಸಹೇಂದ್ರೇಣ ಸಮಂ ಚಕ್ರಧರೇಣ ಚ ॥ ೧೪ ॥

೯-೧೨. ಅನಂತರ ಬಾಲಚಂದ್ರನಂತೆ ವಕ್ರವಾದ ಧನುಸ್ಸನ್ನು ಮತ್ತೂ ಬಗ್ಗಿಸಿ ಅದರಿಂದ ಹೊರಟ ತೀಕ್ಷ್ಣವಾದ ಬಾಣಗಳಿಂದ ಇಂದ್ರ, ವಿಷ್ಣು, ಮಹೇಶ್ವರ ರೆಲ್ಲರನ್ನೂ ಬಹಳವಾಗಿ ಪ್ರಹರಿಸಿದನು. ಬಾಣಗಳಿಂದ ಸೈನ್ಯವೆಲ್ಲವೂ ಆಚ್ಛಾದಿತ ವಾದುದನ್ನು ನೋಡಿ ಲೋಕರಕ್ಷಕನಾಗಿಯೂ ಚಕ್ರಧಾರಿಯಾಗಿಯೂ ಇರುವ ವಿಷ್ಣುವು ದೇವತೆಗಳನ್ನು ಕುರಿತು ಸುರೋತ್ತಮರೇ ಏಕೆ ಹೀಗೆ ಕುಳಿತಿರುವಿರಿ. ಈಗ ನೀವು ಇಲ್ಲಿ ಹನನ ಹೊಂದುವುದೂ ಒಳ್ಳೆಯದೇ ಆದುದರಿಂದ ನಿರ್ಭಯರಾಗಿ ವಿಜಯೇಚ್ಛೆಯಿಂದ ಯುದ್ಧಕ್ಕೆ ಹೊರಡಿರಿ. ಇವನ ರಥಾಶ್ವಗಳನ್ನು ಸಾರಥಿಯೊಡನೆ ಶಿಕ್ಷಿಸಿರಿ. ಇವನ ರಥವನ್ನು ಮುರಿದು ವಿರಥನನ್ನಾಗಿ ಮಾಡಿರಿ.

೧೩-೧೪. ಇವನನ್ನು ವಿರಥನನ್ನಾಗಿ ಮಾಡಿದನಂತರ ಶಂಕರನೇ ಇವನನ್ನು ದಹಿಸುತ್ತಾನೆ. ಈ ರೀತಿ ಕೊಬ್ಬಿರುವ ಶತ್ರುವನ್ನು ದೇವಾಚಾರ್ಯನೂ ಉಪೇಕ್ಷಿಸ ಕೂಡದು ಎಂದು ಬೋಧಿಸಲಾಗಿ ಪ್ರಮಥರೆಲ್ಲರೂ ದೇವತೆಗಳೊಡನೆ ಸೇರಿ ಹಾಗೂ

---

* ಇಲ್ಲಿ ಇವನು ಹತನಾದಲ್ಲಿ ನಿಮಗೆ ಶುಭವುಂಟು ಎಂದೂ ಅರ್ಥಹೇಳಬಹುದು.

ತುರಗಾಣಾಂ ಸಹಸ್ರಂ ತು ಮೇಘಾಭಾನಾಂ ಜನಾರ್ದನಃ ।
ನಿಮಿಷಾಂತರಮಾತ್ರೇಣ ಗದಯಾ ಸ ವ್ಯಪೋಥಯತ್ ॥ ೧೫ ॥

ಸ ಮಹಾಸ್ಯಂದನಾತ್ಸ್ಕಂದಃ ಪ್ರಗೃಹ್ಯ ರಥಸಾರಥಿಂ ।
ಶಕ್ತ್ಯಾ ಬಿಭೇದ ಹೃದಯೆ ಗತಾಸುರ್ವ್ಯಸೃಜದ್ಭುವಿ ॥ ೧೬ ॥

ವಿನಾಯಕಾದ್ಯಾಃ ಪ್ರಮಥಾಃ ಸಮಂ ಶಕ್ರೇಣ ದೈವತೈಃ ।
ಸಧ್ವಜಾಕ್ಷಂ ರಥಂ ತೂರ್ಣಂ ಅಭಂಜಂತ ತಪೋಧನಾಃ ॥ ೧೭ ॥

ಸಹಸಾ ಸ ಮಹಾತೇಜಾ ವಿರಥಸ್ತ್ಯಕ್ತಕಾರ್ಮುಕಃ ।
ಗದಾಮಾದಾಯ ಬಲವಾನಭಿದುದ್ರಾವ ದೇವತಾಃ ॥ ೧೮ ॥

ತತಃ ಸೋಽಷ್ಟೌ ಕ್ರಮಾರ್ಗ ಗತ್ವಾ ಮೇಘಗಂಭೀರಯಾ ಗಿರಾ ।
ಉವಾಚ ವಾಕ್ಯಂ ದೈತ್ಯೇಂದ್ರೋ ಮಹಾದೇವಂ ಸಹೇತುಮತ್ ॥ ೧೯ ॥

ಇಂದ್ರನಿಂದಲೂ ವಿಷ್ಣುವಿನಿಂದಲೂ ಸಹಕರಿಸಲ್ಪಟ್ಟು ವೇಗದಿಂದ ಯುದ್ಧಾಸಕ್ತ ರಾದರು. ವಿಷ್ಣುವು ಗದಾಧಾರಿಯಾಗಿ ನಿಮಿಷಾಂತರ ಮಾತ್ರದಲ್ಲಿ ಮೇಘಗಳಂತೆ ಮಹಾಕಾಯಗಳಾಗಿಯೂ ಕಪ್ಪಗೂ ಇದ್ದ ಸಾವಿರಾರು ಕುದುರೆಗಳನ್ನು ನಾಶಪಡಿಸಿ ದನು. ಷಣ್ಮುಖನು ಅಂಧಕನ ಮಹಾರಥದಿಂದ ಸಾರಥಿಯನ್ನು ಹಿಡಿದು ಎಳೆದು ಶಕ್ತ್ಯಾಯುಧದಿಂದ ಹೃದಯವನ್ನು ಭೇದಿಸಲು ಒಡನೆಯೇ ಅವನು ಗತಪ್ರಾಣನಾಗಿ ಕೆಳಗೆ ಬಿದ್ದನು.

೧೭-೧೮. ವಿನಾಯಕನೇ ಮೊದಲಾದ ಪ್ರಮಥರೆಲ್ಲರೂ ಇಂದ್ರನೊಡನೆಯೂ ದೇವತೆಗಳೊಡನೆಯೂ ಸೇರಿ ಅಂಧಕನ ರಥವನ್ನು ಧ್ವಜಅಚ್ಚು ಇವುಗಳೊಡನೆ ಮುರಿದು ಹಾಕಿದರು. ಮಹಾತೇಜಸ್ವಿಯಾದ ಆ ಅಂಧಕನೂ ಸಹ ರಥವು ನಾಶ ವಾದೊಡನೆಯೇ ಧನುಸ್ಸನ್ನು ಬಿಸುಟು. ಗದಾಧಾರಿಯಾಗಿ ವೇಗದಿಂದ ದೇವತೆಗಳನ್ನು ಓಡಿಸಿಕೊಂಡು ಬಂದನು.

೧೯-೨೦. ಅನಂತರ ಏಳೆಂಟು ಹೆಜ್ಜೆ ಮುಂದೆ ಬಂದು ಮೇಘದಂತೆ ಗಂಭೀರ ಧ್ವನಿಯಿಂದ ದೈತ್ಯರಾಜನಾದ ಅಂಧಕನು ಶಂಕರನನ್ನು ಕುರಿತು ಎಲೈ ಭಿಕ್ಷುವೇ ನೀನು ಭಿಕ್ಷುವಾಗಿದ್ದರೂ ಸೈನ್ಯಸಮೇತನಾಗಿ ನಿಂತಿದ್ದೀಯೆ, ನಾನು ವೀರನಾದರೂ ಈಗ ಅಸಹಾಯನಾಗಿ ನಿಂತಿರುವೆನು, ಆದರೂ ನಿನ್ನನ್ನು ಜಯಿಸಿಯೇ ಜಯಿಸುವೆನು ಈಗ ನನ್ನ ಪರಾಕ್ರಮವನ್ನು ನೋಡು, ಎಂದು ಯುಕ್ತಿಯುಕ್ತವಾದ ತನ್ನ ಪೌರುಷ

ಭಿಕ್ಷೋ ಭವಾನ್ ಸಹಾನೀಕಸ್ತ್ವಸಹಾಯೋಽಸ್ಮಿ ಸಾಂಪ್ರತಂ ।
ತಥಾಪಿ ತ್ವಾಂ ವಿಜೇಷ್ಯಾಮಿ ಪಶ್ಯ ಮೇಽದ್ಯ ಪರಾಕ್ರಮಂ ॥ ೨೦ ॥

ತದ್ವಾಕ್ಯಂ ಶಂಕರಃ ಶ್ರುತ್ವಾ ಸೇಂದ್ರಾನ್ ಸುರಗಣಾನ್ಗಣಾನ್ ।
ಬ್ರಹ್ಮಣಾ ಸಹಿತಾನ್ ಸರ್ವಾನ್ ಸ್ವಶರೀರೆ ನ್ಯವೇಶಯತ್ ॥ ೨೧ ॥

ಶರೀರಸ್ಥಾಂಸ್ತಾನ್ಪ್ರಮಥಾನ್ಕೃತ್ವಾ ದೇವಾಂಶ್ಚ ಶಂಕರಃ ।
ಪ್ರಾಹ ಏಹ್ಯೇಹಿ ದುಷ್ಟಾತ್ಮನ್ ಅಹಮೇಕೋಽಪಿ ಸಂಸ್ಥಿತಃ ॥ ೨೨ ॥

ತದ್ದೃಷ್ಟ್ವಾ ಮಹದಾಶ್ಚರ್ಯಂ ಸರ್ವಾಮರಗಣಕ್ಷಯಂ ।
ದೈತ್ಯಃ ಶಂಕರಮಭ್ಯಾಗಾದ್ಗದಾಮಾದಾಯ ವೇಗವಾನ್ ॥ ೨೩ ॥

ತಮಾಪತಂತಂ ಭಗವಾನ್ ದೃಷ್ಟ್ವಾ ತ್ಯಕ್ತ್ವಾ ವೃಷೋತ್ತಮಂ ।
ಶೂಲಪಾಣಿರ್ಗಿರಿಪ್ರಸ್ಥೇ ಪದಾತಿಃ ಪ್ರತ್ಯತಿಷ್ಠತ ॥ ೨೪ ॥

ವಚನವನ್ನು ಉದ್ಘೋಷಿಸಿದನು. (ಇಲ್ಲಿ ಭಿಕ್ಷೋ ಎಂಬ ಉಪಹಾಸ ಸಂಬುದ್ಧಿಯಿಂದ ಭಿಕ್ಷುಕನಾದ ನಿನಗೆ ವಿಜಯಾಕಾಂಕ್ಷೆ ಇರಲು.ಕಾರಣವೂ ಇಲ್ಲ ವಿಜಯದ ಫಲದಲ್ಲಿ ಆಶೆ ಇರಲೂ ಕಾರಣವಿಲ್ಲ. ಅಂತಹ ನಿನಗೆ ವಿಧಿವೈಷಮ್ಯದಿಂದ ಸೇನಾಸಾಮಗ್ರಿಯೊದಗಿದೆ. ವೀರನಾಗಿಯೂ ವಿಜಯಫಲವನ್ನು ಭೋಗಿಸಲು ಅರ್ಹನಾಗಿಯೂ ಇರುವ ನನಗೆ ವಿಜಯೇಚ್ಛೆಯು ನ್ಯಾಯವಾದದ್ದು ಆದರೆ ದುರದೃಷ್ಟದಿಂದ ಅಸಹಾಯನಾಗಿ ನಿಂತಿರುವೆನು. ಆದರೂ "ನ ತೇಜಃ ತೇಜಸ್ವೀ ಪ್ರಸೃತಮಪರೇಷಾಂ ವಿಷಹತೆ" ಎಂಬ ನ್ಯಾಯವನ್ನನುಸರಿಸಿ ಪರಾಕ್ರಮವನ್ನೇ ಪ್ರಕಾಶಪಡಿಸಲು ಸಿದ್ಧನಾಗಿರುವೆನೆಂದು ತಾತ್ಪರ್ಯ.)

೨೧-೨೪. ಆ ಮಾತನ್ನು ಕೇಳಿದೊಡನೆಯೇ ಶಂಕರನು ಬ್ರಹ್ಮೇಂದ್ರಾದಿಗಳೊಡನೆ ಎಲ್ಲಾ ದೇವತೆಗಳನ್ನೂ ತನ್ನ ಶರೀರದಲ್ಲಿಯೇ ಅಂತರ್ಭಾವಹೊಂದಿಸಿದನು. ಹಾಗೆ ಎಲ್ಲರನ್ನೂ ತನ್ನ ಶರೀರದಲ್ಲಿ ಅಡಗಿಸಿ, ಅಂಧಕನನ್ನು ಕುರಿತು ಎಲೈ ದುಷ್ಟಾತ್ಮನೇ ಈಗ ಬಾ, ನಾನೂ ಏಕಾಕಿಯಾಗಿ ಅಸಾಯನಾಗಿಯೇ ನಿಂತಿರುವೆನು ಎಂದನು. ಆಗ ಎಲ್ಲಾ ದೇವತೆಗಳೂ ಕ್ಷಯವಾದುದನ್ನು ನೋಡಿ ಅಂಧಕನು ಆಶ್ಚರ್ಯಪಟ್ಟು ಗದೆಯನ್ನು ಧರಿಸಿ ಶಂಕರನನ್ನು ಎದುರಿಸಲು ವೇಗದಿಂದ ಬಂದನು. ಹಾಗೆ ಬರುತ್ತಿರುವ ಅವನನ್ನು ನೋಡಿ ಶಂಕರನೂ ವಾಹನವಾದ ವೃಷಭವನ್ನು ಬಿಟ್ಟು ಪದಾತಿಯಾಗಿ ಶೂಲವನ್ನು ಧರಿಸಿ ಮಂದರದ ಪ್ರಸ್ಥಭೂಮಿಯಲ್ಲಿ ನಿಂತನು

ವೇಗೇನೈವಾಪತಂತಂ ಚ ಬಿಭೇದೋರಸಿ ಭೈರವಃ ।
ದಾರುಣಂ ಸುಮಹದ್ಯುದ್ಧಂ ಕೃತ್ವಾ ತ್ರೈಲೋಕ್ಯಭೀಷಣಃ ॥ ೨೫ ॥

ದಂಷ್ಟ್ರಾಕರಾಲಂ ರವಿಕೋಟಿಸನ್ನಿಭಂ
ಮೃಗಾರಿಚರ್ಮಾಭಿವೃತಂ ಜಟಾಧರಂ ।
ಭುಜಂಗಹಾರಂ ಮಲಪಂಕಧಾರಿಣಂ
ಶಾರ್ದೂಲಬಾಹುಂ ಶಿಖಿಲೋಚನಂ ಹರಂ ॥ ೨೬ ॥

ಏತಾದೃಶೇನ ರೂಪೇಣ ಭಗವಾನ್ ಭೂತಭಾವನಃ ।
ಬಿಭೇದ ಶತ್ರೂನ್ ಶೂಲೇನ ಶುಭದಃ ಶಾಶ್ವತಃ ಶಿವಃ ॥ ೨೭ ॥

ಸ ಶೂಲಂ ಭೈರವಂ ಗೃಹ್ಯ ಭಿನ್ನೇಽಪ್ಯುರಸಿ ದಾನವಃ ।
ವಿಜಹಾರಾತಿವೇಗೇನ ಕ್ರೋಶಮಾತ್ರಂ ಮಹಾಮುನೆ ॥ ೨೮ ॥

ತತಃ ಕಥಂಚಿದ್ಭಗವಾನ್ ಸಂಸ್ತಭ್ಯಾತ್ಮಾನಮಾತ್ಮನಾ ।
ತೂರ್ಣಮುತ್ಪಾಟಯಾಮಾಸ ಶೂಲೇನ ಸಗದಂ ರಿಪುಂ ॥ ೨೯ ॥

೨೫-೨೮. ವೇಗದಿಂದ ಬರುತ್ತಿರುವ ಆ ದಾನವನನ್ನು ಭೈರವಮೂರ್ತಿಯಾದ ಶಂಕರನು ಹೃದಯದಲ್ಲಿ ಭೇದಿಸಿದನು. ಅದಕ್ಕೆ ಮೊದಲು ಭಯಂಕರವಾದ ಮಹಾ ಯುದ್ಧವೂ ಅವರಿಗೆ ನಡೆಯಿತು. ಆಗ ಹರನು ಧರಿಸಿದ ಆ ಭೈರವರೂಪವು ಕೋರೆ ದಾಡೆಗಳಿಂದ ಭಯಂಕರವಾಗಿಯೂ ಕೋಟಿಸೂರ್ಯ ಸದೃಶವಾಗಿಯೂ ವ್ಯಾಘ್ರ ಚರ್ಮದಿಂದ ಕೂಡಿಯೂ ಜಟಾಧಾರಿಯಾಗಿಯೂ ಸರ್ಪಗಳ ಹಾರವನ್ನು ಧರಿಸಿಯೂ ಕಶ್ಮಲಪಂಕಧಾರಿಯಾಗಿಯೂ ಹುಲಿಯ ಕೈಯಿನಂತಹ ಬಾಹುಗಳುಳ್ಳದ್ದಾಗಿಯೂ ಅಗ್ನಿನೇತ್ರವಾಗಿಯೂ ಅದ್ಭುತವಾಗಿ ತೋರಿತು. ಇಂತಹ ರೂಪವನ್ನು ಧರಿಸಿದ್ದ ಶಾಶ್ವತನಾದ ಆ ಶಿವನು ಶೂಲಾಯುಧದಿಂದ ಶತ್ರುವಾದ ಅಂಧಕನನ್ನು ಭೇದಿಸಿದನು ಆಗ ದಾನವನು ತನ್ನ ಎದೆಯು ಭಿನ್ನವಾದರೂ ಹೆದರದೆ ಭಯಂಕರವಾದ ಆ ಶೂಲ ವನ್ನು ಹಾಗೆಯೇ ಹಿಡಿದುಕೊಂಡು ಒಂದು ಹರಿದಾರಿಯವರೆಗೂ ವೇಗದಿಂದ ವಿಹರಿಸತೊಡಗಿದನು.

೨೯-೩೧. ಅನಂತರ ದಯಾಳುವಾದ ಶಂಕರನು ತನ್ನಲ್ಲಿಯೇ ತಾನು ಸಮಾಧಾನಹೊಂದಿ ಶೂಲದಿಂದ ಪೀಡಿತನಾಗಿದ್ದ ಆ ಶತ್ರುವಿನ ಹೃದಯದಿಂದ

ದೈತ್ಯಾಧಿಪಸ್ತು ಸ ಗದಾಂ ಹರಮೂರ್ಧ್ನಿ ನ್ಯಪಾತಯತ್ ।
ಕರಾಭ್ಯಾಂ ಗೃಹ್ಯ ಶೂಲಂ ಚ ಸಮುತ್ಪತ್ಯಾಥ ದಾನವಃ ॥ ೩೦ ॥

ಸಂಸ್ಥಿತಶ್ಚ ಮಹಾಯೋಗೀ ಸತ್ವಾಧಾರಃ ಪ್ರಜಾಪತಿಃ ।
ಗದಾಪಾತಕ್ಷತಾದ್ಭೂರಿ ಮೂರ್ಧ್ನೋಽಸ್ಯಾಸೃಗಥಾಪತತ್ ॥ ೩೧ ॥

ಪೂರ್ವಧಾರಾಸಮುದ್ಭೂತೋ ಭೈರವೋಽಗ್ನಿಸಮಪ್ರಭಃ ।
ವಿದ್ಯಾರಾಜೇತಿ ವಿಖ್ಯಾತಃ ಪದ್ಮಮಾಲಾವಿಭೂಷಿತಃ ॥ ೩೨ ॥

ಅನ್ಯಸ್ಮಾದ್ದಕ್ಷಿಣಾಜ್ಜಾತೋ ಭೈರವಃ ಶೂಲಭೂಷಿತಃ ।
ರುದ್ರನಾಮ್ನಾತು ವಿಖ್ಯಾತಃ ಸರ್ವಲೋಕೈಸ್ತು ಪೂಜಿತಃ ॥ ೩೩ ॥

ಅನ್ಯರಕ್ತಾತ್ಸಮುದ್ಭೂತಂ ಭೈರವಾಣಾಂ ಚತುಷ್ಟಯಂ ।
ಚಂಡಾದ್ಯೇಕಕಪಾಲ್ಯಂತಂ ಖ್ಯಾತಂ ಭುವಿ ಯಥಾಬುಧೈಃ ॥ ೩೪ ॥

ಭೂಮಿಸ್ಥಾದ್ದಕ್ಷಿಣಾಜ್ಜಾತೋ ಭೈರವಃ ಶೂಲಭೂಷಿತಃ ।
ಖ್ಯಾತೋ ಲಲಿತರಾಜೇತಿ ಶೋಭಾಂಜನಸಮಪ್ರಭಃ ॥ ೩೫ ॥

ಶ್ರಮದಿಂದ ಶೂಲವನ್ನು ಜಾಗ್ರತೆಯಾಗಿ ಹೊರಗೆ ತೆಗೆದನು. ಆಗ ದೈತ್ಯನು ತನ್ನ ಗದೆಯನ್ನು ಹರನ ತಲೆಯ ಮೇಲೆ ಪ್ರಹರಿಸಿಯೇ ಬಿಟ್ಟನು. ಸತ್ವಾಧಾರನಾಗಿಯೂ ಮಹಾಯೋಗಿಯಾಗಿಯೂ ಇರುವ ಶಂಕರನು ಆ ಗದಾಪ್ರಹಾರಕ್ಕೆ ವಶನಾಗಿ ನಿಂತನು. ಆ ಗದೆಯ ಆಘಾತದಿಂದ ಅವನ ತಲೆಯಲ್ಲಿ ಹೆಚ್ಚಾಗಿ ರಕ್ತವು ಸುರಿಯಲಾರಂಭಿಸಿತು.

೩೨-೩೫. ಆ ರಕ್ತದ ಮೊದಲನೇ ಧಾರೆಯಿಂದ ಅಗ್ನಿಸದೃಶನಾದ ಭೈರವನು ಹುಟ್ಟಿದನು. ಅವನು ಪದ್ಮಮಾಲಾ ಭೂಷಿತನಾಗಿ ವಿದ್ಯಾರಾಜನೆಂಬ ಹೆಸರಿನಿಂದ ಪ್ರಖ್ಯಾತಿಗೆ ಬಂದನು. ಮತ್ತೊಂದು ರಕ್ತಧಾರೆಯಿಂದ ಶೂಲಾಯುಧಧಾರಿಯಾದ ಮತ್ತೊಬ್ಬ ಭೈರವನು ಹುಟ್ಟಿದನು. ಅವನೂ ಸರ್ವಪೂಜ್ಯನಾಗಿ ರುದ್ರನೆಂದು ಪ್ರಖ್ಯಾತನಾದನು. ಇತರ ರಕ್ತದಿಂದ ಚಂಡನೇ ಮೊದಲಾಗಿ ಏಕಕಪಾಲಿಪರ್ಯಂತ ವಾದ ನಾಲ್ಕು ಭೈರವರು ಉತ್ಪನ್ನರಾದರು. ಭೂಮಿಯಲ್ಲಿ ಬಿದ್ದ ರಕ್ತದಿಂದ ಶೂಲಾಯುಧ ಭೂಷಿತನಾದ ಮತ್ತೊಬ್ಬ ಭೈರವನುದಿಸಿದನು. ಕಾಡಿಗೆಯಂತೆ ಕಪ್ಪಾದ ಅವನೂ ಲಲಿತರಾಜನೆಂಬ ಹೆಸರಿನಿಂದ ಪ್ರಖ್ಯಾತನಾದನು.

ಏವಂ ಹಿ ಸಪ್ತರೂಪೋಽಸೌ ಕಥ್ಯತೇ ಭೈರವೋ ಮುನೇ ।
ವಿಘ್ನರಾಜೋಽಷ್ಟಮಃ ಪ್ರೋಕ್ತೋ ಭೈರವಾಷ್ಟಕಮುಚ್ಯತೇ ॥ ೩೬ ॥

ಏವಂ ಮಹಾತ್ಮನಾ ದೈತ್ಯಃ ಶೂಲಪ್ರೋತೋ ಮಹಾಸುರಃ ।
ಛತ್ರವದ್ಧಾರಿತೋಽಬ್ರಹ್ಮ ಇಂದ್ರಾಯುಧಸಮಪ್ರಭಃ ॥ ೩೭ ॥

ತದಸ್ರಮುಲ್ಬಣಂ ಬ್ರಹ್ಮ ಶೂಲಭೇದಾದವಾಪತತ್ ।
ಯೇನಾಕಂಠಂ ಮಹಾದೇವೋ ಮಗ್ನೋಽಸೌ ಸಪ್ತಮೂರ್ತಿಮಾನ್ ॥ ೩೮ ॥

ತತಃ ಸ್ವೇದೋಽಭವದ್ಭೂರಿ ನಿಃಶ್ರಮಾಚ್ಛಂಕರಸ್ಯ ತು ।
ಲಲಾಟಫಲಕಾತ್ತಸ್ಮಾಜ್ಜಾತಾ ಕನ್ಯಾಸೃಗಾಪ್ಲುತಾ ॥ ೩೯ ॥

ಯದ್ಭೂಮ್ಯಾಂ ನ್ಯಪತದ್ವಿಪ್ರ ಸ್ವೇದಬಿಂದುರ್ವಿನಾಶನಾತ್ ।
ತಸ್ಮಾದಂಗಾರಪುಂಜಾಭೋ ಬಾಲಕಃ ಸಮಜಾಯತ ॥ ೪೦ ॥

ಸಚಾಪಿ ತೃಷಿತೋಽತ್ಯರ್ಥಂ ಪಪೌ ರುಧಿರಮಾಂಧಕಂ ।
ಕನ್ಯಾಚೋತ್ಕೃತಸಂಜಾತಾ ಹ್ಯಸೃಕ್ಷ್ವಾವಲಿಹದ್ದ್ರುತಂ ॥ ೪೧ ॥

೩೬-೩೮. ಈ ಪ್ರಕಾರ ಭೈರವನು ಏಳುರೂಪದಿಂದ ಕೂಡಿರುವನೆಂದು ಹೇಳಲ್ಪಟ್ಟಿದೆ. ಎಂಟನೇಯವನಾದ ವಿಘ್ನರಾಜನೂ ಸೇರಿ ಎಂಟು ಭೈರವರಾಗುತ್ತಾರೆ. ಈ ರೀತಿ ಮಹಾತ್ಮನಾದ ಶಂಕರನಿಂದ ಆ ಅಂಧಕನು ಶೂಲಾಯುಧದಲ್ಲಿ ಪೋಣಿಸಲ್ಪಟ್ಟು ಛತ್ರಿಯಂತೆ ಮೇಲೆ ಹಿಡಿಯಲ್ಪಟ್ಟನು. ಹಾಗೆ ಹಿಡಿಯಲ್ಪಟ್ಟ ಅವನ ದೇಹವು ಆಕಾಶದಲ್ಲಿ ಇಂದ್ರಧನುಸ್ಸಿನಂತೆ ತೋರಿತು. ಶೂಲವನ್ನು ಚುಚ್ಚಿದ ಸ್ಥಲದಿಂದ ಬಹಳ ಮಟ್ಟಿಗೂ ರಕ್ತವು ಕೆಳಮುಖವಾಗಿ ಸುರಿಯಿತು. ಆ ರಕ್ತಪ್ರವಾಹದಲ್ಲಿ ಏಳು ವಿಧವಾಗಿ ಭೈರವಾಕಾರವನ್ನು ಹೊಂದಿದ್ದ ಶಂಕರನ ದೇಹವೆಲ್ಲವೂ ಕುತ್ತಿಗೆಯವರೆಗೂ ಮುಳುಗಿತು.

೩೯-೪೨. ಅನಂತರ ಬಹಳ ಶ್ರಮದಿಂದ ಶಂಕರನಿಗೆ ಹೆಚ್ಚಾಗಿ ಬೆವರೂರಿತು. ಹಣೆಯ ಮೇಲಿನ ಗಾಯದಿಂದ ರಕ್ತದಿಂದ ತೊಯ್ದಿದ್ದ ಒಬ್ಬ ಕನ್ಯೆಯುದಯಿಸಿದಳು. ಆ ಶತ್ರು ವಿನಾಶಕಾಲದಲ್ಲಿ ಭೂಮಿಯಲ್ಲಿ ಬಿದ್ದ ಬೆವರಿನ ಬಿಂದುವಿನಿಂದ ಬೆಂಕಿಯ ಕೆಂಡದಂತಿದ್ದ ಒಬ್ಬ ಬಾಲಕನು ಹುಟ್ಟಿದನು. ಬಹಳ ಬಾಯಾರಿಕೆಯಿಂದ ಕೂಡಿದ್ದ

ತತಸ್ತಾಮಾಹ ದೇವೇಶೋ ಬಾಲಾರ್ಕಸದೃಶಪ್ರಭಃ ।
ಶಂಕರೋ ವರದೋ ಲೋಕೇ ಶ್ರೇಯೋರ್ಥಂ ಹಿ ವಚೋ ಮಹತ್ ॥ ೪೨ ॥

ತ್ವಾಂ ಪೂಜಯಿಷ್ಯಂತಿ ಸುರಾ ಮಹರ್ಷಿಪಿತರಸ್ತಥಾ ।
ಯಕ್ಷವಿದ್ಯಾಧರಾಶ್ಚೈವ ಮಾನವಾಶ್ಚ ಶುಭಂಕರಿ ॥ ೪೩ ॥

ತ್ವಾಂ ಸ್ತೋಷ್ಯಂತಿ ನ ಸಂದೇಹೋ ಬಲಿಪುಷ್ಪೋತ್ಕರೈಃ ಕರೈಃ ।
ಚರ್ಚಿಕೇತಿ ಶುಭಂ ನಾಮ ಯಸ್ಮಾದ್ರುಧಿರಚರ್ಚಿತಾ ॥ ೪೪ ॥

ಇತ್ಯೇವಮುಕ್ತ್ವಾ ವರದೇನ ಚರ್ಚಿಕಾ
ಭೂಯೋನುಯಾತಾ ಗಿರಿವಿಂಧ್ಯವಾಸಿನೀಂ ।
ಮಹೀಂ ಸಮಂತಾದ್ವಿಚಚಾರ ಸುಂದರೀ
ಸ್ಥಾನಂ ಗತಾ ಹಿಂಗುಲಕಾದ್ರಿಮುತ್ತಮಂ ॥ ೪೫ ॥

ಅವನು ಅಂಧಕನ ಆ ರಕ್ತವನ್ನೆಲ್ಲಾ ಪಾನಮಾಡಿದನು. ಹಣೆಯ ಮೇಲಿನ ಗಾಯದಿಂದ ಹುಟ್ಟಿದ್ದ ಆ ಕನ್ಯೆಯೂ ರಕ್ತವನ್ನೆಲ್ಲಾ ನೆಕ್ಕಿದಳು. ಆಗ ಶಂಕರನು ಲಲಿತವಾದ ತೇಜಸ್ಸಿನಿಂದ ಕೂಡಿ ಆ ಕನ್ಯೆಯನ್ನು ಕುರಿತು ಲೋಕದ ಶ್ರೇಯಸ್ಸಿಗಾಗಿ ಈ ರೀತಿ ಹೇಳಿದನು.

೪೩-೪೫. ಎಲೈ ಶುಭಂಕರಿಯೇ, ನಿನ್ನನ್ನು ದೇವತೆಗಳೂ, ಮಹರ್ಷಿಗಳೂ, ಪಿತೃಗಳೂ, ಯಕ್ಷರೂ, ವಿದ್ಯಾಧರರೂ, ಮಾನವರು ಮೊದಲಾದರೆಲ್ಲರೂ ಪೂಜಿಸುವರು. ಪೂಜಾರ್ಥವಾದ ಪುಷ್ಪಾಂಜಲಿಗಳಿಂದ ಸ್ತೋತ್ರಮಾಡುವರು. ಇದರಲ್ಲಿ ಸಂದೇಹವಿಲ್ಲ. ರಕ್ತದಿಂದ ಚರ್ಚಿತಳಾದುದರಿಂದ ನಿನಗೆ ಚರ್ಚಿಕಾ ಎಂಬ ಶುಭನಾಮವು ಉಂಟಾಗುತ್ತದೆ. ಈ ರೀತಿ ವರಪ್ರದನಾದ ಶಂಕರನಿಂದ ಹರೆಸಲ್ಪಟ್ಟ ಆ ಕನ್ಯೆಯು ವಿಂಧ್ಯ ಗಿರಿಯಲ್ಲಿರುವ ವಿಂಧ್ಯವಾಸಿನಿಯನ್ನೇ ಅನುಸರಿಸಿ ಹೊರಟು ಭೂಮಿಯಲ್ಲೆಲ್ಲಾ ಸಂಚರಿಸಿ ಹಿಂಗುಲಕವೆಂಬ ಪರ್ವತದಲ್ಲಿ ಸ್ಥಾನಮಾಡಿಕೊಂಡು ನೆಲಸಿದಳು.

ತಸ್ಯಾಂ ಗತಾಯಾಂ ವರದಃ ಕುಜಸ್ಯ
ಪ್ರಾದಾದ್ವರಂ ಸರ್ವವರೋತ್ತಮಂ ಯತ್ ।
ಗ್ರಹಾಧಿಪತ್ಯಂ ಜಗತಃ ಶುಭಾಶುಭಂ
ಭವಿಷ್ಯತಿ ತೇ ವ್ಯಸನಂ ಗ್ರಹಾಂತರೈಃ ॥ ೪೬ ॥

ಹರೋಽಂಧಕಂ ವರ್ಷಸಹಸ್ರಮಾತ್ರಂ
ದಿವ್ಯಂ ಸ್ವನೇತ್ರಾರ್ಕಹುತಾಶನೇನ ।
ಚಕಾರ ತಂ ಶುಷ್ಕಬಲಂ ತ್ವಶೋಣಿತಂ
ತ್ವಗಸ್ಥಿಶೇಷಂ ಭಗವಾನ್ ಸ ಭೈರವಃ ॥ ೪೭ ॥

ತತ್ರಾಗ್ನಿನಾ ಶಂಭುಸಮುದ್ಭವೇನ
ಸ ಮುಕ್ತಪಾಪೋಽಸುರರಾಟ್ ಬಭೂವ ।
ತತಃ ಪ್ರಜಾನಾಂ ಬಹುರೂಪಮೀಶಂ
ನಾಥಂ ಹಿ ಸರ್ವಸ್ಯ ಚರಾಚರಸ್ಯ ॥ ೪೮ ॥

೪೬-೪೭. ಆ ಚರ್ಚಿಕೆಯು ಹೊರಟುಹೋದ ನಂತರ ವರಪ್ರದನಾದ ಶರ್ವನು (ಭೂಮಿಯಲ್ಲಿ ಬಿದ್ದ ಬೆವರಿನಿಂದ ಹುಟ್ಟಿದ್ದ) ಕುಜನೆಂಬ ಬಾಲಕನಿಗೆ ಗ್ರಹಾಧಿಪತ್ಯವನ್ನೂ ಜಗತ್ತಿನಲ್ಲಿ ಬೇರೆ ಗ್ರಹಗಳಿಂದ ಉಂಟಾಗಬಹುದಾದ ಶುಭಾಶುಭಗಳೂ ವ್ಯಸನಗಳೂ ಅವನಿಗೆ ಅಧೀನವಾಗಿರುವಿಕೆಯನ್ನೂ ಸರ್ವೋತ್ತಮವಾದ ವರರೂಪದಲ್ಲಿ ಅನುಗ್ರಹಿಸಿದನು. ಅನಂತರ ಹರನು ಅಂಧಕನನ್ನು ದಿವ್ಯವರ್ಷಸಹಸ್ರಪರ್ಯಂತವೂ ಸೂರ್ಯರೂಪವಾದ ತನ್ನ ಕಣ್ಣಿನ ಅಗ್ನಿಯಿಂದ ಒಣಗಿದವನನ್ನಾಗಿಯೂ ರಕ್ತಮಾಂಸಗಳಿಲ್ಲದೆ ಕೇವಲ ಅಸ್ಥಿಚರ್ಮಾವಶಿಷ್ಟನನ್ನಾಗಿಯೂ ಮಾಡಿದನು.

೪೮-೪೯. ಆಗ ಶಂಭುವಿನ ನೇತ್ರಾಗ್ನಿಯಿಂದ ಶುಷ್ಕನಾದ ಆ ಅಸುರನು ನಿಷ್ಪಾಪನಾದನು. ಅಜ್ಞಾನಕ್ಕೆ ಕಾರಣವಾಗಿಯೂ ಜ್ಞಾನಕ್ಕೆ ತಡೆಯಾಗಿಯೂ ಇದ್ದ ಆ ಪಾಪವೆಲ್ಲವೂ ನಷ್ಟವಾದ ಮೇಲೆ ಆ ಅಂಧಕನು ಈಶ್ವರನನ್ನೇ ಬಹುರೂಪದಲ್ಲಿರುವ

ಜ್ಞಾತ್ವಾಥ ಸರ್ವೇಶ್ವರಮೀಶಮವ್ಯಯಂ
ತ್ರೈಲೋಕ್ಯನಾಥಂ ವರದಂ ವರೇಣ್ಯಂ ।
ಸರ್ವೈಃ ಸುರಾದ್ಯೈರ್ನತಮೀಡ್ಯಮಾದ್ಯಂ
ತತೋಂಧಕಃ ಸ್ತೋತ್ರಮಿದಂ ಚಕಾರ ॥ ೪೯ ॥

ಅಂಧಕ ಉವಾಚ

ನಮೋಸ್ತು ತೇ ಭೈರವ ಭೀಮಮೂರ್ತೇ
ತ್ರೈಲೋಕ್ಯಗೋಪ್ತ್ರೇ ಸಿತಶೂಲಪಾಣೇ ।
ಕಪಾಲಪಾಣೇ ಭುಜಗೇಶಹಾರ
ತ್ರಿನೇತ್ರ ಮಾಂ ಪಾಹಿ ವಿಪನ್ನಬುದ್ಧಿಂ ॥ ೫೦ ॥

ಜಯಸ್ವ ಸರ್ವೇಶ್ವರ ವಿಶ್ವಮೂರ್ತೇ
ಸುರಾಸುರೈರ್ವಂದಿತಪಾದಪೀಠ ।
ತ್ರೈಲೋಕ್ಯಮಾತರ್ಗುರವೇ ವೃಷಾಂಕ
ಭೀತಃ ಶರಣ್ಯಂ ಶರಣಾಗತೋಸ್ಮಿ ॥ ೫೧ ॥

ಪ್ರಜೆಗಳ ನಾಥನನ್ನಾಗಿಯೂ ಎಲ್ಲಾ ಚರಾಚರ ಪ್ರಪಂಚಕ್ಕೂ ರಕ್ಷಕನನ್ನಾಗಿಯೂ ಶಾಶ್ವತನಾದ ಸುರೇಶ್ವರನನ್ನಾಗಿಯೂ ತ್ರಿಲೋಕಾಧಿಪತಿಯನ್ನಾಗಿಯೂ ದೇವತೆಗಳಿಂದ ಸೇವಿಸಲ್ಪಡುವ ಆದಿಪುರುಷನನ್ನಾಗಿಯೂ ತಿಳಿದು ಅವನನ್ನು ಈ ರೀತಿ ಸ್ತೋತ್ರಮಾಡಲಾರಂಭಿಸಿದನು.

೫೦-೫೨. ಎಲೈ ಭೈರವನೇ, ಭಯಂಕರಮೂರ್ತಿಯೇ ಲೋಕತ್ರಯ ರಕ್ಷಕನೇ, ತೀಕ್ಷ್ಣವಾದ ಶೂಲಾಯುಧಧಾರಿಯೇ, ಕಪಾಲಪಾಣಿಯೇ, ಸರ್ಪಹಾರನೇ ತ್ರಿಲೋಚನನೇ ನಿನಗೆ ಅನಂತನಮಸ್ಕಾರಗಳು. ಬುದ್ಧಿನಾಶಹೊಂದಿರುವ ನನ್ನನ್ನು ರಕ್ಷಿಸು. ಎಲೈ ಸರ್ವೇಶ್ವರನೇ ಜಗನ್ಮಯಮೂರ್ತಿಯೇ ಸುರಾಸುರರಿಂದಲೂ ನಮಸ್ಕರಿಸಲ್ಪಟ್ಟ ಪಾದಪೀಠವುಳ್ಳವನೇ ಲೋಕಮಾತೆಯಾದ ಪಾರ್ವತಿಗೂ ಗುರುವಾಗಿರುವವನೇ ವೃಷಭವಾಹನನೇ ನೀನು ಸರ್ವೋತ್ಕೃಷ್ಟನಾಗಿರು. ಭೀತನಾದ ನಾನು ರಕ್ಷಕನಾದ ನಿನ್ನಲ್ಲಿಯೇ ಶರಣಾಗತನಾಗಿರುವೆನು. ಪ್ರಭುವೇ ನಿನ್ನನ್ನು

ತ್ವಾಂ ನಾಥ ದೇವಾಃ ಶಿವಮೀರಯಂತಿ
ಸಿದ್ಧಾ ಹರಂ ಸ್ಥಾಣುಮಹರ್ಷಯಶ್ಚ ।
ಭೀಮಂ ಚ ಯಕ್ಷಾ ಮನುಜಾ ಮಹೇಶ್ವರಂ
ಭೂತಾನಿ ಭೂತಾಧಿಪಮುಚ್ಚರಂತಿ ॥ ೫೨ ॥

ನಿಶಾಚರಾಸ್ತೂಗ್ರಮುಪಾಚರಂತಿ
ಭವೇತಿ ಪುಣ್ಯಾಃ ಪಿತರೋ ನಮಸ್ತೇ ।
ದಾಸೋಽಸ್ಮಿ ತುಭ್ಯಂ ಹರ ಪಾಹಿ ಮಹ್ಯಂ
ಪಾಪಕ್ಷಯಂ ಮೇ ಕುರು ಲೋಕನಾಥ ॥ ೫೩ ॥

ಭವಾಂಸ್ತ್ರಿದೇವ ಸ್ತ್ರಿಯುಗ ಸ್ತ್ರಿಧರ್ಮಾ
ತ್ರಿಪುಷ್ಕರಶ್ಚಾಸಿ ವಿಭೋ ತ್ರಿನೇತ್ರ ।
ತ್ರಯ್ಯಾರುಣಿಸ್ತ್ವಂ ಶ್ರುತಿ ರವ್ಯಯಾತ್ಮಾ
ಪುನೀಹಿ ಮಾಂ ತ್ವಾಂ ಶರಣಂ ಗತೋಽಸ್ಮಿ ॥ ೫೪ ॥

ದೇವತೆಗಳು ಶಿವನೆಂದು ಕರೆಯುತ್ತಾರೆ. ಹೀಗೆಯೇ ಸಿದ್ಧರೂ ಹರನೆಂದೂ ಮಹರ್ಷಿಗಳು ಸ್ಥಾಣುವೆಂದೂ ಯಕ್ಷರು ಭೀಮನೆಂದೂ ಮನುಷ್ಯರು ಮಹೇಶ್ವರನೆಂದೂ ಭೂತಗಳು ಭೂತಪತಿಯೆಂದೂ ತಿಳಿದು ಪೂಜಿಸುತ್ತಾರೆ.

೫೩-೫೪. ರಾಕ್ಷಸರೆಲ್ಲರೂ ನಿನ್ನನ್ನು ಉಗ್ರನೆಂದೂ ಪುಣ್ಯಶಾಲಿಗಳಾದ ಪಿತೃಗಳು ಭವನೆಂದೂ ಕರೆದು ನಿನ್ನನ್ನೇ ಪೂಜಿಸುವರು. ನಿನಗೆ ನಮಸ್ಕಾರಗಳು. ನಾನು ನಿನಗೆ ದಾಸನಾಗಿರುವೆನು. ನನ್ನ ಉದ್ಧಾರಕ್ಕಾಗಿಯೇ ನೀನು ನನ್ನನ್ನು ರಕ್ಷಿಸು. ಲೋಕನಾಥನೇ ನನ್ನ ಪಾಪವನ್ನೆಲ್ಲಾ ಹೋಗಲಾಡಿಸು. ನೀನೇ ಬ್ರಹ್ಮ, ವಿಷ್ಣು, ರುದ್ರರೆಂಬ ದೇವತಾತ್ರಯರೂಪನಾಗಿರುವೆ, ಕೃತ, ತ್ರೇತಾ, ದ್ವಾಪರಗಳೆಂಬ ಧರ್ಮಯುಗಳಿಗೆ ಅಧಿಪತಿಯಾಗಿರುವೆ. ಸತ್ವರಜಸ್ತಮೋ ರೂಪವಾದ ಧರ್ಮತ್ರಯರೂಪನಾಗಿರುವೆ. ಮೂರುವಿಧವಾದ ಪುಷ್ಕರಕ್ಷೇತ್ರಕ್ಕೂ ಅಧಿಪತಿಯಾಗಿರುವೆ. ತ್ರಿನೇತ್ರನಾಗಿಯೂ ಇರುವೆ. ಆರುಣಿ ಎಂಬ ವೇದಭಾಗವೂ ನೀನೇ ಶಾಶ್ವತವಾದ ಶ್ರುತಿರೂಪನಾಗಿಯೂ ಇರುವೆ, ಅಂತಹ ನೀನು ನನ್ನನ್ನು ಪವಿತ್ರನನ್ನಾಗಿ ಮಾಡು. ನಾನು ನಿನ್ನಲ್ಲಿ ಶರಣಾಗತನಾಗಿರುವೆನು.

ತ್ರಿಣಾಚಿಕೇತಃ ತ್ರಿಪದಪ್ರತಿಷ್ಠಃ
ಷಡಂಗವಿತ್ ಸ್ತ್ರೀವಿಷಯೇಷ್ವಲುಬ್ಧಃ ।
ತ್ರೈಲೋಕ್ಯನಾಥೋಸಿ ಪುನೀಹಿ ಶಂಭೋ
ದಾಸೋಸ್ಮಿ ಭೀತಃ ಶರಣಾಗತಸ್ತೇ ॥ ೫೫ ॥

ಕೃತೋ ಮಹಾನ್ ಶಂಕರ ತೇಽಪರಾಧೋ
ಮಯಾ ಮಹಾಭೂತಪತೇ ಗಿರೀಶ ।
ಕಾಮಾರಿಣಾ ನಿರ್ಜಿತಮಾನಸೇನ
ಪ್ರಸಾದಯೇ ತ್ವಾಂ ಶಿರಸಾ ನತೋಸ್ಮಿ ॥ ೫೬ ॥

ಪಾಪೋಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ ।
ತ್ರಾಹಿ ಮಾಂ ದೇವದೇವೇಶ ಸರ್ವಪಾಪ ಹರೋ ಭವ ॥ ೫೭ ॥

---

೫೫. ನಾಚಿಕೇತವೆಂಬ ಅಗ್ನಿತ್ರಯಸಾಧ್ಯಕರ್ಮಗಳಿಗೆ ಫಲಪ್ರದನೂ ನೀನೇ ಆಗಿದ್ದೀಯೆ. ಸ್ವರ್ಗ ಮರ್ತ್ಯ ಪಾತಾಲವೆಂಬ ಮೂರುಲೋಕದಲ್ಲಿಯೂ ನೆಲಸಿರುವೆ. ವೇದದ ಷಡಙ್ಗಗಳನ್ನೂ ತಿಳಿದಿರುವೆ. (ಅಥವಾ ನೀತಿಶಾಸ್ತ್ರಕ್ಕೆ ತಕ್ಕ ಷಡಂಗಗಳನ್ನೂ ತಿಳಿದಿರುವೆ) ಸ್ತ್ರೀಯರ ಮತ್ತು ಇತರ ಭೋಗ್ಯವಿಷಯದಲ್ಲಿ ಅತ್ಯಾಶಾರಹಿತನಾಗಿರುವೆ. ಮೂರು ಲೋಕಕ್ಕೂ ಅಧಿಪತಿಯಾಗಿಯೂ ಇರುವೆ. ಎಲೈ, ಶಂಭುವೇ ನಾನು ನಿನಗೆ ದಾಸನಾಗಿರುವೆನು. ಭಯಪಟ್ಟು ಶರಣಾಗತನಾಗಿಯೂ ಇರುವೆನು. ಅಪರಾಧಿಯಾದ ನನ್ನನ್ನು ಪರಿಶುದ್ಧಿಗೊಳಿಸು.

೫೬-೫೭. ಎಲೈ ಶಂಕರನೇ, ಭೂತಪತಿಯೇ ಗಿರೀಶನೇ ನಾನು ನಿನ್ನಲ್ಲಿ ಮಹಾಪರಾಧವನ್ನೇ ಮಾಡಿ ಆಯಿತು. ಈಗ ಕಾಮಕ್ರೋಧಾದಿ ಮಾನಸದೋಷ ರಹಿತನಾಗಿ ಅಪರಾಧಜ್ಞಾನದಿಂದ ದುಃಖಪಟ್ಟು ನಿನ್ನನ್ನೇ ಶಿರಸ್ಸಿನಿಂನ ನಮಸ್ಕರಿಸುತ್ತಿದ್ದೇನೆ. ಪ್ರಸನ್ನನನ್ನಾಗಿ ಮಾಡುತ್ತಿದ್ದೇನೆ. ನಾನು ಮಹಾಪಾಪಿಷ್ಠ, ಪಾಪಹೇತುವಾದ ಕರ್ಮಗಳನ್ನಾಚರಿಸಿದವನು. ಪಾಪಕಾರ್ಯದಲ್ಲಿ ಪ್ರೇರಿಸುವ ದುಷ್ಟಾಂತಃಕರಣವುಳ್ಳವನು. ಪಾಪದಿಂದಲೇ ಉತ್ಪನ್ನನಾದವನು. ಎಲೈ ದೇವದೇವೇಶ ಅಂತಹ ನನ್ನನ್ನು ಕಾಪಾಡು. ಸರ್ವಪಾಪವನ್ನೂ ಹೋಗಲಾಡಿಸು.

ಮಮ ನೈವಾಪರಾಧೋಽಸ್ತಿ ತ್ವಯಾ ಚೈತಾದೃಶೋಽಪ್ಯಹಂ ।
ಸ್ಪೃಷ್ಟಃ ಪಾಪಸಮಾಚಾರೋ ಮಾಂ ಪ್ರಸನ್ನೋ ಭವೇಶ್ವರ ॥ ೫೮ ॥

ತ್ವಂ ಕರ್ತಾ ಚೈವ ಧಾತಾಚ ಜಯ ತ್ವಂ ಚ ಮಹಾಜಯಃ ।
ತ್ವಂ ಮಂಗಲ್ಯಸ್ತ್ವಮೋಂಕಾರಸ್ತ್ವಮೀಶಾನೋಽವ್ಯಯೋ ಧ್ರುವಃ ॥ ೫೯ ॥

ತ್ವಂ ಬ್ರಹ್ಮಾ ಸೃಷ್ಟಿಕೃನ್ನಾಥ ಸ್ತ್ವಂವಿಷ್ಣುಃ ತ್ವಂ ಮಹೇಶ್ವರಃ ।
ತ್ವಮಿಂದ್ರಃ ತ್ವಂ ವಷಟ್ಕಾರಃ ಧರ್ಮಸ್ತ್ವಂ ತುಷಿತೋತ್ತಮಃ ॥ ೬೦ ॥

ಸೂಕ್ಷ್ಮಸ್ತ್ವಂ ವ್ಯಕ್ತರೂಪಸ್ತ್ವಂ ತ್ವಮವ್ಯಕ್ತಶ್ಚ ಧೀವರಃ ।
ತ್ವಯಾ ಸರ್ವಮಿದಂ ವ್ಯಾಪ್ತಂ ಜಗತ್ ಸ್ಥಾವರಜಂಗಮಂ ॥ ೬೧ ॥

ತ್ವಮಾದಿರಂತೋ ಮಧ್ಯಂ ಚ ತ್ವಮೇವ ಚ ಸಹಸ್ರಪಾತ್ ।
ವಿಜಯಸ್ತ್ವಂ ಸಹಸ್ರಾಕ್ಷೋ ಚಿತ್ರಪಾಖ್ಯೋ ಮಹಾಭುಜಃ ॥ ೬೨ ॥

---

೫೮. ಅಥವಾ ನಾನು ಅಪರಾಧಿಯೇ ಅಲ್ಲ ಏತಕ್ಕೆಂದರೆ ಇಂತಹ ಪಾಪಾತ್ಮನಾದ ನನ್ನನ್ನೂ ನೀನು ಸ್ಪರ್ಶಮಾಡಿದ್ದೀಯೆ. (ನಿನ್ನ ಸ್ಪರ್ಶವಾದ ಮೇಲೆ ನನ್ನ ಯಾವ ಅಪರಾಧವೂ ನಿಲ್ಲುವ ಸಂಭವವಿಲ್ಲವೆಂದು ತಾತ್ಪರ್ಯ) ಆದುದರಿಂದ ನನ್ನ ವಿಷಯದಲ್ಲಿ ಪ್ರಸನ್ನನಾಗು.

೫೯-೬೧ ಎಲ್ಲಾ ಕಾರ್ಯಗಳಲ್ಲೂ ನೀನೇ ಸ್ವತಂತ್ರಕರ್ತೃವಾಗಿರುವೆ. ನೀನೇ ಧಾರಕನಾಗಿಯೂ ಇರುವೆ. ಜಯಸ್ವರೂಪನೂ ನೀನೇ ಆಗಿರುವೆ. ಮಂಗಲ ವಸ್ತುವಾಗಿಯೂ ಓಂಕಾರರೂಪನಾಗಿಯೂ ಶಾಶ್ವತನಾಗಿಯೂ ಇರುವ ರಕ್ಷಕನು ನೀನೇ ಆಗಿದ್ದೀಯೆ. ಸೃಷ್ಟಿಮಾಡುವ ಬ್ರಹ್ಮನೂ ನೀನೇ, ವಿಷ್ಣುವೂ ನೀನೇ ಮಹೇಶ್ವರನೂ ನೀನೇ ಆಗಿದ್ದೀಯೆ. ಇಂದ್ರನೂ ವಷಟ್ಕಾರವೂ ಧರ್ಮವೂ ಉತ್ತಮವಾದ ಹರ್ಷವೂ ಸಹ ನೀನೇ ಆಗಿದ್ದೀಯೇ. ಸೂಕ್ಷ್ಮವಸ್ತುಗಳೂ ವ್ಯಕ್ತಾವ್ಯಕ್ತ ವಸ್ತುಗಳೂ ಸಹ ನೀನೇ ಆಗಿದ್ದೀಯೆ. ಸ್ಥಾವರಜಂಗಮಾತ್ಮಕವಾದ ಎಲ್ಲಾ ವಸ್ತುಗಳೂ ನಿನ್ನಿಂದಲೇ ವ್ಯಾಪ್ತವಾಗಿವೆ.

೬೨-೬೪. ಜಗತ್ತಿಗೆ ಉತ್ಪಾದಕನೂ ಸ್ಥಾಪಕನೂ ಸಹಸ್ರಪಾದವುಳ್ಳ ವಿರಾಟ್ಪುರುಷನೂ ಸಹ ನೀನೇ ಆಗಿದ್ದೀಯೆ. ವಿಜಯನೂ ಸಹಸ್ರಾಕ್ಷನಾದ ಇಂದ್ರನೂ ಚಿದ್ರೂಪನಾದ ಸಂಕಲ್ಪಮಯನೂ ನೀನೇ ಆಗಿದ್ದೀಯೆ. ಅನಂತನೂ

ಅನಂತಃ ಸರ್ವಗೋಽವ್ಯಾಪೀ ಹಂಸಃ ಪುಣ್ಯಾಧಿಕೋಽಚ್ಯುತಃ ।
ಗೀರ್ವಾಣಪತಿರವ್ಯಗ್ರೋ ರುದ್ರಃ ಪಶುಪತಿಃ ಶಿವಃ ॥ ೬೩ ॥

ತ್ರೈವಿದ್ಯಸ್ತ್ವಂ ಜಿತಕ್ರೋಧೋ ಜಿತಾರಾತಿರ್ಜಿತೇಂದ್ರಿಯಃ ।
ಜಯಶ್ಚ ಶೂಲಪಾಣಿಸ್ತ್ವಂ ಪಾಹಿ ಮಾಂ ಶರಣಾಗತಂ ॥ ೬೪ ॥

ಪುಲಸ್ತ್ಯ ಉವಾಚ

ಇತ್ಥಂ ಮಹೇಶ್ವರೋ ಬ್ರಹ್ಮ ಸ್ತುತೋ ದೈತ್ಯಾಧಿಪೇನ ತು ।
ಪ್ರೀತಿಯುಕ್ತಃ ಪಿಂಗಲಾಕ್ಷೋ ಹೈರಣ್ಯಾಕ್ಷಮುವಾಚ ಹ ॥ ೬೫ ॥

ಪ್ರೀತೋಽಸ್ಮಿ ದಾನವಪತೇ ಪರಿತುಷ್ಟೋಽಸ್ಮಿ ಚಾಂಧಕ ।
ವರಂ ವರಯ ಭದ್ರಂತೇ ಯಮಿಚ್ಛಸಿ ದದಾಮಿ ತಂ ॥ ೬೬ ॥

ಅಂಧಕ ಉವಾಚ

ಅಂಬಿಕಾ ಜನನೀ ಮಹ್ಯಂ ಭವಾನ್ವೈ ತ್ರ್ಯಂಬಕಃ ಪಿತಾ ।
ವಂದಾಮಿ ಚರಣೌ ಮಾತುಃ ಮಾನನೀಯೌ ಮಮಾಧಿಕಂ ॥ ೬೭ ॥

ಸರ್ವವ್ಯಾಪಕವಾದ ಪರಬ್ರಹ್ಮಮೂರ್ತಿಯೂ ಬಹಳ ಪುಣ್ಯಶಾಲಿಯಾದ ಅಚ್ಯುತನೂ ಸಹ ನೀನೇ ಆಗಿದ್ದೀಯೆ. ನಿನ್ನನ್ನೇ ಗೀರ್ವಾಣಪತಿ ಎಂತಲೂ ರುದ್ರ, ಪಶುಪತಿ, ಶಿವ ಎಂಬ ನಾಮಧೇಯಗಳಿಂದಲೂ ಕರೆಯುತ್ತಾರೆ. ವೇದಮಯವಾದ ವಿದ್ಯೆಯಿಂದ ಪ್ರಾಪ್ಯನೂ ನೀನೇ, ಕ್ರೋಧವನ್ನೂ ಬಾಹ್ಯಶತ್ರುಗಳನ್ನೂ ಇಂದ್ರಿಯಗಳನ್ನೂ ಜಯಿಸತಕ್ಕವನೂ ನೀನೇ, ಜಯಸ್ವರೂಪನೂ ಶೂಲಪಾಣಿಯೂ ನೀನೆ ಆಗಿದ್ದೀಯೆ. ಶರಣಾಗತನಾಗಿರುವ ನನ್ನನ್ನು ರಕ್ಷಿಸು.

೬೫-೬೭. ಪುಲಸ್ತ್ಯರು ಹೇಳುತ್ತಾರೆ:—ಈ ಪ್ರಕಾರ ದೈತ್ಯಾಧಿಪನಾದ ಅಂಧಕನಿಂದ ಸ್ತೋತ್ರಮಾಡಲ್ಪಟ್ಟ ಮಹೇಶ್ವರನು ಸಂತುಷ್ಟನಾಗಿ ಎಲೈ ದಾನವಪತಿಯಾದ ಅಂಧಕನೇ, ನಿನ್ನ ಈ ಸ್ತುತಿಯಿಂದ ಬಹಳ ಸಂತುಷ್ಟನಾಗಿರುವೆನು. ನಿನಗೆ ಮಂಗಳವಾಗಲಿ, ಇಷ್ಟವಾದ ವರವನ್ನು ಕೇಳಿಕೋ ಕೊಡುವೆನೆಂದನು. ಆಗ ಅಂಧಕನು ಪ್ರಭುವೇ, ಅಂಬಿಕೆಯು ನನಗೆ ತಾಯಿಯು, ನೀನೇ ನನಗೆ ತಂದೆಯು. ಆ ತಾಯಿಯ ಮಾನ್ಯವಾದ ಪಾದಗಳಿಗೆ ಅನಂತವಂದನೆಗಳನ್ನರ್ಪಿಸುವೆನು. ಪ್ರಭುವಾದ ನೀನು ವರಪ್ರದನಾಗಿದ್ದಲ್ಲಿ ಆ ತಾಯಿಯ ವಿಷಯದಲ್ಲಿ ಶಾರೀರವಾಗಿಯೂ

ವರದೋ ಹಿ ಯದೀಶಾನಃ ತದ್ಯಾತು ವಿಪುಲಂ ಮಮ।
ಶಾರೀರಂ ಮಾನಸಂ ವಾಪಿ ದುಷ್ಕೃತಂ ದುರ್ವಿಚಿಂತಿತಂ ॥ ೬೮ ॥

ತಥಾ ಮೇ ದಾನವೋ ಭಾವೋ ವ್ಯಪಯಾತು ಮಹೇಶ್ವರ।
ಸ್ಥಿರಾತು ತವ ಭಕ್ತಿಶ್ಚ ವರಮೇತಂ ಪ್ರಯಚ್ಛ ಮೆ ॥ ೬೯ ॥

ಮಹಾದೇವ ಉವಾಚ

ಏವಂ ಭವತು ದೈತ್ಯೇಂದ್ರ ಪಾಪಂತೆ ಯಾತು ಸಂಕ್ಷಯಂ।
ಮುಕ್ತೋಽಸಿ ದೈತ್ಯಭಾವಾಚ್ಚ ಭೃಂಗೀ ಗಣಪತಿರ್ಭವ ॥ ೭೦ ॥

ಇತ್ಯೇವಮುಕ್ತ್ವಾ ವರದೋ ಮುದಾಗ್ರಾದವತಾರ್ಯತಂ।
ನಿರ್ಮಾರ್ಜಯಿತ್ವಾ ಹಸ್ತೇನ ಕೃತ್ವಾ ನಿರ್ವ್ರಣಮಂಧಕಂ ॥ ೭೧ ॥

ತತಶ್ಚ ದೇವತಾ ದೇಹಾ*ದ್ಬ್ರಹ್ಮಾದೀರಾಜುಹಾವ ಸಃ।
ತೆ ನಿಶ್ಚೇರುರ್ಮಹಾತ್ಮಾನೋ ನಮಸ್ಯಂತಸ್ತ್ರಿಲೋಚನಂ ॥ ೭೨ ॥

ಮಾನಸವಾಗಿಯೂ ನಾನು ಮಾಡಿರುವ ಅಪಾರವಾದ ದುಷ್ಕಾರ್ಯವೂ ದುರಾಲೋಚನೆಯೂ ನಾಶವಾಗಲಿ. (ಅದರಿಂದುಂಟಾದ ಪಾಪವು ನನ್ನನ್ನು ಬಿಡಲಿ ಎಂದು ತಾತ್ಪರ್ಯ.)

೬೯-೭೨. ಹಾಗೆಯೇ ನನ್ನ ಈ ದಾನವತ್ವವೂ ನಿನ್ನ ಅನುಗ್ರಹದಿಂದ ಹೋಗಲಿ, ನಿನ್ನ ವಿಷಯದಲ್ಲೇ ಸ್ಥಿರವಾದ ಭಕ್ತಿಯನ್ನೂ ನನಗೆ ಉಂಟುಮಾಡು ಎಂದು ಬೇಡಿಕೊಳ್ಳಲು ಅಂಧಕನ ಈ ಮಾತನ್ನು ಕೇಳಿ ಮಹಾದೇವನು ಹಾಗೆಯೇ ಆಗಲಿ, ದೈತ್ಯರಾಜನೇ ನಿನ್ನ ಪಾಪವೆಲ್ಲವೂ ನಾಶಹೊಂದಲಿ, ನೀನೂ ಈ ದೈತ್ಯಭಾವದಿಂದ ಮುಕ್ತನಾಗಿ ಭೃಂಗೀ ಎಂಬ ಹೆಸರಿನಿಂದ ನನ್ನ ಗಣಪತಿಗಳಲ್ಲೊಬ್ಬನಾಗಿರು, ಎಂದು ಹೇಳಿ ಅವನನ್ನು ಶೂಲಾಗ್ರದಿಂದಿಳಿಸಿ ತನ್ನ ಕೈಯ್ಯಿಂದಲೇ ತೊಳೆದು ವ್ರಣವನ್ನೆಲ್ಲಾ ಹೋಗಲಾಡಿಸಿದನು. ಅನಂತರ ಮಹೇಶ್ವರನು ತನ್ನ ದೇಹದಲ್ಲಿ ಅಡಗಿಸಿಕೊಂಡಿದ್ದ ಬ್ರಹ್ಮಾದಿದೇವತೆಗಳನ್ನೆಲ್ಲಾ ಹೊರಗೆಬರುವಂತೆ ಕರೆದನು. ಅವರೆಲ್ಲರೂ ಹೊರಗೆ ಬಂದು ಮಹೇಶ್ವರನನ್ನು ನಮಸ್ಕರಿಸುತ್ತ ನಿಂತರು.

---

* ಇಲ್ಲಿ ಬ್ರಹ್ಮಾದೀನಾಂಜುಹಾವಸಃ ಎಂಬ ಮೂಲಪಾಠವನ್ನು ಈರೀತಿ ಸರಿಪಡಿಸಬೇಕೆಂದು ತೋರುತ್ತದೆ.

ಗಣಾನ್ ಸನಂದೀನಾಹೂಯ ಸನ್ನಿವೇಶ್ಯ ತಥಾಗ್ರತಃ ।
ಭೃಂಗಿಣಂ ದರ್ಶಯಾಮಾಸ ಬ್ರುವನ್ನೇಷೋಂಧಕೇತಿಹಿ ॥ ೭೩ ॥

ತಂ ದೃಷ್ಟ್ವಾ ದಾನವಪತಿಂ ಸಂಶುಷ್ಕಪಿಶಿತಂ ರಿಪುಂ ।
ಗಣಾಧಿಪತ್ಯಮಾಪನ್ನಂ ಪ್ರಶಶಂಸುರ್ವೃಷಧ್ವಜಂ ॥ ೭೪ ॥

ತತಸ್ತಾನ್ಪ್ರಾಹ ಭಗವಾನ್ಸಂಪರಿಷ್ವಜ್ಯ ದೇವತಾಃ ।
ಗಚ್ಛಧ್ವಂ ಸ್ವಾನಿ ಧಿಷ್ಣ್ಯಾನಿ ಭುಂಜೀಧ್ವಂ ತ್ರಿವಿಧಂ ಸುಖಂ ॥ ೭೫ ॥

ಸಹಸ್ರಾಕ್ಷೋಽಪಿ ಸಂಯಾತು ಪರ್ವತಂ ಮಲಯಂ ಶುಭಂ ।
ತತ್ರ ಸ್ವಕಾರ್ಯಂ ಕೃತ್ವೈವ ಪಶ್ಚಾದ್ಯಾತು ತ್ರಿವಿಷ್ಟಪಂ ॥ ೭೬ ॥

ಇತ್ಯೇವಮುಕ್ತ್ವಾ ತ್ರಿದಶಾನ್ ಸಮಾಭಾಷ್ಯ ವ್ಯಸರ್ಜಯತ್ ।
ಪಿತಾಮಹಂ ನಮಸ್ಕೃತ್ಯ ಪರಿಷ್ವಜ್ಯ ಜನಾರ್ದನಂ ॥ ೭೭ ॥

ಮಹೇಂದ್ರೋ ಮಲಯಂ ಗತ್ವಾ ಕೃತ್ವಾ ಕಾರ್ಯಂ ದಿವಂ ಗತಃ ।
ಗತೇಷು ಶಕ್ರಪ್ರಾಗ್ರ್ಯೇಷು ಭಗವಾನ್ ಸಂಸ್ಥಿತಃ ಶಿವಃ ॥ ೭೮ ॥

೭೩-೭೫. ಆಗ ಮಹೇಶ್ವರನು ನಂದಿಯೊಡಗೂಡಿದ ಗಣಾಧಿಪತಿಗಳನ್ನೆಲ್ಲಾ ಬರಮಾಡಿ ಭೃಂಗಿಯನ್ನು ಅವರ ಮುಂದೆ ಕುಳ್ಳಿರಿಸಿ ಇವನೇ ಅಂಧಕನೆಂದು ಎಲ್ಲರಿಗೂ ತೋರಿಸಿದನು. ಆಗ ರಕ್ತಮಾಂಸವೆಲ್ಲವೂ ಒಣಗಿಹೋಗಿರುವ ಆ ಶತ್ರುವನ್ನು ನೋಡಿ ಅವನಿಗೆ ಗಣಾಧಿಪತ್ಯವನ್ನೂ ಕೊಟ್ಟದ್ದಕ್ಕಾಗಿ ಶಂಕರನನ್ನು ಬಹಳವಾಗಿ ಪ್ರಶಂಸಿಸಿದರು. ಆಗ ಮಹೇಶನು ದೇವತೆಗಳೆಲ್ಲರನ್ನೂ ಆಲಿಂಗಿಸಿ ನೀವೆಲ್ಲರೂ ನಿಮ್ಮ ನಿಮ್ಮ ಸ್ಥಾನಕ್ಕೆ ತೆರಳಿರಿ. ತ್ರಿವಿಧವಾದ ಸುಖವನ್ನೂ ನಿರ್ಬಾಧವಾಗಿ ಅನುಭವಿಸಿರಿ.

೭೬-೭೮. ಇಂದ್ರನೂ ಸಹ ಶುಭಕರವಾದ ಮಲಯಪರ್ವತಕ್ಕೆ ಹೋಗಲಿ, ಅಲ್ಲಿ ತನ್ನ ಕಾರ್ಯವನ್ನು ನೆರವೇರಿಸಿ ಸ್ವರ್ಗಕ್ಕೆ ತೆರಳಲಿ. ಹೀಗೆ ಹೇಳಿ ಎಲ್ಲರನ್ನೂ ಸಂಭಾಷಣೆಯಿಂದ ಸಂತೋಷಪಡಿಸಿ ಕಳುಹಿಸಿಕೊಟ್ಟನು. ಚತುರ್ಮುಖನನ್ನು ನಮಸ್ಕರಿಸಿಯೂ ವಿಷ್ಣುವನ್ನು ಆಲಂಗಿಸಿಯೂ ಸತ್ಕರಿಸಿದನು. ಇಂದ್ರನೂ ಸಹ ಅವನ ಮಾತಿನಂತೆ ಮಲಯಕ್ಕೆ ಹೋಗಿ ಅಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಿ ಸ್ವರ್ಗಕ್ಕೆ ಹೊರಟುಹೋದನು. ಇಂದ್ರನೇ ಮೊದಲಾದ ದೇವತೆಗಳು ಹೊರಟು ಹೋದನಂತರ ಹರನು ಗಣಗಳನ್ನೆಲ್ಲಾ ತನ್ನ ದೇಹಮಧ್ಯಭಾಗದಿಂದಲೇ ಹೊರಗೆಡಹಿ

ವಿಸರ್ಜಯಾಮಾಸ ಗಣಾನ್ ತನುಮಧ್ಯಪಥಾದ್ಧರಃ ।
ಗಣಾಶ್ಚ ಶಂಕರಂ ದೃಷ್ಟ್ವಾ ಸ್ವಂ ಸ್ವಂ ವಾಹನಮಾಸ್ಥಿತಾಃ ॥ ೭೯ ॥

ಜಗ್ಮುಸ್ತೇ ಶುಭಲೋಕಾಂಶ್ಚ ಸ್ವಸ್ವಸ್ಥಾನೇಷು ನಾರದ ।
ಯತ್ರ ಕಾಮದುಘಾ ಗಾವಃ ಸರ್ವಕಾಮಫಲದ್ರುಮಾಃ ॥ ೮೦ ॥

ನದ್ಯಸ್ತ್ವಮೃತವಾಹಿನ್ಯೋ ಹ್ರದಾಃ ಪಾಯಸಕರ್ದಮಾಃ ।
ಸ್ವಾಂ ಸ್ವಾಂ ಗತಿಂ ಪ್ರಯಾತೇಷು ಪ್ರಮಥೇಷು ಮಹೇಶ್ವರಃ ॥ ೮೧ ॥

ಸಮಾದಾಯಾಂಧಕಂ ಹಸ್ತೇ ನಂದೀ ಶೈಲಂ ಸಮಾಗಮತ್ ।
ದ್ವಾಭ್ಯಾಂ ವರ್ಷಸಹಸ್ರಾಭ್ಯಾಂ ಪುನರಾಯಾದ್ಧರೋ ಗೃಹಂ ॥ ೮೨ ॥

ದದೃಶೆ ಚ ಗಿರೇಃ ಪುತ್ರೀಂ ಶ್ವೇತಾರ್ಕಕುಸುಮಸ್ಥಿತಾಂ ।
ಸಮಾಯಾತಂ ನಿರೀಕ್ಷ್ಯೈವ ಸರ್ವಲಕ್ಷಣಸಂಯುತಂ ॥ ೮೩ ॥

ದನು. ಆ ಗಣಗಳೂ ಸಹ ಹೊರಗೆ ಬಂದು ಶಂಕರನನ್ನು ನೋಡಿ ಸತ್ಕರಿಸಿ ತಮ್ಮ ತಮ್ಮ ವಾಹನಾರೂಢರಾಗಿ ಇಷ್ಟವಾದ ಲೋಕಗಳಿಗೆ ಹೋಗಿ ಆಯಾಯ ಸ್ಥಾನದಲ್ಲಿ ಅಧಿಕೃತರಾದರು.

೮೦-೮೩. ಆ ಪ್ರಮಥಗಳು ಹೋಗಿ ಸೇರಿದ ದೇಶವೆಲ್ಲವೂ ಇಷ್ಟಾರ್ಥಪ್ರದವಾದ ಗೋವುಗಳಿಂದಲೂ ಇಷ್ಟಾರ್ಥದಾಯಿಗಳಾದ ಫಲವೃಕ್ಷಗಳಿಂದಲೂ ಅಮೃತವನ್ನೇ ಸುರಿಸುವ ನದಿಗಳಿಂದಲೂ ಪಾಯಸದ ಕೆಸರಿನಿಂದ ತುಂಬಿದ ಹೊಂಡಗಳಿಂದಲೂ ಭೋಗ್ಯಗಳಾಗಿಯೂ ರಮಣೀಯಗಳಾಗಿಯೂ ಆದವು. ಪ್ರಮಥರೆಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ಹೊರಟು ಹೋದನಂತರ ಗಣಾಧಿಪನಾದ ನಂದಿಯು ಅಂಧಕನ ಕೈಯನ್ನು ಹಿಡಿದು ಅವನೊಡನೆ ಮಂದರಪರ್ವತಕ್ಕೇ ಬಂದು ಸೇರಿದನು ಹರನೂ ಸಹ ಈ ಯುದ್ಧಕಾರ್ಯವನ್ನೆಲ್ಲಾ ಮುಗಿಸಿ ಎರಡು ಸಾವಿರ ವರ್ಷಗಳನಂತರ ಅಲ್ಲಿದ್ದ ತನ್ನ ಮನೆಗೆ ಬಂದು ಸೇರಿದನು. ಅಲ್ಲಿ ಬಿಳಿಯ ಎಕ್ಕದ ಹೂವಿನಲ್ಲಿ ಅಡಗಿಕೊಂಡಿದ್ದ ಪಾರ್ವತಿಯನ್ನೂ ನೋಡಿದನು. ಸರಿಯಾದ ಲಕ್ಷಣಗಳಿಂದೊಡಗೂಡಿ ಬರುತ್ತಿರುವ ಹರನನ್ನು ನೋಡಿ ಪಾರ್ವತಿಯು ತಾನು ಅಡಗಿದ್ದ ಹೂವುಗಳನ್ನು ಬಿಟ್ಟು ಬಂದು ತ್ವರೆಯಿಂದ ತನ್ನ ಸಖಿಗಳನ್ನು ಕರೆದಳು.

ತ್ಯಕ್ತ್ವಾರ್ಕಕುಸುಮಂ ತೂರ್ಣಂ ಸಖೀಸ್ತಾಃ ಸಮುಪಾಹ್ವಯತ್ ।
ಸಮಾಹೂತಾಶ್ಚ ದೇವ್ಯಾಭಾ ಜಯಾದ್ಯಾಸ್ತೂರ್ಣಮಾಗಮನ್ ॥ ೮೪ ॥

ಯಾಭಿಃ ಪರಿವೃತಾ ತಸ್ಥೌ ಹರದರ್ಶನಲಾಲಸಾ ।
ತತಃ ತ್ರಿನೇತ್ರೋ ಗಿರಿಜಾಂ ದೃಷ್ಟ್ವಾ ಹ್ಯಂಧಕದಾನವಂ ॥ ೮೫ ॥

ನಂದಿನಂ ಚ ತಥಾ ಹರ್ಷಾದಾಲಿಂಗಚ್ಚ ಗಿರೇಸ್ಸುತಾಂ ।
ಅಥೋವಾಚ್ಚೈಷದಾಸಸ್ತೆ ಕೃತೋ ದೇವಿ ಮಯಾಂಧಕಃ ॥ ೮೬ ॥

ಪಶ್ಯತ್ವಂ ಪ್ರತಿಯಾತಂ ಹಿ ಸ್ವಸುತಂ ಚಾರುಹಾಸಿನಿ ।
ಇತ್ಯುಚ್ಚಾರ್ಯಾಹಾಂಧಕಂ ವೈ ಪುತ್ರ ಏಹ್ಯೇಹಿ ಸತ್ವರಂ ॥ ೮೭ ॥

ವ್ರಜಸ್ವ ಶರಣಂ ಮಾತುರೇಷಾ ಶ್ರೇಯಸ್ಕರೀ ತವ ।
ಇತ್ಯುಕ್ತೋ ವಿಭುನಾ ನಂದೀ ಅಂಧಕಶ್ಚ ಗಣೇಶ್ವರಃ ॥ ೮೮ ॥

ಸಮಾಗಮ್ಯಾಂಬಿಕಾಪಾದೌ ವವಂದತುರುಭಾವಪಿ ।
ಅಂಧಕೋಪಿ ತದಾ ಗೌರೀಂ ಭಕ್ತಿನಮ್ರೋ ಮಹಾಮುನೆ ।
ಸ್ತುತಿಂ ಚಕ್ರೆ ಮಹಾಪುಣ್ಯಾಂ ಪಾಪಘ್ನೀಂ ಶ್ರುತಿಸಮ್ಮತಾಂ ॥ ೮೯ ॥

ಅಂಧಕ ಉವಾಚ

೮೪-೮೭. ದೇವಿಯಿಂದ ಕರೆಯಲ್ಪಟ್ಟ ಜಯೆಯೇ ಮೊದಲಾದ ಸಖಿಗಳು ಜಾಗ್ರತೆಯಾಗಿ ಬಂದರು. ಅವರೊಡನೆ ಸೇರಿ ದೇವಿಯು ಹರದರ್ಶನ ಕುತೂಹಲದಿಂದ ಕುಳಿತಳು. ಆನಂತರ ಹರನು ಅಲ್ಲಿಗೆ ಬಂದು ಪಾರ್ವತಿಯನ್ನು ನೋಡಿ ಅವಳನ್ನು ಹರ್ಷದಿಂದ ಆಲಂಗಿಸಿದನು. ಹಾಗೆಯೇ ನಂದೀ ಮತ್ತು ಅಂಧಕನನ್ನೂ ಆಲಿಂಗನ ದಿಂದ ಸಂತೋಷಪಡಿಸಿದನು. ಅನಂತರ ಹರನು ದೇವಿಯನ್ನು ಕುರಿತು ದೇವಿ, ಈ ಅಂಧಕನು ನಿನ್ನ ದಾಸನಾಗಿ ಮಾಡಲ್ಪಟ್ಟಿರುವನು. ಹಿಂದೆ ತಿರುಗಿ ದಾಸನಾಗಿ ಬಂದಿರುವ ಈ ಮಗನನ್ನು ಪ್ರೀತಿಯಿಂದ ನೋಡು ಎಂದು ಹೇಳಿ ಅಂಧಕನನ್ನು ಕುರಿತು ಎಲೈ ಪುತ್ರನೇ ಬೇಗ ಬಾ, ಈ ತಾಯಿಯಲ್ಲಿ ನೀನು ಶರಣಾಗತನಾಗು ಇದು ನಿನಗೆ ಶ್ರೇಯಸ್ಕರವೆಂದನು.

೮೮-೯೦. ಈ ರೀತಿ ಶಂಕರನಿಂದ ಹೇಳಲ್ಪಟ್ಟ ನಂದಿಯೂ ಅಂಧಕನೂ ಸಹ ಸಮೀಪಕ್ಕೆ ಬಂದು ದೇವಿಯ ಪಾದಗಳಿಗೆ ನಮಸ್ಕರಿಸಿದರು. ಆಗ ಅಂಧಕನೂ ಸಹ ಭಕ್ತಿಯಿಂದ ತಲೆಬಾಗಿಸಿ ದೇವಿಯನ್ನುದ್ದೇಶಿಸಿ ಪುಣ್ಯಪ್ರದವಾಗಿಯೂ ಪಾಪನಾಶಕ ವಾಗಿಯೂ ಶ್ರುತಿಸಮ್ಮತವಾಗಿಯೂ ಇರುವ ಈ ಸ್ತುತಿಯನ್ನು ಮಾಡಿದನು.

ಗದ್ಯ—ಓಂ ನಮಸ್ತೇಽಸ್ತು ಭವಾನೀಂ ಭೂತಭವ್ಯ ಪ್ರಿಯಾಂ ಲೋಕಧಾತ್ರೀಂ, ಜನಯಿತ್ರೀಂ, ಸ್ಕಂದಮಾತರಂ, ಮಹಾದೇವಪ್ರಿಯಾಂ, ಸ್ಯಂದಿನೀಂ, ಚೇತನಾಂ, ತ್ರೈಲೋಕ್ಯ ಮಾತರಂ, ಶ್ರುತಿಂ, ಸ್ಮೃತಿಂ, ದಯಾಂ, ಲಜ್ಜಾಂ, ಕಾಮು ಕಾಂ, ಪ್ರೀತಿಂ, ಸದಾಪಾವನೀಂ, ದೈತ್ಯಸೈನ್ಯಕ್ಷಯಕರೀಂ, ಮಹಾಮಾಯಾಂ, ಸುಮಾಯಾಂ, ವೈಜಯಂತೀಂ, ಶುಭಾಂ, ಕಾಲರಾತ್ರಿಂ, ಗೋವಿಂದಜನನೀಂ, ಶೈಲರಾಜಪುತ್ರೀಂ, ಸರ್ವ ದೇವಾರ್ಚಿತಾಂ, ಸರ್ವಭೂತಾರ್ಚಿತಾಂ, ವಿದ್ಯಾಂ, ಸರಸ್ವತೀಂ, ತ್ರಿನಯನಮಹಿಷೀಂ, ನಮಸ್ಯಾಮಿ, ಮೃಡಾನೀಂ, ಶರಣ್ಯಾಂ, ಶರಣಮುಪಯಾತೋಽಹಂ ನಮೋ ನಮಸ್ತೇ.

ಇತ್ಥಂ ಸ್ತುತಾ ಸಾಂಧಕೇನ ಪರಿತುಷ್ಟಾ ವಿಭಾವರೀ ।
ಪ್ರಾಹ ಪುತ್ರ ಪ್ರಸನ್ನಾಸ್ಮಿ ವೃಣುಷ್ವ ವರಮುತ್ತಮಂ ॥ ೯೦ ॥

ದೇವಿಯೇ ನಿನಗೆ ನಮಸ್ಕಾರಗಳು. ಭವಪತ್ನಿಯಾಗಿಯೂ ಭೂತಭಾವಿಸರ್ವ ವಸ್ತುಪ್ರಿಯಳಾಗಿಯೂ ಲೋಕರಕ್ಷಕಳಾಗಿಯೂ ಉತ್ಪಾದಕಳಾಗಿಯೂ ಷಣ್ಮುಖನ ತಾಯಿಯಾಗಿಯೂ ಶಂಕರನ ಪ್ರಿಯೆಯಾಗಿಯೂ ದಯಾಮಯಿಯಾಗಿಯೂ ಚೈತನ್ಯರೂಪಳಾಗಿಯೂ ಲೋಕತ್ರಯಕ್ಕೂ ತಾಯಿಯಾಗಿಯೂ ಶ್ರುತಿ, ಸ್ಮೃತಿ, ದಯಾ, ಲಜ್ಜಾ, ಪ್ರೀತಿ ಇವುಗಳಿಗೆ ನಿಯಾಮಕಳಾಗಿಯೂ ಇಷ್ಟಾರ್ಥಪ್ರದ ಳಾಗಿಯೂ ನಿತ್ಯ ಶುದ್ಧಳಾಗಿಯೂ ದೈತ್ಯಸೈನ್ಯನಾಶಕಳಾಗಿಯೂ ಮಹಾಮಾಯಾ ರೂಪಳಾಗಿಯೂ ಕಾರ್ಯಮಾಯಾರೂಪಳಾಗಿಯೂ ಉನ್ನತಳಾಗಿಯೂ ಶುಭಕಾರಿಣಿ ಯಾಗಿಯೂ ಕಾಲರಾತ್ರಿರೂಪಳಾಗಿಯೂ ಗೋವಿಂದಸೋದರಿಯಾಗಿಯೂ ಹಿಮ ವತ್ಪುತ್ರಿಯಾಗಿಯೂ ಸರ್ವ ದೇವತೆಗಳಿಂದಲೂ ಸರ್ವಭೂತಗಳಿಂದಲೂ ಪೂಜಿತ ಳಾಗಿಯೂ ಜ್ಞಾನಸ್ವರೂಪಳಾಗಿಯೂ ಸರಸ್ವತೀರೂಪಳಾಗಿಯೂ ತ್ರಿನೇತ್ರನ ಪಟ್ಟ ಮಹಿಷಿಯಾಗಿಯೂ ಭವನಪತ್ನಿಯಾಗಿಯೂ ಶರಣಾರ್ಹಳಾಗಿಯೂ ಇರುವ ನಿನಗೆ ಪುನಃ ಪುನಃ ಅನಂತ ನಮಸ್ಕಾರಗಳು. ಶರಣಾಗತನಾದ ನಾನು ನಿನ್ನನ್ನೇ ಆಶ್ರಯಿಸಿರು ವೆನು. ಈ ಪ್ರಕಾರ ಅಂಧಕನಿಂದ ಸ್ತೋತ್ರಮಾಡಲ್ಪಟ್ಟ ದೇವಿಯು ಪುತ್ರನೇ ನಾನು ಪ್ರಸನ್ನಳಾಗಿರುವೆನು. ಇಷ್ಟವಾದ ವರವನ್ನು ಬೇಡಿಕೋ ಎಂದಳು.

ಭೃಂಗಿರುವಾಚ

ಪಾಪಂ ಪ್ರಶಮಮಾಯಾತು ತ್ರಿವಿಧಂ ಮಮ ಪಾರ್ವತಿ।
ತಥೇಶ್ವರೇಚ ಸತತಂ ಭಕ್ತಿರಸ್ತು ಮಮಾಂಬಿಕೆ ॥೯೧॥

ಪುಲಸ್ತ್ಯ ಉವಾಚ

ಬಾಢಮಿತ್ಯಬ್ರವೀದ್ಗೌರೀ ಹಿರಣ್ಯಾಕ್ಷಸುತಂ ತತಃ।
ಮಮಾಗ್ರೆ ಪೂಜಯರ್ಯ ಶರ್ವಂ ಗಣಾನಾಮಧಿಪೋ ಭವ ॥೯೨॥

ವಪುರ್ದಧಾನಸ್ಯ ತಥಾ ಚ ತಸ್ಯ
ಮಹೇಶ್ವರೇಣಾಪ್ಯವಿರೂಪದೃಷ್ಟ್ಯಾ।
ಕೃತ್ವೈವಮುಚ್ಚೈಃ ಭಯದಂ ತು ಭೈರವಂ
ಭೃಂಗಿತ್ವಮೀಶೇನ ಕೃತಾ ಸ್ವಶಕ್ತ್ಯಾ ॥೯೩॥

ಏತತ್ತವೋಕ್ತಂ ಹರಕೀರ್ತಿವರ್ಧನಂ
ಪುಣ್ಯಂ ಪವಿತ್ರಂ ಶುಭದಂ ಮಹರ್ಷೇ।

೯೧-೯೪. ಆಗ ಭೃಂಗಿಯು ಪಾರ್ವತಿಯೇ ನಾನು ನಿನ್ನ ವಿಷಯದಲ್ಲಿ ಮನೋವಾಕ್ಕಾಯಗಳಿಂದ ಮಾಡಿರುವ ಮೂರು ವಿಧವಾದ ಪಾಪಗಳೂ ನಾಶ ಹೊಂದಲಿ. ಮತ್ತು ಈಶ್ವರನಲ್ಲಿ ಅಚಲವಾದ ಭಕ್ತಿಯು ಯಾವಾಗಲೂ ನನಗೆ ಉಂಟಾಗಲಿ ಎಂದು ಪ್ರಾರ್ಥಿಸಲು, ಪಾರ್ವತಿಯು ಹಾಗೆಯೇ ಆಗಲೆಂದು ಹೇಳಿ ನನ್ನ ಎದುರಿಗೆ ನೀನು ಈಶ್ವರನನ್ನು ಪೂಜಿಸುತ್ತಾ ಗಣಗಳಿಗೆ ಅಧಿಪತಿಯಾಗಿರು. ಮಹೇಶ್ವರನಿಗೆ ಸದೃಶವಾದ ಭಯಂಕರವಾದ ಭೈರವನ ರೂಪವನ್ನು ಧರಿಸಿರುವ ಅಂಧಕನಿಗೆ ಆ ಮಹೇಶ್ವರನೇ ಭೃಂಗಿರೂಪವನ್ನು ಕೊಟ್ಟಿದ್ದಾನೆ. ಎಂದು ಪುಲಸ್ತ್ಯರು ವೃತ್ತಾಂತವನ್ನು ಮುಗಿಸಿ ಹರಕೀರ್ತಿಗೆ ಅಭಿವೃದ್ಧಿಪ್ರದವಾದ ಈ ಪವಿತ್ರವಾಗಿಯೂ ಪುಣ್ಯಕರವಾಗಿಯೂ ಇರುವ ಉಪಾಖ್ಯಾನವನ್ನು ನಿನಗೆ ಹೇಳಿದ್ದೇನೆ. ಆಯು

ಸಂಕೀರ್ತನೀಯಂ ದ್ವಿಜಸತ್ತಮೇಷು
ಧರ್ಮಾಯುರಾರೋಗ್ಯಧನೈಷಿಣಾ ಸದಾ ॥ ೯೪ ॥

ಇತಿ ಶ್ರೀ ವಾಮನಪುರಾಣೇ ಭೈರವಪ್ರಾದುರ್ಭಾವೇ ಅಂಧಕ
ವರಪ್ರದಾನಂ ನಾಮ ಸಪ್ತತಿತಮೋಽಧ್ಯಾಯಃ

ರಾರೋಗ್ಯಾದಿ ಫಲಾಪೇಕ್ಷೆಯುಳ್ಳ ಬ್ರಾಹ್ಮಣೋತ್ತಮರು ಇದನ್ನು ಯಾವಾಗಲೂ ಪಠನ ಮಾಡಬೇಕೆಂದು ನಾರದರನ್ನು ಕುರಿತು ಫಲಶ್ರುತಿಯಿಂದ ಉಪಸಂಹರಿಸಿದರು.

ಇಲ್ಲಿಗೆ ಶ್ರೀ ವಾಮನಪುರಾಣದ ಭೈರವಪ್ರಾದುರ್ಭಾವದಲ್ಲಿ
ಅಂಧಕವರಪ್ರಧಾನವೆಂಬ ಎಪ್ಪತ್ತನೆಯ ಅಧ್ಯಾಯ ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ದೈತ್ಯಬಲವೆಲ್ಲಾ ಭಗ್ನವಾದನಂತರ ಇಂದ್ರನು ಪರಾಕ್ರಮದಿಂದ ವಿಜೃಂಭಿಸಿ ಅಂಧಕನನ್ನು ಯುದ್ಧಕ್ಕೆ ಕರೆಯಲು ಅಂಧಕನೂ ಸಹ ವೀರಾವೇಶದಿಂದ ಯುದ್ಧಮಾಡಲು ನಿಶ್ಚೈಸಿ ಸಾರಥಿಯನ್ನು ಕುರಿತು ಹರನ ಸಮೀಪಕ್ಕೆ ರಥವನ್ನು ಪ್ರೇರಿಸಲು ಆಜ್ಞೆಮಾಡಿದನೆಂದೂ ಆ ಆಜ್ಞೆಯಂತೆ ಸಾರಥಿಯು ಭಯದಿಂದ ನಡು ಬಗ್ಗಿಹೋದ ಕುದುರೆಗಳಿಂದಲೇ ರಥವನ್ನು ಹರನ ಸಮೀಪಕ್ಕೆ ಒಯ್ದನೆಂದೂ ಆಗ ಅಂಧಕನು ಹರಿತವಾದ ಬಾಣಗಳಿಂದ ಇಂದ್ರ ವಿಷ್ಣು ಮಹೇಶ್ವರರನ್ನೆಲ್ಲಾ ಘಾಸಿಪಡಿಸಿದನೆಂದೂ ಹೇಳಲಾಯಿತು. ಆಗ ವಿಷ್ಣುವಿನ ಆಜ್ಞೆಯಿಂದ ದೇವತೆಗಳೆಲ್ಲರೂ ತ್ವರಿತರಾಗಿ ಯುದ್ಧಮಾಡುವ ಸಮಯದಲ್ಲಿ ಷಣ್ಮುಖನು ಅಂಧಕನ ಸಾರಥಿಯನ್ನೂ ಇಂದ್ರನೊಡಗೂಡಿದ ವಿನಾಯಕಾದಿ ಗಣಗಳು ಅವನ ರಥವನ್ನೂ ನಾಶಪಡಿಸಲು ಆ ಸಾಹಸಿಯಾದ ಅಂಧಕನು ರಥವನ್ನು ಬಿಟ್ಟು ಗದಾಧಾರಿಯಾಗಿ ದೇವತೆಗಳನ್ನು

ಚದುರಿಸಿ ವೀರಾವೇಶದಿಂದ ಮಹೇಶ್ವರನನ್ನು ಕುರಿತು ಎಲೈ ಭಿಕ್ಷುವೇ ನೀನು ಸೇನಾ ಸಮೇತನಾಗಿರುವೆ. ನಾನು ಧೊರೆಯಾಗಿದ್ದರೂ ಅಸಹಾಯನಾಗಿರುವೆನು. ಆದರೂ ನಿನ್ನನ್ನು ಜಯಿಸುವೆನು. ನನ್ನ ಪರಾಕ್ರಮವನ್ನು ನೋಡು ಎಂದು ಹೇಳುತ್ತಾ ಸಮಿಾಪಕ್ಕೆ ಬಂದನು. ಆ ಮಾತನ್ನು ಕೇಳಿ ಶಂಕರನು ಇಂದ್ರಾದಿ ದೇವತೆಗಳನ್ನೆಲ್ಲಾ ತನ್ನ ಶರೀರದಲ್ಲಿ ಅಡಗಿಸಿ ತಾನೂ ಒಬ್ಬನೇ ಆಗಿ ಆ ದೈತ್ಯನನ್ನು ಯುದ್ಧಕ್ಕೆ ಕರೆಯಲು ಗಧಾಧಾರಿಯಾದ ಅಂಧಕನು ವೇಗದಿಂದ ಪ್ರಹರಿಸಲು ಬಂದನೆಂದೂ ಆಗ ಪದಾತಿಯಾಗಿ ನಿಂತಿದ್ದ ಮಹೇಶ್ವರನು ಭಯಂಕರವಾದ ಭೈರವರೂಪವನ್ನು ಹೊಂದಿ ಶೂಲಾಯುಧದಿಂದ ಅಂಧಕನನ್ನು ಹೃದಯದಲ್ಲಿ ಭೇದಿಸಿದನೆಂದೂ ಹೇಳಲಾಯಿತು. ಆಗ ಸಾಹಸಿಯಾದ ಅಂಧಕನು ಆ ಶೂಲವನ್ನು ಹಿಡಿದುಕೊಂಡು ಹರದಾರಿಯವರೆವಿಗೂ ಭ್ರಮಣಮಾಡಲುಪಕ್ರಮಿಸಿದಾಗ ಶಂಕರನು ದಯೆಯಿಂದ ಆ ಶೂಲವನ್ನು ಹೊರಕ್ಕೆ ತೆಗೆಯಲು ಆ ದೈತ್ಯನು ಗದೆಯಿಂದ ಶಂಕರನ ತಲೆಯಮೇಲೆ ಬಲವಾಗಿ ಪ್ರಹರಿಸಲು ತಲೆಯಿಂದ ಧಾರಾರೂಪವಾಗಿ ರಕ್ತವು ಹರಿಯಿತೆಂದೂ ಹೇಳಲಾಯಿತು. ಅನಂತರ ಆ ರಕ್ತದಿಂದ ಏಳು ಜನ ಭೈರವರು ಹುಟ್ಟಿದರೆಂದೂ, ಸಪ್ತಮೂರ್ತಿಯಾಗಿ ರಕ್ತದಲ್ಲಿ ಮುಳುಗಿದ ಶಂಕರನ ಬೆವರಿದ ಮುಖಭಾಗದಿಂದ ಕನ್ಯೆಯೊಬ್ಬಳುದಯಿಸಿದಳೆಂದೂ ಭೂಮಿಯಲ್ಲಿ ಬಿದ್ದ ಬೆವರಿನಿಂದ ಬೆಂಕಿಯಂತೆ ಜ್ವಲಿಸುವ ಬಾಲಕನೊಬ್ಬನು ಉದಯಿಸಿದನೆಂದೂ ಅವರಿಬ್ಬರೂ ಆ ಅಂಧಕನ ರಕ್ತವನ್ನು ಪಾನಮಾಡಿದರೆಂದೂ ಹೇಳಲಾಯಿತು. ಶಂಕರನ ವರದಿಂದ ತುಷ್ಟಳಾದ ಆ ಕನ್ಯೆಯು ದೇವಪೂಜ್ಯತೆಯನ್ನು ಹೊಂದಿ ಚರ್ಚಿಕೆಯೆಂಬ ನಾಮಧೇಯದಿಂದ ಹಿಂಗುಲಕ ಪರ್ವತವನ್ನು ಹೋಗಿ ಸೇರಿದಳೆಂದೂ ಆ ಬಾಲಕನು ಕುಜನೆಂಬ ಹೆಸರಿನಿಂದ ಗ್ರಹಗಳ ಮಧ್ಯದಲ್ಲಿ ಮಹತ್ವಹೊಂದಿದನೆಂದೂ ಹೇಳಲಾಯಿತು. ಅನಂತರ ಶಂಕರನು ತನ್ನ ನೇತ್ರಾಗ್ನಿಯಿಂದ ಅನೇಕವರ್ಷಸಹಸ್ರಪರ್ಯಂತವೂ ಆ ಅಂಧಕನನ್ನು ಶುಷ್ಕಬಲನನ್ನಾಗಿಯೂ ಅಸ್ಥಿಚರ್ಮಾವಶಿಷ್ಟನನ್ನಾಗಿಯೂ ಮಾಡಿದನಂತರ ಸರ್ವಪಾಪನಾಶದಿಂದ ವಿಶುದ್ಧ ಜ್ಞಾನಹೊಂದಿದ ಆ ಅಂಧಕನು ಈಶ್ವರನನ್ನು ಬಹುವಿಧವಾಗಿ ಸ್ತೋತ್ರಮಾಡಲು ಸಂತುಷ್ಟನಾದ ಈಶ್ವರನ ವರದಿಂದ ಅವನು ಸರ್ವಪಾಪರಹಿತನಾಗಿಯೂ ಸ್ಥಿರವಾದ ಭಗವದ್ಭಕ್ತಿಯುಳ್ಳವನಾಗಿಯೂ ಆಗಿ ಭೃಂಗಿ ಎಂಬ ಹೆಸರಿನಿಂದ ಗಣಪತಿಯಾದನು.

ಅನಂತರ ಈಶ್ವರನು ಇಂದ್ರಾದಿದೇವತೆಗಳನ್ನೆಲ್ಲಾ ತನ್ನ ದೇಹದಿಂದ ಹೊರಗೆ ಹೊರಡಿಸಿ ಯಥಾರ್ಹವಾಗಿ ಅವರನ್ನು ಸತ್ಕರಿಸಿ ಇಂದ್ರನನ್ನು ಸ್ವಕಾರ್ಯಕ್ಕಾಗಿ ಮಲಯ ಪರ್ವತಕ್ಕೆ ಹೋಗುವಂತೆಯೂ ಇತರ ದೇವತೆಗಳನ್ನು ತಮ್ಮ ತಮ್ಮ ಸ್ಥಾನಗಳಿಗೆ ಹೋಗುವಂತೆಯೂ ಹೇಳಿ ಬೀಳ್ಕೊಟ್ಟನೆಂದೂ ಗಣಗಳನ್ನೂ ತನ್ನ ದೇಹದಿಂದ ಹೊರಕ್ಕೆ ಬರಹೇಳಿ ಅವರನ್ನೂ ಭೋಗಯೋಗ್ಯವಾದ ಲೋಕಗಳಿಗೆ ಹೊರಡುವಂತೆ ಅಪ್ಪಣೆಮಾಡಿ ಅನಂತರ ಮಂದರಪರ್ವತಕ್ಕೆ ಅಭಿಮುಖನಾದನೆಂದೂ ಅವನ ಲಕ್ಷಣ ಗಳನ್ನು ತಿಳಿದು ಪಾರ್ವತಿಯು ತಾನು ಅಡಗಿದ್ದ ಬಿಳಿ ಎಕ್ಕದ ಹೂವಿನಿಂದ ಹೊರಗೆ ಬಂದು ಸಖಿಗಳನ್ನೂ ಕರೆದು ಹರದರ್ಶನ ಕುತೂಹಲದಿಂದ ಕುಳಿತಿರಲು ಹರನೂ ನಂದಿ ಭೃಂಗಿ ಇವರೊಡನೆ ಅಲ್ಲಿ ಸೇರಿ ಪಾರ್ವತಿಯನ್ನೂ ಈ ಗಣಾಧಿಪತಿಯರನ್ನೂ ಆಲಿಂಗನದಿಂದ ಸಂತೋಷಪಡಿಸಿ ಪಾರ್ವತಿಯನ್ನು ಕುರಿತು ಈ ಅಂಧಕನು ಪರಮ ಭಕ್ತನಾದ ಪುತ್ರನಾಗಿ ನಿನ್ನಲ್ಲಿ ಬಂದಿರುವನು. ಇವನನ್ನು ಪ್ರೀತಿಯಿಂದ ನೋಡು ಎಂದು ಹೇಳಲು ಅಂಧಕನೂ ತನ್ನ ಅಪರಾಧಶಾಂತಿಗಾಗಿ ದೇವಿಯ ಪಾದಗಳಿಗೆ ನಮಸ್ಕರಿಸಿ ಬಹು ಮುಖವಾಗಿ ಸ್ತೋತ್ರಮಾಡಿದನೆಂದೂ ಹೇಳಲಾಯಿತು. ಸಂತುಷ್ಟ ಳಾದ ಪಾರ್ವತಿಯ ವರದಿಂದ ಅಂಧಕನು ನಿಷ್ಪಾಪನಾಗಿಯೂ ಹರಪೂಜಾಸಕ್ತ ನಾಗಿಯೂ ಭಕ್ತನಾಗಿಯೂ ಪರಿಣಮಿಸಿದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಏಕಸಪ್ತತಿತಮೋಽಧ್ಯಾಯಃ

ನಾರದ ಉವಾಚ

ಮಲಯೇಽಪಿ ಮಹೇಂದ್ರೇಣ ಯತ್ಕೃತಂ ದ್ವಿಜಸತ್ತಮ ।
ನಿಷ್ಪಾದಿತಂ ಸ್ವಕಂ ಕಾರ್ಯಂ ತನ್ಮೇ ತ್ವಂ ಖ್ಯಾತುಮರ್ಹಸಿ ॥ ೧ ॥

ಪುಲಸ್ತ್ಯ ಉವಾಚ

ಶ್ರೂಯತಾಂ ಯನ್ಮಹೇಂದ್ರೇಣ ಮಲಯೇ ಪರ್ವತೇ ಮುನೇ ।
ಕೃತಂ ಲೋಕಹಿತೇ ಕಾರ್ಯಮಾತ್ಮನಶ್ಚ ತಥಾ ಹಿತಂ ॥ ೨ ॥

ಅಘಾಸುರಸ್ಯ ವಚನಾನ್ಮಯತಾರಪುರೋಗಮಾಃ ।
ತೇ ನಿರ್ಜಿತಾಸ್ಸುರಗಣೈಃ ಪಾತಾಲಗಮನೋತ್ಸುಕಾಃ ॥ ೩ ॥

ಎಪ್ಪತ್ತೊಂದನೆಯ ಅಧ್ಯಾಯವು

೧-೫. ಮಲಯಪರ್ವತದಲ್ಲಿ ಇಂದ್ರನು ಏನು ಮಾಡಿದನು. ಅಲ್ಲಿ ಹೊಂದಿದ ಸ್ವಕಾರ್ಯಸಿದ್ಧಿಯಾವುದು ಎಂದು ನಾರದರು ಪ್ರಶ್ನೆಮಾಡಲು ಪುಲಸ್ತ್ಯರು ಹೇಳುತ್ತಾರೆ. ಮಹರ್ಷಿಯೇ ಮಲಯಪರ್ವತದಲ್ಲಿ ಇಂದ್ರನು ಲೋಕಹಿತಕ್ಕಾಗಿಯೂ ತನ್ನ ಹಿತಕ್ಕಾಗಿಯೂ ಮಾಡಿದ ಕಾರ್ಯವನ್ನು ಹೇಳುತ್ತೇನೆ ಕೇಳು ಎಂದುಪಕ್ರಮಿಸಿ ಹೇಳ ತೊಡಗಿದರು. ದೇವತೆಗಳು ಅಘಾಸುರನ ಮಾತಿನ ಮೇಲೆ ಮಯ ತಾರ ಮೊದಲಾದ ದಾನವರನ್ನು ಜಯಿಸಲಾಗಿ ಆ ದಾನವರು ಪಾತಾಲಕ್ಕೆ ಓಡಿಹೋಗಲು ಆಸೆಪಟ್ಟರು.

ದದೃಶುರ್ಮಲಯಂ ವಿಪ್ರ ಸಿದ್ಧೈಸ್ಸೇವಿತಕಂದರಂ ।
ಲತಾ*ವಿಮಾನಸಂಛನ್ನಂ ಮತ್ತಸತ್ತ್ವಸಮಾಕುಲಂ ॥ ೪ ॥

ಚಂದನೈರುರಗಾಕ್ರಾಂತೈಃ ಸುಶೀತೈರತಿಸೇವಿತಂ ।
ಮಾಧವೀಕುಸುಮಾಮೋದ ಸುಗಂಧಿತಮಹಾಗಿರಿಂ ॥ ೫ ॥

ತಂ ದೃಷ್ಟ್ವಾ ಶೀತಲಚ್ಛಾಯಂ ಶ್ರಾಂತಾ ವ್ಯಾಯಾಮಕರ್ಶಿತಾಃ ।
ಮಯತಾರಪುರೋಗಾಸ್ತೆ ನಿವಾಸಂ ಸಮರೋಚಯನ್ ॥ ೬ ॥

ತೇಷು ತತ್ರ ನಿವಿಷ್ಟೇಷು ಘ್ರಾಣತೃಪ್ತಿಪ್ರದೋಽನಿಲಃ ।
ವಿವಾತಿ ಶೀತಃ ಶನಕೈಃ ದಕ್ಷಿಣೋ ಗಂಧಸಂಯುತಃ ॥ ೭ ॥

ತತ್ರೈವ ಚ ರತಿಂ ಚಕ್ರುಃ ಸರ್ವಏವ ಮಹಾಸುರಾಃ ।
ಕುರ್ವಂತೋ ಲೋಕಪೂಜ್ಯಾನಾಂ ವಿದ್ವೇಷಂ ಸರ್ವವಾಸಸಾಂ ॥ ೮ ॥

ಅವರು ಹೋಗುತ್ತಿದ್ದ ದಾರಿಯಲ್ಲೇ ಮಲಯಪರ್ವತವನ್ನು ನೋಡಿದರು. ಆ ಪರ್ವತವು ಸಿದ್ಧರ ವಿಹಾರದಿಂದ ಕೂಡಿದ ಗುಹೆಗಳಿಂದಲೂ ಮತ್ತವಾದ ವನ ಮೃಗಗಳಿಂದಲೂ ಕೂಡಿ ಲತಾಮಂಟಪದಿಂದ ಮುಚ್ಚಲ್ಪಟ್ಟು ಸರ್ಪಗಳಿಂದ ಸೇವಿಸ ಡುತ್ತಿರುವ ಶೀತಲವಾದ ಚಂದನದ ಮರಗಳಿಂದಲೂ ಮಲ್ಲಿಗೆಯ ಹೂವಿನ ಪರಿಮಳ ದಿಂದಲೂ ಕೂಡಿ ರಮ್ಯವಾಗಿದ್ದಿತು.

೬-೮. ತಣ್ಣಗಿರುವ ನೆರಳಿನಿಂದ ಕೂಡಿದ ಆ ಪರ್ವತವನ್ನು ನೋಡಿ ಮಯ ತಾರ ಮೊದಲಾದ ದಾನವರೆಲ್ಲಾ ವ್ಯಾಯಾಮದಿಂದ ಬಳಲಿದ್ದುದರಿಂದ ಅಲ್ಲಿಯೇ ವಿಶ್ರಾಂತಿಹೊಂದಲು ಆಶೆಪಟ್ಟರು. ಅಲ್ಲಿ ಅವರು ನಿಂತಮೇಲೆ ಅಲ್ಲಿದ್ದ ದಕ್ಷಿಣ ಮಾರುತವು ಮೂಗಿಗೆ ಇಂಪಾದ ವಾಸನೆಯಿಂದ ಕೂಡಿ ಶೀತಲವಾಗಿ ಮೆಲ್ಲಗೆ ಬೀಸ ತೊಡಗಿತು. ಅನಂತರ ತೃಪ್ತರಾದ ಆ ದಾನವರು ಅಲ್ಲಿಯೇ ವಾಸಮಾಡಲು ಆಶಿಸಿ ನೆಲೆಮಾಡಿದರು. ಅಲ್ಲಿ ವಾಸಿಸುತ್ತಿದ್ದ ಪೂಜ್ಯರಾದ ತಪಸ್ವಿಗಳೇ ಮೊದಲಾದವರಿಗೆ ಈ ದಾನವರಿಂದ ಕಿರಕುಳವೂ ವಿದ್ವೇಷವೂ ಹೆಚ್ಚಿತು. ಇದನ್ನು ತಿಳಿದ ಶಂಕರನು

---

* ಇಲ್ಲಿ ವಿತಾನವೆಂದು ಪಾಠವಿರಬೇಕೆಂದು ತೋರುತ್ತದೆ.

ತಾಂ ಜ್ಞಾತ್ವಾ ಶಂಕರಃ ಶಕ್ರಂ ಮಲಯಂ ಪ್ರೈಷಯತ್ತದಾ ।
ಸ ಚಾಪಿ ದದೃಶೇ ಗಚ್ಛನ್ ಪಥಿ ಗೋಮಾತರಂ ಹರಿಃ ॥೯॥

ತಸ್ಯಾಃ ಪ್ರದಕ್ಷಿಣಾಂ ಕೃತ್ವಾ ದೃಷ್ಟ್ವಾ ಶೈಲಂ ಚ ಸುಪ್ರಭಂ ।
ದದೃಶೇ ದಾನವಾನ್ಸರ್ವಾನ್ ಸಂಹೃಷ್ಟಾನ್ಭೋಗಸಂಯುತಾನ್ ॥೧೦॥

ಅಥಾಜುಹಾವ ಬಲಹಾ ಸರ್ವಾನೇವ ಮಹಾಸುರಾನ್ ।
ತೇಚಾಪ್ಯಾಯುಯುರವ್ಯಗ್ರಾಃಕಿರಂತಶ್ಚ ಶರೋತ್ಕರಾನ್ ॥೧೧॥

ತಾನಾಗತಾನ್ ಬಾಣಜಾಲೈರಥಸ್ಥೋದ್ಭುತದರ್ಶನಃ ।
ಛಾದಯಾಮಾಸ ವಿಪ್ರರ್ಷೇ ಗಿರಿಂ ದೃಷ್ಟ್ವಾ ಯಥಾ ಘನಃ ॥೧೨॥

ತತೋ ಬಾಣೈರವಚ್ಛಾದ್ಯ ಮಯಾದೀನ್ದಾನವಾನ್ ಹರಿಃ ।
ಪಾಕಂ ಜಘಾನ ತೀಕ್ಷ್ಣಾಗ್ರೈರ್ಮಾರ್ಗಣೈಃ ಕಂಕವಾಸಸೈಃ ॥೧೩॥

ತತ್ರ-ನಾಮ ವಿಭುರ್ಲೇಭೆ ಶಾಸನಾಚ್ಚ ಶರೈರ್ದೃಢಂ ।
ಪಾಕಶಾಸನ ಇತ್ಯೇವಂ ಸರ್ವಾಮರಪತಿರ್ವಿಭುಃ ॥೧೪॥

ಅವರ ಬಾಧೆಯನ್ನು ತಪ್ಪಿಸಲು ಇಂದ್ರನನ್ನು ಅಲ್ಲಿಗೆ ಕಳುಹಿಸಿದನು. ಇಂದ್ರನೂ ದಾರಿಯಲ್ಲಿ ಹೋಗುತ್ತಾ ಕಾಮಧೇನುವನ್ನು ಮಧ್ಯಮಾರ್ಗದಲ್ಲಿ ಕಂಡನು.

೧೦-೧೩. ಆ ಧೇನುವಿಗೆ ಪ್ರದಕ್ಷಿಣಮಾಡಿ ಮುಂದೆ ನಡೆದು ಪ್ರಕಾಶಿಸುತ್ತಿರುವ ಆ ಮಲಯ ಪರ್ವತವನ್ನೂ ಅಲ್ಲಿ ಭೋಗಾಸಕ್ತರಾಗಿ ಸಂತೋಷದಿಂದಿದ್ದ ದಾನವರನ್ನೂ ನೋಡಿದನು. ಆಗ ಬಲಾಸುರ ಶತ್ರುವಾದ ಇಂದ್ರನು ಎಲ್ಲಾ ಅಸುರರನ್ನೂ ಯುದ್ಧಕ್ಕೆ ಕರೆಯಲು ಅವರೂ ಸಿದ್ಧರಾಗಿ ಬಾಣವೃಷ್ಟಿಯನ್ನುಂಟುಮಾಡುತ್ತಾ ಯುದ್ಧಾಭಿಮುಖರಾದರು. ಹಾಗೆ ಬಂದ ಅಸುರರನ್ನೆಲ್ಲಾ ರಥದಲ್ಲಿ ಕುಳಿತ ಇಂದ್ರನು ಮೇಘವು ಪರ್ವತವನ್ನು ನೋಡಿ ಮಳೆಗರೆಯುವಂತೆ ಬಾಣವೃಷ್ಟಿಯಿಂದ ಆಚ್ಛಾದಿಸಿದನು. ಎಲ್ಲಾ ದಾನವರನ್ನೂ ಬಾಣಪರಂಪರೆಯಿಂದ ಮುಚ್ಚಿ ಪಾಕನೆಂಬ ಅಸುರನನ್ನು ನಿಶಿತವಾಗಿಯೂ ಗರಿಗಳಿಂದ ಕೂಡಿಯೂ ಇರುವ ಬಾಣಗಳಿಂದ ಬಹಳವಾಗಿ ಪ್ರಹರಿಸಿದನು.

೧೪-೧೭. ಆಗಲೇ ಪ್ರಭುವಾದ ಇಂದ್ರನು ಪಾಕನೆಂಬ ಅಸುರನನ್ನು ಶಾಸನ ಮಾಡಿದುದರಿಂದ ಪಾಕಶಾಸನನೆಂಬ ಪ್ರಖ್ಯಾತಿಯನ್ನು ಪಡೆದನು. ಹಾಗೆಯೇ

ತಥಾನ್ಯಂ ಪುರನಾಮಾನಂ ಬಾಣಾಸುರಸುತಂ ಶರೈಃ ।
ಸುಪುಂಖೈರ್ದಾರಯಾಮಾಸ ತತೋಽಭೂತ್ಸ ಪುರಂದರಃ ॥ ೧೫ ॥

ಹತ್ವೇತ್ಥಂ ಸಮರೇ ಜೈಷೀದ್ಗೋತ್ರಭಿದ್ದಾನವಂ ಬಲಂ ।
ತಚ್ಚಾಪಿ ವಿಜಿತಂ ಬ್ರಹ್ಮನ್ ರಸಾತಲಮುಪಾಗಮತ್ ॥ ೧೬ ॥

ಏತದರ್ಥಂ ಸಹಸ್ರಾಕ್ಷಃ ಪ್ರೇಷಿತೋ ಮಲಯಾಚಲಂ ।
ತ್ರ್ಯಂಬಕೇಣ ಮುನಿಶ್ರೇಷ್ಠ ಕಿ ಮನ್ಯಚ್ಛ್ರೋತುಮಿಚ್ಛಸಿ ॥ ೧೭ ॥

ನಾರದ ಉವಾಚ

ಕಿಮರ್ಥಂ ದೈವತಪತಿಃ ಗೋತ್ರಭಿತ್ಕಥ್ಯತೇ ಹರಿಃ ।
ಅಯಂ ಮೇ ಸಂಶಯೋ ಬ್ರಹ್ಮನ್ ಹೃದಿ ಸಂಪರಿವರ್ತತೇ ॥ ೧೮ ॥

ಪುಲಸ್ತ್ಯ ಉವಾಚ

ಶ್ರೂಯತಾಂ ಗೋತ್ರಭಿಚ್ಛಕ್ರಃ ಕೀರ್ತಿತೋ ಹಿ ಯಥಾ ಮಯಾ ।
ಹತೇ ಹಿರಣ್ಯಕಶಿಪೌ ಯಚ್ಚಕಾರಾರಿಮರ್ದನಃ ॥ ೧೯ ॥

ಬಾಣಾಸುರನ. ಮಗನಾದ ಪುರನೆಂಬುವವನನ್ನು ಬಾಣಗಳಿಂದ ಸೀಳಿದುದರಿಂದ ಪುರಂದರನೆಂದೂ ಪ್ರಸಿದ್ಧನಾದನು. ಈ ಪ್ರಕಾರ ಪ್ರಧಾನ ದಾನವರನ್ನು ನಾಶಪಡಿಸಿ ಇಂದ್ರನು ದೈತ್ಯಬಲವನ್ನೆಲ್ಲಾ ಜಯಿಸಿದನು. ಜಯಿಸಲ್ಪಟ್ಟ ಆ ದಾನವ ಬಲವು ಪಾತಾಲಲೋಕಕ್ಕೆ ಓಡಿತು. ಶಂಕರನು ಈ ಕಾರ್ಯಕ್ಕಾಗಿಯೇ ಇಂದ್ರನನ್ನು ಮಲಯಪರ್ವತಕ್ಕೆ ಕಳುಹಿಸಿದನು. ಎಂದು ಹೇಳಿ ಮುನಿವರ್ಯನೇ ಮತ್ತೇನನ್ನು ನನ್ನಿಂದ ಕೇಳಬಯಸುವೆ ಎಂದು ಪ್ರಶ್ನೆಮಾಡಲು ನಾರದರು ಹೇಳುತ್ತಾರೆ.

೧೮-೨೨. ದೇವಪತಿಯಾದ ಇಂದ್ರನನ್ನು ಗೋತ್ರಭಿತ್ ಎಂದು ಏಕೆ ಹೇಳುವರು ಎಂಬ ವಿಷಯದಲ್ಲಿ ನನಗೆ ಬಹಳ ಸಂದೇಹವಿದೆ. ಈ ಸಂದೇಹವನ್ನು ದಯವಿಟ್ಟು ಪರಿಹರಿಸಬೇಕು ಎಂದು ನಾರದರು ಕೇಳಲು ಪುಲಸ್ತ್ಯರು ಹೇಳುತ್ತಾರೆ. ಇಂದ್ರನು ಗೋತ್ರಭಿತ್ ಎಂದು ಕರೆಯಲ್ಪಡಲು ಕಾರಣವೇನೆಂಬುದನ್ನು ನಾನು ಹೇಳುತ್ತೇನೆ. ಕೇಳು. ಹಿರಣ್ಯಕಶಿಪುವು ಹತನಾದ ನಂತರ ಇಂದ್ರನು ದಾನವರ ನಾಶಕ್ಕಾಗಿ

ದಿತಿರ್ವಿನಷ್ಟಪುತ್ರಾ ತು ಕಶ್ಯಪಂ ಪ್ರಾಹ ನಾರದ ।
ವಿಭೋऽನಾಥೋऽಸಿ ಮೇ ದೇಹಿ ಶಕ್ರಹಂತಾರಮಾತ್ಮಜಂ ॥ ೨೦ ॥

ಕಶ್ಯಪಸ್ತಾಮುವಾಚಾಥ ಯದಿತ್ವಮಸಿತೇಕ್ಷಣೆ ।
ಶೌಚಾಚಾರಸಮಾಯುಕ್ತಾ ಸ್ಥಾಸ್ಯಸೆ ದಶತೀರ್ದಶ ॥ ೨೧ ॥

ಸಂವತ್ಸರಾಣಾಂ ದಿವ್ಯಾನಾಂ ತತಃ ತ್ರೈಲೋಕ್ಯನಾಯಕಂ ।
ಜನಯಿಷ್ಯಸಿ ತಂ ಪುತ್ರಂ ಶತ್ರುಘ್ನಂ ನಾನ್ಯಥಾ ಪ್ರಿಯೆ ॥ ೨೨ ॥

ಇತ್ಯೇವಮುಕ್ತಾ ಸಾ ಭರ್ತ್ರಾ ದಿತಿರ್ನಿಯಮಮಾಸ್ಥಿತಾ ।
ಗರ್ಭಾಧಾನಮೃಷಿಃ ಕೃತ್ವಾ ಜಗಾಮೋದಯಪರ್ವತಂ ॥ ೨೩ ॥

ಗತೆ ತಸ್ಮಿನ್ ಸುರಶ್ರೇಷ್ಠಃ ಸಹಸ್ರಾಕ್ಷೋऽಪಿ ಸತ್ವರಂ ।
ತಮಾಶ್ರಮಮುಪಾಗಮ್ಯ ದಿತಿಂ ವಚನಮಬ್ರವೀತ್ ॥ ೨೪ ॥

ಕರಿಷ್ಯಾಮ್ಯನುಶುಶ್ರೂಷಾಂ ಭವತ್ಯಾ ಯದಿ ಮನ್ಯಸೆ ।
ಬಾಢಮಿತ್ಯಬ್ರವೀತ್ಸಾಪಿ ಭಾವಿಕರ್ಮಪ್ರಚೋದಿತಾ ॥ ೨೫ ॥

ಸಹಾಯಕಾರಿಯಾದುದನ್ನು ನೋಡಿ ಪುತ್ರರ ನಾಶದಿಂದ ದುಃಖಿತಳಾದ ದಿತಿಯು ಕಶ್ಯಪರನ್ನು ಕುರಿತು, ಪ್ರಭುವೇ ನೀನು ನನಗೆ ನಾಥನಾಗಿರುವೆ, ಇಂದ್ರನನ್ನು ನಾಶಪಡಿಸುವಂತಹ ಶೂರನಾದ ಪುತ್ರನನ್ನು ಅನುಗ್ರಹಿಸು ಎಂದು ಕೇಳಿಕೊಂಡಳು. ಆಗ ಕಶ್ಯಪನು ಆ ದಿತಿಯನ್ನು ಕುರಿತು ಪ್ರಿಯಳೇ ನೀನು ಶೌಚಾಚಾರಗಳಿಂದ ಶುದ್ಧಳಾಗಿ ದಿವ್ಯವರ್ಷಸಹಸ್ರಪರ್ಯಂತವೂ ನಿಯಮದಿಂದ ಇರುವದಾದರೆ ಶತ್ರು ನಾಶಕನಾಗಿಯೂ ಲೋಕಾಧಿಪತಿಯಾಗಿಯೂ ಇರುವ ಪುತ್ರನನ್ನು ಹೊಂದುತ್ತೀಯೆ. ಹಾಗಿಲ್ಲದಿದ್ದರೆ ಸಾಧ್ಯವಿಲ್ಲವೆಂದು ಉತ್ತರ ಹೇಳಿದನು.

೨೩ ೨೬. ಈ ಪ್ರಕಾರ ಪತಿಯಿಂದ ಹೇಳಲ್ಪಟ್ಟ ದಿತಿಯೂ ಅವನ ಅಪ್ಪಣೆಯಂತೆ ನಿಯಮಪರಳಾದಳು. ಕಶ್ಯಪನೂ ಸಹ ಅವಳ ಕೋರಿಕೆಯಂತೆ ಗರ್ಭಾಧಾನಮಾಡಿ ತಪಸ್ಸಿಗಾಗಿ ಉದಯಪರ್ವತಕ್ಕೆ ಹೊರಟುಹೋದನು. ಅವನು ಹೊರಟುಹೋದ ನಂತರ ಈ ವಿಚಾರವನ್ನು ತಿಳಿದ ಇಂದ್ರನು ಆ ಆಶ್ರಮಕ್ಕೆ ಬಂದು ಆ ದಿತಿಯನ್ನು ಕುರಿತು ನೀನು ಒಪ್ಪುವುದಾದರೆ ನಿಯಮಪರಳಾಗಿರುವ ನಿನಗೆ ನಾನೇ ಶುಶ್ರೂಷೆ ಮಾಡುತ್ತೇನೆಂದನು. ದಿತಿಯೂ ಸಹ ತನ್ನ ಮುಂದಿನ ಕರ್ಮಗತಿಗೆ ಅಧೀನಳಾಗಿ

ಸಮಿಧಾಹರಣಾದೀನಿ ತಸ್ಯಾಶ್ಚಕ್ರೇ ಪುರಂದರಃ ।
ವಿನೀತಾತ್ಮಾ ಚ ಕಾರ್ಯಾರ್ಥೀ ಛಿದ್ರಾನ್ವೇಷೀ ಭುಜಂಗವತ್ ॥ ೨೬ ॥

ಏಕದಾ ಸಾ ತಪೋಽಯುಕ್ತಾ ಶೋಕೇ ಮಹತಿ ಸಂಸ್ಥಿತಾ ।
ದಶವರ್ಷಶತಾಂತೇ ತು ಶಿರಃ ಸ್ನಾತಾ ತಪಸ್ವಿನೀ ॥ ೨೭ ॥

ಜಾನುಭ್ಯಾಮುಪರಿಸ್ಥಾಪ್ಯ ಮುಕ್ತಕೇಶೀ ನಿಜಂ ಶಿರಃ ।
ಸುಷ್ವಾಪ ಕೇಶಪ್ರಾಂತೇಷು ಸಂಶ್ಲಿಷ್ಟಚರಣಾಭವತ್ ॥ ೨೮ ॥

ತಮಂತರಮಸೌ ಜ್ಞಾತ್ವಾ ದೇವಶ್ಚಾಪಿ ಸಹಸ್ರದೃಕ್ ।
ವಿವೇಶ ಮಾತುರುದರೇ ನಾಸಾರಂಧ್ರೇಣ ನಾರದ ॥ ೨೯ ॥

ಪ್ರವಿಶ್ಯ ಜಠರೇ ವೃದ್ಧೋ ದೈತ್ಯಮಾತುಃ ಪುರಂದರಃ ।
ದದರ್ಶೋರ್ಧ್ವಮುಖಂ ಬಾಲಂ ಕಟಿನ್ಯಸ್ತಕರಂ ಮಹತ್ ॥ ೩೦ ॥

ತಥೈವಾಸ್ಯೇಥ ದದೃಶೇ ಮಾಂಸಪೇಶೀಂ ಚ ವಾಸವಃ ।
ಶುದ್ಧಸ್ಫಟಿಕಸಂಕಾಶಾಂ ಕರಾಭ್ಯಾಂ ಜಗೃಹೇ ಸ ತಾಂ ॥ ೩೧ ॥

ಆಗಬಹುದೆಂದು ಒಪ್ಪಿದಳು. ಆಗ ಇಂದ್ರನು ಸಮಿತ್ತುಗಳನ್ನು ತರುವುದೇ ಮೊದಲಾದ ಎಲ್ಲ ಕೆಲಸಗಳನ್ನೂ ವಿನೀತನಾಗಿ ನಡೆಸುತ್ತಾ ಕಾರ್ಯಾರ್ಥಿಯಾಗಿ ಸರ್ಪದಂತೆ ಸಮಯ ಕಾಯುತ್ತಿದ್ದನು.

೨೭-೩೦. ಒಂದಾನೊಂದು ಕಾಲದಲ್ಲಿ ಸಾವಿರ ವರ್ಷದ ಕೊನೆಯಲ್ಲಿ ತಪಸ್ಸಿನಿಂದ ಖಿನ್ನಳಾದ ದಿತಿಯು ಬಹಳ ಶೋಕಾಕ್ರಾಂತಳಾಗಿ ಶಿರಸ್ನಾನಮಾಡಿ ಮಂಡಿಗಳ ಮೇಲೆ ತಲೆಯನ್ನಿಟ್ಟು ಕೇಶಗಳನ್ನು ಕೆದರಿಕೊಂಡು ಮಲಗಿದಳು. ಅವನ ಕೇಶಗಳೆಲ್ಲವೂ ಕಾಲಿನ ಮೇಲೆ ಜೋಲು ಬಿದ್ದಿದ್ದವು. ಅದನ್ನೇ ಸುಸಮಯವನ್ನಾಗಿ ತಿಳಿದು ಸಹಸ್ರಾಕ್ಷನೂ ದೇವತೆಯೂ ಆಗಿದ್ದರೂ ಸ್ವಕಾರ್ಯಪರನಾದ ಇಂದ್ರನು ತಾಯಿಯಾದ ದಿತಿಯ ಮೂಗಿನ ರಂಧ್ರದಿಂದ ಅವಳ ಉದರಕ್ಕೆ ಸೂಕ್ಷ್ಮರೂಪದಿಂದ ಪ್ರವೇಶಿಸಿದನು. ಹಾಗೆ ಪ್ರವೇಶಿಸಿ ಜಠರದಲ್ಲಿ ವೃದ್ಧಿಹೊಂದಿ ಅಲ್ಲಿ ಊರ್ಧ್ವಮುಖದಿಂದ ಕೂಡಿ ಸೊಂಟದಲ್ಲಿ ಕೈಯ್ಯಿಟ್ಟು ನಿಂತಿದ್ದ ತೇಜಸ್ವಿಯಾದ ಬಾಲಕನನ್ನು ನೋಡಿದನು.

೩೧-೩೪. ಹಾಗೆಯೇ ಆ ಬಾಲಕನ ಬಾಯಿನಲ್ಲಿದ್ದ ಮಾಂಸದ ಚೀಲವನ್ನೂ ನೋಡಿದನು. ಶುದ್ಧ ಸ್ಫಟಿಕದಂತೆ ಶುಭ್ರವಾಗಿದ್ದ ಆ ಮಾಂಸದ ಚೀಲವನ್ನು

ತತಃ ಕ್ರೋಧಸಮಾಧ್ಮಾತೋ ಮಾಂಸಪೇಶೀಂ ಶತಕ್ರತುಃ ।
ಕರಾಭ್ಯಾಂ ಮರ್ದಯಾಮಾಸ ತತಃ ಸಾ ಕಠಿನಾಭವತ್ ॥ ೩೨ ॥

ಊರ್ಧ್ವೇನಾರ್ಧಂ ಚ ವವೃಧೆ ತ್ವಧೋಽರ್ಧಂ ವವೃಧೇ ತಥಾ ।
ಶತಪರ್ವಾ ಸಕುಲಿಶಃ ಸಂಜಾತೋ ಮಾಂಸಪೇಶಿತಃ ॥ ೩೩ ॥

ತೇನಾಧಿಗರ್ಭಂ ದಿತಿಜಂ ವಜ್ರೇಣ ಶತಪರ್ವಣಾ ।
ಚಿಚ್ಛೇದ ಸಪ್ತಧಾ ಬ್ರಹ್ಮನ್ಸಚಾರೋದೀತ್ಸುವಿಸ್ತರಂ ॥ ೩೪ ॥

ತತೋಽಪ್ಯಬುದ್ಧ್ಯತ ದಿತಿಃ ಅಜ್ಞಾಸೀಚ್ಛಕ್ರಚೇಷ್ಟಿತಂ ।
ಶುಶ್ರಾವ ವಾಚಂ ಪುತ್ರಸ್ಯ ರುದತೋ ಬಾಲಕಸ್ಯ ಹಿ ॥ ೩೫ ॥

ಶಕ್ರೋಽಪಿ ಪ್ರಾಹ ಮಾ ಮೂಢ ರೋದೀಸ್ತ್ವಂ ಚಾತಿಘುರ್ಘುರಂ ।
ಇತ್ಯೇವಮುಕ್ತ್ವಾ ಚೈಕೈಕಂ ಭೂಯಶ್ಚಿಚ್ಛೇದ ಸಪ್ತಧಾ ॥ ೩೬ ॥

ತೇ ಜಾತಾ ಮರುತೋ ನಾಮ ದೇವಭೃತ್ಯಾಃ ಶತಕ್ರತೋಃ ।
ನಾನಾಸುಖೋಪಚಾರೇಣ ಚಲಂತಿ ತೆ ಪುರಸ್ಕೃತಾಃ ॥ ೩೭ ॥

ಕೈಯ್ಯಿಗಳಿಂದ ಹಿಡಿದು ಕ್ರೋಧಾವೇಶದಿಂದ ಮರ್ದಿಸಿದನು. ಅನಂತರ ಅದು ಕಠಿನವಾಗಿ ಮೇಲ್ಭಾಗದ ಅರ್ಧದಿಂದಲೂ ಕೆಳಭಾಗದ ಅರ್ಧದಿಂದಲೂ ಊರ್ಧ್ವಾಧೋ ಮುಖವಾಗಿ ವೃದ್ಧಿಹೊಂದಲಾರಂಭಿಸಿತು. ಆ ರೀತಿಯಾಗಿ ಪರಿಣಮಿಸಿದ ಆ ಮಾಂಸ ಪೇಶಿಯಿಂದ ಇಂದ್ರನೂ ವಜ್ರಾಯುಧಧಾರಿಯಾದನು ಆ ವಜ್ರಾಯುಧದಿಂದಲೇ ದಿತಿಯ ಆ ಗರ್ಭವನ್ನು ಏಳು ತುಂಡಾಗಿಯೂ ಕತ್ತರಿಸಿದನು. ಆಗ ಆ ಗರ್ಭವು ಘಟ್ಟಿಯಾಗಿ ಅತ್ತಿತು.

೩೫-೩೭. ಆಗ ದಿತಿಯು ಎಚ್ಚರಗೊಂಡು ಇಂದ್ರನ ಈ ಚೇಷ್ಟೆಯನ್ನು ತಿಳಿದಳು. ಅಳುತ್ತಿದ್ದ ತನ್ನ ಮಗುವಿನ ಧ್ವನಿಯನ್ನೂ ಕೇಳಿದಳು. ಇಂದ್ರನೂ ಸಹ ಆ ಬಾಲಕನನ್ನು ಮೂಢ ಏತಕ್ಕೆ ಹೀಗೆ ಘಟ್ಟಿಯಾಗಿ ಅರಚುತ್ತಿರುವೆ ಸುಮ್ಮನೆ ಇರು ಎಂದು ಹೇಳುತ್ತಾ ಆ ತುಂಡಿನ ಒಂದೊಂದು ಭಾಗವನ್ನೂ ಪುನಃ ಏಳಾಗಿ ಛೇದಿಸಿದನು. ಅವರೇ ಮರುತ್ತುಗಳೆಂಬ ಹೆಸರಿನಿಂದ ದೇವಭೃತ್ಯರಾಗಿ ಇಂದ್ರನ ಸೇವಕರಾದರು. ಅವರು ನಾನಾವಿಧವಾದ ಸುಖೋಪಚಾರದಿಂದ ವೃದ್ಧಿಹೊಂದಿದರು.

ತತಃ ಸಕುಲಿಶಃ ಶಕ್ರೋ ನಿರ್ಗಮ್ಯ ಜಠರಾತ್ತತಃ ।
ದಿತಿಂ ಕೃತಾಂಜಲಿಪುಟಃ ಪ್ರಾಹ ಭೀತಸ್ತು ಶಾಪತಃ ॥ ೩೮ ॥

ಮಮ ನೈವಾಪರಾಧೋಽಯಮಯಮಾಸೀದರಿರ್ಮಮ ।
ಅತೋ ಹತೋ ಮಯಾ ದೇವಿ ತನ್ಮೇ ನ ಕ್ರೋದ್ಧುಮರ್ಹಸಿ ॥ ೩೯ ॥

ದಿತಿರುವಾಚ

ನ ತವಾತ್ರಾಪರಾಧೋಽಸ್ತಿ ಮನ್ಯೇ ದಿಷ್ಟಮಿದಂ ಪುರಾ ।
ಸಂಪೂರ್ಣೇಽತ್ವಪಿ ಕಾಲೇ ವೈ ಯೋಽಸೌ ವಧಮುಪಾಗತಃ ॥ ೪೦ ॥

ಪುಲಸ್ತ್ಯ ಉವಾಚ

ಇತ್ಯೇವಮುಕ್ತ್ವಾ ತಾನ್ ಬಾಲಾನ್ಪರಿಸಾಂತ್ವ್ಯ ದಿತಿಂ ತ್ವರನ್ ।
***ದೇವರಾಜಃ ಸಹೈನಾಂಸ್ತುಪ್ರೇಷಯಾಮಾಸ ಭಾಮಿನೀ** ॥ ೪೧ ॥

ಅನಂತರ ಇಂದ್ರನು ವಜ್ರಧಾರಿಯಾಗಿ ದಿತಿಯ ಜಠರದಿಂದ ಹೊರಗೆ ಬಂದು ಶಾಪ ಬರುತ್ತದೋ ಎಂಬ ಭಯದಿಂದ ನಮ್ರನಾಗಿ ದಿತಿಯನ್ನು ವಂದಿಸಿ ಕೈಮುಗಿದುಕೊಂಡು ಹೀಗೆ ಹೇಳಿದನು.

೩೯-೪೦. ತಾಯಿಯೇ ಈ ವಿಷಯದಲ್ಲಿ ನನ್ನ ಅಪರಾಧವೇನೂ ಇಲ್ಲ. ಇವನು ನನಗೆ ಶತ್ರುವಾಗಿದ್ದುದರಿಂದ ನಾನು 'ಇವನನ್ನು ಕೊಂದುಹಾಕಿರುವೆನು. ಕರ್ತವ್ಯ ಕರ್ಮವನ್ನು ನಡೆಸಿದ ನಾನು ಅಪರಾಧಿಯಲ್ಲ. ಆದುದರಿಂದ ನೀನು ನನ್ನ ಮೇಲೆ ಕೋಪಮಾಡಲು ಕಾರಣವಿಲ್ಲ. ಈ ಮಾತನ್ನು ಕೇಳಿದ ದಿತಿಯು ಇದು ನಿನ್ನ ಅಪರಾಧವಲ್ಲ. ನಿರ್ದಿಷ್ಟವಾದ ದಿವಸವು ಪೂರ್ಣವಾಗಿದ್ದರೂ ಕೂಡ ಇದು ನಿನ್ನಿಂದ ವಧವನ್ನು ಹೊಂದಿತು. ಇದಕ್ಕೆ ಪೂರ್ವದಲ್ಲಿ ಹೊಂದಿದ್ದ ದುರದೃಷ್ಟವೇ ಕಾರಣವೆಂದು ನಾನು ತಿಳಿಯುತ್ತೇನೆ ಎಂದಳು.

೪೧-೪೩. ಹೀಗೆ ಹೇಳಿ ಆ ಬಾಲಕರನ್ನೂ ದಿತಿಯನ್ನೂ ಸಮಾಧಾನಪಡಿಸಿ ಇಂದ್ರನು ಆ ಬಾಲಕರೊಡನೆ ದಿತಿಯನ್ನೂ ಕಳುಹಿಸಿ ತ್ವರೆಯಿಂದ ಹೊರಟು

* ದೇವರಾಜಃ ಸಹೇತ್ಯೈಸ್ತು ಪ್ರೇಷಯಾಮಾಸ ಭಾಮಿನೀಂ ಎಂದು ಪಾಠವಿರಬೇಕೆಂದು ತೋರುತ್ತದೆ.

ಏವಂ ಪುರಾ ಸ್ವಾನಪಿ ಸೋದರಾನ್ ಸ
ಗರ್ಭಸ್ಥಿತಾನ್ಪಾತಿತವಾನ್ಭಯಾರ್ತಃ ।
ಬಿಭೇದ ವಜ್ರೇಣ ತತಸ್ಸ ಗೋತ್ರಭಿ
ತ್ಖ್ಯಾತೋ ಮಹರ್ಷೇ ಭಗವಾನ್ಮಹೇಂದ್ರಃ ॥ ೪೨ ॥

ಇತಿ ಶ್ರೀ ವಾಮನಪುರಾಣೇ ಶಕ್ರಚರಿತೆ ಮರುದುತ್ಪತ್ತಿ
ರ್ನಾಮೈಕೆ ಸಪ್ತತಿತಮೋಽಧ್ಯಾಯಃ.

ಹೋದನು. ಈ ಪ್ರಕಾರ ಭಯಗ್ರಸ್ಥನಾದ ಇಂದ್ರನು ಗರ್ಭದಲ್ಲಿದ್ದ ತನ್ನ ಸಹೋದರರನ್ನೂ ವಜ್ರಾಯುಧದಿಂದ ಕೊಂದುದರಿಂದ ಅವನು ಗೋತ್ರಭಿತ್ ಎಂದು ಪ್ರಖ್ಯಾತಿ ಪಡೆದನು

ಇಲ್ಲಿಗೆ ಶ್ರೀ ವಾಮನಪುರಾಣದ ಶಕ್ರಚರಿತ್ರೆಯಲ್ಲಿ ಮರುತ್ತುಗಳ ಉತ್ಪತ್ತಿ ಎಂಬ
ಎಪ್ಪತ್ತೊಂದನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಇಂದ್ರನು ಮಲಯಪರ್ವತಕ್ಕೆ ಹೊರಡಲು ಕಾರಣವೇನೆಂದು ನಾರದರು ಪ್ರಶ್ನೆಮಾಡಲು ಅದಕ್ಕೆ ಉತ್ತರವಾಗಿ ದೇವತೆಗಳಿಂದ ಜಿತರಾದ ದೈತ್ಯರಲ್ಲಿ ಮಯ, ತಾರ ಮೊದಲಾದವರು ಪಾತಾಲಕ್ಕೆ ಓಡಿಹೋಗುವಾಗ ಮಧ್ಯಮಾರ್ಗದಲ್ಲಿ ರಮ್ಯವಾದ ಮಲಯಪರ್ವತವನ್ನು ನೋಡಿ ವಿಶ್ರಾಂತಿಗಾಗಿ ಅಲ್ಲಿ ನಿಂತರೆಂದೂ ಅಲ್ಲಿನ ರಮಣೀಯತೆಯನ್ನು ನೋಡಿ ಅವರು ಅಲ್ಲೇ ವಾಸಮಾಡಲುಪಕ್ರಮಿಸಿದರೆಂದೂ ಅವರಿಂದ ಅಲ್ಲಿದ್ದ ಧಾರ್ಮಿಕರಿಗೆ ತೊಂದರೆಯಾದುದರಿಂದ ಆ ದೈತ್ಯರನ್ನು ನಾಶಮಾಡಲು ಶಂಕರನ ಆಜ್ಞೆಯಿಂದ ಇಂದ್ರನು ಅಲ್ಲಿಗೆ ನಡೆದನೆಂದೂ ದಾರಿಯಲ್ಲಿ ಬರುತ್ತಿರುವಾಗ ಕಾಮಧೇನುವನ್ನು ನೋಡಿ ಪ್ರದಕ್ಷಿಣನಮಸ್ಕಾರದಿಂದ ಅದನ್ನು ಸಂತೋಷಪಡಿಸಿ ಮಲಯವನ್ನು ಸೇರಿ ಅಲ್ಲಿದ್ದ ದಾನವರೊಡನೆ ತೀವ್ರಯುದ್ಧಹೂಡಿ ಎಲ್ಲರನ್ನೂ ಚದುರಿಸಿ ಪ್ರಮುಖರಾದ ಪಾಕ, ಪುರ ಎಂಬ ದೈತ್ಯರನ್ನು ಕೊಂದು

ಪಾಕಶಾಸನನೆಂತಲೂ ಪುರಂದರನೆಂತಲೂ ಪ್ರಸಿದ್ಧಿಹೊಂದಿದ ಇಂದ್ರನು ಪುನಃ ಸ್ವರ್ಗವನ್ನು ಸೇರಿದನೆಂದೂ ಹೇಳಲಾಯಿತು. ಅನಂತರ ಇಂದ್ರನಿಗೆ ಗೋತ್ರಭಿತ್ ಎಂದು ಹೆಸರು ಬರಲು ಕಾರಣವೇನೆಂದು ನಾರದರು ಪುನಃ ಪ್ರಶ್ನೆಮಾಡಲು ಅದಕ್ಕೆ ಉತ್ತರವಾಗಿ ಪುಲಸ್ತ್ಯರು ಹಿರಣ್ಯಕಶಿಪುವು ಹತನಾದಮೇಲೆ ಇಂದ್ರನಿಂದುಂಟಾದ ದೈತ್ಯವಧವನ್ನು ನೋಡಿ ದುಃಖಿತೆಯಾದ ದಿತಿಯು ಪತಿಯಾದ ಕಶ್ಯಪರಲ್ಲಿ ಇಂದ್ರನಾಶಕನಾದ ಪುತ್ರನು ತನಗೆ ಉಂಟಾಗಬೇಕೆಂದು ಪ್ರಾರ್ಥಿಸಲು ಆ ಕಶ್ಯಪರು ನೀನು ಸಾವಿರ ದಿವ್ಯವರ್ಷಪರ್ಯಂತ ನಿಯಮದಿಂದ ಶುಚಿಯಾಗಿರಲು ಸಾಧ್ಯವಾದಲ್ಲಿ ಅಂತಹ ಪುತ್ರನನ್ನು ಹೊಂದಬಹುದು ಇಲ್ಲದಿದ್ದಲ್ಲಿ ಸಾಧ್ಯವಲ್ಲವೆಂದು ಹೇಳಲು ದಿತಿಯು ಅದಕ್ಕೆ ಸಮ್ಮತಿಸಿ ನಿಯಮಪರಳಾದಳು. ದಿತಿಯು ಗರ್ಭಿಣಿಯಾದಮೇಲೆ ಕಶ್ಯಪರು ತಪಸ್ಸಿಗಾಗಿ ಉದಯಪರ್ವತಕ್ಕೆ ನಡೆದರು. ಈ ವೃತ್ತಾಂತವನ್ನು ತಿಳಿದ ಇಂದ್ರನು ದಿತಿಯ ಆಶ್ರಮಕ್ಕೆ ಹೋಗಿ ಅವಳ ಶುಶ್ರೂಷೆಯ ವ್ಯಾಜದಿಂದ ಶತ್ರುನಾಶಕ್ಕೆ ಸಮಯವನ್ನು ನಿರೀಕ್ಷಿಸುತ್ತಾ ಅಲ್ಲಿಯೇ ಇದ್ದನು. ಒಂದಾನೊಂದು ದಿನ ನಿಯಮದ ಕ್ಲೇಶದಿಂದಲೂ ಗರ್ಭದ ಅಲಸತೆಯಿಂದಲೂ ದಿತಿಯು ಶಿರಸ್ನಾನಮಾಡಿ ಮಂಡಿಯ ಮೇಲೆ ತಲೆಯನ್ನಿಟ್ಟು ಕೂದಲೆಲ್ಲಾ ಕಾಲಿನ ಮೇಲೆ ಬೀಳುವಂತೆ ಕುಳಿತು ನಿದ್ರಿಸಿದಳು. ಆಗ ಇಂದ್ರನು ಈಗ ಇವಳು ಅಪವಿತ್ರಳಾಗಿರುವಳೆಂದು ತಿಳಿದು ಅವಳ ಮೂಗಿನ ರಂಧ್ರದಿಂದ ಸೂಕ್ಷ್ಮರೂಪದಲ್ಲಿ ಜಠರವನ್ನು ಪ್ರವೇಶಿಸಿ ಅಲ್ಲಿ ಊರ್ಧ್ವಮುಖನಾಗಿ ನಿಂತಿದ್ದ ಬಾಲಕನನ್ನೂ ಅದರ ಬಾಯಿನಲ್ಲಿ ಶುಭ್ರವಾಗಿದ್ದ ಮಾಂಸದ ಚೀಲವನ್ನೂ ನೋಡಿ ಕೈಗಳಿಂದ ಆ ಚೀಲವನ್ನು ಮರ್ದಿಸಲು ಅದು ಘಟ್ಟಿಯಾಗಿ ಮೇಲಕ್ಕೂ ಕೆಳಕ್ಕೂ ಬೆಳೆಯಲಾರಂಭಿಸಿತು. ಆಗ ಇಂದ್ರನು ವಜ್ರಾಯುಧದಿಂದ ಅದನ್ನು ಏಳು ತುಂಡಾಗಿ ಕತ್ತರಿಸಲು ಅದು ಘೋರ್ಗರೆದು ಅಳಲಾರಂಭಿಸಿತು. ಆಗ ದಿತಿಯು ಎಚ್ಚೆತ್ತು ಇಂದ್ರನ ವಂಚನೆಯನ್ನು ತಿಳಿದಳು. ಇಂದ್ರನೂ ಏಕೆ ಅಳುತ್ತೀಯೆ ಎಂದು ಗದರಿಸಿ ಪುನಃ ಒಂದೊಂದು ತುಂಡನ್ನೂ ಏಳು ಭಾಗವಾಗಿ ಕತ್ತರಿಸಿ ಹೊರಗೆಬಂದನು. ಶಾಪದಿಂದ ಭೀತನಾದ ಇಂದ್ರನು ದಿತಿಯನ್ನು ವಂದಿಸಿ ಇವನು ನನಗೆ ಶತ್ರುವಾಗಿದ್ದುದರಿಂದ ನಾನು ಇವನನ್ನು ಕೊಂದಿರುವೆನು ಇದು ನನ್ನ ಅಪರಾಧವಲ್ಲ ಎಂದು ಸಮಾಧಾನಪಡಿಸಿ ಆ ಬಾಲಕರನ್ನೂ ಅವಳೊಡನೆ ಬಿಟ್ಟು ಬಂದನೆಂದೂ ತನ್ನ ಸಹೋದರರನ್ನೇ ಇಂದ್ರನು ಭಯಾರ್ತನಾಗಿ ಕೊಂದುದರಿಂದ ಅವನಿಗೆ ಗೋತ್ರಭಿತ್ ಎಂದು ಹೆಸರು ಬಂದಿತೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ದ್ವಿಸಪ್ತತಿತಮೋಽಧ್ಯಾಯಃ

ನಾರದ ಉವಾಚ

ಯೇಽಹ್ಯಮೀ ಭವತಾ ಪ್ರೋಕ್ತಾ ಮರುತೋ ದಿತಿಜೋತ್ತಮಾಃ ।
ತೇ ಕೇ ಚ ಪೂರ್ವಮಾಸನ್ ವೈ ಮರುನ್ಮಾರ್ಗೇಷು ಕಥ್ಯತಾಂ ॥ ೧ ॥

ಪೂರ್ವಮನ್ವಂತರೇ ಚೈವ ಸಮತೀತೇಷು ಸತ್ತಮ ।
ಕೇ ತ್ವಾಸನ್ ವಾಯುಮಾರ್ಗಸ್ಥಾಸ್ತನ್ಮೇ ವ್ಯಾಖ್ಯಾತುಮರ್ಹಸಿ ॥ ೨ ॥

ಪುಲಸ್ತ್ಯ ಉವಾಚ

ಶ್ರೂಯತಾಂ ಪೂರ್ವಮರುತಾಮುತ್ಪತ್ತಿಂ ಕಥಯಾಮಿ ತೇ ।
ಸ್ವಾಯಂಭುವಂ ಸಮಾರಭ್ಯ ಯಾವನ್ಮನ್ವಂತರಂ ತ್ವಿದಂ ॥ ೩ ॥

ಎಪ್ಪತ್ತೆರಡನೆಯ ಅಧ್ಯಾಯವು

೧-೩. ನಾರದರು ಪ್ರಶ್ನೆ ಮಾಡುತ್ತಾರೆ, ತಾವು ಈಗ ಹೇಳಿದ ಮರುತ್ತುಗಳೆಂಬ ದಿತಿಪುತ್ರರು ಪೂರ್ವದಲ್ಲಿ ಮರುನ್ಮಾರ್ಗದಲ್ಲಿ ಯಾರಾಗಿದ್ದರು. (ಇದಕ್ಕಿಂತ ಪೂರ್ವ ಜನ್ಮದಲ್ಲಿ ಯಾವ ದೇವ ಗೋಷ್ಠಿಗೆ ಸೇರಿದ್ದರೆಂದು ತಾತ್ಪರ್ಯ.) ಇದುವರೆಗೆ ಕಳೆದು ಹೋಗಿರುವ ಮನ್ವಂತರಗಳಲ್ಲಿ ವಾಯುಮಾರ್ಗದಲ್ಲಿ ಯಾರು ಯಾರಿದ್ದರು. ಈ ಪ್ರಶ್ನೆಗೆ ಉತ್ತರವನ್ನು ಹೇಳಲುಪಕ್ರಮಿಸಿ ಪುಲಸ್ತ್ಯರು ಪೂರ್ವ ಮರುತ್ತುಗಳ ಉತ್ಪತ್ತಿಯನ್ನು ಸ್ವಾಯಂಭುವ ಮನ್ವಂತರದಿಂದಾರಂಭಿಸಿ ಈ ಮನ್ವಂತರದ ವರೆಗೂ ಹೇಳುತ್ತೇನೆ. ಕೇಳೋಣವಾಗಲಿ ಎಂದು ಪ್ರಾರಂಭಿಸಿದರು.

ಸ್ವಾಯಂಭುವಸ್ಯ ಪುತ್ರೋऽಭೂನ್ಮನುರ್ನಾಮ ಪ್ರಿಯವ್ರತಃ ।
ತಸ್ಯಾಸೀತ್ಸವನೋ ನಾಮ ಪುತ್ರಸ್ತ್ರೈಲೋಕ್ಯವಿಶ್ರುತಃ ॥ ೪ ॥

ಸ ಚಾನಪತ್ಯೋ ದೇವರ್ಷೇ ನೃಪಃ ಪ್ರೇತಗತಿಂ ಗತಃ ।
ತತೋऽರುದತ್ತಸ್ಯ ಪತ್ನೀ ಸುವೇದಾ ಶೋಕವಿಹ್ವಲಾ ॥ ೫ ॥

ನ ದದಾತಿ ಯಥಾ ದಗ್ಧುಂ ಸಮಾಲಿಂಗ್ಯ ಸ್ಥಿತಾ ಪ್ರಿಯಂ ।
ನಾಥ ನಾಥೇತಿ ಬಹುಶೋ ವಿಲಪಂತೀ ತ್ವನಾಥವತ್ ॥ ೬ ॥

ತತೋऽಂತರಿಕ್ಷಾದಶರೀರಿಣೀ ವಾ
ಕ್ಪ್ರೋವಾಚ ಮಾ ರಾಜಪತ್ನೀऽಹರೌತ್ಸೀಃ ।
ಯದಸ್ತಿತೇ ಸತ್ಯಮನುತ್ತಮಂ ತ
ತ್ತದಾ ವ್ರಜ ತ್ವಂ ಪತಿನಾ ಸಹಾಗ್ನಿಂ ॥ ೭ ॥

ಸಾ ತಾಂ ವಾಣೀಮಂತರಿಕ್ಷಾನ್ನಿಶಮ್ಯ
ಪ್ರಾಹ ಕ್ಲಾಂತಾ ರಾಜಪತ್ನೀ ಸುವೇದಾ ।
ಶೋಚಾಮ್ಯೇನಂ ಪಾರ್ಥಿವಂ ಪುತ್ರಹೀನಂ
ನೈವಾತ್ಮಾನಂ ಮಂದಭಾಗ್ಯಂ ವಿಹಂಗ ॥ ೮ ॥

೪-೬. ಸ್ವಾಯಂಭುವನಿಗೆ ಮನುವೆಂಬ ವ್ರತಶಾಲಿಯಾದ ಪುತ್ರನಿದ್ದನು. ಆ ಮನುವಿಗೆ ಲೋಕವಿಖ್ಯಾತನಾದ ಸವನನೆಂಬ ಪುತ್ರನುದಯಿಸಿದನು. ಆ ಸವನನು ಮಕ್ಕಳಿಲ್ಲದೇ ಇದ್ದು ಹಾಗೆಯೇ ಮೃತನಾದನು. ಆಗ ಅವನ ಪತ್ನಿಯಾದ ಸುವೇದಾ ಎಂಬುವಳು ಬಹಳ ದುಃಖಿತಳಾಗಿ ದಹನಕ್ಕೂ ಅವಕಾಶಕೊಡದೆ ಪತಿಯ ಶರೀರವನ್ನು ಆಲಂಗಿಸಿ ನಾಥ ನಾಥ ಎಂದು ಅನಾಥೆಯಂತೆ ಪ್ರಲಾಪಿಸುತ್ತಾ ಬಹಳವಾಗಿ ಅಳ ತೊಡಗಿದಳು.

೭-೮. ಆಗ ಅಂತರಿಕ್ಷದಿಂದ ಎಲೈ, ರಾಜಪತ್ನಿಯೇ ಸುಮ್ಮನೆ ಅಳಬೇಡ. ಅಸಾಧಾರಣವಾದ ಸತ್ಯವ್ರತವು ನಿನ್ನಲ್ಲಿದ್ದರೆ ಪತಿಯೊಡನೆ ನೀನೂ ಅಗ್ನಿಯನ್ನು ಹೊಂದು ಎಂದು ಅಶರೀರವಾಣಿಯು ಕೇಳಿಸಿತು. ಆ ವಾಣಿಯನ್ನು ಕೇಳಿ ದುಃಖಿತೆಯಾದ ಸುವೇದೆಯು ಎಲೈ, ಆಕಾಶಚಾರಿಯೇ, ಪುತ್ರಹೀನನಾದ ಈ ದೊರೆಗಾಗಿ ದುಃಖಪಡುತ್ತಿದ್ದೇನೆ. ದುರದೃಷ್ಟಶಾಲಿನಿಯಾದ ನನಗಾಗಿ ದುಃಖಪಡುತ್ತಿಲ್ಲವೆಂದು

ಸೋಽಥಾಬ್ರವೀನ್ಮಾರುದಸ್ವೇತಿ ಬಾಲೆ
ಪುತ್ರಾಸ್ತೇ ವೈ ಭೂಮಿಪಾಲಸ್ಯ ಸಪ್ತ ।
ಭವಿಷ್ಯಂತಿ ವಹ್ನಿಮಾರೋಹ ಶೀಘ್ರಂ
ಸತ್ಯಂ ಪ್ರೋಕ್ತಂ ಶ್ರದ್ದಧಸ್ವ ತ್ವಮದ್ಯ ॥ ೯ ॥

ಇತ್ಯೇವಮುಕ್ತಾ ಖಚರೇಣ ಬಾಲಾ
ಚಿತಾಂ ಸಮಾರೋಪ್ಯ ಪತಿಂ ವರಾರ್ಹಂ ।
ಹುತಾಶಮಾಸಾದ್ಯ ಪತಿವ್ರತಾ ಸಾ
ಸಂಚಿಂತಯಂತೀ ಜ್ವಲನಂ ಪ್ರಪನ್ನಾ ॥ ೧೦ ॥

ತತೋ ಮುಹೂರ್ತಾನ್ನೃಪತಿಃ ಶ್ರಿಯಾ ಯುತಃ
ಸಮುತ್ಥಿತೋಽಸೌ ಸಹಿತಸ್ತು ಭಾರ್ಯಯಾ ।
ಖಮುತ್ಪಪಾತಾಥ ಸಕಾಮಚಾರೀ
ಸಮಂ ಮಹಿಷ್ಯಾ ಚ ಸುನಾಭಪುತ್ರ್ಯಾ ॥ ೧೧ ॥

ತಸ್ಯಾಪರೆ ಪಾರ್ಥಿವಪುಂಗವಸ್ಯ
ಜಾತಾ ರಜಃಸ್ಥಾಂ ಮಹಿಷೀಂ ತು ಗಚ್ಛತಃ ।
ಶ್ರೇಷ್ಠಾಸ್ತು ಪುತ್ರಾ ಬಲವೀರ್ಯಯುಕ್ತಾಃ
ಖ್ಯಾತಾ ಮಹಾಂತೋ ಭುವಿ ಭೂಮಿಪಾಲಾಃ ॥ ೧೨ ॥

ಉತ್ತರಕೊಟ್ಟಳು. ಅನಂತರ ಆಕಾಶವಾಣಿಯು ಎಲೈ ಯುವತಿಯೇ ಅಳಬೇಡ ನಿನ್ನ ಧೊರೆಗೆ ಏಳು ಜನ ಮಕ್ಕಳುಂಟಾಗುತ್ತಾರೆ. ಜಾಗ್ರತೆಯಾಗಿ ಚಿತೆಯನ್ನು ಏರು, ಈ ನನ್ನ ಮಾತು ಸತ್ಯವೆಂದು ತಿಳಿ ಎಂದಿತು.

೧೦-೧೨. ಆಕಾಶವಾಣಿಯಿಂದ ಆ ರೀತಿ ಹೇಳಲ್ಪಟ್ಟ ಸುವೇದೆಯು ತನ್ನ ಪತಿಯನ್ನು ಮೊದಲು ಚಿತಾಧಿರೋಹಣ ಮಾಡಿಸಿ ತಾನೂ ಅಗ್ನಿಯ ಸಮೀಪಕ್ಕೆ ಬಂದು ಇಷ್ಟಾರ್ಥವನ್ನು ಮನಸ್ಸಿನಲ್ಲಿ ಆಲೋಚಿಸುತ್ತಾ ಅಗ್ನಿಯನ್ನು ಹೊಂದಿದಳು. ಅನಂತರ ಸ್ವಲ್ಪ ಕಾಲದಲ್ಲೇ ಆ ಧೊರೆಯು ಕಾಂತಿಯಿಂದ ಕೂಡಿ ಪತ್ನಿಯೊಡನೆ ಮೇಲಕ್ಕೆದ್ದನು. ಕಾಮಚಾರಿಯಾಗಿ ರಾಜಪತ್ನಿಯೊಡನೆ ಆಕಾಶಕ್ಕೆ ಹಾರಿದನು. ರಜಸ್ವಲೆಯಾದ ಮಹಿಷಿಯ ಸಮಾಗಮದಿಂದ ಆ ಧೊರೆಗೆ ಶ್ರೇಷ್ಠರಾಗಿಯೂ ಬಲಶಾಲಿಗಳಾಗಿಯೂ ಇದ್ದ ಇತರ ಪುತ್ರರೂ ಜನಿಸಿ ಮಹಾಧೊರೆಗಳೆಂದು ಪ್ರಖ್ಯಾತಿಯನ್ನು ಪಡೆದರು.

ಸ ದಿವ್ಯಯೋಗಾತ್ಪ್ರತಿಸಂಸ್ಥಿತೋಂಬರೆ
ಭಾರ್ಯಾಸಹಾಯೋ ದಿವಸಾಂಶ್ಚ ಪಂಚ ।
ತತಸ್ತು ಷಷ್ಠೇಽಹನಿ ಪಾರ್ಥಿವೇನ
ಋತುರ್ನವಂಧ್ಯೋಽದ್ಯ ಭವೇದ್ವಿಚಿಂತ್ಯ ।
ರರಾಮ ತನ್ವ್ಯಾ ಸಹ ಕಾಮಚಾರೀ
ತತೋಂಬರಾತ್ಪ್ರಚ್ಯವತಾಸ್ಯ ಶುಕ್ರಂ ॥ ೧೩ ॥

ಶುಕ್ರೋತ್ಸರ್ಗಾವಸಾನೇ ತು ನೃಪತಿರ್ಭಾರ್ಯಯಾ ಸಹ ।
ಜಗಾಮ ದಿವ್ಯಯಾ ಗತ್ಯಾ ಬ್ರಹ್ಮಲೋಕಂ ತಪೋಧನ ।
ಪುತ್ರಾಸ್ತಸ್ಯಾವರ್ಸ ಶೂರಾಃ ಕೃತಾಸ್ತ್ರಾಃ ಸತ್ಯವಾದಿನಃ ॥ ೧೪ ॥

ತದಂಬರಾತ್ಪ್ರಚಲಿತಮಭ್ರವರ್ಣಂ
ಶುಕ್ರಂ ಸಮಾದಾನಲಿನೀ ಚ ಪುಷ್ಯತೀ ।
ಚಿತ್ರಾ ವಿಶಾಲಾ ಹರಿತಾಲಿನೀಲಾಃ
ಪತ್ನ್ಯೋ ಮುನೀನಾಂ ದದೃಶುರ್ಯಥೇಚ್ಛಯಾ ॥ ೧೫ ॥

೧೩-೧೪. ಕಾಮಚಾರಿಯಾಗಿದ್ದ ಆ ಧೊರೆಯು ಭೂಮಿಯಲ್ಲಿ ಕೆಲವು ಪುತ್ರರನ್ನು ಹೊಂದಿದಮೇಲೆ ದಿವ್ಯಯೋಗದಿಂದ ಪುನಃ ಆಕಾಶದಲ್ಲೇ ಪತ್ನಿಯೊಡನೆ ಐದುದಿನಪರ್ಯಂತ ಸಂಚರಿಸಿದನು. ಆರನೇದಿನ ಆ ಧೊರೆಯು ಈಗ ತನ್ನ ಪತ್ನಿಯ ಋತುಕಾಲವು ವ್ಯರ್ಥವಾಗಲಾರದೆಂದು ತಿಳಿದು ಅವಳೊಡನೆ ಆಕಾಶದಲ್ಲೇ ಸ್ವಚ್ಛಂದದಿಂದ ವಿಹರಿಸುತ್ತಿರುವಾಗ ಅವನ ಶುಕ್ರವು ಆಕಾಶದಿಂದ ಕೆಳಕ್ಕೆ ಬಿದ್ದಿತು. ಶುಕ್ರೋತ್ಸರ್ಗವಾದ ಒಡನೆಯೇ ಧೊರೆಯು ಪತ್ನಿಯೊಡನೆ ದಿವ್ಯಗತಿಯಿಂದ ಬ್ರಹ್ಮಲೋಕಕ್ಕೆ ಹೋಗಿಸೇರಿದನು. ಅವನ ಪುತ್ರರೆಲ್ಲರೂ ಭೂಮಿಯಲ್ಲಿ ಶೂರರಾಗಿಯೂ ಸತ್ಯವಾದಿಗಳಾಗಿಯೂ ಬದುಕಿದರು.

೧೫-೧೬. ಆಕಾಶದಿಂದ ಬೀಳುತ್ತಿರುವ ಮೇಘವರ್ಣದ ಆ ಶುಕ್ರವನ್ನು ಸಮಾದಾ, ನಲಿನೀ, ಪುಷ್ಯತೀ, ಚಿತ್ರಾ, ವಿಶಾಲಾ, ಹರಿತಾ, ಅಲಿನೀಲಾ ಎಂಬ ಏಳು ಜನ ಋಷಿಪತ್ನಿಯರು ಪ್ರೀತಿಯಿಂದ ನೋಡಿದರು. ಕಮಲದಲ್ಲಿ ಬಿದ್ದ ಆ ಶುಕ್ರ

ತದ್ದೃಷ್ಟ್ವಾ ಪುಷ್ಕರೆನ್ಯಸ್ತಂ ಪ್ರತ್ಯೂಚುರ್ನತಪೋಧನಾನ್ ।
ಮನ್ಯಮಾನಾಸ್ತದಮೃತಂ ಸದಾ ಯೌವನಲಿಪ್ಸಯಾ ॥ ೧೬ ॥

ತತಃ ಸ್ನಾತ್ವಾತು ವಿಧಿವತ್ಸಂಪೂಜ್ಯ ಚ ನಿಜಾನ್ ಪತೀನ್ ।
ಪತಿಭಿಸ್ಸಮನುಜ್ಞಾಸ್ತಾಃ ಪಪುಃ ಪುಷ್ಕರಸಂಜ್ಞಿತಂ ॥ ೧೭ ॥

ತಚ್ಛುಕ್ರಂ ಪಾರ್ಥಿವೇಂದ್ರಸ್ಯ ಮನ್ಯಮಾನಾಸ್ತದಾಮೃತಂ ।
ಪೀತಮಾತ್ರೇಣ ಶುಕ್ರೇಣ ಪಾರ್ಥಿವೇಂದ್ರೋದ್ಭವೇನ ತಾಃ ॥ ೧೮ ॥

ಬ್ರಹ್ಮತೇಜೋ ವಿಹೀನಾಸ್ತಾ ಜಾತಾಃ ಪತ್ನ್ಯಸ್ತಪಸ್ವಿನಾಂ ।
ತತಸ್ತ್ವ ತತ್ಯಜುಃ ಸರ್ವೇ ಸದೋಷಾಸ್ತೈ ಸ್ವಪತ್ನಯಃ ॥ ೧೯ ॥

ಸುಷುವು ಸಪ್ತತನಯಾನ್ ರುದತೋ ಭೈರವಂ ಮುನೆ ।
ತೇಷಾಂ ರುದಿತಶಬ್ದೇನ ಸರ್ವಮಾಪೂರಿತಂ ಜಗತ್ ॥ ೨೦ ॥

ಅಥಾಜಗಾಮ ಭಗವಾನ್ ಬ್ರಹ್ಮಾ ಲೋಕಪಿತಾಮಹಃ ।
ಸಮಭ್ಯೇತ್ಯಾಬ್ರವೀದ್ಬಾಲಾನ್ಮಾರುದಧ್ವಂ ಮಹಾಬಲಾಃ ॥ ೨೧ ॥

ವನ್ನು ನೋಡಿ ಆ ಋಷಿಪತ್ನಿಯರು ಅಮೃತವೆಂದು ತಿಳಿದು ನಿತ್ಯಯೌವನಲಾಭೇಚ್ಛೆಯಿಂದ ತಮ್ಮ ಪತಿಗಳಾದ ಋಷಿಗಳಿಗೆ ಈ ವಿಷಯವನ್ನು ತಿಳಿಸಲೇ ಇಲ್ಲ. ಅನಂತರ ಅವರು ಯಥಾವಿಧಿಯಾಗಿ ಸ್ನಾನಾದಿಗಳನ್ನು ಮಾಡಿ ತಮ್ಮ ಪತಿಗಳನ್ನು ಪೂಜಿಸಿ ಅವರ ಅಪ್ಪಣೆಯಿಂದ ಪುಷ್ಕರವೆಂಬ ಆ ಶುಕ್ರವನ್ನು ಎಲ್ಲರೂ ಪಾನಮಾಡಿದರು.

೧೮-೨೧. ಘೋರೆಯ ಆ ಶುಕ್ರವನ್ನು ಅಮೃತವೆಂದು ತಿಳಿದು ಪಾನಮಾಡಿದೊಡನೆಯೇ ಕ್ಷತ್ರಿಯೋತ್ಪಾದಕವಾದ ಆ ಶುಕ್ರದಿಂದ ತಾಪಸಸ್ತ್ರೀಯರೆಲ್ಲರೂ ಗರ್ಭಿಣಿಯರಾಗಿ ಬ್ರಹ್ಮತೇಜಸ್ಸಿನಿಂದ ಶೂನ್ಯರಾದರು ಆಗ ಋಷಿಗಳೆಲ್ಲರೂ ಆ ಸ್ತ್ರೀಯರು ದುಷ್ಟರೆಂದು ತಿಳಿದು ಅವರನ್ನು ಪರಿತ್ಯಾಗಮಾಡಿದರು. ಅನಂತರ ಗರ್ಭಿಣಿಯರಾಗಿದ್ದ ಆ ಏಳುಜನ ತಾಪಸಸ್ತ್ರೀಯರೂ ಏಳು ಮಕ್ಕಳನ್ನು ಹಡೆದರು. ಆ ಮಕ್ಕಳೂ ಹುಟ್ಟಿದೊಡನೆಯೇ ಭಯಂಕರಧ್ವನಿಯಿಂದ ಅತ್ತವು. ಆ ರೋದನಧ್ವನಿಯಿಂದ ಜಗತ್ತೆಲ್ಲವೂ ತುಂಬಿತು. ಇದನ್ನು ಕೇಳಿ ಚತುರ್ಮುಖನು ಅಲ್ಲಿಗೆ ಬಂದು ಶೂರರೇ ನೀವು ಅಳಬೇಡಿ ಎಂದು ಸಮಾಧಾನಪಡಿಸಿ

ಮರುತೋ ನಾಮ ಭವತಾಂ ಭವಿಷ್ಯತಿ ವಿಯತ್ಸ್ಥಿರಂ ।
ಇತ್ಯೇವಮುಕ್ತ್ವಾ ದೇವೇಶೋ ಬ್ರಹ್ಮಾ ಲೋಕಪಿತಾಮಹಃ ॥ ೨೨ ॥

ತಾನಾದಾಯ ವಿಯಚ್ಚಾರೀ ಮಾರುತಾನಾದಿದೇಶ ಹ ।
ತೇಽಪ್ಯಾಸನ್ಮರುತಸ್ತ್ವಾದ್ಯೇ ಮನೋಃ ಸ್ವಾಯಂಭುವೋಂತರೇ ॥ ೨೩ ॥

ಸ್ವಾರೋಚಿಷೇ ತು ಮರುತೋ ವಕ್ಷ್ಯಾಮಿ ಶೃಣು ನಾರದ ।
ಸ್ವಾರೋಚಿಷಸ್ಯ ಪುತ್ರಸ್ತು ಶ್ರೀಮಾನ್ನಾಮ್ನಾ ಋತಧ್ವಜಃ ॥ ೨೪ ॥

ತಸ್ಯ ಪುತ್ರಾ ಬಭೂವುಶ್ಚ ಸಪ್ತಾದಿತ್ಯಪರಾಕ್ರಮಾಃ ।
ತಪೋರ್ಥಂ ತೇ ಗತಾಃ ಶೈಲಂ ಮಹಾಮೇರುಂ ನರೇಶ್ವರಾಃ ॥ ೨೫ ॥

ಆರಾಧಯಂತೋ ಬ್ರಹ್ಮಾಣಂ ಪದಮೈಂದ್ರಂ ಯಥೇಪ್ಸವಃ ।
ತತೋ ವಿಪಶ್ಚಿನ್ನಾಮಾಥ ಸಹಸ್ರಾಕ್ಷೋ ಭಯಾತುರಃ ॥ ೨೬ ॥

ಪೂತನಾಂ ಸೋಽಪ್ಸರೋಮುಖ್ಯಾಂ ಪ್ರಾಹ ನಾರದ ವಾಕ್ಯವಿತ್ ।
ಗಚ್ಛಸ್ವ ಪೂತನೇ ಶೈಲಂ ಮಹಾಮೇರುಂ ವಿಲಾಸಿನಿ ॥ ೨೭ ॥

೨೨-೨೩. ಮರುತ್ತುಗಳೆಂಬ ಹೆಸರಿನಿಂದ ನಿಮಗೆ ಆಕಾಶದಲ್ಲಿ ಸ್ಥಿರವಾದ ಸ್ಥಾನವುಂಟಾಗುತ್ತದೆ ಎಂದು ಹೇಳಿ ಅವರನ್ನು ಕರೆದುಕೊಂಡು ಚತುರ್ಮುಖನು ಗಗನಚಾರಿಯಾಗಿ ಹೊರಟು ವಾಯುವನ್ನು ಕರೆದು ಅಪ್ಪಣೆಮಾಡಿದನು. ಸ್ವಾಯಂಭುವಮನ್ವಂತರದಲ್ಲಿ ಅವರೇ ಮೊದಲನೆ ಮರುತ್ತುಗಳಾದರು. ಸ್ವಾರೋಚಿಷ ಮನ್ವಂತರದಲ್ಲಿ ಹೇಳುತ್ತೇನೆ ಕೇಳಬೇಕು.

೨೪-೨೮. ಸ್ವಾರೋಚಿಷನ ಮಗನಾದ ಋತಧ್ವಜನೆಂಬುವನು ಬಹಳ ಮಾಹಾತ್ಮ್ಯಶಾಲಿಯಾಗಿದ್ದನು. ಅವನಿಗೆ ಸೂರ್ಯನಂತೆ ತೇಜಸ್ವಿಗಳಾದ ಏಳು ಜನ ಮಕ್ಕಳಾದರು. ಅವರು ಇಂದ್ರಪದವಿಯನ್ನು ಹೊಂದಲಿಚ್ಛೆಯಿಂದ ಮಹಾಮೇರು ಪರ್ವತಕ್ಕೆ ಹೋಗಿ ಬ್ರಹ್ಮನನ್ನು ಸಂತೋಷಪಡಿಸಲು ತಪಸ್ಸಿನಲ್ಲಿ ನಿರತರಾದರು ಆಗ ಸರ್ವಜ್ಞನಾದ ಇಂದ್ರನು ಇದನ್ನು ತಿಳಿದು ಭಯದಿಂದ ಪೂತನಾ ಎಂಬ ಅಪ್ಸರೆ

*ತಪ್ಯಂತೇ ತತ್ರಹಿತಪಃ ಋತಧ್ವಜಸುತಾ ಮಹತ್ ।
ಯಥಾ ಹಿ ತಪಸೋ ವಿಘ್ನಂ ತೇಷಾಂ ಭವತಿ ಸುಂದರಿ ॥ ೨೮ ॥

ತಥಾ ಕುರುಷ್ವ ಮಾ ತೇಷಾಂ ಸಿದ್ಧಿರ್ಭವತು ಸುಂದರಿ ।
ಇತ್ಯೇವಮುಕ್ತಾ ಶಕ್ರೇಣ ಪೂತನಾ ರೂಪಶಾಲಿನೀ ॥ ೨೯ ॥

ತತ್ರಾಜಗಾಮ ತ್ವರಿತಾ ಯತ್ರ ತೈಸ್ತಪ್ಯತೆ ತಪಃ ।
ಆಶ್ರಮಸ್ಯಾವಿದೂರೆ ತು ನದೀ ಮಂದೋದವಾಹಿನೀ ॥ ೩೦ ॥

ತಸ್ಯಾಂ ಸ್ನಾತುಂ ಸಮಾಯಾತಾಃ ಸರ್ವ ಏವ ಸಹೋದರಾಃ ।
ಸಾ ತು ಸ್ನಾತುಂ ಸುಚಾರ್ವಂಗೀ ತ್ವವತೀರ್ಣಾ ಮಹಾನದೀಂ ॥ ೩೧ ॥

ದದೃಶುಸ್ತೇ ನೃಪಾಃ ಸ್ನಾತಾಂ ತತಶ್ಚುಕ್ಷುಭಿರೆ ಮುನೆ ।
ತತೋಽಸ್ಯಾಭ್ಯದ್ರವಚ್ಛುಕ್ರಂ ತತ್ಪಪೌ ಜಲಚಾರಿಣೀ ॥ ೩೨ ॥

ಯನ್ನು ಕರೆದು ಹೀಗೆಂದನು. ಎಲೈ ಪೂತನಿಯೇ, ನೀನು ವಿಲಾಸಿನಿಯಾಗಿ ಮಹಾ ಮೇರುವಿಗೆ ಹೊರಡು. ಅಲ್ಲಿ ಋತಧ್ವಜನ ಪುತ್ರರು ಮಹಾತಪಸ್ಸಿನಲ್ಲಿ ತೊಡಗಿದ್ದಾರೆ.

೨೯-೩೧. ಅವರ ತಪಸ್ಸಿಗೆ ವಿಘ್ನವನ್ನುಂಟುಮಾಡಿ ಅವರಿಗೆ ಸಿದ್ಧಿಯುಂಟಾಗದಂತೆ ನೀನು ಮಾಡು ಎನ್ನಲು ಆ ರೂಪವತಿಯಾದ ಪೂತನಿಯು ಇಂದ್ರನ ಮಾತಿನಂತೆ ಅವರು ತಪಸ್ಸುಮಾಡುತ್ತಿರುವ ಪ್ರದೇಶಕ್ಕೆ ಹೋದಳು. ಆಶ್ರಮದ ಸಮೀಪದಲ್ಲಿಯೇ ಮಂದೋದವಾಹಿನೀ ಎಂಬ ನದಿಯಲ್ಲಿ ಸ್ನಾನಮಾಡಲು ಆ ಸಹೋದರರೆಲ್ಲರೂ ಬಂದಿಳಿದರು.

೩೨-೩೪. ಆಗ ಸುಂದರಾಂಗಿಯಾದ ಪೂತನಿಯೂ ಸ್ನಾನಕ್ಕಾಗಿ ಆ ಮಹಾ ನದಿಯಲ್ಲಿ ಇಳಿದಳು. ಸ್ನಾನಮಾಡಿ ಎದ್ದ ಅವಳ ಸುಂದರರೂಪವನ್ನು ನೋಡಿ ಈ ರಾಜಪುತ್ರರೆಲ್ಲರೂ ಕ್ಷುಭಿತೇಂದ್ರಿಯರಾದರು. ಆಗ ಕಾಮವಿಕಾರದಿಂದ ಅವರಿಗೆ

---

* ಇಲ್ಲಿ "ತಪ್ಯಂತೆ ತೆ ತಪಸ್ತತ್ರಋತಧ್ವಜಸುತಾಮಹತ್" ಎಂದು ಪಾಠವಿರಬೇಕೆಂದು ತೋರುತ್ತದೆ. ಇದು ಮುದ್ರಣದಲ್ಲಾದ ಅಶುದ್ಧಪಾಠ.

ಶಂಖಿನೀ ಗ್ರಾಹಮುಖ್ಯಸ್ಯ ಮಹಾಶಂಖಸ್ಯ ವಲ್ಲಭಾ ।
ತೇಃಶಿವಿಭ್ರಷ್ಟತಪಸೋಃ ಜಗ್ಮೂರಾಜ್ಯಂ ಚ ಪೈತೃಕಂ ॥ ೩೩ ॥

ಸಾಚಾಪ್ಸರಾಃ ಶಕ್ರಮೇತ್ಯ ಯಾಥಾತಥ್ಯಂ ನ್ಯವೇದಯತ್ ।
ತತೋಃ ಬಹುತಿಥೆ ಕಾಲೆ ಸಾ ಗ್ರಾಹೀಃ ಶಂಖರೂಪಿಣೀ ॥ ೩೪ ॥

ಸಮುದ್ಧೃತಾ ಮಹಾಜಾಲ್ಯೈಃ ಮತ್ಸ್ಯಬಂಧೇನ ಜಾಲಿನಾ ।
ಸ ತಾಂ ದೃಷ್ಟ್ವಾ ಮಹಾಶಂಖೀಂ ಸ್ಥಲಸ್ಥಾಂ ಮತ್ಸ್ಯಜೀವನಃ ॥ ೩೫ ॥

ನಿವೇದಯಾಮಾಸ ತದಾ ಋತಧ್ವಜಸುತೇಷು ವೈ ।
ತಥಾಭ್ಯೇತ್ಯ ಮಹಾತ್ಮಾನೋಃ ಯೋಃಗಿನಾಂ ಯೋಃಗಧಾರಿಣಃ ॥ ೩೬ ॥

ನೀತ್ವಾ ಸ್ವಮಂದಿರಂ ಸರ್ವೇ ಪುರವಾಪ್ಯಾಂ ಸಮುತ್ಸೃಜನ್ ।
ತತಃ ಕ್ರಮಾಚ್ಛಂಖಿನೀಃ ಸಾ ಸುಷುವೆ ಸಪ್ತ ವೈ ಶಿಶೂನ್ ॥ ೩೭ ॥

ಶುಕ್ರೋತ್ಸರ್ಗವಾಗಲು ಮಹಾಶಂಖನ ಪತ್ನಿಯಾದ ಶಂಖಿನೀ ಎಂಬ ಜಲಚರವಾದ ಗ್ರಾಹವು (ಮೊಸಳೆ) ಆ ಶುಕ್ರವನ್ನು ಕುಡಿಯಿತು. ಆ ರಾಜಪುತ್ರರೂ ತಪೋ ಭಂಗದಿಂದ ಖಿನ್ನರಾಗಿ ತಂದೆಯ ರಾಜ್ಯವನ್ನು ಕುರಿತು ಹೊರಟುಹೋದರು. ಆ ಅಪ್ಸರೆಯೂ ಇಂದ್ರನಲ್ಲಿ ಬಂದು ನಡೆದ ಸಮಾಚಾರವನ್ನು ಸತ್ಯವಾಗಿ ಹೇಳಿದಳು. ಅನಂತರ ಬಹುದಿವಸಗಳು ಕಳೆದಮೇಲೆ ಶಂಖರೂಪಿಣಿಯಾದ ಆ ಗ್ರಾಹಪತ್ನಿಯು (ಹೆಣ್ಣುಮೊಸಳೆ) ಬೆಸ್ತರ ಮಹಾಬಲೆಯಲ್ಲಿ ಬಿದ್ದು ಸೆಳೆಯಲ್ಪಟ್ಟಿತು.

೩೫-೩೮. ಆ ಬೆಸ್ತನು ನೀರಿನಿಂದ ತೆಗೆದನಂತರವೂ ನೆಲದಲ್ಲಿಯೂ ಬದುಕಿಕೊಂಡಿದ್ದ ಶಂಖಿನಿಯನ್ನು ನೋಡಿ ಆಶ್ಚರ್ಯದಿಂದ ಧೊರೆಗಳಾಗಿದ್ದ ಋತಧ್ವಜಪುತ್ರರಲ್ಲಿ ಬಂದು ಅರಿಕೆಮಾಡಿದನು. ಯೋಗಿಗಳಂತೆ ಜ್ಞಾನಿಗಳಾಗಿದ್ದ ಆ ಮಹಾತ್ಮರೂ ಬಂದು ನೋಡಿ ಮನೆಗೆ ತೆಗೆದುಕೊಂಡು ಹೋಗಿ ಊರಿಗೆ ಸೇರಿದ ಕೊಳದಲ್ಲಿ ಬಿಟ್ಟರು. ಅಲ್ಲಿದ್ದ ಶಂಖಿನಿಯು ಕಾಲಕ್ರಮದಿಂದ ಏಳು ಶಿಶುಗಳನ್ನು ಹಡೆಯಿತು. ಮಕ್ಕಳು ಹುಟ್ಟಿದೊಡನೆಯೇ ಶಂಖಿನಿಯು ದೇಹವನ್ನು ಬಿಟ್ಟು

ಜಾತಮಾತ್ರೇಷು ಪುತ್ರೇಷು ಮೋಕ್ಷಮಾರ್ಗಮಗಾಚ್ಚಸಾ ।
ಅಮಾತೃಪಿತೃಕಾ ಬಾಲಾ ಜಲಮಧ್ಯೆ ವಿಚಾರಿಣಃ ॥ ೩೮ ॥

ಸ್ತನ್ಯಾರ್ಥಿನೋ ವೈ ರುರುದುರಥಾಭ್ಯಾಗಾತ್ಪಿತಾಮಹಃ ।
ಮಾರುದಧ್ವಮಿತೀತ್ಯಾಹ ಸ್ವಸ್ಥಾಃ ತಿಷ್ಠತ ಪುತ್ರಕಾಃ ॥ ೩೯ ॥

ಯೂಯಂ ದೇವಾ ಭವಿಷ್ಯದ್ಧ್ವಂ ವಾಯುಸ್ಕಂಧವಿಚಾರಿಣಃ ।
ಇತ್ಯೇವಮುಕ್ತ್ವಾ ವ್ಯಾದಾಯ ಸರ್ವಾಂಸ್ತಾನ್ ದೈವತಂ ಪ್ರತಿ ॥ ೪೦ ॥

ನಿಯುಜ್ಯ ಚ ಮರುನ್ಮಾರ್ಗೆ ವಿರಾಜೋ ಭವನಂ ಗತಃ ।
ಏವಮಾಶ್ವಾಸ್ಯ ಮರುತೋ ಮನೋ ಸ್ವಾರೋಚಿಷೇಂತರೆ ॥ ೪೧ ॥

ಉತ್ತಮೆ ಮರುತೋ ಯೇ ಚ ತಾನ್ ಶೃಣುಷ್ವ ತಪೋಧನ ।
ಉತ್ತಮಸ್ಯಾನ್ವಯೆ ಯಸ್ತು ರಾಜಾಸೀನ್ನಿಷಧಾಧಿಪಃ ॥ ೪೨ ॥

ವಪುಷ್ಮಾನಿತಿ ವಿಖ್ಯಾತೋ ವಪುಷಾ ಭಾಸ್ಕರೋಪಮಃ ।
ತಸ್ಯ ಪುತ್ರೋ ಗುಣಶ್ರೇಷ್ಠೋ ಜ್ಯೋತಿಷ್ಮಾನ್ ಧಾರ್ಮಿಕೋಭವತ್॥ ೪೩ ॥

ಮೋಕ್ಷಮಾರ್ಗವನ್ನು ಹೊಂದಿತು. ಅನಂತರ ತಾಯಿತಂದೆಗಳಿಲ್ಲದ ಆ ಶಿಶುಗಳು ಜಲದಲ್ಲಿ ಸಂಚರಿಸುತ್ತಾ ಸ್ತನ್ಯಪಾನಾಭಿಲಾಷೆಯಿಂದ ಅಳತೊಡಗಿದವು. ಅದನ್ನು ಕೇಳಿ ಚತುರ್ಮುಖನು ಅಲ್ಲಿಗೆ ಬಂದನು.

೩೯-೪೧. ಬಂದ ಚತುರ್ಮುಖನು ಪುತ್ರರೇ ಅಳಬೇಡಿ ಸ್ವಸ್ಥರಾಗಿರಿ. ನೀವು ವಾಯುಸ್ಕಂದ ವಿಚಾರಕರಾದ ದೇವತೆಗಳಾಗುವಿರಿ ಎಂದು ಸಮಾಧಾನಪಡಿಸಿ, ಅವರನ್ನು ದೇವತೆಗಳನ್ನಾಗಿ ಮಾಡಿ ವಾಯುಮಾರ್ಗದಲ್ಲಿ ವಿಚಾರಕರನ್ನಾಗಿ ನಿಯಮಿಸಿ ವಿರಾಜವೆಂಬ ತನ್ನ ಮನೆಗೆ ಹೊರಟುಹೋದನು. ಇವರು ಸ್ವಾರೋಚಿಷ ಮನ್ವಂತರದಲ್ಲಿ ನಿಯಮಿತರಾದ ಮರುತ್ತುಗಳು ಉತ್ತಮ ಮನ್ವಂತರದ ಮರುತ್ತಗಳ ಉತ್ಪತ್ತಿಯನ್ನು ಹೇಳುತ್ತೇನೆ ಕೇಳು.

೪೨-೪೪. ಉತ್ತಮಮನುವಿನ ವಂಶದಲ್ಲಿ ನಿಷಧಾಧಿಪನೆಂಬ ರಾಜನಿದ್ದನು. ಸೂರ್ಯನಂತೆ ತೇಜಸ್ವಿಯಾಗಿದ್ದ ಆ ಧೊರೆಯು ಪ್ರಶಸ್ತವಾದ ದೇಹವುಳ್ಳವನೆಂದು ಪ್ರಖ್ಯಾತಿಪಡೆದಿದ್ದನು. ಅವನ ಮಗನಾದ ಜ್ಯೋತಿಷ್ಮಾನೆಂಬ ಧೊರೆಯು ಬಹಳ ಧಾರ್ಮಿಕನಾಗಿ ಬದುಕಿದನು. ಅವನು ಮಕ್ಕಳಿಲ್ಲದ್ದರಿಂದ ಪುತ್ರಾರ್ಥಿಯಾಗಿ

ಸ ಪುತ್ರಾರ್ಥೀ ತಪಸ್ತೇಪೆ ನದೀಂ ಮಂದಾಕಿನೀಮನು ।
ತಸ್ಯ ಭಾರ್ಯಾ ಚ ಸುಶ್ರೋಣೀ ದೇವಾಚಾರ್ಯಸುತಾ ತಥಾ ॥ ೪೪ ॥

ತಪಶ್ಚರಣಯುಕ್ತಸ್ಯ ಬಭೂವ ಪರಿಚಾರಿಕಾ ।
ಸಾನಯತ್ಫಲಪುಷ್ಪಂ ಚ ಸಮಿತ್ಕುಶಜಲಾದಿ ತತ್ ॥ ೪೫ ॥

ಚಕಾರ ಪದ್ಮಪತ್ರಾಕ್ಷೀ ಸಮ್ಯಕ್ಚಾತಿಥಿಪೂಜನಂ ।
ಪತಿಂ ಶುಶ್ರೂಷಮಾಣಾ ಸಾ ಕೃಶಾ ಧಮನಿಸಂತತಾ ॥ ೪೬ ॥

ತೇಜೋ ಯುಕ್ತಾ ಸುಚಾರ್ವಂಗೀ ದೃಷ್ಟ್ವಾ ಸಪ್ತರ್ಷಿಭಿರ್ವನೆ ।
ತಾಂ ತಥಾ ಚಾರುಸರ್ವಾಂಗೀಂ ದೃಷ್ಟ್ವಾಥ ತಪಸಾ ಕೃಶಾಂ ॥ ೪೭ ॥

ಪಪ್ರಚ್ಛುಸ್ತಪಸೋಹೇತುಂ ತಸ್ಯಾಸ್ತದ್ಭರ್ತುರೇವ ಚ ।
ಸಾಬ್ರವೀತ್ತನಯಾರ್ಥಾಯ ಆವಾಭ್ಯಾಂ ತಪಸಃಕ್ರಿಯಾ ॥ ೪೮ ॥

ತೇ ಚಾಸ್ಯೈ ವರದಾ ಬ್ರಹ್ಮನ್ ಜಾತಾಃ ಸಪ್ತಮಹರ್ಷಯಃ ।
ವ್ರಜಧ್ವಂ ತನಯಾಃ ಸಪ್ತ ಭವಿಷ್ಯಂತಿ ನ ಸಂಶಯಃ ॥ ೪೯ ॥

ಗಂಗಾತೀರದಲ್ಲಿ ತಪಸ್ಸುಮಾಡತೊಡಗಿದನು. ಸುಂದರಿಯಾದ ಬೃಹಸ್ಪತ್ಯಾಚಾರ್ಯನ ಪುತ್ರಿಯು ಅವನಿಗೆ ಪತ್ನಿಯಾಗಿದ್ದಳು ಅವಳು ಸುಶ್ರೋಣೀ ಎಂಬ ಹೆಸರಿನವಳು. ಅವಳು ತಪಸ್ಸಿನಲ್ಲಿ ನಿರತನಾದ ಪತಿಗೆ ಪರಿಚಾರಿಣಿಯಾದಳು.

೪೫-೪೮. ಅವಳು ಅವನ ತಪಸ್ಸಿಗೆ ಉಪಯೋಗಕರವಾದ ಫಲ, ಪುಷ್ಪ, ಸಮಿತ್ತು, ಜಲ ಮೊದಲಾದವುಗಳನ್ನೊದಗಿಸುತ್ತಾ ಅತಿಥಿ ಪೂಜೆಯನ್ನು ಚನ್ನಾಗಿ ಮಾಡಿದಳು. ಪತಿಶುಶ್ರೂಷೆಯಲ್ಲಿ ನಿರತಳಾದ ಅವಳು ಕೃಶಳಾಗಿ ಕೇವಲ ನರಗಳಿಂದ ಕೂಡಿದ್ದರೂ ತೇಜಸ್ವಿನಿಯಾಗಿದ್ದಳು. ಒಂದಾನೊಂದು ಸಮಯದಲ್ಲಿ ಸಪ್ತರ್ಷಿಗಳು ರಮಣೀಯಳಾಗಿಯೂ ಕೃಶಳಾಗಿಯೂ ಇರುವ ಇವಳನ್ನು ನೋಡಿದರು. ಸುಂದರಿಯಾದ ಇವಳ ತಪಸ್ಸಿಗೆ ಕಾರಣವೇನಿರಬಹುದೆಂದು ಊಹಿಸಿ ಆ ಸಪ್ತರ್ಷಿಗಳು ನೀನೂ ನಿನ್ನ ಪತಿಯೂ ತಪಸ್ಸುಮಾಡಲು ಕಾರಣವೇನೆಂದು ಅವಳನ್ನು ಕೇಳಲು ಪುತ್ರ ಪ್ರಾಪ್ತಿಗಾಗಿಯೇ ನಾವು ತಪಸ್ಸುಮಾಡುತ್ತಿರುವೆವೆಂದು ಅವಳೂ ಉತ್ತರ ಹೇಳಿದಳು

೪೯-೫೨. ಆಗ ಸಪ್ತರ್ಷಿಗಳು ಅವಳ ವಿಷಯದಲ್ಲಿ ವರಪ್ರದರಾಗಿ ನಿಮಗೆ ನಿಮ್ಮ ಗುಣಕ್ಕೆ ತಕ್ಕಂತೆ ಏಳುಜನ ಮಕ್ಕಳಾಗುತ್ತಾರೆ. ನೀವು ತಪಸ್ಸನ್ನು ಬಿಟ್ಟು

ಯುವಯೋರ್ಗುಣಸಂಯುಕ್ತಾ ಮಹರ್ಷೀಣಾಂ ಪ್ರಸಾದತಃ ।
ಇತ್ಯೇವಮುಕ್ತ್ವಾ ಜಗ್ಮುಸ್ತೇ ಸರ್ವ ಏವ ಮಹರ್ಷಯಃ ॥ ೫೦ ॥

ಸ ಚಾಪಿ ರಾಜರ್ಷಿರಗಾತ್ಸಭಾರ್ಯೋ ನಗರಂ ನಿಜಂ ।
ತತೋ ಬಹುತಿಥೆ ಕಾಲೆ ಸಾ ರಾಜ್ಞೋ ಮಹಿಷೀ ಪ್ರಿಯಾ ॥ ೫೧ ॥

ಅವಾಪ ಗರ್ಭಂ ತನ್ವಂಗೀ ತಸ್ಮಾನ್ನೃಪತಿಸತ್ತಮಾತ್ ।
ಗುರ್ವಿಣ್ಯಾಮಥ ಭಾರ್ಯಾಯಾಂ ಸ ಮಮಾರ ನರಾಧಿಪಃ ॥ ೫೨ ॥

ಸಾ ಚಾಪ್ಯಾರೋಢುಮಿಚ್ಛಂತೀ ಭರ್ತಾರಂ ವೈ ಪತಿವ್ರತಾ ।
ನಿವಾರಿತಾ ತದಾಮಾತ್ಯೈಃ ನ ತಥಾಪಿ ಪ್ರತಿಷ್ಠತಿ ॥ ೫೩ ॥

ಸಮಾರೋಪ್ಯಾಥ ಭರ್ತಾರಂ ಚಿತಾಯಾಮಾರುಹಚ್ಚ ಸಾ ।
ತತೋಗ್ನಿಮಧ್ಯಾತ್ಸಲಿಲಮಾಜಗಾಮಾಪತನ್ಮನೆ ॥ ೫೪ ॥

ತದಂಭಸಾ ಸುಶೀತೇನ ಸಂಸಿಕ್ತಂ ಸಪ್ತಧಾ ಭವತ್ ।
ತೇ ಜಾಯಂತಾಥ ಮರುತ ಔತ್ತಮಸ್ಯಾಂತರೆ ಮನೋಃ ॥ ೫೫ ॥

ತಾಮಸಸ್ಯಾಂತರೆ ಯೇ ಚ ಮರುತೋಽಥಾಭವನ್ ಪುರಾ ।
ತಾನಹಂ ಕೀರ್ತಯಿಷ್ಯಾಮಿ ಗೀತವಾದ್ಯಕಲಿಪ್ರಿಯ ॥ ೫೬

ಹೊರಡಿರಿ ಎಂದು ಹೇಳಲು ಆ ರಾಜರ್ಷಿಯೂ ಆ ಮಹರ್ಷಿಗಳ ಮಾತಿನಂತೆ ತಪಸ್ಸನ್ನು ಬಿಟ್ಟು ಪತ್ನಿಯೊಡನೆ ತನ್ನ ನಗರವನ್ನೇ ಸೇರಿದನು. ಅನಂತರ ಬಹುದಿನಗಳು ಕಳೆದ ಮೇಲೆ ಆ ರಾಜನ ಪಟ್ಟಮಹಿಷಿಯು ಧೊರೆಯ ಸಮಾಗಮದಿಂದ ಗರ್ಭಿಣಿಯಾದಳು. ಹೆಂಡತಿಯು ಗರ್ಭಿಣಿಯಾದ ಒಡನೆಯೇ ಆ ಧೊರೆಯು ಮೃತನಾದನು.

೫೩-೫೫. ಪತಿವ್ರತೆಯಾದ ಆ ರಾಜಪತ್ನಿಯೂ ಧೊರೆಯೊಡನೆ ಅಗ್ನಿಪ್ರವೇಶ ಮಾಡಲು ನಿಶ್ಚೈಸಿದಳು. ಮಂತ್ರಿಗಳು ಬಹಳವಾಗಿ ತಡೆದರೂ ಅವಳು ನಿಲ್ಲಲಿಲ್ಲ. ಪತಿಯನ್ನು ಚಿತಿಯಲ್ಲಿ ಏರಿಸಿ ತಾನೂ ಹತ್ತಿದಳು. ಅನಂತರ ಆ ಚಿತಾಗ್ನಿಮಧ್ಯದಿಂದ ತಣ್ಣಗಿರುವ ಜಲಧಾರೆಯು ಹೊರಟಿತು. ಆ ನೀರಿನಿಂದ ನೆನೆದ ರಾಜಪತ್ನಿಯೂ ಏಳು ಭಾಗವಾದಳು. ಅವರೇ ಉತ್ತಮಮನ್ವಂತರದಲ್ಲಿ ಸಪ್ತಮರುತ್ತುಗಳಾದರು.

೫೬–೫೯. ತಾಮಸಮನ್ವಂತರದಲ್ಲಿ ಯಾರು ಮರುತ್ತುಗಳಾದರೆಂಬುದನ್ನು ಹೇಳುತ್ತೇನೆ ಕೇಳು. ತಾಮಸಮನುವಿನ ಪುತ್ರನಾದ ದಂತಧ್ವಜನೆಂಬುವನು ಪ್ರಖ್ಯಾತ

ತಾಮಸಸ್ಯ ಮನೋಃ ಪುತ್ರೋ ದಂತಧ್ವಜ ಇತಿ ಶ್ರುತಃ ।
ಸ ಪುತ್ರಾರ್ಥೀ ಜುಹಾವಾಗ್ನೌ ಸ್ವಮಾಂಸಂ ರುಧಿರಂ ತಥಾ ॥ ೫೭ ॥

ಅಸ್ಥೀನಿ ರೋಮಕೇಶಾಂಶ್ಚ ಸ್ನಾಯುಮಜ್ಜಾಯಕೃದ್ಘನಂ ।
ಶುಕ್ರಂ ಚ ಚಿತ್ರಕೋ ರಾಜಾ ಸುತಾರ್ಥೀಚೇತಿ ನಶ್ಶ್ರುತಂ ॥ ೫೮ ॥

ಸಪ್ತಸ್ವೇವಾರ್ಚಿಷು ತತಃ ಶುಕ್ರಪಾತಾದನಂತರಂ ।
ಮಾ ಪ್ರಕ್ಷಿಪಸ್ವೇತ್ಯಭವಚ್ಛಬ್ದಃ ಸೋಽಪಿ ಮೃತೋ ನೃಪಃ ॥ ೫೯ ॥

ತತಃ ತಸ್ಮಾದ್ಧುತವಹಾತ್ಸಪ್ತಧಾ ತೇಜಸಾಯುತಾಃ ।
ಶಿಶವಃ ಸಮಜಾಯಂತ ತೇಽರುದನ್ ಭೈರವಂ ಮುನೇ ॥ ೬೦ ॥

ತೇಷಾಂ ತು ಧ್ವನಿಮಾಕರ್ಣ್ಯ ಭಗವಾನ್ ಪದ್ಮಸಂಭವಃ ।
ಸಮಾಗಮ್ಯ ವಿಚಾರ್ಯಾಥ ಸಂಚಕ್ರೆ ಮರುತಃ ಸುರಾನ್ ॥ ೬೧ ॥

ತೆತ್ವಾಸನ್ ಮರುತೋ ಬ್ರಹ್ಮನ್ ತಾಮಸೇ ದೇವತಾ ಗಣಾಃ ।
ಯೇಽಭವನ್ ರೈವತೆ ತಾಂಶ್ಚ ಶೃಣು ಚ ತ್ವಂ ತಪೋಧನ ॥ ೬೨ ॥

ನಾಗಿದ್ದು ಮಕ್ಕಳಿಲ್ಲದೆ ಇದ್ದುದರಿಂದ ಪುತ್ರಾರ್ಥಿಯಾಗಿ ಹೋಮಮಾಡತೊಡಗಿದನು. ಚಿತ್ರಕನೆಂಬ ಅವನು ತನ್ನ: ಮಾಂಸ, ರಕ್ತ, ಅಸ್ಥಿ, ರೋಮ, ಕೇಶಗಳು, ಸ್ನಾಯು, ಮಜ್ಜಾ, ಕರುಳು, ಶುಕ್ರ ಮೊದಲಾದ ಸಪ್ತಧಾತುಗಳನ್ನೂ ಪುತ್ರಾರ್ಥಿಯಾಗಿ ಅಗ್ನಿಯಲ್ಲಿ ಹೋಮಮಾಡಿದನೆಂದು ನಾವು ಕೇಳಿದ್ದೇವೆ. ಅಗ್ನಿಯ ಸಪ್ತಜಿಹ್ವೆಗಳಲ್ಲಿಯೂ ಶುಕ್ರವನ್ನು ಹೋಮಮಾಡಿದೊಡನೆಯೇ ಅಗ್ನಿಯಲ್ಲಿ ಇದನ್ನು ಹಾಕಬೇಡವೆಂಬ ಧ್ವನಿಯು ಕೇಳಿಸಿತು. ಒಡನೆಯೇ ಚಿತ್ರಕನೆಂಬ ಆ ದೊರೆಯು ಮೃತನಾದನು.

೬೦-೬೨. ಆಗ ಆ ಅಗ್ನಿಯಿಂದ ತೇಜಸ್ವಿಗಳಾದ ಏಳು ಶಿಶುಗಳು ಉಂಟಾದರು. ಹುಟ್ಟಿದೊಡನೆಯೇ ಅವರು ಘಟ್ಟಿಯಾಗಿ ಅತ್ತರು. ಅವರ ಆ ರೋದನಧ್ವನಿಯನ್ನು ಕೇಳಿ ಚತುರ್ಮುಖನು ಬಂದು ವಿಚಾರಮಾಡಿ ಅವರನ್ನೆಲ್ಲಾ ಮರುತ್ತುಗಳೆಂಬ ದೇವತೆಗಳನ್ನಾಗಿ ಮಾಡಿದನು. ಅವರೇ ತಾಮಸಮನ್ವಂತರದಲ್ಲಿಯೂ ಮರುತ್ತುಗಳೆಂಬ ದೇವತಾಗಣರಾದರು. ಹಾಗೆಯೇ ರೈವತಮನ್ವಂತರದಲ್ಲಿಯೂ ಹುಟ್ಟಿದ ಮರುದ್ಗಣಗಳನ್ನು ಹೇಳುತ್ತೇನೆ ಕೇಳು. ರೈವತಮನುವಿನ

ರೈವತಸ್ಯಾನ್ವವಾಯೇ ತು ಯ ಆಸೀದ್ರಿಪುಜಿದ್ಧನೀ ।
ರಿಪುಜಿನ್ನಾಮತಃ ಖ್ಯಾತೋ ನ ತಸ್ಯಾಸೀತ್ಸುತಃ ಕಿಲ ॥ ೬೩ ॥

ಸ ಸಮಾರಾಧ್ಯ ತಪಸಾ ಭಾಸ್ಕರಂ ತೇಜಸಾಂ ನಿಧಿಂ ।
ಅವಾಪ ಕನ್ಯಾಂ ಸುರತಿಂ ತಾಂ ಪ್ರಗೃಹ್ಯ ಗೃಹಂ ಯಯೌ ॥ ೬೪ ॥

ತಸ್ಯಾಂ ಪಿತೃಗೃಹೆ ಬ್ರಹ್ಮನ್ ವಸಂತ್ಯಾಂ ಸ ಪಿತಾ ಮೃತಃ ।
ಸಾಪಿ ದುಃಖಪರೀತಾಂಗೀ ಸ್ವಾಂ ತನುಂ ತ್ಯಕ್ತುಮುದ್ಯತಾ ॥ ೬೫ ॥

ತತಸ್ತಾಂ ವಾರಯಾಮಾಸುಃ ಋಷಯಃ ಸಪ್ತ ನಾರದ ।
ತಸ್ಯಾಮಾಸಕ್ತಚಿತ್ತಾಸ್ತು ಸರ್ವ ಏವ ತಪೋಧನಾಃ ॥ ೬೬ ॥

ಅಪಾರಯನ್ತೀ ತದ್ದುಃಖಂ ಪ್ರಜ್ವಾಲ್ಯಾಗ್ನಿಂ ವಿವೇಶ ಸಾ ।
ತೇ ಚಾಪಶ್ಯಂತ ಋಷಯಃ ತಚ್ಚಿತ್ತಾ ಭಾವಿತಾಸ್ತಥಾ ॥ ೬೭ ॥

ತಾಮ್ಮೃತಾಂ ಮುನಯೋ ದೃಷ್ಟ್ವಾ ಕಷ್ಟಂ ಕಷ್ಟೇತಿ ವಾದಿನಃ ।
ಪ್ರಜಗ್ಮುಃ ಜ್ವಲನಾಚ್ಚಾಥ ಸಪ್ತಾಜಾಯನ್ತ ದಾರಕಾಃ ॥ ೬೮ ॥

ವಂಶದಲ್ಲಿ ಧನವಂತನಾಗಿಯೂ ಶತ್ರುನಾಶಕನಾಗಿಯೂ ಇದ್ದ ರಿಪುಜಿತ್ ಎಂಬ ಧೊರೆಯು ಪ್ರಖ್ಯಾತಿಯಿಂದ ಆಳಿದನು. ಅವನಿಗೆ ಸಂತಾನವಿರಲಿಲ್ಲ.

೬೪-೬೭. ಆ ಧೊರೆಯು ತೇಜೋನಿಧಿಯಾದ ಸೂರ್ಯನನ್ನು ತಪಸ್ಸಿನಿಂದ ಸಂತೋಷಪಡಿಸಿ ಸುರತಿ ಎಂಬ ಕನ್ಯಕಾರತ್ನವನ್ನು ಹೊಂದಿ ಅವಳೊಡನೆಗೆ ಬಂದನು. ಆ ಕನ್ಯಕೆಯು ತಂದೆಯ ಮನೆಯಲ್ಲಿರುವ ಕಾಲದಲ್ಲಿಯೇ ತಂದೆಯು ಮೃತನಾದನು. ಆಗ ಆ ಕನ್ಯಕೆಯು ಪಿತೃದುಃಖದಿಂದ ಸಂತಪ್ತಳಾಗಿ ದೇಹಪರಿತ್ಯಾಗಮಾಡಲು ಪ್ರಯತ್ನಿಸಿದಳು. ಆ ಸಮಯದಲ್ಲಿ ಸಪ್ತರ್ಷಿಗಳು ಬಂದು ಅವಳನ್ನು ತಡೆದರು. ಆಗ ಸಪ್ತರ್ಷಿಗಳೆಲ್ಲರೂ ಅವಳಲ್ಲಿ ಆಸಕ್ತರಾದರು. ಈ ದುಃಖವನ್ನು ಸಹಿಸಲಾರದೆ ಆ ಕನ್ಯೆಯು ಅಗ್ನಿಯನ್ನು ಹತ್ತಿಸಿ ಅದರಲ್ಲಿ ಬಿದ್ದಳು. ಆಗ ಋಷಿಗಳೆಲ್ಲರೂ ಅವಳನ್ನು ನೋಡುತ್ತಾ ಅದೇ ಭಾವನೆಯಿಂದ ತನ್ಮನಸ್ಕರಾದರು.

೬೮-೭೦. ಹಾಗೆ ಮೃತಳಾದ ಅವಳನ್ನು ನೋಡಿ ಸಪ್ತರ್ಷಿಗಳು ಕಷ್ಟ ಕಷ್ಟ ವೆಂದು ಹೇಳುತ್ತಾ ಹೊರಟುಹೋದರು. ಅನಂತರ ಆ ಅಗ್ನಿಯಿಂದ ಏಳು ಬಾಲಕರು

ಕೇಚ ಮಾತ್ರಾವಿನಾಭೂತಾ ರುರುದುಸ್ತಾನ್ಪಿತಾಮಹಃ ।
ನಿವಾರಯಿತ್ವಾ ಕೃತವಾನ್ ಲೋಕನಾಥೋ ಮರುದ್ಗಣಾನ್ ॥ ೬೯ ॥

ರೈವತಸ್ಯಾಂತರೇ ಜಾತಾ ಮರುತೋಽಮೀ ತಪೋಧನ ।
ಶೃಣು ತ್ವಂ ಕೀರ್ತಯಿಷ್ಯಾಮಿ ಚಾಕ್ಷುಷಸ್ಯಾಂತರೇ ಮನೋಃ ॥ ೭೦ ॥

ಆಸೀನ್ಮಂಕಿರಿತಿ ಖ್ಯಾತಸ್ತಪಸ್ವೀ ಸತ್ಯವಾಕ್ಶುಚಿಃ ।
ಸಪ್ತಸಾರಸ್ವತೇ ತೀರ್ಥೆ ಸೋಽತಪ್ಯತ ಮಹತ್ತಪಃ ॥ ೭೧ ॥

ವಿಘ್ನಾರ್ಥಂ ತಸ್ಯ ತುಷಿತಾಂ ದೇವಾಸ್ಸಂಪ್ರೈಷಯನ್ಮುನೇ ।
ಸಾಚಾಭ್ಯೇತ್ಯ ನದೀತೀರೇ ಕ್ಷೋಭಯಾಮಾಸ ಭಾಮಿನೀ ॥ ೭೨ ॥

ತತೋಽಸ್ಯ ಪ್ರಾಚ್ಯವಚ್ಛುಕ್ರಂ ಸಪ್ತಸಾರಸ್ವತೇ ಜಲೇ ।
ತಾಂ ಚೈವಾಪ್ಯಶಪನ್ಮೂಢಾಂ ಮುನಿರ್ಮಂಕಣಕೋ ರಿಪುಂ ॥ ೭೩ ॥

ಗಚ್ಛ ವೈ ವೇತ್ಸಿ ಮೂಢೇ ತ್ವಂ ಪಾಪಸ್ಯಾಸ್ಯ ಮಹತ್ಫಲಂ ।
ವಿಧ್ವಂಸಸ್ತೇ ಹಿ ಭವಿತಾ ಸಂಪ್ರಾಪ್ತೇ ಯಜ್ಞಕರ್ಮಣಿ ॥ ೭೪ ॥

ಹುಟ್ಟಿದರು. ತಾಯಿ ಇಲ್ಲದೆ ಅಳುತ್ತಿರುವ ಆ ಬಾಲಕರನ್ನು ಚತುರ್ಮುಖನು ಬಂದು ಸಮಾಧಾನಪಡಿಸಿ ಮರುದ್ಗಣಗಳನ್ನಾಗಿ ಮಾಡಿದನು. ಇವರೇ ರೈವತಮನ್ವಂತರದ ಮರುತ್ತುಗಳು. ಚಾಕ್ಷುಷಮನ್ವಂತರದ ಮರುತ್ತುಗಳನ್ನು ಹೇಳುತ್ತೇನೆ ಕೇಳು.

೭೧-೭೪. ಮಂಕಿ ಎಂದು ಪ್ರಸಿದ್ಧನಾದ ಋಷಿಯಿದ್ದನು. ತಪಸ್ವಿಯಾಗಿಯೂ ಸತ್ಯವಚನನಾಗಿಯೂ ಇದ್ದ ಆ ಋಷಿಯು ಸಪ್ತಸಾರಸ್ವತತೀರ್ಥದಲ್ಲಿ ಮಹಾತಪಸ್ಸಿನಲ್ಲಿ ನಿರತನಾದನು. ಆಗ ದೇವತೆಗಳು ಅವನ ತಪಸ್ಸಿಗೆ ವಿಘ್ನವನ್ನುಂಟುಮಾಡಲು ತುಷಿತಾ ಎಂಬ ಅಪ್ಸರೆಯನ್ನು ಕಳುಹಿಸಿದರು. ಅವಳೂ ಬಂದು ನದೀತೀರದಲ್ಲಿದ್ದು ತನ್ನ ವಿಲಾಸಗಳಿಂದ ಆ ಋಷಿಯ ಮನಸ್ಸನ್ನು ಕ್ಷೋಭೆಗೊಳಿಸಿದಳು. ಆಗ ಋಷಿಯ ಶುಕ್ರವು ಸಪ್ತಸಾರಸ್ವತಜಲದಲ್ಲಿ ಬಿದ್ದಿತು. ಆಗ ಮಂಕಣಕನು ತಪಸ್ಸಿಗೆ ಶತ್ರುವಾಗಿ ಬಂದ ಅವಳನ್ನು ಶಪಿಸಿ ಎಲೈ ಮೂಢಯೇ, ಈಗ ಹೊರಡು, ನೀನು ಮಾಡಿದ ಈ ಮಹಾಪಾಪದ ಫಲವನ್ನು ಅನುಭವಿಸುತ್ತೀಯೆ, ಯಜ್ಞವು ಸನ್ನಿಹಿತವಾದ ಸಮಯದಲ್ಲಿ ನೀನು ಧ್ವಂಸಹೊಂದುವೆ ಎಂದನು.

ಏವಂ ಶಪ್ತ್ವಾ ಋಷಿಃ ಶ್ರೀಮಾನ್ ಜಗಾಮಾಥ ಸ್ವಮಾಶ್ರಮಂ ।
ಸರಸ್ವತೀಭ್ಯಃ ಸಪ್ತಭ್ಯಃ ಸಪ್ತೈವ ಮರುತೋ ಭವನ್ ॥ ೭೫ ॥

ಏವಂ ತವೋಕ್ತಾ ಮರುತೋ ಹಿ ಪೂರ್ವೇ
ಜಾತಾ ಜಗದ್ವ್ಯಾಪ್ತಿಕರಾ ಮಹರ್ಷೇ ।
ಯೇಷಾಂ ಶ್ರುತೇ ಜನ್ಮನಿ ಪಾಪಹಾನಿ
ರ್ಭವೇಚ್ಚ ಧರ್ಮಾಭ್ಯುದಯೋ ಮಹಾಂಶ್ಚ ॥ ೭೬ ॥

ಇತಿ ಶ್ರೀ ವಾಮನಪುರಾಣೇ ಮರುದುತ್ಪತ್ತಿರ್ನಾಮ
ದ್ವಿಸಪ್ತತಿತಮೋಽಧ್ಯಾಯಃ

೭೫-೭೬. ಈರೀತಿ ಶಾಪವನ್ನು ಕೊಟ್ಟು ಆ ಮಂಕಣಋಷಿಯು ತನ್ನ ಆಶ್ರಮಕ್ಕೆ ಹೊರಟುಹೋದನು. ಆ ಋಷಿಯ ಶುಕ್ರದಿಂದ ಏಳು ಸರಸತ್ವಿಯ ಶಾಖೆಯಿಂದಲೂ ಏಳುಜನ ಮರುತ್ತುಗಳುದಯಿಸಿದರು. ಈರೀತಿ ಜಗದ್ವ್ಯಾಪಕರಾದ ಮರುತ್ತುಗಳ ಉತ್ಪತ್ತಿಯನ್ನೆಲ್ಲಾ ನಿನಗೆ ಹೇಳಿ ಆಯಿತು. ಈ ಮಹಾತ್ಮರ ಉತ್ಪತ್ತಿಕ್ರಮವನ್ನು ಕೇಳಿದವರಿಗೆ ಪಾಪಹಾನಿಯುಂಟಾಗಿ ಪುಣ್ಯಾಭ್ಯುದಯವೂ ಉಂಟಾಗುತ್ತದೆ.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಮರುದುತ್ಪತ್ತಿಯೆಂಬ ಎಪ್ಪತ್ತೆರಡನೆಯ
ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಇಂದ್ರನಿಂದ ಕತ್ತರಿಸಲ್ಪಟ್ಟ ದಿತಿಯ ಗರ್ಭವು ಮರುತ್ತುಗಳಾಗಿ ಪರಿಣಮಿಸಿದುವೆಂಬ ಪ್ರಸಂಗದಿಂದ ನಾರದರು ಮರುತ್ತಗಳ ಉತ್ಪತ್ತಿಕ್ರಮವನ್ನು ಪ್ರಶ್ನೆಮಾಡಲು ಪುಲಸ್ತ್ಯರು ಸ್ವಾಯಂಭುವಮನ್ವಂತರವನ್ನು ಪ್ರಾರಂಭಿಸಿ ಚಾಕ್ಷುಷಮನ್ವಂತರದವರೆಗೂ ಆಯಾಯ ಮರುತ್ತಗಳ ಉತ್ಪತ್ತಿಕ್ರಮವನ್ನು ವಿವರಿಸಿರುತ್ತಾರೆ. ಈ ಪ್ರಶ್ನೋತ್ತರಗಳೆರಡೂ ಪ್ರಾಸಂಗಿಕ ವಿಷಯಕ್ಕೆ ಸೇರಿದುದು.

॥ ಶ್ರೀಃ ॥

ಶ್ರೀ ವಾ ಮ ನ ಪು ರಾ ಣಂ

ತ್ರಿಸಪ್ತತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಏತದರ್ಥಂ ಬಲಿರ್ದೈತ್ಯೈಃ ಕೃತೋ ರಾಜಾ ಕಲಿಪ್ರಿಯ ।
ಮಂತ್ರಪ್ರದಾತಾ ಪ್ರಹ್ಲಾದಃ ಶುಕ್ರಶ್ಚಾಸೀತ್ಪುರೋಹಿತಃ ॥ ೧ ॥

ಜ್ಞಾತ್ವಾಭಿಷಿಕ್ತಂ ದೈತೇಯಂ ವಿರೋಚನಸುತಂ ಬಲಿಂ ।
ದಿದೃಕ್ಷವಃ ಸಮಾಯಾತಾ *ಅಸುರಾಃ ಸರ್ವ ಏವ ಹಿ ॥ ೨ ॥

ತಾನಾಗತಾನ್ನಿರೀಕ್ಷ್ಯೈವ ಪೂಜಯಿತ್ವಾ ಯಥಾಕ್ರಮಂ ।
ಪಪ್ರಚ್ಛ ಕುಲಜಾನ್ ಸರ್ವಾನ್ ಕಿಂ ನು ಶ್ರೇಯಸ್ಕರಂ ಮಮ ॥ ೩ ॥

ಎಪ್ಪತ್ತಮೂರನೆಯ ಅಧ್ಯಾಯವು

೧-೪. ಪುಲಸ್ತ್ಯರು ಪ್ರಾಸಂಗಿಕ ವಿಚಾರವನ್ನು ಮುಗಿಸಿ ದೈತ್ಯರ ಮುಂದಿನ ವೃತ್ತಾಂತವನ್ನು ಪ್ರಾರಂಭಿಸುತ್ತಾರೆ. ಅಂಧಕನು ರಾಜ್ಯವನ್ನು ಬಿಟ್ಟು ಹರಭಕ್ತನಾದುದರಿಂದಲೇ ದೈತ್ಯರು ವಿರೋಚನ ಪುತ್ರನಾದ ಬಲಿಯನ್ನು ರಾಜನನ್ನಾಗಿ ಮಾಡಿದರು. ಆತನಿಗೆ ಪ್ರಹ್ಲಾದನು ಮಂತ್ರಿಯಾಗಿಯೂ ಶುಕ್ರನು ಪುರೋಹಿತನಾಗಿಯೂ ಇದ್ದರು. ಅಭಿಷಿಕ್ತನಾದ ಬಲಿಯನ್ನು ತಿಳಿದು ಅಸುರರೆಲ್ಲರೂ ಅವನನ್ನು ನೋಡಿ ಅಭಿನಂದಿಸಲು ಬಂದರು. ಹಾಗೆ ಬಂದ ಆ ಅಸುರರನ್ನೆಲ್ಲಾ ಬಲಿಯು ಯಥಾರ್ಹವಾಗಿ ಸತ್ಕರಿಸಿ ಕುಲಸ್ಥರಾದ ಅವರನ್ನು ಕುರಿತು ನನಗೆ ಈಗ ಯಾವುದು

---

* ಇಲ್ಲಿ ಅಸುರಾ ಎಂಬ ಪೂರ್ವೋತ್ತರಾನುಗುಣವಾದ ಪಾಠವಿರಬೇಕೆಂದು ತೋರುತ್ತದೆ.

ತತಸ್ತೇಪ್ರೋಚುರೇ ವೈನಂ ಶೃಣು ಚಾಸುರಸುಂದರ ।
ಯತ್ತೇ ಶ್ರೇಯಸ್ಕರಂ ಕರ್ಮ ಯದಸ್ಮಾಕಂ ಹಿತಂ ತಥಾ ॥ ೪ ॥

ಪಿತಾಮಹಸ್ತಥೈವಾಸೀದ್ಬಲೀ ದಾನವಪಾಲಕಃ ।
ಹಿರಣ್ಯಕಶಿಪುರ್ವೀರಃ ಸ ಶಕ್ರೋಭೂಜ್ಜಗತ್ತ್ರಯೆ ॥ ೫ ॥

ತಮಾಗತ್ಯ ಸುರಶ್ರೇಷ್ಠೋ ವಿಷ್ಣುಃ ಸಿಹ್ಮವಪುರ್ಧರಃ ।
ಪ್ರತ್ಯಕ್ಷಂ ದಾನವೇಂದ್ರಾಣಾಂ ನಖೈರ್ವಿಶಕಲೀಕೃತಃ ॥ ೬ ॥

ಅವಕೃಷ್ಟಶ್ಚ ರಾಜ್ಯಾತ್ಸ ತ್ರ್ಯಂಬಕೇಣ ಮಹಾತ್ಮನಾ ।
ಅಸ್ಮದರ್ಥೆ ಮಹಾಬಾಹೋ ಶಂಕರೇಣ ತ್ರಿಶೂಲಿನಾ ॥ ೭ ॥

ತಥಾ ತವ ಪಿತಾನ್ಯೋಪಿ ಜಂಭಃ ಶಕ್ರೇಣ ಘಾತಿತಃ ।
ಕುಜಂಭೋ ವಿಷ್ಣುನಾ ಚಾಪಿ ಪ್ರತ್ಯಕ್ಷಂ ಪಶುವದ್ಧತಃ ॥ ೮ ॥

ಶ್ರೇಯಸ್ಕರವಾದುದು ಎಂದು ಪ್ರಶ್ನೆಮಾಡಲು ಅವರೂ ಧೊರೆಯಾದ ಬಲಿಯನ್ನು ಕುರಿತು ಅಸುರರಾಜನೇ ನಿನಗೆ ಶ್ರೇಯಸ್ಕರವಾಗಿಯೂ ನಮಗೂ ಹಿತವಾಗಿಯೂ ಇರುವುದನ್ನು ಹೇಳುತ್ತೇವೆ ಕೇಳು ಎಂದುಪಕ್ರಮಿಸಿದರು.

೫-೬. ನಿನ್ನ ತಾತನಾದ ಹಿರಣ್ಯಕಶಿಪುವು ವೀರನಾಗಿಯೂ ಸಕಲದಾನವ ರಕ್ಷಕನಾಗಿಯೂ ಇದ್ದು ಮೂರುಲೋಕಗಳಿಗೂ ಇಂದ್ರನೇ ಆಗಿ ಬದುಕಿದನು. ಅವನನ್ನು ಸುರೋತ್ತಮನಾದ ವಿಷ್ಣುವು ಸಿಹ್ಮಶರೀರಧಾರಿಯಾಗಿ ದಾನವರ ಎದುರಿಗೇ ಉಗುರುಗಳಿಂದ ಚೂರುಚೂರಾಗಿ ಸೀಳಿದನು.

೭-೮. ಹಾಗೆಯೇ ಮಹಾತ್ಮನಾದ ಶಂಕರನಿಂದ ನಮಗೋಸ್ಕರ ಯುದ್ಧದಲ್ಲಿ ತೊಡಗಿದ ನಿನ್ನ ತಂದೆಯೂ ಸಹ ತ್ರಿಶೂಲದಿಂದ ಹಿಂಸಿಸಿ ಕೊನೆಗೆ ರಾಜ್ಯಭ್ರಷ್ಟನಾಗಿಯೇ ಮಾಡಲ್ಪಟ್ಟನು. ಜಂಭನೂ ಸಹ ಇಂದ್ರನಿಂದ ಕೊಲ್ಲಲ್ಪಟ್ಟನು. ಹಾಗೆಯೇ ಕುಜಂಭನನ್ನು ಸಹ ವಿಷ್ಣುವು ಪಶುವನ್ನು ಕೊಲ್ಲುವಂತೆ ಕೊಂದನು.

ಶಂಖಃ ಪಾಕೋ ಮಹೇಂದ್ರೇಣ ಭ್ರಾತಾ ತವ ಸುದರ್ಶನಃ ।
ವಿರೋಚನಸ್ತವ ಪಿತಾ ನಿಹತಃ ಕಥಯಾಮಿ ತೇ ॥ ೯ ॥

ಶ್ರುತ್ವಾ ಗೋತ್ರಕ್ಷಯಂ ಬ್ರಹ್ಮನ್ ಕೃತಂ ಶಕ್ರೇಣ ದಾನವಃ ।
ಉದ್ಯೋಗಂ ಕಾರಯಾಮಾಸ ಸಹ ಸರ್ವೈರ್ಮಹಾಸುರೈಃ ॥ ೧೦ ॥

ರಥೈರನ್ಯೆ ಗಜೈರನ್ಯೆ ವಾಜಿಭಿಶ್ಚಾಪರೇಽಸುರಾಃ ।
ಪದಾತಯಸ್ತಥಾಪ್ಯನ್ಯೆ ಜಗ್ಮುರ್ಯುದ್ಧಾಯ ದೇವತಾಃ ॥ ೧೧ ॥

ಮಮಾಗ್ರೆ ಯಾತಿ ಬಲವಾನ್ ಸೇನಾನಾಥೋ ಭಯಂಕರಃ ।
ಸೈನ್ಯಸ್ಯ ಮಧ್ಯೆ ಬಲಿನಃ ಕಾಲನೇಮಿಶ್ಚ ಪೃಷ್ಠತಃ ॥ ೧೨ ॥

ವಾಮಪಾರ್ಶ್ವಮವಷ್ಟಭ್ಯ ಶಾಲ್ವಃ ಪ್ರಥಿತವಿಕ್ರಮಃ ।
ಪ್ರಯಾತಿ ದಕ್ಷಿಣಂ ಘೋರಂ ತಾರಕಾಖ್ಯೋ ಭಯಂಕರಃ ॥ ೧೩ ॥

ದಾನವಾನಾಂ ಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ಸಂಪ್ರಯಾತಿ ನಿಯುದ್ಧಾಯ ದೇವೈಸ್ಸಹ ಕಲಪ್ರಿಯ ॥ ೧೪ ॥

೯-೧೦. ಶಂಖ, ಪಾಕ ಇವರು ಇಂದ್ರನಿಂದ ಕೊಲ್ಲಲ್ಪಟ್ಟರು. ಹಾಗೆಯೇ ನಿನ್ನ ಅಣ್ಣನಾದ ಸುದರ್ಶನನೂ ನಿನ್ನ ತಂದೆಯಾದ ವಿರೋಚನನೂ ಸಹ ಕೊಲ್ಲಲ್ಪಟ್ಟರು. ಈ ರೀತಿ ನಮ್ಮ ಗೋತ್ರಕ್ಷಯವೇ ದೇವತೆಗಳಿಂದ ಉಂಟಾಗಿದೆ. ಇದರ ಪ್ರತೀಕಾರವಿಷಯದಲ್ಲಿ ನಿನಗೆ ನಾವು ಏನು ಹೇಳಬಹುದು ಎನ್ನಲು ಇಂದ್ರನಿಂದುಂಟಾದ ವಂಶಕ್ಷಯವನ್ನು ಕೇಳಿ ಬಲಿಯು ಅಸುರರೊಡಗೂಡಿ ಪುನಃ ಯುದ್ಧಪ್ರಯತ್ನವನ್ನೇ ನಡೆಸಿದನು.

೧೧-೧೪. ಅನಂತರ ರಥಗಳಿಂದ ಕೆಲವರೂ ಹಾಗೇ ಆನೆಗಳಿಂದಲೂ ಕುದುರೆಗಳಿಂದಲೂ ಮತ್ತೆ ಕೆಲವರು ಪದಾತಿಗಳಾಗಿಯೂ ದೇವತೆಗಳಮೇಲೆ ಯುದ್ಧಕ್ಕೆ ದಾನವರೆಲ್ಲರೂ ಹೊರಟರು. ಆಗ ಆ ದಾನವರು ನನ್ನ ಮುಂಭಾಗದಲ್ಲಿ ಬಲಿಷ್ಠನಾದ ಸೇನಾಪತಿಯೇ ಹೋಗುತ್ತಿದ್ದಾನೆ, ಸೈನ್ಯಮಧ್ಯದಲ್ಲಿಯೂ ಬಲಿಷ್ಠರಿದ್ದಾರೆ, ಕಾಲನೇಮಿಯು ಹಿಂಭಾಗದಲ್ಲಿರುವನು, ಎಡಭಾಗವನ್ನು ರಕ್ಷಿಸುತ್ತಾ ಶಾಲ್ವನು ನಿಂತಿದ್ದಾನೆ, ಬಲಭಾಗವನ್ನು ತಾರಕನೆಂಬ ಭಯಂಕರನಾದ ದೈತ್ಯನು ರಕ್ಷಿಸುತ್ತಿದ್ದಾನೆ. ಹೀಗೆ ಹೇಳುತ್ತಾ ದಾನವರ ಸಹಸ್ರೋಪಸಹಸ್ರಾರ್ಬುದಸೈನ್ಯಗಳು ದೇವತೆಗಳೊಡನೆ ಯುದ್ಧಕ್ಕಾಗಿ ಹೊರಟವು.

ಶ್ರುತ್ವಾ ಸುರಾಣಾಮುದ್ಯೋಗಂ ಶಕ್ರಃ ಸುರಪತಿಃ ಸುರಾನ್ ।
ಉವಾಚ ಯೋಗಂ ದೈತ್ಯಾನಾಂ ಯೋದ್ಧುಂ ಸ್ವಬಲಸಂಯುತಾ್ ॥ ೧೫ ॥

ಇತ್ಯೇವಮುಕ್ತ್ವಾ ವಚನಂ ಸುರರಾಟ್ ಸ್ಯಂದನಂ ಬಲೀ ।
ಸಮಾರುರೋಹ ಭಗವಾನ್ಯತಮಾತಲಿವಾಜಿನಂ ॥ ೧೬ ॥

ಸಮಾರೂಢೆ ಸಹಸ್ರಾಕ್ಷೆ ಸ್ಯಂದನಂ ದೇವತಾ ಗತಾಃ ।
ಸ್ವಂ ಸ್ವಂ ವಾಹನಮಾರುಹ್ಯ ನಿಶ್ಚೇರುರ್ಯುದ್ಧಕಾಂಕ್ಷಿಣಃ ॥ ೧೭ ॥

ಆದಿತ್ಯಾ ವಸವೋ ರುದ್ರಾಃ ಸಾಧ್ಯಾ ವಿಶ್ವೇಶ್ವಿನೌ ತಥಾ ।
ವಿದ್ಯಾಧರಾ ಗುಹ್ಯಕಾಶ್ಚ ಯಕ್ಷರಾಕ್ಷಸಪನ್ನಗಾಃ ॥ ೧೮ ॥

ರಾಜರ್ಷಯಃ ತಥಾ ಸಿದ್ಧಾ ನಾನಾಭೂತಾಶ್ಚ ಸಂಘಶಃ ।
ಗಜಾನನ್ಯೆ ರಥಾನನ್ಯೆ ಹಯಾನನ್ಯೆ ಸಮಾರುಹನ್ ॥ ೧೯ ॥

ವಿಮಾನಾನಿ ಚ ಶುಭ್ರಾಣಿ ಪಕ್ಷಿವಾಹ್ಯಾನಿ ನಾರದ ।
ಸಮಾರುಹ್ಯಾದ್ರವನ್ ಸರ್ವೆ ಯತೋ ದೈತ್ಯಬಲಂ ಸ್ಥಿತಂ ॥ ೨೦ ॥

೧೫-೧೮. ಅಸುರರ ಈರೀತಿಯಾದ ಯುದ್ಧೋದ್ಯೋಗವನ್ನು ಕೇಳಿ ಇಂದ್ರನು ದೇವತೆಗಳನ್ನು ಕುರಿತು ಬಲಿಷ್ಠರಾದ ದೈತ್ಯರ ಸನ್ನಾಹವನ್ನು ಹೇಳಿ ತಾನೂ ಯುದ್ಧೋನ್ಮುಖನಾಗಿ ಮಾತಲಿಯಿಂದ ನಿಯಮಿಸಲ್ಪಟ್ಟ ಕುದುರೆಗಳುಳ್ಳ ರಥವನ್ನೇರಿದನು. ಇಂದ್ರನು ಯುದ್ಧೋತ್ಸಾಹಿಯಾಗಿ ರಥವನ್ನೇರಿದೊಡನೆಯೇ ದೇವತೆಗಳೆಲ್ಲರೂ ತಮ್ಮ ತಮ್ಮ ವಾಹನವನ್ನೇರಿ ಯುದ್ಧಕಾಂಕ್ಷೆಯಿಂದ ಹೊರಟರು. ದ್ವಾದಶಾದಿತ್ಯರೂ ಅಷ್ಟವಸುಗಳೂ ಏಕಾದಶರುದ್ರರೂ ಸಾಧ್ಯರೂ ವಿಶ್ವೇದೇವತೆಗಳೂ ಅಶ್ವಿನೀದೇವತೆಗಳೂ ಹಾಗೆಯೇ ವಿದ್ಯಾಧರರು, ಗುಹ್ಯಕರು, ಯಕ್ಷರು, ರಾಕ್ಷಸರು, ಸರ್ಪಗಳು ಎಲ್ಲರೂ ಯುದ್ಧೋನ್ಮುಖರಾಗಿ ಹೊರಟರು.

೧೯-೨೦. ರಾಜರ್ಷಿಗಳೂ ಹಾಗೆಯೇ ಸಿದ್ಧರೂ ಭೂತಗಳೂ ಸಹ ಗುಂಪು ಗುಂಪಾಗಿ ಆನೆಗಳನ್ನೂ ರಥಗಳನ್ನೂ ಹತ್ತಿ ಹೊರಟರು. ಪಕ್ಷಿಗಳಿಂದ ವಹಿಸಲರ್ಹವಾದ ಶುಭ್ರವಾದ ವಿಮಾನಗಳಲ್ಲಿಯೂ ಕುಳಿತು ದೇವತೆಗಳೆಲ್ಲರೂ ದೈತ್ಯಬಲವಿರುವ ಸ್ಥಲಕ್ಕೆ ಹೊರಟರು.

ಏತಸ್ಮಿನ್ನಂತರೆ ಧೀಮಾನ್ವೈನತೇಯಸ್ಸಮಾಗತಃ ।
ತಸ್ಮಿನ್ವಿಷ್ಣುಃ ಸುರಶ್ರೇಷ್ಠಸ್ತ್ವಧಿರೂಢಸ್ಸಮಭ್ಯಗಾತ್ ॥ ೨೧ ॥

ತಮಾಗತಂ ಸಹಸ್ರಾಕ್ಷಃ ತ್ರೈಲೋಕ್ಯಪತಿಮವ್ಯಯಂ ।
ವವಂದ ಮೂರ್ಧ್ನಾವನತಃ ಸಹ ಸರ್ವೈಸ್ಸುರೋತ್ತಮೈಃ ॥ ೨೨ ॥

ತತೋಽಗ್ರೇ ದೇವಸೈನ್ಯಸ್ಯ ಕಾರ್ತಿಕೇಯೋ ಗದಾಧರಃ ।
ಪಾಲಯನ್ ಜಘನಂ ವಿಷ್ಣುಃ ಯಾತಿ ಮಧ್ಯಂ ಸಹಸ್ರದೃಕ್ ॥ ೨೩ ॥

ವಾಮಂ ಪಾರ್ಶ್ವಮವಷ್ಟಭ್ಯ ಜಯಂತೋ ವರ್ತತೇ ಮುನೇ ।
ದಕ್ಷಿಣಂ ವರುಣಃ ಪಾರ್ಶ್ವಮವಷ್ಟಭ್ಯಾಗಮದ್ಬಲೀ ॥ ೨೪ ॥

ತತೋಽಮರಾಣಾಂ ಪೃತನಾ ಯಶಸ್ವಿನೀ
ಸ್ಕಂದೇಂದ್ರವಿಷ್ಣ್ವರುಣಸೂರ್ಯಪಾಲಿತಾ ।
ನಾನಾಸ್ತ್ರಶಸ್ತ್ರೋದ್ಯತದೋಸ್ಸಮೂಹಾ
ಸಮಾಸಸಾದಾರಿಬಲಂ ಮಹೀಧ್ರೇ ॥ ೨೫ ॥

೨೧-೨೨. ಈ ಸಮಯಕ್ಕೆ ಬುದ್ಧಿಶಾಲಿಯಾದ ಗರುಡನೂ ಬಂದು ಸೇರಿದನು. ಸುರೋತ್ತಮನಾದ ವಿಷ್ಣುವೂ ಆ ಗರುಡನನ್ನು ಆರೋಹಣಮಾಡಿ ಬಂದುಸೇರಿದನು. ಹಾಗೆ ಬಂದ ಲೋಕನಾಥನಾದ ವಿಷ್ಣುವನ್ನು ಎಲ್ಲಾ ದೇವತೆಗಳೊಡನೆ ಇಂದ್ರನು ತಲೆಬಾಗಿ ವಂದಿಸಿದನು.

೨೩-೨೫. ಅನಂತರ ಆ ದೇವಸೈನ್ಯದ ಮುಂಭಾಗದಲ್ಲಿ ಗದಾಧಾರಿಯಾದ ಷಣ್ಮುಖನೂ ಹಿಂಭಾಗದಲ್ಲಿ ವಿಷ್ಣುವೂ ಮಧ್ಯಭಾಗದಲ್ಲಿ ಇಂದ್ರನೂ ರಕ್ಷಕರಾಗಿ ನಿಂತರು. ಎಡಭಾಗದಲ್ಲಿ ಜಯಂತನು ರಕ್ಷಕನಾಗಿ ನಿಂತನು. ಬಲಭಾಗದಲ್ಲಿ ವರುಣನು ರಕ್ಷಕನಾಗಿ ತಡೆದು ನಿಂತನು. ಈ ರೀತಿ ಸ್ಕಂದ ಇಂದ್ರ ವಿಷ್ಣು ಜಯಂತ ಸೂರ್ಯ ಮೊದಲಾದವರಿಂದ ರಕ್ಷಿಸಲ್ಪಟ್ಟ ಯಶಸ್ವಿನಿಯಾದ ಆ ದೇವಸೈನ್ಯವು ನಾನಾ ವಿಧವಾದ ಶಸ್ತ್ರಾಸ್ತ್ರಗಳಿಂದ ಪ್ರಕಾಶಮಾನವಾದ ಬಾಹುಸಮೂಹದಿಂದ ಕೂಡಿ ಪರ್ವತದಲ್ಲಿದ್ದ ಶತ್ರುಸೈನ್ಯವನ್ನು ಹೊಂದಿತು.

ಉದಯಾದ್ರಿತಟೆ ರಮ್ಯೆ ಶುಭೆ ಸಮಶಿಲಾತಲೆ ।
ನಿರ್ವೃಕ್ಷೆ ಪಕ್ಷಿರಹಿತೆ ಜಾತೋ ದೇವಾಸುರೋ ರಣಃ ॥ ೨೬ ॥

ಸನ್ನಿಧಾನಾತ್ತಯೋರೌದ್ರಃ ಸೇನಯೋರಭವನ್ಮುನೆ ।
ಮಹೀಧ್ರೆ ಶಾಂತರಜಸಿ ತದ್ದಾನವಬಲಂ ಮಹತ್ ॥ ೨೭ ॥

ಅಭ್ಯದ್ರವಂತ ಸಹಸಾ ಸಮಂ ಸ್ಕಂದೇನ ದೇವತಾಃ ।
ನಿಜಘ್ನುರ್ದಾನವಾನ್ದೇವಾಃ ಕುಮಾರಭುಜಪಾಲಿತಾಃ ॥ ೨೮ ॥

ದೇವಾನ್ನಿಜಘ್ನುರ್ದಿತಿಜಾಃ ಮಯಗುಪ್ತಾಃ ಪ್ರಹಾರಿಣಃ ।
ಮಹೀಧರೋತ್ತಮೆ ಪೂರ್ವಂ ಯಥಾ ವಾನರಹಸ್ತಿನೋಃ ॥ ೨೯ ॥

ರಣರೇಣೂರಥೋದ್ಧೂತಃ ಪಿಂಗಲೋ ರಣಮೂರ್ಧನಿ ।
ಸಂಧ್ಯಾನುರಕ್ತಃ ಸದೃಶೋ ಮೇಘಃ ಖೆ ಸುರತಾಪಸ ॥ ೩೦ ॥

ತದಾಸೀತ್ತುಮುಲಂ ಯುದ್ಧಂ ನ ಪ್ರಾಜ್ಞಾಯತ ಕಿಂಚನ ।
ಶ್ರೂಯಂತೆ ತ್ವನಿಶಂ ಶಬ್ದಾಃ ಛಿಂಧಿ ಭಿಂದೀತಿ ವಾದಿನಾಂ ॥ ೩೧ ॥

೨೬-೨೮. ಮಟ್ಟವಾಗಿರುವ ಕಲ್ಲುಚಪ್ಪಡಿಗಳಿಂದ ಕೂಡಿ ರಮ್ಯವಾಗಿಯೂ ಶುಭಕರವಾಗಿಯೂ ಮತ್ತು ಪಕ್ಷಿಗಳು ಮರಗಳು ಯಾವುದೂ ಇಲ್ಲದೆಯೂ ಯುದ್ಧಕ್ಕೆ ಅರ್ಹವಾಗಿದ್ದ ಉದಯಪರ್ವತದ ತಪ್ಪಲಿನಲ್ಲಿ ಈ ದೇವಾಸುರ ಯುದ್ಧವು ನಡೆಯಿತು. ಧೂಳಿಯಿಂದ ರಹಿತವಾಗಿ ಶಾಂತವಾಗಿದ್ದ ಆ ಪರ್ವತದ ತಪ್ಪಲಿನಲ್ಲಿ ಉಭಯಸೇನೆಗಳ ಘಟ್ಟನದಿಂದ ರೌದ್ರವಾದ ಸನ್ನಿವೇಶವೇ ಉಂಟಾಯಿತು. ದಾನವರ ಮಹಾಸೈನ್ಯವು ಯುದ್ಧೋನ್ಮುಖವಾಯಿತು. ಷಣ್ಮುಖನಿಂದ ರಕ್ಷಿಸಲ್ಪಟ್ಟ ದೇವಸೈನ್ಯವು ಆ ಸ್ಕಂದ ನೊಡನೆ ದಾನವಬಲವನ್ನಾಕ್ರಮಿಸಿ ಪ್ರಹರಿಸಿತು.

೨೯. ಮಯನಿಂದ ರಕ್ಷಿಸಲ್ಪಟ್ಟ ದಾನವ ಸೈನ್ಯವೂ ನಾನಾವಿಧವಾದ ಆಯುಧಗಳಿಂದ ದೇವತೆಗಳನ್ನೂ ಪ್ರಹರಿಸಿತು. ವಾನರ ಮತ್ತು ಆನೆ ಇವುಗಳಿಗೆ ಪೂರ್ವದಲ್ಲಿ ನಡೆದ ಯುದ್ಧದಂತೆ ಈ ಯುದ್ಧವೂ ಕಂಗೊಳಿಸಿತು.

೩೦-೩೧. ಯುದ್ಧಭೂಮಿಯಲ್ಲಿ ರಥದಿಂದ ಮೇಲಕ್ಕೆದ್ದ ಹೊಂಬಣ್ಣವಾದ ಧೂಳಿಯು ಆಕಾಶದಲ್ಲಿ ಸಂಧ್ಯಾರಾಗದಿಂದ ಕೆಂಪಾದ ಮೇಘದಂತೆ ತೋರಿತು. ಸಂಕುಲವಾದ ಆ ಮಹಾಯುದ್ಧದಲ್ಲಿ ಒಂದು ವಸ್ತುವೂ ಗೋಚರಿಸದೆ ಭಟರುಗಳ ಛಿಂಧಿಬಿಂಧಿ ಎಂಬ ಧ್ವನಿಮಾತ್ರ ಕೇಳಿಬರುತ್ತಿತ್ತು.

ತತೋ ವಿಶಸನೋ ರೌದ್ರೋ ದೈತ್ಯಾನಾಂ ದೈವತೈ ಸ್ಸಹ ।
ಜಾತೋ ರುಧಿರನಿಷ್ಯಂದೋ ರಜಸಃ ಶಮನಾತ್ಮಕಃ ॥ ೩೨ ॥

ಶಾಂತೆ ರಜಸಿ ದೇವೌಘಾಃ ತದ್ದಾನವಬಲಂ ಮಹತ್ ।
ಅಭ್ಯದ್ರವನ್ನ*ಸಹಿತಾ ಸಮಂ ಸ್ಕಂದೇನ ಧೀಮತಾ ॥ ೩೩ ॥

ನಿಜಘ್ನುರ್ದಾನವಾರ್ದೇವಾಃ ಕುಮಾರಭುಜಪಾಲಿತಾಃ ।
ದೇವಾನ್ನಿಜಘ್ನುರ್ದೈತ್ಯಾಶ್ಚ ಮಯಗುಪ್ತಾಃ ಪ್ರಹಾರಿಣಃ ॥ ೩೪ ॥

ತತೋಽಮೃತರಸಾಸ್ವಾದಾದ್ವಿನಾಭೂತಾಃ ಸುರೋತ್ತಮಾಃ ।
ನಿರ್ಜಿತಾಃ ಸಮರೆ ದೈತ್ಯೈಃ ಸಮಂ ಸೈನ್ಯೇನ ನಾರದ ॥ ೩೫ ॥

ವಿನಿರ್ಜಿತಾರ್ ಸುರಾರ್ ದೃಷ್ಟ್ವಾ ವೈನತೇಯಧ್ವಜೋಽರಿಹಾ ।
ಶಾರ್ಙ್ಗಮುದ್ಯಮ್ಯ ಬಾಣೌಘೈಃ ನಿಜಘಾನ ತತಸ್ತತಃ ॥ ೩೬ ॥

---

೩೨. ದೈತ್ಯದಾನವರಿಗೆ ಉಂಟಾದ ಆ ಪರಸ್ಪರ ಯುದ್ಧದಲ್ಲಿ ಭಟರುಗಳ ಮರಣದಿಂದುಂಟಾದ ಭಯಂಕರವಾದ ರಕ್ತಪ್ರವಾಹವು ರಣಧೂಳಿಯೆಲ್ಲವನ್ನೂ ಶಮನಮಾಡಿತು.

೩೩-೩೪. ರಣಧೂಳಿಯು ಶಾಂತವಾದನಂತರ ದೇವತೆಗಳೆಲ್ಲರೂ ಸ್ಕಂದನೊಡಗೂಡಿ ದಾನವಬಲವನ್ನು ಬಹಳವಾಗಿ ಪ್ರಹರಿಸಿದರು. ಮಯನಿಂದ ಕೂಡಿದ ದೈತ್ಯರೂ ಸಹ ಪುನಃ ದೇವತೆಗಳನ್ನೂ ಪ್ರಹರಿಸಿದರು

೩೫-೩೬. ಆಗ ದೇವತೆಗಳೆಲ್ಲರೂ ಅಮೃತರಸದ ಪಾನವಿಲ್ಲದೆ ಬಳಲಿ ಪ್ರಬಲರಾಗಿದ್ದ ದೈತ್ಯರಿಂದ ಸೇನೆಯೊಡನೆ ನಿರ್ಜಿತರಾದರು. ಹಾಗೆ ಅಪಜಯಹೊಂದಿದ ದೇವತೆಗಳನ್ನು ನೋಡಿ ಗರುಡಧ್ವಜನಾದ ವಿಷ್ಣುವು ತನ್ನ ಧನುಸ್ಸನ್ನು ಎತ್ತಿ ಹಿಡಿದು ಬಾಣಗಳಿಂದ ದೈತ್ಯಬಲವನ್ನು ಸುತ್ತಲೂ ಪ್ರಹರಿಸಿದನು.

---

* ಇಲ್ಲಿ "ಅಭ್ಯದ್ರವಂತಸಹಿತಾ'' ಎಂದು ಪಾಠವಿರಬೇಕೆಂದು ತೋರುತ್ತದೆ.

ವಿಷ್ಣುನಾ ಹನ್ಯಮಾನಾಸ್ತೇ ದಾನವಾ *ಗರುಡೋಽಪ್ಯಥ ।
ದೈತೇಯಾ ಶ್ಶರಣಂ ಜಗ್ಮುಃ ಕಾಲನೇಮಿಂ ಮಹಾಸುರಂ ॥ ೩೭ ॥

ತೇಭ್ಯಃ ಸಚಾಭಯಂ ದತ್ವಾ ಪ್ರಯಯೌ ಯತ್ರ ಮಾಧವಃ ।
ವಿವೃದ್ಧಿಮಗಮದ್ವ್ರಹ್ಮನ್ಯಥಾ ವ್ಯಾಧಿರುಪೇಕ್ಷಿತಃ ॥ ೩೮ ॥

ಯಂ ಯಂ ಕರೇಣ ಸ್ಪೃಶತಿ ದೇವಂ ಯಕ್ಷಂ ಸ ಕಿನ್ನರಂ ।
ತಂತಮಾದಾಯ ಚಿಕ್ಷೇಪ ವಿಸ್ತೃತೇ ವದನೇ ಬಲೀ ॥ ೩೯ ॥

ಸಂರಂಭಾದ್ದಾನವೇಂದ್ರೋಽನ್ಯಮೃದತ ದಿತಿಜೈಃ ಸಂಯುಗೇ ದೇವಸೈನ್ಯಂ
ಸೇಂದ್ರಂ ಸಾರ್ಕಂ ಸಚಂದ್ರಂಕರಚರಣನಖೈರಸ್ತ್ರಹೀನೋಽಪಿ ವೇಗಾತ್ ।
ಚಕ್ರೇ ವೈಶ್ವಾನರಾಭೈಸ್ತ್ವವನಿಗಗನ ಯೋಸ್ತಿರ್ಯಗೂರ್ಧ್ವಂ ಸಮಂತಾ
ದ್ವ್ಯಾಪ್ತಂ ಕಲ್ಪಾಂತವಹ್ನೇಽರ್ಜಗದಖಿಲಮಿದಂ ರೂಪಮಾಸೀದ್ದಿಧಕ್ಷೋಃ ॥

೩೭-೩೯. ವಿಷ್ಣುವಿನಿಂದಲೂ ಗರುಡನಿಂದಲೂ ಪ್ರಹರಿಸಲ್ಪಟ್ಟ ಆ ದಾನವರು ಕಾಲನೇಮಿಯೆಂಬ ಮಹಾದೈತ್ಯನಲ್ಲಿ ಶರಣುಹೊಕ್ಕರು. ಅವನೂ ಸಹ ಅವರಿಗೆ ಅಭಯಪ್ರಧಾನ ಮಾಡಿ ವಿಷ್ಣುವಿರುವ ಸ್ಥಳಕ್ಕೆ ಬಂದು ಉಪೇಕ್ಷಿಸಲ್ಪಟ್ಟ ವ್ಯಾಧಿಯಂತೆ ವೃದ್ಧಿಹೊಂದಿದನು. ದೇವತೆಯನ್ನೇ ಆಗಲಿ ಯಕ್ಷ ಕಿನ್ನರರನ್ನೇ ಆಗಲಿ ಯಾರು ಯಾರನ್ನು ಅವನು ಕೈಯ್ಯಿಂದ ಮುಟ್ಟಿದನೋ ಅವರೆಲ್ಲರನ್ನೂ ತೆಗೆದು ಬಾಯಿಯಲ್ಲಿ ಹಾಕಿ ಭಕ್ಷಿಸಲಾರಂಭಿಸಿದನು.

೪೦. ದಾನವಶ್ರೇಷ್ಠನಾದ ಆ ಕಾಲನೇಮಿಯು ಅಸ್ತ್ರಹೀನನಾಗಿದ್ದರೂ ಕೋಪದಿಂದ ದಾನವರೊಡಗೂಡಿ ಆ ದೇವಸೈನ್ಯವನ್ನು ಅಗ್ನಿಯಂತೆ ಜ್ವಲಿಸುತ್ತಿದ್ದ ಕೈಕಾಲುಗಳ ಉಗುರುಗಳಿಂದಲೇ ವೇಗದಿಂದ ಮರ್ದಿಸಲಾರಂಭಿಸಿದನು. ಆಗ ಆ ದಾನವನು ಭೂಮಿ ಮತ್ತು ಆಕಾಶಗಳಲ್ಲಿ ವ್ಯಾಪ್ತವಾಗಿ ಜಗತ್ತೆಲ್ಲವನ್ನೂ ದಹಿಸಲು ಸನ್ನಾಹಹೊಂದಿದ ಪ್ರಲಯಾಗ್ನಿಯ ರೂಪವನ್ನೇ ಧರಿಸಿದನು.

---

* ಇಲ್ಲಿ "ಗರುಡೇನ ಚ" ಎಂದು ಪಾಠವಿರಬೇಕು.

ತಂ ದೃಷ್ಟ್ವಾ ವರ್ಧಮಾನಂ ರಿಪುಮತಿಬಲಿನಂ ದೇವಗಂಧರ್ವಮುಖ್ಯಾಃ
ಸಿದ್ಧಾ ಸ್ಸಾಧ್ಯಾಶ್ಚ ಮುಖ್ಯಾ *ಭವತರಲದೃಶಃ ಪ್ರಾದ್ರುವನ್ ದಿಕ್ಷು ಸರ್ವೇ ।
ಘೋಷೊಲ್ಲಯಂತೇ ಚ ದೈತ್ಯಾ ಹರಿಮುರಗಣೈ ರರ್ಚಿತಂ ಚಾರುಮೌಲಿಂ
ನಾನಾಶಸ್ತ್ರಾಸ್ತ್ರಪಾತೈರ್ವಿಗಲಿತಯಶಸಂ ಚಕ್ರುರುತ್ಸಿಕ್ತದರ್ಪಾಃ ॥ ೪೧ ॥

ತಾನಿತ್ಥಂ ಪ್ರೇಕ್ಷ್ಯ ದೈತ್ಯಾನ್ಮಯ ಬಲಿಪ್ರಮುಖಾನ್ಕಾಲನೇಮಿಪ್ರಧಾನಾ
ನ್ಬಾಣೈರಾಕೃಷ್ಯ ಶಾರ್ಙ್ಗಂ ತ್ವನವರತಮುರೋಭೇದಿಭಿರ್ವಜ್ರಕಲ್ಪೈಃ ।
ಕೋಪಾದಾರಕ್ತದೃಷ್ಟಿಃ ಸರಥಗಜಹಯಾರ್ನ್ದೃಷ್ಟಿ ನಿರ್ಧೂತವೀರ್ಯಾ
ನ್ನಾರಾಚಾಖ್ಯೈಃ ಸುಪುಂಖೈಃ ಜಲದ ಇವಗಿರಿಂ ಛಾದಯಾಮಾಸ ವಿಷ್ಣುಃ ॥

೪೧. ಹಾಗೆ ಅಭಿವೃದ್ಧಿಹೊಂದುತ್ತಿರುವ ಆ ದೈತ್ಯನನ್ನು ನೋಡಿ ದೇವ, ಗಂಧರ್ವ, ಸಿದ್ಧ, ಸಾಧ್ಯರೇ ಮೊದಲಾದ ದೇವತೆಗಳೆಲ್ಲರೂ ಭಯದಿಂದ ಕಣ್ಣುಕಣ್ಣು ಬಿಡುತ್ತಾ ದಿಕ್ಕುದಿಕ್ಕುಗಳಿಗೆ ಓಡಿದರು. ಆಗ ದೈತ್ಯರೆಲ್ಲರೂ ದರ್ಪದಿಂದ ಉಬ್ಬಿ ವಿಜಯಲಾಭೇಚ್ಛೆಯಿಂದ ಕುಣಿಕುಣಿಯುತ್ತಾ ದೇವತೆಗಳಿಂದ ಪುರಸ್ಕರಿಸಲ್ಪಟ್ಟ ವಿಷ್ಣುವನ್ನು ನಾನಾ ಶಸ್ತ್ರಾಸ್ತ್ರಗಳಿಂದ ಪ್ರಹರಿಸಿ ಅವನ ಯಶಸ್ಸೇ ನಾಶವಾಗುವಂತೆ ಮಾಡಿದರು.

೪೨. ಈರೀತಿ ಪ್ರಹಾರೋನ್ಮುಖನಾದ ಕಾಲನೇಮಿಯನ್ನೇ ಮುಂದಾಳಾಗಿ ಮಾಡಿ ಬಂದ ಮಯ ಬಲಿ ಮುಂತಾದ ದೈತ್ಯರನ್ನು ನೋಡಿ ಕೋಪದಿಂದ ಕೆಂಪಡರಿದ ಕಣ್ಣುಳ್ಳ ವಿಷ್ಣುವು ಶಾರ್ಙ್ಗವೆಂಬ ತನ್ನ ಧನುಸ್ಸನ್ನು ಆಕರ್ಷಿಸಿ ವಜ್ರಮಯವಾದ ಮರ್ಮಭೇದಿಗಳಾದ ಬಾಣಗಳಿಂದ ಗಜ, ರಥ, ಕುದುರೆ ಮುಂತಾದ ವಾಹನ ಸಮೇತರಾದ ಆ ದೈತ್ಯರನ್ನು ಕಂಗಾಲಾಗುವಂತೆ ಮಾಡಿ ಮೇಘವು ವೃಷ್ಟಿಯಿಂದ ಪರ್ವತವನ್ನು ಆಚ್ಛಾದಿಸುವಂತೆ ನಾರಾಚವೆಂಬ ಬಾಣಪರಂಪರೆಗಳಿಂದ ಅವರನ್ನು ಮುಚ್ಚಿದನು.

* ಇಲ್ಲಿ ಭಯತರಲದೃಶಃ ಎಂದು ಪಾಠವಿರಬೇಕೆಂದು ತೋರುತ್ತದೆ.

ತೆ ಬಾಣೈಶ್ಛಾದ್ಯಮಾನಾ ಹರಿಕರಮುಚಿತೈಃಕಾಲದಂಡಪ್ರಕಾಶೈ
ರ್ನಾರಾಚೈರರ್ಧಚಂದ್ರೈ ರ್ಬಲಿಮಯಪುರಗಾ ಭೀತಭೀತಾಸ್ತ್ವರಂತಃ ।
ಪ್ರಾರಂಭೆ ದಾನವೇಂದ್ರಂ ಶತಮುಖಮಥನಂ ಪ್ರೇಂಖಯನ್ಕಾಲನೇಮಿಂ
ಸ ಪ್ರಾಯಾದ್ದೇವಸೈನ್ಯಪ್ರಭುಮಮಿತಬಲಂ ಕೇಶವಂ ಲೋಕನಾಥಂ ॥

ದೃಷ್ಟ್ವಾ ತಂ ಶತಶೀರ್ಷಮುದ್ಯತಗದಂ ಶೈಲೇಂದ್ರ ಶೃಂಗಾಕೃತಿಂ
ವಿಷ್ಣುಃ ಶಾರ್ಙ್ಗಮಪಾಸ್ಯ ಸತ್ವರಮಥೋ ಜಗ್ರಾಹ ಚಕ್ರಂ ಕರೆ ।
ದೇವೇನ್ಯೈವ ಸಮೇತ್ಯ ದೈತ್ಯವಿಟಪಪ್ರಚ್ಛೇದನಂ ಮಾಲಿನಂ
ಪ್ರೋವಾಚಾಥ ವಿಹಸ್ಯ ತಂ ಚ ಸುಚಿರಂ ಮೇಘಸ್ವನೋ ದಾನವಃ ॥ ೪೪ ॥

ಅಯಂ ಸ ದನುಪುತ್ರಜಿದ್ದನುಜಸೈನ್ಯವಿತ್ರಾಸಕೃ
ದ್ರಿಪುಃ ಪರಮಕೋಪನೋ ಮಮ ವಿಘಾತಕೃತ್ವಾಯುಧೀ ।

---

೪೩. ಆಗ ಆ ದಾನವರು ಹರಿಯ ಕೈಯ್ಯಿನಿಂದ ಹೊರಟು ಕಾಲದಂಡದಂತೆ ಜ್ವಲಿಸುವ ನಾರಾಚ ಅರ್ಧಚಂದ್ರ ಮೊದಲಾದ ಬಾಣಗಳಿಂದ ಮುಚ್ಚಲ್ಪಟ್ಟು ಬಹಳ ಭಯದಿಂದ ತ್ವರಿತರಾದರು. ಆಗ ಬಲಿ ಮಯ ಮುಂತಾದ ದಾನವೇಶ್ವರರು ಮೊದಲು ಇಂದ್ರನ ದರ್ಪವನ್ನೂ ನಾಶಮಾಡಿದ ಕಾಲನೇಮಿಯನ್ನು ಯುದ್ಧಮಾಡಲು ಪ್ರೋತ್ಸಾಹಿಸಿದರು. ಆ ಕಾಲನೇಮಿಯೂ ದೇವಸೈನ್ಯಕ್ಕೆ ಪ್ರಭುವಾಗಿದ್ದ ಲೋಕ ಪತಿಯಾದ ವಿಷ್ಣುವನ್ನೇ ಎದುರಿಸಲು ಬಂದನು.

೪೪. ಆಗ ವಿಷ್ಣುವು ಅನೇಕ ಶಿರಸ್ಸುಗಳಿಂದ ಕೂಡಿ ಗಧಾಧಾರಿಯಾಗಿ ಪರ್ವತದ ಶಿಖರದಂತಿದ್ದ ಆ ದೈತ್ಯನನ್ನು ನೋಡಿ ಶಾರ್ಙ್ಗವನ್ನು ಬಿಟ್ಟು ಚಕ್ರವನ್ನು ಕೈಯ್ಯಲ್ಲಿ ಧರಿಸಿದನು. ಇಂದ್ರನೊಡಗೂಡಿ ದೈತ್ಯವೃಕ್ಷವನ್ನು ಛೇದಿಸಲುಪಕ್ರಮಿಸಿದ ಮಾಲಾಧಾರಿಯಾದ ಆ ವಿಷ್ಣುವನ್ನು ಕುರಿತು ದೈತ್ಯನಾದ ಕಾಲನೇಮಿಯು ಬಹಳ ಹೊತ್ತು ಹಾಸ್ಯಮಾಡಿ ನಕ್ಕು ಮೇಘಧ್ವನಿಯಂತೆ ಗಂಭೀರ ಧ್ವನಿಯಿಂದ ಹೀಗೆ ಹೇಳಿದನು.

೪೫. ಇವನೇ ಹಿಂದೆ ದಾನವರನ್ನು ಜಯಿಸಿ ಈಗಲೂ ದಾನವರಿಗೆ ಭಯಂಕರನಾಗಿ ಬಹಳ ಕೋಪದಿಂದ ಆಯುಧಧಾರಿಯಾಗಿ ನನ್ನನ್ನು ನಾಶಮಾಡಲು ಬರುತ್ತಿದ್ದಾನೆ. ಇವನು ವಿವಿಧ ಪುಷ್ಪಗಳಿಂದ ಪೂಜಿಸಲ್ಪಡತಕ್ಕವನಾದರೂ ಹಿರಣ್ಯಾಕ್ಷ

ಹಿರಣ್ಯನಯನಾಂತಕೋ ವಿವಿಧಪುಷ್ಪಪೂಜಾರತಿಃ
ಕ್ವ ಯಾತಿ ಮಮಗೋಚರೆ ನಿಪತಿತಃ ಖಲೋಽಸದ್ದೃಶಃ ॥ ೪೫ ॥

ಯದ್ಯೇಷ ಸಂಪ್ರತಿ ಮಮಾಹವಮಭ್ಯುಪೈತಿ
ನೂನಂ ನಯಾತಿ ನಿಲಯಂ ನಿಜಮಂಬುಜಾಕ್ಷಃ ।
ಮನ್ಮುಷ್ಟಿಪಿಷ್ಟಶಿಥಿಲಾಂಗಮುಪಾಂತಭಸ್ಮ
ಸಂದ್ರಕ್ಷ್ಯತೇ ಸುರಜನೋ ಭಯಕಾತರಾಕ್ಷಃ ॥ ೪೬ ॥

ಇತ್ಯೇವಮುಕ್ತ್ವಾ ಮಧುಸೂದನಂ ವೈ
ಸಕಾಲನೇಮಿಃ ಸ್ಫುರಿತಾಧರೋಷ್ಠಃ ।
ಗದಾಂ ಖಗೇಂದ್ರೋಪರಿ ಜಾತರೋಷೋ
ಮುಮೋಚ ಶೈಲೆ ಕುಲಿಶಂ ಯಥೇಂದ್ರಃ ॥ ೪೭ ॥

ತಾಮಾಪತಂತೀಂ ಪ್ರಸಮೀಕ್ಷ್ಯ ವಿಷ್ಣು
ರ್ಘೋರಾಂ ಗದಾಂ ದಾನವಬಾಹುಮುಕ್ತಾಂ ।
ಚಕ್ರೇಣ ಚಿಚ್ಛೇದ ಸುದುರ್ಗತಸ್ಯ
ಮನೋರಥಂ ಪೂರ್ವಕೃತಂ ಹಿ ಕರ್ಮ ॥ ೪೮ ॥

ನನ್ನು ಕೊಂದುದರಿಂದ ನನಗೆ ಶತ್ರುವೇ ಆಗಿರುವನು. ಕ್ರೂರದೃಷ್ಟಿಯುಳ್ಳ ನನಗೆ ಗೋಚರನಾಗಿರುವ ಇವನು ಎಲ್ಲಿಗೆ ತಾನೆ ತಪ್ಪಿಸಿಕೊಂಡುಹೋದಾನು.

೪೬-೪೭. ಇವನು ಈಗ ನನ್ನೊಡನೆ ಯುದ್ಧಕ್ಕೆ ಬಂದದ್ದೇ ಆದರೆ ನಿಜವಾಗಿಯೂ ತನ್ನ ಮನೆಗೆ ಹಿಂತಿರುಗಿ ಹೋಗಲಾರನು. ನನ್ನ ಮುಷ್ಟಿಪ್ರಹಾರದಿಂದ ಮರ್ದಿಸಲ್ಪಟ್ಟ ಸುಟ್ಟುಹೋದ ಇವನ ದೇಹಭಸ್ಮವನ್ನು ದೇವತೆಗಳೆಲ್ಲರೂ ಭಯದಿಂದ ಈಗಲೇ ನೋಡುತ್ತಾರೆ. ಹೀಗೆ ಹೇಳಿ ಆ ಕಾಲನೇಮಿಯು ಕೋಪದಿಂದ ತುಟಿಯನ್ನು ನಡುಗಿಸುತ್ತಾ ಮಧುಸೂದನನ್ನು ಎದುರಿಸಲು ಬಂದು ಆವನ ವಾಹನವಾದ ಗರುಡನಮೇಲೆ ಇಂದ್ರನು ಪರ್ವತದಮೇಲೆ ವಜ್ರಾಯುಧವನ್ನು ಹಾಕುವಂತೆ ಕೋಪದಿಂದ ಗದೆಯನ್ನು ಹಾಕಿದನು.

೪೮. ಆರೀತಿ ದಾನವನಿಂದ ಪ್ರಯೋಗಿಸಲ್ಪಟ್ಟ ಘೋರವಾದ ಗದೆಯನ್ನು ನೋಡಿ ವಿಷ್ಣುವು ದರಿದ್ರನ ಮನೋರಥವನ್ನು ಪೂರ್ವದುಷ್ಕರ್ಮವು ನಾಶಪಡಿಸುವಂತೆ ಚಕ್ರಾಯುಧದಿಂದ ಕತ್ತರಿಸಿದನು.

ಗದಾಂ ಛಿತ್ವಾ ತದಾ ವಿಷ್ಣುಃ ದಾನವಸ್ಯ ಸುದಾರುಣಾಂ ।
ಸಮುಪೇತ್ಯ ಭುಜೌ ಪೀನೌ ಸಂಪ್ರಚಿಚ್ಛೇದ ವೇಗವಾನ್ ॥ ೪೯ ॥

ಭುಜಾಭ್ಯಾಮಥ ಕೃತ್ತಾಭ್ಯಾಂ ವಿಷ್ಣುನಾ ಪ್ರಭವಿಷ್ಣುನಾ ।
ಕಾಲನೇಮಿಸ್ತಥಾ ಭಾತಿ ದಗ್ಧಃ ಶೈಲ ಇವಾಪರಃ ॥ ೫೦ ॥

ತತೋಽಸ್ಯ ಮಾಧವಃ ಕ್ರೋಧಾಚ್ಛಿರಶ್ಚಕ್ರೇಣ ಭೂತಲೇ ।
ಛಿತ್ವಾ ನಿಪಾತಯಾಮಾಸ ಪಕ್ವಂ ತಾಲಫಲಂ ಯಥಾ ॥ ೫೧ ॥

ತಥಾ ವಿಬಾಹುರ್ವಿಶಿರಾ ಮುಂಡತಾಲೋ ಯಥಾ ವನೇ ।
ತಸ್ಥೌ ಮೇರುರಿವಾಕಂಪ್ಯಃ ಕಬಂಧಃ ಕ್ಷ್ಮಾಧರೇಶ್ವರಃ ॥ ೫೨ ॥

ತಂ ವೈನತೇಯೋಽಪ್ಯುರಸಾ ಖಗೇಂದ್ರೋ
ನಿಪಾತಯಾಮಾಸ ಮುನೇ ಧರಣ್ಯಾಂ ।
ಯಥಾಂಬರಾದ್ರಾಹುಶಿರಃ ಪ್ರಣಷ್ಟಂ
ಧನ್ಯಂ ಮಹೇಂದ್ರಃ ಕುಲಿಶೇನ ಭೂಮ್ಯಾಂ ॥ ೫೩ ॥

೪೯-೫೧. ಹಾಗೂ ದಾರುಣವಾದ ಆ ಗದೆಯನ್ನೂ ಕತ್ತರಿಸಿ ಸಮೀಪಕ್ಕೆ ಬಂದು ಆ ದೈತ್ಯನ ಸ್ಥೂಲವಾದ ಭುಜಗಳನ್ನೂ ವೇಗದಿಂದ ಕತ್ತರಿಸಿದನು. ವಿಷ್ಣುವಿನಿಂದ ಭುಜಗಳು ಕತ್ತರಿಸಲ್ಪಟ್ಟಮೇಲೆ ಆ ಕಾಲನೇಮಿಯು ಅಗ್ನಿಯಿಂದ ದಗ್ಧವಾದ ಪರ್ವತದಂತೆ ತೋರಿದನು. ಅನಂತರದಲ್ಲಿ ವಿಷ್ಣುವು ಕೋಪದಿಂದ ಅವನ ತಲೆಯನ್ನೂ ಕತ್ತರಿಸಿ ಪಕ್ವವಾದ ತಾಳೆಯಫಲದಂತೆ ನೆಲಕ್ಕೆ ಕೆಡವಿದನು.

೫೨-೫೪. ಅನಂತರ ಆ ದೈತ್ಯನು ತಲೆ ಇಲ್ಲದೆಯೂ ತೋಳುಗಳಿಲ್ಲದೆಯೂ ತಲೆಯಿಲ್ಲದ ತಾಳೆಯ ಮರವು ಕಾಡಿನಲ್ಲಿ ನಿಲ್ಲುವಂತೆ ಅಲ್ಲಾಡದೆ ಮೇರುಪರ್ವತದಂತೆ ನಿಂತನು. ಆಗ ಗರುಡನು ಬಂದು ಆಕಾಶದಲ್ಲಿ ಛೇದಿಸಲ್ಪಟ್ಟ ರಾಹುವಿನ ತಲೆಯನ್ನು ಇಂದ್ರನು ಭೂಮಿಗೆ ಕೆಡವಿದಂತೆ ಅವನನ್ನು ಕೆಳಕ್ಕೆ ಕೆಡವಿದನು. ಸೇನಾನಾಥನಾದ ಆ ಕಾಲನೇಮಿಯು ಹತನಾಗಲು ದೇವತೆಗಳಿಂದ ಬಹಳವಾಗಿ ಘಾಸಿಪಡಿಸಲ್ಪಟ್ಟ ದೈತ್ಯ

ತಸ್ಮಿನ್ಹತೇ ದಾನವಸೈನ್ಯಪಾಲೇ
ಸಂಸಾಧ್ಯಮಾನಾಸ್ತ್ರಿ ದಶೈಶ್ಚ ದೈತ್ಯಾಃ ।
ವಿಮುಕ್ತಶಸ್ತ್ರಾಲಕವರ್ಮವಸ್ತ್ರಾಃ
ಸಂಪ್ರಾದ್ರವನ್ ಬಾಣಮೃತೇಸುರೇಂದ್ರಾಃ ॥ ೫೪ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ
ಕಾಲನೇಮಿವಧೋ ನಾಮ ತ್ರಿಸಪ್ತತಿತಮೋಽಧ್ಯಾಯಃ.

ರೆಲ್ಲರೂ ಶಸ್ತ್ರ, ವಸ್ತ್ರ, ಕವಚ ಎಲ್ಲವನ್ನೂ ಬಿಟ್ಟು ಬಾಣನೊಬ್ಬನು ಹೊರತಾಗಿ ಎಲ್ಲರೂ ಯುದ್ಧಭೂಮಿಯಿಂದ ಓಡಿದರು.

ಇಲ್ಲಿಗೆ ಶ್ರೀ ವಾಮನಪುರಾಣದ ವಾಮನಪ್ರಾದುರ್ಭಾವದಲ್ಲಿ ಕಾಲನೇಮಿವಧವೆಂಬ
ಎಪ್ಪತ್ತಮೂರನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಅಂಧಕನ ತರುವಾಯ ಬಲಿಯು ದೈತ್ಯರಾಜನಾದನೆಂದೂ ಅವನನ್ನು ಅಭಿನಂದಿಸಲು ಬಂದ ದೈತ್ಯರನ್ನು ಕುರಿತು ತನಗೆ ಶ್ರೇಯಸ್ಕರವಾವುದೆಂದು ಬಲಿಯು ಪ್ರಶ್ನೆಮಾಡಲು ಅವರು ಹಿರಣ್ಯಕಶಿಪುವೇ ಮೊದಲಾದ ದಾನವಾಗ್ರೇಸರರಿಗೆ ದೇವತೆಗಳಿಂದ ಉಂಟಾದ ತೊಂದರೆಯನ್ನು ವಿಸ್ತಾರವಾಗಿ ಹೇಳಿದರೆಂದೂ ಈ ವೃತ್ತಾಂತ ಶ್ರವಣದಿಂದ ಕುಪಿತನಾದ ಬಲಿಯು ದೇವತೆಗಳಮೇಲೆ ಯುದ್ಧವನ್ನು ಆರಂಭಿಸಲು ಸರ್ವಸನ್ನಾಹಮಾಡಿಕೊಂಡನೆಂದೂ ಇದನ್ನು ತಿಳಿದ ದೇವತೆಗಳೂ ಸರ್ವಸನ್ನಾಹದಿಂದ ಉದಯಪರ್ವತದ ತಪ್ಪಲಿನಲ್ಲಿ ಸೇರಿ ಭಯಂಕರವಾದ ಯುದ್ಧವನ್ನು ಉಪಕ್ರಮಿಸಿದರೆಂದೂ ಪರಸ್ಪರ ಯುದ್ಧವು ಬಹಳ ತ್ವರೆಯಿಂದ ನಡೆಯಿತಾದರೂ ದೇವಸೈನ್ಯವು ಅಮೃತಪಾನವಿಲ್ಲದುದರಿಂದ .ಮಧ್ಯದಲ್ಲಿಯೇ ಬಳಲಿ ನಿಲ್ಲಲು ವಿಷ್ಣುವು ಶಾರ್ಙ್ಗವೆಂಬ ಧನುಸ್ಸನ್ನು ಧರಿಸಿ ದಾನವರನ್ನು ಸದೆಬಡಿಯಲಾರಂಭಿಸಿದಾಗ ಆ ದೈತ್ಯರೆಲ್ಲರೂ ಕಾಲನೇಮಿ ಎಂಬ ದಾನವಶ್ರೇಷ್ಠನಲ್ಲಿ ಶರಣಾಗತರಾದರೆಂದೂ ಆಗ ಕಾಲನೇಮಿಯು ದೈತ್ಯರಿಗೆ ಅಭಯವನ್ನಿತ್ತು ಯುದ್ಧಾಭಿಮುಖನಾಗಿ ತನ್ನ ದೇಹವನ್ನು ಭೂಮ್ಯಾಕಾಶಪರ್ಯಂತ ಅಭಿವೃದ್ಧಿಗೊಳಿಸಿ ದೇವತೆಗಳನ್ನೆಲ್ಲಾ ಭಕ್ಷಿಸಲಾರಂಭಿಸಿದನೆಂದೂ ಅನಂತರ ವಿಷ್ಣುವು ಧನುಸ್ಸನ್ನು ತ್ಯಜಿಸಿ ಚಕ್ರವನ್ನು ಹಿಡಿದು ಎದುರಾಗಿ ಬಂದ ಆ ಶತ್ರುವಿನ ಗದೆಯನ್ನು ಅವನ ಬಾಹುಗಳನ್ನೂ ಕೊನೆಗೆ ತಲೆಯನ್ನು ಛೇದಿಸಲು ತಲೆಯಿಲ್ಲದೆ ರಣಭೂಮಿಯಲ್ಲಿ ನಿಂತ ಅವನ ದೇಹವನ್ನು ಗರುಡನು ಹೊಡೆದು ಕೆಡವಿದನೆಂದೂ ಅನಂತರ ದಾನವರೆಲ್ಲರೂ ಬಾಣನೊಬ್ಬನು ಹೊರತು ಎಲ್ಲರೂ ಭಯದಿಂದ ಓಡಿದರೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀ ವಾ ಮ ನ ಪು ರಾ ಣ ಂ

ಚತುಸ್ಸಪ್ತತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಸನ್ನಿವೃತ್ತಬಲೆ ಬಾಣೆ ದಾನವಾಃ ಸತ್ವರಂ ಪುನಃ ।
ಪ್ರಯಾತಾ ದೇವತಾಸೇನಾಂ ಸಶಸ್ತ್ರಾಯುಧಲಾಲಸಾಃ ॥ ೧ ॥

ವಿಷ್ಣುರಪ್ಯಮಿತೌಜಾಸ್ತಂ ಜ್ಞಾತ್ವಾ ಜ್ಞೇಯಂ ಬಲೇಸ್ಸುತಂ ।
ಪ್ರಾಹಾಮಂತ್ರ್ಯ ಸುರಾನ್ಸರ್ವಾನ್ ಯುದ್ಧ್ಯಧ್ವಂ ವಿಗತಜ್ವರಾಃ ॥ ೨ ॥

ವಿಷ್ಣುನಾಥ ಸಮಾದಿಷ್ಟಾ ದೇವಾಃ ಶಕ್ರಪುರೋಗಮಾಃ ।
ಯುಯುಧುಃ ದಾನವೈಸ್ಸಾರ್ಧಂ ವಿಷ್ಣುಸ್ತ್ವಂತರಧೀಯತ ॥ ೩ ॥

ಮಾಧವಂ ಗತಮಾಜ್ಞಾಯ ಶಕ್ರೋ ಬಲಿಮುವಾಚ ಹ ।
ಗೋವಿಂದೇನ ಸುರಾಸ್ತ್ಯಕ್ತಾ ಸ್ತ್ವಂ ಜಯಸ್ವಾಧುನಾ ಬಲೆ ॥ ೪ ॥

ಎಪ್ಪತ್ತನಾಲ್ಕನೆಯ ಅಧ್ಯಾಯವು

೧-೪. ಪುಲಸ್ತ್ಯರು ಹೇಳುತ್ತಾರೆ :—ಬಾಣನು ಹಿಂದೆ ತಿರುಗಿ ಬಂದ ಸೈನ್ಯದೊಡನೆ ಪುನಃ ಯುದ್ಧಭೂಮಿಗೆ ಬರಲು ದಾನವರೆಲ್ಲಾ ಪುನಃ ಶಸ್ತ್ರಾಸ್ತ್ರಧಾರಿಗಳಾಗಿ ದೇವಸೈನ್ಯದ ಮೇಲೆ ಯುದ್ಧಹೂಡಿದರು. ಆಗ ತೇಜಸ್ವಿಯಾದ ವಿಷ್ಣುವು ಈ ವಿಚಾರವನ್ನೂ ಬಾಣನ ಯುದ್ಧಾರಂಭವನ್ನೂ ತಿಳಿದು ದೇವತೆಗಳನ್ನೆಲ್ಲಾ ಕರೆದು ನೀವು ಯಾವ ಶಂಕೆಯೂ ಇಲ್ಲದೆ ಏಕಮನಸ್ಸಿನಿಂದ ಯುದ್ಧಮಾಡಿರಿ ಎಂದು ಆಜ್ಞಾಪಿಸಲು ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ದಾನವರೊಡನೆ ಬಲವಾದ ಯುದ್ಧವನ್ನೇ ಹೂಡಿದರು. ಈ ಸಮಯದಲ್ಲಿ ವಿಷ್ಣುವು ಅಂತರ್ಧಾನಹೊಂದಲು ಅದನ್ನು ತಿಳಿದ ಇಂದ್ರನು ಬಲಿಯನ್ನು ಕುರಿತು ಬಲಿಯೇ, ಈಗ ದೇವತೆಗಳೆಲ್ಲರೂ ಗೋವಿಂದನಿಂದ ಬಿಡಲ್ಪಟ್ಟಿರುವರು. ಸಹಾಯವಿಲ್ಲದೆ ಇರುವ ದೇವತೆಗಳೆಲ್ಲರನ್ನೂ ನೀನೆ ಜಯಿಸಿ ವಿಜಯವನ್ನು ಗಳಿಸು ಎಂದನು.

ಸ ಪುರೋಹಿತವಾಕ್ಯೇನ ಪ್ರೀತೋ ಯಾತೇ ಜನಾರ್ದನೇ ।
ಗದಾಮಾದಾಯ ತೇಜಸ್ವೀ ದೇವಸೈನ್ಯಮಭಿದ್ರುತಃ ॥ ೫ ॥

ಬಾಣೋ ಬಾಹುಸಹಸ್ರೇಣ ಗೃಹ್ಯ ಪ್ರಹರಣಾನ್ಯಥ ।
ದೇವಸೈನ್ಯಮಭಿದ್ರುತ್ಯ ನಿಜಘಾನ ಸಹಸ್ರಶಃ ॥ ೬ ॥

ಮಯೋಽಪಿ ಮಾಯಾಮಾಸ್ಥಾಯ ತೈಸ್ತೈರೂಪಾಂತರೈರ್ಮೃಧೇ ।
ಯೋಧಯಾಮಾಸ ಬಲವಾನಮರಾಣಾಂ ವರೂಥಿನೀಂ ॥ ೭ ॥

ವಿದ್ಯುಜ್ಜಿಹ್ವಃ ಪರೋ ಭದ್ರೋ ವೃಷಪರ್ವಾಸಿತೇಕ್ಷಣಃ ।
ವಿಪಾಕೋ ವಿಕ್ಷರಃ ಸೈನ್ಯಂ ತೇಽಪಿ ದೇವಾನುಪಾದ್ರವನ್ ॥ ೮ ॥

ತೇ ಹನ್ಯಮಾನಾ ದಿತಿಜೈರ್ದೇವಾಃ ಶಕ್ರಪುರೋಗಮಾಃ ।
ಗತೇ ಜನಾರ್ದನೇ ದೇವೇ ಪ್ರಾಯಶೋ ವಿಮುಖಾಭವನ್ ॥ ೯ ॥

ತಾನ್ ಪ್ರಭಗ್ನಾನ್ ಸುರಗಣಾನ್ಬಲಿಬಾಣಪುರೋಗಮಾಃ ।
ಪೃಷ್ಠತಸ್ತ್ವದ್ರವನ್ ಸರ್ವೇ ತ್ರೈಲೋಕ್ಯವಿಜಿಗೀಷವಃ ॥ ೧೦ ॥

೫-೬. ವಿಷ್ಣುವು ಹೊರಟು ಹೋದನಂತರ ಇಂದ್ರನ ಈ ಮಾತಿನಿಂದ ಸಂತುಷ್ಟನಾದ ಬಲಿಯು ಗದಾಧಾರಿಯಾಗಿ ಪರಾಕ್ರಮದಿಂದ ದೇವಸೈನ್ಯದಮೇಲೆ ಬಿದ್ದನು. ಬಾಣನೂ ಸಹ ತನ್ನ ಸಹಸ್ರಬಾಹುಗಳಿಂದಲೂ ನಾನಾವಿಧವಾದ ಆಯುಧಗಳನ್ನು ಸ್ವೀಕರಿಸಿ ದೇವಸೈನ್ಯವನ್ನು ಎದುರಿಸಿ ಬಹಳವಾಗಿ ಪ್ರಹರಿಸಿದನು.

೭-೮. ಮಯನೂ ಸಹ ಮಾಯೆಯಿಂದ ರೂಪಾಂತರಗಳನ್ನು ಸ್ವೀಕರಿಸಿ ದೇವಸೈನ್ಯದೊಡನೆ ಪರಾಕ್ರಮದಿಂದ ಹೋರಾಡಿದನು. ವಿದ್ಯುಜ್ಜಿಹ್ವ, ಪರ, ಭದ್ರ, ವೃಷಪರ್ವ, ಅಸಿತೇಕ್ಷಣ, ವಿಪಾಕ, ವಿಕ್ಷರ ಮೊದಲಾದ ದೈತ್ಯರೂ ಸಹ ದೇವತೆಗಳನ್ನೂ ಅವರ ಸೈನ್ಯವನ್ನೂ ಸಹ ಬಹಳವಾಗಿ ಉಪದ್ರವಪಡಿಸಿದರು.

೯-೧೦. ವಿಷ್ಣುವು ಹೊರಟು ಹೋದನಂತರ ದಾನವರ ಪ್ರಬಲವಾದ ಪ್ರಹಾರಕ್ಕೊಳಗಾಗಿ ಇಂದ್ರಾದಿದೇವತೆಗಳೆಲ್ಲರೂ ಬಹಳ ಮಟ್ಟಿಗೆ ಯುದ್ಧದಿಂದ ವಿಮುಖರಾದರು. ಆಗ ಬಲಿ, ಬಾಣ ಮೊದಲಾದ ದಾನವರು ಭಗ್ನರಾಗಿ ಓಡುತ್ತಿರುವ ಇಂದ್ರಾದಿಗಳನ್ನೂ ತ್ರೈಲೋಕ್ಯವನ್ನೂ ಜಯಿಸಬೇಕೆಂಬ ಇಚ್ಛೆಯಿಂದ ಹಿಂಭಾಗದಿಂದ ಓಡಿಸಿಕೊಂಡು ಬಂದರು.

ಸಂಸಾಧ್ಯಮಾನಾ ದೈತೇಯ್ಯೈರ್ದೇವಾಃ ಸೇಂದ್ರಾ ಭಯಾತುರಾಃ ।
ತ್ರಿವಿಷ್ಟಪಂ ಪರಿತ್ಯಜ್ಯ ಬ್ರಹ್ಮಲೋಕಮುಪಾಗತಾಃ ॥ ೧೧ ॥

ಬ್ರಹ್ಮಲೋಕಂ ಗತೇಷ್ವಿತ್ಥಂ ಸೇಂದ್ರೇಷ್ವಪಿಸುರೇಷು ವೈ ।
ಸ್ವರ್ಗಭೋಕ್ತಾ ಬಲಿರ್ಜಾತಃ ಸಭೃತ್ಯಸುತಬಾಂಧವೈಃ ॥ ೧೨ ॥

ಶಕ್ರೋಽಭೂದ್ಬಲವಾನ್ ಬ್ರಹ್ಮನ್ ಬಲಿರ್ಬಾಣೋಽಪಮೋ ಭವತ್ ।
ವರುಣೋಽಭೂನ್ಮಯಃ ಸೋಮೋ ರಾಹುರ್ಹ್ರಾದೋ ಮಹಾಸುರಃ ॥ ೧೩ ॥

ಸ್ವರ್ಭಾನುರಭವತ್ಸೂರ್ಯಃ ಶುಕ್ರಶ್ಚಾಸೀದ್ಬೃಹಸ್ಪತಿಃ ।
ಯೇಽನ್ಯೇಪ್ಯಧಿಕೃತಾ ದೇವಾಃ ತೇಷು ಜಾತಾಃ ಸುರಾರಯಃ ॥ ೧೪ ॥

ಪಂಚಮಸ್ಯ ಕಲೇರಾದೌ ದ್ವಾಪರಾಂತೇ ಸುದಾರುಣೇ ।
ದೇವಾಸುರೋಽಭೂತ್ಸಂಗ್ರಾಮೋ ಯತ್ರ ಶಕ್ರೋಽಸ್ಯಭೂದ್ಬಲಿಃ ॥ ೧೫ ॥

ಪಾತಾಲಸ್ತಸ್ಯ ಸಪ್ತಾರ್ಸ ವಶೇ ಲೋಕತ್ರಯಂ ತಥಾ ।
ಭೂರ್ಭುವಃ ಸ್ವಃ ಪರಿಖ್ಯಾತಂ ದಶಲೋಕಾಧಿಪೋ ಬಲಿಃ ॥ ೧೬ ॥

೧೧-೧೨. ಹಾಗೆ ದಾನವರಿಂದ ಓಡಿಸಲ್ಪಟ್ಟು ದೇವತೆಗಳೆಲ್ಲರೂ ಭಯದಿಂದ ಸ್ವರ್ಗವನ್ನೂ ಬಿಟ್ಟು ಬ್ರಹ್ಮಲೋಕಕ್ಕೆ ಹೋಗಿ ಸೇರಿದರು. ಇಂದ್ರಾದಿಗಳೆಲ್ಲರೂ ಬ್ರಹ್ಮಲೋಕಕ್ಕೆ ಹೋಗಿ ಸೇರಲು ಸ್ವರ್ಗವೆಲ್ಲವೂ ಭೃತ್ಯಬಾಂಧವರೊಡಗೂಡಿದ ಬಲಿಗೆ ಭೋಗಸ್ಥಾನವಾಯಿತು.

೧೩-೧೪. ಬಲಿಷ್ಠನಾದ ಬಲಿಯೇ ಇಂದ್ರನಾಗಿ ಕುಳಿತನು, ಬಲಿಪುತ್ರನಾದ ಬಾಣನೇ ವರುಣನಾದನು, ಮಯನೇ ಚಂದ್ರನಾದನು, ಹ್ರಾದನೇ ರಾಹುವಾದನು, ಕೇತುವೇ ಸೂರ್ಯನಾದನು, ಶುಕ್ರನೇ ಬೃಹಸ್ಪತಿಯಾದನು ಹೀಗೆ ದೇವತೆಗಳ ಅಧಿಕಾರಸ್ಥಾನದಲ್ಲೆಲ್ಲಾ ದೈತ್ಯರೇ ಅಧಿಕೃತರಾದರು.

೧೫ ೧೬. ಚತುರ್ಯುಗದ ಪರಿವೃತ್ತಿಯಲ್ಲಿ ದ್ವಾಪರಯುಗದ ಕೊನೆಯಲ್ಲಿ ಆದ ಐದನೇ ಕಲಿಯುಗದಲ್ಲಿ ಈ ದೇವಾಸುರಯುದ್ಧನಡೆದು ಬಲಿಯೇ ಇಂದ್ರನಾದನು. ಅಂತಹ ಐದನೇ ಪರಿವೃತ್ತಿಗೆ ಸೇರಿದ್ದ ಕಲಿಯುಗದಲ್ಲಿ ಪಾತಾಲವೇ ಮೊದಲಾಗಿ ಕೆಳಗಿನ ಸಪ್ತಲೋಕಗಳಿಗೂ ಮೇಲಿನ ಭೂಲೋಕ, ಭುವರ್ಲೋಕ, ಸ್ವರ್ಗಲೋಕ ಗಳಿಗೂ ಬಲಿಯೇ ಅಧಿಪತಿಯಾಗಿ ದಶಲೋಕಕ್ಕೂ ಅಧಿಪತಿಯಾದನು.

ಸ್ವರ್ಗೇ ಸ್ವಯಂ ನಿವಸತಿ ಭುಂಜನ್ ಭೋಗಾನ್ ಸುದುರ್ಲಭಾನ್ ।
ತತಸ್ತ್ರೇಪಾಸಂತ ಗಂಧರ್ವಾ ವಿಶ್ವಾವಸುಪುರೋಗಮಾಃ ॥ ೧೭ ॥

ತಿಲೋತ್ತಮಾದ್ಯಾಶ್ಚಾಪ್ಸರಸೋ ನೃತ್ಯಂತಿ ಸುರತಾಪಸ ।
ವಾದಯಂತಿ ಚ ವಾದ್ಯಾನಿ ಯಕ್ಷವಿದ್ಯಾಧರಾದಯಃ ॥ ೧೮ ॥

ತ್ರೈವಿಷ್ಟಪಾನಸೌ ಭೋಗಾನ್ ಭುಂಜನ್ ದೈತ್ಯೇಶ್ವರೋ ಬಲಿಃ ।
ಸಸ್ಮಾರ ಮನಸಾ ಬ್ರಹ್ಮನ್ ಪ್ರಹ್ಲಾದಂ ಸ ಪಿತಾಮಹಂ ॥ ೧೯ ॥

ಸಂಸ್ಮೃತಶ್ಚ ಸ ಪೌತ್ರೇಣ ಮಹಾಭಾಗವತೋಽಸುರಃ ।
ಸಮಭ್ಯಾಗಾತ್ತ್ವರಾಯುಕ್ತಃ ಪಾತಾಲಾತ್ಸ್ವರ್ಗಮವ್ಯಯಂ ॥ ೨೦ ॥

ತಮಾಗತಂ ಸಮೀಕ್ಷ್ಯೈವ ತ್ಯಕ್ತ್ವಾ ಸಿಹ್ಮಾಸನಂ ಬಲಿಃ ।
ಕೃತಾಂಜಲಿಪುಟೋ ಭೂತ್ವಾ ವವಂದೆ ಚರಣಾವುಭೌ ॥ ೨೧ ॥

ಪಾದಯೋಃ ಪತಿತಂ ವೀರಂ ಪ್ರಹ್ಲಾದಸ್ತ್ವರಿತೋ ಬಲಿಂ ।
ಸಮುತ್ಥಾಪ್ಯ ಪರಿಷ್ವಜ್ಯ ವಿವೇಶ ಪರಮಾಸನೆ ॥ ೨೨ ॥

೧೭-೨೦. ಆ ಬಲಿಯು ಇತರ ದುರ್ಲಭವಾದ ಭೋಗಗಳನ್ನನುಭವಿಸುತ್ತಾ ಸ್ವರ್ಗದಲ್ಲಿ ವಾಸಮಾಡುತ್ತಿರುವಾಗ ವಿಶ್ವಾವಸುವೇ ಮೊದಲಾದ ಗಂಧರ್ವರು ಅವನನ್ನು ಸೇವಿಸಲುಪಕ್ರಮಿಸಿದರು. ತಿಲೋತ್ತಮೆಯೇ ಮೊದಲಾದ ಅಪ್ಸರೆಯರು ಅಲ್ಲಿ ನರ್ತನಮಾಡಿದರು. ಯಕ್ಷ, ವಿದ್ಯಾಧರಾದಿಗಳು ಅವನ ಸಂತೋಷಕ್ಕಾಗಿ ವಾದ್ಯಗಳನ್ನೂ ಮಾಡಿದರು. ಈರೀತಿ ಸ್ವರ್ಗಭೋಗಗಳನ್ನೆಲ್ಲಾ ಅನುಭವಿಸುತ್ತಿದ್ದ ದೈತ್ಯರಾಜನಾದ ಆ ಬಲಿಯು ಒಂದಾನೊಂದು ಸಮಯದಲ್ಲಿ ತಾತನಾದ ಪ್ರಹ್ಲಾದ ನನ್ನು ಸ್ಮರಿಸಿದನು. ಮಮ್ಮಗನಾದ ಬಲಿಯು ಸ್ಮರಿಸಿದೊಡನೆಯೇ ಭಾಗವತೋತ್ತಮ ನಾದ ಪ್ರಹ್ಲಾದನು ತ್ವರೆಯಿಂದ ಪಾತಾಲವನ್ನು ಬಿಟ್ಟು ಸ್ವರ್ಗಕ್ಕೆ ಬಂದು ಸೇರಿದನು.

೨೧-೨೪. ಹಾಗೆ ಬಂದ ಪ್ರಹ್ಲಾದನನ್ನು ನೋಡಿ ಬಲಿಯು ಸಿಂಹಾಸನವನ್ನು ಬಿಟ್ಟು ಕೈಮುಗಿದುಕೊಂಡು ಅವನ ಪಾದಗಳಿಗೆ ನಮಸ್ಕರಿಸಿದನು. ಪಾದಗಳಲ್ಲಿ ಬಿದ್ದ ಶೂರನಾದ ಬಲಿಯನ್ನು ಪ್ರಹ್ಲಾದನು ತ್ವರೆಯಿಂದ ಎಬ್ಬಿಸಿ ಅವನನ್ನು ಆಲಿಂಗಿಸಿ ಅವನೊಡನೆ ರಾಜಾಸನದಲ್ಲಿ ಕುಳಿತನು. ಆಗ ಬಲಿಯು ಪ್ರಹ್ಲಾದನನ್ನು ಕುರಿತು

ತಂ ಬಲಿಃ ಪ್ರಾಹ ಭೋ ತಾತ ತ್ವತ್ಪ್ರಸಾದಾತ್ಸುರಾ ಮಯಾ ।
ನಿರ್ಜಿತಾಃ ಶಕ್ರರಾಜ್ಯಂ ಚ ಹೃತಂ ವೀರ್ಯಬಲಾನ್ಮಯಾ ॥ ೨೩ ॥

ತದಿದಂ ತಾತ ಮದ್ವೀರ್ಯವಿನಿರ್ಜಿತಸುರೋತ್ತಮಂ ।
ತ್ರೈಲೋಕ್ಯರಾಜ್ಯಂ ಭುಂಕ್ಷ್ವ ತ್ವಂ ಮಯಿ ಭೃತ್ಯೇ ಪುರಃ ಸ್ಥಿತೇ ॥ ೨೪ ॥

ಐರಾವತಃ ಪುಣ್ಯಯುತೋ ಭವಿಷ್ಯಾಮಿ ಯಥಾಪ್ಯಹಂ ।
ತ್ವದಂಘ್ರಿಪೂಜಾಭಿರತಃ ತ್ವದುಚ್ಛಿಷ್ಟಾನ್ನಭೋಜನಃ ॥ ೨೫ ॥

ನ ಸಪಾಲಯತೇ ರಾಜ್ಯಂ ಧೃತಿರ್ಭವತಿ ಸತ್ತಮ ।
ನ ಯೋಽನುತಿಷ್ಠತಿ ಗುರೂನ್ ಶುಶ್ರೂಷಾಂ ಕುರುತೇ ನ ಯಃ ॥ ೨೬ ॥

ತತಸ್ತದುಕ್ತಂ ಬಲಿನಾ ವಾಕ್ಯಂ ಶ್ರುತ್ವಾ ದ್ವಿಜೋತ್ತಮ ।
ಪ್ರಹ್ಲಾದೋ ವಚನಂ ಪ್ರಾಹ ಧರ್ಮಕಾಮಾರ್ಥಸಾಧನಂ ॥ ೨೭ ॥

ತಾತನೇ, ನಿನ್ನ ಅನುಗ್ರಹದಿಂದ ನಾನು ದೇವತೆಗಳನ್ನೆಲ್ಲಾ ಜಯಿಸಿದೆನು. ಇಂದ್ರನ ರಾಜ್ಯವನ್ನೂ ಸಹ ಪರಾಕ್ರಮದಿಂದ ಅಪಹರಿಸಿರುವೆನು. ತ್ರೈಲೋಕ್ಯವೆಂಬ ಈ ರಾಜ್ಯವು ಎಲ್ಲಾ ದೇವತೆಗಳನ್ನೂ ನಾನು ಜಯಿಸಿರುವದ್ದರಿಂದ ಪರಾಕ್ರಮಾರ್ಜಿತ ವಾಗಿ ನನಗೆ ಬಂದಿದೆ. ನನ್ನನ್ನು ಭೃತ್ಯನಂತೆ ತಿಳಿದು ಈ ರಾಜ್ಯವನ್ನು ನೀನು ಅನುಭವಿಸು.

೨೫-೨೭. ನಿನ್ನ ಪಾದಪೂಜೆಯಲ್ಲಿ ಆಸಕ್ತವಾದ ಈ ಐರಾವತವು ಪುಣ್ಯಶಾಲಿ ಯಾಗಲಿ, ನಾನೂ ಸಹ ನಿನ್ನ ಪಾದಪೂಜೆಯಿಂದಲೂ ನಿನ್ನ ಉಚ್ಛಿಷ್ಟಾನ್ನ ಭಕ್ಷಣ ದಿಂದಲೂ ಪುಣ್ಯಶಾಲಿಯಾಗುತ್ತೇನೆ. ಯಾವನು ಗುರುಜನಗಳನ್ನು ಅನುವರ್ತನ ದಿಂದ ಸಂತೋಷಪಡಿಸುವುದಿಲ್ಲವೋ ಯಾವನು ಅವರ ಶುಶ್ರೂಷೆಯನ್ನು ಮಾಡು ವುದಿಲ್ಲವೋ ಅವನು ರಾಜ್ಯವನ್ನು ರಕ್ಷಿಸಲಾರನು— ಅವನಿಗೆ ಅದಕ್ಕೆ ತಕ್ಕ ಧಾರಣ ಸಾಮರ್ಥ್ಯವೂ ಉಂಟಾಗಲಾರದು ಎಂದು ಪ್ರಾರ್ಥಿಸಲು ಬಲಿಯ ಆ ಮಾತನ್ನು ಕೇಳಿ ಪ್ರಹ್ಲಾದನು ಧರ್ಮಾದಿಪುರುಷಾರ್ಥಸಾಧಕವಾದ ಈ ಮಾತನ್ನು ಹೇಳಿದನು.

ಮಯಾ ಕೃತಂ ರಾಜ್ಯಮಕಂಟಕಂ ಪುರಾ
ಪ್ರಶಾಸಿತಾಂತಃ ಸುಹೃದೋಽನುಪೂಜಿತಾಃ ।
ದತ್ತಂ ಯಥೇಷ್ಟಂ ಜನಿತಾ ಸ್ತಥಾತ್ಮಜಾಃ
ಸ್ಥಿತೋ ಬಲೇ ಸಂಪ್ರತಿ ಯೋಗಸಾಧಕಃ ॥ ೨೮ ॥

ಗೃಹೀತಂ ಪುತ್ರ ವಿಧಿವನ್ಮಯಾ ಭೂಯೋಽರ್ಪಿತಂ ತವ ।
ಏವಂ ಭವ ಗುರೂಣಾಂ ತ್ವಂ ಸದಾ ಶುಶ್ರೂಷಣೇ ರತಃ ॥ ೨೯ ॥

ಇತ್ಯೇವಮುಕ್ತ್ವಾ ವಚನಂ ಕರೇತ್ವಾದಾಯ ದಕ್ಷಿಣೇ ।
ಶಾಕ್ರೇ ಸಿಹ್ಮಾಸನೇ ಬ್ರಹ್ಮನ್ ಬಲಿಂ ತೂರ್ಣಮವೇಶಯತ್ ॥ ೩೦ ॥

ಸೋಽಪವಿಷ್ಟೋ ಮಹೇಂದ್ರಸ್ಯ ಸರ್ವರತ್ನಮಯೇ ಶುಭೇ ।
ಸಿಹ್ಮಾಸನೇ ದೈತ್ಯಪತಿಃ ಶುಶುಭೇ ಮಘವಾನಿವ ॥ ೩೧ ॥

ತತ್ರೋಽಪವಿಷ್ಟಶ್ಚೈವಾಸೌ ಕೃತಾಂಜಲಿಪುಟೋ ಬಲಿಃ ।
ಪ್ರಹ್ಲಾದಂ ಪ್ರಾಹ ವಚನಂ ಮೇಘಗಂಭೀರಯಾ ಗಿರಾ ॥ ೩೨ ॥

ಯನ್ಮಯಾ ತಾತ ಕರ್ತವ್ಯಂ ತ್ರೈಲೋಕ್ಯಂ ಪರಿರಕ್ಷತಾ ।
ಧರ್ಮಾರ್ಥಕಾಮಮೋಕ್ಷೇಭ್ಯಃ ತದಾದಿಶತು ನೋ ಭವಾನ್ ॥ ೩೩ ॥

೨೮-೩೦. ಮಗನೇ ನಾನು ಜಿತೇಂದ್ರಿಯನಾಗಿದ್ದು ರಾಜ್ಯವನ್ನು ನಿಷ್ಕಂಟಕವಾಗಿ ಆಳಿಯಾಯಿತು, ಸ್ನೇಹಿತರನ್ನೂ ಸತ್ಕರಿಸಿ ಆಯಿತು, ದಾನವನ್ನೂ ಯಥೇಚ್ಛೆಯಿಂದ ಮಾಡಿಯಾಯಿತು, ಪುತ್ರರನ್ನೂ ಹೊಂದಿ ಆಯಿತು ಈಗ ಕೇವಲ ಯೋಗಸಾಧಕನಾಗಿ ನಿಂತಿರುವೆನು. ಈ ರಾಜ್ಯವು ವಿಧಿಪೂರ್ವಕವಾಗಿ ನನ್ನಿಂದ ಸ್ವೀಕರಿಸಲ್ಪಟ್ಟು ಈಗ ಪುನಃ ನಿನಗೇ ಕೊಡಲ್ಪಟ್ಟಿದೆ. ಇದೇ ರೀತಿಯಾಗಿ ನೀನು ಗುರುಶುಶ್ರೂಷೆಯಲ್ಲಿ ನಿರತನಾಗಿರು ಎಂದು ಹೇಳಿ ಬಲಗೈಯ್ಯಿನಿಂದ ಆ ಬಲಿಯನ್ನು ಹಿಡಿದು ಇಂದ್ರನ ಸಿಂಹಾಸನದಲ್ಲಿ ಕುಳ್ಳಿರಿಸಿದನು.

೩೧-೩೩. ಆಗ ಮಹೇಂದ್ರನ ಸರ್ವರತ್ನ ಶೋಭಿತವಾದ ಸಿಂಹಾಸನದಲ್ಲಿ ಕುಳಿತ ಆ ಬಲಿಯು ಮಹೇಂದ್ರನಂತೆಯೇ ಪ್ರಕಾಶಿಸಿದನು. ಅಲ್ಲಿ ಕುಳಿತ ಆ ಬಲಿಯು ಕೈಮುಗಿದುಕೊಂಡು ಪ್ರಹ್ಲಾದನನ್ನು ಕುರಿತು ಗಂಭೀರಧ್ವನಿಯಿಂದ ತಾತನೇ, ತ್ರೈಲೋಕ್ಯವನ್ನೂ ರಕ್ಷಿಸುತ್ತಿರುವ ನಾನು ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳಿಗಾಗಿ ಏನುಮಾಡಬೇಕು ಎಂಬುದನ್ನು ನನಗೆ ಉಪದೇಶಿಸು ಎಂದನು.

ತದ್ವಾಕ್ಯಸಮಕಾಲಂ ಚ ಶುಕ್ರಃ ಪ್ರಹ್ಲಾದಮಬ್ರವೀತ್ ।
ಯದ್ಯುಕ್ತಂ ತನ್ಮಹಾಬಾಹೋ ವದಸ್ವಾಸ್ಯೋತ್ತರಂ ವಚಃ ॥ ೩೪ ॥

ವಚನಂ ಬಲಿಶುಕ್ರಾಭ್ಯಾಂ ಶ್ರುತ್ವಾ ಭಾಗವತೋಽಸುರಃ ॥
ಪ್ರಾಹ ಧರ್ಮಾರ್ಥಸಂಯುಕ್ತಂ ಪ್ರಹ್ಲಾದೋ ವಾಕ್ಯಮುತ್ತಮಂ ॥ ೩೫ ॥

ಯದಾಯತಿಕ್ಷಮಂ ರಾಜನ್ ವಿತ್ತಂ ತ್ರಿಭುವನಸ್ಯ ಚ ।
ಅವಿರೋಧೇನ ಧರ್ಮಸ್ಯ ಅರ್ಥಸ್ಯೋಪಾರ್ಜನಂ ಚ ತತ್ ॥ ೩೬ ॥

ಸರ್ವಸತ್ತ್ವಾನುಗಮನಂ ತ್ರಿವರ್ಗಸ್ಯ ಫಲಂ ಚ ಯತ್ ।
ಪರತ್ರೇಹ ಚ ಯಚ್ಛ್ರೇಯಃ ಪುತ್ರ ತತ್ಕರ್ಮಚಾಚರ । ॥ ೩೭ ॥

ಯಥಾ ಶ್ಲಾಘ್ಯಂ ಪ್ರಯಾಸ್ಯದ್ಯ ಯಥಾ ಕೀರ್ತಿರ್ಭವೇತ್ತವ
ಯಥಾ ನಾಯಶಸೋ ಯೋಗಃ ತಥಾ ಕುರು ಮಹಾದ್ಯುತೆ ॥ ೩೮ ॥

ಹಾಗೆ ಅವನು ಹೇಳಿದ ಸಮಯದಲ್ಲಿಯೇ ಶುಕ್ರಾಚಾರ್ಯನೂ ಸಹ ಮಹಾನು ಭಾವನೇ ಇವನಿಗೆ ಉಚಿತವಾದ ಉತ್ತರವನ್ನು ಹೇಳು ಎಂದನು.

೩೫-೩೮. ಬಲಿ ಮತ್ತು ಶುಕ್ರಾಚಾರ್ಯರು ಹೇಳಿದ ಈ ಮಾತನ್ನು ಕೇಳಿ ಪ್ರಹ್ಲಾದನು ಧರ್ಮಾರ್ಥಾನುಗುಣವಾದ ಈ ಉಪದೇಶವನ್ನಿತ್ತನು. ಧೊರೆಯೇ, ಮುಂದಿನ ಕ್ಷೇಮದೃಷ್ಟಿಯಿಂದ ಮಾಡತಕ್ಕ ಅರ್ಥಸಂಗ್ರಹವು ಮೂರುಲೋಕದ ಹಿತಕ್ಕೂ ಧರ್ಮಕ್ಕೂ ಅವಿರುದ್ಧವಾಗಿ ಉಂಟಾದಲ್ಲಿ ಅದೇ ಅರ್ಥೋಪಾರ್ಜನೆಯೆಂದು ಕರೆಯಲ್ಪಡುತ್ತದೆ. (ಲೋಕೋಪದ್ರವದಿಂದಲೂ ಧರ್ಮದ್ರೋಹದಿಂದಲೂ ಹೊಂದಿದ ಅರ್ಥವು ಅರ್ಥವಾಗಲಾರದು.) ಅಥವಾ ಮೂರುಲೋಕಗಳಿಗೂ ಮುಂದಿನ ಹಿತದೃಷ್ಟಿಯಿಂದ ಅರ್ಥಸಂಗ್ರಹ ಮಾಡುವದಾದರೆ ಧರ್ಮಕ್ಕೆ ವಿರೋಧವಿಲ್ಲದೆ ಮಾಡ ಬೇಕೆಂದೂ ಅರ್ಥವಾಗುತ್ತದೆ.) ಪುತ್ರನೇ ಯಾವ ಕೆಲಸದಿಂದ ಸರ್ವಪ್ರಾಣಿಗಳಿಗೂ ಸಮಾನವಾದ ಸಂತೋಷವುಂಟಾಗಬಹುದೋ ಹಾಗೂ ಧರ್ಮಾರ್ಥಕಾಮಗಳೆಂಬ ತ್ರಿವರ್ಗಪುರುಷಾರ್ಥಗಳುಂಟಾಗಬಹುದೋ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಶ್ರೇಯಸ್ಕರವೋ ಅಂತಹ ಕೆಲಸವನ್ನೇ ನೀನು ಆಚರಿಸು. (ಇದರಿಂದ ಪ್ರಜೆಗಳಿಗೆ ಅಸಂತುಷ್ಟಿಕರವೂ ಧರ್ಮವಿರುದ್ಧವೂ ತನ್ನ ತ್ರಿವರ್ಗಪುರುಷಾರ್ಥಕ್ಕೆಬಾಧಕವೂ ಆಗುವ ಯಾವ ಕಾರ್ಯವನ್ನೂ ರಾಜನಾದವನು ಸ್ವೀಕರಿಸಬಾರದೆಂಬ ರಾಜನೀತಿಯು ಸೂಚಿ ಸಲ್ಪಡುತ್ತದೆ.) ಹೇಗೆ ಆಚರಿಸಿದಲ್ಲಿ ನಿನಗೆ ಉತ್ಕರ್ಷವುಂಟಾಗುವುದೋ ಕೀರ್ತಿಯೂ ಉಂಟಾಗುವುದೋ ಅಂತಹ ಆಚರಣದಲ್ಲಿ ನೀನು ನಿರತನಾಗು.

ಏತದರ್ಥಂ ಶ್ರಿಯಂ ದೀಪ್ತಾಂ ಕಾಂಕ್ಷಂತೇ ಪುರುಷೋತ್ತಮಾಃ ।
ಯೇನ್ಯೈತೇ ಚ ಗೃಹೇಸ್ಮಾಕಂ ನಿವಸಂತಿ ಸುನಿರ್ವೃತಾಃ ॥ ೩೯ ॥

ಕುಲಜೋ ವ್ಯಸನೇ ಮಗ್ನಃ ಸಖಾ ಜ್ಞಾತಿಬಹಿಷ್ಕೃತಃ ।
ವೃದ್ಧೋ ಜ್ಞಾತಿರ್ಗುಣೀವಿಪ್ರಃ ಕೀರ್ತಿಶ್ಚ ಯಶಸಾ ಸಹ ॥ ೪೦ ॥

ತಸ್ಮಾದ್ಯಥೈತೇ ನಿವಸಂತಿ ಪುತ್ರ
ರಾಜ್ಯಸ್ಥಿತಸ್ಯೇಹ ಕುಲೋದ್ಭವಸ್ಯ ।
ತಥಾ ಯತಸ್ವಾಮಲಸತ್ವಚೇಷ್ಟ
ಯಥಾ ಯಶಸ್ವೀ ಭವಿತಾಸಿ ಲೋಕೇ ॥ ೪೧ ॥

ಭೂಮ್ಯಾಂ ಸದಾ ಬ್ರಾಹ್ಮಣಭೂಷಿತಾಯಾಂ
ಕ್ಷತ್ರಾನ್ವಿತಾಯಾಂ ದೃಢವಾಪಿತಾಯಾಂ ।

೩೯-೪೧. ಯಾವ ವಿಧವಾದ ಆಚರಣದಿಂದ ಅಪಕೀರ್ತಿಯುಂಟಾಗುವುದಿಲ್ಲವೋ ಆ ಆಚರಣವನ್ನೇ ನೀನು ಸ್ವೀಕರಿಸು. ಇದಕ್ಕಾಗಿಯೇ ಮಹಾಪುರುಷರು ಐಶ್ವರ್ಯವನ್ನು ಅಪೇಕ್ಷಿಸುತ್ತಾರೆ. ಇಂತಹ ಸರ್ವೋಪಕಾರಕವಾದ ಐಶ್ವರ್ಯದಿಂದಲೇ ವ್ಯಸನವನ್ನು ಹೊಂದಿರುವ ಕುಲಸ್ಥನೂ ಸ್ವಜನರಿಂದ ತಿರಸ್ಕೃತನಾದ ಸ್ನೇಹಿತನೂ ವೃದ್ಧನಾದ ಜ್ಞಾತಿ ಮತ್ತು ಗುಣಶಾಲಿಯಾದ ಬ್ರಾಹ್ಮಣ, ಜನಗಳಿಂದ ಉಂಟಾಗುವ ಸದ್ವ್ಯವಹಾರ, ಅದಕ್ಕೂ ಮೂಲವಾದ ಯಶಸ್ಸು ಇವುಗಳೆಲ್ಲವೂ ನಮ್ಮ ಮನೆಯಲ್ಲಿಯೇ ಸಂತೋಷದಿಂದ ಸ್ಥಿರವಾಗಿ ವಾಸಿಸುವುವು. (ಅಂತಹ ಐಶ್ವರ್ಯಕ್ಕೆ ಇವುಗಳ ರಕ್ಷಣವೇ ಮುಖ್ಯಫಲವೆಂದು ತಾತ್ಪರ್ಯ.) ಆದುದರಿಂದ ಎಲೈ ಪುತ್ರನೇ, ಸತ್ಕುಲಪ್ರಸೂತನಾಗಿ ರಾಜ್ಯಭಾರನಡೆಸುವ ರಾಜನ ಗೃಹದಲ್ಲಿ ಇವೆಲ್ಲವೂ ನಿತ್ಯವಾಗಿ ಹೇಗೆ ನೆಲಸಬಹುದೋ ಹಾಗೆ ಶುದ್ಧವಾದ ಮನಸ್ಸು ಮತ್ತು ವ್ಯಾಪಾರ ಇವುಗಳಿಂದ ಪ್ರಯತ್ನಪಡು, ಹಾಗೆ ಮಾಡಿದ್ದೇ ಆದರೆ ಲೋಕದಲ್ಲಿ ಯಶಸ್ವಿಯಾಗಿ ಬದುಕುವೆ.

೪೨. ಯಾವಾಗಲೂ ಬ್ರಾಹ್ಮಣೋತ್ತಮರಿಂದ ಭೂಷಿತವಾಗಿಯೂ ಅವರ ರಕ್ಷಣೆಯಲ್ಲಿ ನಿರತರಾದ ಕ್ಷತ್ರಿಯರಿಂದ ಕೂಡಿಯೂ ಇವರುಗಳಿಗೆ ಉಪಯೋಗಕರವಾದ ಕೃಷಿಗೋರಕ್ಷಣಾದಿ ವ್ಯಾಪಾರದಲ್ಲಿ ನಿರತರಾದ ವೈಶ್ಯರಿಂದಲೂ ಇವರ ಸೇವೆ

ಶುಶ್ರೂಷಣಾಸಕ್ತಿಸಮುದ್ಭವಾಯಾಂ
ಋದ್ಧಿಂ ಪ್ರಯಾಂತೀಹ ನರಾಧಿಪೇಂದ್ರಾಃ ॥ ೪೨ ॥

ತಸ್ಮಾದ್ದ್ವಿಜಾಗ್ರ್ಯಾಃ ಶ್ರುತಿಶಾಸ್ತ್ರಯುಕ್ತಾ
ನರಾಧಿಪಾಸ್ತೇ ಪ್ರತಿಯಾಜಯಂತು ।
ಯಜಂತು ದಿವ್ಯೈಃ ಕ್ರತುಭಿಃ ದ್ವಿಜೇಂದ್ರಾ
ಯಜ್ಞಾಗ್ನಿಧೂಮೇನ ನೃಪಸ್ಯ ಶಾಂತಿಃ ॥ ೪೩ ॥

ತಪೋಽಧ್ಯಯನಸಂಪನ್ನಾ ಯಜನೇಽಧ್ಯಾಪನೇ ರತಾಃ ।
ಸಂತು ವಿಪ್ರಾಃ ಕ್ಷತ್ರಪೂಜ್ಯಾಃ ತ್ವತ್ತೋಽನುಜ್ಞಾಮವಾಪ್ಯ ಹಿ ॥ ೪೪ ॥

ಸ್ವಾಧ್ಯಾಯಯಜ್ಞನಿರತಾಃ ದಾತಾರಃ ಶಸ್ತ್ರಜೀವಿನಃ ।
ಕ್ಷತ್ರಿಯಾಸ್ಸಂತು ದೈತ್ಯೇಂದ್ರ ಪ್ರಜಾಪಾಲನಧರ್ಮಿಣಃ ॥ ೪೫ ॥

ಯಜ್ಞಾಧ್ಯಯನಸಂಪನ್ನಾ ದಾತಾರಃ ಕೃಷಿಕಾರಿಣಃ ।
ಪಾಶುಪಾಲ್ಯಂ ಪ್ರಕುರ್ವಾಣಾ ವೈಶ್ಯಾ ವಿಪಣಿಜೀವಿನಃ ॥ ೪೬ ॥

ಯಲ್ಲಿ ಸಿದ್ಧರಾದ ಶೂದ್ರರಿಂದಲೂ ಕೂಡಿರುವ ಭೂಮಿಯಲ್ಲಿ ರಾಜರು ಬಹಳ ಮಟ್ಟಿಗೂ ವೃದ್ಧಿಹೊಂದುತ್ತಾರೆ. (ಇದರಿಂದ ಚಾತುರ್ವರ್ಣ್ಯಸಂರಕ್ಷಣವು ರಾಜನ ಮುಖ್ಯಧರ್ಮವೆಂದೂ ಅದರಿಂದಲೇ ರಾಜನಿಗೆ ಸ್ವಾರ್ಥಸಿದ್ಧಿಯೆಂದೂ ಹೇಳಿದಂತಾಗುತ್ತದೆ)

೪೩-೪೪. ಆದುದರಿಂದ ವೇದಶಾಸ್ತ್ರಗಳಲ್ಲಿ ಪಾರಂಗತರಾದ ಬ್ರಾಹ್ಮಣೋತ್ತಮರು ಧೊರೆಗಳಿಂದ ಯಜ್ಞಯಾಗಾದಿಗಳನ್ನು ಮಾಡಿಸಲಿ, ತಾವೂ ಸಹ ದಿವ್ಯವಾದ ಯಜ್ಞಗಳನ್ನೂ ಆಚರಿಸಲಿ, ಯಜ್ಞಾಗ್ನಿಯ ಹೊಗೆಯಿಂದಲೇ ಧೊರೆಗೆ ಸರ್ವದೋಷಶಾಂತಿಯೂ ಉಂಟಾದೀತು. ತಪಸ್ಸು ಮತ್ತು ಅಧ್ಯಯನ ಇವುಗಳಿಂದ ಕೂಡಿದ ಬ್ರಾಹ್ಮಣರು ಯಾಗದಲ್ಲಿಯೂ ಅಧ್ಯಾಪನದಲ್ಲಿಯೂ ನಿರತರಾಗಿರಲಿ, ನಿನ್ನ ಗೌರವಕ್ಕೆ ಚ್ಯುತಿ ಇಲ್ಲದೆ ನಿನ್ನಿಂದ ಅಪ್ಪಣೆಪಡೆದ ಕ್ಷತ್ರಿಯರು ಇಂತಹ ಬ್ರಾಹ್ಮಣೋತ್ತಮರನ್ನು ಪೂಜಿಸಲಿ.

೪೫-೪೬. ಅಧ್ಯಯನ ಮತ್ತು ಯಜ್ಞದಲ್ಲಿ ನಿರತರಾಗಿದ್ದು ದಾತೃಗಳಾಗಿಯೂ ಶಸ್ತ್ರಜೀವಿಗಳಾಗಿಯೂ ಇದ್ದು ನಿನ್ನ ಆಜ್ಞಾಕಾರಿಗಳಾಗಿ ಪ್ರಜಾಪಾಲನವೆಂಬ ಕ್ಷತ್ರಿಯ ಧರ್ಮದಲ್ಲಿ ಬದುಕಲಿ. ಹಾಗೆಯೇ ಯಜ್ಞ ಮತ್ತು ಅಧ್ಯಯನದಲ್ಲಿ ನಿರತರಾಗಿ

ಬ್ರಾಹ್ಮಣಕ್ಷತ್ರಿಯವಿಶಾಂ ಸದಾ ಶುಶ್ರೂಷಣೆ ರತಾಃ।
ಶೂದ್ರಾಸ್ಸಂತ್ವಸುರಶ್ರೇಷ್ಠ ತವಾಜ್ಞಾಕಾರಿಣಃ ಸದಾ ॥ ೪೭ ॥

ಯದಾ ವರ್ಣಾಃ ಸ್ವಧರ್ಮಸ್ಥಾ ಭವಂತಿ ದಿತಿಜೇಶ್ವರ ।
ಧರ್ಮವೃದ್ಧಿಸ್ತದಾ ಸ್ಯಾದ್ವೈ ಧರ್ಮವೃದ್ಧೌ ನೃಪೋದಯಃ ॥ ೪೮ ॥

ತಸ್ಮಾದ್ವರ್ಣಾಃ ಸ್ವಧರ್ಮಸ್ಥಾಃ ತ್ವಯಾ ಕಾರ್ಯಾಃ ಸದಾ ಬಲೇ ।
ತದ್ವೃದ್ಧೌ ಭವತೋ ವೃದ್ಧಿಃ ತದ್ಧಾನೌ ಹಾನಿರುಚ್ಯತೆ ॥ ೪೯ ॥

ಇತ್ಥಂ ವಚಃ ಶ್ರಾವ್ಯ ನರಾಧಿಪೇಂದ್ರೋ
ಬಲಿರ್ಮಹಾತ್ಮಾ ಸ ಬಭೂವ ತೂಷ್ಣೀಂ ।
ತತೋ ಯದಾಜ್ಞಾಪಯಸೆ ಕರಿಷ್ಯೆ
ಇತ್ಥಂ ಬಲಿಃ ಪ್ರಾಹ ವಚೋ ಮಹರ್ಷೆ ॥ ೫೦ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೆ
ಚತುಸ್ಸಪ್ತತಿತಮೋಽಧ್ಯಾಯಃ

ದಾತೃಗಳಾಗಿಯೂ ಕೃಷಿಕರ್ಮಿಗಳಾಗಿಯೂ ಇರುವ ವೈಶ್ಯರು ಪಶುಪಾಲನದಿಂದಲೂ ವಾಣಿಜ್ಯವೃತ್ತಿಯಿಂದಲೂ ಜೀವಿಸುತ್ತಾ ನಿನ್ನ ಆಜ್ಞಾಕರರಾಗಿರಲಿ. ಹಾಗೆಯೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಶುಶ್ರೂಷೆಯಲ್ಲಿ ನಿರತರಾದ ಶೂದ್ರರೂ ಸದಾ ನಿನ್ನ ಆಜ್ಞಾನುಸಾರಿಗಳಾಗಿರಲಿ.

೪೮-೫೦. ಎಲೈ ದೈತ್ಯರಾಜನೇ, ಬ್ರಾಹ್ಮಣಾದಿವರ್ಣಗಳೆಲ್ಲವೂ ಸ್ವಧರ್ಮದಲ್ಲಿ ನಿರತವಾಗಿದ್ದಲ್ಲಿ ಅದರಿಂದ ಧರ್ಮವೃದ್ಧಿಯುಂಟಾಗುತ್ತದೆ. ಆ ಧರ್ಮವೃದ್ಧಿಯಿಂದ ಧೊರೆಯೂ ವೃದ್ಧಿಹೊಂದುತ್ತಾನೆ. ಆದುದರಿಂದ ಎಲ್ಲಾ ವರ್ಣದವರೂ ಸ್ವಧರ್ಮದಲ್ಲಿ ನಿರತರಾಗುವಂತೆ ನೀನು ಮಾಡಬೇಕು. ಅದರ ವೃದ್ಧಿಯಿಂದ ನಿನಗೆ ವೃದ್ಧಿಯೂ ಅದರ ಹಾನಿಯಿಂದ ಹಾನಿಯೂ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ ಎಂದನು. ಈ ವಿಧವಾದ ಪ್ರಹ್ಲಾದನ ಉಪದೇಶವಚನವನ್ನು ಕೇಳಿ ಬಲಿಯು ಮಹಾತ್ಮನಾದುದರಿಂದ ಏನನ್ನೂ ಹೇಳದೆ ಸುಮ್ಮನೆ ಇದ್ದು ನಿನ್ನ ಅಪ್ಪಣೆಯಂತೆ ನಡೆಸುವೆನು ಎಂದು ಇಷ್ಟುಮಾತ್ರ ಹೇಳಿ ಸುಮ್ಮನಾದನು.

ಇಲ್ಲಿಗೆ ಶ್ರೀ ವಾಮನಪುರಾಣದ ವಾಮನಪ್ರಾದುರ್ಭಾವದಲ್ಲಿ
ಎಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಬಾಣನು ದೈತ್ಯಸೈನ್ಯದೊಡನೆ ಪುನಃ ಯುದ್ಧದಲ್ಲಿ ಭಾಗ ವಹಿಸಲು ವಿಷ್ಣುವು ದೇವತೆಗಳನ್ನು ಕುರಿತು ನೀವು ನಿರ್ಭಯರಾಗಿ ಯುದ್ಧಮಾಡಿರಿ ಎಂದು ಅಪ್ಪಣೆಮಾಡಿ ಅಂತರ್ಧಾನಹೊಂದಿದನೆಂದೂ ಅನಂತರ ಇಂದ್ರಾದಿದೇವತೆಗಳು ತಾವೇ ಯುದ್ಧಮಾಡಲುಪಕ್ರಮಿಸಿದರೆಂದೂ ಹೇಳಲಾಯಿತು. ಆ ಸಮಯದಲ್ಲಿ ಇಂದ್ರನ ಪ್ರೋತ್ಸಾಹವಚನದಿಂದ ಯುದ್ಧಾಭಿಮುಖನಾದ ಬಲಿಯು ಬಾಣನೊಡನೆ ಯುದ್ಧಕ್ಕೆ ನಿಂತು ದೇವತೆಗಳನ್ನೆಲ್ಲಾ ಘಾಸಿಪಡಿಸಿದನೆಂದೂ ಇತರ ದಾನವರೂ ಪ್ರಬಲಯುದ್ಧದಲ್ಲಿ ಸಕ್ತರಾದರೆಂದೂ ಹೇಳಿ ದಾನವರ ಪರಾಕ್ರಮದಿಂದ ಭೀತರಾಗಿ ದೇವತೆಗಳು ಪರಾಙ್ಮುಖರಾಗಲು ಅಲ್ಲಿಯೂ ಅವರನ್ನು ಬಿಡದೆ ಹಿಂದಿನಿಂದ ಓಡಿ ಬಂದು ಎಲ್ಲ ದೇವತೆಗಳನ್ನೂ ದಾನವರು ಓಡಿಸಿದುದರಿಂದ ಇಂದ್ರಾದಿಗಳು ಸ್ವರ್ಗ ವನ್ನು ಬಿಟ್ಟು ಸತ್ಯಲೋಕಕ್ಕೆ ಹೋಗಿ ಸೇರಿದರೆಂದೂ ಅನಂತರ ಬಲಿಯು ಸ್ವರ್ಗದಲ್ಲಿ ನಿಂತು ದೇವತೆಗಳ ಅಧಿಕಾರಸ್ಥಾನದಲ್ಲೆಲ್ಲಾ ದಾನವರನ್ನೇ ನಿಯಮಿಸಿ ಹತ್ತುಲೋಕ ಗಳಿಗೂ ಅಧಿಪತಿಯಾಗಿ ಸ್ವರ್ಗಸುಖವನ್ನು ಅನುಭವಿಸುತ್ತಾ ತಮ್ಮ ತಾತನಾದ ಪ್ರಹ್ಲಾದನನ್ನು ಸ್ಮರಿಸಿಕೊಂಡನು. ಒಡನೆಯೇ ಪ್ರಹ್ಲಾದನು ಸ್ವರ್ಗಕ್ಕೆ ಬಂದು ಬಲಿಯಿಂದ ಸತ್ಕರಿಸಲ್ಪಟ್ಟು ಅವನನ್ನು ಇಂದ್ರನ ಸಿಂಹಾಸನದಲ್ಲಿ ಕುಳ್ಳಿರಿಸಿದನೆಂದೂ ಹಾಗೆ ಇಂದ್ರನ ಸಿಂಹಾಸನಾರೂಢನಾದ ಬಲಿಯು ತಾನು ಯಾವ ರೀತಿಯಲ್ಲಿ ರಾಜ್ಯ ಭಾರಮಾಡಬೇಕೆಂಬುದನ್ನು ಉಪದೇಶಿಸಬೇಕೆಂದು ಕೇಳಿಕೊಳ್ಳಲು ಪ್ರಹ್ಲಾದನು ಪ್ರಜಾಪಾಲಕನಾದ ರಾಜನ ಕರ್ತವ್ಯವನ್ನು ಸಂಗ್ರಹವಾಗಿ ಉಪದೇಶಿಸಿ ಧರ್ಮಿಷ್ಠ ನಾಗಿಯೂ ಕೀರ್ತಿವಂತನಾಗಿಯೂ ರಾಜನು ಸ್ವಕರ್ತವ್ಯವನ್ನು ನೆರವೇರಿಸಿ ಪುರು ಷಾರ್ಥಗಳನ್ನು ಹೊಂದಬೇಕೆಂದು ಉಪಸಂಹರಿಸಲು ಅದನ್ನು ಕೇಳಿದ ಬಲಿಯು ಅಪ್ಪಣೆಯಂತೆ ನಡೆದುಕೊಳ್ಳುವೆನೆಂದು ಹೇಳಿ ಸುಮ್ಮನಾದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಪಂಚಸಪ್ತತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ತತೋ ಗತೇಷು ದೇವೇಷು ಬ್ರಹ್ಮಲೋಕಂ ತಪೋಧನ ।
ತ್ರೈಲೋಕ್ಯಂ ಪಾಲಯಾಮಾಸ ಬಲಿಃ ಧರ್ಮಾನ್ವಿತಃ ಸದಾ ॥ ೧ ॥

ಕಲಿಸ್ತದಾ ಧರ್ಮಯುತಂ ಜಗದ್ದೃಷ್ಟ್ವಾ ಕೃತೇ ಯಥಾ ।
ಬ್ರಹ್ಮಾಣಂ ಶರಣಂ ಭೇಜೆ ಸ್ವಭಾವಸ್ಯ ನಿಷೇಧನಾತ್ ॥ ೨ ॥

ಗತ್ವಾ ಸ ದದೃಶೆ ದೇವಂ ಸೇಂದ್ರಂ ದೇವೈಸ್ಸಮನ್ವಿತಂ ।
ಸ್ವದೀಪ್ತ್ಯಾ ದ್ಯೋತಯಂತಂ ಚ ಸ್ವದೇಶಂ ಸಸುರಾಸುರಂ ॥ ೩ ॥

ಎಪ್ಪತ್ತೈದನೆಯ ಅಧ್ಯಾಯವು

೧-೩. ಪುಲಸ್ತ್ಯರು ಮುಂದಿನ ವೃತ್ತಾಂತವನ್ನು ಹೇಳುತ್ತಾರೆ. ಅನಂತರ ದೇವತೆಗಳೆಲ್ಲರೂ ಬ್ರಹ್ಮಲೋಕಕ್ಕೆ ಹೊರಟುಹೋದ ಮೇಲೆ ಬಲಿಯೇ ತ್ರೈಲೋಕ್ಯವನ್ನು ಸದಾ ಧರ್ಮದೃಷ್ಟಿಯಿಂದಲೇ ಪಾಲಿಸಿದನು. ಆಗ ಕಲಿಯು ಕೃತಯುಗದಂತೆ ಧರ್ಮದಿಂದ ಕೂಡಿದ ರಾಜ್ಯವನ್ನು ನೋಡಿ ತನ್ನ ಸ್ವರೂಪವೇ ಇಲ್ಲಿ ನಿಷಿದ್ಧವಾದುದರಿಂದ ಬ್ರಹ್ಮನಲ್ಲಿ ಶರಣಾಗತನಾದನು. ಆಗ ಕಲಿಯು ಬ್ರಹ್ಮಲೋಕಕ್ಕೆ ಹೋಗಿ ದೇವಾಸುರಸಹಿತವಾದ ತನ್ನ ದೇಶವನ್ನೆಲ್ಲಾ ತನ್ನ ತೇಜಸ್ಸಿನಿಂದ ಬೆಳಗುತ್ತಾ ಇಂದ್ರನೊಡನೆಯೂ ಇತರ ದೇವತೆಗಳೊಡನೆಯೂ ಕೂಡಿರುವ ಬ್ರಹ್ಮನನ್ನು ನೋಡಿದನು.

ಪ್ರಣಿಪತ್ಯ ತಮಾಹಾಥ ಕಲಿಃ ಬ್ರಹ್ಮಾಣಮೀಶ್ವರಂ ।
ಮಮ ಸ್ವಭಾವೋ ಬಲಿನಾ ನಾಶಿತೋ ದೇವಸತ್ತಮ ॥ ೪ ॥

ತಂ ಪ್ರಾಹ ಭಗವಾನ್ ಬ್ರಹ್ಮಾ ಸ್ವಭಾವಂ ಜಗತೋಽಪಿ ಹಿ ।
ನ ಕೇವಲಂ ಹಿ ಭವತೋ ಹೃತಸ್ತೇನ ಬಲೀಯಸಾ ॥ ೫ ॥

ಪಶ್ಯಸ್ಯತ್ರಿಷ್ಟ ದೇವೇಂದ್ರಂ ವರುಣಂ ಸಹಮಾರುತಂ ।
ಭಾಸ್ಕರೋಪಿ ಹಿ ದೀನತ್ವಂ ಪ್ರಯಾತೋಽಹಿ ಬಲಾದ್ಬಲೇಃ ॥ ೬ ॥

ನ ತಸ್ಯ ಕಶ್ಚಿತ್ರೈಲೋಕ್ಯೇ ಪ್ರತಿಷೇದ್ಧಾಸ್ತಿ ಕರ್ಮಣಃ ।
ಋತೇ ಸಹಸ್ರಶಿರಸಂ ಹರಿಂ ದಶಶತಾಂಘ್ರಿಕಂ ॥ ೭ ॥

ಸ ಭೂಮಿಂ ಚ ತಥಾ ನಾಕಂ ರಾಜ್ಯಂ ಲಕ್ಷ್ಮೀಂ ಯಶೋ ಬಲಂ ।
ಸಮಾಹರಿಷ್ಯತಿ ಬಲಿಃ ಕರ್ತಾಸೌ ಧರ್ಮಗೋಚರಂ ॥ ೮ ॥

ಇತ್ಯೇವಮುಕ್ತೋ ದೇವೇನ ಬ್ರಹ್ಮಣಾ ಕಲಿರವ್ಯಯಃ ।
ದೀನಾನ್ದೃಷ್ಟ್ವಾ ಸ ಶಕ್ರಾದೀನ್ ವಿಭೀತಕವನಂ ಗತಃ ॥ ೯ ॥

೪-೭. ಆಗ ಲೋಕೇಶ್ವರನಾದ ಬ್ರಹ್ಮನನ್ನು ನಮಸ್ಕರಿಸಿ, ದೇವತೋತ್ತಮನೇ, ನನ್ನ ಸ್ವಭಾವವೆಲ್ಲವೂ ಬಲಿಯಿಂದ ನಾಶಪಡಿಸಲ್ಪಟ್ಟಿತು ಎಂದನು. ಆಗ ಬ್ರಹ್ಮನು ಕಲಿಯನ್ನು ಕುರಿತು ನಿನ್ನ ಸ್ವಭಾವಮಾತ್ರವೇ ನಾಶಪಡಿಸಲ್ಪಟ್ಟಿತೆಂದು ತಿಳಿಯಬೇಡ. ಬಲಿಷ್ಠನಾದ ಬಲಿಯಿಂದ ಜಗತ್ತಿನ ಸ್ವಭಾವವೇ ಅಪಹರಿಸಲ್ಪಟ್ಟಿದೆ. ಇಲ್ಲಿ ನೋಡು ಏಳು, ದೇವೇಂದ್ರ ವರುಣ ವಾಯು ಸೂರ್ಯ ಎಲ್ಲರೂ ಆ ಬಲಿಯ ಬಲದಿಂದ ದೀನರಾಗಿ ಬಂದು ಇಲ್ಲಿರುತ್ತಾರೆ. ಹೀಗಿರುವದ್ದರಿಂದ ಆ ಬಲಿಯ ವ್ಯಾಪಾರವನ್ನು ತಡೆಯಲು ಸಹಸ್ರ ಶಿರಗಳಿಂದಲೂ ಪಾದಗಳಿಂದಲೂ ಕೂಡಿರುವ ಆ ವಿರಾಟ್ಪುರುಷನ ಹೊರತು ಮೂರುಲೋಕದಲ್ಲಿರುವ ಮತ್ತಾರೂ ಶಕ್ತರಾಗಿಲ್ಲ.

೮-೯. ಆ ಬಲಿಯು ಭೂಮಿಯನ್ನೂ ಸ್ವರ್ಗವನ್ನೂ ಎಲ್ಲಾ ರಾಜ್ಯವನ್ನೂ ಲಕ್ಷ್ಮಿಯನ್ನೂ ಯಶಸ್ಸನ್ನೂ ಬಲ ಮೊದಲಾದುವನ್ನೂ ಸ್ವಾಧೀನಪಡಿಸಿಕೊಂಡು ಧರ್ಮಮಾರ್ಗದಲ್ಲಿ ನಿರತನಾಗಿದ್ದಾನೆ ಎಂದು ಬ್ರಹ್ಮನು ಹೇಳಲು ಕಲಿಯು ದೀನರಾಗಿರುವ ಇಂದ್ರಾದಿಗಳನ್ನೂ ನೋಡಿ ನಿರಾಶನಾಗಿ ವಿಭೀತಕವೆಂಬ ಕಾಡಿಗೆ ಹೊರಟುಹೋದನು.

ಕೃತಂ ಪ್ರಾವರ್ತತ ತದಾ ಕಲಿರ್ನಾಶೀಜ್ಜಗತ್ತ್ರಯೆ ।
ಧರ್ಮೋಽಭವಚ್ಚತುಷ್ಪಾದಃ ಚಾತುರ್ವರ್ಣ್ಯೇಽಪಿ ನಾರದ ॥ ೧೦ ॥

ತಪೋಽಹಿಂಸಾ ಚ ಸತ್ಯಂ ಚ ಶೌಚಮಿಂದ್ರಿಯನಿಗ್ರಹಃ ।
ದಯಾ ದಾನಂತ್ವಾನೃಶಂಸ್ಯಂ ಶುಶ್ರೂಷಾ ಯಜ್ಞಕರ್ಮ ಚ ॥ ೧೧ ॥

ಜಗಂತ್ಯೇತಾನಿ ಸರ್ವಾಣಿ ಪರಿವ್ಯಾಪ್ಯ ಸ್ಥಿತಾನಿ ಹಿ ।
ಬಲಾದ್ವಿಚಲಿತೋ ಬ್ರಹ್ಮನ್ ತುಷ್ಟೋಽಪಿ ಹಿ ಕೃತಃ ಕೃತಃ ॥ ೧೨ ॥

ಸ್ವಧರ್ಮಸ್ಥಾಯಿನೋ ವರ್ಣಾ ಆಶ್ರಮಾಂಶ್ಚಾವಿಶನ್ ದ್ವಿಜಾಃ ।
ಪ್ರಜಾಪಾಲನಧರ್ಮಸ್ಥಾಃ ಸದೈವ ಮನುಜರ್ಷಭಾಃ ॥ ೧೩ ॥

ಧರ್ಮೋತ್ತರೆ ವರ್ತಮಾನೇ ಬ್ರಹ್ಮನ್ನಸ್ಮಿನ್ ಜಗತ್ತ್ರಯೆ ।
ತ್ರೈಲೋಕ್ಯಲಕ್ಷ್ಮೀರಗಮತ್ತದಾನೀಂ ದಾನವೇಶ್ವರಂ ॥ ೧೪ ॥

ತಾಮಾಗತಾಂ ನಿರೀಕ್ಷ್ಯೈವ ಸಹಸ್ರಾಕ್ಷಶ್ರಿಯಂ ಬಲಿಃ ।
ಪಪ್ರಚ್ಛ ಕಾಸಿ ಮಾಂ ಬ್ರೂಹಿ ಕೇನಾಪ್ಯರ್ಥೇನ ಚಾಗತಾ ॥ ೧೫ ॥

೧೦-೧೧. ಆಗ ಮೂರುಲೋಕದಲ್ಲಿಯೂ ಕೃತಯುಗವೇ ಮೊದಲಾಯಿತು. ಕಲಿಯ ಕಥೆಯೇ ಇರಲಿಲ್ಲ. ಧರ್ಮವು ಎಲ್ಲಾ ವರ್ಣದಲ್ಲಿಯೂ ನಾಲ್ಕುಪಾದ ಗಳಿಂದಲೂ ಬೇರೂರಿ ನಿಂತಿತು. ತಪಸ್ಸು, ಅಹಿಂಸಾ, ಸತ್ಯವಚನ, ಶೌಚ, ಇಂದ್ರಿಯ ಜಯ, ದಯಾ, ದಾನ, ದಾಕ್ಷಿಣ್ಯ, ಶುಶ್ರೂಷಾ ಯಜ್ಞಕರ್ಮಗಳು

೧೨-೧೪. ಇವುಗಳೆಲ್ಲಾ ಜಗತ್ತನ್ನೆಲ್ಲಾ ವ್ಯಾಪಿಸಿ ನಿಂತವು. ಕೃತಯುಗವು ಬಲಾತ್ಕಾರದಿಂದ ಸೆಳೆಯಲ್ಪಟ್ಟರೂ ಅದು ಬಹಳ ಮಟ್ಟಿಗೂ ಸಂತೋಷಪಟ್ಟು ನೆಲಸಿತು. ವರ್ಣಗಳೆಲ್ಲವೂ ಸ್ವಧರ್ಮದಲ್ಲಿ ನಿರತವಾದವು. ದ್ವಿಜರೆಲ್ಲರೂ ತಮ್ಮ ತಮ್ಮ ಆಶ್ರಮದಲ್ಲಿ ನೆಲಸಿದರು. ಕ್ಷತ್ರಿಯರೆಲ್ಲರೂ ಪ್ರಜಾಪಾಲನ ವ್ಯಾಪಾರದಲ್ಲಿ ಜಾಗರೂಕರಾದರು. ಈ ರೀತಿ ಜಗತ್ರಯವೂ ಉತ್ತಮವಾದ ಧರ್ಮಮಾರ್ಗದಲ್ಲೇ ನಿಲ್ಲಲು ತ್ರೈಲೋಕ್ಯಲಕ್ಷ್ಮಿಯು ಬಲಿಯ ಸಮೀಪಕ್ಕೆ ಬಂದಳು.

೧೫. ಹಾಗೆ ಬಂದ ಇಂದ್ರನ ಲಕ್ಷ್ಮಿಯನ್ನು ನೋಡಿ ಬಲಿಯು ನೀನು ಯಾರು ಏತಕ್ಕಾಗಿ ಇಲ್ಲಿ ಬಂದೆ ಹೇಳು ಎಂದು ಪ್ರಶ್ನೆಮಾಡಿದನು.

ಸಾ ತದ್ವಚನಮಾಕರ್ಣ್ಯ ತದಾ ಶ್ರೀಃ ಪದ್ಮಮಾಲಿನೀ ।
ಬಲೇ ಶೃಣು ಚ ಯಸ್ಮಾತ್ತ್ವಾಮಾಯಾತಾ ಮಹಿಷೀ ಬಲಾತ್ ॥ ೧೬ ॥

ಅಪ್ರತರ್ಕ್ಯಬಲೋ ದೇವೋ ಯೋಽಸೌ ಚಕ್ರಗದಾಧರಃ ।
ತೇನ ತ್ಯಕ್ತಸ್ತು ಮಘವಾಂಸ್ತತೋಽಹಂ ತ್ವಾಮಿಹಾಗತಾ ॥ ೧೭ ॥

ಸ ನಿರ್ಮಮೇ ಯುವತ್ಯಸ್ತು ಚತಸ್ರೋ ರೂಪಸಂಯುತಾಃ ।
ಶ್ವೇತಾಂಬರಧರಾ ಚೈವ ಶ್ವೇತಸ್ರಗನುಲೇಪನಾ ॥ ೧೮ ॥

ಶ್ವೇತವೃಂದಾರಕಾರೂಢಾ ಸತ್ತ್ವಾಢ್ಯಾ ಶ್ವೇತವಿಗ್ರಹಾ ।
ರಕ್ತಾಂಬರಧರಾಚಾನ್ಯಾ ರಕ್ತಸ್ರಗನುಲೇಪನಾ ॥ ೧೯ ॥

ರಕ್ತವಾಜಿಸಮಾರೂಢಾ ರಕ್ತಾಂಗೀ ರಾಜಸೀ ಹಿ ಸಾ ।
ಪೀತಾಂಬರಾ ಪೀತವರ್ಣಾ ಪೀತಸ್ರಗನುಲೇಪನಾ ॥ ೨೦ ॥

೧೬-೧೭. ಆ ಲಕ್ಷ್ಮಿಯು ಬಲಿಯ ಮಾತನ್ನು ಕೇಳಿ ಬಲಿಯೇ ನಾನು ಏತಕ್ಕಾಗಿ ಮಹಿಷಿಯಾಗಿ ನಿನ್ನಲ್ಲಿ ಬಂದಿರುವೆನೆಂಬುದನ್ನು ಹೇಳುತ್ತೇನೆ ಕೇಳು. ಅಚಿಂತ್ಯಶಕ್ತಿಯಾದ ಚಕ್ರಗದಾಧರನಾದ ಯಾವ ವಿಷ್ಣುವಿರುವನೋ ಅವನಿಂದ ಇಂದ್ರನು ಬಿಡಲ್ಪಟ್ಟನು. ಆದುದರಿಂದ ಇಂದ್ರನನ್ನೂ ಬಿಟ್ಟು ನಾನು ನಿನ್ನಲ್ಲಿ ಬಂದಿರುವೆನು.

೧೮-೧೯. ಆ ಮಹಾಪುರುಷನಾದ ವಿಷ್ಣುವು ರೂಪವತಿಯರಾದ ನಾಲ್ಕು ಯುವತಿಯರನ್ನು ನಿರ್ಮಿಸಿದನು. ಅವರಲ್ಲಿ ಬಿಳಿಯ ವಸ್ತ್ರವನ್ನುಟ್ಟು ಬಿಳಿಯ ಮಾಲಿಕೆಯಿಂದಲೂ ಚಂದನದಿಂದಲೂ ಕೂಡಿ ಬಿಳಿಯ ಆನೆಯ ಮೇಲೆ ಆರೂಢಳಾಗಿ ಧವಲವಾದ ಶರೀರದಿಂದಕೂಡಿ ಸತ್ತ್ವಗುಣಸಮೃದ್ಧಳಾಗಿರುವಳೊಬ್ಬಳು. ಮತ್ತೊಬ್ಬಳು ಕೆಂಪುವಸ್ತ್ರವನ್ನುಟ್ಟು ಕೆಂಪಾದಮಾಲಿಕೆಗಳಿಂದಲೂ ಚಂದನದಿಂದಲೂ ಕೂಡಿ

೨೦-೨೨. ಕೆಂಪು ಕುದುರೆಯ ಮೇಲೆ ಕುಳಿತು ಕೆಂಪಾದ ದೇಹದಿಂದ ಕೂಡಿ ರಜೋಗುಣಸಮೃದ್ಧಳಾಗಿರುವಳು. ಹೊಂಬಣ್ಣದ ವಸ್ತ್ರವನ್ನುಟ್ಟು ಹೊಂಬಣ್ಣದ ಮಾಲಿಕೆ ಮತ್ತು ಚಂದನಗಳನ್ನು ಹೊಂದಿ ಹೊಂಬಣ್ಣದ ದೇಹವುಳ್ಳವಳಾಗಿ ಚಿನ್ನದ

ಸೌವರ್ಣಸ್ಯಂದನಾರೂಢಾ ತಾಮಸಂ ಗುಣಮಾಶ್ರಿತಾ ।
ನೀಲಾಂಬರಾ ನೀಲಮಾಲ್ಯಾ ನೀಲಗಂಧಾಲಿಸಪ್ರಭಾ ॥ ೨೦ ॥

ನೀಲೇ ವೃಷೇ ಸಮಾರೂಢಾ ತ್ರಿಗುಣಾ ಸಾ ಪ್ರಕೀರ್ತಿತಾ ।
ಯಾ ಸಾ ಶ್ವೇತಾಂಬರಾ ಶ್ವೇತಾ ಸತ್ವಾಢ್ಯಾ ಕುಂಜರಸ್ಥಿತಾ ॥ ೨೨ ॥

ಸಾ ಬ್ರಹ್ಮಾಣಂ ಸಮಾಯಾತಾ ಚಂದ್ರಚಂದ್ರಾನುಗಾನಪಿ ।
ಯಾ ಸಾ ರಕ್ತಾ ರಕ್ತವಾಸಾ ವಾಜಿಸ್ಥಾ ರಜಸಾನ್ವಿತಾ ॥ ೨೩ ॥

ತಾಂ ಪ್ರಾದಾದ್ದೇವರಾಜಾಯ ಮನವೇ ತತ್ಸುತಾಯ ಚ ।
ಪೀತಾಂಬರಾ ಯಾ ಸುಭಗಾ ರಥಸ್ಥಾ ಕನಕಪ್ರಭಾ ॥ ೨೪ ॥

ಪ್ರಜಾಪತಿಭ್ಯಃ ತಾಂ ಪ್ರಾದಾಚ್ಛಕ್ರಾಯ ಚ ವಿಶತ್ಸು ಚ ।
ನೀಲವಸ್ತ್ರಾಲಿಸದೃಶಾ ಯಾ ಚತುರ್ಥೀ ವೃಷಸ್ಥಿತಾ ॥ ೨೫ ॥

ರಥದಲ್ಲಿ ಕುಳಿತಿರುವಳೋ ಅವಳು ತಮೋಗುಣ ಸಮೃದ್ಧಳು. ಯಾವಳು ನೀಲ ವಸ್ತ್ರಧಾರಿಣಿಯಾಗಿ ನೀಲವಾದ ಮಾಲ್ಯಗಂಧಗಳಿಂದ ಕೂಡಿ ಭ್ರಮರವರ್ಣವನ್ನು ಹೊಂದಿ ನೀಲವಾದ ವೃಷಭನನ್ನು ಆರೋಹಣಮಾಡಿರುವಳೋ ಅವಳೇ ಸತ್ವಾದಿ ಗುಣತ್ರಯದಿಂದ ಕೂಡಿದವಳು. ಇವರುಗಳಲ್ಲಿ ಮೊದಲನೆಯವಳಾದ ಶ್ವೇತಾಂಬರ ಧಾರಿಣಿಯು ಆನೆಯ ಮೇಲೆ ಕುಳಿತು ಬ್ರಹ್ಮನನ್ನೂ ಚಂದ್ರ ಮತ್ತು ಅವನ ಅನು ಯಾಯಿಗಳನ್ನೂ ಸೇರಿದಳು.

೨೩-೨೬. ಯಾವಳು ರಕ್ತವರ್ಣಳಾಗಿಯೂ ರಕ್ತವಸ್ತ್ರಳಾಗಿಯೂ ಅಶ್ವಾ ರೂಢಳಾಗಿಯೂ ರಜೋಗುಣದಿಂದಕೂಡಿ ಉದಯಿಸಿದಳೋ ಅವಳನ್ನು ಇಂದ್ರನಿಗೂ ಮನು ಮತ್ತು ಅವನ ಪುತ್ರರಿಗೂ ಕೊಟ್ಟನು. ಯಾವಳು ಹೊಂಬಣ್ಣದ ವಸ್ತ್ರದಿಂದ ಕೂಡಿ ಚಿನ್ನದ ವರ್ಣಹೊಂದಿ ರಥಸ್ಥಳಾಗಿ ಉದಯಿಸಿದಳೋ ಅವಳನ್ನು ಪ್ರಜಾಪತಿ ಗಳಿಗೂ ಇಂದ್ರನಿಗೂ ವೈಶ್ಯರಿಗೂ ಕೊಡಲಾಯಿತು. ಯಾವಳು ನೀಲವರ್ಣವುಳ್ಳವ ಳಾಗಿ ನೀಲವಸ್ತ್ರದಿಂದ ಕೂಡಿ ಉದಯಿಸಿದಳೋ ವೃಷಭಾರೂಢಳಾದ ಆ ನಾಲ್ಕನೇ ಯವಳನ್ನು ದಾನವರಿಗೂ ರಾಕ್ಷಸರಿಗೂ ಶೂದ್ರರಿಗೂ ವಿದ್ಯಾಧರಾದಿಗಳಿಗೂ ಕೊಡ

ಸಾ ದಾನವಾನ್ದೈತ್ಯಮುತಾಂಶ್ಚ ಶೂದ್ರಾನ್ವಿದ್ಯಾಧರಾನಪಿ ।
ವಿಪ್ರಾದ್ಯಾಃ ಶ್ವೇತರೂಪಾಂ ತಾಂ ಕಥಯಂತಿ ಸರಸ್ವತೀಂ ॥ ೨೬ ॥

ಸ್ತುವಂತಿ ಬ್ರಹ್ಮಣಾ ಸಾರ್ಧಂ ಮಖೆ ಮಂತ್ರಾದಿಭಿಸ್ಸದಾ ।
ಕ್ಷತ್ರಿಯಾ ರಕ್ತವರ್ಣಾಂ ತಾಂ ಜಯಶ್ರೀಂ ಚ ಶಶಂಸಿರೆ ॥ ೨೭ ॥

***ಸಾಚೆಂದ್ರೇಣ ಸುರಶ್ರೇಷ್ಠ ಮನುನಾ ಚ ಯಶಸ್ವಿನೀ ।**
ವೈಶ್ಯಾಸ್ತಾಂ ಪೀತವಸನಾಂ ಕನಕಾಂಗೀಂ ಸದೈವ ಹಿ ॥ ೨೮ ॥

ಸ್ತುವಂತಿ ಲಕ್ಷ್ಮೀಮಿತ್ಯೇವ ಪ್ರಜಾಪಾಲಾಸ್ತಥೈವ ಹಿ ।
ಶೂದ್ರಾಸ್ತಾಂ ನೀಲವರ್ಣಾಂಗೀಂ ಸ್ತುವಂತಿ ಹಿ ಸುಭಕ್ತಿತಃ ॥ ೨೯ ॥

ಪ್ರಿಯದೇವೀತಿ ನಾಮ್ನಾ ತಾಂ ಸದೈತ್ಯೈರಾಕ್ಷಸೈಸ್ತಥಾ ।
ಏವಂ ವಿಭಾಕ್ತಾಸ್ತಾನಾರ್ಯಸ್ತೇನದೇವೇನ ಚಕ್ರಿಣಾ ॥ ೩೦ ॥

ಲಾಯಿತು, ಶ್ವೇತರೂಪಳಾದ ಮೊದಲನೆಯವಳನ್ನು ಬ್ರಾಹ್ಮಣರೇ ಮೊದಲಾದವರು ಸರಸ್ವತಿ ಎಂದು ಕರೆದು ಯಜ್ಞದಲ್ಲಿ ಬ್ರಹ್ಮನೊಡನೆ ಅವಳನ್ನೂ ಮಂತ್ರಗಳಿಂದ ಸ್ತೋತ್ರಮಾಡುತ್ತಾರೆ.

೨೭-೩೦. ರಕ್ತವರ್ಣಳಾದ ಆ ದೇವಿಯನ್ನು ಕ್ಷತ್ರಿಯರು ಜಯಶ್ರೀ ಎಂದು ಹೊಗಳಿದರು. ಇಂದ್ರನಿಂದಲೂ ಮನುವಿನಿಂದಲೂ ಯಶಸ್ವಿನಿಯಾದ ಅ ದೇವಿಯು ಹಾಗೆಯೇ ಕರೆಯಲ್ಪಟ್ಟಳು. ಹೊಂಬಣ್ಣದ ವಸ್ತ್ರವುಳ್ಳ ಆ ದೇವಿಯನ್ನು ವೈಶ್ಯರೂ ಹಾಗೆಯೇ ಕ್ಷತ್ರಿಯರೂ ಕನಕಾಂಗಿಯಾಗಿದ್ದುದರಿಂದ ಲಕ್ಷ್ಮಿ ಎಂದು ಕರೆದರು ನೀಲ ವರ್ಣಳಾದ ಆ ದೇವಿಯನ್ನು ಪ್ರಿಯದೇವೀ ಎಂಬ ಹೆಸರಿನಿಂದ ಶೂದ್ರರೂ ದೈತ್ಯ ರಾಕ್ಷಸಾದಿಗಳೂ ಭಕ್ತಿಯಿಂದ ಪೂಜಿಸಿದರು. ಈ ಪ್ರಕಾರ ಚಕ್ರಧರನಾದ ಆ ವಿಷ್ಣುವೇ ಯುವತಿಯರನ್ನು ವಿಭಾಗಿಸಿದನು.

---

* ಇಲ್ಲಿ ಸಾಚೇಂದ್ರೇಣ ಎಂದು ಪಾಠವಿರಬೇಕೆಂದು ತೋರುತ್ತದೆ.

ಏತಾಸಾಂ ಚ ಸ್ವರೂಪಸ್ಥಾಸ್ತಿಷ್ಠಂತಿ ನಿಧಯೋಽವ್ಯಯಾಃ ।
ಇತಿಹಾಸಪುರಾಣಾನಿ ವೇದಾಸ್ಸಾಂಗಾಸ್ತಥೋಕ್ತಯಃ ॥ ೩೧ ॥

ಚತುಷ್ಷಷ್ಟಿಕಲಾಶ್ಶ್ವೇತಾ ಮಹಾಪದ್ಮೋಽನಿಧಿಃ ಸ್ಥಿತಃ ।
ರತ್ನಾನಿ ಸ್ವರ್ಣರಜತಂ ಗಜಾಶ್ವರಥಭೂಷಣಂ ॥ ೩೨ ॥

ಶಸ್ತ್ರಾಸ್ತ್ರಾದಿಕವಸ್ತೂನಿ ರಕ್ತಾ ಪದ್ಮೋ ನಿಧಿಃ ಸ್ಥಿತಃ ।
ಗೋಮಹಿಷ್ಯಃ ಖರೋಷ್ಟ್ರಾಶ್ಚ ಸುವರ್ಣಾಂಬರಭೂಮಯಃ ॥ ೩೩ ॥

ಔಷಧ್ಯಃ ಪಶವಃ ಪೀತಾ ಮಹಾನೀಲೋ ನಿಧಿಃ ಸ್ಥಿತಃ ।
ಸರ್ವಾಸಾಮಪಿ ಜಾತೀನಾಂ ಜಾತಿರೇಕಾ ಪ್ರತಿಷ್ಠಿತಾಃ ॥ ೩೪ ॥

ಅನ್ಯೇಷಾಮಪಿ ಸಂಹರ್ತ್ರೀ ನಿಲಾ ಶಂಖೋ ನಿಧಿಃ ಸ್ಥಿತಃ ।
ಏತಾಭಿಶ್ಚ ಸ್ಥಿತಾನಾಂ ಚ ಯಾನಿ ರೂಪಾಣಿ ದಾನವ ।
ಭವಂತಿ ಪುರುಷಾಣಾಂ ವೈ ತನ್ನಿಬೋಧ ವದಾಮಿ ತೇ ॥ ೩೫ ॥

೩೧-೩೪. ಈ ಯುವತಿಗಳಿಗೆ ಅಕ್ಷಯವಾದ ನಿಧಿಗಳು ಸ್ವರೂಪದಲ್ಲಿಯೇ ಸೇರಿಹೋದವು. ಇತಿಹಾಸ ಪುರಾಣಗಳು ಅಂಗಸಹಿತವಾದ ವೇದಗಳು ಚತುಷ್ಷಷ್ಟಿ ಕಲೆಗಳೂ ಮಹಾಪದ್ಮವೆಂಬ ನಿಧಿಸ್ವರೂಪವಾಗಿ ಶ್ವೇತೆಯಲ್ಲಿ ಅಡಗಿದವು. ರತ್ನಗಳು ಚಿನ್ನ ಬೆಳ್ಳಿ ಮತ್ತು ಗಜಾಶ್ವಗಳೂ ಭೂಷಣವಾಗಿ ಉಳ್ಳ ಶಸ್ತ್ರಾಸ್ತ್ರಾದಿಗಳೆಲ್ಲವೂ ಪದ್ಮನಿಧಿಯಾಗಿ ರಕ್ತೆಯ ಸ್ವರೂಪದಲ್ಲಡಗಿದುವು. ಹಸು ಎಮ್ಮೆ ಕತ್ತೆ ಒಂಟೆ ಸುವರ್ಣವಸ್ತ್ರ ಭೂಮಿಗಳು ಓಷಧಿಗಳು ಪಶುಗಳು ಇವೆಲ್ಲವೂ ಮಹಾನೀಲನಿಧಿ ಸ್ವರೂಪದಲ್ಲಿ ಪೀತೆಯಲ್ಲಿ ಅಡಗಿದವು. ಈ ಬ್ರಹ್ಮಕ್ಷತ್ರಿಯ ವೈಶ್ಯರಲ್ಲಿ ದ್ವಿಜತ್ವವೆಂಬ ಜಾತಿಯೊಂದೆ ನಿಂತಿತು.

೩೫-೩೬. ಇತರ ಎಲ್ಲಾ ವಸ್ತುಗಳಿಗೂ ನಾಶಕವಾದ ಶಂಖವೆಂಬ ನಿಧಿಯು ನೀಲೆಯ ಸ್ವರೂಪದಲ್ಲಡಗಿತು. ಈ ಯುವತಿಗಳಿಂದ ಆಶ್ರಯಿಸಲ್ಪಟ್ಟ ಮನುಷ್ಯರ ಸ್ವರೂಪವನ್ನೂ ಹೇಳುತ್ತೇನೆ. ಇದನ್ನೂ ನನ್ನಿಂದ ತಿಳಿದುಕೋ. ಶ್ವೇತರೂಪಿಣಿ

ಸತ್ಯಶೌಚಾಭಿಸಂಯುಕ್ತಾ ಬಲಿದಾನೋತ್ಸವೇ ರತಾಃ ।
ಭವಂತಿ ದಾನವಪತೆ ಮಹಾಪದ್ಮಾಶ್ರಿತಾ ನರಾಃ ॥ ೩೬ ॥

ಯಜ್ವಿನೋ ಸುಭಗಾ ದೃಪ್ತಾ ಮಾಲಿನೋ ಬಹುದಕ್ಷಿಣಾಃ ।
ಸರ್ವಸಾಮಾನ್ಯಸುಖಿನೋ ನರಾಃ ಪದ್ಮಾಶ್ರಿತಾಃ ಸ್ಥಿತಾಃ ॥ ೩೭ ॥

ಸತ್ಯಾನೃತಸಮಾಯುಕ್ತಾ ದಾನಾಶರಣಯಜ್ವಿನಃ ।
ನ್ಯಾಯಾನ್ಯಾಯವ್ಯಯೋಪೇತಾ ಮಹಾನೀಲಾಶ್ರಿತಾ ನರಾಃ ॥ ೩೮ ॥

ನಾಸ್ತಿಕಾಃ ಶೌಚರಹಿತಾಃ ಕೃಪಣಾ ಭೋಗವರ್ಜಿತಾಃ ।
ಸ್ತೆಯಾನೃತಕಥಾಯುಕ್ತಾ ನರಾಃ ಶಂಖಾಶ್ರಿತಾ ಬಲೆ ॥ ೩೯ ॥

ಇತ್ಯೇವಂ ಕಥಿತಸ್ತುಭ್ಯಮಾಸಾಂ ದಾನವ ನಿರ್ಣಯಃ । ॥ ೪೦ ॥

ಅಹಂ ಸಾ ರಾಗಿಣೀ ನಾನು ಜಯಶ್ರೀಃ ತ್ವಾಮುಪಾಗತಾ ।
ಮಮಾಸ್ತಿ ದಾನವಪತೇ ಪ್ರತಿಜ್ಞಾ ಸಾಧುಸಮ್ಮತಾ ॥ ೪೧ ॥

ಯಾದ ಮಹಾಪದ್ಮನಿಧಿಯನ್ನಾಶ್ರಯಿಸಿದ ಮನುಷ್ಯರು ಸತ್ಯಶೌಚಾದಿಗಳಿಂದ ಕೂಡಿಯೂ ಪೂಜಾದಿಗಳಲ್ಲಿಯೂ ಶಾಪಾನುಗ್ರಹಸಾಮರ್ಥ್ಯದಲ್ಲಿಯೂ ನಿರತ ರಾಗುತ್ತಾರೆ

೩೭-೩೮. ಪದ್ಮಾಶ್ರಿತರಾದ ಪುರುಷರು ಯಾಗಶೀಲರಾಗಿಯೂ ಸೌಭಾಗ್ಯ ಶಾಲಿಗಳಾಗಿಯೂ ಅಹಂಕಾರದಿಂದ ಕೂಡಿದವರೂ ಅಲಂಕೃತರಾಗಿಯೂ ಸಮರ್ಥ ರಾಗಿಯೂ ಇದ್ದು ಸರ್ವಸಾಮಾನ್ಯವಾದ ಸುಖದಲ್ಲಿ ಆಸಕ್ತರಾಗುತ್ತಾರೆ. ಮಹಾ ನೀಲಾಶ್ರಿತರಾದ ನರರು ಸತ್ಯಾಸತ್ಯದಿಂದ ಕೂಡಿ ದಾನಶೀಲರಾಗಿಯೂ ಯಾಗಶೀಲ ರಾಗಿಯೂ ಇದ್ದು ನ್ಯಾಯಾನ್ಯಾಯಗಳನ್ನು ತ್ಯಜಿಸಿ ಸಮೃದ್ಧಿಯಿಂದ ಇತರರಿಗೆ ರಕ್ಷಕರಾಗಿರುವರು.

೩೯-೪೧. ನೀಲಾರೂಪಳಾದ ಶಂಖನಿಧಿಯನ್ನಾಶ್ರಯಿಸಿದ ನರರು ನಾಸ್ತಿಕ ರಾಗಿಯೂ ಶೌಚಾಚಾರರಹಿತರಾಗಿಯೂ ಕೃಪಣರಾಗಿಯೂ ಭೋಗವರ್ಜಿತರಾಗಿಯೂ ಕಳ್ಳತನ, ಅನೃತಭಾಷಣ ಇವುಗಳಲ್ಲಿ ಆಸಕ್ತರಾಗಿಯೂ ಆಗುವರು. ಇವರುಗಳ ಸ್ವರೂಪವನ್ನೆಲ್ಲಾ ನಿನಗೆ ಹೇಳಿದಂತಾಯಿತು. ನಾನು ಆ ಯುವತಿಯರಲ್ಲಿ ರಾಗಿಣಿ ಎಂಬುವಳು. ಈಗ ನಿನ್ನಲ್ಲಿ ಬಂದಿರುವೆನು. ಎಲೈ ದಾನವರಾಜನೇ ನನ್ನದೊಂದು ಸತ್ಪುರುಷಸಮ್ಮತವಾದ ಪ್ರತಿಜ್ಞೆ ಇದೆ.

ಸಮಾಶ್ರಯಾಮಿ ಶೌರ್ಯಾಂಶಂ ನಚ ಕ್ಲೀಬಂ ಕಥಂಚನ ।
ನಚಾಸ್ತಿ ತವ ತುಲ್ಯೋಽನ್ಯಸ್ತ್ರೈಲೋಕ್ಯೇಽಪಿ ಬಲಾನ್ವಿತಃ ॥ ೪೨ ॥

ತ್ವಯಾ ಬಲವತಾ ರಾಜನ್ ಪ್ರೀತಿರ್ಮೇ ಜನಿತಾ ಧ್ರುವಾ ।
ಯತ್ತ್ವಯಾ ಯುಧಿ ವಿಕ್ರಮ್ಯ ದೇವರಾಜೋ ವಿನಿರ್ಜಿತಃ ॥ ೪೩ ॥

ಅತೋ ಮೇ ಪರಮಪ್ರೀತಿರ್ಜಾತಾ ದಾನವ ಶಾಶ್ವತೀ ।
ದೃಷ್ಟ್ವಾ ತೇ ಪರಮಂ ಸತ್ವಂ ಸರ್ವೇಭ್ಯೋಽಪಿ ಬಲಾಧಿಕಂ ॥ ೪೪ ॥

ಶೌಂಡೀರ್ಯಮಾನಿನಂ ವೀರಂ ತತೋಽಹಂ ಸ್ವಯಮಾಗತಾ ।
ನಾಶ್ಚರ್ಯಂ ದಾನವಶ್ರೇಷ್ಠ ಹಿರಣ್ಯಕಶಿಪೋಃ ಕುಲೇ ॥ ೪೫ ॥

ಪ್ರಸೂತಸ್ಯಾಸುರೇಂದ್ರಸ್ಯ ತವ ಕರ್ಮ ಯದೀದೃಶಂ ।
ವಿಶೇಷಿತಃ ತ್ವಯಾ ರಾಜನ್ ದೈತೇಯಃ ಪ್ರಪಿತಾಮಹಃ ॥ ೪೬ ॥

೪೨-೪೩. ಶೌರ್ಯಾಂಶವಿರುವವನನ್ನೇ ನಾನು ಆಶ್ರಯಿಸುತ್ತೇನೆಯೇ ಹೊರತು ಶೌರ್ಯವಿಲ್ಲದೆ ನಪುಂಸಕನಂತಿರುವವನನ್ನು ಯಾವಾಗಲೂ ಆಶ್ರಯಿಸುವುದಿಲ್ಲ. ಈಗ ಮೂರುಲೋಕದಲ್ಲಿಯೂ ನಿನಗಿಂತ ಬಲಾಢ್ಯರಾದವರು ಯಾರೂ ಇಲ್ಲ. ಶೂರನಾದ ನೀನು ನನಗೆ ಸ್ಥಿರವಾದ ಪ್ರೀತಿಯನ್ನುಂಟುಮಾಡಿರುವೆ.

೪೪. ನೀನು ಯುದ್ಧದಲ್ಲಿ ಪರಾಕ್ರಮದಿಂದ ದೇವರಾಜನಾದ ಇಂದ್ರನನ್ನೂ ಜಯಿಸಿದ್ದರಿಂದ ನಿನ್ನಲ್ಲಿ ಶಾಶ್ವತವಾದ ಪ್ರೀತಿಯೇ ನನಗೆ ಉಂಟಾಗಿದೆ. ನಿನ್ನ ಸತ್ವವನ್ನೂ ಅಸಾಧಾರಣವಾದ ಬಲವನ್ನೂ ನೋಡಿ ಅಹಂಕಾರಶಾಲಿಯಾಗಿಯೂ ವೀರನಾಗಿಯೂ ಇರುವ ನಿನ್ನನ್ನು ಆಶ್ರಯಿಸಲು ನಾನಾಗಿಯೇ ಬಂದಿರುವೆನು.

೪೫-೪೬. ದಾನವರಾಜನೇ, ಹಿರಣ್ಯಕಶಿಪುವಿನ ವಂಶದಲ್ಲಿ ಉದ್ಭವಿಸಿದ ನಿನಗೆ ಈರೀತಿಯಾದ ಅಸಾಧಾರಣ ವ್ಯಾಪಾರವು ಆಶ್ಚರ್ಯವೇನೂ ಅಲ್ಲ. ಯಾವ ನಿನ್ನ ಪ್ರಪಿತಾಮಹನು ತ್ರಿಲೋಕಾಧಿಪತಿಯಾಗಿದ್ದನೋ ಅವನೂ ಸಹ ನಿನ್ನ ಈ ವ್ಯಾಪಾರದಿಂದ ಬಹಳ ಯಶಸ್ವಿಯಾದನು. ಇತರರಿಂದ ಅಪಹರಿಸಲ್ಪಟ್ಟಿದ್ದ ಮೂರು ಲೋಕಗಳೂ ಈಗ ಜಯಿಸಲ್ಪಟ್ಟವು.

ವಿಜಿತಂ ಚ ಕ್ರಮಾದ್ಯೇನ ತ್ರೈಲೋಕ್ಯಂ ವೈ ಪರೈರ್ಹೃತಂ ।
ಇತ್ಯೇವಮುಕ್ತ್ವಾ ವಚನಂ ದಾನವೇಂದ್ರಂ ಜಗನ್ಮಯೀ ॥ ೪೭ ॥

ಜಯಶ್ರೀಃ ಚಂದ್ರವದನಾ ಪ್ರವಿಷ್ಟಾ ದ್ಯೋತಯಚ್ಚ್ಛಿಭಾ ।
ತಸ್ಯಾಂ ಚೈವ ಪ್ರವಿಷ್ಟಾಯಾಂ ವಿಧವಾ ಇವಯೋಷಿತಃ ॥ ೪೮ ॥

ಸಮಾಶ್ರಯಂತಿ ಬಲಿನಂ ಹ್ರೀಃ ಕೀರ್ತಿರ್ದ್ಯುತಿರೇವ ಚ ।
ಪ್ರಭಾ ಗತಿಃ ಕ್ಷಮಾ ಭೂತಿಃ ವಿದ್ಯಾ ನೀತಿರ್ದಯಾ ಮತಿಃ ॥ ೪೯ ॥

ಶ್ರುತಿಸ್ಮೃತಿಃ ಬಲಂ ಕೀರ್ತಿಃ ಧೃತಿಃ ಶಾಂತಿಃ ಕ್ರಿಯಾ ದ್ವಿಜ ।
ಪುಷ್ಟಿಸ್ತುಷ್ಟಿಃ ತಥಾ ಚಾನ್ಯಾ ಸತ್ವಶ್ರಿಯಮುಪಸ್ಥಿತಾ
ಸರ್ವಾ ಬಲಿಂ ಸಮಾಶ್ರಿತ್ಯ ವಿಶ್ರಾಮ್ಯಂತಿ ಯಥಾ ಸುಖಂ ॥ ೫೦ ॥

ಏವಂಗುಣೋಭೂದ್ದನುಪುಂಗವೋಸೌ
ಬಹಿರ್ಮಹಾತ್ಮಾ ಶುಭಬುದ್ಧಿರಾತ್ಮವಾನ್ ।
ಯಜ್ವಾ ತಪಸ್ವೀ ಮೃದುರೇವ ಸತ್ಯವಾಗ್ದಾತಾ
ವಿಭರ್ತಾ ಸ್ವಜನಾನ್ಸುಗೋಪ್ತಾ ॥ ೫೧ ॥

೪೭-೫೦. ಹೀಗೆ ಹೇಳಿ ಜಗದ್ವ್ಯಾಪಿನಿಯಾದ ಆ ರಾಗಿಣಿಯು ಜಯಶ್ರೀ ರೂಪಿಣಿಯಾಗಿ ದಾನವರಾಜನಾದ ಬಲಿಯನ್ನು ಪ್ರವೇಶಿಸಿ ಅವನನ್ನು ಪ್ರಕಾಶಪಡಿಸಿದಳು. ಅವಳು ಅವನ ಶರೀರದಲ್ಲಿ ಪ್ರವೇಶಮಾಡಿದೊಡನೆಯೇ ಆವನ ಸ್ತ್ರೀಯರೆಲ್ಲ ವಿಧವೆಯರಂತೆ ನಿಷ್ಪ್ರಭೆಯಾದರು. ಅನಂತರ ಜಯಲಕ್ಷ್ಮಿಯಿಂದ ಆವರಿಸಲ್ಪಟ್ಟ ಬಲಿಯನ್ನು ಹ್ರೀ ಕೀರ್ತಿ ಕಾಂತಿ ಪ್ರಭೆ ಗತಿ ಕ್ಷಮೆ ಐಶ್ವರ್ಯ ವಿದ್ಯಾ ನೀತಿ ದಯೆ ಆಗಾಮಿವಿಷಯವಾದ ಬುದ್ಧಿ ಶ್ರುತಿ ಸ್ಮೃತಿಗಳು ಬಲ ಧೈರ್ಯ ಶಾಂತಿ ಕಾರ್ಯಕ್ಷಮತೆ ಸತ್ವಾಶ್ರಯವಾದ ತುಷ್ಟಿ ಪುಷ್ಟಿಗಳು ಎಲ್ಲವೂ ಆಶ್ರಯಿಸಿ ಅವನಲ್ಲಿಯೇ ಸುಖದಿಂದ ನೆಲಸಿದವು.

೫೧-೫೨. ಈ ಪ್ರಕಾರ ದಾನವರಾಜನಾದ ಬಲಿಯು ಜಯಲಕ್ಷ್ಮಿಪ್ರವೇಶದಿಂದ ಮಹಾತ್ಮನಾಗಿಯೂ ಶುಭಬುದ್ಧಿಯುಳ್ಳವನಾಗಿಯೂ ಜಿತೇಂದ್ರಿಯನಾಗಿಯೂ ಯಾಗಶೀಲನಾಗಿಯೂ ತಪಸ್ವಿಯಾಗಿಯೂ ಮೃದುಭಾಷಿಯಾಗಿಯೂ ಸತ್ಯವಚನನಾಗಿಯೂ ದಾತೃವಾಗಿಯೂ ಪ್ರಪಂಚಕ್ಕೂ ಸ್ವಜನಗಳಿಗೂ ರಕ್ಷಕನಾಗಿಯೂ ಸರ್ವ

ತ್ರಿವಿಷ್ಟಪಂ ಶಾಸತಿ ದಾನವೇಂದ್ರೇ
ನಾಸೀತ್ಕ್ಷುಧಾರ್ತೋ ಮಲಿನೋ ನ ದೀನಃ ।
ಸದೋಜ್ಜ್ವಲೋ ಧರ್ಮರತೋಽಥ ದಾಂತಃ
ಕಾಮೋಪಭೋಗೀ ಮನುಜೋಽಪಿ ಜಾತಃ ॥ ೫೨ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ
ಪಂಚಸಪ್ತತಿತಮೋಽಧ್ಯಾಯಃ.

ಗುಣಪರಿಪೂರ್ಣನಾಗಿ ಪರಿಣಮಿಸಿದನು. ಈ ರೀತಿ ದಾನವರಾಜನಾದ ಬಲಿಯು ಸ್ವರ್ಗವನ್ನಾಳುತ್ತಿರುವಾಗ ಹಸಿವಿನಿಂದ ದುಃಖಪಡುವವನೂ ಮಲಿನನೂ ದೀನನೂ ಆಗಿ ಯಾರೂ ಇರಲಿಲ್ಲ. ಮನುಷ್ಯನೂ ಸಹ ಯಾವಾಗಲೂ ವಸ್ತ್ರಭೂಷಣಾದಿಗಳಿಂದ ಪ್ರಕಾಶಮಾನನಾಗಿಯೂ ಧರ್ಮನಿಷ್ಠನಾಗಿಯೂ ಜಿತೇಂದ್ರಿಯನಾಗಿಯೂ ಇದ್ದು ಶಾಸ್ತ್ರೀಯವಾದ ಕಾಮೋಪಭೋಗದಲ್ಲಿ ನಿರತನಾಗಿದ್ದನು.

ಇಲ್ಲಿಗೆ ಶ್ರೀವಾಮನಪುರಾಣದ ವಾಮನಪ್ರಾದುರ್ಭಾವದಲ್ಲಿ
ಎಪ್ಪತ್ತೈದನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಇಂದ್ರಾದಿದೇವತೆಗಳು ಪರಾಜಯಹೊಂದಿ ಬ್ರಹ್ಮಲೋಕಕ್ಕೆ ಹೊರಟುಹೋದನಂತರ ಇಂದ್ರಪದವಿಯನ್ನು ಹೊಂದಿದ ಬಲಿಯೇ ಲೋಕತ್ರಯಕ್ಕೂ ರಾಜನಾಗಿ ಪ್ರಹ್ಲಾದನ ಉಪದೇಶದಂತೆ ಧರ್ಮದಿಂದ ರಾಜ್ಯಭಾರಮಾಡಲಾರಂಭಿಸಿದನೆಂದೂ ಧರ್ಮವು ನಾಲ್ಕುಕಾಲುಗಳಿಂದಲೂ ಬೇರೂರಿ ಕೃತಯುಗದ ಸ್ವರೂಪವೇ ಉಂಟಾದುದರಿಂದ ಕಲಿಯು ತನಗೆ ಅವಕಾಶವಿಲ್ಲದೆ ದುಃಖಪಟ್ಟು ಆಶ್ರಯವನ್ನಪೇಕ್ಷಿಸಿ ಚತುರ್ಮುಖನಲ್ಲಿ ಹೋಗಿ ಮೊರೆಯಿಡಲು ಚತುರ್ಮುಖನೂ ಸಹ ಬಲಿಯ ಮಾಹಾತ್ಮ್ಯದಿಂದ ಪ್ರಪಂಚವೇ ಬದಲಾವಣೆಹೊಂದಿರುವುದರಿಂದ ನಿನ್ನ ಸ್ವರೂಪವು ಈ ರೀತಿ ಆಗಿರುವದರಲ್ಲಿ ಆಶ್ಚರ್ಯವೇನು, ಇಂದ್ರಾದಿ ದೇವತೆಗಳೂ ಸಹ ದೀನರಾಗಿ ಇಲ್ಲಿಯೇ ನೆಲಸಿರುವರು. ಇದರ ಪ್ರತೀಕಾರ ವಿಷಯದಲ್ಲಿ ಆ ಮಹಾವಿಷ್ಣುವೊಬ್ಬ ಹೊರತು ಮತ್ತಾರೂ ಸಮರ್ಥರಿಲ್ಲ. ಆ ಬಲಿಯು ಲೋಕಗಳನ್ನೆಲ್ಲಾ ಧರ್ಮದಿಂದ ಆಕ್ರಮಿಸಿರುವನು ಎಂದು ಉತ್ತರಕೊಡಲು ಕಲಿಯು ಪ್ರತೀಕಾರವನ್ನರಿಯದ ದೀನರಾದ ಇಂದ್ರಾದಿಗಳನ್ನು ನೋಡಿ ತಾನೂ ವಿಭೀತಕವೆಂಬ ವನಕ್ಕೆ ಹೊರಟುಹೋದನೆಂದೂ ಹೇಳಲಾಯಿತು. ವರ್ಣಾಶ್ರಮ ಧರ್ಮಪರಿಪಾಲನೆಯಿಂದ ಬಲಿಯ ರಾಜ್ಯದಲ್ಲಿ ಕೃತಯುಗವೇ ಪ್ರಕಾಶಹೊಂದಿ ಆನಂದಿಸಿತು. ಆಗ ಇಂದ್ರನ ಜಯಲಕ್ಷ್ಮಿಯು ಬಲಿಯ ಸಮೀಪಕ್ಕೆ ಬಂದು ನಾನು ಪರಾಜಿತನಾದ ಇಂದ್ರನನ್ನು ಬಿಟ್ಟು ಲೋಕೈಕವೀರನಾದ ನಿನ್ನಲ್ಲೇ ಬಂದಿರುವೆನೆಂದು ಹೇಳಿ ತನ್ನ ಮತ್ತು ತನ್ನಂತೆ ಮಹಾವಿಷ್ಣುವಿನಿಂದ ನಿರ್ಮಿತರಾದ ಯುವತಿಯರನ್ನೂ ಅವರ ಸ್ವರೂಪವನ್ನೂ ಅವರಿಗೆ ಆಶ್ರಯವಾದ ನಿಧಿಗಳನ್ನೂ ಅದನ್ನು ಹೊಂದಿದ ಮನುಷ್ಯರ ಗುಣಗಳನ್ನೂ ವಿಸ್ತಾರವಾಗಿ ಹೇಳಿ ಬಲಿಯ ಪರಾಕ್ರಮವನ್ನೂ ಧರ್ಮಿಷ್ಠತೆಯನ್ನೂ ಪ್ರಶಂಸಿಸಿ ಅವನಲ್ಲಿ ಸಂಕ್ರಾಂತಳಾದಳೆಂದೂ ನಂತರ ಆ ಜಯಲಕ್ಷ್ಮಿಯ ಸಂಬಂಧದಿಂದ ಬಲಿಯು ಮತ್ತೂ ಧರ್ಮಿಷ್ಠನಾಗಿಯೂ ಗುಣಶಾಲಿಯಾಗಿಯೂ ಆದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಷಟ್‌ಸಪ್ತತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಗತೆ ತ್ರೈಲೋಕ್ಯರಾಜ್ಯೇ ತು ದಾನವೇಷು ಪುರಂದರಃ ।
ಜಗಾಮ ಬ್ರಹ್ಮಸದನಂ ಸಹದೇವೈಃ ಶಚೀಪತಿಃ ॥ ೧ ॥

ತತ್ರಾಪಶ್ಯತ್ತುದೇವೇಶಂ ಬ್ರಹ್ಮಾಣಂ ಕಮಲೋದ್ಭವಂ ।
ಋಷಿಭಿಸ್ಸಾರ್ಧಮಾಸೀನಂ ಪಿತರಂ ಸ್ವಂ ಚ ಕಶ್ಯಪಂ ॥ ೨ ॥

ತತೋ ನನಾಮ ಶಿರಸಾ ಶಕ್ರಃ ಸುರಗುಣೈಸ್ಸಹ ।
ಬ್ರಹ್ಮಾಣಂ ಕಶ್ಯಪಂ ಚೈವ ತಾಂಸ್ತು ಸರ್ವಾಂಸ್ತಪೋಧನಾ ॥ ೩ ॥

ಪ್ರೋವಾಚೇಂದ್ರಃ ಸುರೈಸ್ಸಾರ್ಧಂ ದೇವನಾಥಂ ಪಿತಾಮಹಂ ।
ಪಿತಾಮಹ ಹೃತಂ ರಾಜ್ಯಂ ಬಲಿನಾ ಬಲಿನಾ ಮಮ ॥ ೪ ॥

ಎಪ್ಪತ್ತಾರನೆಯ ಅಧ್ಯಾಯವು

೧-೪. ಪುಲಸ್ತ್ಯರು ಹೇಳುತ್ತಾರೆ. ತ್ರೈಲೋಕ್ಯರಾಜ್ಯಭಾರವೆಲ್ಲವೂ ದಾನವರಲ್ಲಿ ಸೇರಿದನಂತರ ಇಂದ್ರನು ದೇವತೆಗಳೊಡನೆ ಚತುರ್ಮುಖನ ಭವನಕ್ಕೆ ಹೋದನು. ಅಲ್ಲಿ ಋಷಿಗಳೊಡನೆ ಕುಳಿತಿದ್ದ ಕಮಲಾಸನನಾದ ಬ್ರಹ್ಮನನ್ನೂ ಸಮೀಪದಲ್ಲಿದ್ದ ತಂದೆಯಾದ ಕಶ್ಯಪರನ್ನೂ ನೋಡಿದನು. ಅನಂತರ ಇಂದ್ರನು ದೇವತೆಗಳೊಡನೆ ಬ್ರಹ್ಮನನ್ನೂ ಕಶ್ಯಪರನ್ನೂ ಅಲ್ಲಿದ್ದ ಋಷಿಗಳನ್ನೂ ತಲೆಬಾಗಿ ವಂದಿಸಿದನು. ಆಗ ದೇವತೆಗಳೊಡಗೂಡಿ ಇಂದ್ರನು ಬ್ರಹ್ಮನನ್ನು ಕುರಿತು ಎಲೈ ಪಿತಾಮಹನೇ, ಬಲಿಷ್ಠನಾದ ಬಲಿಯಿಂದ ನನ್ನ ರಾಜ್ಯವೆಲ್ಲಾ ಅಪಹೃತವಾಯಿತೆಂದು ವಿಜ್ಞಾಪಿಸಿದನು.

ಬ್ರಹ್ಮಾ ಪ್ರೋವಾಚ ಶಕ್ರೈತದ್ಯುಜ್ಯತೆ ಹಿ ಕೃತಂ ಫಲಂ ।
ಶಕ್ರಃ ಪೃಚ್ಛತಿ ಭೋ ಬ್ರೂಹಿ ಕಿಂ ಮಯಾ ದುಷ್ಕೃತಂ ಕೃತಂ ॥ ೫ ॥

ಕಶ್ಯಪೋಪ್ಯಾಹ ದೇವೇಶ ಭ್ರೂಣಹತ್ಯಾ ಕೃತಾ ತ್ವಯಾ ।
ತ್ವಯಾ ಗರ್ಭೋ ದಿತ್ಯುದರಾತ್ಕೃತ್ತೋ ಹಿ ಬಹುಧಾ ಬಲಾತ್ ॥ ೬ ॥

ಪಿತರಂ ಪ್ರಾಹ ದೇವೇಂದ್ರಃ ಸಮಾತುರ್ದೋಷತೋ ವಿಭೋ ।
ತನ್ನೂನಂ ಪ್ರಾಪ್ತವಾನ್‌ಗರ್ಭೋ ಯದಶೌಚಾ ಹಿ ಸಾ ಭವತ್ ॥ ೭ ॥

ತತೋಽಬ್ರವೀತ್ಕಶ್ಯಪಸ್ತು ಮಾತುರ್ದೋಷಃ ಸದಾ ಸತಾಂ ।
ಗತಸ್ತತೋಽಪಿ ನಿಹತೋ ದಾಸೋಽಪಿ ಕುಲಿಶೇನ ತೆ ॥ ೮ ॥

ತಚ್ಛ್ರುತ್ವಾ ಕಶ್ಯಪವಚಃ ಪ್ರಾಹಃ ಶಕ್ರಃ ಪಿತಾಮಹಂ ।
ವಿನಾಶಂ ಪಾಪ್ಮನೋ ಬ್ರೂಹಿ ಪ್ರಾಯಶ್ಚಿತ್ತಂ ಪ್ರಭೋ ಮಮ ॥ ೯ ॥

ಬ್ರಹ್ಮಾ ಪ್ರೋವಾಚ ದೇವೇಶಂ ವಸಿಷ್ಠಃ ಕಶ್ಯಪಸ್ತಥಾ ।
ಸರ್ವಸ್ಯ ಜಗತಶ್ಚಾಪಿ ಶಕ್ರಸ್ಯಾಪಿ ವಿಶೇಷತಃ ॥ ೧೦ ॥

೫-೮. ಆಗ ಬ್ರಹ್ಮನು ಇಂದ್ರನೇ ನೀನು ಮಾಡಿದ ಪಾಪಕ್ಕೆ ಇದು ಸರಿಯಾದ ಫಲವೆಂದನು. ಇಂದ್ರನು ಪ್ರಭುವೇ ಅಂತಹ ದುಷ್ಕಾರ್ಯವನ್ನು ನಾನೇನು ಮಾಡಿರುವೆನೆಂದು ಪ್ರಶ್ನೆಮಾಡಲು ನೀನು ದಿತಿಯ ಉದರದಲ್ಲಿದ್ದ ಗರ್ಭವನ್ನು ಬಹುವಾಗಿ ಕತ್ತರಿಸಿದುದರಿಂದ ಭ್ರೂಣಹತ್ಯೆಯೇ ನಿನ್ನಿಂದ ಮಾಡಲ್ಪಟ್ಟಿವೆ ಎಂದನು. ಅನಂತರ ಇಂದ್ರನು ತಂದೆಯನ್ನು ಕುರಿತು ಪ್ರಭುವೇ ಅದು ತಾಯಿಯ ದೋಷ ದಿಂದಲೇ ಆದುದೇ ಹೊರತು ನನ್ನ ಅಪರಾಧದಿಂದಲ್ಲ. ಆಗ ದಿತಿಯು ಅಶುಚಿ ಯಾಗಿದ್ದುದರಿಂದ ಗರ್ಭವು ಆ ರೀತಿ ವಿಪತ್ತಿಗೆ ತುತ್ತಾಯಿತೆಂದನು. ಅನಂತರ ಕಶ್ಯಪನು ಅದು ತಾಯಿಯ ದೋಷದಿಂದ ಆಯಿತೆಂಬುದಂತಿರಲಿ. ನೀನು ಪ್ರವೇಶಿಸಿ ವಜ್ರಾಯುಧದಿಂದ ಪ್ರಹರಿಸಿ ಅವರನ್ನು ದಾಸರನ್ನಾಗಿ ಮಾಡಿಕೊಂಡುದರಿಂದ ಭ್ರೂಣ ಹತ್ಯೆಯು ನಿನಗೆ ತಪ್ಪಿದ್ದೇ ಅಲ್ಲವೆಂದನು.

೯-೧೨. ಕಶ್ಯಪರ ಆ ಮಾತನ್ನು ಕೇಳಿ ಇಂದ್ರನು ಬ್ರಹ್ಮನನ್ನು ಕುರಿತು ಪ್ರಭುವೇ ಈ ಪಾಪಕ್ಕೆ ನಾಶಕವಾದ ಪ್ರಾಯಶ್ಚಿತ್ತವನ್ನು ಹೇಳು ಎಂದು ಕೇಳಲು ಬ್ರಹ್ಮನು ವಸಿಷ್ಠ ಕಶ್ಯಪ ಇವರೊಡನೆ ಕೂಡಿ ಇಂದ್ರನನ್ನು ಕುರಿತು ಎಲ್ಲಾ ಜಗತ್ತಿಗೂ ವಿಶೇಷವಾಗಿ ಇಂದ್ರನಿಗೂ ಸಹ ಶಂಖಚಕ್ರಗದಾಧಾರಿಯಾದ ಮಾಧವನೇ

ಶಂಖಚಕ್ರಗದಾಪಾಣಿಃ ಮಾಧವಃ ಪುರುಷೋತ್ತಮಃ ।
ತಂ ಪ್ರಪದ್ಯಸ್ವ ಶರಣಂ ಸ ತೇ ಸರ್ವಂ ವಿಧಾಸ್ಯತಿ ॥ ೧೧ ॥

ಸಹಸ್ರಾಕ್ಷೋಽಪಿ ವಚನಂ ಗುರೂಣಾಂ ಸನ್ನಿಶಮ್ಯ ವೈ ।
ಪ್ರೋವಾಚ *ಸ್ವಲ್ಪಕಾಲೇನ ಕಶ್ಚಿದ್ದೃಷ್ಟೋ ಮಹೋದಯಃ ॥ ೧೨ ॥

ಇತ್ಯೇವಮುಕ್ತ್ವಃ ಸುರರಾಡ್ವಿರಿಂಚಿನಾ
ಮರೀಚಿಪುತ್ರೇಣ ಚ ಕಾಶ್ಯಪೇನ ।
ತಥೈವ ಮಿತ್ರಾವರುಣಾತ್ಮಜೇನ
ವೇಗಾನ್ಮಹೀಪೃಷ್ಠಮವಾಪ್ಯ ತಸ್ಥೌ ॥ ೧೩ ॥

ಕಾಲಂಜರಸ್ಯೋತ್ತರತಃ ಸುಪುಣ್ಯ
ಸ್ತಥಾ ಹಿಮಾದ್ರೇರಪಿ ದಕ್ಷಿಣಸ್ಥಃ ।
ಕುಶಸ್ಥಲಾತ್ಪೂರ್ವತ ಏವ ವಿಶ್ರುತೋ
ವಸೋಃ ಪುರಾತ್ಪಶ್ಚಿಮತೋಽನತಸ್ಥೌ ॥ ೧೪ ॥

ಪುರುಷೋತ್ತಮನಾಗಿ ಪ್ರಭುವಾಗಿರುವನು. ಅವನಲ್ಲೇ ನೀನು ಶರಣಾಗತನಾಗು. ಅವನು ನಿನ್ನ ಅಭಿಮತವನ್ನೆಲ್ಲಾ ನಡಿಸಿಕೊಡುವನು ಎಂದು ಉತ್ತರವಿತ್ತನು. ಇಂದ್ರನೂ ಸಹ ಗುರುಜನಗಳ ಈ ಮಾತನ್ನು ಕೇಳಿ ಹಾಗಾದರೆ ಸ್ವಲ್ಪಕಾಲದಲ್ಲೇ ನನಗೆ ಪಾಪವಿಮೋಚನೆಯಿಂದ ಅಭ್ಯುದಯವು ಬಂದಂತೆಯೇ ಆಯಿತು ಎಂದನು.

೧೩-೧೪. ಈ ರೀತಿ ಬ್ರಹ್ಮನಿಂದಲೂ ಮರೀಚಿಪುತ್ರರಾದ ಕಾಶ್ಯಪರಿಂದಲೂ ವಸಿಷ್ಠರಿಂದಲೂ ಹೇಳಲ್ಪಟ್ಟ ಇಂದ್ರನು ಅವರ ಮಾತಿನಂತೆ ವೇಗದಿಂದ ಭೂಮಿಯ ಬೆನ್ನಿನಂತಿರುವ ಒಂದು ಪುಣ್ಯಕ್ಷೇತ್ರಕ್ಕೆ ಹೊರಟನು. ಕಾಲಂಜರದೇಶಕ್ಕೆ ಉತ್ತರದಲ್ಲೂ ಹಿಮವತ್ಪರ್ವತಕ್ಕೆ ದಕ್ಷಿಣದಲ್ಲೂ ಕುಶಸ್ಥಲಕ್ಕೆ ಪೂರ್ವದಲ್ಲೂ ವಸುಪುರಕ್ಕೆ ಪಶ್ಚಿಮದಲ್ಲೂ ಇರುವ ಪುಣ್ಯಕ್ಷೇತ್ರಕ್ಕೆ ಹೋಗಿ ನಿಂತನು.

---

* ಇಲ್ಲಿ ಬಹುಧನಾಯಾಸಗಳಿಂದಲೂ ಕಾಲವಿಲಂಬದಿಂದಲೂ ಆಚರಿಸಲ್ಪಡಬಹುದಾದ ವಿಧಿವಿಹಿತ ಪ್ರಾಯಶ್ಚಿತ್ತ ಕರ್ಮಗಳಿಗಿಂತಲೂ ಪ್ರಪತ್ತಿ ಎಂಬ ಲಘೂಪಾಯದಲ್ಲಿ ಪ್ರವೃತ್ತನಾದ ಅಧಿಕಾರಿಗೆ ಸರ್ವೇಶ್ವರನ ಪ್ರಪತ್ತಿಯು ಅಲ್ಪಕಾಲದಲ್ಲಿಯೇ ಅಭಿಮತವಾದ ಸರ್ವಪುರುಷಾರ್ಥಗಳನ್ನೂ ಉಂಟು ಮಾಡುತ್ತದೆ ಎಂಬ ಪ್ರಪತ್ತಿ ಮಾಹಾತ್ಮ್ಯವು ಇಂದ್ರನ ವಚನದಿಂದಲೇ ಸೂಚಿಸಲ್ಪಟ್ಟಿದೆ.

ಪೂರ್ವಂ ಗಯೇನ ಕ್ಷಿತಿಪೇನ ಯತ್ರ
ಇಷ್ಟೋಽಶ್ವಮೇಧಃ ಶತಶಃ ಸುದಕ್ಷಿಣಃ ।
ಮನುಷ್ಯಮೇಧೋಽಪಿ ಸಹಸ್ರಕೃತ್ವ
ಸ್ತಥಾ ಪುರಾ ದುರ್ಜಯನಃ ಸುರಾರಿಭಿಃ ॥ ೧೫ ॥

ಖ್ಯಾತೋ ಮಹಾಮೇಧ ಇತಿ ಪ್ರಸಿದ್ಧೋ
ಯಥಾಸ್ಯ ಚಕ್ರೇ ಭಗವಾನ್ ಮುರಾರಿಃ ।
ದ್ವಾಸ್ಥತ್ವಮವ್ಯಕ್ತತನುಃ ಸುಮೂರ್ತಿಃ
ಖ್ಯಾತಿಂ ಜಗಾಮಾಥ ಗದಾಧರೇತಿ । ॥ ೧೬ ॥

ಯಸ್ಮಿನ್ ದ್ವಿಜೇಂದ್ರಾಃ ಶ್ರುತಿಶಾಸ್ತ್ರವರ್ಜಿತಾಃ
ಸಮತ್ವಮಾಯಾಂತಿ ಪಿತಾಮಹೇನ ।
ಯಸ್ಮಿನ್ ಭಕ್ತ್ಯಾ ಪೂಜಯನ್ ಯೋಽಪಿತೄರ್
ಸ್ವಾನ್ ತೇನನ್ಯಭಾವೇನ ಸಕೃತ್ತು ಚೇತಸಾ
ಫಲಂ ಮಹಾಮೇಧಮುಖಸ್ಯ ಮಾನವಾ
ದಧತ್ಯನಂತಂ ಭಗವತ್ಪ್ರಸಾದಾತ್ ॥ ೧೭ ॥

---

೧೫. ಆ ಕ್ಷೇತ್ರದಲ್ಲಿಯೇ ಪೂರ್ವದಲ್ಲಿ ಗಯನೆಂಬ ಧೊರೆಯು ಬಹುದಕ್ಷಿಣೆಯುಳ್ಳ ಅಶ್ವಮೇಧವನ್ನು ಅನೇಕಾವರ್ತಿಮಾಡಿದ್ದನು. ದುರ್ಜಯನನೆಂಬುವನೂ ದಾನವರೊಡನೆ ಅನೇಕಾವರ್ತಿ ಮನುಷ್ಯಮೇಧವನ್ನೂ ಮಾಡಿದ್ದನು.

೧೬. ಆ ಮನುಷ್ಯಮೇಧವೂ ಮಹಾಮೇಧವೆಂದು ಪ್ರಸಿದ್ಧಿಹೊಂದಿತು. ಪೂಜ್ಯನಾದ ಮುರಾರಿಯು ಅವ್ಯಕ್ತಮೂರ್ತಿಯಾಗಿ ನಿಂತು ದುರ್ಜಯನನಿಗೆ ದ್ವಾರಪಾಲಪದವಿಯನ್ನಿತ್ತು ಗದಾಧರನೆಂದು ಪ್ರಸಿದ್ಧಿಹೊಂದಿದನು.

೧೭-೧೮. ಯಾವ ಆ ಕ್ಷೇತ್ರದಲ್ಲಿ ಬ್ರಾಹ್ಮಣೋತ್ತಮರು ಶ್ರುತಿ ಶಾಸ್ತ್ರಗಳನ್ನು ಬಿಟ್ಟಿದ್ದರೂ ಕ್ಷೇತ್ರಮಾಹಾತ್ಮ್ಯದಿಂದ ಬ್ರಹ್ಮನಿಗೆ ಸಮಾನರೇ ಆಗುತ್ತಾರೆಯೋ ಯಾವ ಕ್ಷೇತ್ರದಲ್ಲಿ ಪಿತೃಗಳನ್ನು ಏಕಮನಸ್ಕತೆಯಿಂದ ಪೂಜಿಸಿದವರು ಭಗವದನು

ಮಹಾನದೀ ಯತ್ರ ಸುರರ್ಷಿಕನ್ಯಾ ।
ಜಲಾಪದೇಶಾದ್ಧಿಮಶೈಲಮೇತ್ಯ
ಚಕ್ರೇ ಜಗತ್ಪಾಪವಿಮುಕ್ತಮಗ್ರ್ಯಾ
ಸಂದರ್ಶನಪ್ರಾಶನಮಜ್ಜನೇನ ॥ ೧೮ ॥

ತತ್ರ ಶಕ್ರಃ ಸಮಭ್ಯೇತ್ಯ ಮಹಾನದ್ಯಾಸ್ತಟೇಽದ್ಭುತೇ ।
ಆರಾಧನಾಯದೇವಸ್ಯ ಕೃತ್ವಾಶ್ರಮಮುಪಸ್ಥಿತಃ ॥ ೧೯ ॥

ಪ್ರಾತಃ ಸ್ನಾಯೀತ್ವಧಃಶಾಯೀ ಏಕಭುಕ್ತ್ಯೇಪ್ಯಯಾಚಿತಃ ।
ತಪಸ್ತೇಪೇ ಸಹಸ್ರಾಕ್ಷಃ ಸ್ತುವರ್ನ್ ದೇವಂ ಗದಾಧರಂ ॥ ೨೦ ॥

ತಸ್ಯೈವಂ ತಪ್ಯತಃ ಸಮ್ಯಕ್ ಜಿತಸರ್ವೇಂದ್ರಿಯಸ್ಯ ತು ।
ಕಾಮಕ್ರೋಧವಿಹೀನಸ್ಯ ಸಾಗ್ರಃ ಸಂವತ್ಸರೋಗತಃ ॥ ೨೧ ॥

ತತೋಗದಾಧರಃ ಪ್ರೀತೋವಾಸವಂ ಪ್ರಾಹ ನಾರದ ।
ಗಚ್ಛ ಪ್ರೀತೋಸ್ಮಿ ಭವತೋ ಮುಕ್ತಪಾಪೋಽಸಿ ಸಾಂಪ್ರತಂ ॥ ೨೨ ॥

ಗ್ರುವದಿಂದ ಮಹಾಮೇಧವೆಂಬ ಯಜ್ಞದ ಫಲವನ್ನೇ ಹೊಂದುತ್ತಾರೆಯೋ ಯಾವ ಆ ಕ್ಷೇತ್ರದಲ್ಲಿ ಸುರರ್ಷಿಪುತ್ರಿಯಾದ ಮಹಾನದಿಯು ಜಲವ್ಯಾಜದಿಂದ ಹಿಮವತ್ಪರ್ವತವನ್ನು ಹೊಂದಿ ದರ್ಶನ ಮತ್ತು ಪಾನ ಮತ್ತು ಸ್ನಾನಗಳಿಂದ ಜಗತ್ತನ್ನೇ ಪಾಪರಹಿತವನ್ನಾಗಿ ಮಾಡಿದಳೋ

೧೯-೨೨. ಅಂತಹ ಪುಣ್ಯಕ್ಷೇತ್ರಕ್ಕೆ ಹೋಗಿ ಇಂದ್ರನು ಆಶ್ಚರ್ಯಕರವಾದ ಆ ಮಹಾನದಿಯ ದಡದಲ್ಲಿ ಆಶ್ರಮವನ್ನು ಮಾಡಿಕೊಂಡು ಮಹಾವಿಷ್ಣುವಿನ ಆರಾಧನೆಗಾಗಿ ನಿಂತನು. ಅಲ್ಲಿ ಗದಾಧರನಾದ ವಿಷ್ಣುವನ್ನು ಸ್ತೋತ್ರಮಾಡುತ್ತಾ ಪ್ರಾತಃಕಾಲದಲ್ಲಿ ಸ್ನಾನಮಾಡುವುದು, ನೆಲದಲ್ಲಿಯೇ ಮಲಗುವುದು, ಏಕಭುಕ್ತನಾಗಿರುವುದು, ಯಾಚಿಸದಿರುವುದು ಇಂತಹ ನಿಯಮಗಳೊಡನೆ ತಪಸ್ಸನ್ನು ಮಾಡತೊಡಗಿದನು. ಹೀಗೆ ಕಠಿಣವಾದ ತಪಸ್ಸಿನಲ್ಲಿ ನಿರತನಾಗಿ ಸರ್ವೇಂದ್ರಿಯನಿಗ್ರಹಹೊಂದಿ ಕಾಮಕ್ರೋಧರಹಿತನಾಗಿರುವ ಆ ಇಂದ್ರನಿಗೆ ತಪಸ್ಸಿನಲ್ಲಿಯೇ ಪೂರ್ಣವಾದ ಸಂವತ್ಸರವೇ ಕಳೆಯಿತು. ಅನಂತರ ಗದಾಧರನಾದ ವಿಷ್ಣುವು ಸಂತುಷ್ಟನಾಗಿ ಇಂದ್ರನನ್ನು ಕುರಿತು ಇನ್ನು ನಿನ್ನ ತಪಸ್ಸು ಸಾಕು, ನಾನು ಸಂತುಷ್ಟನಾಗಿದ್ದೇನೆ, ಈಗ ನಿನಗೆ ಪಾಪವಿಮೋಚನೆಯಾಗಿದೆ ಹೋಗು ಎಂದನು.

ನಿಜಂ ರಾಜ್ಯಂ ಚ ದೇವೇಶ ಪ್ರಾಪ್ಸ್ಯಸೆ ನ ಚಿರಾದಿವ ।
ಯತಿಷ್ಯಾಮಿ ತಥಾ ಶಕ್ರ ಭಾವಿಶ್ರೇಯೋ ಯಥಾ ತವ ॥ ೨೩ ॥

ಇತ್ಯೇವಮುಕ್ತೇನ ಗದಾಧರೇಣ ವಿಸರ್ಜಿತಃ
ಸ್ನಾತಿ ಮನೋಹರಾಯಾಂ ।
ಸ್ನಾತಸ್ಯ ದೇವಸ್ಯ ತದೈನಸೋ ನರಾಸ್ತಂ
ಪ್ರೋಚುರಸ್ಮಾನನುಶಾಸಯಸ್ವ ॥ ೨೪ ॥

ಪ್ರೋವಾಚ ತಾನ್ ಭೀಷಣಕರ್ಮಕಾರಾ ನ್ನಾಮ್ನಾ
ಪುಲಿಂದಾನ್ಮಮ ಪಾಪಸಂಭವಾಃ ।
ವಸಧ್ವ ಮೇವಾಂತರಮದ್ರಿಮುಖ್ಯಯೋ
ರ್ಹಿಮಾದ್ರಿಕಾಲಿಂಜರಯೋಃ ಪುಲಿಂದಾಃ ॥ ೨೫ ॥

ಇತ್ಯೇವಮುಕ್ತ್ವಾ ಸುರರಾಟ್ ಪುಲಿಂದಾನ್
ವಿಮುಕ್ತಪಾಪೋಽಮರಸಿದ್ಧಯಕ್ಷೈಃ ।
ಸಂಪೂಜ್ಯಮಾನೋ ನುಜಗಾಮ ಚಾಶ್ರಮಂ
ಮಾತುಸ್ತದಾ ಧರ್ಮನಿವಾಸಮಾಢ್ಯಂ ॥ ೨೬ ॥

೨೩-೨೪. ದೇವರಾಜನೇ, ನಿನ್ನ ರಾಜ್ಯವನ್ನೂ ಸಹ ನೀನು ಶೀಘ್ರದಲ್ಲಿಯೇ ಹೊಂದುವೆ, ನಿನಗೆ ಮುಂದೆ ಶ್ರೇಯಸ್ಸುಂಟಾಗುವಂತೆ ನಾನು ಪ್ರಯತ್ನಮಾಡುತ್ತೇನೆ. ಹೀಗೆ ಗದಾಧರನಾದ ಮಹಾವಿಷ್ಣುವಿನಿಂದ ಅನುಗ್ರಹಿಸಲ್ಪಟ್ಟ ಇಂದ್ರನು ಮನೋಹರವಾದ ಆ ನದಿಯಲ್ಲಿ ಸ್ನಾನಮಾಡಲು ಹೋದನು. ಸ್ನಾನಮಾಡಿದೊಡನೆಯೇ ತನ್ನಿಂದ ಹೊರಗೆ ಹೊರಟ ಪಾಪಗಳು ಮನುಷ್ಯರೂಪವನ್ನು ಹೊಂದಿ ಸ್ವಾಮಿಯೇ, ನಮಗೆ ಏನು ಅಪ್ಪಣೆ ಎಂದು ಕೇಳಿಕೊಂಡವು.

೨೫. ಆಗ ಇಂದ್ರನು ಭಯಂಕರವಾದ ಆಕಾರವುಳ್ಳ ಪುಲಿಂದರೆಂಬ ಅಭಿಧಾನದಿಂದ ಬಂದು ನಿಂತಿರುವ ಆ ಪಾಪಿಮನುಷ್ಯರನ್ನು ಕುರಿತು ನನ್ನ ಪಾಪದಿಂದುದ್ಭವಿಸಿದ ನರರೇ, ನೀವು ಈ ಹಿಮಾದ್ರಿ ಮತ್ತು ಕಾಲಿಂಜರಪರ್ವತದ ಮಧ್ಯದಲ್ಲಿ ಪುಲಿಂದರೆಂಬ ಹೆಸರಿನಿಂದ ವಾಸಮಾಡಿಕೊಂಡಿರಿ ಎಂದು ಅಪ್ಪಣೆಮಾಡಿದನು.

೨೬-೨೭. ಈರೀತಿ ಆ ಪುಳಿಂದರಿಗೆ ಅಪ್ಪಣೆಮಾಡಿ ಇಂದ್ರನು ಪಾಪವಿಮೋಚನ ಹೊಂದಿ ಅಮರರಿಂದಲೂ ಸಿದ್ಧಯಕ್ಷಾದಿಗಳಿಂದಲೂ ಪೂಜಿಸಲ್ಪಡುತ್ತಾ ತಾಯಿಯಾದ

ದೃಷ್ಟ್ವಾದಿತಿಂ ಮೂರ್ಧ್ನಿಕೃತಾಂಜಲಿಸ್ತು
ವಿನಮ್ರಮೌಲಿಃ ಸಮುಪಾಜಗಾಮ ।
ಪ್ರಣಮ್ಯ ಪಾದೌ ಕಮಲೋದರಾಭೌ
ನಿವೇದಯಾಮಾಸ ತದಾ ತದಾತ್ಮನಃ ॥ ೨೭ ॥

ಪಪ್ರಚ್ಛ ಸಾ ಕಾರಣಮೀಶ್ವರಂ ತ
ಮಾಘ್ರಾಯ ಚಾಲಿಂಗ್ಯ ಮುದಾ ಸುದೃಷ್ಟ್ಯಾ ।
ವಕ್ಷ್ಯೇ ಸುರಾಣಾಂ ಸ ಬಲೇಃ ಪರಾಜಯಂ
ತದಾತ್ಮನೋ ದೇವಗಣೈಶ್ಚ ಸಾರ್ಧಂ ॥ ೨೮ ॥

ಶ್ರುತ್ವೈವ ಸಾ ಶೋಕಪರಿಪ್ಲುತಾಂಗೀ
ಜ್ಞಾತ್ವಾ ಜಿತಂ ದೈತ್ಯಸುತೈಃ ಸುತಂ ತಂ ।
ದುಃಖಾನ್ವಿತಾ ದೇವಮನಾದ್ಯಮೀಡ್ಯಂ
ಜಗಾಮ ವಿಷ್ಣುಂ ಶರಣಂ ವರೇಣ್ಯಂ ॥ ೨೯ ॥

ದಿತಿಯ ಧರ್ಮಾವಾಸವಾದ ಆಶ್ರಮಕ್ಕೆ ಹೊರಟನು. ಅಲ್ಲಿ ದಿತಿಯನ್ನು ನೋಡಿ ಅಂಜಲಿಬಂಧಪೂರ್ವಕವಾಗಿ ಅವಳ ಪಾದಗಳಿಗೆ ಶಿರಬಾಗಿ ಸಾಷ್ಟಾಂಗಪ್ರಣಾಮಮಾಡಿ ತನ್ನ ವೃತ್ತಾಂತವನ್ನೆಲ್ಲಾ ಅವಳಲ್ಲಿ ಬಿನ್ನವಿಸಿದನು.

೨೮. ಆ ದಿತಿಯೂ ಸಹ ಇಂದ್ರನನ್ನು ಪ್ರೀತಿಪೂರ್ವಕವಾದ ಕಟಾಕ್ಷದಿಂದ ನೋಡಿ ಅವನನ್ನು ಆಲಿಂಗಿಸಿ ಆಘ್ರಾಣಮಾಡಿ ಅವನ ದುಃಖಕ್ಕೆ ಕಾರಣವನ್ನು ಕೇಳಿದಳು. ಆಗ ಇಂದ್ರನು ಬಲಿಯಿಂದ ದೇವತೆಗಳಿಗೆ ಉಂಟಾದ ಪರಾಜಯವನ್ನೂ ದೇವತೆಗಳೊಡನೆ ತಾನು ಬ್ರಹ್ಮಲೋಕದಲ್ಲಿದ್ದುದನ್ನೂ ಅವಳಲ್ಲಿ ಅರಿಕೆ ಮಾಡಿದನು.

೨೯. ಅನಂತರ ದಿತಿಯು ಇಂದ್ರನ ದುರವಸ್ಥೆಯನ್ನು ಕೇಳಿ ಬಹಳ ದುಃಖ ಪಟ್ಟು ಪುತ್ರನಾದ ಇಂದ್ರನು ದೈತ್ಯರಿಂದ ಪರಾಜಿತನಾದುದನ್ನು ತಿಳಿದು ಅನಾದಿಯಾಗಿಯೂ ಜಗದ್ವಂದ್ಯನಾಗಿಯೂ ಇರುವ ಮಹಾವಿಷ್ಣುವಿನಲ್ಲಿ ಶರಣಾಗತಳಾಗಿ ಬೇಡಿಕೊಂಡಳು.

ನಾರದ ಉವಾಚ

ಕಸ್ಮಿನ್ ಜನಿತ್ರೀ ಸುರಸತ್ತಮಾನಾಂ
ಸ್ಥಾನೆ ಹೃಷೀಕೇಶಮನಂತಮಾದ್ಯಂ ।
ಚರಾಚರಸ್ಯ ಪ್ರಭವಂ ಪ್ರಮಾಣ
ಮಾರಾಧಯಾಮಾಸ ಮುನೆ ವದಸ್ವ ॥ ೩೦ ॥

ಪುಲಸ್ತ್ಯ ಉವಾಚ

ಸುರಾರಣಿಃ ಶಕ್ರಮವೇಕ್ಷ್ಯ ದೀನಂ
ಪರಾಜಿತಂ ದಾನವನಾಯಕೇನ ।
ಸಿತೇಥ ಪಕ್ಷೆ ಮಕರರ್ಕ್ಷಗೇರ್ಕೆ
ಘೃತಾರ್ಚಿಷಸ್ಯಾದಥಸಪ್ತಮ್ಯೇಹನಿ ॥ ೩೧ ॥

ದೃಷ್ಟ್ವೈವ ದೇವಂ ತ್ರಿದಶಾಧಿಪಂ ತಂ
ಮಹೋದಯೆ ಶಕ್ರದಿಶಾಧಿರೂಢಂ ।
ನಿರಾಶನಾ ಸಂಯುತವಾಕ್ಸುಚಿತ್ತಾ
ತದೋಪತಸ್ಥೆ ಶರಣಂ ಸುರೇಂದ್ರಂ ॥ ೩೨ ॥

೩೦-೩೧. ಅನಂತರ ನಾರದರು ದೇವತೆಗಳಿಗೆ ತಾಯಿಯಾದ ದಿತಿಯು ಚರಾಚರಪ್ರಪಂಚಗಳಿಗೂ ಉತ್ಪಾದಕನಾದ ಸರ್ವಪ್ರಮಾಣಮೂರ್ಧನ್ಯನಾದ ಮಹಾವಿಷ್ಣುವನ್ನು ಯಾವ ಕಾಲದಲ್ಲಿ ಆರಾಧಿಸಿದಳು ಎಂದು ಮಧ್ಯೆಪ್ರಶ್ನೆಮಾಡಲು ಪುಲಸ್ತ್ಯರು ಹೇಳುತ್ತಾರೆ. ದೇವತೆಗಳೆಂಬ ಅಗ್ನಿಗೆ ಉತ್ಪಾದಕಳಾದ ಆ ದಿತಿಯು ದಾನವಪತಿಯಿಂದ ಪರಾಜಿತನಾದ ದೀನನಾದ ಇಂದ್ರನನ್ನು ನೋಡಿ ಘೃತಾರ್ಚಿ ಎಂಬ ಪರಬ್ರಹ್ಮತೇಜಸ್ಸಿಗೆ ಆಶ್ರಯನಾದ ಸೂರ್ಯನು ಮಕರರಾಶಿಯಲ್ಲಿರುವಾಗ ಶುಕ್ಲಪಕ್ಷದ ಸಪ್ತಮಿಯಲ್ಲಿ

೩೨-೩೪. ಮಹೋದಯ ಪರ್ವತದಲ್ಲಿ ಪೂರ್ವದಿಕ್ಕಿನಿಂದ ಆರೋಹಣ ಮಾಡಿದ ಸೂರ್ಯಮಂಡಲವಾಸಿಯಾದ ನಾರಾಯಣನನ್ನು ನೋಡಿ ಉಪವಾಸದಿಂದಿದ್ದು ಮನೋವಾಕ್ಕಾಯಗಳ ಸಂಯಮಹೊಂದಿ ಅವನಲ್ಲಿ ಶರಣಾಗತಳಾದಳು. ಆಗ ಆ

ಅದಿತಿರುವಾಚ

ಜಯಸ್ವ ದಿವ್ಯಾಂಬುಜಕೋಶಚೌರ
ಜಯಸ್ವ ಸಂಸಾರತರೋಃ ಕುಠಾರ ।
ಜಯಸ್ವ ಪಾಪೇಂಧನಜಾತವೇದ
ಅಘೌಘಸಂರೋಧ ನಮೋನಮಸ್ತೆ ॥ ೩೩ ॥

ನಮೋಽಸ್ತು ತೇ ಭಾಸ್ಕರದಿವ್ಯಮೂರ್ತೆ
ತ್ರೈಲೋಕ್ಯಲಕ್ಷ್ಮೀಪತಯೆ ನಮಸ್ತೆ ।
ತ್ವಂ ಕಾರಣಂ ಸರ್ವಚರಾಚರಸ್ಯ
ನಾಥೋಽಸಿ ಮಾಂ ಪಾಲಯ ವಿಶ್ವಮೂರ್ತೆ ॥ ೩೪ ॥

ತ್ವಯಾ ಜಗನ್ನಾಥ ಜಗನ್ಮಯೇನ ನಾಥೇನ
ಶಕ್ರೋ ನಿಜರಾಜ್ಯಹಾನಿಂ ।
ಅವಾಪ್ತವಾನ್ಶಕ್ರಪರಾಭವಂ ಚ
ತತೋ ಭವಂತಂ ಶರಣಂ ಪ್ರಪನ್ನಾ ॥ ೩೫ ॥

ಅದಿತಿಯು ಈ ರೀತಿ ಸ್ತೋತ್ರಮಾಡುತ್ತಾಳೆ. ದಿವ್ಯಕಮಲಕೋಶದಂತೆ ಸುಕುಮಾರ ಮೂರ್ತಿಯೇ ನೀನು ಜಯಶೀಲನಾಗು (ಸರ್ವೋತ್ಕೃಷ್ಟನಾಗಿರು) ಸಂಸಾರವೃಕ್ಷಕ್ಕೆ ಕೊಡಲಿಯಂತೆ ನಾಶಕನೇ ನೀನು ಜಯಶೀಲನಾಗು. ಪಾಪವೆಂಬ ಕಟ್ಟಿಗೆಗೆ ಅಗ್ನಿಯಂತೆ ದಾಹಕನೇ ನೀನು ಜಯಶೀಲನಾಗು. ಎಲ್ಲಾ ಪಾಪಗಳಿಗೂ ನಾಶಕನೇ ನಿನಗೆ ಅನಂತನಮಸ್ಕಾರಗಳು. ಸರ್ವವಸ್ತುಗಳಿಗೂ ಪ್ರಕಾಶಕನೇ ದಿವ್ಯಮೂರ್ತಿಯೇ ನಿನಗೆ ನಮಸ್ಕಾರಗಳು. ಎಲೈ ವಿಶ್ವಮೂರ್ತಿಯೇ ಎಲ್ಲಾಚರಾಚರಪ್ರಪಂಚಕ್ಕೂ ನೀನೇ ಕಾರಣನಾಗಿರುವೆ. ರಕ್ಷಕನೂ ಆಗಿರುವೆ. ನನ್ನನ್ನು ಕಾಪಾಡು.

೩೫. ಎಲೈ ಜಗನ್ನಾಥನೇ, ಜಗನ್ಮಯನಾಗಿಯೂ ಇಂದ್ರಾಂತರ್ಯಾಮಿಯಾಗಿಯೂ ನೀನು ಇದ್ದರೂ ಇಂದ್ರನು ತನ್ನ ರಾಜ್ಯಹಾನಿಯನ್ನು ಹೊಂದಿದ್ದಾನೆ, ಪರಾಜಯಕ್ಕೂ ಗುರಿಯಾಗಿದ್ದಾನೆ. ಆದುದರಿಂದ ಇಂದ್ರನ ರಾಜ್ಯಲಾಭವೆಂಬ ಫಲಕ್ಕಾಗಿ ನಾನು ನಿನ್ನಲ್ಲಿ ಶರಣಾಗತಳಾಗಿದ್ದೇನೆ.

ಇತ್ಯೇವಮುಕ್ತ್ವಾ ಸುರಪೂಜಿತೇನ
ಆಲಿಪ್ಯ ರಕ್ತೇನ ಹಿ ಚಂದನೇನ ।
ಸಂಪೂಜಯಿತ್ವಾ ಕರವೀರಪುಷ್ಪೈಃ
ಸಧೂಪದೀಪೈಃ ಖಲು ದಿವ್ಯಭೋಜ್ಯೈಃ ॥ ೩೬ ॥

ನೈವೇದ್ಯಕಂ ಚಾಜ್ಯಯುತಂ ಮಹಾರ್ಹ
ಮನ್ನಂ ಹ್ಯುಪೇಂದ್ರಸ್ಯ ಹಿತಾಯ ದೇವೀ ।
ಸ್ತವೇನ ಪುಣ್ಯೇನ ಚ ಸಂಸ್ತುವಂತೀ
ಸ್ಥಿತಾ ನಿರಾಹಾರಮಥೋಪವಾಸಂ ॥ ೩೭ ॥

ತತೋ ದ್ವಿತೀಯೇಽಹ್ನಿ ಕೃತಪ್ರಣಾಮಾ
ಸ್ನಾತ್ವಾ ವಿಧಾನೇನ ಚ ಪೂಜಯಿತ್ವಾ ।
ದತ್ವಾ ದ್ವಿಜೇಭ್ಯಃ ಕನಕಂ ತಿಲಾಜ್ಯಂ
ತತೋಽಗ್ರತಃ ಸಾ ಪ್ರಯತಾ ಬಭೂವ ॥ ೩೮ ॥

ತತಃ ಪ್ರೀತೋಽಭವದ್ಭಾನುಃ ಘೃತಾರ್ಚಿಃ *ಸೂರ್ಯಮಂಡಲಾತ್ ।
ವಿನಿಸ್ಸೃತ್ಯಾಗ್ರತಃ ಸ್ಥಿತ್ವಾ ಇದಂ ವಚನಮಬ್ರವೀತ್ ॥ ೩೯ ॥

೩೬-೩೭. ಹೀಗೆ ಸ್ತೋತ್ರಮಾಡಿ ದೇವತಾಶ್ಲಾಘ್ಯವಾದ ರಕ್ತಚಂದನದಿಂದ ಭಗವಂತನನ್ನು ಲೇಪಿಸಿ ಕಣಿಗಿಲೆ ಹೂವುಗಳಿಂದ ಪೂಜಿಸಿ ದಿವ್ಯವಾದ ಧೂಪದೀಪಗಳಿಂದಲೂ ಆಜ್ಯದಿಂದಕೂಡಿದ ಮಹಾರ್ಹವಾದ ಅನ್ನದ ನೈವೇದ್ಯದಿಂದಲೂ ಸತ್ಕರಿಸಿ ಪುಣ್ಯಕರವಾದ ಸ್ತೋತ್ರಗಳಿಂದ ಸ್ತುತಿಸುತ್ತಾ ನಿರಾಹಾರಳಾಗಿ ಕುಳಿತಳು.

೩೮-೩೯. ಅನಂತರ ಎರಡನೇಯ ದಿವಸದಲ್ಲಿಯೂ ಪ್ರಣಾಮಾದಿಗಳನ್ನು ಮಾಡಿ ಸ್ನಾನಮಾಡಿ ಯಥಾವಿಧಿಯಾಗಿ ಭಗವಂತನನ್ನು ಪೂಜಿಸಿ ಬ್ರಾಹ್ಮಣರಿಗೆ ಎಳ್ಳು, ಆಜ್ಯ ಇವನ್ನು ಸುವರ್ಣದೊಡನೆ ದಾನಮಾಡಿ ದೇವರ ಎದುರಿಗೆ ಶುಚಿಯಾಗಿ ಕುಳಿತಳು. ಅನಂತರ ಜಗದ್ಭಾಸಕನಾದ ಘೃತಾರ್ಚಿ ಎಂಬ ಹೆಸರಿನ ನಾರಾಯಣನು ಸೂರ್ಯಮಂಡಲದಿಂದ ಹೊರಟುಬಂದು ದಿತಿಯ ಎದುರಿಗೆ ನಿಂತು ಹೇಳಿದನು.

---

* ಸೂರ್ಯಮಂಡಲ, ಕ್ಷೀರಸಮುದ್ರ, ವೈಕುಂಠಲೋಕ ಈ ಮೂರೂ ಪರಮಾತ್ಮನ ಆಶ್ರಯಸ್ಥಾನಗಳೆಂದು ಶಾಸ್ತ್ರವಿದೆ.

ವ್ರತೇನಾನೇನ ಸುಪ್ರೀತಃ ತವಾಹಂ ದಕ್ಷನಂದಿನಿ ।
ಪ್ರಾಪ್ಸ್ಯಸೆ ದುರ್ಲಭಂ ಕಾಮಂ ಮತ್ಪ್ರಸಾದಾನ್ನಸಂಶಯಃ ॥ ೪೦ ॥

ರಾಜ್ಯಂ ತ್ವತ್ತನಯಾನಾಂ ವೈ ದಾಸ್ಯೆ ದೇವಿ ಸುರಾರಣಿ ।
ದಾನವಾರ್ ಧ್ವಂಸಯಿಷ್ಯಾಮಿ ಸಂಭೂಯೈವೋದರೆ ತವ ॥ ೪೧ ॥

ತದ್ವಾಕ್ಯಂ ವಾಸುದೇವಸ್ಯ ಶ್ರುತ್ವಾ ಬ್ರಹ್ಮರ್ ಸುರಾರಣಿಃ ।
ಪ್ರೋವಾಚ ಜಗತಾಂ ಯೋನಿಂ ವೇಪಮಾನಾ ಪುನಃಪುನಃ ॥ ೪೨ ॥

ಕಥಂ ತ್ವಾ ಮುದರೇಣಾಹಂ ವೋಢುಂ ಶಕ್ಷ್ಯಾಮಿ ದುರ್ಧರಂ ।
ಯಸ್ಯೋದರೆ ಜಗತ್ಸರ್ವಂ ವಸೇತ್ಸ್ಥಾವರಜಂಗಮಂ ॥ ೪೩ ॥

ಕಸ್ತ್ವಾಂ ಧಾರಯಿತುಂ ನಾಥ ಶಕ್ತಃ ತ್ರೈಲೋಕ್ಯಧಾರ್ಯಸಿ ।
ಯಸ್ಯ ಸಪ್ತಾರ್ಣವಾಃ ಕುಕ್ಷೌ ನಿವಸಂತಿ ಸಹಾದ್ರಿಭಿಃ ॥ ೪೪ ॥

---

೪೦. ಎಲೈ ದಕ್ಷಕನ್ಯೆಯೇ, ಈ ನಿನ್ನ ವ್ರತನಿಯಮದಿಂದ ನಾನು ಸಂತುಷ್ಟನಾಗಿರುತ್ತೇನೆ. ನನ್ನ ಅನುಗ್ರಹದಿಂದ ದುರ್ಲಭವಾದ ಮನೋರಥವನ್ನೂ ಸಹ ನೀನು ಹೊಂದುವೆ.

೪೧-೪೩. ಎಲೈ ಸುರಮಾತೆಯೇ, ತ್ರೈಲೋಕ್ಯ ರಾಜ್ಯವನ್ನು ನಿನ್ನ ಮಕ್ಕಳಿಗೆ ಕೊಡುತ್ತೇನೆ, ನಿನ್ನ ಉದರದಲ್ಲಿಯೇ ಜನಿಸಿ ದಾನವರನ್ನೆಲ್ಲಾ ಧ್ವಂಸ ಮಾಡುತ್ತೇನೆ ಭಯಪಡಬೇಡ ಎಂದನು. ವಾಸುದೇವನ ಆ ಮಾತನ್ನು ಕೇಳಿ ದಿತಿಯು ಪುನಃಪುನಃ ಭಯದಿಂದ ನಡುಗುತ್ತಾ ಜಗತ್ಕಾರಣನಾದ ಆ ಪರಮಾತ್ಮನನ್ನೇ ಕುರಿತು ಪೂಜ್ಯನೇ ಧರಿಸಲಶಕ್ಯನಾದ ನಿನ್ನನ್ನು ಉದರದಲ್ಲಿ ನಾನು ಹೇಗೆ ಧರಿಸಲಿ.

೪೪. ಯಾವ ನಿನ್ನ ಉದರದಲ್ಲಿ ಸ್ಥಾವರಜಂಗಮಾತ್ಮಕವಾದ ಜಗತ್ತೇ ನೆಲಸಿರುವುದೋ ಅಂತಹ ತ್ರಿಲೋಕಧಾರಿಯಾದ ನಿನ್ನನ್ನು ಯಾರು ತಾನೆ ಧರಿಸಲು ಸಮರ್ಥರಾದಾರು. ಯಾವ ನಿನ್ನ ಉದರದಲ್ಲಿ ಸಪ್ತಸಮುದ್ರಗಳೂ ಕುಲಪರ್ವತಗಳೊಡನೆ ವಾಸಮಾಡುತ್ತಿರುವುವೋ ಅಂತಹ ನಿನ್ನನ್ನು ಯಾರು ಧರಿಸಿಯಾರು.

ತಸ್ಮಾದ್ಯಥಾ ಸುರಪತಿಃ ಶಕ್ರಸ್ಸ್ಯಾತ್ ಸುರರಾಡಿಹ ।
ಯಥಾ ವೃಥಾ ನ ಮೇಕ್ಲೇಶಸ್ತಥಾ ಕುರು ಜನಾರ್ದನ ॥ ೪೫ ॥

ವಿಷ್ಣುರುವಾಚ

ಸತ್ಯಮೇತನ್ಮಹಾಭಾಗೆ ದುರ್ಧರೋಽಸ್ಮಿ ಸುರಾಸುರೈಃ ।
ತಥಾಪಿ ಸಂಭವಿಷ್ಯಾಮಿ ಹ್ಯಹಂ ದೇವ್ಯುದರೆ ತವ ॥ ೪೬ ॥

ಆತ್ಮಾನಂ ಭುವನಂ ಶೈಲಾಂ ಸ್ತ್ವಾಂ ಚ ದೇವಿ ಸಕಶ್ಯಪಾಂ ।
ಧಾರಯಿಷ್ಯಾಮಿ ಯೋಗೇನ ಮಾ ವಿಷಾದಂ ಕೃಥಾ ವೃಥಾ ॥ ೪೭ ॥

ತವೋದರೆಹ್ಯಹಂ ದಾಕ್ಷೆ ಸಂಭವಿಷ್ಯಾಮಿ ವೈ ಯದಾ ।
ತದಾ ನಿಸ್ತೇಜಸೋ ದೈತ್ಯಾಃ ಸಂಭವಿಷ್ಯಂತ್ಯಸಂಶಯಂ ॥ ೪೮ ॥

---

೪೫. ಆದುದರಿಂದ ಇಂದ್ರನೇ ಪುನಃ ಹೇಗೆ ಸುರಪತಿಯಾಗಬಹುದೋ ನನಗೆ ವ್ಯರ್ಥವಾದ ಈ ಕ್ಲೇಶವು ಹೇಗೆ ತಪ್ಪಬಹುದೋ ಆ ರೀತಿಯಲ್ಲಿ ನನ್ನ ಮನೋರಥವನ್ನು ಸಫಲಗೊಳಿಸುವ ಭಾವವೆಲ್ಲವೂ ಜನಾರ್ದನನ ಮೂರ್ತಿಯಾದ ನಿನಗೇ ಸೇರಿದುದು ಎಂದಳು.

೪೬-೪೭. ಆಗ ವಿಷ್ಣುವು ಭಾಗ್ಯಶಾಲಿನಿಯೇ ನೀನು ಹೇಳುವದೆಲ್ಲಾ ಸತ್ಯವಾದುದು. ಸುರಾಸುರರೂ ಸಹ ನನ್ನನ್ನು ಧರಿಸಲಾರರೆಂಬುದೂ ನಿಜವಾದದ್ದು ಆದರೂ ನಿನ್ನ ಉದರದಲ್ಲಿಯೇ ನಾನು ಹುಟ್ಟುವೆನು. ನನ್ನನ್ನೂ ನನ್ನನ್ನಾಶ್ರಯಿಸಿರುವ ಪ್ರಪಂಚ, ಪರ್ವತ ಮೊದಲಾದುವನ್ನೂ ಕಶ್ಯಪನೊಡಗೂಡಿರುವ ನಿನ್ನನ್ನೂ ಸಹ ಯೋಗಶಕ್ತಿಯಿಂದ ನಾನೇ ಧರಿಸುತ್ತೇನೆ. ಇದಕ್ಕಾಗಿ ವೃಥಾ ವಿಷಾದಪಡಬೇಡ.

೪೮-೪೯. ಎಲೈ ದಕ್ಷನಂದಿನಿಯೇ ನಿನ್ನ ಉದರದಲ್ಲಿ ನಾನು ಯಾವಾಗ ಉದಯಿಸುವೆನೋ ಆಗಲೇ ದೈತ್ಯರೆಲ್ಲರೂ ಸಿಸ್ತೇಜಸ್ಕರಾಗುತ್ತಾರೆ. ಇದರಲ್ಲಿ ಸಂದೇಹ

ಇತ್ಯೇವಮುಕ್ತ್ವಾ ಭಗವಾನ್ಸದೇವಸ್ತಸ್ಯಾಶ್ಚ
ಭೂಯೋರಿಗಣಪ್ರಮರ್ದೀ ।
ಸ್ವತೇಜಸಾಂಗೇಷು ವಿವೇಶ ದೇವ್ಯಾಸ್ತದೋದರೆ
ಶಕ್ರಹಿತಾಯ ವಿಪ್ರಾಂ ॥ ೪೯ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ದಿತಿವರಪ್ರದಾನಂ ನಾಮ ಷಟ್‌ಸಪ್ತತಿತಮೋಽಧ್ಯಾಯಃ.

ವಿಲ್ಲ. ಹೀಗೆಂದು ಹೇಳಿ ಆ ವಾಸುದೇವನು ಶತ್ರುಸಂಹಾರಕ್ಕಾಗಿ ಪುನಃ ಪ್ರಯತ್ನಿಸಿ ಇಂದ್ರನ ಹಿತಕ್ಕಾಗಿ ತನ್ನ ತೇಜಸ್ಸಿನಿಂದ ಬ್ರಾಹ್ಮಣಿಯಾದ ಆ ದಿತಿಯ ಅವಯವಗಳಲ್ಲಿಯೂ ಉದರದಲ್ಲಿಯೂ ಪ್ರವೇಶಿಸಿದನು.

ಇಲ್ಲಿಗೆ ಶ್ರೀ ವಾಮನಪುರಾಣದ ವಾಮನಪ್ರಾದುರ್ಭಾವದಲ್ಲಿ ದಿತಿಯ ವರಪ್ರದಾನವೆಂಬ ಎಪ್ಪತ್ತಾರನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಇಂದ್ರನು ತನ್ನ ರಾಜ್ಯವು ದಾನವರ ಕೈಸೇರಿದನಂತರ ಬ್ರಹ್ಮನನ್ನು ಕಂಡು ನಮಸ್ಕರಿಸಿ ಈ ವಿಚಾರವನ್ನು ಅರಿಕೆಮಾಡಲು ಅವನು ನಿನ್ನ ಕೃತ್ಯಕ್ಕೆ ಸರಿಯಾದ ಫಲವೇ ಆಯಿತೆಂದು ಪ್ರತ್ಯುತ್ತರ ಹೇಳಲು ಇಂದ್ರನು ತನ್ನ ಅಪರಾಧವೇನೆಂದು ಪ್ರಶ್ನೆಮಾಡಲು ಬ್ರಹ್ಮನ ಸಮೀಪದಲ್ಲಿದ್ದ ಕಶ್ಯಪರು ದಿತಿಯ ಉದರವನ್ನು ಪ್ರವೇಶಿಸಿ ಗರ್ಭಚ್ಛೇದಮಾಡಿದುದರಿಂದ ನಿನಗೆ ಭ್ರೂಣಹತ್ಯೆಯು ಬಂದಿದೆ ಎಂದು ಸಮರ್ಥಿಸಿದರೆಂದೂ ಅದಕ್ಕೆ ಪ್ರಾಯಶ್ಚಿತ್ತವೇನೆಂದು ಇಂದ್ರನು ಪುನಃ ಪ್ರಶ್ನೆಮಾಡಲು ಜಗತ್ಪ್ರಭುವಾದ ನಾರಾಯಣನನ್ನೆ ನೀನು ಆಶ್ರಯಿಸಬೇಕೆಂದು ಬ್ರಹ್ಮನೂ ಕಶ್ಯಪ ಮತ್ತು ವಸಿಷ್ಠರೂ ಉತ್ತರಕೊಟ್ಟಮೇಲೆ ಅವರ ಮಾತಿನಂತೆ ಇಂದ್ರನು ಹಿಮವತ್ಪರ್ವತದ ಸಮೀಪದಲ್ಲಿ ಮಹಾನದಿಯ ದಡದಲ್ಲಿ ಆಶ್ರಮವಾಸಿಯಾಗಿದ್ದು ಉಗ್ರತಪಸ್ಸನ್ನಾಚರಿಸಿದನೆಂದೂ ಆಗ ಮಹಾವಿಷ್ಣುವು ಪ್ರತ್ಯಕ್ಷನಾಗಿ ನಾನು ಸಂತುಷ್ಟನಾಗಿದ್ದೇನೆ. ನಿನ್ನ ತಪಸ್ಸು ಸಾಕು. ನಿನ್ನ ಪಾಪವು ಬಿಡುಗಡೆಯಾಗಿದೆ. ನಿನಗೆ ರಾಜ್ಯಲಾಭವುಂಟಾಗುವ ವಿಷಯದಲ್ಲಿ ಪ್ರಯತ್ನಿಸುತ್ತೇನೆ ಎಂದು ಅಪ್ಪಣೆಮಾಡಿದನೆಂದೂ ಅನಂತರ ಮಹಾನದಿಯಲ್ಲಿ ಸ್ನಾನಮಾಡಿದ ಇಂದ್ರನ ದೇಹದಿಂದ ಹೊರಕ್ಕೆ ಬಂದ ಆ ಪಾಪಗಳು ಪುಲಿಂದರಾಗಿ ಅವನ ಮಾತಿನಂತೆ ಅಲ್ಲಿಯೇ ನೆಲಸಿದವೆಂತಲೂ ಇಂದ್ರನು ನಿಷ್ಪಾಪನಾಗಿ ತಾಯಿಯಾದ ದಿತಿಯ ಆಶ್ರಮಕ್ಕೆ ಹೋಗಿ ಅವಳನ್ನು ವಂದಿಸಿ ತನ್ನ ವೃತ್ತಾಂತವನ್ನು ಅರಿಕೆಮಾಡಲು ದಿತಿಯು ಇಂದ್ರನಿಗೆ ಉಂಟಾದ ರಾಜ್ಯಭ್ರಂಶದಿಂದ ದುಃಖಪಟ್ಟು ಭಗವಂತನನ್ನು ನಿಯಮದಿಂದ ಪೂಜಿಸಿ ಮೊರೆಯಿಟ್ಟಳೆಂದೂ ಆಗ ಮಹಾವಿಷ್ಣುವು ಪ್ರತ್ಯಕ್ಷನಾಗಿ ಅವಳ ಉದರದಲ್ಲಿ ಜನಿಸಿ ಇಂದ್ರನಿಗೆ ರಾಜ್ಯಲಾಭವನ್ನೂ ದಾನವರ ನಾಶವನ್ನೂ ಉಂಟುಮಾಡುತ್ತೇನೆಂದು ಹೇಳಿ ದಿತಿಯ ಉದರದಲ್ಲಿ ಪ್ರವೇಶಿಸಿದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀ ವಾ ಮ ನ ಪು ರಾ ಣಂ

ಸಪ್ತಸಪ್ತತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ದೇವಮಾತುಃ ಸ್ಥಿತೇ ದೇವೇ ಉದರೇ ವಾಮನಾಕೃತೌ ।
ನಿಸ್ತೇಜಸೋಽಸುರಾ ಜಾತಾ ಯಥೋಕ್ತಂ ವಿಶ್ವಯೋನಿನಾ ॥ ೧ ॥

ನಿಸ್ತೇಜಸೋಽಸುರಾನ್ ದೃಷ್ಟ್ವಾ ಪ್ರಹ್ಲಾದಂ ದಾನವೇಶ್ವರಂ ।
ಬಲಿರ್ದಾನವಶಾರ್ದೂಲಂ ತ್ವಿದಂ ವಚನಮಬ್ರವೀತ್ ॥ ೨ ॥

ಬಲಿರುವಾಚ

ತಾತ ನಿಸ್ತೇಜಸೋ ದೈತ್ಯಾಃ ಕೇನ ಜಾತಾಸ್ತು ಹೇತುನಾ ।
ಕಥ್ಯತಾಂ ಪರಮಜ್ಞೋಽಸಿ ಶುಭಾಶುಭವಿಶಾರದ ॥ ೩ ॥

ಎಪ್ಪತ್ತೇಳನೆಯ ಅಧ್ಯಾಯವು

೧-೩. ವಾಮನಾಕಾರವನ್ನು ಹೊಂದಿ ಮಹಾವಿಷ್ಣುವು ದಿತಿಯ ಉದರವನ್ನು ಆಶ್ರಯಿಸಿದನಂತರ ಮೊದಲೇ ಅವನು ಅಪ್ಪಣೆಮಾಡಿದ್ದಂತೆ ದೈತ್ಯರೆಲ್ಲರೂ ನಿಸ್ತೇಜಸ್ಕರಾದರು. ಆಗ ಬಲಿಯು ದಾನವರ ತೇಜೋಹೀನತೆಯನ್ನು ನೋಡಿ ದಾನವ ಶ್ರೇಷ್ಠನಾದ ಪ್ರಹ್ಲಾದನನ್ನು ಕುರಿತು ತಾತ, ನೀನು ಮುಂದಿನ ಶುಭಾಶುಭಗಳನ್ನು ತಿಳಿದು ತತ್ವಜ್ಞನಾಗಿರುವೆ. ದೈತ್ಯರೆಲ್ಲರೂ ಏತಕ್ಕೆ ತೇಜೋಹೀನರಾಗಿರುವರು. ಇದಕ್ಕೆ ಕಾರಣವೇನು ದಯವಿಟ್ಟು ಹೇಳು ಎಂದು ಪ್ರಶ್ನೆ ಮಾಡಿದನು.

ಪುಲಸ್ತ್ಯ ಉವಾಚ

ತತ್ ಪೌತ್ರವಚನಂ ಶ್ರುತ್ವಾ ಮುಹೂರ್ತಂ ಧ್ಯಾನಮಾಸ್ಥಿತಃ ।
ಕಿಮರ್ಥಂ ತೇಜಸೋ ಹಾನಿರಿತಿ ಕಸ್ಮಾದತೀವ ವಾ ॥ ೪ ॥

ಸ ಜ್ಞಾತ್ವಾ ವಾಸುದೇವೋತ್ಥಂ ಭಯಂ ದೈತ್ಯೇಷ್ವನುತ್ತಮಂ ।
ಚಿಂತಯಾಮಾಸ ಯೋಗಾತ್ಮಾ ಕ್ವ ವಿಷ್ಣುಃ ಸಾಂಪ್ರತಂ ಸ್ಥಿತಃ ॥ ೫ ॥

ಅಧೋನಾಭೇಃ ಸ ಪಾತಾಲಾನ್ಸಪ್ತ ಸಂಚಿಂತ್ಯ ನಾರದ ।
ನಾಭೇರುಪರಿ ಭೂರಾದೀನ್ ಲೋಕಾಂಶ್ಚ ಕ್ರಮಶೋವಶೀ ॥ ೬ ॥

ಭೂಮಿಂ ತಾಂ ಪಂಕಜಾಕಾರಾಂ ತನ್ಮಧ್ಯೇ ಪಂಕಜಾಕೃತಿಂ ।
ಮೇರುಂ ದದರ್ಶ ಶೈಲೇಂದ್ರಂ ಶಾತಕುಂಭಂ ಮಹರ್ಧಿಮತ್ ॥ ೭ ॥

ತಸ್ಯೋಪರಿ ಮಹಾಪುರ್ಯಸ್ತ್ವಷ್ಟೌ ಲೋಕಪತೀಂಸ್ತಥಾ ।
ತೇಷಾಮುಪರಿ ವೈರಾಜಂ ದದೃಶೆ ಬ್ರಹ್ಮಣಃ ಪುರಂ ॥ ೮ ॥

೪-೫. ಪುಲಸ್ತ್ಯರು ಹೇಳುತ್ತಾರೆ:—ಪೌತ್ರನಾದ ಬಲಿಯ ಮಾತನ್ನು ಕೇಳಿ ಪ್ರಹ್ಲಾದನು ದೈತ್ಯರ ಈ ವಿಧವಾದ ಆಕಸ್ಮಿಕ ತೇಜೋಹಾನಿಗೆ ಹಾಗೂ ಅಧಿಕವಾದ ತೇಜೋಹಾನಿಗೆ ಕಾರಣವೇನೆಂದು ವಿಚಾರಮಾಡಿ ಮುಹೂರ್ತಕಾಲ ಧ್ಯಾನದಿಂದ ಇದ್ದು ವಾಸುದೇವನಿಂದಲೇ ದೈತ್ಯರಿಗೆ ಮಹಾಭಯವು ಸನ್ನಿಹಿತವಾಗಿದೆ ಎಂದು ಧ್ಯಾನದೃಷ್ಟಿಯಿಂದಲೇ ತಿಳಿದು ಆ ಮಹಾವಿಷ್ಣುವು ಈಗ ಎಲ್ಲಿರುವನು ಎಂಬುದನ್ನು ತಿಳಿಯಲು ಪುನಃ ಧ್ಯಾನಾರೂಢನಾಗಿ ಆಲೋಚಿಸತೊಡಗಿದನು.

೬-೭. ಆಗ ಪ್ರಹ್ಲಾದನು ಜಗದ್ರೂಪಿಯಾಗಿರುವ ವಿರಾಟ್ ಪುರುಷನ ನಾಭಿ ಪ್ರದೇಶಕ್ಕಿಂತ ಕೆಳಗಿರುವ ಏಳು ಪಾತಾಲಲೋಕಗಳನ್ನು ಧ್ಯಾನದಿಂದಲೇ ವಿಮರ್ಶಿಸಿದನು. ನಾಭಿಯ ಮೇಲ್ಭಾಗಕ್ಕೆ ಸೇರಿರುವ ಭೂ ಭುವಃ ಇತ್ಯಾದಿ ಲೋಕಗಳನ್ನೂ ಆಲೋಚಿಸಿದನು. ಕಮಲದಂತಿರುವ ಭೂಮಿಯನ್ನೂ ಅದರ ಮಧ್ಯದಲ್ಲಿ ಸ್ವರ್ಣಮಯವಾದ ಮಹಾಸಮೃದ್ಧಿಶಾಲಿಯಾದ ಕಮಲದಂತಿರುವ ಮೇರುಪರ್ವತವನ್ನೂ ಧ್ಯಾನದಿಂದ ಸಾಕ್ಷಾತ್ಕರಿಸಿದನು.

೮-೯. ಆ ಮೇರುಪರ್ವತದ ಮೇಲ್ಭಾಗದಲ್ಲಿ ನಿರ್ಮಿತವಾಗಿರುವ ಎಂಟು ಮಹಾನಗರಗಳನ್ನೂ ಅಲ್ಲಿರುವ ಲೋಕಪಾಲಕರನ್ನೂ ಆ ನಗರಗಳಿಗೂ ಮೇಲಿರುವ

ತದಧಸ್ತಾನ್ಮಹಾಪುಣ್ಯಮಾಶ್ರಮಂ ಸುರಪೂಜಿತಂ ।
ದೇವಮಾತುಃ ಸ ದದೃಶೆ ಮೃಗಪಕ್ಷಿಗಣಾವೃತಂ ॥ ೯ ॥

ತಾಂ ದೃಷ್ಟ್ವಾ ದೇವಜನನೀಂ ಸರ್ವತೇಜೋಧಿಕಾಂ ಮುನೆ ।
ವಿವೇಶ ದಾನವಪತಿರನ್ವೇಷ್ಟುಂ ಮಧುಸೂದನಂ ॥ ೧೦ ॥

ಸ ದೃಷ್ಟವಾನ್ ಜಗನ್ನಾಥಂ ಮಾಧವಂ ವಾಮನಾಕೃತಿಂ ।
ಸರ್ವಭೂತವರೇಣ್ಯಂ ತಂ ದೇವಮಾತುರಥೋದರೆ ॥ ೧೧ ॥

ತಂ ದೃಷ್ಟ್ವಾ ಪುಂಡರೀಕಾಕ್ಷಂ ಶಂಖಚಕ್ರವಿನಾಕೃತಂ ।
ಸುರಾಸುರಗಣೈಃ ಸರ್ವೈಃ ಸರ್ವತೋಽವ್ಯಾಪ್ತವಿಗ್ರಹಂ ॥ ೧೨ ॥

ತತಃ ತೇನೈವ ಯೋಗೇನ ದೃಷ್ಟ್ವಾ ವಾಮನತಾಂ ಗತಂ ।
ದೈತ್ಯತೇಜೋಪಹರಂ ವಿಷ್ಣುಂ ಪ್ರಕೃತಿಸ್ಥೋ ಭವತ್ತತಃ ॥ ೧೩ ॥

ವೈರಾಜವೆಂಬ ಬ್ರಹ್ಮಪುರವನ್ನೂ ನೋಡಿದನು. ಹಾಗೆಯೇ ಬ್ರಹ್ಮಪುರದ ಕೆಳಭಾಗದಲ್ಲಿ ದೇವತೆಗಳಿಂದ ಪೂಜಿಸಲ್ಪಟ್ಟು ಮೃಗಪಕ್ಷಿಗಳಿಂದಕೂಡಿ ರಮ್ಯವಾಗಿರುವ ದಿತಿಯ ಪುಣ್ಯಾಶ್ರಮವನ್ನೂ ನೋಡಿದನು.

೧೦-೧೧. ಆ ಆಶ್ರಮದಲ್ಲಿ ಬಹಳ ತೇಜಸ್ವಿಯಾಗಿ ಬೆಳಗುತ್ತಿದ್ದ ದೇವಜನನಿಯಾದ ದಿತಿಯನ್ನೂ ನೋಡಿ ಅಲ್ಲಿಯೇ ಮಧುಸೂದನನನ್ನು ಹುಡುಕಲು ಪ್ರಯತ್ನಿಸಿ ಆಶ್ರಮಕ್ಕೆ ಧ್ಯಾನದೃಷ್ಟಿಯಿಂದಲೇ ಪ್ರವೇಶಿಸಿದನು. ಅಲ್ಲಿ ದೇವಜನನಿಯಾದ ದಿತಿಯ ಉದರದಲ್ಲಿ ಸರ್ವಪ್ರಾಣಿಸಮಾಶ್ರಯಣೀಯನಾಗಿಯೂ ಜಗನ್ನಾಥನಾಗಿಯೂ ಇರುವ ಲಕ್ಷ್ಮೀಪತಿಯು ವಾಮನಮೂರ್ತಿಯಾಗಿ ನೆಲಸಿರುವುದನ್ನು ಕಂಡನು.

೧೨-೧೩. ಸುರಾಸುರರೆಲ್ಲರಿಂದಲೂ ಆಕ್ರಾಂತದೇಹನಾದ ಶಂಖಚಕ್ರರಹಿತನಾಗಿ ವಾಮನರೂಪದಲ್ಲಿರುವ ಆ ಪುಂಡರೀಕಾಕ್ಷನನ್ನು ನೋಡಿ ದೈತ್ಯರ ತೇಜೋನಾಶಕ್ಕಾಗಿ ಮಹಾವಿಷ್ಣುವೇ ವಾಮನಮೂರ್ತಿಯಾಗಿ ನೆಲಸಿರುವನೆಂದು ತಿಳಿದು ಯೋಗವನ್ನು ಬಿಟ್ಟು ಪೂರ್ವಾವಸ್ಥೆಯಲ್ಲಿ ನಿಂತನು. ಅನಂತರ ಬುದ್ಧಿಶಾಲಿಯಾದ ಆ ಪ್ರಹ್ಲಾದನು ಯೋಗದಿಂದ ಸಾಕ್ಷಾತ್ಕೃತನಾದ ಆ ಮಧುಸೂದನನನ್ನು ಭಕ್ತಿ

ಅಥೋವಾಚ ಮಹಾಬುದ್ಧಿರ್ವಿರೋಚನಸುತಂ ಬಲಿಂ ।
ಪ್ರಹ್ಲಾದೋ ಮಧುರಂ ವಾಕ್ಯಂ ಪ್ರಣಮ್ಯ ಮಧುಸೂದನಂ ॥ ೧೪ ॥

ಪ್ರಹ್ಲಾದ ಉವಾಚ

ಶ್ರೂಯತಾಂ ಸರ್ವಮಾಖ್ಯಾಸ್ಯೆ ಯತೋ ವೋ ಭಯಮಾಗತಂ ।
ಯೇನ ನಿಸ್ತೇಜಸೋ ದೈತ್ಯಾಃ ಜಾತಾ ದೈತ್ಯೇಂದ್ರ ಹೇತುನಾ ॥ ೧೫ ॥

ಭವತಾ ನಿರ್ಜಿತಾ ದೇವಾಃ ಸೇಂದ್ರರುದ್ರಾರ್ಕಪಾವಕಾಃ ।
ಪ್ರಯಾತಾಃ ಶರಣಂ ದೇವಂ ಹರಿಂ ತ್ರಿಭುವನೇಶ್ವರಂ ॥ ೧೬ ॥

ಸತೇಷಾಮಭಯಂ ದತ್ವಾ ಶಕ್ರಾದೀನಾಂ ಜಗದ್ಗುರುಃ ।
ಅವತೀರ್ಣೋಮಹಾಬಾಹುರುಷಿತ್ವಾ ಜಠರೆ ಹರಿಃ । ॥ ೧೭ ॥

ಹೃತಾನಿ ವಸ್ತೇನ ಬಲೆ ತೇಜಾಂಸೀತಿ ಮತಿರ್ಮಮ ।
ನಾಲಂ ತಮೋ ವಿಷಹಿತುಂ *ಶಕ್ರಂ ಸೂರ್ಯೋದಯಂ ಬಲೆ ॥ ೧೮ ॥

ಯಿಂದ ನಮಸ್ಕರಿಸಿ ವಿರೋಚನ ಪುತ್ರನಾದ ಬಲಿಯನ್ನು ಕುರಿತು ಮೃದುಮಧುರ ವಾಕ್ಯಗಳಿಂದ ಹೀಗೆ ಹೇಳಿದನು.

೧೫-೧೮. ಎಲೈ ದೈತ್ಯರಾಜನೇ, ಯಾರಿಂದ ನಿಮಗೆ ಭಯವುಂಟಾಗಿರುವುದೋ ಯಾವ ಕಾರಣದಿಂದ ತೇಜೋಹೀನರಾಗಿರುವಿರೋ ಎಲ್ಲವನ್ನೂ ಹೇಳುತ್ತೇನೆ ಕೇಳು. ನಿನ್ನಿಂದ ಇಂದ್ರ, ರುದ್ರ, ಸೂರ್ಯ, ಅಗ್ನಿ ಮೊದಲಾದ ದೇವತೆಗಳೆಲ್ಲರೂ ಜಯಿಸಲ್ಪಟ್ಟರಷ್ಟೆ, ಅವರೆಲ್ಲರೂ ತಮ್ಮ ಪರಾಭವನಿವೃತ್ತಿಗಾಗಿ ಲೋಕನಾಥನಾದ ಹರಿಯಲ್ಲಿ ಶರಣಾಗತರಾದರು. ಆಗ ದಯಾಮಯನಾದ ಆ ಜಗದ್ಗುರುವು ಇಂದ್ರಾದಿ ದೇವತೆಗಳಿಗೆ ಅಭಯಪ್ರದಾನವಂಮಾಡಿ ದಿತಿಯ ಜಠರದಲ್ಲಿ ಅವತರಿಸಿದ್ದಾನೆ. ನಿಮ್ಮ ತೇಜಸ್ಸೆಲ್ಲವೂ ಅವನ ಅವತಾರಮಾತ್ರದಿಂದಲೇ ಅಪಹರಿಸಲ್ಪಟ್ಟಿದೆ ಎಂದು ನನಗೆ ತೋರುತ್ತಿದೆ. ಸೂರ್ಯೋದಯವನ್ನೂ ತಡೆದು ಆಕ್ರಮಿಸಲು ಹಾಗೂ ಸಹಿಸಲು ಅಂಧಕಾರದಿಂದ ಸಾಧ್ಯವಿಲ್ಲವಷ್ಟೆ.

---

* ಇಲ್ಲಿ ಶಕ್ತಂ ಎಂದು ಪಾಠವಿರಬೇಕೆಂದು ತೋರುತ್ತಿದೆ.

ಪುಲಸ್ತ್ಯ ಉವಾಚ

ಪ್ರಹ್ಲಾದವಚನಂ ಶ್ರುತ್ವಾ ಕ್ರೋಧೇನ ಸ್ಫುರಿತಾಧರಃ ।
ಪ್ರಹ್ಲಾದಮಾಹ ಚ ಬಲಿಃ ಭಾವಿಕರ್ಮಪ್ರಚೋದಿತಃ ॥ ೧೯ ॥

ಬಲಿರುವಾಚ

ತಾತ ಕೋಽಯಂ ಹರಿರ್ನಾಮ ಯತೋ ನೋ ಭಯಮಾಗತಂ ।
ಸಂತಿ ಮೇ ಶತಶೋ ದೈತ್ಯಾ ವಾಸುದೇವಬಲಾಧಿಕಾಃ ॥ ೨೦ ॥

ಸಹಸ್ರಶೋಽಜಿತಾ ಯೈಸ್ತು ಸೇಂದ್ರರುದ್ರಾಗ್ನಿಮಾರುತಾಃ
ನಿರ್ಜಿತ್ಯ ತ್ಯಾಜಿತಾಃ ಸ್ವರ್ಗಂ ಭಗ್ನದರ್ಪಾ ರಣಾಜಿರೆ ॥ ೨೧ ॥

ಯೇನ ಸೂರ್ಯರಥಾದ್ವೇಗಾಚ್ಚಕ್ರಂ ಕೃಷ್ಟಂ ಮಹಾಜವಂ ।
ಸ ವಿಪ್ರಚಿತ್ತಿರ್ಬಲವಾನ್ಮಮ ಸೈನ್ಯಪುರಸ್ಸರಃ ॥ ೨೨ ॥

ಅಯಂ ಶುಕ್ಲಃ ಶಿಬಿಃ ಶಂಕುರಸಿಲೋಮಾ ವಿರೂಪದೃಕ್ ।
ತ್ರಿಶಿರಾ ಮಕರಾಕ್ಷಶ್ಚ ವೃಷಪರ್ವಾಸಿತೇಕ್ಷಣಃ ॥ ೨೩ ॥

೧೯-೨೦. ಪ್ರಹ್ಲಾದನ ಮಾತನ್ನು ಕೇಳಿ ಬಲಿಯು ಕೋಪದಿಂದ ತುಟಿಯನ್ನು ನಡುಗಿಸುತ್ತಾ ತನ್ನ ಭವಿಷ್ಯಕ್ಕೆ ಅನುಗುಣವಾಗಿ ಆ ಪ್ರಹ್ಲಾದನನ್ನು ಕುರಿತು ತಾತನೇ ನಮಗೆ ಇಷ್ಟುಮಟ್ಟಿಗೆ ಮಹಾಭಯವನ್ನೂ ಉಂಟುಮಾಡಿರುವ ಆ ಹರಿ ಎಂಬುವ ನಾರು, ಆ ಹರಿಗಿಂತಲೂ ನೂರರಷ್ಟು ಪರಾಕ್ರಮವನ್ನು ಹೊಂದಿ ಇಂದ್ರ, ರುದ್ರ, ಸೂರ್ಯ. ವಾಯು ಮೊದಲಾದ ದೇವತೆಗಳನ್ನು ಸಾವಿರಾರುಸಲ ಪರಾಜಯಗೊಳಿಸಿರುವ ವೀರರಾದ ದೈತ್ಯರು ನನ್ನ ವಶದಲ್ಲಿರುವರು, ನಮ್ಮೆಲ್ಲರನ್ನೂ ಜಯಿಸುವ ಸಾಮರ್ಥ್ಯವು ಅವನಿಗಿದೆಯೇ ?

೨೧-೨೪. ಈ ವೀರರಿಂದ ಜಯಿಸಲ್ಪಟ್ಟು ದೇವತೆಗಳೆಲ್ಲರೂ ಸ್ವರ್ಗದಿಂದ ಓಡಿಸಲ್ಪಟ್ಟರು. ಯಾವ ವೀರನು ಸೂರ್ಯರಥದಿಂದ ಮಹಾವೇಗವುಳ್ಳ ಚಕ್ರವನ್ನೂ ಕಿತ್ತೆಳೆದನೋ, ಆ ವಿಪ್ರಚಿತ್ತಿಯು ನಮ್ಮ ಸೈನ್ಯಕ್ಕೆ ಅಗ್ರೇಸರನಾಗಿರುವನು ಮತ್ತು ಶುಕ್ಲ, ಶಿಬಿ, ಶಂಕು, ಅಸಿಲೋಮಾ, ವಿರೂಪಾಕ್ಷ, ತ್ರಿಶಿರಾ, ಮಕರಾಕ್ಷ, ವೃಷಪರ್ವಾ, ಅಸಿತೇಕ್ಷಣ ಮೊದಲಾದವರೂ ಇನ್ನೂ ಇತರ ಭಟರೂ ನಾನಾವಿಧವಾದ ಶಸ್ತ್ರಾಸ್ತ್ರ

ಏತೆ ಚಾನ್ಯೇಚ ಬಲಿನೋ ನಾನಾಶಸ್ತ್ರವಿಶಾರದಾಃ ।
ಯೇಷಾ ಮೇ ಕೈಕಶೋ ವಿಷ್ಣುಃ ಕಲಾಂ ನಾರ್ಹತಿ ಷೋಡಶೀಂ ॥ ೨೪ ॥

ಪುಲಸ್ತ್ಯ ಉವಾಚ

ಪುತ್ರಸ್ಯೈತದ್ವಚಃ ಶ್ರುತ್ವಾ ಪ್ರಹ್ಲಾದಃ ಕ್ರೋಧಮೂರ್ಛಿತಃ ।
ಧಿಗ್ಧಿಗಿತ್ಯಾಹ ಸ ಬಲಿಂ ವೈಕುಂಠಾಕ್ಷೇಪವಾದಿನಂ ॥ ೨೫ ॥

ಧಿಕ್ತ್ವಾಂ ಪಾಪಸಮಾಚಾರ ದುಷ್ಟಬುದ್ಧೆ ಸುಬಾಲಿಶ ।
ಹರಿಂ ನಿಂದಯತೋ ಜಿಹ್ವಾ ಕಥಂ ನ ಪತಿತಾ ತವ ॥ ೨೬ ॥

ಶೋಚ್ಯಸ್ತ್ವಮಸಿ ದುರ್ಬುದ್ಧೆ ನಿಂದನೀಯಶ್ಚ ಸಾಧುಭಿಃ ।
ಯಸ್ತ್ರೈಲೋಕ್ಯಗುರುಂ ವಿಷ್ಣುಂ ಅಭಿನಿಂದಸಿ ದುರ್ಮತೆ ॥ ೨೭ ॥

ಶೋಚ್ಯಶ್ಚಾಪಿ ನ ಸಂದೇಹೋ ಯೇನ ಜಾತಃ ಪಿತಾ ತವ ।
ಯಸ್ಯ ತ್ವಂ ಕರ್ಕಶಃ ಪುತ್ರಃ ಜಾತೋ ದೇವಾವಮಾನಕೃತ್ ॥ ೨೮ ॥

ಭವಾನ್ ಕಿಲ ವಿಜಾನಾತಿ ಯಥಾಚಾಮೀ ಮಹಾಸುರಾಃ ।
ಯಥಾ ನಾನ್ಯಃ ಪ್ರಿಯಃ ಕಶ್ಚಿನ್ಮಮ ತಸ್ಮಾಜ್ಜನಾರ್ದನಾತ್ ॥ ೨೯ ॥

ನಿಪುಣರಾಗಿರುವರು. ಇವರ ಬಲದಲ್ಲಿ ಹದಿನಾರನೇ ಒಂದು ಭಾಗವನ್ನಾದರೂ ಆ ವಿಷ್ಣುವು ಹೊಂದಿರುವನೇ,

೨೫-೨೭. ಪುಲಸ್ತ್ಯರು ಹೇಳುತ್ತಾರೆ:—ಪುತ್ರನ ಈ ಮಾತನ್ನು ಕೇಳಿ ಪ್ರಹ್ಲಾದನು ಕೋಪದಿಂದ ಜ್ವಲಿಸುತ್ತಾ ವಿಷ್ಣುವನ್ನೂ ಆಕ್ಷೇಪಿಸಿದ ಆ ಬಲಿಯನ್ನು ಕುರಿತು ಛೀ ಛೀ ಎಂದು ಧಿಕ್ಕರಿಸಿ ಎಲೌ ಪಾಪಿಯೇ, ದುರ್ಬುದ್ಧಿಯೇ, ಮೂರ್ಖನೇ, ಹರಿಯನ್ನೂ ನಿಂದಿಸುತ್ತಿರುವ ನಿನ್ನ ನಾಲಗೆಯು ಏತಕ್ಕೆ ಇನ್ನೂ ಕೆಳಗೆ ಬೀಳಲಿಲ್ಲ ದುರ್ಬುದ್ಧಿಯಾದ ನೀನು ಶೋಚನೀಯನೂ ಸತ್ಪುರುಷರಿಂದ ನಿಂದ್ಯನೂ ಆಗಿದ್ದೀಯೆ ದುರ್ಬುದ್ಧಿಯಿಂದ ತ್ರಿಲೋಕಗುರುವಾದ ವಿಷ್ಣುವನ್ನೂ ನಿಂದಿಸುತ್ತಿರುವೆ.

೨೮-೩೦. ಮಹಾವಿಷ್ಣುವಿಗೂ ಅವಮಾನಮಾಡಿದ ಮೂರ್ಖನಾದ ನೀನು ಯಾವನಿಂದ ಪುತ್ರನಾಗಿ ಜನಿಸಿದೆಯೋ ಅಂತಹ ನಿನ್ನ ತಂದೆಯೂ ಮೂರ್ಖನಾದ ನಿನ್ನ ಈ ದುರಾಚಾರದಿಂದ ಶೋಚನೀಯನಾದನು. ಆ ಜನಾರ್ದನನಿಗಿಂತಲೂ ನನಗೆ ಪ್ರಿಯವಾದ ದೈವವಿಲ್ಲವೆಂಬುದನ್ನು ನೀನೂ ನಿನ್ನ ಅನುಯಾಯಿಗಳಾದ ಮಹಾ

ಜಾನನ್ನಪಿ ಪ್ರಿಯತರಂ ಮಮ ದೇವಂ ಜನಾರ್ದನಂ ।
ಸರ್ವೇಶ್ವರೇಶ್ವರಂ ದೇವಂ ಕಥಂ ನಿಂದಿತವಾನಸಿ ॥ ೩೦ ॥

ಗುರುಃ ಪೂಜ್ಯಃ ತತ್ರ ಪಿತಾ ಪೂಜ್ಯಸ್ತಸ್ಯಾಪ್ಯಹಂ ಗುರುಃ ।
ಮಮಾಪಿ ಪೂಜ್ಯೋ ಭಗವಾನ್ಗುರುರ್ಲೋಕಗುರುರ್ಹರಿಃ ॥ ೩೧ ॥

ಗುರೋಃ ಗುರುಗುರುಂ ಮೂಢ ಪೂಜ್ಯಂ ಪೂಜ್ಯತಮಸ್ಯ ಚ ।
ಪೂಜ್ಯಂ ನಿಂದಸಿ ಯತ್ಪಾಪ ಕಥಂ ನ ಪತಿತೋಽಸ್ಯಧಃ ॥ ೩೨ ॥

ಶೋಚನೀಯಾ ದುರಾಚಾರಾ ದಾನವಾಮೀ ಕೃತಾಸ್ತ್ವಯಾ ।
ಯೇಷಾಂ ತ್ವಂ ಕರ್ಕಶೋ ರಾಜಾ ವಾಸುದೇವವಿನಿಂದಕಃ ॥ ೩೩ ॥

ಯಸ್ಮಾತ್ಪೂಜ್ಯೋಽರ್ಚನೀಯಶ್ಚ ಭವತಾ ನಿಂದಿತೋ ಹರಿಃ ।
ತಸ್ಮಾತ್ಪಾಪಸಮಾಚಾರ ರಾಜ್ಯನಾಶಮವಾಪ್ನುಹಿ ॥ ೩೪ ॥

ಸುರರೂ. ತಿಳಿದಿರುತ್ತೀರಿ ಹೀಗೆ ತಿಳಿದಿದ್ದರೂ ಸರ್ವೇಶ್ವರನೂ ನನಗೆ ಅತ್ಯಂತ ಪ್ರಿಯನೂ ಆದ ಆ ಜನಾರ್ದನನನ್ನು ಹೇಗೆ ನಿಂದಿಸಿದೆ.

೩೧-೩೨. ಗುರವು ಪೂಜ್ಯನು ಅದರಲ್ಲಿಯೂ ತಂದೆಯು ಪೂಜ್ಯನು ಆ ನಿನ್ನ ತಂದೆಗೂ ನಾನು ಗುರುವಾದುದರಿಂದ ಪೂಜ್ಯನು ನನಗೂ ಆ ಲೋಕಗುರುವಾದ ಹರಿಯು ಪೂಜ್ಯನು. ಹೀಗಿರುವಾಗ ಗುರುವಿಗೂ ಗುರುವಾಗಿರುವುದರಿಂದ ಪೂಜ್ಯತಮನಾದ ನನ್ನನ್ನೂ ಅನಾದರಿಸಿ ನನಗೂ ಪೂಜ್ಯನಾದ ಜಗತ್ಪತಿಯನ್ನು ನನ್ನ ಎದುರಿಗೇ ನಿಂದಿಸುತ್ತಿರುವ ಮೂಢನಾದ ನೀನು ಇದುವರಿವಿಗೂ ಪತಿತನಾಗಿ ಏತಕ್ಕೆ ಅಧಃಪಾತಹೊಂದದಿರುವೆ.

೩೩-೩೪. ನೀನು ಮೂರ್ಖನಾಗಿಯೂ ವಾಸುದೇವನಿಂದಕನಾಗಿಯೂ ಆದುದರಿಂದ ಈ ದಾನವರೆಲ್ಲರನ್ನೂ ನೀನೇ ದುರಾಚಾರರನ್ನಾಗಿಯೂ ಶೋಚನೀಯರನ್ನಾಗಿಯೂ ಮಾಡಿದಂತಾಗಿದೆ. (ಯಥಾ ರಾಜಾ ತಥಾ ಪ್ರಜಾಃ ಎಂಬುವ ನ್ಯಾಯದಿಂದ ಎಂದು ತಾತ್ಪರ್ಯ) ಯಾವ ಕಾರಣದಿಂದ ಪೂಜನೀಯನಾಗಿಯೂ, ಆಶ್ರಣೀಯನಾಗಿಯೂ ಇರುವ ಹರಿಯನ್ನು ನಿಂದಿಸುತ್ತಿರುವೆಯೋ ಈ ಹರಿನಿಂದೆಗೆ ಫಲವಾಗಿ ನೀನು ರಾಜ್ಯಭ್ರಂಶವನ್ನು ಹೊಂದು.

ಯಥಾ ನಾನ್ಯತ್ಪ್ರಿಯತರಂ ವಿದ್ಯತೆ ಮಮ ಕೇಶವಾತ್ ।
ಮನಸಾ ಕರ್ಮಣಾ ವಾಚಾ ರಾಜ್ಯಭ್ರಷ್ಟಃ ತಥಾ ಪತ ॥ ೩೫ ॥

ಯಥಾ ನ ತಸ್ಮಾದಪರಂ ವ್ಯತಿರಿಕ್ತಂ ಹಿ ವಿದ್ಯತೆ ।
ಚತುರ್ದಶಸು ಲೋಕೇಷು ರಾಜ್ಯಭ್ರಷ್ಟಸ್ತಥಾ ಪತ ॥ ೩೬ ॥

ಸರ್ವೇಷಾಮಪಿ ಭೂತಾನಾಂ ನಾನ್ಯಲ್ಲೋಕೆ ಪರಾಯಣಂ ।
ಯಥಾ ತಥಾನುಪಶ್ಯೇಯಂ ಭವಂತಂ ರಾಜ್ಯವಿಚ್ಯುತಂ ॥ ೩೭ ॥

ಪುಲಸ್ತ್ಯ ಉವಾಚ

ಏವಮುಚ್ಚಾರಿತೆ ವಾಕ್ಯೆ ಬಲಿಃ ಸ ತ್ವರಿತಸ್ತದಾ ।
ಅವತೀರ್ಯಾಸನಾದ್ಬ್ರಹ್ಮನ್ ಕೃತಾಂಜಲಿಪುಟೋ ಬಲಿಃ ॥ ೩೮ ॥

ಶಿರಸಾ ಪ್ರಣಿಪತ್ಯಾಹ ಪ್ರಸಾದಂ ಕುರು ಮೆ ಗುರೋ ।
ಕೃತಾಪರಾಧಾನಪಿ ಹಿ ಕ್ಷಮಂತೆ ಗುರುವಃ ಶಿಶೂನ್ ॥ ೩೯ ॥

೩೫-೩೬. ನನಗೆ ಮನಸ್ಸಿನಿಂದಲೂ ಕರ್ಮಗಳಿಂದಲೂ ವಾಕ್ಕಿನಿಂದಲೂ ಆರಾಧ್ಯನಾದ ವಾಸುದೇವನಿಗಿಂತಲೂ ಪ್ರಿಯವಾದ ಮತ್ತೊಂದು ವಸ್ತುವಿಲ್ಲವೋ ಅಂತಹ ವಾಸುದೇವನಿಂದಕನಾದ ನೀನು ರಾಜ್ಯಭ್ರಷ್ಟನಾಗಿ ಪತನಹೊಂದು. ಚತುರ್ದಶಲೋಕಗಳಲ್ಲಿಯೂ ಯಾವ ವಾಸುದೇವನಿಗೆ ಸಮಾನವಾಗಿಯೂ ಅಧಿಕವಾಗಿಯೂ ಮತ್ತೊಂದು ವಸ್ತು ಇರುವುದಿಲ್ಲವೋ ಅಂತಹ ಸರ್ವೋತ್ಕೃಷ್ಟನಾದ ವಾಸುದೇವನಿಂದಕನಾದ ನೀನು ರಾಜ್ಯದಿಂದ ಭ್ರಷ್ಟನಾಗಿ ಪತನಹೊಂದು.

೩೭-೩೯. ಎಲ್ಲಾ ಪ್ರಾಣಿಗಳಿಗೂ ವಾಸುದೇವನಿಗಿಂತ ಬೇರೆ ಯಾವ ವಸ್ತುವೂ ಪ್ರಾಪ್ಯವಲ್ಲವೆಂಬುದನ್ನು ನಾನು ಹೇಗೆ ನೋಡುತ್ತಿರುವನೋ ಹಾಗೆಯೇ ರಾಜ್ಯಭ್ರಂಶಹೊಂದಿದ ನಿನ್ನನ್ನೂ ನೋಡುವೆನು ಎಂದು ಶಾಪವಾಕ್ಯವನ್ನು ನುಡಿಯಲು ಮುಂದಿನ ವೃತ್ತಾಂತವನ್ನು ಪುಲಸ್ತ್ಯರು ಹೇಳುತ್ತಾರೆ. ಕುಪಿತನಾದ ಪ್ರಹ್ಲಾದನು ಹೀಗೆ ಹೇಳಿದೊಡನೆಯೇ ಬಲಿಯು ತ್ವರೆಯಿಂದ ಎದ್ದು ರಾಜಾಸನದಿಂದ ಕೆಳಕ್ಕೆ ಇಳಿದು ಅಂಜಲಿಬಂಧ ಪೂರ್ವಕವಾಗಿ ಪ್ರಹ್ಲಾದನಿಗೆ ಸಾಷ್ಟಾಂಗನಮಸ್ಕಾರ ಮಾಡಿ. ಗುರುವೇ, ನನ್ನ ವಿಷಯದಲ್ಲಿ ಪ್ರಸನ್ನನಾಗು. ಶಿಶುಗಳು ಅಪರಾಧ ಮಾಡಿದರೂ ಗುರುಜನಗಳು ಕ್ಷಮಿಸಬೇಕಲ್ಲವೇ

ತತ್ಸಾಧು ಯದಹಂ ಶಪ್ತೋಽಭವತಾ ದಾನವೇಶ್ವರ ।
ನ ಬಿಭೇಮಿ ಪರೇಭ್ಯೋಽಹಂ ನ ಚ ರಾಜ್ಯಪರಿಕ್ಷಯಾತ್ ॥ ೪೦ ॥

ನೈವ ದುಃಖಂ ಮಮ ವಿಭೋ ಯದಹಂ ರಾಜ್ಯವಿಚ್ಯುತಃ ।
ದುಃಖಂ ಕೃತಾಪರಾಧತ್ವಾದ್ಭವತೋ ಮೇ ಮಹತ್ತಮಂ ॥ ೪೧ ॥

ಕ್ಷಮಸ್ವ ತತ್ತಾತ ಕೃತಾಪರಾಧಂ
ಬಾಲೋಽಸ್ಮಿ ನೀಚೋಽಸ್ಮಿ ಸುದುರ್ಮತಿಶ್ಚ ।
ಕೃತೇಽಪಿ ದೋಷೆ ಗುರುವಃ ಶಿಶೂನಾಂ
ಕ್ಷಾಮ್ಯಂತಿ ದೈನ್ಯಂ ಸಮುಪಾಗತಾನಾಂ ॥ ೪೨ ॥

ಪುಲಸ್ತ್ಯ ಉವಾಚ

ಇತ್ಯೇವಮುಕ್ತೆ ವಚನೆ ಮಹಾತ್ಮಾ
ವಿಮುಕ್ತಮೋಹೋ ಹರಿಪಾದಭಕ್ತಃ ।
ಚಿರಂ ವಿಚಿಂತ್ಯಾದ್ಭುತಮೇತದಿತ್ಥ
ಮುವಾಚ ಪುತ್ರಂ ಮಧುರಂ ವಚೋಽಥ ॥ ೪೩ ॥

೪೦-೪೨. ಓ ದಾನವೇಶ್ವರನೇ ಅಪರಾಧಿಯಾದ ನನಗೆ ನೀನು ಶಾಪ ಕೊಟ್ಟಿರುವದು ನ್ಯಾಯವೇ ಆಗಿದೆ. ನಾನು ಮಾತ್ರ ಶತ್ರುಗಳಿಂದಲೂ ಭಯಪಡುವುದಿಲ್ಲ. ಅಪರಾಧಿಯಾದ ನನಗೆ ನಿನ್ನಿಂದಲೇ ಮಹಾದುಃಖವುಂಟಾಗಿದೆ. ಎಲೈ ತಂದೆಯೇ ನಿನ್ನಲ್ಲಿ ಅಪರಾಧಮಾಡಿ ನಾನು ನೀಚನಾಗಿರುವೆನು, ಬಾಲಕನಾಗಿರುವೆನು (ಅಜ್ಞನೆಂದು ತಾತ್ಪರ್ಯ) ದುರ್ಬುದ್ಧಿಯಾಗಿರುವೆನು. ನನ್ನ ಈ ಅಪರಾಧವನ್ನು ಕ್ಷಮಿಸು, ಅಪರಾಧಿಗಳಾಗಿದ್ದರೂ ದೀನರಾಗಿರುವ ಶಿಶುಗಳ ವಿಷಯದಲ್ಲಿ ಗುರುಜನಗಳು ಕ್ಷಾಂತಿಯಿಂದ ಇರುತ್ತಾರಲ್ಲವೇ. ಹೀಗೆ ಬಲಿಯು ಪ್ರಾರ್ಥಿಸಿದನಂತರ ಪುಲಸ್ತ್ಯರು ಹೇಳುತ್ತಾರೆ.

೪೩-೪೫. ಬಲಿಯು ಈ ರೀತಿಯಾಗಿ ಪ್ರಾರ್ಥಿಸಿದೊಡನೆಯೇ ಮಹಾತ್ಮನಾದ ಪ್ರಹ್ಲಾದನು ಹರಿಪಾದ ಪದ್ಮಗಳಲ್ಲಿ ಭಕ್ತಿಯಿಂದ ಕೋಪಶಾಂತಿಯನ್ನು ಹೊಂದಿ ಬಹಳ ಹೊತ್ತು ಆಲೋಚಿಸಿ ಪುತ್ರನಾದ ಬಲಿಯನ್ನು ಕುರಿತು ಆಶ್ಚರ್ಯಕರವಾಗಿಯೂ

ಪ್ರಹ್ಲಾದ ಉವಾಚ

ಮೋಹೇನ ಮೇಽಧುನಾ ಜ್ಞಾನಂ ವಿವೇಕಶ್ಚ ತಿರಸ್ಕೃತಃ ।
ಯೇನ ಸರ್ವಗತಂ ವಿಷ್ಣುಂ ಜಾನಂಸ್ತ್ವಾಂ ಶಪ್ತವಾಹನಂ ॥ ೪೪ ॥

ತನ್ನೂನಮವಿವೇಕೋಽಯಂ ಭವಂತಂ ಯೇನ ದಾನವ ।
ಮಮಾಪಿ ಸಮಹಾಬಾಹೋ ವಿವೇಕಪ್ರತಿಷೇಧಕಃ ॥ ೪೫ ॥

ತಸ್ಮಾದ್ರಾಜ್ಯಂ ಪ್ರತಿ ವಿಭೋ ನ ಜ್ವರಂ ಕರ್ತುಮರ್ಹಸಿ ।
ಅವಶ್ಯಂಭಾವಿನೋಽಹ್ಯರ್ಥಾ ನ ವಿನಶ್ಯಂತಿ ಕರ್ಹಿಚಿತ್ ॥ ೪೬ ॥

ಪುತ್ರಮಿತ್ರಕಲತ್ರಾರ್ಥೆ ರಾಜ್ಯಭೋಗಧನಾಯ ಚ ।
ಆಗಮೇ ನಿರ್ಗಮೇ ಪ್ರಾಜ್ಞೋ ನ ವಿಷಾದಂ ಸಮಾಚರೇತ್ ॥ ೪೭ ॥

ಯಥಾ ಯಥಾ ಸಮಾಯಾಂತಿ ಪೂರ್ವಕರ್ಮವಿಧಾನತಃ ।
ಸುಖದುಃಖಾನಿ ದೈತ್ಯೇಂದ್ರ ನರಸ್ತಾನಿ ಸಹೇತ್ತಥಾ ॥ ೪೮ ॥

ಮಧುರವಾಗಿಯೂ ಇರುವ ಈ ಮಾತನ್ನಾಡಿದನು. ಪುತ್ರನೇ ಕೋಪಕ್ಕೆ ಕಾರಣವಾದ ಅಜ್ಞಾನದಿಂದ ನನ್ನ ಜ್ಞಾನ ಮತ್ತು ವಿವೇಕಗಳೆರಡೂ ತಿರಸ್ಕರಿಸಲ್ಪಟ್ಟುವು. ವಿಷ್ಣುವು ಸರ್ವವ್ಯಾಪಕನೆಂದು ತಿಳಿದಿದ್ದರೂ ಆ ವಿಷ್ಣುವಿನ ದೇಹದಲ್ಲಿ ಸೇರಿರುವ ನಿನ್ನನ್ನು ಅವಿವೇಕದಿಂದಲೇ ಶಪಿಸಿದೆನು. ಆ ಅವಿವೇಕವೇ ನಿನಗೆ ಉಂಟಾದಂತೆ ನನಗೂ ವಿವೇಕಕ್ಕೆ ನಾಶಕವಾಗಿ ಆಯಿತು.

೪೬-೪೭. ಆದುದರಿಂದ ಪ್ರಭುವಾಗಿರುವ ನೀನು ರಾಜ್ಯಕ್ಕಾಗಿ ಪರಿತಪಿಸಬೇಡ. ಮುಂದೆ ನಮ್ಮನ್ನೇ ನಿಯತವಾಗಿ ಹೊಂದತಕ್ಕ ಸುಖದುಃಖಾದಿಗಳು ಎಂದಿಗೂ ನಾಶವಾಗಲಾರವು. ಪುತ್ರ ಮಿತ್ರ ಕುಟುಂಬ ರಾಜ್ಯ ಭೋಗಧನಾದಿಗಳು ಅದೃಷ್ಟವಶದಿಂದ ಬಂದು ಸೇರಿದರೂ ದುರದೃಷ್ಟದಿಂದ ಬಿಟ್ಟುಹೋದರೂ ಪ್ರಾಜ್ಞನಾದವನು ಇವುಗಳ ಸ್ವಭಾವವನ್ನು ತಿಳಿದು ದುಃಖಪಡಬಾರದು.

೪೮-೫೦. ಪೂರ್ವಕರ್ಮಗಳ ಪರಿಪಾಕಕ್ಕೆ ತಕ್ಕಂತೆ ಅವುಗಳಿಗೆ ಫಲಭೂತಗಳಾದ ಸುಖದುಃಖಗಳು ಆಗಾಗ ಬರುತ್ತಿರುವುವು. ಅವುಗಳನ್ನೆಲ್ಲಾ ಅನುಭವಿಸ

ಆಪದಾಮಾಗಮಂ ದೃಷ್ಟ್ವಾ ನ ವಿಷಣ್ಣೋ ಭವೇದ್ವಶೀ ।
ಸಂಪದಂ ಚ ಸುವಿಸ್ತೀರ್ಣಾಂ ಪ್ರಾಪ್ಯ ನೋದ್ಧೃತಿರ್ಮಾ ಭವೇತ್ ॥ ೪೯ ॥

ಧನಕ್ಷಯೆ ನಮುಹ್ಯಂತಿ ನ ಹೃಷ್ಯಂತಿ ಧನಾಗಮೆ ।
ಧೀರಾಃ ಕಾರ್ಯೇಷು ಚ ತದಾ ಭವಂತಿ ಪುರುಷೋತ್ತಮಾಃ ॥ ೫೦ ॥

ಏವಂ ವಿದಿತ್ವಾ ದೈತ್ಯೇಂದ್ರ ನ ವಿಷಾದಂ ಕಥಂಚನ ।
ಕರ್ತುಮರ್ಹಸಿ ವಿದ್ವಂಸ್ತ್ವಂ ಪಂಡಿತೋನಾವಸೀದತಿ ॥ ೫೧ ॥

ತಥಾನ್ಯಚ್ಚ ಮಹಾಬಾಹೋ ಹಿತಂ ಶೃಣು ಮಹಾರ್ಥಕಂ ।
ಭವತೋಽಥ ತಥಾನ್ಯೇಷಾಂ ಶ್ರುತ್ವಾ ತಚ್ಚ ಸಮಾಚರ ॥ ೫೨ ॥

ಶರಣ್ಯಂ ಶರಣಂ ಗಚ್ಛ ತಮೇತಂ ಪುರುಷೋತ್ತಮಂ ।
ಸ ತೇ ತ್ರಾತಾ ಭಯಾದಸ್ಮಾದ್ದಾನವ ಪ್ರಭವಿಷ್ಯತಿ ॥ ೫೩ ॥

ತಕ್ಕವುಗಳೆಂದು ತಿಳಿದು ವಿವೇಕಿಯಾದ ಮನುಷ್ಯನು ಸಹಿಸಿಕೊಳ್ಳಲೇಬೇಕು; ಜಿತೇಂದ್ರಿಯನಾದವನು ವಿಪತ್ತುಗಳು ಬಂದುವೆಂದು ತಿಳಿದು ವಿಷಾದಪಡಬಾರದು. ಹೆಚ್ಚಾದ ಸಂಪತ್ತುಗಳು ಬಂದುವೆಂದು ತಿಳಿದು ಉಬ್ಬಿಯೂ ಹೋಗಬಾರದು. ಧೀರರಾದವರು ಧನವು ನಷ್ಟವಾಯಿತೆಂದು ತಿಳಿದು ದುಃಖಪಡುವುದಿಲ್ಲ. ಬಂದಿತೆಂದು ತಿಳಿದು ಸಂತೋಷಪಡುವುದೂ ಇಲ್ಲ. ತಾವು ಮಾಡತಕ್ಕ ಕಾರ್ಯಗಳಲ್ಲಿಯೂ ಒಂದೇ ರೀತಿಯಾಗಿರುವರು. ಅಂತಹ ಧೀರರೇ ಪುರುಷೋತ್ತಮರೆನಿಸಿಕೊಳ್ಳುತ್ತಾರೆ.

೫೦-೫೩. ಎಲೈ ದೈತ್ಯರಾಜನೇ ಈ ರೀತಿಯಾದ ವಿವೇಕದೃಷ್ಟಿಯಿಂದ ಸುಖ ದುಃಖಗಳ ಸ್ವಭಾವವನ್ನು ತಿಳಿದು ಜ್ಞಾನಿಯಾದ ನೀನು ವಿಷಾದಪಡಬಾರದು. ಇದು ಪಂಡಿತನ ಸ್ವಭಾವ. ಎಲೈ ಶೂರನೇ ನಾನು ಹೇಳುವ ಮತ್ತೊಂದು ಮಹಾಫಲವಾದ ಹಿತವನ್ನೂ ಕೇಳು. ನೀನೇ ತಿಳಿದುಕೊಂಡಾಗಲಿ ಮತ್ತೊಬ್ಬರಿಂದ ಕೇಳಿಯಾಗಲಿ ಸರ್ವಶರಣ್ಯನಾದ ಆ ಪುರುಷೋತ್ತಮನಲ್ಲಿಯೇ ಶರಣಾಗತನಾಗು. ಅವನೇ ನಿನ್ನನ್ನು ಈ ಮಹಾಭಯದಿಂದ ರಕ್ಷಿಸಲು ಸಮರ್ಥನಾದವನು.

ಯೇ ಸಂಶ್ರಯಂತಿ ಹರಿಮೀಶಮನಾದಿಮಧ್ಯಂ
ವಿಷ್ಣುಂ ಚರಾಚರಗುರುಂ ಹರಿಮೀಶಿತಾರಂ ।
ಸಂಸಾರಗರ್ತಪತಿತಸ್ಯ ಕರಾವಲಂಬಂ
ನೂನಂ ನತೇ ಭುವಿ ನರಾ ಜ್ವರಿಣೋ ಭವಂತಿ ॥ ೫೪ ॥

ತನ್ಮನಾ ದಾನವಶ್ರೇಷ್ಠ ತದ್ಭಕ್ತಶ್ಚ ಭವಾಧುನಾ ।
ಸ ಏಷ ಭವತಃ ಶ್ರೇಯೋ ವಿಧಾಸ್ಯತಿ ಜನಾರ್ದನಃ ॥ ೫೫ ॥

ಅಹಂ ಚ ಪಾಪೋಪಶಮಾರ್ಥಮೀಶ
ಮಾರಾಧಯಾಮೀಹ ಚ ತೀರ್ಥಯಾತ್ರಾಂ ।

---

೫೪. ಅಸಾಧಾರಣ ಐಶ್ವರ್ಯಶಾಲಿಯಾಗಿಯೂ ಆದಿಮಧ್ಯಾನ್ತರಹಿತನಾಗಿಯೂ ಚರಾಚರ ಸಕಲ ಪ್ರಪಂಚಕ್ಕೂ ಗುರುವಾಗಿಯೂ ಸಂಸಾರವೆಂಬ ಕೊರಕಲಿನಲ್ಲಿ ಬಿದ್ದಿರುವವನಿಗೆ ಹಸ್ತಾವಲಂಬನಪ್ರದನಾಗಿಯೂ ಇರುವ ವಿಷ್ಣುವನ್ನು ಯಾರು ಆಶ್ರಯಿಸುತ್ತಾರೆಯೋ ಅವರಿಗೆ ಭೂಮಿಯಲ್ಲಿ ಯಾವ ಸಂತಾಪವೂ ಉಂಟಾಗುವುದಿಲ್ಲ.

೫೫-೫೬. ಎಲೈ ದಾನವಶ್ರೇಷ್ಠನೇ, ಯಾವಾಗಲೂ ನೀನು ಆ ವಿಷ್ಣುವಿನಲ್ಲಿಯೇ ಮನಸ್ಸಿಟ್ಟು ಅವನ ಧ್ಯಾನದಿಂದಿರು. ಈಗ ವಿಶೇಷವಾಗಿ ಅವನ ಭಕ್ತನಾಗಿಯೇ ಇರು. ಆ ಜನಾರ್ದನನೇ ನಿನಗೆ ಎಲ್ಲಾ ವಿಧವಾದ ಶ್ರೇಯಸ್ಸನ್ನೂ ಉಂಟುಮಾಡುತ್ತಾನೆ. ನಾನೂ ಈಗ ಉಂಟಾಗಿರುವ ಪಾಪಶಮನಕ್ಕಾಗಿ (ಅಂದರೆ ಬಲಿಯನ್ನು ಕೋಪದಿಂದ ಶಪಿಸುವ ಕಾಲದಲ್ಲಿ ಉಂಟಾದ ಅವಿವೇಕವು ಪಾಪಮೂಲಕವಾದುದು. ಹರಿಯು ಸರ್ವವ್ಯಾಪಕನೆಂದು ತಿಳಿದಿದ್ದರೂ ಆ ಪಾಪವು ಅವಿವೇಕವನ್ನುಂಟುಮಾಡಿ ವಿವೇಕವನ್ನು ಹೋಗಲಾಡಿಸಿ ಶಾಪಕ್ಕೂ ಕಾರಣವಾಗಿ ಪ್ರಭುತ್ವವನ್ನನುಭವಿಸಿತು. ಆ ಪಾಪಶಾಂತಿಗೆ ತೀರ್ಥಯಾತ್ರಾರೂಪವಾದ ಭಗವದಾರಾಧನದಿಂದ ಉಂಟಾಗುವ ಅವನ ಪ್ರಸಾದವೇ ಕಾರಣ. ಆದುದರಿಂದ ಅವನ ಅನುಗ್ರಹಕ್ಕಾಗಿ ತೀರ್ಥಯಾತ್ರೆಗೆ ಹೊರಡುವೆನೆಂದು ತಾತ್ಪರ್ಯ.) *ತೀರ್ಥಯಾತ್ರಾರೂಪವಾದ

---

* ಇಲ್ಲಿ ಪ್ರಹ್ಲಾದನು ಯೋಗಿಯಾದರೂ ಜ್ಞಾನಿಗಳಿಗೂ ಸಹ ಆಕಸ್ಮಿಕವಾದ ಪಾಪಶಾಂತಿಗಾಗಿಯೂ ಲೋಕಸಂಗ್ರಹಕ್ಕಾಗಿಯೂ ಕರ್ಮಯೋಗಾನುಷ್ಠಾನವು ಗೀತಾದಿಗಳಲ್ಲಿ ವಿಹಿತವಾಗಿರುವುದರಿಂದ ವಿರೋಧವಿಲ್ಲವೆಂದು ತಿಳಿಯಬೇಕು.

ವಿಮುಕ್ತಪಾಪಶ್ಚ ತದಾ ಭವಿಷ್ಯೆ
ವದಾಚ್ಯುತೋ ಲೋಕಪತಿರ್ನೃಸಿಹ್ಮಃ ॥ ೫೬ ॥

ಪುಲಸ್ತ್ಯ ಉವಾಚ

ಇತ್ಯೇವಮಾಶ್ವಾಸ್ಯ ಬಲಿಂ ಮಹಾತ್ಮಾ
ಸಂಸ್ಮೃತ್ಯ ಯೋಗಾಧಿಪತಿಂ ಚ ವಿಷ್ಣುಂ ।
ಆಮಂತ್ರ್ಯ ಸರ್ವಾನ್ದನುಸೈನ್ಯಪಾಲಾನ್
ಜಗಾಮ ಕರ್ತುಂ ಶುಭತೀರ್ಥಯಾತ್ರಾಂ ॥ ೫೭ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ಬಲಿಶಿಕ್ಷಾದಾನಂ ನಾಮ ಸಪ್ತಸಪ್ತತಿತಮೋಽಧ್ಯಾಯಃ.

ಕರ್ಮಯೋಗದಿಂದ ಅವನನ್ನು ಆರಾಧಿಸುತ್ತೇನೆ. ಪಾಪವಿಮೋಚನೆಯನ್ನೂ ಹೊಂದುತ್ತೇನೆ. ನೀನು ಮಾತ್ರ ಅಚ್ಯುತರೂಪನಾದ ನೃಸಿಂಹನೇ ಲೋಕಪತಿಯೆಂದು ಯಾವಾಗಲೂ ಉಚ್ಚರಿಸುತ್ತಿರು.

೫೭. ಪುಲಸ್ತ್ಯರು ಹೇಳುತ್ತಾರೆ:—ಹೀಗೆ ಹೇಳಿ ಬಲಿಯನ್ನು ಸಮಾಧಾನಪಡಿಸಿ ಯೋಗಾಧಿಪನಾದ ವಿಷ್ಣುವನ್ನೂ ಸ್ಮರಿಸಿ ದಾನವ ಸೈನ್ಯಪತಿಗಳನ್ನೆಲ್ಲಾ ಸಂಭಾಷಿಸಿ ಪ್ರಹ್ಲಾದನು ಶುಭವಾದ ತೀರ್ಥಗಳನ್ನು ಸೇವಿಸಲು ಯಾತ್ರೆ ಹೊರಟನು.

ಇಲ್ಲಿಗೆ ಶ್ರೀ ವಾಮನಪುರಾಣದ ವಾಮನಪ್ರಾದುರ್ಭಾವದಲ್ಲಿ ಎಪ್ಪತ್ತೇಳನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ವಿಷ್ಣುವು ವಾಮನಾವತಾರ ಹೊಂದಿ ಅದಿತಿಯ ಗರ್ಭವನ್ನು ಆಶ್ರಯಿಸಿದೊಡನೆಯೇ ದೈತ್ಯರೆಲ್ಲರೂ ನಿಸ್ತೇಜಸ್ಕರಾಗಲು ಇದನ್ನು ನೋಡಿ ಬಲಿಯು ಇದಕ್ಕೆ ಕಾರಣವೇನೆಂದು ಪ್ರಹ್ಲಾದನನ್ನು ಕೇಳಲು ಪ್ರಹ್ಲಾದನು ಧ್ಯಾನದೃಷ್ಟಿಯಿಂದ ನೋಡಿ ಮಹಾವಿಷ್ಣುವಿನಿಂದಲೇ ದೈತ್ಯರಿಗೆ ಭಯವುಂಟಾಗಿದೆ ಎಂದು ತಿಳಿದು ಆ ವಿಷ್ಣುವು ಈಗ ಎಲ್ಲಿರುವನೆಂದು ತಿಳಿಯಲು ಧ್ಯಾನಾರೂಢನಾಗಿ ಆ ಮಹಾವಿಷ್ಣುವಿನ ದೇಹದಲ್ಲಡಗಿರುವ ಎಲ್ಲಾ ಲೋಕಗಳನ್ನೂ ನೋಡಿ ಮೇರುಪರ್ವತದಲ್ಲಿ ಸತ್ಯ ಲೋಕದ ಕೆಳಭಾಗದಲ್ಲಿರುವ ಎಲ್ಲಾ ಲೋಕಗಳನ್ನೂ ನೋಡಿ ಮೇರುಪರ್ವತದಲ್ಲಿ ಸತ್ಯಲೋಕದ ಕೆಳಭಾಗದಲ್ಲಿರುವ ದಿತಿಯ ಆಶ್ರಮವನ್ನೂ ನೋಡಿ ದಿತಿಯ ಗರ್ಭದಲ್ಲಿ ವಾಮನಾವತಾರದಿಂದ ನೆಲಸಿರುವ ವಿಷ್ಣುವನ್ನು ಸಾಕ್ಷಾತ್ಕರಿಸಿ ಅವನನ್ನು ವಂದಿಸಿ ದೈತ್ಯರನಾಶಕ್ಕಾಗಿಯೇ ಅವನ ಅವತಾರವುಂಟಾಗಿದೆ ಎಂದು ನಿಶ್ಚೈಸಿ ಬಲಿಯನ್ನು ಕುರಿತು ನಿನ್ನಿಂದ ಪರಾಜಿತರಾದ ದೇವತೆಗಳ ಪ್ರಾರ್ಥನೆಯಿಂದ ಮಹಾವಿಷ್ಣುವೇ ದಿತಿಯ ಉದರದಲ್ಲಿ ಅವತರಿಸಿರುವನೆಂದೂ ಅದೇ ದೈತ್ಯರ ತೇಜೋಹಾನಿಗೆ ಕಾರಣ ವೆಂದೂ ಹೇಳಿ ಸುಮ್ಮನಾದನೆಂದೂ ಅನಂತರ ಕುಪಿತನಾದ ಬಲಿಯು ತನ್ನ ಮತ್ತು ತನ್ನ ಸೈನ್ಯದ ಬಲವನ್ನು ಪ್ರಶಂಸಿಸಿ ಇವರ ಮುಂದೆ ನಿಲ್ಲಲು ಆ ಮಹಾವಿಷ್ಣುವೂ ಎಷ್ಟರವನು. ಅವನು ಯಾರು ಎಂದು ಅಧಿಕ್ಷೇಪಿಸಲು ಕುಪಿತನಾದ ಪ್ರಹ್ಲಾದನು ಬಲಿಯನ್ನು ಬಹಳವಾಗಿ ಜರಿದು ಅವಿವೇಕಿಯೂ ದುರ್ಬುದ್ಧಿಯೂ ಆದ ನೀನು ಈ ವಿಧವಾದ ವಿಷ್ಣುವಿನ ನಿಂದೆಯಿಂದ ರಾಜ್ಯ ಭ್ರಂಶಹೊಂದು ಎಂದು ಶಪಿಸಿದ ನೆಂದೂ ಹೇಳಲಾಯಿತು. ಅನಂತರ ಬಲಿಯು ಪ್ರಹ್ಲಾದನನ್ನು ವಂದಿಸಿ ತನ್ನ ಅಪ ರಾಧಕ್ಕಾಗಿ ಕ್ಷಮೆ ಬೇಡಿ ನಾನು ರಾಜ್ಯಹಾನಿಯಿಂದಾಗಲಿ ಐಶ್ವರ್ಯಹಾನಿಯಿಂದಾಗಲಿ ಭಯಪಡುವದಿಲ್ಲ. ನಿನಗೆ ದುಃಖವುಂಟುಮಾಡಿದ ಅಪರಾಧಕ್ಕಾಗಿ ಭಯ ಪಡುತ್ತಿದ್ದೇನೆ. ನೀನು ಪ್ರಸನ್ನನಾಗಿ ನನ್ನನ್ನು ಅನುಗ್ರಹಿಸು ಎಂದು ಬೇಡಲು ಪ್ರಹ್ಲಾದನು ಪ್ರಸನ್ನನಾಗಿ ಮಹಾವಿಷ್ಣುವು ಸರ್ವವ್ಯಾಪಕನೆಂದು ತಿಳಿದಿದ್ದರೂ ಅವಿ ವೇಕದಿಂದ ನಾನೂ ನಿನ್ನನ್ನು ಶಪಿಸಿದೆನು. ಆದುದರಿಂದ ನೀನು ರಾಜ್ಯಕೋಶ ಮೊದಲಾದ ವಸ್ತುಗಳಲ್ಲಿ ಅಭಿಮಾನವನ್ನು ಬಿಟ್ಟು ಕರ್ಮೋಪಾರ್ಜಿತವಾದ ಸುಖ ದುಃಖಾನುಭವದಲ್ಲಿ ಸಹನೆಯನ್ನು ಹೊಂದು. ಸುಖದಿಂದ ಉಬ್ಬುವದೂ ದುಃಖದಿಂದ ವಿಷಾದಹೊಂದುವದೂ ಧೀರರ ಸ್ವಭಾವವಲ್ಲ ಎಂದು ವಿವೇಕವನ್ನುಪದೇಶಿಸಿ ಮಹಾ ವಿಷ್ಣುವಿನಲ್ಲಿ ಭಕ್ತಿಯಿಂದಿರು ಅವನೇ ನಿನಗೆ ರಕ್ಷಕನಾಗುತ್ತಾನೆ ಎಂದು ಉಪದೇಶಿಸಿ ಪಾಪಕ್ಷಯಕ್ಕಾಗಿ ತಾನೂ ತೀರ್ಥಯಾತ್ರೆಗೆ ಹೊರಟನೆಂದು ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಅಷ್ಟಸಪ್ತತಿತಮೋಽಧ್ಯಾಯಃ

ನಾರದ ಉವಾಚ

ಕಾನಿ ತೀರ್ಥಾನಿ ವಿಪ್ರೇಂದ್ರ ಪ್ರಹ್ಲಾದೋಽನುಜಗಾಮ ಹ ।
ಪ್ರಹ್ಲಾದತೀರ್ಥಯಾತ್ರಾಂ ಮೇ ಸಮ್ಯಗಾಖ್ಯಾತುಮರ್ಹಸಿ ॥ ೧ ॥

ಪುಲಸ್ತ್ಯ ಉವಾಚ

ಶೃಣು ತ್ವಂ ಕಥಯಿಷ್ಯಾಮಿ ಪಾಪಪಂಕಪ್ರಣಾಶಿನೀಂ ।
ಪ್ರಹ್ಲಾದತೀರ್ಥಯಾತ್ರಾಂ ತೇ ಸರ್ವಪಾಪಪ್ರಣಾಶಿನೀಂ ॥ ೨ ॥

ಸಂತ್ಯಜ್ಯ ಮೇರುಂ ಕನಕಾಚಲೇಂದ್ರ
ತೀರ್ಥಂ ಜಗಾಮಾಮರಸಂಘಜುಷ್ಟಂ ।
ಖ್ಯಾತಂ ಪೃಥಿವ್ಯಾಂ ಶುಭದಂ ಹಿ ಮಾನಸಂ
ಯತ್ರ ಸ್ಥಿತೋ ಮತ್ಸ್ಯವಪುಃ ಪರೇಶಃ ॥ ೩ ॥

ಎಪ್ಪತ್ತೆಂಟನೆಯ ಅಧ್ಯಾಯವು

೧-೩. ನಾರದರು ಪ್ರಹ್ಲಾದನು ಯಾವ ಯಾವ ತೀರ್ಥಗಳಲ್ಲಿ ಯಾತ್ರೆ ಮಾಡಿದನೆಂಬುದನ್ನು ಹೇಳಬೇಕೆಂಬುದನ್ನು ಪ್ರಶ್ನೆಮಾಡಲು ಪುಲಸ್ತ್ಯರು ಸರ್ವಪಾಪ ನಾಶಕವಾದ ಆ ಪ್ರಹ್ಲಾದನ ತೀರ್ಥಯಾತ್ರೆಯನ್ನು ಹೇಳುತ್ತೇನೆ ಕೇಳು ಎಂದು ಉಪಕ್ರಮಿಸುತ್ತಾರೆ:-ಮೇರುವನ್ನು ಬಿಟ್ಟು ಪ್ರಹ್ಲಾದನು ಭೂಮಿಯಲ್ಲೆಲ್ಲಾ ಮಾನಸ ತೀರ್ಥವೆಂದು ಪ್ರಸಿದ್ಧಿಹೊಂದಿರುವ ಶುಭಪ್ರದವಾದ ಕನಕಾಚಲೇಂದ್ರತೀರ್ಥಕ್ಕೆ ಹೊರಟನು. ದೇವತೆಗಳಿಂದ ಸೇವಿಸಲ್ಪಡುತ್ತಿರುವ ಯಾವ ಆ ತೀರ್ಥದಲ್ಲಿ ಮತ್ಸ್ಯಾವತಾರಶಾಲಿಯಾದ ಸರ್ವೇಶ್ವರನು ನೆಲಸಿರುವನೋ,

ತಸ್ಮಿಂಸ್ತೀರ್ಥವರೇ ಸ್ನಾತ್ವಾ ಸಂತರ್ಪ್ಯ ಪಿತೃದೇವತಾಃ ।
ಸಂಪೂಜ್ಯ ಚ ಜಗನ್ನಾಥಮಚ್ಯುತಂ ಶ್ರುತಿಭಿರ್ಯುತಂ ॥ ೪ ॥

ಉಪೋಷ್ಯ ಭೂಯಃ ಸಂಪೂಜ್ಯ ದೇವರ್ಷಿಪಿತೃಮಾನವಾನ್ ।
ಜಗಾಮ ಕಚ್ಛಪಂ ದ್ರಷ್ಟುಂ ಕೌಶಿಕ್ಯಾಂ ಪಾಪನಾಶನಂ ॥ ೫ ॥

ತಸ್ಯಾಂ ಸ್ನಾತ್ವಾ ಮಹಾನದ್ಯಾಂ ಸಂಪೂಜ್ಯ ಚ ಜಗತ್ಪತಿಂ ।
ಸಮುಪೋಷ್ಯ ಶುಚಿರ್ಭೂತ್ವಾ ದತ್ವಾ ವಿಪ್ರೇಷು ದಕ್ಷಿಣಾಂ ॥ ೬ ॥

ನಮಸ್ಕೃತ್ಯ ಜಗನ್ನಾಥಮಥ ಕೂರ್ಮವಪುರ್ಧರಂ ।
ತತೋ ಜಗಾಮ ಕೃಷ್ಣಾಯಾಂ ದ್ರಷ್ಟುಂ ವಾಜಿಮುಖಂ ಪ್ರಭುಂ ।
ತತ್ರ ದೇವಹ್ರದೇ ಸ್ನಾತ್ವಾ ತರ್ಪಯಿತ್ವಾ ಪಿತೃನ್ ಸುರಾನ್ ॥ ೭ ॥

ಸಂಪೂಜ್ಯ ಹಯಶೀರ್ಷಂ ಚ ಜಗಾಮ ಗಜಸಾಹ್ವಯಂ ।
ತತ್ರ ದೇವಂ ಜಗನ್ನಾಥಂ ಗೋವಿಂದಂ ಚಕ್ರಪಾಣಿನಂ ॥ ೮ ॥

೪-೬. ಅಂತಹ ತೀರ್ಥದಲ್ಲಿ ಸ್ನಾನಮಾಡಿ ಪಿತೃದೇವತೆಗಳನ್ನೂ ತೃಪ್ತಿಗೊಳಿಸಿ ವೇದಗಳಿಂದ ಕೂಡಿ ನೆಲಸಿರುವ ಮತ್ಸ್ಯರೂಪಿಯಾದ ಜಗತ್ಪತಿಯನ್ನು ಪೂಜಿಸಿ ಉಪವಾಸವಿದ್ದು ಪುನಃ ಸ್ನಾನಾದಿಗಳಿಂದ ದೇವತೆಗಳನ್ನೂ ಋಷಿಪಿತೃಮಾನವರು ಮುಂತಾದವರನ್ನೂ ತೃಪ್ತಿಗೊಳಿಸಿ ಕೌಶಿಕಿಯಲ್ಲಿ ನೆಲಸಿರುವ ಕಚ್ಛಪನನ್ನು ಸೇವಿಸಲು ಹೊರಟನು. ಮಹಾನದಿಯಾದ ಆ ಕೌಶಿಕಿಯಲ್ಲಿ ಸ್ನಾನಮಾಡಿ ಕೂರ್ಮರೂಪಿಯಾದ ಜಗತ್ಪತಿಯನ್ನು ಪೂಜಿಸಿ ಉಪವಾಸದಿಂದ ಶುದ್ಧನಾಗಿ ಬ್ರಾಹ್ಮಣರಿಗೆ ದಕ್ಷಿಣಾದಿಗಳನ್ನೂ ಸಮರ್ಪಿಸಿ ಪುನಃ ಕೂರ್ಮರೂಪಿಯಾದ ಆ ಭಗವಂತನನ್ನು ನಮಸ್ಕರಿಸಿ

೭-೯. ಅನಂತರ ಕೃಷ್ಣಾನದಿಯಲ್ಲಿ ವಾಜಿಮುಖನನ್ನು ಸೇವಿಸಲು ಹೊರಟನು ಅಲ್ಲಿ ದೇವಹ್ರದವೆಂಬ ತೀರ್ಥದಲ್ಲಿ ಸ್ನಾನಮಾಡಿ ಪಿತೃದೇವತೆಗಳನ್ನೂ ದೇವತೆಗಳನ್ನೂ ತೃಪ್ತಿಗೊಳಿಸಿ ಹಯಮುಖನಾದ ಪರಮಾತ್ಮನನ್ನು ಪೂಜಿಸಿ ಗಜಸಾ ಎಂಬ ಕ್ಷೇತ್ರಕ್ಕೆ ಹೊರಟನು. ಅಲ್ಲಿ ಸ್ನಾನಮಾಡಿ ಚಕ್ರಪಾಣಿಯಾದ ಗೋವಿಂದನನ್ನು ಯಥಾವಿಧಿಯಾಗಿ ಪೂಜಿಸಿ ಅಲ್ಲಿಂದ ಯಮುನಾನದಿಗೆ ಹೊರಟನು. ಅಲ್ಲಿಯೂ ಸ್ನಾನಾದಿಗಳಿಂದ

ಸ್ನಾತ್ವಾ ಸಂಪೂಜ್ಯ ವಿಧಿವಜ್ಜಗಾಮ ಯಮುನಾಂ ನದೀಂ ।
ತಸ್ಯಾಂ ಸ್ನಾತಃ ಶುಚಿರ್ಭೂತ್ವಾ ಸಂತರ್ಪ್ಯರ್ಷಿಸುರಾನ್ ಪಿತೄನ್ ।
ದದರ್ಶ ದೇವದೇವೇಶಂ ಲೋಕನಾಥಂ ತ್ರಿವಿಕ್ರಮಂ ॥ ೯ ॥

ನಾರದ ಉವಾಚ

ಸಾಂಪ್ರತಂ ಭಗವಾನ್ ವಿಷ್ಣುಃ ತ್ರೈಲೋಕ್ಯಾಕ್ರಮಣಂ ವಪುಃ ।
ಕರಿಷ್ಯತಿ ಜಗತ್ಸ್ವಾಮೀ ಬಲೇರ್ಬಂಧನಮೀಶ್ವರಃ ॥ ೧೦ ॥

ತತ್ಕಥಂ ಪೂರ್ವಕಾಲೇಽಪಿ ವಿಭುರಾಸೀತ್ತ್ರಿವಿಕ್ರಮಃ ।
ಕಸ್ಯವಾ ಬಂಧನಂ ವಿಷ್ಣುಃ ಕೃತವಾಂಸ್ತಚ್ಚನೋ ವದ ॥ ೧೧ ॥

ಪುಲಸ್ತ್ಯ ಉವಾಚ

ಶ್ರೂಯತಾಂ ಕಥಯಿಷ್ಯಾಮಿ ಯೋಽಯಂ ಪ್ರೋಕ್ತಸ್ತ್ರಿವಿಕ್ರಮಃ ।
ಯಸ್ಮಿನ್ ಕಾಲೇ ಬಭೂವಾಥ ಯಂ ಚ ವಂಚಿತವಾನಸೌ ॥ ೧೨ ॥

ಪರಿಶುದ್ಧನಾಗಿ ದೇವರ್ಷಿಪಿತೃಗಳನ್ನು ತೃಪ್ತಿಗೊಳಿಸಿ ಅಲ್ಲಿ ನೆಲಸಿದ್ದ ಲೋಕನಾಥನಾದ ತ್ರಿವಿಕ್ರಮನನ್ನು ಸೇವಿಸಿದನು.

೧೦-೧೨. ಈ ಮಧ್ಯದಲ್ಲಿ ನಾರದರು ಪ್ರಾಸಂಗಿಕವಾಗಿ ಪೂಜ್ಯನಾದ ಮಹಾವಿಷ್ಣುವು ಬಲಿಬಂಧನಕ್ಕಾಗಿ ಈಗ ತಾನೆ ತ್ರೈಲೋಕ್ಯಾಕ್ರಮಣದಿಂದ ತ್ರಿವಿಕ್ರಮಾವತಾರವನ್ನು ಧರಿಸುವನಷ್ಟೆ. ಹೀಗಿರುವಾಗ ಪೂರ್ವದಲ್ಲಿ ಈ ಪ್ರಭುವು ಹೇಗೆ ತ್ರಿವಿಕ್ರಮಾವತಾರಶಾಲಿಯಾಗಿದ್ದನು. ಯಾರ ಬಂಧನಕ್ಕಾಗಿ ಆ ರೂಪವನ್ನು ಹೊಂದಬೇಕಾಯಿತು ಎಂದು ಪ್ರಶ್ನೆಮಾಡಲು ಪುಲಸ್ತ್ಯರು ಹೇಳುತ್ತಾರೆ:—ಪೂರ್ವದಲ್ಲಿ ಯಾರ ವಂಚನೆಗಾಗಿ ಯಾವ ಕಾಲದಲ್ಲಿ ಈ ಮಹಾವಿಷ್ಣುವು ತ್ರಿವಿಕ್ರಮಾವತಾರಶಾಲಿಯಾಗಿದ್ದನೆಂಬುದನ್ನು ಹೇಳುತ್ತೇನೆ ಕೇಳೋಣವಾಗಲಿ ಎಂದು ಆ ವೃತ್ತಾಂತವನ್ನು ಪ್ರಾಸಂಗಿಕವಾದ ಪ್ರಶ್ನೆಗೆ ಉತ್ತರವಾಗಿ ಹೇಳುತ್ತಾರೆ.

ಆಸೀದ್ಧುಂಧುರಿತಿ ಖ್ಯಾತಃ ಕಶ್ಯಪಸ್ಯೌರಸಃ ಸುತಃ ।
ದನೋರ್ಗರ್ಭಸಮುದ್ಭೂತಃ ಮಹಾಬಲಪರಾಕ್ರಮಃ ॥ ೧೩ ॥

ಸ ಸಮಾರಾಧ್ಯ ಚ ತದಾ ಬ್ರಹ್ಮಾಣಂ ತಪಸಾಸುರಃ ।
ಅವಧ್ಯತ್ವಂ ಸುರೈಸ್ಸೇಂದ್ರೈಃ ಪ್ರಾರ್ಥಯತ ಸ ತು ನಾರದ ॥ ೧೪ ॥

ತಸ್ಯ ತಂ ಚ ವರಂ ಪ್ರಾದಾತ್ತಪಸಾ ಪಂಕಜೋದ್ಭವಃ ।
ಪರಿತುಷ್ಟಃ ಸ ಚ ಬಲೀ ನಿರ್ಜಗಾಮ ತ್ರಿವಿಷ್ಟಪಂ ॥ ೧೫ ॥

ಚತುರ್ಥಸ್ಯ ಕಲೇರಾದೌ ಜಿತ್ವಾ ದೇವಾನ್ಸವಾಸವಾನ್ ।
ಧುಂಧುಶ್ಚಕ್ರೇತ್ವ ಮಕರೋದ್ಧಿರಣ್ಯಕಶಿಪೌ ಸತಿ ॥ ೧೬ ॥

ತಸ್ಮಿನ್ ಕಾಲೆ ಸ ಬಲವಾನ್ಹಿರಣ್ಯಕಶಿಪುಸ್ತತಃ ।
ಚಚಾರ ಮಂದರಗಿರೌ ದೈತ್ಯೋ ಧುಂಧುಸಮಾಶ್ರಿತಃ ॥ ೧೭ ॥

ತತೋಽಸುರಾ ಯಥಾಕಾಮಂ ವಿಚರಂತಿ ತ್ರಿವಿಷ್ಟಪೆ ।
ತ್ರಿದಶಾ ಬ್ರಹ್ಮಲೋಕೆ ಚ ಸಂಸ್ಥಿತಾ ದುಃಖಸಂಯುತಾಃ ॥ ೧೮ ॥

೧೩-೧೬. ಕಶ್ಯಪನಿಗೆ ದನುವಿನ ಗರ್ಭದಲ್ಲಿ ಹುಟ್ಟಿದ ಔರಸಪುತ್ರನೊಬ್ಬ ನಿದ್ದನು. ಅವನು ಧುಂಧುವೆಂಬ ಹೆಸರಿನಿಂದ ಪ್ರಸಿದ್ಧಿಹೊಂದಿದ್ದನು. ಮಹಾಬಲ ದಿಂದಲೂ ಪರಾಕ್ರಮದಿಂದಲೂ ಕೂಡಿದ್ದ ಅವನು ಬ್ರಹ್ಮನನ್ನು ತಪಸ್ಸಿನಿಂದ ಸಂತೋಷಪಡಿಸಿ ಇಂದ್ರಾದಿದೇವತೆಗಳಿಂದಲೂ ತನಗೆ ಅವಧ್ಯತ್ವವುಂಟಾಗಬೇಕೆಂದು ಪ್ರಾರ್ಥಿಸಿದನು. ತಪಸ್ಸಿನಿಂದ ಸಂತುಷ್ಟನಾದ ಬ್ರಹ್ಮನೂ ಅವನಿಗೆ ಆ ವರವನ್ನು ಕೊಟ್ಟನು. ಅನಂತರ ಸಂತುಷ್ಟನಾದ ಆ ಧುಂಧುವು ವಿಜಯಯಾತ್ರೆಯಿಂದ ಸ್ವರ್ಗಕ್ಕೆ ಹೊರಟನು. ನಾಲ್ಕನೆಯ ಕಲಿಯುಗದ ಆದಿಭಾಗದಲ್ಲಿ ಹಿರಣ್ಯಕಶಿಪುವು ಇರುವಾಗಲೇ ಅವನು ಇಂದ್ರಾದಿದೇವತೆಗಳೆಲ್ಲರನ್ನೂ ಜಯಿಸಿ ತಾನೇ ಇಂದ್ರಪದವಿ ಯನ್ನು ಹೊಂದಿದನು.

೧೭-೧೮. ಆ ಸಮಯದಲ್ಲಿ ಬಲಿಷ್ಠನಾದ ಹಿರಣ್ಯಕಶಿಪುವು ಧುಂಧುವಿನೊಡನೆ ಸೇರಿ ಮಂದರಪರ್ವತದಲ್ಲಿ ಸಂಚರಿಸಿದನು. ಅನಂತರ ಅಸುರರೆಲ್ಲರೂ ಸ್ವರ್ಗದಲ್ಲಿ

ತತೋಽಮರಾನ್ಬ್ರಹ್ಮಸದೋಽನಿವಾಸಿನಃ
  ಶ್ರುತ್ವಾ ಥಧುಂಧುರ್ದಿತಿಜಾನುವಾಚ ।
ವ್ರಜಾಮ ದೈತ್ಯಾ ವಯಮಗ್ರಜಸ್ಯ
  ಸದೋ ವಿಜೇತುಂ ತ್ರಿದಶಾನ್ ಸಶಕ್ರಾನ್ ॥ ೧೯ ॥

ತೇ ಧುಂಧುವಾಕ್ಯಂ ತು ನಿಶಮ್ಯ ದೈತ್ಯಾಃ
  ಪ್ರೋಚುರ್ನನೋ ವಿದ್ಯತಿ ಲೋಕಪಾಲ ।
ಗತಿರ್ಯಯಾ ಯಾಮ ಪಿತಾಮಹಾಜಿರಂ
  ಸುದುರ್ಗಮೋಽಯಂ ಪರತೋಹಿಮಾರ್ಗಃ ॥ ೨೦ ॥

ಇತಃ ಸಹಸ್ರೈಃ ಬಹುಯೋಜನಾಖ್ಯೈ
  ರ್ಲೋಕೋ ಮಹರ್ನಾಮ ಮಹರ್ಷಿಜುಷ್ಟಃ ।
ಯೇಷಾಂ ಹಿ ದೃಷ್ಟ್ಯರ್ಪಣಚೋದಿತೇನ
  ದಹ್ಯಂತಿ ದೈತ್ಯಾಃ ಸಹಸೇಕ್ಷಿತೇನ ॥ ೨೧ ॥

ಯಥೇಚ್ಛವಾಗಿ ಸಂಚರಿಸಲಾರಂಭಿಸಿದರು. ಅಲ್ಲಿದ್ದ ದೇವತೆಗಳೆಲ್ಲರೂ ದುಃಖದಿಂದ ಬ್ರಹ್ಮಲೋಕದಲ್ಲಿ ಹೋಗಿ ನೆಲಸಿದ್ದರು. ಆಗ ಧುಂಧುವು ಇಂದ್ರಾದಿಗಳು ಬ್ರಹ್ಮನ ಸಭೆಯಲ್ಲಿ ವಾಸಮಾಡುತ್ತಿರುವರೆಂಬುದನ್ನು ಕೇಳಿ ದೈತ್ಯರನ್ನು ಕುರಿತು ಇಂದ್ರಾದಿ ದೇವತೆಗಳನ್ನು ಜಯಿಸಲು ನಾವು ಬ್ರಹ್ಮನ ಸಭೆಗೇ ಹೋಗೋಣ ಬನ್ನಿರಿ ಎಂದನು.

೨೦-೨೧. ಆಗ ದೈತ್ಯರು ಧುಂಧುವಿನ ಆ ಮಾತನ್ನು ಕೇಳಿ ಎಲೈ ಲೋಕಪತಿಯೇ ಬ್ರಹ್ಮನ ಸ್ಥಾನಕ್ಕೆ ಹೋಗಲು ನಮಗೆ ದಾರಿಯೇ ಇಲ್ಲ. ವಿಲಕ್ಷಣವಾದ ಆ ಮಾರ್ಗವು ನಮ್ಮಿಂದ ಆಕ್ರಮಿಸಲು ಸಾಧ್ಯವಲ್ಲ. ಇಲ್ಲಿಂದ ಸಾವಿರಾರು ಯೋಜನಗಳ ದೂರದಲ್ಲಿ ಮಹರ್ಷಿಗಳಿಂದ ಸೇವಿತವಾದ ಮಹೋಲೋಕವಿರುವದು. ಅಲ್ಲಿರುವ ಮಹರ್ಷಿಗಳ ಆಕಸ್ಮಿಕವಾದ ದೃಷ್ಟಿಪಾತದಿಂದಲೂ ದೈತ್ಯರು ಸುಟ್ಟು ಬೂದಿಯಾಗುತ್ತಾರೆ

ತತೋಽಪರೋ ಯೋಜನಕೋಟಿರೇಕೋ
ಲೋಕೋ ಜನೋ ನಾಮ ವಸಂತಿ ಯತ್ರ ।
ಗೋಮಾತರೋಽಸ್ಮಾಸು ವಿನಾಶಕಾರೀ
ಯಾಸಾಂ ನಕೋಽಪೀಹ ಮಹಾಸುರೇಂದ್ರಃ ॥ ೨೨ ॥

ತತೋಽಪರೋ ಯೋಜನಕೋಟಿಭಿಸ್ತು
ತ್ರಿಂಶದ್ಭಿರಾದಿತ್ಯಸಹಸ್ರದೀಪ್ತಃ ।
ಸತ್ಯಾಭಿಧಾನೋ ಭಗವನ್ನಿವಾಸೋ
ವರಪ್ರದೋ ಭೂದ್ಭವತೋ ಹಿ ಯೋಽಸೌ ॥ ೨೩ ॥

ಯಸ್ಯ ವೇದಧ್ವನಿಂ ಶ್ರುತ್ವಾ ವಿಕಸಂತಿ ಸುರಾದಯಃ ।
ಸಂಕೋಚಮಸುರಾ ಯಾಂತಿ ಯೇ ಚ ತೇಷಾಂ ಸಧರ್ಮಿಣಃ ॥ ೨೪ ॥

ತಸ್ಮಾನ್ನಾತ್ರ್ತ್ವಂ ಮಹಾಬಾಹೋ ಮತಿಮೇತಾಂ ಸಮಾದಧಃ ।
ವೈರಾಜ್ಯ ಭುವನಂ ಧುಂಧೋ ದುರಾರೋಹಂ ಸದಾ ನೃಭಿಃ ॥ ೨೫ ॥

---

೨೨. ಅದಕ್ಕಿಂತ ಮೇಲೆ ಕೋಟ್ಯಂತರಯೋಜನ ದೂರದಲ್ಲಿ ಜನೋಲೋಕವೆಂಬ ಲೋಕವಿದೆ. ಅಲ್ಲಿ ಗೋಮಾತೃಗಳಿರುವರು. ಅವರ ಮಧ್ಯದಲ್ಲಿ ಒಬ್ಬ ಗೋಮಾತೃವನ್ನೂ ನಾಶಮಾಡುವ ಪರಾಕ್ರಮಶಾಲಿಯು ನಮ್ಮ ಈ ಅಸುರಗೋಷ್ಠಿಯಲ್ಲಿ ಯಾವನೂ ಇಲ್ಲ.

೨೩-೨೫. ಅದಕ್ಕಿಂತಲೂ ಮೇಲೆ ಮೂವತ್ತುಕೋಟಿ ಯೋಜನದೂರದಲ್ಲಿ ಸಹಸ್ರಸೂರ್ಯರಿಂದ ದೇದೀಪ್ಯಮಾನವಾದ ಸತ್ಯಲೋಕವೆಂಬ ಚತುರ್ಮುಖ ಸ್ಥಾನವಿದೆ. ನಿನಗೆ ಮೊದಲು ವರವು ಲಭಿಸಿದುದೂ ಆ ಸ್ಥಾನದಿಂದಲೇ. ಆ ಲೋಕದ ವೇದಧ್ವನಿಯನ್ನು ಕೇಳಿ ದೇವತೆಗಳೆಲ್ಲರೂ ಸಂತುಷ್ಟರಾಗುತ್ತಾರೆ. ಅಸುರರೂ ಅವರ ಅನುಯಾಯಿಗಳೂ ಸಂಕೋಚಹೊಂದುತ್ತಾರೆ. ಆದುದರಿಂದ ಶೂರನಾದ ನೀನು ಅಲ್ಲಿಗೆ ಹೋಗಬೇಕೆಂಬ ಬುದ್ಧಿಯನ್ನೇ ಮಾಡಕೂಡದು. ಧುಂಧುವೇ ಆ ವೈರಾಜ್ಯವೆಂಬ ಲೋಕವು ಮನುಷ್ಯರಿಗೆಲ್ಲಾ ದುರ್ಗಮವಾದುದು. ಅಲ್ಲಿ ಹತ್ತಲು ಯಾರಿಂದಲೂ ಸಾಧ್ಯವಿಲ್ಲ.

ತೇಷಾಂ ವಚನಮಾಕರ್ಣ್ಯ ಧುಂಧುಃ ಪ್ರೋವಾಚ ದಾನವಾನ್ ।
ಗಂತುಕಾಮಃ ಸ ಸದನಂ ಬ್ರಹ್ಮಣೋ ಜೇತುಮೀಶ್ವರಂ ॥ ೨೬ ॥

ಕಥಂ ತು ಕರ್ಮಣಾ ಕೇನ ಗಮ್ಯತೆ ದಾನವರ್ಷಭಾಃ ।
ಕಥಂ ತತ್ರ ಸಹಸ್ರಾಕ್ಷಃ ಸಂಪ್ರಾಪ್ತಃ ಸಹ ದೈವತೈಃ ॥ ೨೭ ॥

ತೆ ಧುಂಧುನಾ ದಾನವೇಂದ್ರಾಃ ಪೃಷ್ಟಾಃ ಪ್ರೋಚುರ್ವಚೋಧಿಪಂ ।
ನವಯಂ ವಿದ್ಮತತ್ಕರ್ಮ ಶುಕ್ರಸ್ತದ್ವೇತ್ತ್ಯಸಂಶಯಂ ॥ ೨೮ ॥

ದೈತ್ಯಾನಾಂ ತು ವಚಃ ಶ್ರುತ್ವಾ ಧುಂಧುರ್ದೈತ್ಯಪುರೋಹಿತಂ ।
ಪಪ್ರಚ್ಛ ಶುಕ್ರಂ ಕಿಂ ಕರ್ಮ ಕೃತ್ವಾ ಬ್ರಹ್ಮಸದೋಗತಿಃ ॥ ೨೯ ॥

ತತೋಽಸ್ಮೈ ಕಥಯಾಮಾಸ ದೈತ್ಯಾಚಾರ್ಯಃ ಕಲಿಪ್ರಿಯ ।
ಶಕ್ರಸ್ಯ ಚರಿತಂ ಶ್ರೀಮಾನ್ ಪುರಾವೃತ್ರರಿಪೋಃ ಕಿಲ ॥ ೩೦ ॥

ಸಹಸ್ರಾಕ್ಷಃ ಶತಂ ಚೈಕಂ ಯಜ್ಞಾನಾಮಯಜತ್ಪುರಾ ।
ದೈತ್ಯೇಂದ್ರ ವಾಜಿಮೇಧಾನಾಂ ತೇನ ಬ್ರಹ್ಮಸದೋಗತಿಃ ॥ ೩೧ ॥

೨೬-೨೯. ಅವರ ಮಾತನ್ನು ಕೇಳಿ ಧುಂಧುವು ಹೇಗಾದರೂ ಮಾಡಿ ಬ್ರಹ್ಮ ಲೋಕಕ್ಕೆ ಹೋಗಿ ಇಂದ್ರನನ್ನು ಜಯಿಸಲೇಬೇಕೆಂಬ ಇಚ್ಛೆಯಿಂದ ಆ ದಾನವರನ್ನು ಕುರಿತು ಯಾವ ಕರ್ಮಾಚರಣೆಯಿಂದ ಹೇಗೆ ಅಲ್ಲಿಗೆ ಹೋಗಬಹುದು. ಇಂದ್ರನು ದೇವತೆಗಳೊಡನೆ ಅಲ್ಲಿಗೆ ಹೇಗೆ ಹೋಗಿ ಸೇರಿದನು ಎಂದು ಪ್ರಶ್ನೆಮಾಡಲು ಆ ದಾನವೋತ್ತಮರು ನಮಗೆ ಆ ಕರ್ಮವು ಗೊತ್ತಿಲ್ಲ ಶುಕ್ರನು ಅದನ್ನು ಸರಿಯಾಗಿ ತಿಳಿದಿರುವನು ಎಂದು ಉತ್ತರವಿತ್ತರು ದೈತ್ಯರ ಆ ಮಾತನ್ನು ಕೇಳಿ ಧುಂಧುವು ದೈತ್ಯಪುರೋಹಿತನಾದ ಶುಕ್ರನನ್ನು ಕರೆದು ಯಾವ ಕರ್ಮವನ್ನು ಮಾಡಿ ಬ್ರಹ್ಮನ ಸದಸ್ಸಿಗೆ ಹೋಗಬಹುದೆಂದು ಪ್ರಶ್ನೆಮಾಡಿದನು.

೩೦-೩೧. ಅನಂತರ ದೈತ್ಯಾಚಾರ್ಯನಾದ ಶುಕ್ರನು ವೃತ್ರವೈರಿಯಾದ ಇಂದ್ರನ ಪೂರ್ವಚರಿತ್ರೆಯನ್ನು ಹೇಳಿ ಇಂದ್ರನು ಪೂರ್ವದಲ್ಲಿ ನೂರೊಂದು ಅಶ್ವಮೇಧ ವನ್ನು ಮಾಡಿದುದರಿಂದ ಅವನಿಗೆ ಬ್ರಹ್ಮಲೋಕಗಮನವು ಸಿದ್ಧಿಸಿತೆಂದೂ ಹೇಳಿದನು.

ತದ್ವಾಕ್ಯಂದಾನವಪತಿಃ ಶ್ರುತ್ವಾ ಶುಕ್ರಸ್ಯವೀರ್ಯವಾನ್ ।
ಯಷ್ಟುಂ ಗೋಮೇಧಯಜ್ಞಾನಾಂ ಚಕಾರಮತಿಮುತ್ತಮಾಂ ॥ ೩೨ ॥

ಅಥಾ ಮನ್ತ್ರ್ಯಸುರಗುರುಂ ದಾನವಾಂಶ್ಚಾಪ್ಯನುತ್ತಮಾನ್ ।
ಪ್ರೋವಾಚ ಯಕ್ಷ್ಯೇಹಂ ಯಜ್ಞೈಃ ಅಶ್ವಮೇಧೈಸ್ಸುದಕ್ಷಿಣೈಃ
ತದಾಗಚ್ಛಧ್ವಮವನೀಂ ಗಚ್ಛಾಮೋ ವಸುಧಾಧಿಪಾನ್ ॥ ೩೩ ॥

ವಿಜಿತ್ಯ ಹಯಮೇಧಾನ್ವೈ ಯಥಾಕಾಮಗುಣಾನ್ವಿತಾನ್ ।
ಆಹೂಯಂತಾಂ ಚ ನಿಧಯಸ್ತ್ವಾಜ್ಞಾಪ್ಯಂತಾಂ ಚ ಗುಹ್ಯಕಾಃ ॥ ೩೪ ॥

ಆಮಂತ್ರ್ಯಂತಾಂ ದ್ವಿಜಶ್ರೇಷ್ಠಾಃ ಪ್ರಯಾಮೋ ದೇವಿಕಾತಟಂ ।
ಸಾ ಹಿ ಪುಣ್ಯಾ ಸರಿಚ್ಛ್ರೇಷ್ಠಾ ಸರ್ವಸಿದ್ಧಿಕರೀಸ್ಮೃತಾ ।
ಸ್ಥಾನಂ ಪ್ರಾಚೀನಮಾಸಾದ್ಯ ವಾಜಿಮೇಧಾನ್ಯಜಾಮಹೆ ॥ ೩೫ ॥

ಇತ್ಥಂ ಸುರಾರೇರ್ವಚನಂ ನಿಶಮ್ಯಾಸುರಯಾಜಕಾಃ ।
ಬಾಢಮಿತ್ಯಬ್ರುವನ್ ಹೃಷ್ಟೋ ನಿಧೀಶಂ ಸಂದಿದೇಶ ಸಃ ॥ ೩೬ ॥

ಶುಕ್ರನ ಆ ಮಾತನ್ನು ಕೇಳಿದೊಡನೆಯೇ ಧುಂಧುವು ಗೋಮೇಧ ಯಜ್ಞಗಳನ್ನು ಮಾಡಲು ನಿಶ್ಚೈಸಿದನು.

೩೩-೩೫. ಅನಂತರ ಶುಕ್ರಾಚಾರ್ಯನನ್ನೂ ದಾನವಪ್ರಮುಖರನ್ನೂ ಬರಮಾಡಿ ನಾನು ಅಪರಿಮಿತ ದಕ್ಷಿಣೆಯುಳ್ಳ ಅಶ್ವಮೇಧಗಳಿಂದ ಯಾಗಮಾಡುವೆನು. ನೀವೆಲ್ಲರೂ ಬನ್ನಿ, ಭೂಲೋಕಕ್ಕೆ ಹೋಗಿ ಅಲ್ಲಿನ ರಾಜರುಗಳನ್ನೆಲ್ಲಾ ಜಯಿಸಿ ಇಷ್ಟಫಲಸಾಧಕವಾದ ಅಶ್ವಮೇಧಗಳನ್ನಾಚರಿಸೋಣ, ನಿಧಿಗಳನ್ನೆಲ್ಲಾ ಬರಮಾಡಿರಿ, ಗುಹ್ಯಕರನ್ನು ಕಾರ್ಯಗಳಲ್ಲಿ ಆಜ್ಞಾಪಿಸಿರಿ, ಬ್ರಾಹ್ಮಣೋತ್ತಮರನ್ನು ಆಹ್ವಾನಿಸಿರಿ, ದೇವಿಕಾನದಿಯ ದಡಕ್ಕೆ ಹೋಗೋಣ. ಪುಣ್ಯಕರವಾದ ಆ ನದಿಯು ಸಮಸ್ತಸಿದ್ಧಿಗಳಿಗೂ ಕಾರಣವಾದದ್ದು. ಆ ನದಿಯ ಪೂರ್ವದ ದಡವನ್ನು ಹೊಂದಿ ಅಲ್ಲಿ ಅಶ್ವಮೇಧಗಳನ್ನು ಮಾಡೋಣ ಎಂದನು.

೩೬-೩೭. ಧುಂಧುವಿನ ಈ ಮಾತನ್ನು ಕೇಳಿ ಅಸುರಯಾಜಕರೆಲ್ಲರೂ ಆಗಬಹುದೆಂದು ಅಂಗೀಕರಿಸಿದರು. ಅನಂತರ ಸಂತುಷ್ಟನಾದ ಧುಂಧುವು ನಿಧಿಪತಿಗಳಿಗೆ ಸಂದೇಶಕಳುಹಿಸಿದನು. ಅನಂತರ ಧುಂಧುವು ದೇವಿಕಾನದಿಯ ಪೂರ್ವದಡದಲ್ಲಿ

ತತೋ ಧುಂಧುರ್ದೇವಿಕಾಯಾಂ ಪ್ರಾಚೀನೇ ಪಾಪನಾಶನೇ ।
ಭಾರ್ಗವೇಂದ್ರೇಣ ಶುಕ್ರೇಣ ವಾಜಿಮೇಧಾಯ ದೀಕ್ಷಿತಃ ॥ ೩೭ ॥

ಸದಸ್ಯಾ ಋತ್ವಿಜಶ್ಚಾಪಿ ತತ್ರಾಸನ್ ಭಾರ್ಗವಾ ದ್ವಿಜಾಃ ।
ಶುಕ್ರಸ್ಯಾನುಮತೇ ಬ್ರಹ್ಮನ್ ಶುಕ್ರಶಿಷ್ಯಾಶ್ಚ ಪಂಡಿತಾಃ ॥ ೩೮ ॥

ಯಜ್ಞಭಾಗಭುಜಸ್ತತ್ರ ಸ್ವರ್ಭಾನುಪ್ರಮುಖಾ ಮುನೇ ।
ಕೃತಾಶ್ಚಾಸುರನಾಥೇನ ಶುಕ್ರಸ್ಯಾನುಮತೇಽಸುರಾಃ ॥ ೩೯ ॥

ತತಃ ಪ್ರವೃತ್ತೋ ಯಜ್ಞಸ್ತು ಸಮುತ್ಸೃಷ್ಟಸ್ತಥಾ ಹಯಃ ।
ಹಯಸ್ಯಾನುಯಯೌ ಶ್ರೀಮಾನಸಿಲೋಮಾ ಮಹಾಸುರಃ ॥ ೪೦ ॥

ತತೋಽಗ್ನಿಧೂಮೇನ ಮಹೀ ಸಶೈಲಾ
ವ್ಯಾಪ್ತಾ ದಿಶೋಽವ್ಯೈ ವಿದಿಶಶ್ಚ ಪೂರ್ಣಾಃ ।
ತೇನೋಗ್ರಗಂಧೇನ ದಿವಃಸ್ಪೃಶೇನ
ಮರುದ್ವವೌ ಬ್ರಹ್ಮಲೋಕೇ ಮಹರ್ಷೇ ॥ ೪೧ ॥

ತಂ ಗಂಧಮಾಘ್ರಾಯ ಸುರಾ ವಿಷಣ್ಣಾ
ಜಾನಂತ ಧುಂಧುಂ ಹಯಮೇಧದೀಕ್ಷಿತಂ ।

ಭಾರ್ಗವಪತಿಯಾದ ಶುಕ್ರನೊಡನೆ ಅಶ್ವಮೇಧಮಾಡಲು ದೀಕ್ಷೆಹೊಂದಿದನು. ಶುಕ್ರನ ಅನುಮತಿಯಂತೆ ಭಾರ್ಗವರಾದ ಬ್ರಾಹ್ಮಣರೂ ಶುಕ್ರಶಿಷ್ಯರೂ ಪಂಡಿತರೂ ಸದಸ್ಯರೂ ಋತ್ವಿಕ್ಕುಗಳೂ ಆದರು. ಹಾಗೆಯೇ ಶುಕ್ರನ ಅನುಮತಿಯಂತೆ ಯಜ್ಞ ಭಾಗವನ್ನು ಸ್ವೀಕರಿಸಲು ಸ್ವರ್ಭಾನುವೇ ಮೊದಲಾದ ಅಸುರರು ಸಿದ್ಧರಾದರು.

೪೦-೪೨. ಅನಂತರ ಯಜ್ಞವು ಪ್ರಾರಂಭಿಸಲ್ಪಟ್ಟಿತು. ಅಶ್ವಮೇಧದ ಕುದುರೆಯೂ ಬಿಡಲ್ಪಟ್ಟಿತು. ಅಸಿಲೋಮನೆಂಬ ಮಹಾಸುರನು ಆ ಕುದುರೆಗೆ ರಕ್ಷಕನಾಗಿ ಅನುಸರಿಸಿ ಹೊರಟನು ಆಗ ಯಜ್ಞಾಗ್ನಿಯಿಂದ ಹೊರಟ ಹೊಗೆಯು ಸಪರ್ವತವಾದ ಮಹೀಮಂಡಲವನ್ನೂ ದಿಕ್ಕುವಿದಿಕ್ಕುಗಳನ್ನೂ ವ್ಯಾಪಿಸಿತು. ಆಕಾಶ ಪರ್ಯಂತವೂ ವ್ಯಾಪಿಸಿದ ಆ ಹೊಗೆಯಿಂದ ಸುಗಂಧಿಯಾದ ವಾಯುವು ಸತ್ಯಲೋಕ ಪರ್ಯಂತವೂ ಬೀಸಿತು. ಆ ವಾಸನೆಯಿಂದ ಅಲ್ಲಿದ್ದ ದೇವತೆಗಳು ಧುಂಧುವು

ತತಃ ಶರಣ್ಯಂ ಶರಣಂ ಜನಾರ್ದನಂ
ಜಗ್ಮುಃ ಸಶಕ್ರಾ ಜಗತಃ ಪರಾಯಣಂ ॥ ೪೨ ॥

ಪ್ರಣಮ್ಯ ವರದಂ ದೇವಂ ಪದ್ಮನಾಭಂ ಜನಾರ್ದನಂ ।
ಪ್ರೋಚುಸ್ಸರ್ವೇ ಸುರಗಣಾಃ ಭಯಗದ್ಗದಯಾ ಗಿರಾ ॥ ೪೩ ॥

ಭಗವನ್ ದೇವದೇವೇಶ ಚರಾಚರಪರಾಯಣ ।
ವಿಜ್ಞಪ್ತಿಃ ಶ್ರೂಯತಾಂ ವಿಷ್ಣೋ ಸುರಾಣಾಮಾರ್ತಿನಾಶನ ॥ ೪೪ ॥

ಧುಂಧುರ್ನಾಮಾಸುರಪತಿಃ ಬಲವಾನ್ಬಲಸಂವೃತಃ ।
ಸರ್ವಾನ್ ಸುರಾನ್ ವಿನಿರ್ಜಿತ್ಯ ತ್ರೈಲೋಕ್ಯಮಹರದ್ಬಲಿಃ ॥ ೪೫ ॥

ಋತೇ *ಪಿನಾಕಿನಂ ದೇವಂ ತ್ರಾತಾ ನೋನ್ಯೋ ನವಿದ್ಯತೇ ।
ಅತೋಽಸೌ ವೃದ್ಧಿಮಗಮದ್ಯಥಾ ವ್ಯಾಧಿರುಪೇಕ್ಷಿತಃ ॥ ೪೬ ॥

ಯಜ್ಞದಲ್ಲಿ ದೀಕ್ಷಿತನಾಗಿರುವನೆಂದು ತಿಳಿದು ಬಹಳ ವಿಷಾದಪಟ್ಟರು. ಅನಂತರ ಇಂದ್ರನೊಡಗೂಡಿದ ದೇವತೆಗಳೆಲ್ಲರೂ ಸರ್ವಶರಣ್ಯನಾದ ಜನಾರ್ದನನಲ್ಲಿ ಶರಣು ಹೊಕ್ಕರು.

೪೩-೪೬. ಆಗ ದೇವತೆಗಳು ವರಪ್ರದನಾದ ಆ ಪದ್ಮನಾಭನನ್ನು ನಮಸ್ಕರಿಸಿ ಭಯದಿಂದ ಗದ್ಗದ ಧ್ವನಿಯುಳ್ಳವರಾಗಿ ಹೀಗೆ ಪ್ರಾರ್ಥಿಸಿದರು. ಪೂಜ್ಯನೇ, ಚರಾಚರಗಳಿಗೂ ಪ್ರಾಪ್ಯನೇ, ದೇವದೇವೇಶನೇ, ದೇವತೆಗಳ ದುಃಖನಾಶಕನಾದ ನೀನು ನಮ್ಮ ಈ ವಿಜ್ಞಾಪನೆಯನ್ನು ಲಾಲಿಸಬೇಕು. ಧುಂಧುವೆಂಬ ಬಲಿಷ್ಠನಾದ ಅಸುರರಾಜನು ಸೇನಾಸಮೇತನಾಗಿ ಯುದ್ಧದಲ್ಲಿ ದೇವತೆಗಳೆಲ್ಲರನ್ನೂ ಜಯಿಸಿ ಮೂರು ಲೋಕವನ್ನೂ ಅಪಹರಿಸಿದ್ದಾನೆ. ಇಂದ್ರನೊಬ್ಬನನ್ನು ಹೊರತು ನಮಗೆ ಯಾರೂ ರಕ್ಷಕರಿಲ್ಲ. ಅವನೂ ಜಯಿಸಲ್ಪಟ್ಟಿರುವುದರಿಂದ ಉಪೇಕ್ಷಿತವಾದ ವ್ಯಾಧಿಯಂತೆ ಇವನು ಬಹಳ ವೃದ್ಧಿಹೊಂದುತ್ತಿರುವನು.

---

*ಇಲ್ಲಿ ರಾಕ್ಷಸನಾಶಕನಾದ ಶಂಕರನೂ ತಟಸ್ಥನಾಗಿರುವುದರಿಂದ ನಮಗೆ ಯಾರೂ ರಕ್ಷಕರಿಲ್ಲ. ಎಂದೂ ಅರ್ಥವಾಗುತ್ತದೆ.

ಸಾಂಪ್ರತಂ ಬ್ರಹ್ಮಲೋಕಸ್ಥಾನಪಿ ಜೇತುಂ ಸಮುದ್ಯತಃ ।
ಶುಕ್ರಸ್ಯ ಮತಮಾದಾಯ ಸೋಽಶ್ವಮೇಧಾಯ ದೀಕ್ಷಿತಃ ॥ ೪೭ ॥
ಶತಂ ಕ್ರತೂನಾಮಿಷ್ಟ್ವಾಸೌ ಬ್ರಹ್ಮಲೋಕಂ ಮಹಾಸುರಃ ।
ಆರೋಢುಮಿಚ್ಛತಿ ವಶೀ ವಿಜೇತುಂ ತ್ರಿದಶಾನಪಿ ॥ ೪೮ ॥
ತಸ್ಮಾದಕಾಲಹೀನಂ ತು ಚಿಂತಯಸ್ವ ಜಗದ್ಗುರೋ ।
ಉಪಾಯಂ ಮಖವಿಧ್ವಂಸೇ ಯೇನಸ್ಯಾಮ ಸುನಿರ್ವೃತಾಃ ॥ ೪೯ ॥
ಶ್ರುತ್ವಾ ಸುರಾಣಾಂ ವಚನಂ ಭಗವಾನ್ ಮಧುಸೂದನಃ ।
ದತ್ವಾ ಭಯಂ ಮಹಾಬಾಹುಃ ಪ್ರೇಷಯಾಮಾಸ ಸಾಂಪ್ರತಂ
ವಿಸೃಜ್ಯ ಚ ತದಾ ಸರ್ವಾಂಸ್ತ್ಯಕ್ತ್ವಾ ಜೇಯಂ ಮಹಾಸುರಂ ॥ ೫೦ ॥
ಬಂಧನಾಯ ಮತಿಂ ಚಕ್ರೇ ಧುಂಧೋಃ *ಧರ್ಮಧ್ವಜಸ್ಯ ವೈ ।
ತತಃ ಕೃತ್ವಾ ಸ ಭಗವಾನ್ ವಾಮನಂ ರೂಪಮೀಶ್ವರಃ । ॥ ೫೧ ॥

---

೪೭. ಈಗ ಅವನು ಬ್ರಹ್ಮಲೋಕದಲ್ಲಿರುವವರನ್ನೂ ಜಯಿಸಲು ಪ್ರಯತ್ನಿಸಿ ಶುಕ್ರನ ಅಭಿಪ್ರಾಯದಂತೆ ಅಶ್ವಮೇಧಮಾಡಲು ದೀಕ್ಷಿತನಾಗಿರುವನು. ಈ ಮಹಾಸುರನು ಜಿತೇಂದ್ರಿಯನಾಗಿ ನೂರೊಂದು ಅಶ್ವಮೇಧವನ್ನೂ ಮಾಡಿ ಬ್ರಹ್ಮಲೋಕವನ್ನೂ ಹತ್ತಿ ಅಲ್ಲಿರುವ ದೇವತೆಗಳನ್ನೂ ಜಯಿಸಲು ಅಪೇಕ್ಷಿಸುತ್ತಿದ್ದಾನೆ.

೪೮. ಆದುದರಿಂದ ಜಗದ್ಗುರುವಾದ ನೀನು ಕಾಲವಿಲಂಬದಿಂದ ಈ ಸಮಯವನ್ನು ವ್ಯರ್ಥಮಾಡದೆ ಇವನ ಈ ಯಜ್ಞವನ್ನು ಧ್ವಂಸಮಾಡಲು ಸರಿಯಾದ ಉಪಾಯವನ್ನು ಆಲೋಚಿಸಬೇಕು. ಅಂತಹ ನಿನ್ನ ವ್ಯವಸಾಯದಿಂದ ನಾವು ಸುಖಿಗಳಾಗುವೆವು ಎಂದರು. ಸುರರ ಈ ಮಾತನ್ನು ಕೇಳಿ ಷಡ್ಗುಣೈಶ್ವರ್ಯಪರಿಪೂರ್ಣನಾದ ಆ ಮಧುಸೂದನನು ಸದ್ಯಕ್ಕೆ ಹಾಗೇ ಆಗಲೆಂದು ಅವರಿಗೆ ಅಭಯವನ್ನಿತ್ತು ಕಳುಹಿಸಿದನು.

೪೯-೫೧. ದೇವತೆಗಳೆಲ್ಲರನ್ನೂ ಕಳುಹಿಸಿ ಧರ್ಮಧ್ವಜನಾಗಿದ್ದ ಆ ಅಸುರನನ್ನು ಜಯಿಸುವ ಇಚ್ಛೆಯನ್ನು ಬಿಟ್ಟು ಬಂಧಿಸಬೇಕೆಂದು ನಿಶ್ಚಯಿಸಿದನು. ಅನಂತರ ಆ ಮಹಾವಿಷ್ಣುವು ವಾಮನರೂಪವನ್ನು ಹೊಂದಿ ನಿರಾಧಾರವಾದ ಆ ದೇಹವನ್ನು ಕಟ್ಟಿಗೆಯಂತೆ ದೇವಿಕಾನದಿಯ ನೀರಿನಲ್ಲಿ ತೇಲಾಡಿಸುತ್ತಾ ಬಿಚ್ಚಿಹೋದ ಕೂದಲುಗಳಿಂದ ಕೂಡಿ ಕ್ಷಣಕಾಲ ತೇಲುತ್ತಾ ಕ್ಷಣಕಾಲ ಮುಳುಗುತ್ತಾ ಆಕಸ್ಮಿಕವಾಗಿ ಯಜ್ಞಶಾಲೆಯಿರುವ ಪ್ರವಾಹದಲ್ಲಿ ಬಂದನು

---

*ಧರ್ಮಧ್ವಜನೆಂದರೆ ಪರಮಾರ್ಥ ದೃಷ್ಟಿ ಇಲ್ಲದೆ ಖ್ಯಾತಿಗಾಗಿ ಧರ್ಮಗಳನ್ನು ಆಚರಿಸತಕ್ಕವನು, ಹೇಗಾದರೂ ಧರ್ಮಾಚರಣೆಯಲ್ಲಿ ಹೊರಟಿರುವವನ ನಿಗ್ರಹವು ನ್ಯಾಯಸಮ್ಮತವಲ್ಲ. ಆದುದರಿಂದ ಅವನನ್ನು ಬಂಧಿಸುವುದು ಮಾತ್ರವೇ ಅಪರಾಧಕ್ಕೆ ಸರಿಯಾದ ಶಿಕ್ಷೆ ಎಂದು ತಾತ್ಪರ್ಯ.

ದೇಹಂ ತ್ಯಕ್ತ್ವಾ ನಿರಾಲಂಬಂ ಕಾಷ್ಠವದ್ದೇವಿಕಾಜಲೆ ।
ಕ್ಷಣಾನ್ಮಜ್ಜಂಸ್ತಥೋನ್ಮಜ್ಜನ್ಮುಕ್ತಕೇಶೋಯದೃಚ್ಛಯಾ ॥ ೫೨ ॥

ದೃಷ್ಟೋಥ ದೈತ್ಯಪತಿನಾ ದೈತೇಯೈಶ್ಚ ತಥರ್ಷಿಭಿಃ ।
ತತಃ ಕರ್ಮಪರಿತ್ಯಜ್ಯ ಯಜ್ಞೀಯಂ ಬ್ರಾಹ್ಮಣೋತ್ತಮಾಃ ॥ ೫೩ ॥

ಸಮುತ್ತಾರಯಿತುಂ ವಿಪ್ರಮಾದ್ರವಂತ ಸಮಾಕುಲಾಃ ।
ಸದಸ್ಯಾ ಯಜಮಾನಶ್ಚ ಋತ್ವಿಜೋಽಥ ಮಹೌಜಸಃ ॥ ೫೪ ॥

ನಿಮಜ್ಜಮಾನಮುಜ್ಜಹ್ರುಃ ತೇಚ ತೇ ವಾಮನಂ ದ್ವಿಜಂ ।
ಸಮುತ್ತಾರ್ಯ ಪ್ರಸನ್ನಾಸ್ತೇ ಪಪ್ರಚ್ಛುಃ ಸರ್ವಏವ ಹಿ
ಕಿಮರ್ಥಂ ಪತಿತೋಸೀಹ ಕೇನಾಕ್ಷಿಪ್ತೋಸಿ ವಾ ವದ ॥ ೫೫ ॥

ತೇಷಾಮಾಕರ್ಣ್ಯವಚನಂ ಕಂಪಮಾನೋ ಮುಹುರ್ಮುಹುಃ ।
ಪ್ರಾಹ ಧುಂಧುಪುರೋಗಾಂಸ್ತಾನ್ ಶ್ರೂಯತಾಮತ್ರಕಾರಣಂ ॥ ೫೬ ॥

೫೨-೫೩. ಆಗ ಅಲ್ಲಿದ್ದ ದೈತ್ಯರಾಜನಿಂದಲೂ ದೈತ್ಯರು ಮತ್ತು ಋಷಿಗಳಿಂದಲೂ ನೋಡಲ್ಪಟ್ಟನು. ಅನಂತರ ಅಲ್ಲಿದ್ದ ಬ್ರಾಹ್ಮಣೋತ್ತಮರೆಲ್ಲರೂ ತಮ್ಮ ಯಜ್ಞಕರ್ಮವನ್ನು ಬಿಟ್ಟು ವಾಮನರೂಪಿಯಾದ ಈ ಬ್ರಾಹ್ಮಣನನ್ನು ಪ್ರವಾಹದಿಂದ ಮೇಲಕ್ಕೆ ದಾಟಿಸಲು ತ್ವರಿತರಾಗಿ ಓಡಿಬಂದರು.

೫೪-೫೬. ಸದಸ್ಯರೂ ಯಜಮಾನನೂ ತೇಜಸ್ವಿಗಳಾದ ಋತ್ವಿಜರೂ ಸಹ ಮುಳುಗಿಹೋಗುತ್ತಿದ್ದ ಈ ಬ್ರಾಹ್ಮಣ ವಾಮನನನ್ನು ಮೇಲಕ್ಕೆತ್ತಿ ದಡವನ್ನು ಹೊಂದಿಸಿ ಪ್ರಸನ್ನರಾಗಿ ಎಲ್ಲರೂ ವಾಮನನನ್ನು ಕೇಳಿದರು. ನೀನು ಈ ಪ್ರವಾಹದಲ್ಲಿ ಏತಕ್ಕಾಗಿ ಬಿದ್ದೆ? ಯಾರಾದರೂ ನಿನ್ನನ್ನು ಪ್ರವಾಹದಲ್ಲಿ ಹಾಕಿದರೇ? ಏನು ಎಂದು ಎಲ್ಲರೂ ಪ್ರಶ್ನೆಮಾಡಲು ಅವರ ಮಾತನ್ನು ಕೇಳಿ ವಾಮನನು ಬಾರಿಬಾರಿಗೂ ನಡುಗುತ್ತಾ ಆ ಧುಂಧುವಿನ ಅನುಯಾಯಿಗಳನ್ನು ಕುರಿತು ನಾನು ಬಿದ್ದುದಕ್ಕೆ ಕಾರಣವನ್ನು ಹೇಳುತ್ತೇನೆ ಕೇಳಿರಿ ಎಂದನು.

ಬ್ರಾಹ್ಮಣೋ ಗುಣವಾನಾಸೀತ್ಪ್ರಭಾಸ ಇತಿ ವಿಶ್ರುತಃ ।
ಸರ್ವಶಾಸ್ತ್ರಾರ್ಥವಿತ್ಪ್ರಾಜ್ಞೋಗೋತ್ರೇಣಾಪಿ ತು ವಾರುಣಃ ॥ ೫೭ ॥

ತಸ್ಯ ಪುತ್ರದ್ವಯಂ ಜಾತಂ ಮಂದಪ್ರಜ್ಞಂ ಸುದುಃಖಿತಂ ।
ತತ್ರ ಜ್ಯೇಷ್ಠೋಮಮ ಭ್ರಾತಾ ಕನೀಯಾನಪರಸ್ತ್ವಹಂ ॥ ೫೮ ॥

ನೇತ್ರಭಾಸಇತಿ ಖ್ಯಾತೋ ಜ್ಯೇಷ್ಠೋ ಭ್ರಾತಾ ಮಮಾಭವತ್ ।
ಮಮ ನಾಮ ಪಿತಾ ಚಕ್ರೆ ಗತಿಭಾಸೇತಿ ಕೌತುಕಾತ್ ॥ ೫೯ ॥

ರಮ್ಯಶ್ಚಾವಸಥಶ್ಚಾಪಿ ಶುಭ ಆಸೀತ್ಪಿತುರ್ಮಮ ।
ತ್ರೈವಿಷ್ಟಪಗುಣೈರ್ಯುಕ್ತಃ ಸ್ವರ್ಗವಾಸೋಪಮಃ ಶುಭಃ ॥ ೬೦ ॥

ತತಃ ಕಾಲೇನ ಮಹತಾ ಆವಯೋಃ ಸ ಪಿತಾ ಮೃತಃ ।
ತಸ್ಯೌರ್ಧ್ವದೇಹಿಕಂ ಕೃತ್ವಾ ಗೃಹಮಾವಾಂ ಸಮಾಗತೌ ॥ ೬೧ ॥

ತತೋ ಮಯೋಕ್ತಃ ಸಭ್ರಾತಾ ವಿಭಜಾಮ ಗೃಹಂ ವಯಂ ।
ತೇನೋಕ್ತೋನ್ನೈವ ಭವತೋ ವಿದ್ಯತೆ ಭಾಗ ಇತ್ಯಹಂ ॥ ೬೨ ॥

೫೭-೬೦. ಪ್ರಭಾಸನೆಂದು ಪ್ರಖ್ಯಾತನಾದ ಗುಣಶಾಲಿಯೂ ಸರ್ವಶಾಸ್ತ್ರಾರ್ಥ ತತ್ವಜ್ಞನೂ ಆದ ಬ್ರಾಹ್ಮಣೋತ್ತಮನಿದ್ದನು. ಅವನು ವರುಣಗೋತ್ರದವನು. ಆ ಬ್ರಾಹ್ಮಣನಿಗೆ ಪ್ರಜ್ಞಾರಹಿತವಾಗಿ ದುಃಖಿಯಾದ ಪುತ್ರಯುಗ್ಮವುಂಟಾಯಿತು. ಅವರಲ್ಲಿ ನೇತ್ರಭಾಸನೆಂದು ಪ್ರಖ್ಯಾತನಾಗಿದ್ದವನು ನನ್ನ ಅಣ್ಣನು. ತಂದೆಯಿಂದ ಗತಿಭಾಸ ನೆಂದು ನಾಮಕರಣಮಾಡಲ್ಪಟ್ಟ ನಾನೇ ಕಿರಿಯವನು. ನನ್ನ ತಂದೆಗೆ ಸ್ವರ್ಗಸದೃಶ ವಾಗಿಯೂ.ಸರ್ವಗುಣಗಳಿಂದ ಪರಿಪೂರ್ಣವೂ ಆದ ಶುಭಕರವಾದ ಮನೆಯೊಂದಿದ್ದಿತು.

೬೧-೬೪. ಅನಂತರ ಬಹಳಕಾಲ ಕಳೆದನಂತರ ನಮ್ಮ ಆ ತಂದೆಯು ಮೃತ ನಾದನು. ಅವನ ಉತ್ತರಕ್ರಿಯೆಯನ್ನೆಲ್ಲಾ ಮಾಡಿ ನಾವು ಮನೆಗೆ ಬಂದೆವು. ಅನಂತರ ನಾನು ಆ ಅಣ್ಣನನ್ನು ಕುರಿತು ನಾವು ಇನ್ನು ಮನೆಯನ್ನು ವಿಭಾಗಮಾಡಿಕೊಳ್ಳೋ ಣವೇ ಎಂದು ಕೇಳಿದೆನು. ಆಗ ಅಣ್ಣನು ನಿನಗೆ ಈ ಮನೆಯಲ್ಲಿ ಭಾಗವಿಲ್ಲ. ಇದಕ್ಕೆ ನಾನೇ ಯಜಮಾನನು. ಕುಬ್ಜರು ಸ್ವಭಾವದಿಂದಲೇ ವಾಮನರಾಗಿರುವವರು, ಕುಂಟರು, ನಪುಂಸಕರು, ಕುಷ್ಠಿಗಳು, ಹುಚ್ಚರು, ಅಂಧಕರು (ಹುಟ್ಟುಕುರುಡರೆಂದರ್ಥ)

ಕುಬ್ಜವಾಮನಖಂಜಾನಾಂ ಕ್ಲೀಬಾನಾಂ ಶ್ವಿತ್ರಿಣಾಮಪಿ ।
ಉನ್ಮತ್ತಾನಾಂ ತಥಾಂಧಾನಾಂ ಧನಭಾಗೋ ನ ವಿದ್ಯತೇ ॥ ೬೩ ॥

ಪ್ರಿಯಂ ವಾಕ್ಯಂ ಗೃಹೇವಾಸೋ ಭೋಜನಾಚ್ಛಾದನಾದಿಕಂ ।
ಏತಾವದ್ದೀಯತೇ ತೇಭ್ಯೋ ನಾರ್ಥಭಾಗಹರಾ ಹಿ ತೇ ॥ ೬೪ ॥

ಏವಮುಕ್ತೋ ಮಯಾ ಸೋಽಥ ಕಿಮರ್ಧಂ ಪೈತೃಕಾದ್ಗೃಹಾತ್ ।
ಧನಾರ್ಧಭಾಗಮರ್ಹಾಮಿ ನಾಹಂ ನ್ಯಾಯೇನ ಕೇನ ವೈ ॥ ೬೫ ॥

ಇತ್ಯುಕ್ತೋ ಬಲವಾನ್ ಭ್ರಾತಾ ಕೇಶಾನ್ ಜಗ್ರಾಹ ಮೇಽಸುರ ।
ಸಮುತ್ಕ್ಷಿಪ್ಯಾಕ್ಷಿಪನ್ನದ್ಯಾಂ ನ ಜಾನೇಹ್ಯವತಾರಣಂ ॥ ೬೬ ॥

ಮಮಾಸ್ಯಾಂ ನಿಮ್ನಗಾಯಾಂ ತು ಮಧ್ಯೇನ ಪ್ಲವತೋ ಗತಿಃ ।
ಕಾಲಃ ಸಂವತ್ಸರಾಖ್ಯಸ್ತು ಯುಷ್ಮಾಭಿರಮೃತೋಽಧೃತಃ ॥ ೬೭ ॥

ಕೇ ಭವಂತೋಽತ್ರ ಸಂಪ್ರಾಪ್ತಾಃ ಸಸ್ನೇಹಾ ಬಾಂಧವಾ ಇವ ।
ಕೋಽಯಂ ಶಕ್ರಪ್ರತೀಕಾಶೋ ಯುಷ್ಮನ್ಮಧ್ಯೇ ಪ್ರದೃಶ್ಯತೇ ॥ ೬೮ ॥

ಇವರಿಗೆ ಶಾಸ್ತ್ರರೀತಿಯಲ್ಲಿ ಧನಭಾಗವಿಲ್ಲ. ಮನೆಯಲ್ಲಿ ವಸ್ತ್ರ ಮತ್ತು ಭೋಜನಗಳನ್ನು ಕೊಟ್ಟು ಪ್ರಿಯವಾದ ಮಾತಿನಿಂದ ಇವರನ್ನು ಪೋಷಿಸಲು ಮಾತ್ರ ಶಾಸ್ತ್ರವಿದೆ. ಇವರಿಗೆ ಇಷ್ಟುಮಾತ್ರ ತಂದೆಯ ಆಸ್ತಿಯಿಂದ ಕೊಡಲ್ಪಡಬಹುದೇ ಹೊರತು ಅರ್ಥಭಾಗದಲ್ಲಿ ಅಧಿಕಾರವಿಲ್ಲ.

೬೫-೬೭. ಅಣ್ಣನಿಂದ ಹೀಗೆ ಹೇಳಲ್ಪಟ್ಟ ನಾನು ಪುನಃ ಅವನನ್ನು ಕುರಿತು ತಂದೆಯ ಮನೆಯಲ್ಲಿಯೂ ಧನದಲ್ಲಿಯೂ ನನಗೆ ಅರ್ಧಭಾಗವು ಯಾವ ನ್ಯಾಯದಿಂದ ನಿಷೇಧಿಸಲ್ಪಟ್ಟಿದೆ ಎಂದು ಕೇಳಲು ಬಲಶಾಲಿಯಾದ ನನ್ನ ಆ ಅಣ್ಣನು ನನ್ನನ್ನು ಕೇಶಗಳಲ್ಲಿ ಹಿಡಿದು ಎತ್ತಿ ನದಿಯಲ್ಲಿ ಹಾಕಿದನು. ಅನಂತರ ಏರಿಬರುವ ಮಾರ್ಗವೂ ನನಗೆ ಗೊತ್ತಿಲ್ಲವಾದುದರಿಂದಲೂ ನದಿಯ ಮಧ್ಯದಲ್ಲಿ ತೆಪ್ಪವೇ ಮೊದಲಾದ ಗಮನಸಾಧನಗಳು ಸಿಕ್ಕದಿದ್ದುದರಿಂದಲೂ ಸಂವತ್ಸರಪರ್ಯಂತ ಹೀಗೆಯೇ ತೇಲಿ ಬಂದು ಬದುಕಿರುವಾಗಲೇ ನಿಮ್ಮಿಂದ ಇಲ್ಲಿ ಧರಿಸಲ್ಪಟ್ಟೆನು.

೬೮-೬೯. ಬಂಧುಜನಗಳಂತೆ ನನ್ನನ್ನು ಉದ್ಧರಿಸಲು ಬಂದ ನೀವು ಯಾರು. ನಿಮ್ಮ ಮಧ್ಯದಲ್ಲಿ ಇಂದ್ರನಂತೆ ತೇಜಸ್ವಿಯಾಗಿರುವ ಈ ಮಹಾ ಪುರುಷನಾರು,

ತನ್ಮೆಸರ್ವಂ ಸಮಾಖ್ಯಾತ ಯಥಾ ತಥ್ಯಂ ತಪೋಧನಾಃ ।
ಮಹರ್ಷಿಸದೃಶಾ ಯೂಯಂ ಸಾನುಕಂಪಾಶ್ಚ ಮಾದೃಶೆ ॥ ೬೯ ॥

ತದ್ವಾಮನವಚಃ ಶ್ರುತ್ವಾ ಭಾರ್ಗವಾ ದ್ವಿಜಸತ್ತಮಾಃ ।
ಪ್ರೋಚುರ್ವಯಂ ದ್ವಿಜಾ ಬ್ರಹ್ಮ ಭಾರ್ಗವಾ ವಂಶವರ್ಧನಾಃ ॥ ೭೦ ॥

ಅಸಾವಪಿ ಮಹಾತೇಜಾ ಧುಂಧುರ್ನಾಮ ಮಹಾಸುರಃ ।
ದಾತಾ ಭೋಕ್ತಾ ಚ ಭರ್ತಾಚ ದೀಕ್ಷಿತೋ ಯಜ್ಞಕರ್ಮಣಿ ॥ ೭೧ ॥

ಇತ್ಯೇವಮುಕ್ತ್ವಾ ದೇವೇಶಂ ವಾಮನಂ ಭಾರ್ಗವಾಸ್ತತಃ ।
ಪ್ರೋಚುರ್ದೈತ್ಯಪತಿಂ ಸರ್ವೆ ವಾಮನಾರ್ಥಕರಂ ವಚಃ ॥ ೭೨ ॥

ದೀಯತಾಮಸ್ಯ ದೈತ್ಯೇಂದ್ರ ಸರ್ವೋಪಸ್ಕರ ಸಂಯುತಂ ।
ಶ್ರೀಮದಾವಸಥಂ ದಾಸ್ಯೋ ರತ್ನಾನಿ ವಿವಿಧಾನಿ ಚ ॥ ೭೩ ॥

ಇದೆಲ್ಲವನ್ನೂ ಯಥಾರ್ಥವಾಗಿ ನನಗೆ ಹೇಳಿರಿ. ನನ್ನಂಥವರ ವಿಷಯದಲ್ಲಿ ಹೀಗೆ ದಯಾಶಾಲಿಗಳಾದ ನೀವು ಮಹರ್ಷಿಗಳಿಗೆ ಸಮವಾಗಿರುವಿರಿ, ಎಂದು ಪ್ರಾರ್ಥಿಸಿದನು.

೭೦-೭೧. ವಾಮನನ ಆ ಮಾತನ್ನು ಕೇಳಿ ಆ ಬ್ರಾಹ್ಮಣೋತ್ತಮರು, ಬ್ರಾಹ್ಮಣೋತ್ತಮನೇ ನಾವು ಭಾರ್ಗವವಂಶಕ್ಕೆ ಸೇರಿದ ಬ್ರಾಹ್ಮಣರು, ಇವನೂ ಕೂಡ ಧುಂಧುವೆಂಬ ತೇಜಸ್ವಿಯಾದ ಅಸುರಶ್ರೇಷ್ಠನು, ದಾತೃವಾಗಿಯೂ, ರಾಜ ಭೋಗಿಯಾಗಿಯೂ, ರಕ್ಷಕನಾಗಿಯೂ ಇರುತ್ತಾ ಈಗ ಯಜ್ಞದಲ್ಲಿ ದೀಕ್ಷಿತ ನಾಗಿರುವನು.

೭೨-೭೩. ಹೀಗೆ ಹೇಳಿ ಆ ಭಾರ್ಗವ ಬ್ರಾಹ್ಮಣೋತ್ತಮರು ದೈತ್ಯಪತಿಯಾದ ಧುಂಧುವನ್ನು ಕುರಿತು, ವಾಮನನಿಗೆ ಪ್ರಯೋಜನವನ್ನುಂಟುಮಾಡಲು ಹೀಗೆ ಹೇಳಿದರು. ಎಲೈ ದೈತ್ಯರಾಜನೇ ಈ ಬ್ರಾಹ್ಮಣೋತ್ತಮನಿಗೆ ಸರ್ವಸಾಮಗ್ರಿಗಳಿಂದ ಕೂಡಿದ ಶ್ರೇಷ್ಠವಾದ ಮನೆಯನ್ನೂ ದಾಸಿಗಳನ್ನೂ ನಾನಾ ವಿಧವಾದ ರತ್ನಗಳನ್ನೂ ದಾನಮಾಡು, ಎಂದರು.

ಇತಿ ದ್ವಿಜಾನಾಂ ವಚನಂ ಶ್ರುತ್ವಾ ದೈತ್ಯಪತಿಸ್ತತಃ ।
ಪ್ರಾಹ ದ್ವಿಜೇಂದ್ರ ತೇ ದದ್ಮಿ ಯತ್ತ್ವಮಿಚ್ಛಸಿ ವೈ ಧನಂ ॥ ೭೪ ॥

ದಾಸೀಃ ಗೃಹಂ ಹಿರಣ್ಯಂ ಚ ವಾಜಿನಃ ಸ್ಯಂದನಾನ್ಗಜಾನ್ ।
ಗೋಭೂಮಿರಾಜವಸ್ತ್ರಾದಿ ಸ್ವೇಚ್ಛಯಾ ಚೈವ ವೈ ಪ್ರಭೋ ॥ ೭೫ ॥

ತದ್ವಾಕ್ಯಂ ದಾನವಪತೇಃ ಶ್ರುತ್ವಾ ದೇವೋಽಥ ವಾಮನಃ ।
ಪ್ರಾಹಾಸುರಪತಿಂ ಧುಂಧುಂ ಸ್ವಾರ್ಥಸಿದ್ಧಿಕರಂ ವಚಃ ॥ ೭೬ ॥

ಸೋದರೇಣಾಪಿ ಹಿ ಭ್ರಾತ್ರಾ ಹ್ರಿಯಂತೇ ಯಸ್ಯ ಸಂಪದಃ ।
ಕಿಂ ತಸ್ಯ ನಾಥೋಽ ರಾಜೇಂದ್ರ ದೀಯತೇ ಚಾರ್ಥಏವ ಹಿ ॥ ೭೭ ॥

ದಾಸೀದಾಸಾಂಶ್ಚ ಭೃತ್ಯಾಂಶ್ಚ ಗೃಹಂ ರತ್ನಂ ಪರಿಚ್ಛದಾನ್ ।
ಸಮರ್ಥೇಭ್ಯೋ ದ್ವಿಜೇಂದ್ರೇಭ್ಯಃ ಪ್ರಯಚ್ಛಸ್ವ ಮಹಾಭುಜ ॥ ೭೮ ॥

ಮಮ ಪ್ರಮಾಣಮಾಲೋಕ್ಯ ಮಾಮಾಕಂ ಚ ಪದತ್ರಯಂ ।
ಸ್ವಂ ಪ್ರಯಚ್ಛಸ್ವ ದೈತ್ಯೇಂದ್ರ ಏತದೇವಾರ್ಥಯೇಽಹ್ಯಹಂ ॥ ೭೯ ॥

೭೪-೭೫. ದೈತ್ಯರಾಜನಾದ ಧುಂಧುವು ಬ್ರಾಹ್ಮಣರ ಈ ಮಾತನ್ನು ಕೇಳಿ, ವಾಮನನನ್ನು ಕುರಿತು ಬ್ರಾಹ್ಮಣೋತ್ತಮನೇ ನೀನು ಕೇಳುವಷ್ಟು ಧನವನ್ನೂ ದಾಸಿಗಳು, ಮನೆ, ಸುವರ್ಣ ಗಜಾಶ್ವರಥಗಳು, ಗೋವುಗಳು, ಭೂಮಿ, ರಾಜ್ಯ, ವಸ್ತ್ರವೇ ಮೊದಲಾದುವುಗಳಲ್ಲಿ ನೀನು ಅಪೇಕ್ಷಿಸುವಷ್ಟು ಕೊಡುವೆನು ಕೇಳಿಕೋ ಎಂದನು.

೭೬-೭೯. ದಾನವರಾಜನ ಆ ಮಾತನ್ನು ಕೇಳಿ ವಾಮನಾಕಾರಶಾಲಿಯಾಗಿದ್ದ ಪರಮಾತ್ಮನು ಆ ಧುಂಧುವನ್ನು ಕುರಿತು ಸ್ವಾರ್ಥಸಿದ್ಧಿಗೆ ತಕ್ಕಂತೆ ಹೀಗೆ ಹೇಳಿದನು. ಯಾವ ನನಗೆ ದಾಯಭಾಗವಾಗಿ ಅವಶ್ಯಲಭ್ಯವಾಗಿದ್ದ ಸಂಪತ್ತೂ ಸೋದರನಾದ ಭ್ರಾತೃವಿನಿಂದ ಅಪಹರಿಸಲ್ಪಟ್ಟಿತೋ ಅಂತಹ ನನಗೆ ನಿಷ್ಫಲವಾದ ಅರ್ಥವನ್ನು ಏತಕ್ಕೆ ಕೊಡುತ್ತೀಯೆ, ವೀರನೇ, ನೀನು ಕೊಡಬೇಕೆಂದಿರುವ ದಾಸೀ, ದಾಸರು, ಭೃತ್ಯರು, ಮನೆ, ರತ್ನಾದಿಗಳು ಎಲ್ಲವನ್ನೂ ಸಮರ್ಥರಾದ ಬ್ರಾಹ್ಮಣೋತ್ತಮರಿಗೆ ಕೊಡು, ನನ್ನ ಪ್ರಮಾಣವನ್ನು ನೋಡಿ ನನ್ನ ಮೂರು ಹೆಜ್ಜೆಯ ಅಳತೆಗೆ ತಕ್ಕ ಭೂಮಿಯನ್ನು ಮಾತ್ರ ನನಗೆ ಕೊಡು, ಇಷ್ಟು ಮಾತ್ರವನ್ನೇ ನಾನು ಯಾಚಿಸುತ್ತೇನೆ.

ಇತ್ಯೇವಮುಕ್ತಂ ವಚನಂ ಮಹಾತ್ಮನಾ
ವಿಹಸ್ಯ ದೈತ್ಯಾಧಿಪತಿಃ ಸ ಋತ್ವಿಜಃ ।
ಪ್ರಾದಾಚ್ಚ ವಿಪ್ರಾಯ ಪದತ್ರಯಂ ವಶೀ
ಯದಾ ಸ ನಾನ್ಯತ್ಪ್ರಗೃಹೀತವಾನ್ ಪುನಃ ॥ ೮೦ ॥

ಕ್ರಮತ್ರಯಂ ತಾವದವೇಕ್ಷ್ಯ ದತ್ತಂ
ಮಹಾಸುರೇಂದ್ರೇಣ ವಿಭುರ್ಯಥಾ ಶಶೀ ।
ಚಕ್ರೇ ತತೋಽಲಂಘಯಿತುಂ ತ್ರಿಲೋಕೀಂ
ತ್ರಿವಿಕ್ರಮಂ ರೂಪಮನಂತಶಕ್ತಿಃ ॥ ೮೧ ॥

ಕೃತ್ವಾ ಚ ರೂಪಂ ದಿತಿಜಾಂಶ್ಚ ಹತ್ವಾ
ಪ್ರಣಮ್ಯ ಚರ್ಷೀಂಶ್ಚ ಸ ಚ ಕ್ರಮೇಣ ।
ಮಹೀಂ ಮಹೀಧ್ರೈಸ್ಸಹಿತಾಂ ಸಹಾರ್ಣವಾಂ
ಜಹಾರ ರತ್ನಾಕರಪತ್ತನೈರ್ಯುತಾಂ ॥ ೮೨ ॥

೮೦-೮೧. ಮಹಾತ್ಮನಾದ ಆ ವಾಮನನಿಂದ ಹೇಳಲ್ಪಟ್ಟ ಈ ಮಾತನ್ನು ಕೇಳಿ ದೈತ್ಯಾಧಿಪನಾದ ಧುಂಧುವು ಋತ್ವಿಜರೊಡನೆ ನಗುತ್ತಾ ಬೇರೆ ಯಾವುದನ್ನೂ ಅವನು ಅಪೇಕ್ಷಿಸದೆ ಇದ್ದುದರಿಂದ ಅವನ ಕೋರಿಕೆಯಂತೆ ಮೂರು ಹೆಜ್ಜೆಯ ಭೂಮಿಯನ್ನೇ ಆ ಬ್ರಾಹ್ಮಣನಿಗೆ ಕೊಟ್ಟನು. ಅನಂತರ ಆ ಮಹಾಸುರನಿಂದ ಮೂರು ಹೆಜ್ಜೆಯ ಪ್ರದೇಶವು ಕೊಡಲ್ಪಟ್ಟುದನ್ನು ತಿಳಿದು ಆ ಪ್ರಭುವು ಚಂದ್ರನಂತೆ ಅಭಿವೃದ್ಧಿಹೊಂದಿ ಮೂರು ಲೋಕಗಳನ್ನೂ ಅತಿಕ್ರಮಿಸುವಂತಹ ತ್ರಿವಿಕ್ರಮರೂಪ ವನ್ನು ಹೊಂದಿದನು.

೮೨. ಅಂತಹ ರೂಪವನ್ನು ಹೊಂದಿ ವಿರೋಧಿಗಳಾಗಿ ಬಂದ ದೈತ್ಯರನ್ನು ನಾಶಪಡಿಸಿ ಅಲ್ಲಿದ್ದ ಋಷಿಗಳೆಲ್ಲರನ್ನೂ ಕ್ರಮವಾಗಿ ವಂದಿಸಿ ಮೊದಲನೇಯ ಪಾದದಿಂದ ಪರ್ವತ ಮತ್ತು ಮಹಾಸಮುದ್ರ ಹಾಗೂ ಮಹಾಪತ್ತನಗಳೊಡಗೂಡಿದ ಭೂಲೋಕ ವನ್ನು ಆಕ್ರಮಿಸಿದನು.

ಭುವಂ ಸನಾಕಾಂ ತ್ರಿದಶಾಧಿವಾಸಂ ।
ಸೋಮಾರ್ಕಋಕ್ಷೈರಭಿಮಂಡಿತಂ ನಭಃ
ದೇವೋ ದ್ವಿತೀಯೇನ ಜಹಾರವೇಗಾ
ತ್ಕ್ರಮೇಣ ದೇವಪ್ರಿಯಮಾಪ್ಸುರೀಶ್ವರಃ ॥ ೮೩ ॥

ಕ್ರಮಂ ತೃತೀಯಂ ನಯದಾಸ್ಯಪೂರಿತಂ
ತದಾತಿಕೋಪಾದ್ದನುಪುಂಗವಸ್ಯ ।
ಪಪಾತ ಪೃಷ್ಠೆ ಭಗವಾಂಸ್ತ್ರಿವಿಕ್ರಮೋ
ಮೇರುಪ್ರಮಾಣೇನ ತು ವಿಗ್ರಹೇಣ ॥ ೮೪ ॥

ಪತತಾ ವಾಸುದೇವೇನ ದಾನವೋಪರಿ ನಾರದ ।
ತ್ರಿಂಶದ್ಯೋಜನಸಾಹಸ್ರೀ ಭೂಮಿರ್ಗರ್ತೆ ದೃಢೀಕೃತಾ ॥ ೮೫ ॥

ತತೋ ದೈತ್ಯಂ ಸಮುತ್ಪಾಟ್ಯ ತಸ್ಯಾಂ ಪ್ರಕ್ಷಿಪ್ಯ ವೇಗತಃ ।
ವವರ್ಷ ಸಿಕತಾವೃಷ್ಟ್ಯಾ ತಂ ಚ ಗರ್ತಮಪೂರಯತ್ ॥ ೮೬ ॥

೮೩-೮೪. ಅನಂತರ ದೇವತೆಗಳ ವಾಸಸ್ಥಾನವಾಗಿದ್ದ ಸ್ವರ್ಗಲೋಕದೊಡನೆ ಚಂದ್ರಸೂರ್ಯ ನಕ್ಷತ್ರಗಳಿಂದ ಭೂಷಿತವಾಗಿದ್ದ ಆಕಾಶವನ್ನು ಎರಡನೆಯ ಪಾದ ಕ್ರಮಣದಿಂದ ದೇವತೆಗಳ ಹಿತಕ್ಕಾಗಿ ಆಕ್ರಮಿಸಿದನು. ಅನಂತರ ಮೂರನೇಯ ಆಕ್ರಮಣವನ್ನು ಪೂರ್ತಿಗೊಳಿಸದೇ ಹೋದುದರಿಂದ ಕುಪಿತನಾದ ತ್ರಿವಿಕ್ರಮನು ಮೇರುವಿನಂತೆ ಭಾರವಾದ ತನ್ನ ದೇಹದಿಂದ ಆ ಅಸುರನ ಬೆನ್ನನ್ನು ಆಕ್ರಮಿಸಿದನು.

೮೫-೮೬. ಆ ದಾನವನ ಮೇಲೆ ವಾಸುದೇವನು ಆಕ್ರಮಣಮಾಡಿದ ಕಾಲದಲ್ಲಿ ಭಾರಾತಿಶಯದಿಂದ ಮೂವತ್ತುಸಾವಿರ ಗಾವುದ ಪರಿಮಿತವಾದ ಭೂಭಾಗವು ಕುಗ್ಗಿ ಹಳ್ಳದಲ್ಲಿ ಸೇರಿಹೋಯಿತು. ಆಗ ದೈತ್ಯನನ್ನು ಎತ್ತಿ ಆ ಹಳ್ಳದಲ್ಲಿ ಹಾಕಿ ಅವನ ಮೇಲೆ ಮರಳಿನ ಮಳೆಗರೆದು ಆ ಹಳ್ಳವನ್ನು ಮುಚ್ಚಿದನು.

ತತಃ ಸ್ವರ್ಗಂ ಸಹಸ್ರಾಕ್ಷೋ ವಾಸುದೇವಪ್ರಸಾದತಃ ।
ಸುರಾಶ್ಚ ಸರ್ವೇ ತ್ರೈಲೋಕ್ಯಮವಾಪುರ್ನಿರುಪದ್ರವಾಃ ॥ ೮೭ ॥

ಭಗವಾನಪಿ ದೈತ್ಯೇಂದ್ರಂ ಪ್ರಕ್ಷಿಪ್ಯ ಸಿಕತಾರ್ಣವೇ ।
ಕಾಲಿಂದ್ಯಾರೂಪಮಾಧಾಯ ತತ್ರೈವಾಂತರಧೀಯತ ॥ ೮೮ ॥

ಏವಂ ಪುರಾ ವಿಷ್ಣುರಭೂಚ್ಚ ವಾಮನೋ
ಧುಂಧುಂ ವಿಜೇತುಂ ಚ ತ್ರಿವಿಕ್ರಮೋಽಭೂತ್ ।
ಯಸ್ಮಿನ್ ಸ ದೈತ್ಯೇಂದ್ರಸುತೋಽಜಗಾಮ
ಮಹಾಶ್ರಮೇ ಪುಣ್ಯಯುತೇ ಮಹರ್ಷೇ ॥ ೮೯ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ಧುಂಧು ಪರಾಜಯೋ ನಾಮಾಷ್ಟ ಸಪ್ತತಿತಮೋಽಧ್ಯಾಯಃ.

೮೭-೮೯. ಅನಂತರ ವಾಸುದೇವನ ಈ ವಿಧವಾದ ಅನುಗ್ರಹದಿಂದ ಇಂದ್ರನು ಸ್ವರ್ಗವನ್ನೂ ದೇವತೆಗಳು ತ್ರೈಲೋಕ್ಯವನ್ನೂ ನಿರಾತಂಕವಾಗಿ ಹೊಂದಿದರು. ತ್ರಿವಿಕ್ರಮಾವತಾರವನ್ನು ಹೊಂದಿದ್ದ ಭಗವಂತನೂ ಸಹ ಆ ದೈತ್ಯನನ್ನು ಮರಳಿನ ಸಮುದ್ರದಲ್ಲಿ ಬಂಧಿಸಿ ಕಾಲಿಂದೀರೂಪವನ್ನು ಹೊಂದಿ ಅಂತರ್ಧಾನವನ್ನು ಹೊಂದಿದನು. ಈ ಪ್ರಕಾರ ವಿಷ್ಣುವು ಪೂರ್ವದಲ್ಲಿಯೂ ಧುಂಧುವನ್ನು ಜಯಿಸುವುದಕ್ಕಾಗಿ ತ್ರಿವಿಕ್ರಮನಾಗಿ ಅವತರಿಸಿದ್ದನು. ಅಂತಹ ತ್ರಿವಿಕ್ರಮನ ಸಾನ್ನಿಧ್ಯವುಳ್ಳ ಪುಣ್ಯಾಶ್ರಮಕ್ಕೇ ಪ್ರಹ್ಲಾದನು ತೀರ್ಥಯಾತ್ರಾ ಪ್ರಸಂಗದಲ್ಲಿ ಹೋದುದು.

ಇಲ್ಲಿಗೆ ಶ್ರೀ ವಾಮನಪುರಾಣದ ವಾಮನ ಪ್ರಾದುರ್ಭಾವದಲ್ಲಿ ಧುಂಧುಪರಾಜಯವೆಂಬ ಎಪ್ಪತ್ತೆಂಟನೆಯ ಅಧ್ಯಾಯ ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಪ್ರಹ್ಲಾದನ ತೀರ್ಥಯಾತ್ರಾ ಪ್ರಸಂಗದಲ್ಲಿ ಯಮುನಾನದಿಗೆ ಹೋಗಿ ಅಲ್ಲಿ ಪ್ರಹ್ಲಾದನು ತ್ರಿವಿಕ್ರಮಮೂರ್ತಿಯನ್ನು ಸೇವಿಸಿದನೆಂಬ ಪ್ರಕರಣದಲ್ಲಿ ತ್ರಿವಿಕ್ರಮಮೂರ್ತಿಯು ಈಗ ತಾನೇ ಆವಿರ್ಭವಿಸುವ ಸಂಭವವಿರುವಾಗ ಹಿಂದೆ ತ್ರಿವಿಕ್ರಮನಿದ್ದನೇ ಎಂಬ ನಾರದರ ಪ್ರಾಸಂಗಿಕವಾದ ಪ್ರಶ್ನೆಗೆ ಉತ್ತರವಾಗಿ ಪುಲಸ್ತ್ಯರು ಧುಂಧುವೆಂಬ ದೈತ್ಯನು ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ಅವನಿಂದ ಅವಧ್ಯತ್ವವನ್ನು ಹೊಂದಿದನೆಂದೂ ಲೋಕತ್ರಯವೂ ಅವನಿಗೆ ಅಧೀನವಾಗಲು ಇಂದ್ರಾದಿದೇವತೆಗಳು ಬ್ರಹ್ಮಲೋಕಕ್ಕೆ ಓಡಿದರೆಂದೂ ಹೇಳಿ ಅಲ್ಲಿಯೂ ಇಂದ್ರಾದಿ ದೇವತೆಗಳನ್ನು ಜಯಿಸಲು ಸತ್ಯಲೋಕಕ್ಕೂ ಹೋಗಲು ಪ್ರಯತ್ನಿಸಿ ಆ ದಾನವನು ಸತ್ಯಲೋಕಗಮನಸಿದ್ಧಿಗಾಗಿ ಶುಕ್ರನ ಆಲೋಚನೆಯಂತೆ ಅಶ್ವಮೇಧಮಾಡಲುಪಕ್ರಮಿಸಿದನೆಂದೂ ಹೇಳಲಾಯಿತು. ಆಗ ಸತ್ಯಲೋಕಪರ್ಯಂತವಾಗಿಯೂ ವ್ಯಾಪಿಸಿದ ಹೊಗೆಯನ್ನು ಅಲ್ಲಿದ್ದ ಇಂದ್ರಾದಿಗಳು ನೋಡಿ ಧುಂಧುವು ಅಶ್ವಮೇಧಮಾಡುತ್ತಿರುವನೆಂದು ನಿಶ್ಚೈಸಿ ಮಹಾವಿಷ್ಣುವಿನಲ್ಲಿ ಶರಣಾಗತರಾಗಿ ಈ ಸಂಗತಿಯೆಲ್ಲವನ್ನೂ ಅರಿಕೆಮಾಡಿ ಅವನಿಂದ ಅಭಯವನ್ನು ಹೊಂದಿದರೆಂದೂ ಅನಂತರ ಮಹಾವಿಷ್ಣುವು ಯಜ್ಞವಿಘ್ನವನ್ನುಂಟುಮಾಡಿ ಧುಂಧುವನ್ನೂ ಬಂಧಿಸಲು ಆಲೋಚಿಸಿ ವಾಮನರೂಪವನ್ನು ಹೊಂದಿ ಧುಂಧುವಿನ ಯಜ್ಞಶಾಲೆಯ ಸಮೀಪದಲ್ಲಿರುವ ದೇವಿಕಾನದಿಯಲ್ಲಿ ತೇಲಿಬಂದನೆಂದೂ ಆಗ ಅವನನ್ನು ನೋಡಿದ ಋತ್ವಿಜರೂ ಸದಸ್ಯರೂ ಭಾರ್ಗವಬ್ರಾಹ್ಮಣರೂ ಯಜ್ಞಕರ್ಮವನ್ನು ಬಿಟ್ಟು ತ್ವರೆಯಿಂದ ಓಡಿಬಂದು ಈ ವಾಮನ ಬ್ರಾಹ್ಮಣನನ್ನು ಮೇಲಕ್ಕೆತ್ತಿ ಸಂತೈಸಿ ನೀನು ಯಾರೆಂದು ಪ್ರಶ್ನೆಮಾಡಲು ವಾಮನನು ತಾನು ವರುಣಗೋತ್ರದ ಒಬ್ಬ ಬ್ರಾಹ್ಮಣಪುತ್ರನೆಂದೂ ತನ್ನ ತಂದೆಯು ಕಾಲವಾದನಂತರ ತನಗೂ ಅಣ್ಣನಿಗೂ ದಾಯಭಾಗದ ವಿಷಯದಲ್ಲಿ ಉಂಟಾದ ವಿವಾದದಿಂದ ಅಣ್ಣನು ತನ್ನನ್ನು ನದಿಯಲ್ಲಿ ಹಾಕಿದನೆಂದೂ ತನ್ನ ವೃತ್ತಾಂತವನ್ನು ಹೇಳಿ ನೀವು ಯಾರೆಂದು ಪ್ರಶ್ನೆಮಾಡಲು ಆ ಬ್ರಾಹ್ಮಣರು ಎಲ್ಲವನ್ನೂ ಹೇಳಿ ಯಜ್ಞದಲ್ಲಿ ದೀಕ್ಷಿತನಾಗಿರುವ ಧುಂಧುವಿನ ಔದಾರ್ಯವನ್ನು ಕೊಂಡಾಡಿ ಈ ವಾಮನನಿಗೆ ಮನೆಮಠಗಳನ್ನು ಕೊಟ್ಟು ಸತ್ಕರಿಸಬೇಕೆಂದು ಧುಂಧುವನ್ನೂ ಪ್ರಾರ್ಥಿಸಿದರೆಂದೂ, ಅನಂತರ ವಾಮನನ ಕೋರಿಕೆಯಂತೆ ಧನಕನಕಾದಿಗಳೆಲ್ಲವನ್ನೂ ಬಿಟ್ಟು ಮೂರು ಪಾದಪರಿಮಿತವಾದ ಭೂಮಿಯನ್ನು ದೈತ್ಯರಾಜನಾದ ಧುಂಧುವು ದಾನಮಾಡಲು ಒಡನೆಯೇ ತ್ರಿವಿಕ್ರಮರೂಪವನ್ನು ಹೊಂದಿದ ವಾಮನನು ಒಂದು ಪಾದದಿಂದ ಭೂಮಿಯೆಲ್ಲವನ್ನೂ ಮತ್ತೊಂದು

ಪಾದದಿಂದ ಸ್ವರ್ಗವೇ ಮೊದಲಾದ ಆಕಾಶಮಾರ್ಗವನ್ನೂ ಆಕ್ರಮಿಸಿ ಮತ್ತೊಂದು ಪಾದಾಕ್ರಮಣಕ್ಕೆ ಅವಕಾಶಕೊಡುದಿದ್ದುದರಿಂದ ಕುಪಿತನಾಗಿ ಆ ದಾನವನನ್ನೇ ಆಕ್ರಮಿಸಲು ಆಗ ಉಂಟಾದ ಅಗಾಧವಾದ ಹಳ್ಳದಲ್ಲಿ ಆ ದಾನವನನ್ನೇ ಹಾಕಿ ಮರಳಿನ ವೃಷ್ಟಿಯಿಂದ ಹಳ್ಳವನ್ನು ಮುಚ್ಚಿ ಅಲ್ಲೇ ಆ ದಾನವನನ್ನು ಬಂಧಿಸಿದನೆಂದೂ, ಅನಂತರ ಇಂದ್ರಾದಿಗಳು ತಮ್ಮ ರಾಜ್ಯಕ್ಕೆ ಹೋಗಿ ನೆಲಸಿದರೆಂದೂ ಹೇಳಿ, ಧುಂಧುವಿನ ನಿಗ್ರಹಕ್ಕಾಗಿ ಪೂರ್ವದಲ್ಲಿಯೂ ಮಹಾವಿಷ್ಣುವು ತ್ರಿವಿಕ್ರಮರೂಪವನ್ನು ಹೊಂದಿದ್ದ ನೆಂದೂ ಉತ್ತರವನ್ನು ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ನವಸಪ್ತತಿತಮೋऽಧ್ಯಾಯಃ

ಪುಲಸ್ತ್ಯ ಉವಾಚ

ಕಾಲಿಂದೀಸಲಿಲೆ ಸ್ನಾತ್ವಾ ಪೂಜಯಿತ್ವಾ ತ್ರಿವಿಕ್ರಮಂ ।
ಉಪೋಷ್ಯ ರಜನೀಮೇಕಾಂ ಲಿಂಗಭೇದಂ ಗಿರಿಂ ಯಯೌ ॥ ೧ ॥

ತತ್ರಸ್ನಾತ್ವಾ ಚ ವಿಧಿವಚ್ಛಿವಂ ಸಂಪೂಜ್ಯ ಭಕ್ತಿತಃ ।
ಉಪೋಷ್ಯ ರಜನೀಮೇಕಾಂ ತೀರ್ಥಂ ಕೇದಾರಮಾವ್ರಜತ್ ॥ ೨ ॥

ತಸ್ಮಿನ್ ಸ್ನಾತ್ವಾ ಚ ವಿಧಿವತ್ಸಮಾರಾಧ್ಯ ಜಗತ್ಪತಿಂ ।
ಉಷಿತ್ವಾ ವಾಸರಾನ್ ಸಪ್ತ ಕುಂಜಾಮ್ರಂ ಪ್ರಜಗಾಮ ಹ ॥ ೩ ॥

ತತ್ರ ಗತ್ವಾ ಮಹಾಬಾಹು ರುಪವಾಸೀ ಜಿತೇಂದ್ರಿಯಃ ।
ಹೃಷೀಕೇಶಂ ಸಮಭ್ಯರ್ಚ್ಯ ಯಯೌ ಬದರಿಕಾಶ್ರಮಂ ॥ ೪ ॥

ಎಪ್ಪತ್ತೊಂಭತ್ತನೆಯ ಅಧ್ಯಾಯವು

೧-೨. ಪ್ರಾಸಂಗಿಕವಾಗಿ ಬಂದ ಧುಂಧುವಿನ ಉಪಾಖ್ಯಾನವನ್ನು ಮುಗಿಸಿ ಪ್ರಕೃತವಾದ ಪ್ರಹ್ಲಾದನ ತೀರ್ಥಯಾತ್ರೆಯನ್ನು ಪುಲಸ್ತ್ಯರು ಮುಂದುವರಿಸುತ್ತಾರೆ :- ಅನಂತರ ಪ್ರಹ್ಲಾದನು ಕಾಲಿಂದೀನದಿಯಲ್ಲಿ ಸ್ನಾನಮಾಡಿ ತ್ರಿವಿಕ್ರಮನನ್ನು ಆರಾಧಿಸಿ ಅಲ್ಲಿ ಒಂದು ರಾತ್ರಿ ಉಪವಾಸವಿದ್ದು ಲಿಂಗಭೇದವೆಂಬ ಪರ್ವತಕ್ಕೆ ಹೊರಟನು. ಅಲ್ಲಿಯೂ ಸ್ನಾನಮಾಡಿ ಶಿವನನ್ನು ಪೂಜಿಸಿ ಆ ರಾತ್ರಿ ಉಪವಾಸವಿದ್ದು ಕೇದಾರ ತೀರ್ಥಕ್ಕೆ ಹೊರಟನು.

೩-೪. ಅಲ್ಲಿಯೂ ಯಥಾವಿಧಿಯಾಗಿ ಸ್ನಾನಮಾಡಿ ಜಗತ್ಪತಿಯನ್ನು ಪೂಜಿಸಿ ಏಳು ದಿನಗಳವರಿಗೂ ಅಲ್ಲಿಯೇ ವಾಸಿಸಿ ಕುಂಜಾಮ್ರವೆಂಬ ಕ್ಷೇತ್ರಕ್ಕೆ ನಡೆದನು. ಅಲ್ಲಿ ಜಿತೇಂದ್ರಿಯನಾಗಿದ್ದು ಉಪವಾಸದಿಂದ ಹೃಷಿಕೇಶನನ್ನು ಆರಾಧಿಸಿ ಅಲ್ಲಿಂದ ಬದರಿಕಾಶ್ರಮಕ್ಕೆ ಹೊರಟನು.

ಸಂತೋಷ್ಯ ನಾರಾಯಣಮುಚ್ಯ್ರ ಭಕ್ತ್ಯಾ
ಸ್ನಾತ್ವಾಥ ವಿದ್ವಾನ್ ಸ ಸರಸ್ವತೀಜಲೇ ।
ವಾರಾಹತೀರ್ಥೇ ಗರುಡಾಸನಂ ಸ
ದೃಷ್ಟ್ವಾ ಸಮಭ್ಯರ್ಚ್ಯ ಸುಭಕ್ತಿಮಾಂಶ್ಚ ॥ ೫ ॥

ಭದ್ರಕರ್ಣೇ ತತೋ ಗತ್ವಾಯಜಚ್ಚ ಶಶಿಶೇಖರಂ ।
ತತಃ ಸಂಪೂಜ್ಯ ಚ ವಶೀ ವಿಪಾಶಾಮಭಿತೋ ಯಯೌ ॥ ೬ ॥

ತಸ್ಯಾಂ ಸ್ನಾತ್ವಾ ಸಮಭ್ಯರ್ಚ್ಯ ದೇವದೇವಂ ದ್ವಿಜಪ್ರಿಯಂ ।
ಇರಾವತ್ಯಾಂ ಜಗನ್ನಾಥಂ ದದರ್ಶ ಪರಮೇಶ್ವರಂ ॥ ೭ ॥

ಸಮಾರಾಧ್ಯ ದ್ವಿಜಶ್ರೇಷ್ಠ ಶಾಶ್ವತಂ ಜಗತಃ ಪ್ರಭುಂ ।
ಸಮವಾಪ ಪರಂ ರೂಪಮೈಶ್ವರ್ಯಂ ಚ ಸುದುರ್ಲಭಂ ॥ ೮ ॥

ಕುಷ್ಠರೋಗಾಭಿಭೂತಶ್ಚ ಯಂ ಸಮಾರಾಧ್ಯ ವೈ ಭೃಗುಃ ।
ಆರೋಗ್ಯಮತುಲಂ ಪ್ರಾಪ ಸಂತಾನಮಪಿ ಚಾಕ್ಷಯಂ ॥ ೯ ॥

೫-೭. ಅಲ್ಲಿ ನಾರಾಯಣನನ್ನು ಭಕ್ತಿಯಿಂದ ಪೂಜಿಸಿ ಸಂತೋಷಪಡಿಸಿ ಸರಸ್ವತೀನದಿಯಲ್ಲಿ ಸ್ನಾನಮಾಡಿ ವಾರಾಹತೀರ್ಥದಲ್ಲಿ ಗರುಡಾಸನನನ್ನೂ ಭಕ್ತಿಯಿಂದ ಪೂಜಿಸಿ ಅಲ್ಲಿಂದ ಭದ್ರಕರ್ಣವೆಂಬ ಕ್ಷೇತ್ರಕ್ಕೂ ಹೋಗಿ ಅಲ್ಲಿ ಇಂದುಶೇಖರನನ್ನೂ ಪೂಜಿಸಿ ವಿಪಾಶಾನದಿಗೆ ಹೊರಟನು. ಅಲ್ಲಿಯೂ ಸ್ನಾನಮಾಡಿ ದ್ವಿಜಪ್ರಿಯನಾದ ಜಗತ್ಪತಿಯನ್ನು ಆರಾಧಿಸಿ ಇರಾವತಿಯಲ್ಲಿ ಜಗನ್ನಾಥನಾದ ಪರಮೇಶ್ವರನನ್ನೂ ಸೇವಿಸಿದನು.

೮-೧೦. ಆ ಜಗತ್ಪ್ರಭುವನ್ನು ಆರಾಧಿಸಿ ಉತ್ಕೃಷ್ಟವಾದ ನಿಜಸ್ವರೂಪವನ್ನೂ ಇತರ ದುರ್ಲಭವಾದ ಯೋಗಸಿದ್ಧಿಯನ್ನೂ ಹೊಂದಿದನು. ಆ ಪ್ರಭುವನ್ನೇ ಆರಾಧಿಸಿ ಕುಷ್ಠರೋಗದಿಂದ ಪೀಡಿತನಾಗಿದ್ದ ಭೃಗುವು ಅಧಿಕವಾದ ಆರೋಗ್ಯವನ್ನೂ

ನಾರದ ಉವಾಚ

ಕಥಂ ಪುರೂರವಾ ವಿಷ್ಣುಮಾರಾಧ್ಯ ದ್ವಿಜಸತ್ತಮ ।
ವಿರೂಪತ್ವಂ ಸಮುತ್ಸೃಜ್ಯ ರೂಪಂ ಪ್ರಾಪ ಶ್ರಿಯಾ ಸಹ ॥ ೧೦ ॥

ಪುಲಸ್ತ್ಯ ಉವಾಚ

ಶ್ರೂಯತಾಂ ಕಥಯಿಷ್ಯಾಮಿ ಮಹಾಪಾಪಪ್ರಣಾಶನಂ ।
ಪೂರ್ವಂ ತ್ರೇತಾಯುಗಸ್ಯಾದೌ ಯದಾವೃತ್ತಂ ತಪೋಧನ ॥ ೧೧ ॥

ಮದ್ರದೇಶ ಇತಿ ಖ್ಯಾತೋ ದೇಶೋ ಬ್ರಾಹ್ಮಣಸತ್ಕೃತಃ ।
ಶಾಕಲಂ ನಾಮ ನಗರಂ ಖ್ಯಾತಂ ಸ್ಥಾನೀಯಮುತ್ತಮಂ ॥ ೧೨ ॥

ತಸ್ಮಿನ್ ವಿಪಣಿವೃತ್ತಿಸ್ಥಃ ಸಧರ್ಮಾಖ್ಯೋ ಭವದ್ವಣಿಕ್ ।
ಧನಾಢ್ಯೋ ಗುಣವಾನ್ಭೋಗೀ ನಾನಾಶಾಸ್ತ್ರವಿಶಾರದಃ ॥ ೧೩ ॥

ಸ ಕದಾಚಿನ್ನಿಜಾದ್ರಾಷ್ಟ್ರಾತ್ಸೌರಾಷ್ಟ್ರಂ ಗಂತುಮುದ್ಯತಃ ।
ಸಾರ್ಥೇನ ಮಹತಾ ಯುಕ್ತೋ ನಾನಾವಿಪಣಿಪಣ್ಯವಾನ್ ॥ ೧೪ ॥

ಅಕ್ಷಯವಾದ ಸಂತಾನಸಮೃದ್ಧಿಯನ್ನೂ ಹೊಂದಿದ್ದನು. ಆಗ ನಾರದರು ಪುರೂರವನು ವಿಷ್ಣುವನ್ನು ಆರಾಧಿಸಿ ತನ್ನ ವೈರೂಪ್ಯವನ್ನೂ ಹೋಗಲಾಡಿಸಿಕೊಂಡು ಐಶ್ವರ್ಯ ವನ್ನೂ ಸುರೂಪವನ್ನೂ ಹೇಗೆ ಹೊಂದಿದನೆಂದು ಪ್ರಶ್ನೆಮಾಡಲು

೧೧-೧೩. ಪುಲಸ್ತ್ಯರು ಹೇಳುತ್ತಾರೆ:—ತಪೋಧನನೇ, ಪೂರ್ವದಲ್ಲಿ ತ್ರೇತಾಯುಗದ ಆದಿಭಾಗದಲ್ಲಿ ನಡೆದ ಸರ್ವಪಾಪನಾಶಕವಾದ ಆ ಉಪಾಖ್ಯಾನವನ್ನು ಹೇಳುತ್ತೇನೆ ಕೇಳು ಬ್ರಾಹ್ಮಣರಿಂದ ಸೇವಿತವಾಗಿ ಮದ್ರದೇಶವೆಂಬ ದೇಶವು ಪ್ರಖ್ಯಾತವಾಗಿದ್ದಿತು. ಅಲ್ಲಿ ಶಾಕಲವೆಂದು ಪ್ರಸಿದ್ಧಿಹೊಂದಿದ್ದ ಶಾಖಾನಗರವಿದ್ದಿತು. ಆ ಮಹಾನಗರದಲ್ಲಿ ಸಧರ್ಮನೆಂಬ ವೈಶ್ಯನು ವಾಣಿಜ್ಯವೃತ್ತಿಯನ್ನಾಶ್ರಯಿಸಿ ಧನವಂತನಾಗಿಯೂ ಭೋಗಿಯಾಗಿಯೂ ನಾನಾಶಾಸ್ತ್ರಾಧ್ಯಯನದಿಂದ ಗುಣಶಾಲಿಯಾಗಿಯೂ ಇದ್ದನು.

೧೪-೧೭. ಅವನು ಒಂದಾನೊಂದು ಕಾಲದಲ್ಲಿ ತನ್ನ ಅನುಯಾಯಿಗಳಿಂದ ಕೂಡಿ ಅನೇಕ ವಿಧವಾದ ಪಣ್ಯವಸ್ತುಗಳೊಡನೆ ವ್ಯಾಪಾರಕ್ಕಾಗಿ ತನ್ನ ದೇಶದಿಂದ

ಗಚ್ಛತಃ ಪಥಿ ತಸ್ಯಾಥ ಮರುಭೂಮೌ ಕಲಿಪ್ರಿಯ ।
ಚೌರಾಣಾಮಭವದ್ರಾತ್ರಾವವಸ್ಕಂದೋ ಹಿ ದುಃಸಹಃ ॥ ೧೫ ॥

ತತಃ ಸ ಹೃತಸರ್ವಸ್ವೋ ವಣಿಕ್ ದುಃಖಪರಿಪ್ಲುತಃ ।
ಅಸಹಾಯೋ ಮರೌ ತಸ್ಮಿಂಶ್ಚಚಾರೋನ್ಮತ್ತವದ್ವಶೀ ॥ ೧೬ ॥

ಚರತಾ ತದರಣ್ಯಂ ವೈ ದುಃಖಾಕ್ರಾಂತೇನ ನಾರದ ।
ಆತ್ಮನೈವ ಶಮೀವೃಕ್ಷೋ ಮಹಾನಾಸಾದಿತಃ ಶುಭಃ ॥ ೧೭ ॥

ತಂ ಮೃಗೈಃ ಪಕ್ಷಿಭಿಶ್ಚೈವ ಹೀನಂ ದೃಷ್ಟ್ವಾ ಶಮೀತರುಂ ।
ಕ್ಷಾಂತಃ ಕ್ಷುತ್ತೃಟ್‌ಪರೀತಾತ್ಮಾ ತಸ್ಯ ಪಾರ್ಶ್ವಮುಪಾವಿಶತ್ ॥ ೧೮ ॥

ಸುಪ್ತಶ್ಚಾಪಿ ಸುವಿಶ್ರಾಂತೋ ಮಧ್ಯಾಹ್ನೇ ಪುನರುತ್ಥಿತಃ ।
ಸಮಪಶ್ಯದಥಾಯಾಂತಂ ಪ್ರೇತಂ ಪ್ರೇತಶತೈರ್ವೃತಂ ॥ ೧೯ ॥

ಉಹ್ಯಮಾನಂ ತಥಾನ್ಯೇನ ಪ್ರೇತೇನ ಪ್ರೇತನಾಯಕಂ ।
ಶ್ರಾಂತೈಃ ಪುರೋ ಹಿ ಧಾವದ್ಭಿಃ ಪ್ರೇತೈರ್ವ್ಯಾ ರೂಕ್ಷವಿಗ್ರಹೈಃ ॥ ೨೦ ॥

ಸೌರಾಷ್ಟ್ರದೇಶಕ್ಕೆ ಹೊರಟನು. ಮಾರ್ಗದಲ್ಲಿ ಹೋಗುತ್ತಿರುವಾಗ ಮರುಭೂಮಿಯಲ್ಲಿ ಬಲವಾದ ಕಳ್ಳರ ಗುಂಪಿಗೆ ಸಿಕ್ಕಿ ಅವನ ಸರ್ವಸ್ವವೂ ಅಪಹರಿಸಲ್ಪಟ್ಟಿತು. ಆಗ ದುಃಖಿಯಾದ ಆ ವ್ಯಾಪಾರಿಯು ಸಹಾಯವಿಲ್ಲದೆ ಆ ಮರುಭೂಮಿಯಲ್ಲಿ ಹುಚ್ಚನಂತೆ ಸಂಚರಿಸಲಾರಂಭಿಸಿದನು. ಹಾಗೆ ದುಃಖದಿಂದ ಅರಣ್ಯದಲ್ಲೆಲ್ಲಾ ಸುತ್ತುವಾಗ ತಾನಾಗಿಯೇ ಒಂದು ದೊಡ್ಡ ಬನ್ನಿಮರದ ಸಮೀಪಕ್ಕೆ ಹೋಗಿ ಸೇರಿದನು.

೧೮-೨೦. ಮೃಗಪಕ್ಷಿಗಳಾವುವೂ ಇಲ್ಲದಿರುವ ಆ ಬನ್ನೀಮರವನ್ನು ನೋಡಿ ಕ್ಷಮೆಯಿಂದ ಸಹಿಸಿಕೊಂಡು ಹಸಿವು ಬಾಯಾರಿಕೆಗಳಿಂದ ಕೂಡಿದ್ದುದರಿಂದ ಶ್ರಮದಿಂದ ಅಲ್ಲಿಯೇ ಮಲಗಿದನು. ವಿಶ್ರಾಂತಿಹೊಂದಿ ಮಧ್ಯಾಹ್ನಸಮಯದಲ್ಲಿ ಎಚ್ಚೆತ್ತನು. ಅನಂತರ ಅನೇಕ ಪಿಶಾಚಗಳಿಂದ ಕೂಡಿ ಬರುತ್ತಿರುವ ಗುಂಪನ್ನು ನೋಡಿದನು. ಮತ್ತೊಂದು ಪಿಶಾಚದ ಮೇಲೇರಿ ಬರುತ್ತಿರುವ ಪಿಶಾಚಾಧಿಪತಿಯನ್ನೂ ನೋಡಿದನು. ಮುಂದೆ ಓಡುತ್ತಾ ದಣಿದಿರುವ ಪಿಶಾಚಸಂಘವು ಭಯಂಕರವಾದ ದೇಹಗಳಿಂದ ಕೂಡಿ ಬರುತ್ತಿದ್ದಿತು.

ಅಥಾಜಗಾಮ ಪ್ರೇತೋಽಸೌ ಪರ್ಯಟಿತ್ವಾ ಧರಾಮಿಮಾಂ ।
ಉಪಾಗಮ್ಯ ಶಮೀಮೂಲೇ ವಣಿಕ್ಪುತ್ರಂ ದದರ್ಶ ಸಃ ॥ ೨೧ ॥

ಸ್ವಾಗತೇನಾಭಿವಾದ್ಯೈನಂ ಸಮಾಭಾಷ್ಯ ಪರಸ್ಪರಂ ।
ಸುಖೋಪವಿಷ್ಟಃ ಛಾಯಾಯಾಂ ಪೃಷ್ಟಃ ಕುಶಲಮಾಪ್ತವಾನ್ ॥ ೨೨ ॥

ಪ್ರೇತಾಧಿಪತಿನಾ ಪೃಷ್ಟಃ ಸ ಚ ತೇನ ವಣಿಕ್ ಸಖೇ ।
ಕುತ ಆಗಮ್ಯತೇ ಬ್ರೂಹಿ ಕ್ವ ವಾಸೋ ವಾ ಭವಿಷ್ಯತಿ ॥ ೨೩ ॥

ಕಥಂ ಚೇದಂ ಮಹಾರಣ್ಯಂ ಮೃಗಪಕ್ಷಿವಿವರ್ಜಿತಂ ।
ಸಮಾಪನ್ನೋಽಸಿ ಭದ್ರಂ ತೇ ಸರ್ವಮಾಖ್ಯಾತುಮರ್ಹಸಿ ॥ ೨೪ ॥

ಏವಂ ಪ್ರೇತಾಧಿಪತಿನಾ ವಣಿಕ್ ಪೃಷ್ಟಃ ಸಮಾಸತಃ ।
ಸರ್ವಮಾಖ್ಯಾತವಾನ್ ಬ್ರಹ್ಮನ್ ಸ್ವದೇಶಧನವಿಚ್ಯುತಿಂ ॥ ೨೫ ॥

ತಸ್ಯ ಶ್ರುತ್ವಾ ಸ ವೃತ್ತಾಂತಂ ತಸ್ಯ ದುಃಖೇನ ದುಃಖಿತಃ ।
ವಣಿಕ್ಪುತ್ರಂ ತತಃ ಪ್ರಾಹ ಪ್ರೇತಪಾಲಃ ಸ್ವಬಂಧುವತ್ ॥ ೨೬ ॥

೨೧-೨೨. ಅನಂತರ ಪಿಶಾಚಾಧಿಪತಿಯು ಎಲ್ಲಾ ಕಡೆಯಲ್ಲೂ ಸುತ್ತಿ ಆ ಬನ್ನೀಮರದ ಕೆಳಕ್ಕೆ ಬಂದು ಅಲ್ಲಿ ಕುಳಿತಿದ್ದ ಸಧರ್ಮನನ್ನು ನೋಡಿದನು. ಅವನನ್ನು ಸ್ವಾಗತಪುರಸ್ಸರವಾಗಿ ಅಭಿವಂದಿಸಿ ಆ ಮರದ ನೆರಳಿನಲ್ಲಿಯೇ ಸುಖಿಯಾಗಿ ಕುಳಿತು ಕುಶಲಪ್ರಶ್ನೆಯನ್ನೂ ಮಾಡಿದನು.

೨೩-೨೪. ಅವರಿಬ್ಬರಿಗೂ ಪರಸ್ಪರವಾಗಿ ಕುಶಲಪ್ರಶ್ನೆಯಾದನಂತರ ಆ ಪಿಶಾಚಾಧಿಪತಿಯು ಎಲೈ ಸಖನೇ, ಎಲ್ಲಿಂದ ಬರುತ್ತಿದ್ದೀಯೆ, ಎಲ್ಲಿ ವಾಸಮಾಡುತ್ತಿರುವೆ, ಮೃಗಪಕ್ಷಿರಹಿತವಾದ ಈ ಮಹಾರಣ್ಯಕ್ಕೆ ಹೇಗೆ ನೀನು ಸೇರಿದೆ, ನಿನಗೆ ಮಂಗಳವಾಗಲಿ, ಭಯಪಡಬೇಡ, ಎಲ್ಲವನ್ನೂ ಹೇಳು ಎಂದು ಪ್ರಶ್ನೆಮಾಡಿದನು.

೨೫-೨೬ ಈ ರೀತಿ ಪಿಶಾಚಾಧಿಪತಿಯಿಂದ ಸಾಮಾನ್ಯವಾಗಿ ಪ್ರಶ್ನೆಮಾಡಲ್ಪಟ್ಟ ಆ ವ್ಯಾಪಾರಿಯು ಅವನನ್ನು ಕುರಿತು ತನಗೆ ಒದಗಿದ ದೇಶ ಮತ್ತು ಧನಹಾನಿಯನ್ನು ಅವನಿಗೆ ತಿಳಿಸಿದನು. ಆ ವೃತ್ತಾಂತವನ್ನು ಕೇಳಿ ಅವನ ದುಃಖದಿಂದ ತಾನೂ ದುಃಖಿತನಾಗಿ ಆ ಪಿಶಾಚಾಧಿಪನು ಬಂಧುವಿನಂತೆ ಮರುಗಿ ಅವನನ್ನು ಕುರಿತು

ಏವಂ ಗತೇऽಪಿ ಮಾ ಶೋಕಂ ಕರ್ತುಮರ್ಹಸಿ ಸುವ್ರತ ।
ಭೂಯೋऽಪ್ಯರ್ಥಾ ಭವಿಷ್ಯಂತಿ ಯದಿ ಭಾಗ್ಯಬಲಂ ತವ ॥ ೨೭ ॥

ಭಾಗ್ಯಕ್ಷಯೇऽರ್ಥಾಃ ಕ್ಷೀಯಂತೇ ಭವಂತ್ಯಭ್ಯುದಯೇ ಪುನಃ ।
ಕ್ಷೀಣಸ್ಯಾಸ್ಯ ಶರೀರಸ್ಯ ಚಿಂತಯಾ ನೋದಯೋ ಭವೇತ್ ॥ ೨೮ ॥

ಇತ್ಯುಚ್ಚಾರ್ಯ ಸಮಾಹೂಯ ಸ್ವಾನ್ ಭೃತ್ಯಾನ್ ವಾಕ್ಯಮಬ್ರವೀತ್ ।
ಅದ್ಯಾತಿಥಿರಯಂ ಪೂಜ್ಯಃ ಸಹಜೋ ದೇಶಜೋ ಮಮ ॥ ೨೯ ॥

ಅಸ್ಮಿನ್ ದೃಷ್ಟೇ ವಣಿಕ್ಪುತ್ರೇ ದೃಷ್ಟಾಃ ಸ್ವಜನಬಾಂಧವಾಃ ।
ಅಸ್ಮಿನ್ ಸಮಾಗತೇ ಪ್ರೇತಾಃ ಪ್ರೀತಿರ್ಜಾತಾ ಮಮಾತುಲಾ ॥ ೩೦ ॥

ಏವಂ ಹಿ ವದತಸ್ತಸ್ಯ ಮೃತ್ಪಾತ್ರಂ ಸುದೃಢಂ ನವಂ ।
ದಧ್ಯೋದನೇನ ಸಂಪೂರ್ಣಮಾಜಗಾಮ ಯಥೇಪ್ಸಿತಂ ॥ ೩೧ ॥

ತಥಾ ನವಾ ಚ ಸುದೃಢಾ ಸಂಪೂರ್ಣಾ ಪರಮಾಂಭಸಾ ।
ವಾರಿಧಾನೀ ಚ ಸಂಪ್ರಾಪ್ತಾ ಪ್ರೇತಾನಾಮಗ್ರತಃ ಸ್ಥಿತಾ ॥ ೩೨ ॥

ಸಖನೇ, ಹೀಗಾದರೂ ನೀನು ದುಃಖಪಡಬೇಡ ಧೈರ್ಯದಿಂದಿರು, ನಿನಗೆ ಅನುಭವಿಸ ತಕ್ಕ ಭಾಗ್ಯಬಲವಿದ್ದಲ್ಲಿ ಆ ಅರ್ಥಗಳೆಲ್ಲಾ ಪುನಃ ನಿನ್ನನ್ನೇ ಬಂದು ಸೇರಿಯಾವು, ಅನುಭವಾದೃಷ್ಟವು ನಾಶವಾದಲ್ಲಿ ಅರ್ಥಗಳೂ ನಾಶಹೊಂದುವುವು, ಅಭ್ಯುದಯವು ಉಂಟಾದಾಗ ಪುನಃ ಬಂದು ಸೇರುವುವು, ಇದರ ಚಿಂತೆಯಿಂದ ಶರೀರವು ಕ್ಷೀಣ ವಾದಲ್ಲಿ ಪುನಃ ಶರೀರಕ್ಕೆ ಅಭ್ಯುದಯವಿಲ್ಲ.

೨೯-೩೦. ಹೀಗೆ ಹೇಳಿ ತನ್ನ ಭೃತ್ಯರನ್ನು ಕರೆದು ಈ ದಿನ ಪೂಜ್ಯನಾದ ಈ ಅತಿಥಿಯು ನನಗೆ ಲಭಿಸಿರುವನು, ನನಗೆ ಸ್ವದೇಶದವನಾಗಿಯೂ ಸಹೋದರ ನಾಗಿಯೂ ಇರುವ ಈ ವಣಿಕ್ಪುತ್ರನನ್ನು ನೋಡಿದ ಮಾತ್ರ ದಿಂದಲೇ ಸ್ವಜನರನ್ನೂ ಬಾಂಧವರನ್ನೂ ನಾನು ನೋಡಿದಂತಾಯಿತು ಇವನ ಸಮಾಗಮದಿಂದ ನನಗೆ ಮನಸ್ಸಿನಲ್ಲಿ ಬಹಳ ಸಂತೋಷವುಂಟಾಗಿದೆ. ಎಂದು ಹೇಳಿದನು.

೩೧-೩೨. ಹಾಗೆ ಹೇಳುತ್ತಿರುವಾಗಲೇ ಹೊಸದಾದ ದೃಢವಾದ ಮಣ್ಣಿನ ಪಾತ್ರೆಯು ದಧ್ಯೋದನದಿಂದ ತುಂಬಿ ಅವನ ಹತ್ತಿರ ಬಂದಿತು. ಹಾಗೆಯೇ ಹೊಸ ಮಣ್ಣಿನಪಾತ್ರೆಯೂ ಸಹ ಸ್ವಾದುವಾದ ಸಿಹಿನೀರಿನಿಂದ ತುಂಬಿ ಮುಂದೆ ತರಲ್ಪಟ್ಟಿತು. ಅದನ್ನು ತಂದ ಪಿಶಾಚಗಳೂ ಆ ಪಾತ್ರೆಯ ಹಿಂದೆ ನಿಂತರು.

ತಾಮಾಗತಾಂ ಸಸಲಿಲಾಂ ಸಾನ್ನಾಂ ವೀಕ್ಷ್ಯ ಮಹಾಮತಿಃ ।
ಪ್ರಾಹೋತ್ತಿಷ್ಠ ವಣಿಕ್ಪುತ್ರ ತ್ವಮಾಹ್ನಿಕಮುಪಾಚರ ॥ ೩೩ ॥

ತತಸ್ತು ವಾರಿಧಾನ್ಯಾಸ್ತೌ ಸಲಿಲೇನ ವಿಧಾನತಃ ।
ಕೃತಾಹ್ನಿಕಾವುಭೌ ಜಾತೌ ವಣಿಕ್ಪ್ರೇತಪ್ರಭುಸ್ತಥಾ ॥ ೩೪ ॥

ತತೋ ವಣಿಕ್ಸುತಾಯಾಸೌ ದಧ್ಯೋದನಮಥೇಚ್ಛಯಾ ।
ದತ್ವಾ ತೇಭ್ಯಶ್ಚ ಸರ್ವೇಭ್ಯಃ ಶೇಷಮನ್ನಮಧಾತ್ತತಃ ॥ ೩೫ ॥

ಭುಕ್ತವತ್ಸು ಚ ಸರ್ವೇಷು ಕಾಮತೋಂಭಸಿ ಸೇವಿತೇ ।
ಅನಂತರಂ ಸ ಬುಭುಜೆ ಪ್ರೇತಪಾಲೋ ವರಾಶನಂ ॥ ೩೬ ॥

ತೃಪ್ತೇ ಪ್ರೇತೇ ಪ್ರಕಾಮಂ ತು ವಾರಿಧಾನ್ಯೋದನಂ ತಥಾ ।
ಅಂತರ್ಧಾನಮಗಾದ್ಬ್ರಹ್ಮನ್ ವಣಿಕ್ಪುತ್ರಸ್ಯ ಪಶ್ಯತಃ ॥ ೩೭ ॥

ತತಸ್ತದದ್ಭುತತಮಂ ದೃಷ್ಟ್ವಾ ಸಮತಿಮಾನ್ವಣಿಕ್ ।
ಪಪ್ರಚ್ಛ ತಂ ಪ್ರೇತಪಾಲಂ ಕೌತೂಹಲಮನಾ ವಶೀ ॥ ೩೮ ॥

೩೩-೩೪. ಹಾಗೆ ಮುಂದೆ ಬಂದ ನೀರು ಮತ್ತು ದಧ್ಯನ್ನಗಳ ಪಾತ್ರೆಗಳನ್ನು ನೋಡಿ ಉದಾರಿಯಾದ ಆಪ್ರೇತಪ್ರಭುವು ವಣಿಕ್ಪುತ್ರನೇ ಮೇಲಕ್ಕೇಳು ಆಹ್ನಿಕವನ್ನಾಚರಿಸು ಎಂದನು. ಅನಂತರ ಆ ಪಾತ್ರೆಯ ನೀರಿನಿಂದ ಸಧರ್ಮನೂ ಪಿಶಾಚಪತಿಯೂ ಇಬ್ಬರೂ ಸಹ ಯಥಾವಿಧಿಯಾಗಿ ತಮ್ಮ ತಮ್ಮ ಆಹ್ನಿಕವನ್ನಾಚರಿಸಿದರು.

೩೫-೩೬. ಅನಂತರ ಆ ವಣಿಕ್ಪುತ್ರನಿಗೆ ಅಪೇಕ್ಷಿಸುವಷ್ಟು ದಧ್ಯೋದನವನ್ನು ಕೊಟ್ಟು ನಂತರ ಮಿಕ್ಕ ಪಿಶಾಚಗಳಿಗೆಲ್ಲಾ ಕೊಟ್ಟು ಉಳಿದ ಅನ್ನವನ್ನು ಇಟ್ಟುಕೊಂಡನು. ಅವರೆಲ್ಲರೂ ಊಟಮಾಡಿ ಯಥೇಚ್ಛವಾಗಿ ನೀರನ್ನೂ ಕುಡಿದನಂತರ ಉಳಿದ ಅನ್ನವನ್ನು ಆ ಪಿಶಾಚಪತಿಯು ತಾನು ಭೋಜನಮಾಡಿದನು.

೩೭-೩೮. ಆ ಪಿಶಾಚಪತಿಯು ಭೋಜನದಿಂದ ತೃಪ್ತಿಹೊಂದಿದನಂತರ ನೀರಿನ ಮತ್ತು ಅನ್ನದ ಪಾತ್ರೆಗಳೆರಡೂ ಅಂತರ್ಧಾನಹೊಂದಿದವು, ತನ್ನ ಎದುರಿಗೇ ಅವು ಅಂತರ್ಧಾನಹೊಂದಿದುದನ್ನು ನೋಡಿ ಆಶ್ಚರ್ಯಚಕಿತನಾದ ಆ ವಣಿಕ್ಪುತ್ರನು ಬುದ್ಧಿಶಾಲಿಯಾದುದರಿಂದ ತಿಳಿಯಲು ಕುತೂಹಲಿಯಾಗಿ ಆ ಪಿಶಾಚಾಧಿಪನನ್ನು ಕುರಿತು

ಅರಣ್ಯೇ ನಿರ್ಜನೇ ಸಾಧೋ ಕುತೋಽನ್ನಸ್ಯ ಸಮುದ್ಭವಃ ।
ಕುತಶ್ಚ ವಾರಿಧಾನೀಯಂ ಸಂಪೂರ್ಣಾ ಪರಮಾಂಭಸಾ ॥ ೩೯ ॥

ತಥಾಪಿ ತವ ಯೇ ಭೃತ್ಯಾಃ ತ್ವತ್ತಸ್ತೇ ವರ್ಣತಃ ಕೃಶಾಃ ।
ಭವಾನಪಿ ಚ ತೇಜಸ್ವೀ ಕಿಂಚಿತ್ಪುಷ್ಟವಪುಃ ಶುಭಃ ॥ ೪೦ ॥

ಶುಕ್ಲವಸ್ತ್ರಪರೀಧಾನೋ ಬಹೂನಾಂ ಪರಿಪಾಲಕಃ ।
ಸರ್ವಮೇತನ್ಮಮಾಚಕ್ಷ್ವ ಕೋ ಭವಾನ್ ಕಾ ಶಮೀತ್ವಿಯಂ ॥ ೪೧ ॥

ಇತ್ಥಂ ವಣಿಗ್ವಚಃ ಶ್ರುತ್ವಾ ತತೋಽಸೌ ಪ್ರೇತನಾಯಕಃ ।
ಶಶಂಸ ಸರ್ವಮಸ್ಯಾಥ ಯಥಾ ವೃತ್ತಂ ಪುರಾತನಂ ॥ ೪೨ ॥

ಅಹಮಾಸಂ ಪುರಾ ವಿಪ್ರಃ ಶಾಕಲೇ ನಗರೋತ್ತಮೇ ।
ಸೋಮಶರ್ಮೇತಿ ವಿಖ್ಯಾತೋ ಬಹುಲಾಗರ್ಭಸಂಭವಃ ॥ ೪೩ ॥

ಮಮಾಸ್ತಿ ಚವಣಿಕ್ ಶ್ರೀಮಾನ್ಪ್ರಾತಿವೇಶ್ಯೋ ಮಹಾಧನಃ ।
ಸ ತು ಸೋಮಶ್ರವಾ ನಾಮ ವಿಷ್ಣುಭಕ್ತೋ ಮಹಾಯಶಾಃ ॥ ೪೪ ॥

೩೯-೪೧. ಎಲೈ ಸಾಧುವೇ ಈ ನಿರ್ಜನವಾದ ಅರಣ್ಯದಲ್ಲಿ ಅನ್ನವು ಎಲ್ಲಿಂದ ಬಂದಿತು. ಸ್ವಾದುವಾದ ನೀರಿನಿಂದ ತುಂಬಿದ ಈ ಪಾತ್ರೆಯೂ ಎಲ್ಲಿಂಥ ಬಂದಿತು, ಇಷ್ಟು ತೃಪ್ತಿಯಿಂದ ಇದ್ದರೂ ನಿನ್ನ ಈ ಭೃತ್ಯರು ಆಕಾರದಿಂದಲೂ ವರ್ಣದಿಂದಲೂ ಕೃಶರಾಗಿದ್ದಾರೆ. ನೀನು ಮಾತ್ರ ತೇಜಸ್ವಿಯಾಗಿಯೂ ಸ್ವಲ್ಪಮಟ್ಟಿಗೆ ಪುಷ್ಟವಾದ ಶರೀರವುಳ್ಳವನಾಗಿಯೂ ಇರುವೆ. ಇದಕ್ಕೆ ಕಾರಣವನ್ನು ಹೇಳಬೇಕು ಎಂದು ಪ್ರಶ್ನೆ ಮಾಡಿದನು.

೪೧-೪೨. ನೀನು ಮಾತ್ರ ಬಿಳಿಯ ವಸ್ತ್ರವನ್ನುಟ್ಟು ಅನೇಕರಿಗೆ ರಕ್ಷಕನಾಗಿಯೂ ಇದ್ದೀಯೆ ನೀನು ಯಾರು, ಈ ಬನ್ನೀಮರವೂ ಎಂತಹುದು ಎಲ್ಲವನ್ನೂ ಹೇಳಬೇಕೆಂದು ಪ್ರಶ್ನೆಮಾಡಲು ಆ ಮಾತನ್ನು ಕೇಳಿ ಆ ಪಿಶಾಚನಾಯಕನು ತನ್ನ ಹಿಂದಿನ ವೃತ್ತಾಂತವೆಲ್ಲವನ್ನೂ ಯಥಾರ್ಥವಾಗಿ ಹೇಳತೊಡಗಿದನು.

೪೩-೪೪. ನಾನು ಮೊದಲು ಶಾಕಲವೆಂಬ ಮಹಾನಗರದಲ್ಲಿಯೇ ಬಹುಲಾ ಎಂಬ ಬ್ರಾಹ್ಮಣಿಯಿಂದ ಜನಿಸಿ ಸೋಮಶರ್ಮನೆಂದು ಪ್ರಖ್ಯಾತನಾದ ಬ್ರಾಹ್ಮಣನಾಗಿದ್ದೆನು. ನನ್ನ ಮನೆಯ ಪಕ್ಕದಲ್ಲಿ ಮಹಾಧನಿಕನಾದ ಸ್ತೋಮಶ್ರವಾ ಎಂಬ ವ್ಯಾಪಾರಿ ಇದ್ದನು. ಅವನು ವಿಷ್ಣುಭಕ್ತನಾಗಿಯೂ ಯಶಸ್ವಿಯಾಗಿಯೂ ಇದ್ದನು.

ಸೋಽಹಂ ಕದರ್ಯೋ ಮೂಢಾತ್ಮಾ ಧನೇಽಪಿ ಸತಿ ದುರ್ಮತಿಃ ।
ನ ದದಾಮಿ ದ್ವಿಜಾತಿಭ್ಯೋ ನವಾಶ್ನಾಮ್ಯನ್ನಮುತ್ತಮಂ ॥ ೪೫ ॥

ಪ್ರಮಾದಾದ್ಯದಿ ಭುಂಜೇಽಹಂ ದಧಿಕ್ಷೀರಘೃತಾನ್ವಿತಂ ।
ತತೋಽರಾತ್ರೌ ತ್ರಿಭಿರ್ಘೋರೈರ್ಭೃತ್ಯೈಸ್ತಾಡ್ಯಮಾನಶ್ಚ ಯಷ್ಟಿಭಿಃ ॥ ೪೬ ॥

ಪ್ರಾತರ್ಭವತಿ ಮೇ ಘೋರಾ ಮೃತ್ಯುತುಲ್ಯಾ ವಿಷೂಚಿಕಾ ।
ನ ಚ ಕಶ್ಚಿನ್ಮಮಾಭ್ಯಾಶೇ ತತ್ರ ತಿಷ್ಠತಿ ಬಾಂಧವಃ ॥ ೪೭ ॥

ಕಥಂ ಕಥಮಪಿ ಪ್ರಾಣಾ ಮಯಾ ವೈ ಸಂಪ್ರಧಾರಿತಾಃ ।
ಏವಮೇತಾದೃಶಃ ಪಾಪೀ ನಿವಸಾಮ್ಯತಿನಿರ್ಘೃಣಃ ॥ ೪೮ ॥

ಸೌವೀರತಿಲಪಿಣ್ಯಾಕತುಷಶಾಕಾದಿಭೋಜನೈಃ ।
ಕ್ಷಪಯಾಮಿ ಕದನ್ನಾದ್ಯೈಃ ಆತ್ಮಾನಂ ಕಾಲಯಾಪನೈಃ ॥ ೪೯ ॥

ಏವಂ ತತ್ರ ಸತೋಽಮಿತ್ರ ಮಹಾನ್ ಕಾಲೋಽಭ್ಯಗಾದಥ ।
ಶ್ರವಣದ್ವಾದಶೀ ನಾಮ ಮಾಸಿ ಭಾದ್ರಪದೇಽಭವತ್ ॥ ೫೦ ॥

೪೫-೪೯. ಮೂಢನಾದ ನಾನು ಕೃಪಣನಾಗಿ ಧನವಿದ್ದರೂ ತ್ಯಾಗಭೋಗಗಳಿಲ್ಲದೆ ಇದ್ದೆನು. ಬ್ರಾಹ್ಮಣರಿಗೆ ದಾನವನ್ನೂ ಮಾಡಲಿಲ್ಲಾ, ಮೃಷ್ಟಾನ್ನವನ್ನು ಉಣ್ಣಲೂ ಇಲ್ಲಾ, ಪ್ರಮಾದದಿಂದ ಹಾಲು ಮೊಸರು ತುಪ್ಪ ಮೊದಲಾದುವುಗಳಿಂದ ಕೂಡಿದ ಮೃಷ್ಟಾನ್ನವನ್ನು ಊಟಮಾಡಿದ್ದೇ ಆದರೆ ಆ ರಾತ್ರಿಯಲ್ಲೇ ಘೋರರಾದ ಮೂರು ಭೃತ್ಯರು ಬಂದು ದೊಣ್ಣೆಗಳಿಂದ ಹೊಡೆಯುವರು, ಬೆಳಗಿನ ವೇಳೆಗೆ ಮಯ್ಯಿನಲ್ಲೆಲ್ಲಾ ಮೃತ್ಯುವಿನಂತೆ ದುಃಸಹವಾದ ಬೊಕ್ಕೆಗಳೇಳುತ್ತವೆ. ಆ ಸಮಯದಲ್ಲಿ ಒಬ್ಬ ಬಂಧುವಾದರೂ ನನ್ನ ಬಳಿ ಇರುವುದಿಲ್ಲ. ಪಾಪಿಯಾಗಿಯೂ ನಿರ್ಘೃಣನಾಗಿಯೂ ಇದ್ದ ನಾನು ಹೀಗೆಯೇ ಬಹುಕಷ್ಟದಿಂದ ಪ್ರಾಣಗಳನ್ನು ಧರಿಸಿಕೊಂಡಿದ್ದೆನು. ಮೇಣ ಎಳ್ಳಿನಹಿಂಡಿ ತೌಡು ಕಾಯಿಪಲ್ಯಗಳು ಇವುಗಳನ್ನೇ ತಿಂದು ಕದನ್ನದಿಂದ ದೇಹವನ್ನು ಶೋಷಿಸುತ್ತಾ ಕಾಲಯಾಪನ ಮಾಡುತ್ತಿದ್ದೆನು.

೫೦-೫೧. ಹೀಗೆಯೇ ಅಲ್ಲಿ ಬಹುಕಾಲ ಕಳೆದೆನು. ಹೀಗಿರುವಾಗ ಭಾದ್ರಪದ ಮಾಸದಲ್ಲಿ ಶ್ರವಣದ್ವಾದಶೀ ಎಂಬ ವ್ರತದಿವಸವು ಬಂದಿತು. ಆಗ ನಗರದಲ್ಲಿದ್ದ

ತತೋ ನಾಗರಕೋ ಲೋಕೋ ಗತಃ ಸ್ನಾತುಂ ಹಿ ಸಂಗಮಂ ।
ಇರಾವತ್ಯಾ ನಡ್ವಲಾಯಾಃ ಬ್ರಹ್ಮಕ್ಷತ್ರಪುರಸ್ಸರಃ ॥ ೫೧ ॥

ಪ್ರಾತಿವೇಶ್ಮಪ್ರಸಂಗೇನ ತತ್ರಾಪ್ಯನುಗತೋಽಸ್ಮ್ಯಹಂ ।
ಕೃತೋಪವಾಸಃ ಶುಚಿಮಾನೇಕಾದಶ್ಯಾಂ ಯತವ್ರತಃ ॥ ೫೨ ॥

ತತಃ ಸಂಗಮತೋಯೇನ ವಾರಿಧಾನೀಂ ದೃಢಾಂ ನವಾಂ ।
ಸಂಪೂರ್ಣಾಂ *ವಸ್ತುಸಂವೀತಾಂ ಛತ್ರೋಪಾನತ್ಸುಸಂಯುತಾಂ ॥ ೫೩ ॥

ಮೃತ್ಪಾತ್ರಮತಿಮೃಷ್ಟಸ್ಯ ಪೂರ್ಣಂ ದಧ್ಯೋದನಸ್ಯ ವೈ ।
ಪ್ರದತ್ತಂ ಬ್ರಾಹ್ಮಣಾಯೋಚ್ಚೈಃ ಶುಚಯೇ ಜಾತಿಕರ್ಮಣಾ ॥ ೫೪ ॥

ತದೇವ ಜೀವತಾ ದತ್ತಂ ಮಯಾ ದಾನಂ ವಣಿಕ್ಸುತ ।
ವರ್ಷಾಣಾಂ ಸಪ್ತತೀನಾಂ ವೈ ನಾನ್ಯದ್ದತ್ತಂ ಹಿ ಕಿಂಚನ ॥ ೫೫ ॥

ಬ್ರಾಹ್ಮಣಕ್ಷತ್ರಿಯರೆಲ್ಲರೂ ಹುಲ್ಲುಹೊಡಕೆಗಳಿಂದ ಕೂಡಿರುವ ಇರಾವತೀನದಿಯ ಸಂಗಮಕ್ಕೆ ಸ್ನಾನಮಾಡಲು ಹೊರಟರು.

೫೨-೫೩. ಮಗ್ಗಲು ಮನೆಯವನ ಜೊತೆಯಲ್ಲಿ ನಾನೂ ಸ್ನಾನಕ್ಕೆ ಹೋದೆನು. ಏಕಾದಶಿಯಲ್ಲಿ ಉಪವಾಸಮಾಡಿ ಶುಚಿಯಾಗಿಯೂ ವ್ರತಶಾಲಿಯಾಗಿಯೂ ಇದ್ದೆನು. ಅಲ್ಲಿ ಸ್ನಾನಮಾಡಿ ಸಂಗಮದ ಜಲದಿಂದ ಪೂರ್ಣವಾದ ದೃಢವಾದ ಹೊಸಪಾತ್ರೆಯನ್ನೂ ವಸ್ತ್ರ, ಛತ್ರಿ, ಪಾದರಕ್ಷೆ ಮುಂತಾದ ಸಾಮಗ್ರಿಗಳನ್ನೂ

೫೪-೫೫. ಮತ್ತು ಸ್ವಾದುವಾದ ದಧ್ಯನ್ನದಿಂದ ತುಂಬಿದ ಮಣ್ಣಿನ ಪಾತ್ರೆಯನ್ನೂ ಸಹ ಸ್ವಧರ್ಮದಲ್ಲಿದ್ದು ಶುಚಿಯಾಗಿರುವ ಬ್ರಾಹ್ಮಣೋತ್ತಮನಿಗೆ ದಾನ ಕೊಟ್ಟೆನು. ನಾನು ಬದುಕಿದ್ದ ಎಪ್ಪತ್ತು ವರ್ಷಗಳಲ್ಲಿ ಜೀವಸಹಿತನಾಗಿದ್ದು ದಾನ ಮಾಡಿದುದು ಇದು ಒಂದೇ ಹೊರತು ಮತ್ತಾವುದೂ ಇಲ್ಲ.

---

* ಇಲ್ಲಿ ವಸ್ತ್ರಸಂವೀತಾಂ ಎಂದಿರಬೇಕೆಂದು ತೋರುತ್ತದೆ.

ಮೃತಃ ಪ್ರೇತತ್ವಮಾಪನ್ನೋ ದತ್ವಾ ಪ್ರೇತಾನ್ನಮೇವ ಹಿ ।
ಅಮೀಚಾದತ್ತದಾನಾಸ್ತು ಮದ್ದತ್ತಾನ್ನೋಪಜೀವಿನಃ ॥ ೫೬ ॥

ಏತತ್ತೇ ಕಾರಣಂ ಪ್ರೋಕ್ತಂ ಯತ್ತದನ್ನಂ ಪಯೋಂಭಸಾ ।
ದತ್ತಂ ತದಿದಮಾಯಾತಿ ಮಧ್ಯಾಹ್ನೇಪಿ ದಿನೆ ದಿನೆ ॥ ೫೭ ॥

ಯಾವನ್ನಾಹಂ ಚ ಭುಂಜೇನ್ನಂ ನ ತಾವತ್ ಕ್ಷಯಮೇತಿ ಚ ।
ಮಯಿ ಭುಕ್ತೆ ಚ ಪೀತೆ ಚ ಸರ್ವಮಂತರ್ಹಿತಂ ಭವೇತ್ ॥ ೫೮ ॥

ಆತಪತ್ರಪ್ರದಾನಾಚ್ಚ ಸೋಯಂ ಜಾತಃ ಶಮೀತರುಃ ।
ಉಪಾನದ್ಯುಗಲೆ ದತ್ತೆ ಪ್ರೇತೋ ಮೇ ವಾಹನಂ ಭವೇತ್ ॥ ೫೯ ॥

ಇದಂ ತವೋಕ್ತಂ ಸರ್ವಂ ಚ ಯಥಾ ಕೀನಾಶತಾತ್ಮನಃ ।
ಶ್ರವಣದ್ವಾದಶೀಪುಣ್ಯಾ ತಥೋಕ್ತಂ ಪುಣ್ಯವರ್ಧನಂ ॥ ೬೦ ॥

೫೬-೫೭. ಅನಂತರ ಮೃತನಾಗಿ ಪಿಶಾಚಿಯಾದೆನು. ಈ ಪಿಶಾಚಿಗಳಿಗೆ ಅನ್ನವನ್ನು ಕೊಡುತ್ತಿರುವೆನು, ನಾನು ದಾನಮಾಡಿದ್ದುದರಿಂದ ಈಗಲೂ ಪಿಶಾಚಿಯಾಗಿ ಈ ಪಿಶಾಚಿಗಳಿಗೆ ಅನ್ನದಾನಮಾಡುತ್ತಿರುವೆನು, ಈ ಪಿಶಾಚಾದಿಗಳು ದಾನ ಮಾಡದೇ ಇದ್ದುದರಿಂದ ನಾನು ಕೊಟ್ಟ ಅನ್ನದಿಂದಲೇ ಜೀವಿಸುತ್ತಿರುವರು. ನಾನು ಹಿಂದೆ ಜಲ ಮತ್ತು ದಧ್ಯನ್ನದಿಂದ ಪೂರ್ಣವಾದ ಪಾತ್ರೆಗಳನ್ನು ದಾನಮಾಡಿದ್ದುದೇ ಈಗ ಪ್ರತಿದಿನದಲ್ಲಿಯೂ ಮಧ್ಯಾಹ್ನ ಸಮಯಕ್ಕೆ ಸರಿಯಾಗಿ ಅವು ನನ್ನಲ್ಲಿ ಬರಲು ಕಾರಣ, ಇದಕ್ಕೆ ಕಾರಣವನ್ನು ಹೇಳಿ ಆಯಿತು.

೫೮-೬೦ ನಾನು ಊಟಮಾಡುವವರಿಗೂ ಆ ಅನ್ನವು ಕ್ಷಯಿಸುವುದಿಲ್ಲ· ಊಟಮಾಡಿ ಜಲಪಾನವನ್ನೂ ಮಾಡಿದನಂತರ ಅವು ಅಂತರ್ಧಾನ ಹೊಂದುತ್ತವೆ. ನಾನು ದಾನಮಾಡಿದ್ದ ಛತ್ರಿಯೇ ಈ ಬನ್ನೀಮರವಾಗಿ ಹುಟ್ಟಿದೆ. ನಾನು ಪಾದ ರಕ್ಷೆಯನ್ನು ದಾನಮಾಡಿದುದೇ ಈ ಪಿಶಾಚಗಳು ನನಗೆ ವಾಹನವಾಗಿರಲು ಕಾರಣ. ನಾನು ಪಿಶಾಚಿಯಾದುದನ್ನೂ ಪುಣ್ಯಪ್ರದವಾದ ಶ್ರವಣದ್ವಾದಶಿಯಮಾಹಾತ್ಮ್ಯವನ್ನೂ ಈ ರೀತಿ ನಿನಗೆ ಹೇಳಿದ್ದೇನೆ.

ಇತ್ಯೇವಮುಕ್ತೇ ವಚನೇ ವಣಿಕ್ಪುತ್ರೋಽಬ್ರವೀದ್ವಚಃ ।
ಯನ್ಮಯಾ ತಾತ ಕರ್ತವ್ಯಂ ತದನುಜ್ಞಾತುಮರ್ಹಸಿ ॥ ೬೧ ॥

ತತ್ತಸ್ಯ ವಚನಂ ಶ್ರುತ್ವಾ ವಣಿಕ್ಪುತ್ರಸ್ಯ ನಾರದ ।
ಪ್ರೇತಪಾಲೋಽ ವಚಃ ಪ್ರಾಹ ಸ್ವಾರ್ಥಸಿದ್ಧಿಕರಂ ತತಃ ॥ ೬೨ ॥

ಯತ್ತ್ವಯಾ ತಾತ ಕರ್ತವ್ಯಂ ಮದ್ಧಿತಾರ್ಥಂ ಮಹಾಮತೇ ।
ಕಥಯಿಷ್ಯಾಮಿ ಸಮ್ಯಕ್ತೇ ತವ ಶ್ರೇಯಸ್ಕರಂ ಮಮ ॥ ೬೩ ॥

ಗಯಾತೀರ್ಥೇ ತು ಜುಹುಯಾತ್ಸ್ನಾತ್ವಾ ಶೌಚಸಮನ್ವಿತಃ ।
ಮಮ ನಾಮ ಸಮುದ್ದಿಶ್ಯ ಪಿಂಡನಿರ್ವಪಣಂ ಕುರು ॥ ೬೪ ॥

ತತ್ರ ಪಿಂಡಪ್ರದಾನೇನ ಪ್ರೇತಭಾವಾದಹಂ ಸಖೇ ।
ಮುಕ್ತಸ್ತು ಸರ್ವದಾತೄಣಾಂ ಯಾಸ್ಯಾಮಿ ಸಹ ಲೋಕತಾಂ ॥ ೬೫ ॥

ತಿಥಿರ್ಯಾ ದ್ವಾದಶೀ ಪುಣ್ಯಾ ಮಾಸಿ ಪ್ರೌಷ್ಠಪದೇ ಸಿತಾ ।
ಬುಧಶ್ರವಣಸಂಯುಕ್ತಾ ಸಾತಿ ಶ್ರೇಯಸ್ಕರೀ ಸ್ಮೃತಾ ॥ ೬೬ ॥

೬೧-೬೪. ಪಿಶಾಚಾಧಿಪತಿಯು ಹೀಗೆ ಹೇಳಿದನಂತರ ಆ ವಣಿಕ್ಪುತ್ರನು ತಂದೆಯೇ ಈಗ ನಾನು ಮಾಡತಕ್ಕದ್ದೇನೆಂಬುದನ್ನು ನನಗೆ ಆಜ್ಞಾಪಿಸು ಎಂದನು. ಆ ಮಾತನ್ನು ಕೇಳಿ ಪಿಶಾಚಾಧಿಪತಿಯು ಸ್ವಾರ್ಥಸಿದ್ಧಿಗೆ ತಕ್ಕಂತೆ ಹೀಗೆ ಹೇಳಿದನು. ಮಿತ್ರನೇ ನಿನಗೆ ಶ್ರೇಯಸ್ಕರವಾಗುವಂತೆಯೂ ನನಗೂ ಮುಂದೆ ಹಿತವಾಗುವಂತೆಯೂ ನಿನ್ನ ಕರ್ತವ್ಯವನ್ನು ಹೇಳುತ್ತೇನೆ. ಗಯಾತೀರ್ಥದಲ್ಲಿ ಸ್ನಾನಮಾಡಿ ಶುಚಿಯಾಗಿದ್ದು ಹೋಮಾದಿಗಳನ್ನು ಮಾಡಿ ನನ್ನನ್ನುದ್ದೇಶಿಸಿ ನನ್ನ ನಾಮೋಚ್ಚಾರಣ ಪೂರ್ವಕವಾಗಿ ಪಿಂಡದಾನವನ್ನು ಮಾಡು.

೬೫-೬೮. ಅಲ್ಲಿ ನೀನು ಪಿಂಡಪ್ರದಾನಮಾಡಿದುದೇ ಆದರೆ ನಾನೂ ಸಹ ಈ ಪ್ರೇತಭಾವದಿಂದ ನಿವೃತ್ತಿಹೊಂದಿ ಎಲ್ಲಾ ದಾತೃಗಳಿಗೂ ಲಭಿಸಬಹುದಾದ ದಿವ್ಯ ಲೋಕವನ್ನು ಹೊಂದುವೆನು. ಭಾದ್ರಪದಮಾಸದ ಶುಕ್ಲಪಕ್ಷದಲ್ಲಿ ಬುಧವಾರ ಮತ್ತು ಶ್ರವಣನಕ್ಷತ್ರದಿಂದ ಕೂಡಿದ ದ್ವಾದಶೀ ತಿಥಿಯು ಪುಣ್ಯಕರವಾದ ಕಾರ್ಯಗಳಿಗೆ

ಇತ್ಯೇವಮುಕ್ತ್ವಾ ವಣಿಜಂ ಪ್ರೇತರಾಜೋಽನುಗೈಸ್ಸಹ ।
ಸಚ ಮೋನೆ ಯಥಾನ್ಯಾಯಂ ಸಮ್ಯಗಾಖ್ಯಾತವಾನ್ ಶುಚಿಃ ॥ ೬೭ ॥

ಪ್ರೇತಸ್ಕಂಧೆ ಸಮಾರೋಪ್ಯ ತ್ಯಾಜಿತೋ ಮರುಮಂಡಲಂ ।
ರಮ್ಯೇಽಥ ಶೂರಸೇನಾಖ್ಯೇ ದೇಶೆ ಪ್ರಾಪ್ತಃ ಸ ವೈ ವಣಿಕ್ ॥ ೬೮ ॥

ಸ್ವಕರ್ಮಧರ್ಮಯೋಗೇನ ಧನಮುಚ್ಚಾವಚಂ ಬಹು ।
ಉಪಾರ್ಜಯಿತ್ವಾ ಪ್ರಯಯೌ ಗಯಾತೀರ್ಥಮನುತ್ತಮಂ ॥ ೬೯ ॥

ಪಿಂಡನಿರ್ವಾಪಣಂ ತತ್ರ ಪ್ರೇತಾನಾಮನುಪೂರ್ವಕಂ ।
ಚಕಾರಾಥ ಸ್ವಬಂಧೂನಾಂ ಪಿತ್ರ್ಯಾಣಾಂ ತದನಂತರಂ ॥ ೭೦ ॥

ಆತ್ಮನಶ್ಚ ಸಮಾ*ಬುದ್ಧಿರ್ಮಹಚ್ಛ್ರಾದ್ಧಂ ತಿಲೈರ್ವಿನಾ ।
ಪಿಂಡನಿರ್ವಪಣಂ ಚಕ್ರೆ ತಥಾನ್ಯಾನಪಿ ಗೋತ್ರಜಾನ್ ॥ ೭೧ ॥

ಬಹಳ ಶ್ರೇಯಸ್ಕರವೆಂದು ತಿಳಿ ಎಂದು ಹೇಳಲು ಆ ವಣಿಕ್ಪುತ್ರನೂ ಅದು ನ್ಯಾಯವಾದುದೆಂದೂ ಸರಿಯೆಂದೂ ತಿಳಿದನು. ಹೀಗೆ ಹೇಳಿದ ಆ ಪಿಶಾಚಾಧಿಪನು ತನ್ನ ಭೃತ್ಯರಾದ ಪಿಶಾಚಿಗಳೊಡನೆ ಈ ವಣಿಕ್ಪುತ್ರನನ್ನು ಪಿಶಾಚದ ಹೆಗಲಿನ ಮೇಲೆ ಕುಳ್ಳಿರಿಸಿ ಆ ಮರುಭೂಮಿಯನ್ನು ದಾಟಿಸಿ ರಮ್ಯವಾದ ಶೂರಸೇನವೆಂಬ ದೇಶಕ್ಕೆ ಕಳುಹಿಸಿ ಕೊಟ್ಟನು.

೬೯-೭೧. ಅಲ್ಲಿ ಸೇರಿದ ಆ ವಣಿಕ್ಪುತ್ರನು ತನ್ನ ಧರ್ಮಕರ್ಮಗಳ ಬಲದಿಂದ ಬಹಳ ಧನವನ್ನು ಸಂಪಾದಿಸಿ ಉತ್ತಮವಾದ ಗಯಾತೀರ್ಥಕ್ಕೆ ಹೊರಟನು. ಅಲ್ಲಿ ತನಗೆ ಉಪಕರಿಸಿದ ಪಿಶಾಚವರ್ಗಕ್ಕೂ ಅನಂತರ ಪಿತೃಗಳಿಗೂ ಪಿಂಡಪ್ರದಾನವಂಮಾಡಿ ಬುದ್ಧಿಶಾಲಿಯಾದ ಆ ವಣಿಕ್ಪುತ್ರನು ತನ್ನ ಸದ್ಗತಿಯನ್ನೂ ಆಲೋಚಿಸಿ ತಿಲರಹಿತವಾದ ಆತ್ಮಶ್ರಾದ್ಧವನ್ನೂ ಮಾಡಿದನು. ಗೋತ್ರಜ್ಞಾತಿಗಳನ್ನೂ ಉದ್ದೇಶಿಸಿ ಪಿಂಡಪ್ರದಾನವನ್ನೂ ನಡಿಸಿದನು.

---

* ಇಲ್ಲಿ ಮಹಾಬುದ್ಧಿಃ ಎಂದು ಪಾಠವಿರಬೇಕೆಂದು ತೋರುತ್ತದೆ.

ಏವಂ ಪ್ರವೃತ್ತಿಷ್ವಥ ಚ ಪಂಚಪಿಂಡೇಷು ಭಾವತಃ ।
ವಿಮುಕ್ತಾಸ್ತೇ ದ್ವಿಜಾಃ ಪ್ರಾಪ್ಯ ಬ್ರಹ್ಮಲೋಕಂ ತತೋ ಗತಾಃ ॥ ೭೨ ॥

ಸಚಾಪಿ ಹಿ ವಣಿಕ್ಪುತ್ರೋ ನಿಜಮಾಲಯಮಾವ್ರಜತ್ ।
ಶ್ರವಣದ್ವಾದಶೀಂ ಕೃತ್ವಾ ಕಾಲಧರ್ಮಮುಪೇಯಿವಾನ್ ॥ ೭೩ ॥

ಗಂಧರ್ವಲೋಕೇ ಸುಚಿರಂ ಭೋಗಾನ್ ಭುಕ್ತ್ವಾ ಸುದುರ್ಲಭಾನ್ ।
ಜನ್ಮ ಮಾನುಷ್ಯಮಾಸಾದ್ಯ ಸಚಾಭೂತ್ಸಕಲೇ ವಿರಾಟ್ ॥ ೭೪ ॥

ಸ್ವಧರ್ಮಕರ್ಮವೃತ್ತಿಸ್ಥಃ ಶ್ರವಣದ್ವಾದಶೀರತಃ ।
ಕಾಲಧರ್ಮಮವಾಪ್ಯಾಸೌ ಗುಹ್ಯಕಾವಾಸಮಾಶ್ರಯತ್ ॥ ೭೫ ॥

ತತ್ರೋಷ್ಯ ಸುಚಿರಂ ಕಾಲಂ ಭೋಗಾನ್ ಭುಕ್ತ್ವಾ ಚ ಕಾಮತಃ ।
ಮರ್ತ್ಯಲೋಕಮನುಪ್ರಾಪ್ಯ ರಾಜನ್ಯತನಯೋಭವತ್ ॥ ೭೬ ॥

೭೨-೭೩. ಈ ರೀತಿ ಮನಶ್ಶುದ್ಧಿಯಿಂದ ಕೂಡಿ ಐದು ಪಿಂಡಗಳನ್ನು ಅವನು ಪ್ರದಾನಮಾಡಿದೊಡನೆಯೇ ಆ ಬ್ರಾಹ್ಮಣೋತ್ತಮರು ಪಿಶಾಚಜನ್ಮದಿಂದ ಬಿಡುಗಡೆ ಹೊಂದಿ ಬ್ರಹ್ಮಲೋಕಕ್ಕೆ ಹೋಗಿ ಸೇರಿದರು. ಆ ವಣಿಕ್ಪುತ್ರನೂ ಸಹ ಪಿಂಡದಾನ ದಿಂದ ಕೃತಕೃತ್ಯನಾಗಿ ತನ್ನ ಮನೆಗೆ ಬಂದನು. ಶ್ರವಣದ್ವಾದಶಿಯನ್ನೂ ಆಚರಿಸಿ ಮೃತಿಹೊಂದಿದನು.

೭೪-೭೫. ಅನಂತರ ಸುಕೃತಕ್ಕೆ ತಕ್ಕಂತೆ ಗಂಧರ್ವಲೋಕವನ್ನು ಹೊಂದಿ ಅಲ್ಲಿ ಇತರ ದುರ್ಲಭವಾದ ಭೋಗಗಳನ್ನು ಬಹುಕಾಲ ಅನುಭವಿಸಿ ಪುನಃ ಮನುಷ್ಯ ನಾಗಿ ಜನಿಸಿ ರಾಜನಂತೆ ವೈಭವದಿಂದ ಬದುಕಿದನು. ವರ್ಣಾಶ್ರಮಕ್ಕೆ ತಕ್ಕಂತೆ ಧರ್ಮಕರ್ಮಮಾರ್ಗದಲ್ಲಿದ್ದು ಶ್ರವಣದ್ವಾದಶಿಯ ಆಚರಣೆಯಲ್ಲಿದ್ದೇ ದೇಹವನ್ನು ತ್ಯಜಿಸಿ ಗುಹ್ಯಕಲೋಕವನ್ನು ಹೊಂದಿದನು.

೭೬-೭೭. ಆ ಗುಹ್ಯಕಲೋಕದಲ್ಲಿಯೂ ಬಹುಕಾಲ ಸ್ವೇಚ್ಛೆಯಿಂದ ಭೋಗ ಗಳನ್ನನುಭವಿಸಿ ಪುಣ್ಯಕ್ಷಯವಾದನಂತರ ಪುನಃ ಮನುಷ್ಯಲೋಕವನ್ನು ಹೊಂದಿ ಕ್ಷತ್ರಿಯ ಪುತ್ರನಾಗಿ ಜನಿಸಿದನು. ಅಲ್ಲಿಯೂ ಕ್ಷತ್ರಿಯ ವೃತ್ತಿಗೆ ತಕ್ಕಂತೆ ದಾನ

ತತ್ರಾಪಿ ಕ್ಷತ್ರವೃತ್ತಿಸ್ಥೋ ದಾನಭೋಗರತೋ ವಶೀ ।
ಗೋಗ್ರಹೇರಿಗಣಂ ಜಿತ್ವಾ ಕಾಲಧರ್ಮಮುಪೇಯಿವಾನ್ ।
ಶಕ್ರಲೋಕಮವಾಪ್ಯಾಥ ದೇವೈಸ್ಸರ್ವೈಸ್ಸುಪೂಜಿತಃ ॥ ೭೭ ॥

ಪುಣ್ಯಕ್ಷಯಾತ್ಪರಿಭ್ರಷ್ಟಃ ಶಾಕಲೇಽಸೌ ಭವದ್ದ್ವಿಜಃ ।
ತತೋ ವಿಕಟರೂಪೋಽಸೌ ಸರ್ವಶಾಸ್ತ್ರಸ್ಯ ಪಾರಗಃ ॥ ೭೮ ॥

ವಿವಾಹಯನ್ ದ್ವಿಜಸುತಾಂ ರೂಪೇಣಾನುಪಮಾಂ ದ್ವಿಜ ।
ಸಾಚ ಮೇನೆ ಚ ಭರ್ತಾರಂ ಸುಶೀಲಮಪಿ ಭಾಮಿನೀ ॥ ೭೯ ॥

ವಿರೂಪಮಿತಿ ಮನ್ವಾನಸ್ತತಃ ಸೋಽಭೂತ್ಸುದುಃಖಿತಃ ।
ತತೋ ನಿರ್ವೇದಸಂಯುಕ್ತೋ ಗತ್ವಾಶ್ರಮಪದಂ ಮಹತ್ ॥ ೮೦ ॥

ಇರಾವತ್ಯಾಸ್ತಟೆ ಶ್ರೀಮನ್ರೂಪಧಾರಿಣಮಾಸದತ್ ।
ತಮಾರಾಧ್ಯ ಜಗನ್ನಾಥಂ ನಕ್ಷತ್ರಪುರುಷೇಣ ಹಿ ॥ ೮೧ ॥

ಭೋಗಗಳಲ್ಲಿ ನಿರತನಾಗಿ ಜಿತೇಂದ್ರಿಯನಾಗಿಯೇ ಇದ್ದು ಗೋಗ್ರಹಣ ಪ್ರಸಂಗದಲ್ಲಿ (ಅಥವಾಗೋಗ್ರಹವೆಂಬ ಪ್ರದೇಶದಲ್ಲಿ) ಸ್ವಧರ್ಮಕ್ಕೆ ತಕ್ಕಂತೆ ಶತ್ರುಗಳನ್ನೂ ಜಯಿಸಿ ದೇಹವನ್ನು ಬಿಟ್ಟನು.

೭೮. ಅನಂತರ ಇಂದ್ರಲೋಕಕ್ಕೆ ಹೋಗಿ ದೇವತೆಗಳಿಂದಲೂ ಸತ್ಕರಿಸಲ್ಪಟ್ಟು ಸ್ವರ್ಗಭೋಗಗಳನ್ನೂ ಅನುಭವಿಸಿ ಪುಣ್ಯಕ್ಷಯವಾದನಂತರ ಭೂಲೋಕಕ್ಕೇ ಬಂದು ಶಾಕಲನಗರದಲ್ಲಿ ಬ್ರಾಹ್ಮಣನಾಗಿ ಹುಟ್ಟಿದನು. ಕುರೂಪಿಯಾಗಿದ್ದ ಆ ಬ್ರಾಹ್ಮಣನು ಸರ್ವಶಾಸ್ತ್ರಪಾರಂಗತನಾಗಿ ಅಸದೃಶರೂಪವುಳ್ಳ ಒಬ್ಬ ಬ್ರಾಹ್ಮಣಕನ್ಯಕೆಯನ್ನು ವಿವಾಹಮಾಡಿಕೊಂಡನು.

೭೯-೮೨. ರೂಪವತಿಯಾಗಿದ್ದ ಆ ಕನ್ಯೆಯು ಗುಣಶಾಲಿಯಾಗಿದ್ದರೂ ತನ್ನ ಪತಿಯನ್ನು ಕುರೂಪಿಯೆಂದು ತಿಳಿದು ಪಶ್ಚಾತ್ತಾಪಪಟ್ಟಳು. ಇದನ್ನು ತಿಳಿದ ಬ್ರಾಹ್ಮಣನೂ ದುಃಖಪಟ್ಟನು. ಅನಂತರ ಆ ಬ್ರಾಹ್ಮಣನು ಪತ್ನಿಯ ಅಪ್ರೀತಿಯಿಂದ ದುಃಖಿತನಾಗಿ ಇರಾವತಿಯ ದಡದಲ್ಲಿರುವ ಆಶ್ರಮವನ್ನು ಹೊಂದಿ ಅಲ್ಲಿ ರೂಪಧಾರಿ

ಸುರೂಪತಾಮವಾಪ್ಯಾಯಂ ತಸ್ಮಿನ್ನೇವ ಚ ಜನ್ಮನಿ ।
ತತಃ ಪ್ರಿಯೋಭೂದ್ಭಾರ್ಯಾಯಾ ಭೋಗವಾಂಶ್ಚಾಭವದ್ವಶೀ ॥ ೮೨ ॥

ಶ್ರವಣದ್ವಾದಶೀಭಕ್ತಃ ಪೂರ್ವಾಭ್ಯಾಸಾದಜಾಯತ ॥ ೮೩ ॥
ಏವಂ ಪುರಾಸೌ ದ್ವಿಜಪುಂಗವಸ್ತು
ಕುರೂಪರೂಪೋ ಭಗವತ್ಪ್ರಸಾದಾತ್ ।
ಅನಂಗರೂಪಪ್ರತಿಮೋ ಬಭೂವ
ಮೃತಶ್ಚ ರಾಜಾ ಸ ಪುರೂರವಾಭೂತ್ ॥ ೮೪ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ಪ್ರಹ್ಲಾದತೀರ್ಥ ಯಾತ್ರಾಯಾಂ ಪುರೂರವ ಉಪಾಖ್ಯಾನಂ ನಾಮ ನವಸಪ್ತತಿತಮೋಽಧ್ಯಾಯಃ.

ಯೆಂಬ ಜಗತ್ಪತಿಯನ್ನು ನಕ್ಷತ್ರಪುರುಷನೊಡನೆ ಆರಾಧಿಸಿ ಆ ಜನ್ಮದಲ್ಲೇ ಸುರೂಪವನ್ನು ಹೊಂದಿದನು. ಅನಂತರ ಸುರೂಪಿಯಾದ ಆ ಬ್ರಾಹ್ಮಣನು ಪತ್ನೀ ಪ್ರೀತಿಗೆ ಭಾಗಿಯಾಗಿ ಅವಳೊಡನೆ ಭೋಗವನ್ನು ಹೊಂದಿ ಜಿತೇಂದ್ರಿಯನಾಗಿಯೂ ಬದುಕಿದನು.

೮೩-೮೪. ಪೂರ್ವಜನ್ಮದ ಸಂಸ್ಕಾರಾಭ್ಯಾಸಗಳಿಂದ ಅವನು ಪುನಃ ಶ್ರವಣ ದ್ವಾದಶಿಯ ಆಚರಣದಲ್ಲಿ ನಿರತನಾದನು. ಈ ರೀತಿ ಬ್ರಾಹ್ಮಣಶ್ರೇಷ್ಠನಾಗಿ ಜನಿಸಿ ಕುರೂಪಿಯಾಗಿದ್ದರೂ ಅವನು ಭಗವದನುಗ್ರಹದಿಂದ ಪೂರ್ವಕಾಲದಲ್ಲಿ ಮನ್ಮಥ ಸದೃಶನಾಗಿಯೇ ಪರಿಣಮಿಸಿದನು. ಹಾಗೆಯೇ ಸ್ವಧರ್ಮದಲ್ಲಿದ್ದು ಮೃತನಾಗಿ ಪುರೂರವನೆಂಬ ರಾಜರ್ಷಿಯಾಗಿ ಜನಿಸಿದನು.

ಇಲ್ಲಿಗೆ ಶ್ರೀವಾಮನಪುರಾಣದ ವಾಮನಪ್ರಾದ ರ್ಭಾವದಲ್ಲಿ ಪ್ರಹ್ಲಾದ ತೀರ್ಥ ಯಾತ್ರೆಯ ಪುರೂರವೋಪಾಖ್ಯಾನವೆಂಬ ಎಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಹಿಂದಿನಿಂದ ಅನುಗತವಾಗಿ ಬಂದ ಪ್ರಹ್ಲಾದನ ತೀರ್ಥ ಯಾತ್ರಾ ಪ್ರಸಂಗದಲ್ಲಿ ಇರಾವತಿಯ ದಡದಲ್ಲಿ ನೆಲಸಿರುವ ಜಗತ್ಪತಿಯನ್ನು ಸೇವಿಸಿ ಪ್ರಹ್ಲಾದನು ಈಶ್ವರಸಮಾನವಾದ ರೂಪವನ್ನು ಹೊಂದಿದನೆಂದು ಪ್ರತಿಪಾದಿಸಿ ಕುಷ್ಠ ರೋಗದಿಂದ ಕೂಡಿದ ಭೃಗುವೂ ಸಹ ಈ ಜಗತ್ಪತಿಯನ್ನೇ ಸೇವಿಸಿ ಆರೋಗ್ಯ ಹೊಂದಿದನೆಂದೂ ಪ್ರತಿಪಾದಿಸಲಾಯಿತು. ಈ ಪ್ರಸಂಗದಲ್ಲಿ ನಾರದರು ಕುರೂಪಿ ಯಾಗಿದ್ದ ಪುರೂರವನೂ ವಿಷ್ಣುವಿನ ಆರಾಧನೆಯಿಂದ ಸುರೂಪವನ್ನು ಹೊಂದಿದ ನೆಂದು ನಾವು ಕೇಳಿದ್ದೇವೆ. ಅದರ ವೃತ್ತಾಂತವೇನು ಎಂದು ಪ್ರಶ್ನೆಮಾಡಲು ಪ್ರಾಸಂಗಿಕವಾದ ಈ ಪ್ರಶ್ನೆಗೆ ಉತ್ತರವಾಗಿ ಪುರೂರವನ ಉಪಾಖ್ಯಾನವು ಇಲ್ಲಿ ಹೇಳಲ್ಪಟ್ಟಿದೆ.

ಮದ್ರದೇಶದಲ್ಲಿ ಶಾಕಲವೆಂಬ ನಗರವಿದ್ದಿತು. ಅಲ್ಲಿ ಸಧರ್ಮನೆಂಬ ವೈಶ್ಯ ನೊಬ್ಬನು ಸ್ವಧರ್ಮನಿರತನಾಗಿ ಧನಾಢ್ಯನಾಗಿಯೂ ಭೋಗಿಯಾಗಿಯೂ ಶಾಸ್ತ್ರಜ್ಞ ನಾಗಿಯೂ ಇದ್ದನು. ಅವನು ಒಂದಾನೊಂದು ಕಾಲದಲ್ಲಿ ವಾಣಿಜ್ಯವೃತ್ತಿಯನ್ನು ಅನುಸರಿಸಿ ಸೌರಾಷ್ಟ್ರವೆಂಬ ದೇಶಕ್ಕೆ ಸಕಲ ಸಾಮಗ್ರಿಸಮೇತನಾಗಿ ಹೊರಟನು. ದಾರಿಯಲ್ಲಿ ಮರುಭೂಮಿಯಲ್ಲಿ ಹೋಗುತ್ತಿರುವಾಗ ರಾತ್ರಿಯಲ್ಲಿ ಕಳ್ಳರ ಆಕ್ರಮಣಕ್ಕೆ ಸಿಕ್ಕಿ ಸರ್ವಸ್ವವೂ ಅಪಹೃತವಾದುದರಿಂದ ದುಃಖದಿಂದ ಚಿತ್ತಭ್ರಮಣಹೊಂದಿ ಅಲ್ಲಲ್ಲಿ ಅಲೆದಾಡುತ್ತಾ ಅವನು ಒಂದು ಬನ್ನೀಮರದ ಬುಡವನ್ನು ಸೇರಿದನು. ಮಾರ್ಗಶ್ರಮದಿಂದ ಆಯಾಸಹೊಂದಿದ್ದ ಅವನು ಬೆಳಗ್ಗೆ ಅಲ್ಲಿ ನಿದ್ರಿಸಿ ಮಧ್ಯಾಹ್ನಕ್ಕೆ ಎಚ್ಚೆತ್ತನು. ಹಸಿವು ಬಾಯಾರಿಕೆಗಳಿಂದ ವ್ಯಾಕುಲನಾಗಿ ನೋಡು ತ್ತಿರುವಾಗ ಪಿಶಾಚಗಳ ಒಂದು ಗುಂಪು ಕಣ್ಣಿಗೆ ಗೋಚರಿಸಿತು. ಆ ಗುಂಪಿನಲ್ಲಿ ಮುಂದಾಳಾಗಿ ಬರುತ್ತಿರುವ ಕೆಲವು ಪಿಶಾಚಗಳೂ ಪಿಶಾಚಗಳನ್ನು ಏರಿಬರುತ್ತಿರುವ ಒಬ್ಬ ಅಧಿಪತಿಯೂ ಇದ್ದನು. ಅವರೂ ಆ ಬನ್ನೀಮರದ ಕೆಳಕ್ಕೆ ಬಂದರು. ಆ ಅಧಿಪತಿಯು ಅಲ್ಲಿ ಶ್ರಾಂತನಾಗಿ ಕುಳಿತಿದ್ದ ಸಧರ್ಮನನ್ನು ಸ್ವಾಗತದಿಂದ ಸತ್ಕರಿಸಿ ಕುಶಲಪ್ರಶ್ನೆ ನಡೆದನಂತರ ಇವನನ್ನು ವಿಚಾರಿಸಿದನು. ಇವನ ವೃತ್ತಾಂತವನ್ನೆಲ್ಲಾ ತಿಳಿದು ದುಃಖಿತನಾದ ಆ ಅಧಿಪತಿಯು ಬಹಳ ವಿಧವಾಗಿ ಇವನನ್ನು ಸಮಾಧಾನ ಪಡಿಸಿ ಬಂಧುಸ್ನೇಹದಿಂದ ಉಪಚರಿಸಲು ಪಿಶಾಚಗಳೊಡನೆ ಹೇಳುತ್ತಿರುವಾಗಲೇ ದಧ್ಯೋದನ ಮತ್ತು ಸಿಹಿನೀರಿನಿಂದ ತುಂಬಲ್ಪಟ್ಟ ಎರಡು ದೃಢವಾದ ಮೊಸ

ಪ್ರುತ್ಪಾತ್ರೆಗಳು ಎದುರಿಗೆ ಸಿದ್ಧವಾದುವು. ಆಗ ಅಧಿಪತಿಯು ಆ ನೀರಿನಿಂದ ನಿತ್ಯ ಕರ್ಮವನ್ನು ನಡೆಸಲು ಸಧರ್ಮನಿಗೆ ಹೇಳಿ ಅದಾದನಂತರ ದಧ್ಯೋದನವನ್ನು ಯಥಾತೃಪ್ತಿ ಕೊಟ್ಟು ಇತರ ಪಿಶಾಚಗಳಿಗೂ ಕೊಟ್ಟು ತಾನೂ ನಂತರ ಸ್ವೀಕರಿಸಿದನು. ಅನಂತರ ಪಾತ್ರೆಗಳೆರಡೂ ಅದೃಶ್ಯವಾದುವು. ಈ ಆಶ್ಚರ್ಯವನ್ನು ನೋಡಿ ಸಧರ್ಮನು ಇದಕ್ಕೆ ಕಾರಣವೇನೆಂದು ಆ ಅಧಿಪತಿಯನ್ನು ಕೇಳಲು ಅವನೂ ಸಹ ತನ್ನ ವೃತ್ತಾಂತವನ್ನು ಹೀಗೆ ಹೇಳಿದನು. ನಾನು ಶಾಕಲ ನಗರದಲ್ಲಿ ಒಬ್ಬ ಬ್ರಾಹ್ಮಣ ನಾಗಿದ್ದನು. ಧನವಿದ್ದರೂ ತ್ಯಾಗಭೋಗವಿಲ್ಲದೆ ಕೃಪಣನಾಗಿದ್ದೆನು. ಆಶೆಯಿಂದ ಪ್ರುಷ್ಟಾನ್ನವನ್ನು ಊಟಮಾಡಿದ್ದೇ ಆದರೆ ಆ ರಾತ್ರಿಯಲ್ಲಿ ದಂಡಧಾರಿಗಳಾದ ಭೃತ್ಯ ರಿಂದ ಪ್ರಹರಿಸಲ್ಪಟ್ಟು ಬೆಳಿಗ್ಗೆ ಮೈಯ್ಯೆಲ್ಲಾ ವ್ಯಾಪಿಸಿದ ಬೊಕ್ಕೆಗಳಿಂದ ದುಃಖ ಪಡುತ್ತಿದ್ದೆನು. ಹೇಣ ಹಿಂಡಿ ಕಾಯಿಪಲ್ಯ ಮೊದಲಾದವುಗಳಿಂದಲೇ ಪ್ರಾಣಧಾರಣೆ ಮಾಡಿಕೊಂಡಿದ್ದೆನು. ಹೀಗಿರುವಾಗ ಒಂದಾನೊಂದು ದಿನ ಶ್ರವಣದ್ವಾದಶಿಯು ಬಂದಿತು. ನಾನೂ ಆದಿನ ಉಪವಾಸವ್ರತದಿಂದಿದ್ದು ಪಕ್ಕದ ಮನೆಯ ಧನಿಕನೊಡನೆ ಇರಾವತೀ ನದಿಗೆ ಸ್ನಾನಕ್ಕೆ ಹೋದೆನು. ಅಲ್ಲಿ ಸ್ನಾನಮಾಡಿ ಶುದ್ಧಮನಸ್ಸಿನಿಂದ ದಧ್ಯೋದನ ಮತ್ತು ಸಿಹಿನೀರಿನಿಂದ ತುಂಬಿದ ಎರಡು ಹೊಸಮೃತ್ಪಾತ್ರೆಯನ್ನು ವಸ್ತ್ರಪಾದರಕ್ಷೆ ಮೊದಲಾದ ಸಾಮಗ್ರಿಗಳೊಡನೆ ಒಬ್ಬ ಬ್ರಾಹ್ಮಣೋತ್ತಮನಿಗೆ ದಾನ ಕೊಟ್ಟೆನು. ನನ್ನ ಜೀವನದಲ್ಲಿ ಅದೇ ನಾನು ಮಾಡಿದ ದಾನ. ಅನಂತರ ಮೃತನಾದ ನಾನು ಪಿಶಾಚಿಯಾಗಿ ಇಲ್ಲಿರುವೆನು. ನಾನು ದಾನಮಾಡಿದ ಫಲವಾಗಿ ಈ ಪಾತ್ರೆ ಗಳೆರಡೂ ಪ್ರತಿನಿತ್ಯವೂ ನಾನಿರುವ ಸ್ಥಲಕ್ಕೆ ಬರುವುವು. ಎಲ್ಲರಿಗೂ ದಾನಮಾಡಿ ನಾನು ಊಟಮಾಡಿದೊಡನೆ ಅಂತರ್ಧಾನ ಹೊಂದುವುವು. ನಾನು ದಾನಮಾಡಿದ ಫಲವಾಗಿ ಈಗಲೂ ದಾತೃವಾಗಿರುವೆನು. ಈ ಪಿಶಾಚಗಳೆಲ್ಲವೂ ದಾನಮಾಡದೇ ಹೋದುದರಿಂದ ನಾನು ಕೊಟ್ಟ ಅನ್ನದಿಂದ ಜೀವಿಸುತ್ತಿರುವುವು. ನಾನು ದಾನ ಮಾಡಿದ ಛತ್ರಿಯೇ ಈ ಮರುಭೂಮಿಯಲ್ಲೂ ಬನ್ನಿಯಮರವಾಗಿ ಹುಟ್ಟಿ ನೆರಳನ್ನು ಕೊಡುತ್ತಿದೆ. ಪಾದರಕ್ಷಾದಾನದಿಂದ ನಾನು ವಾಹನ ಸಹಿತನಾಗಿ ಸಂಚರಿಸುವ ಯೋಗ ಬಂದಿದೆ ಎಂದು ತನ್ನ ವೃತ್ತಾಂತವನ್ನು ಹೇಳಿದನು. ಇದರಿಂದ ಆಶ್ಚರ್ಯಪಟ್ಟು ಸಧರ್ಮನು ನನ್ನ ಮುಂದಿನ ಕರ್ತವ್ಯವನ್ನು ಸಾಧುವಾದ ನೀನು ಆಜ್ಞಾಪಿಸು ಎಂದು ಪ್ರಶ್ನೆಮಾಡಲು ಆ ಪಿಶಾಚಪತಿಯು ಗಯಾತೀರ್ಥದಲ್ಲಿ ಪಿಂಡದಾನಮಾಡಿ ನನ್ನ ಪಿಶಾಚಜನ್ಮವನ್ನು ಹೋಗಲಾಡಿಸಿ ನೀನು ಶ್ರೇಯಸ್ಸನ್ನು ಹೊಂದು ಮತ್ತು ಭಾದ್ರ ಪದ ಶುಕ್ಲಪಕ್ಷದಲ್ಲಿ ಬುಧವಾರದಿಂದಲೂ ಶ್ರವಣನಕ್ಷತ್ರದಿಂದಲೂ ಕೂಡಿದ ದ್ವಾದಶಿಯು ಬಹುಪುಣ್ಯಕರವಾದುದು. ಆ ವ್ರತವನ್ನು ನೀನು ಆಚರಿಸು ಎಂದು ಹೇಳಿ ಅಲ್ಲಿದ್ದ ಪಿಶಾಚಗಳ ಹೆಗಲಿನ ಮೇಲೆ ಆ ಸಧರ್ಮನನ್ನು ಕೂರಿಸಿ ಶೂರಸೇನ

ವೆಂಬ ರಮ್ಯವಾದ ದೇಶಕ್ಕೆ ಅವನನ್ನು ಕಳುಹಿಸಿಕೊಟ್ಟನು. ಆ ವಣಿಕ್ಪುತ್ರನು ತನ್ನ ವಾಣಿಜ್ಯವೃತ್ತಿಯಿಂದ ಅಲ್ಲಿ ಬಹುಧನವನ್ನು ಸಂಪಾದಿಸಿ ಗಯಾತೀರ್ಥಕ್ಕೆ ಹೋಗಿ ಅಲ್ಲಿ ಪಿಶಾಚಾಧಿಪತಿಗೂ ಅವನ ಅನುಯಾಯಿಗಳಿಗೂ ತನ್ನ ಜ್ಞಾತಿ ಮತ್ತು ಬಂಧುವರ್ಗಕ್ಕೂ ಪಿಂಡಪ್ರದಾನಮಾಡಿ ತಿಲರಹಿತನಾಗಿ ಆತ್ಮಶ್ರಾದ್ಧವನ್ನೂ ಮಾಡಿದನು. ಪಿಶಾಚಗಳೆಲ್ಲವೂ ಆ ಜನ್ಮದಿಂದ ನಿವೃತ್ತಿಹೊಂದಿ ಬ್ರಹ್ಮಲೋಕಕ್ಕೆ ಹೋಗಿ ಸೇರಿದವು. ಅನಂತರ ಸಧರ್ಮನು ತನ್ನ ಮನೆಗೆ ಹಿಂತಿರುಗಿ ಶ್ರವಣದ್ವಾದಶಿ ಆಚರಣೆಯಲ್ಲಿ ನಿರತನಾದನು. ಹೀಗೆಯೇ ಇದ್ದು ಮೃತಿಹೊಂದಿ ಗಂಧರ್ವನಾಗಿ ಆ ಲೋಕದ ಸುಖಗಳನ್ನು ಅನುಭವಿಸಿ ಪುಣ್ಯಕ್ಷಯವಾದನಂತರ ಪುನಃ ಮನುಷ್ಯ ಲೋಕದಲ್ಲಿ ಮುಖ್ಯಸ್ಥನಾಗಿ ಹುಟ್ಟಿ ಸ್ವಧರ್ಮದಿಂದಿದ್ದು ಆಗಲೂ ಶ್ರವಣದ್ವಾದಶಿಯ ಆಚರಣೆಯಿಂದ ಮೃತನಾಗಿ ಗುಹ್ಯಲೋಕವನ್ನು ಹೊಂದಿ ಅಲ್ಲಿ ಸುಖಿಯಾಗಿದ್ದು ನಂತರ ಪುನಃ ಮನುಷ್ಯಲೋಕದಲ್ಲಿ ರಾಜಪುತ್ರನಾಗಿ ಹುಟ್ಟಿ ಕ್ಷತ್ರಿಯೋಚಿತ ಧರ್ಮ ದಲ್ಲಿದ್ದು ಭೋಗಗಳನ್ನೂ ಅನುಭವಿಸಿ ಅದೇ ಶ್ರವಣದ್ವಾದಶಿಯ ಅನುಷ್ಠಾನದಿಂದಿದ್ದು ಮೃತನಾಗಿ ಆ ಶಾಕಲನಗರದಲ್ಲೇ ಬ್ರಾಹ್ಮಣನಾಗಿ ಪುನಃ ಹುಟ್ಟಿ ಶಾಸ್ತ್ರಪಾರಂಗತ ನಾಗಿದ್ದನು. ವಿರೂಪನಾಗಿದ್ದ ಆ ಬ್ರಾಹ್ಮಣನು ಸುರೂಪಿಣಿಯಾದ ಕನ್ಯಕೆಯನ್ನು ಮದುವೆಯಾಗಲು ಇವನ ಕುರೂಪದಿಂದ ಉದ್ವೇಗಹೊಂದಿದ ಆ ಪತ್ನಿಯು ಇವನನ್ನು ಪ್ರೀತಿಸಲಿಲ್ಲ. ಆದುದರಿಂದ ದುಃಖಿತನಾದ ಆ ಬ್ರಾಹ್ಮಣನು ಅದೇ ಇರಾವತಿಯ ದಡದಲ್ಲಿದ್ದ ರೂಪೇಶ್ವರನಲ್ಲಿ ತಪಸ್ಸುಮಾಡಿ ಸುರೂಪವನ್ನು ಹೊಂದಿ ತನ್ನ ಪತ್ನಿಗೆ ಪ್ರಿಯನಾಗಿದ್ದು ಸಂಸಾರಸುಖಗಳನ್ನನುಭವಿಸಿದನು. ಆ ಬ್ರಾಹ್ಮಣನೇ ಮೃತಿಹೊಂದಿದ ನಂತರ ಪುರೂರವನೆಂಬ ರಾಜರ್ಷಿಯಾಗಿ ಜನಿಸಿದನು ಎಂದು ಪುರೂರವಾಖ್ಯಾನವನ್ನು ಪ್ರತಿಪಾದಿಸಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಅಶೀತಿತಮೋಽಧ್ಯಾಯಃ

ನಾರದ ಉವಾಚ

ಪುರೂರವಾ ದ್ವಿಜಶ್ರೇಷ್ಠ ಯಥಾ ದೇವಂ ಶ್ರಿಯಃ ಪತಿಂ ।
ನಕ್ಷತ್ರಪುರುಷಾಖ್ಯೇನ ಆರಾಧಯತ ತದ್ವದ ॥ ೧ ॥

ಪುಲಸ್ತ್ಯ ಉವಾಚ

ಶ್ರೂಯತಾಂ ಕಥಯಿಷ್ಯಾಮಿ ನಕ್ಷತ್ರಪುರುಷವ್ರತಂ ।
ನಕ್ಷತ್ರಾಂಗಾನಿ ದೇವಸ್ಯ ಯಾನಿ ಯಾನೀಹ ನಾರದ ॥ ೨ ॥

ಮೂಲರ್ಕ್ಷಂ ಚರಣೌ ವಿಷ್ಣೋಃ ಜಂಘೇ ದ್ವೇ ರೋಹಿಣೀ ಸ್ಥಿತೇ ।
ಕಬಂಧಿನೀ ತಥಾಶ್ವಿನ್ಯೌ ಸಂಸ್ಥಿತೇ ರೂಪಧಾರಿಣಃ ॥ ೩ ॥

ಎಂಭತ್ತನೆಯ ಅಧ್ಯಾಯವು

೧-೩. ನಾರದರು ಪ್ರಶ್ನೆ ಮಾಡುತ್ತಾರೆ. ಬ್ರಾಹ್ಮಣೋತ್ತಮನೇ ಪುರೂರವನು ಶ್ರೀಪತಿಯಾದ ರೂಪೇಶ್ವರನನ್ನು ನಕ್ಷತ್ರಪುರುಷದೊಡನೆ ಹೇಗೆ ಆರಾಧಿಸಿದನೆಂಬುದನ್ನು ಹೇಳಬೇಕೇದು ಪ್ರಶ್ನೆಮಾಡಲು ಪುಲಸ್ತ್ಯರು ಹೇಳುತ್ತಾರೆ, ರೂಪಧಾರಿಯಾದ ಆ ದೇವನ ಯಾವ ಯಾವ ಅವಯವಗಳು ನಕ್ಷತ್ರಗಳಿಗೆ ಆಶ್ರಯವಾಗಿವೆ ಎಂಬುದನ್ನು ಹೇಳುತ್ತೇನೆ ಕೇಳು, ಇದರಿಂದ ಆ ನಕ್ಷತ್ರಪುರುಷವ್ರತವನ್ನು ಹೇಳಿದಂತಾಗುತ್ತದೆ. ಮೂಲಾನಕ್ಷತ್ರವು ರೂಪಧಾರಿಯಾದ ಆ ವಿಷ್ಣುವಿನ ಪಾದಗಳಲ್ಲಿಯೂ ರೋಹಿಣೀ ನಕ್ಷತ್ರವು ಮೊಣಕಾಲುಗಳಲ್ಲಿಯೂ ಅಶ್ವಿನಿಯು ಕತ್ತಿನಿಂನ ಕೆಳಭಾಗದ ದೇಹದಲ್ಲಿಯೂ ಆಶ್ರಯಿಸಿವೆ.

ಆಷಾಢೆ ಚ ತಥೈವ ಸ್ಫಿಗ್ಗುಹ್ಯಸ್ಥಂ ಫಾಲ್ಗುನೀದ್ವಯಂ ।
ಕಟಿಸ್ಥಾಃ ಕೃತ್ತಿಕಾಶ್ಚೈವ ವಾಸುದೇವಸ್ಯ ಸಂಸ್ಥಿತಾಃ ॥ ೪ ॥

ಊರುಸಂಸ್ಥಾ ಚಾನುರಾಧಾ ಧನಿಷ್ಠಾ ಪೃಷ್ಠಸಂಸ್ಥಿತಾ ।
ವಿಶಾಖಾ ಭುಜಯೋಃ ಹಸ್ತಃ ಕರದ್ವಯಮನುತ್ತಮಂ ॥ ೫ ॥

ಪುನರ್ವಸುರಥೋ ಗುಲ್ಫೌ ನಖೆ ಸಾರ್ಪಂ ತಥೋಚ್ಯತೆ ।
ಜ್ಯೇಷ್ಠಾ ಗ್ರೀವಾ ಸ್ಥಿತಾ ತಸ್ಯ ಶ್ರವಣಂ ಕರ್ಣಯೋಃ ಸ್ಥಿತಂ ॥ ೬ ॥

ಓಷ್ಠಸಂಸ್ಥಸ್ತಥಾ ಪುಷ್ಯಃ ಸ್ವಾತಿರ್ದಂತೇಷು ಕೀರ್ತಿತಾ ।
ಹನೌಪುನರ್ವಸುಶ್ಶ್ಲೋಕೋ ನಾಸಾ ಮೈತ್ರ ಮುದಾಹೃತಂ ॥ ೭ ॥

ಪ್ರಾಜಾಪತ್ಯಂ ಚ ನೇತ್ರಯುಗ್ಮೆ ರೂಪಧಾರಿಪ್ರತಿಷ್ಠಿತಂ ॥ ೮ ॥

ಶಿರೋರುಹಾಸ್ತಥೈವೈಂದ್ರಂ ನಕ್ಷತ್ರಾಂಗಮಿದಂ ಹರೇಃ ।
ವಿಧಾನಂ ಸಂಪ್ರವಕ್ಷ್ಯಾಮಿ ಯಥಾ ನ್ಯಾಯೇನ ನಾರದ ॥ ೯ ॥

ಸಂಪೂಜಿತೋ ಹರಿರ್ಧೀಮಾನ್ವಿದಧಾತಿ ಯಥೇಪ್ಸಿತಂ ।
ಚೈತ್ರಮಾಸೆ ಸಿತಾಷ್ಟಮ್ಯಾಂ ಯದಾ ಮೂಲಗತಃ ಶಶೀ ॥ ೧೦ ॥

೪-೭. ಆಷಾಢದ್ವಯವೂ ಕಟಿಯಮೇಲ್ಭಾಗವನ್ನು ಆಶ್ರಯಿಸಿವೆ. ಫಲ್ಗುನೀದ್ವಯವೂ (ಪುಬ್ಬ ಉತ್ತರಾ) ಗುಹ್ಯಪ್ರದೇಶವನ್ನು ಆಶ್ರಯಿಸಿವೆ. ಕೃತ್ತಿಕಾ ನಕ್ಷತ್ರಗಳು ಕಟಿಭಾಗವನ್ನೂ ಆಶ್ರಯಿಸಿವೆ. ಅನೂರಾಧಾ ನಕ್ಷತ್ರವು ಊರು ಭಾಗವನ್ನೂ ಧನಿಷ್ಠೆಯು ಪೃಷ್ಠಭಾಗವನ್ನೂ ಆಶ್ರಯಿಸಿವೆ. ವಿಶಾಖೆಯು ಭುಜಗಳನ್ನೂ ಹಸ್ತವು ಕರಗಳನ್ನೂ ಆಶ್ರಯಿಸಿವೆ. ಪುನರ್ವಸುವು ಪಾದಗ್ರಂಥಿಗಳನ್ನೂ ಆಶ್ಲೇಷೆಯು ಉಗುರುಗಳನ್ನೂ ಆಶ್ರಯಿಸಿವೆ. ಜ್ಯೇಷ್ಠೆಯು ಕುತ್ತಿಗೆಯನ್ನೂ ಶ್ರವಣವು ಕರ್ಣವನ್ನೂ ಪುಷ್ಯವು ಮೇಲುತುಟಿಯನ್ನೂ ಸ್ವಾತಿಯು ಹಲ್ಲುಗಳನ್ನೂ ಆಶ್ರಯಿಸಿವೆ. ಪುನರ್ವಸುವು ಕಪೋಲದ ಮೇಲ್ಭಾಗವನ್ನೂ ಮಖೆಯು ಮೂಗನ್ನೂ ಆಶ್ರಯಿಸಿವೆ.

೮-೧೧. ರೋಹಿಣೀ ಮತ್ತು ಅಭಿಜಿತ್ತು ಇವು ನೇತ್ರಯುಗ್ಮವನ್ನೂ ಆರ್ದ್ರಾ ನಕ್ಷತ್ರವು ಕೇಶಗಳನ್ನೂ ಆಶ್ರಯಿಸಿವೆ. ಈ ರೀತಿ ನಕ್ಷತ್ರಪುರುಷರು ಹರಿಯ ಅಂಗಗಳಲ್ಲಿ ನೆಲಸಿರುವರು. ಇನ್ನು ಪೂಜಾವಿಧಾನವನ್ನು ಹೇಳುತ್ತೇನೆ. ಈ ಪ್ರಕಾರ ಪೂಜಿಸಲ್ಪಟ್ಟ ಹರಿಯು ಸಕಲ ವಿಧವಾದ ಇಷ್ಟಾರ್ಥಗಳನ್ನೂ ಕೊಡುವನು. ಚೈತ್ರ ಮಾಸದಲ್ಲಿ ಶುಕ್ಲಾಷ್ಟಮಿಯಲ್ಲಿ ಚಂದ್ರನು ಮೂಲಾನಕ್ಷತ್ರದಲ್ಲಿ ಸೇರಿರುವಾಗ ಹರಿಯ

ತದಾ ತು ಭಗವತ್ಪಾದೌ ಪೂಜಯೇಚ್ಚ ವಿಧಾನತಃ ।
ನಕ್ಷತ್ರಪುರುಷೇ ದದ್ಯಾದ್ವಿಪ್ರೇಂದ್ರಾಯ ಚ ಭೋಜನಂ ॥ ೧೧ ॥

ಜಾನುನೀ ರೋಹಿಣೀಯೋಗೇ ಪೂಜಯೇದಥ ಭಕ್ತಿತಃ ।
ದೋಹದೇ ವೈ ಹವಿಷ್ಯಾನ್ನಂ ಪೂರ್ವಂ ಚ ದ್ವಿಜಭೋಜನಂ ॥ ೧೨ ॥

ಅಷಾಢಾಭ್ಯಾಂ ತಥಾ ದ್ವಾಭ್ಯಾಂ ಸ್ಫಿಗ್ರೂಪಂ ಪೂಜಯೇದ್ಬುಧಃ ।
ಸಲಿಲಂ ಶಿಶಿರಂ ತತ್ರ ದೋಹದೇ ಚ ಪ್ರಕೀರ್ತಿತಂ ॥ ೧೩ ॥

ಫಾಲ್ಗುನೀದ್ವಿತಯೇ ಗುಹ್ಯಂ ಪೂಜನೀಯಂ ವಿಚಕ್ಷಣೈಃ ।
ದೋಹದಂ ಚ ಪಯೋಗವ್ಯಂ ದೇಯಂ ಚ ದ್ವಿಜಭೋಜನಂ ॥ ೧೪ ॥

ಕೃತ್ತಿಕಾಸು ಕಟಿಃ ಪೂಜ್ಯಾ ಸೋಪವಾಸೈರ್ಜಿತೇಂದ್ರಿಯೈಃ ।
ದೋಹದಂ ಚ ವಿಭೋರ್ದೇಯಂ ಸುಗಂಧಂ ಕುಸುಮೋದಕಂ ॥ ೧೫ ॥

ಪಾದಗಳನ್ನು ಯಥಾವಿಧಿಯಾಗಿ ಪೂಜಿಸಬೇಕು. ನಕ್ಷತ್ರ ಪುರುಷನನ್ನುದ್ದೇಶಿಸಿ ಬ್ರಾಹ್ಮಣಭೋಜನವನ್ನು ಮಾಡಿಸಬೇಕು.

೧೨-೧೪. ರೋಹಿಣಿಯಲ್ಲಿ ಚಂದ್ರನಿರುವಾಗ ಮಂಡಿಯಪ್ರದೇಶವನ್ನು ಭಕ್ತಿಯಿಂದ ಪೂಜಿಸಬೇಕು, ವಿಶೇಷತೃಪ್ತಿಗಾಗಿ ಆಜ್ಯಾನ್ನವನ್ನೂ ಸಮರ್ಪಿಸಬೇಕು, ಮೊದಲಿನಲ್ಲಿ ಬ್ರಾಹ್ಮಣಭೋಜನವು ನಡೆಯಬೇಕು, ಹಾಗೆಯೇ ಆಷಾಢದ್ವಯದಲ್ಲಿ ಚಂದ್ರನಿರುವಾಗ ಕಟಿಯ ಮೇಲ್ಭಾಗವನ್ನು ಪೂಜಿಸಬೇಕು, ಶೀತವಾಗಿರುವ ಶುದ್ಧ ಜಲವೇ ವಿಶೇಷತೃಪ್ತಿಗಾಗಿ ಸಮರ್ಪಿಸಲ್ಪಡತಕ್ಕದ್ದು. ಪುಬ್ಬ ಉತ್ತರೆಗಳಲ್ಲಿ ಚಂದ್ರನಿರುವಾಗ ಗುಹ್ಯಪ್ರದೇಶವನ್ನು ಪೂಜಿಸಬೇಕು, ವಿಶೇಷತೃಪ್ತಿಗಾಗಿ ಹಸುವಿನ ಹಾಲನ್ನು ಸಮರ್ಪಿಸಿ ಬ್ರಾಹ್ಮಣಭೋಜನವನ್ನು ಮಾಡಿಸಬೇಕು.

೧೫-೧೮. ಕೃತ್ತಿಕಾನಕ್ಷತ್ರದಲ್ಲಿ ಚಂದ್ರನಿರುವಾಗ ಉಪವಾಸವ್ರತದಿಂದಿದ್ದು ಕಟಿಯನ್ನು ಪೂಜಿಸಬೇಕು, ಪುಷ್ಪಗಳಿಂದ ಸುಗಂಧಿಯಾಗಿರುವ ಜಲವನ್ನು ವಿಶೇಷ

*ಪಾರ್ಶ್ವೌ ಭಾದ್ರಪದಾಯುಗ್ಮೇ ಪೂಜಯಿತ್ವಾ ವಿಧಾನತಃ ।
ಗುಡಂ ಶಾಲೇಯುಕಂ ದದ್ಯಾದ್ದೋಹದಂ ದೇವಪ್ರೀತಿದಂ ॥ ೧೬ ॥

ದ್ವೆ ಕುಕ್ಷೀ ರೇವತೀಯೋಗೆ ದೋಹದೆ ಮುದ್ಗಮೋದಕಃ ।
*ಅನೂರಾಧಾಸು ವಕ್ಷೋಥ ಷಷ್ಟಿಕಾನ್ನಂ ಚ ದೋಹದೆ ॥ ೧೭ ॥

ಧನಿಷ್ಠಾಯಾಂ ತಥಾ ಪೂಜ್ಯಃ ಶಾಲಿಭಕ್ತಂ ಚ ದೋಹದೆ ।
ಭುಜಯುಗ್ಮಂ ವಿಶಾಖಾಸು ದೋಹದೆ ಪರಮೌದನಂ ॥ ೧೮ ॥

ಹಸ್ತೆ ಹಸ್ತೌ ತಥಾ ಪೂಜ್ಯೌ ಯಾವಕಂ ದೋಹದೆ ಸ್ಮೃತಂ ।
ಪುನರ್ವಸ್ವಂಗುಲೀಯುಗ್ಮಂ ಪಟೋಲಸ್ತತ್ರ ದೋಹದೆ ॥ ೧೯ ॥

ನಖಾಶ್ಲೇಷಾಸು ಸಂಪೂಜ್ಯಾ ದೋಹದೆ ತಿತ್ತಿರಾಮಿಷಂ ।
ಜ್ಯೇಷ್ಠಾಯಾಂ ಪೂಜಯೇದ್ಗ್ರೀವಾಂ ದೋಹದೆ ತಿಲಮೋದಕಃ ॥ ೨೦ ॥

ಪ್ರೀತಿಗಾಗಿ ಅರ್ಪಿಸಬೇಕು. ಭಾದ್ರಯುಗ್ಮದಲ್ಲಿ ಚಂದ್ರನಿರುವಾಗ ಪಾರ್ಶ್ವಭಾಗವನ್ನು ಪೂಜಿಸಿ ಗುಡಮಿಶ್ರವಾದ ಅಕ್ಕಿಯ ಅನ್ನವನ್ನು ವಿಶೇಷಪ್ರೀತಿಗಾಗಿ ಸಮರ್ಪಿಸಬೇಕು. ರೇವತಿಯ ಸಂಬಂಧವು ಆ ಚಂದ್ರನಿಗಿರುವಾಗ ಕುಕ್ಷಿಪ್ರದೇಶವನ್ನು ಪೂಜಿಸಬೇಕು, ಹೆಸರಿನಿಂದಮಾಡಿದ ಮೋದಕವನ್ನು ವಿಶೇಷಪ್ರೀತಿಗಾಗಿ ಅರ್ಪಿಸಬೇಕು. ಅನೂರಾಧಾ ಯೋಗವಿರುವಾಗ ವಕ್ಷಃ (ಎದೆ) ಪ್ರದೇಶವನ್ನು ಪೂಜಿಸಬೇಕು, ಅರವತ್ತು ದಿನದಲ್ಲಿ ಬೆಳೆಯುವ ಭತ್ತದ ಅನ್ನವನ್ನು ವಿಶೇಷಪ್ರೀತಿಗಾಗಿ ಸಮರ್ಪಿಸಬೇಕು. ಧನಿಷ್ಠಾ ನಕ್ಷತ್ರದಲ್ಲಿ ಚಂದ್ರನಿರುವಾಗ ಪೃಷ್ಠಭಾಗವನ್ನು ಪೂಜಿಸಬೇಕು, ಶಾಲ್ಯನ್ನವನ್ನು ನಿವೇದಿಸಬೇಕು. ವಿಶಾಖಾನಕ್ಷತ್ರದಲ್ಲಿ ಭುಜಯುಗ್ಮವನ್ನು ಪೂಜಿಸಬೇಕು, ಮೃಷ್ಟಾನ್ನವನ್ನು ನಿವೇದಿಸಬೇಕು.

೧೯-೨೨. ಹಸ್ತನಕ್ಷತ್ರದಲ್ಲಿ ಹಸ್ತಗಳನ್ನು ಪೂಜಿಸಿ ಅರಗಿನ ರಸವನ್ನು ಸಮರ್ಪಿಸಬೇಕು. ಪುನರ್ವಸುನಕ್ಷತ್ರದಲ್ಲಿ ಅಂಗುಲಿಗಳನ್ನು ಪೂಜಿಸಬೇಕು, ವಿಶೇಷ ಪ್ರೀತಿಗಾಗಿ ಪಡವಲಕಾಯನ್ನು ಅರ್ಪಿಸಬೇಕು. ಆಶ್ಲೇಷೆಯಲ್ಲಿ ನಖಗಳನ್ನು ಪೂಜಿಸಿ ತಿತ್ತಿರಿಯಮಾಂಸವನ್ನು ವಿಶೇಷಪ್ರೀತಿಗಾಗಿ ಸಮರ್ಪಿಸಬೇಕು. ಜ್ಯೇಷ್ಠಾನಕ್ಷತ್ರದಲ್ಲಿ

---

* ನಕ್ಷತ್ರಾಂಗನಿರೂಪಣಕಾಲದಲ್ಲಿ ಹಿಂದೆ ಇದನ್ನು ವಿವರಿಸಿಲ್ಲ. ಇಲ್ಲಿ ಮಾತ್ರ ಹೇಳಲಾಗಿದೆ.

* ಹಿಂದೆ ಅನೂರಾಧೆಗೆ ಊರುಪ್ರದೇಶವನ್ನು ಹೇಳಲಾಗಿದೆ. ಇಲ್ಲಿ ವ್ಯತ್ಯಸ್ತವಾಗಿ ನಿರೂಪಿಸಲಾಗಿದೆ.

ಶ್ರವಣೇ ಶ್ರವಣೌ ಪೂಜ್ಯೌ ದಧಿಭಕ್ತಂ ಚ ದೋಹದೆ ।
ಪುಷ್ಯೇ ಮುಖಂ ತು ಸಂಪೂಜ್ಯಂ ದೋಹದೆ ಘೃತಪಾಯಸಂ ॥ ೨೧ ॥

ಸ್ವಾತಿಯೋಗೇ ಚ ದಶನಾ ದೋಹದೆ ತಿಲಶಷ್ಕುಲೀ ।
ದಾತವ್ಯಂ ಕೇಶವಪ್ರೀತ್ಯೈ ಬ್ರಾಹ್ಮಣಸ್ಯ ಚ ಭೋಜನಂ ॥ ೨೨ ॥

ಹನೂ ಶತಭಿಷಾಯೋಗೆ ಪೂಜಯೇಚ್ಚ ಪ್ರಯತ್ನತಃ ।
ಪ್ರಿಯಂಗುಭಕ್ತಂ ದೇಯಂ ಚ ದೋಹದೆ ಮಧುಘಾತಿನಿ ॥ ೨೩ ॥

ಮಘಾಸು ನಾಸಿಕಾ ಪೂಜ್ಯಾ ಮಧುರಾಜ್ಯಂ ಚ ದೋಹದೆ ।
ಮೃಗೋತ್ತಮಾಂಗೆ ನಯನೆ ಮೃಗಮಾಂಸಂ ಚ ದೋಹದೆ ॥ ೨೪ ॥

ಚಿತ್ರಾಯೋಗೆ ಲಲಾಟಂ ಚ ದೋಹದೆ ಚಾರುಭೋಜನಂ ।
ಭರಣೀಷು ಶಿರಃ ಪೂಜ್ಯಂ ಚಾರುಭಕ್ಷ್ಯಂ ಚ ದೋಹದೆ ॥ ೨೫ ॥

ಸಂಪೂಜನೀಯಾ ವಿದ್ವದ್ಭಿಃ ಆರ್ದ್ರಾಯೋಗೇ ಶಿರೋರುಹಾಃ ।
ವಿಪ್ರಾಂಶ್ಚ ಭೋಜಯೇದ್ಭಕ್ತ್ಯಾ ದೋಹದೆ ಚ ಗುಡಾರ್ದ್ರಕಂ ॥ ೨೬ ॥

ಕುತ್ತಿಗೆಯನ್ನು ಪೂಜಿಸಬೇಕು, ಎಳ್ಳಿನ ಮೋದಕವನ್ನು ಸಮರ್ಪಿಸಬೇಕು. ಶ್ರವಣ ನಕ್ಷತ್ರದಲ್ಲಿ ಕಿವಿಗಳನ್ನು ಪೂಜಿಸಿ ದಧ್ಯೋದನವನ್ನು ಅರ್ಪಿಸಬೇಕು. ಪುಷ್ಯನಕ್ಷತ್ರದಲ್ಲಿ ಮುಖವನ್ನು ಪೂಜಿಸಿ ತುಪ್ಪದಿಂದ ಕೂಡಿದ ಪಾಯಸವನ್ನರ್ಪಿಸಬೇಕು. ಸ್ವಾತಿಯ ಸಂಬಂಧವಿರುವಾಗ ಹಲ್ಲುಗಳನ್ನು ಪೂಜಿಸಿ ಎಳ್ಳಿನ ಚಕ್ಕುಲಿಯನ್ನು ಅರ್ಪಿಸಬೇಕು. ಕೇಶವನ ಪ್ರೀತಿಗಾಗಿ ಬ್ರಾಹ್ಮಣಭೋಜನವನ್ನೂ ಮಾಡಿಸಬೇಕು.

೨೩-೨೬. ಶತಭಿಷಾಯೋಗವಿರುವಾಗ ಕಪೋಲದ ಮೇಲ್ಭಾಗವನ್ನು ಪೂಜಿಸಿ ತಡುಗುಣಿ ಕಾಳಿನಿಂದ ಸಂಸ್ಕೃತವಾದ ಅನ್ನವನ್ನು ಅರ್ಪಿಸಬೇಕು. ಮಖಾನಕ್ಷತ್ರದಲ್ಲಿ ನಾಸಿಕೆಯನ್ನು (ಮೂಗು) ಪೂಜಿಸಬೇಕು. ಮಧುರವಾದ ತುಪ್ಪವೇ ನೈವೇದ್ಯ. ಮೃಗಶಿರಾನಕ್ಷತ್ರದಲ್ಲಿ ನೇತ್ರಗಳನ್ನು ಪೂಜಿಸಿ ಮೃಗಮಾಂಸವನ್ನು ಅರ್ಪಿಸಬೇಕು. ಚಿತ್ತಾನಕ್ಷತ್ರದಲ್ಲಿ ಹಣೆಯನ್ನು ಪೂಜಿಸಿ ಸ್ವಾದುಭೋಜನವನ್ನರ್ಪಿಸಬೇಕು. ಭರಣೀ ನಕ್ಷತ್ರದಲ್ಲಿ ಶಿರಸ್ಸನ್ನು ಪೂಜಿಸಿ ಸ್ವಾದುವಾದ ಭಕ್ಷ್ಯಗಳನ್ನರ್ಪಿಸಬೇಕು. ಆರ್ದ್ರಾ ನಕ್ಷತ್ರದಲ್ಲಿ ಪಂಡಿತರಾದವರು ಆ ಹರಿಯ ಕೇಶಗಳನ್ನು ಪೂಜಿಸಬೇಕು. ಬೆಲ್ಲದಿಂದ ಕೂಡಿದ ಹಶಿಶುಂಠಿಯನ್ನು ಅರ್ಪಿಸಿ ಭಕ್ತಿಯಿಂದ ಬ್ರಾಹ್ಮಣಭೋಜನವನ್ನು ಮಾಡಿಸಬೇಕು.

ನಕ್ಷತ್ರಯೋಗೇಷ್ವೇತೇಷು ಸಂಪೂಜ್ಯ ಜಗತಃ ಪತಿಂ ।
ಪೂಜಿತೆ ದಕ್ಷಿಣಾಂ ದದ್ಯಾದ್ಬ್ರಾಹ್ಮಣೆ ವೇದಪಾರಗೆ ॥ ೨೭ ॥

ಛತ್ರೋಪಾನದ್ವಸ್ತ್ರಯುಗಂ ಸಪ್ತಧಾನ್ಯಂ ಸ ಕಾಂಚನಂ ।
ಘೃತಪಾತ್ರಂ ಚ ಗಾಂದೋಗ್ಧ್ರೀಂ ಬ್ರಾಹ್ಮಣೇಭ್ಯೋ ನಿವೇದಯೇತ್ ॥ ೨೮ ॥

ಪ್ರತಿನಕ್ಷತ್ರಯೋಗೇನ ಪೂಜನೀಯಾ ದ್ವಿಜಾತಯಃ ।
ನಕ್ಷತ್ರಜ್ಞಾಯ ವಿಪ್ರಾಯ ಪೃಥಗ್ದದ್ಯಾಚ್ಚ ದಕ್ಷಿಣಾಂ ॥ ೨೯ ॥

ನಕ್ಷತ್ರಪುರುಷಾಖ್ಯಂ ಹಿ ವ್ರತಾನಾಮುತ್ತಮಂ ವ್ರತಂ ।
ಪೂರ್ವಂ ಕೃತಂ ಹಿ ಭೃಗುಣಾ ಸರ್ವಪಾತಕನಾಶನಂ ॥ ೩೦ ॥

ಅಂಗೋಪಾಂಗಾನಿ ದೇವರ್ಷೆ ಪೂಜನೀಯಾನಿ ವೈ ಪ್ರಭೋಃ ।
ಸುರೂಪಾಣ್ಯಭಿಜಾಯಂತೆ ಪ್ರತ್ಯಂಗಾಂಗಾನಿ ಚೈವಹಿ ॥ ೩೧ ॥

ಸಪ್ತಜನ್ಮಕೃತಂ ಪಾಪಂ ಕಲಿಸಂಗಾಗತಂ ಚ ಯತ್ ।
ಪಿತೃಮಾತೃಸಮುತ್ಥಂ ಚ ತತ್ಸರ್ವಂ ಹಂತಿ ಕೇಶವಃ ॥ ೩೨ ॥

೨೭-೩೦. ಈ ನಕ್ಷತ್ರಯೋಗಗಳಲ್ಲಿ ಜಗತ್ಪತಿಯಾದ ವಿಷ್ಣುವನ್ನು ಪೂಜಿಸಿ ಆ ಕಾಲದಲ್ಲಿ ವೇದಪಾರಂಗತನಾದ ಬ್ರಾಹ್ಮಣನಿಗೆ ದಕ್ಷಿಣೆಯನ್ನೂ ಕೊಡಬೇಕು. ಛತ್ರಿ, ಪಾದುಕೆ, ವಸ್ತ್ರಯುಗ್ಮ ಏಳು ವಿಧವಾದ ಧಾನ್ಯಗಳು ಮತ್ತು ಸುವರ್ಣ ಘೃತ ಪಾತ್ರೆ ಕರೆಯುವ ಹಸು ಇವುಗಳನ್ನೂ ಬ್ರಾಹ್ಮಣರಿಗೆ ದಾನಮಾಡಬೇಕು. ಪ್ರತಿ ನಕ್ಷತ್ರಯೋಗದಲ್ಲೂ ಬೇರೆ ಬೇರೆ ಬ್ರಾಹ್ಮಣಪೂಜೆಯನ್ನು ಮಾಡಬೇಕು. ನಕ್ಷತ್ರಜ್ಞನಾದ ಬ್ರಾಹ್ಮಣನಿಗೆ ಬೇರೆ ದಕ್ಷಿಣೆಯನ್ನೂ ಕೊಡಬೇಕು. ಇದೇ ನಕ್ಷತ್ರಪುರುಷವೆಂಬ ಉತ್ತಮವಾದ ವ್ರತ. ಸರ್ವಪಾಪನಾಶಕವಾದ ಈ ವ್ರತವನ್ನು ಪೂರ್ವದಲ್ಲಿ ಭೃಗುವು ಆಚರಿಸಿದನು.

೩೧-೩೪. ಆ ಪ್ರಭುವಿನ ಅಂಗೋಪಾಂಗಗಳನ್ನು ಇಲ್ಲಿ ಹೇಳುವ ವಿಧಾನಕ್ಕೆ ತಕ್ಕಂತೆ ಪೂಜಿಸಿದಲ್ಲಿ ಸುರೂಪವುಳ್ಳ ಅಂಗೋಪಾಂಗಗಳು ಉಂಟಾಗುತ್ತವೆ. ಸಪ್ತ ಜನ್ಮಗಳಿಂದಲೂ ಕಲಿಯ ಸಂಬಂಧದಿಂದಲೂ ಮಾತಾಪಿತೃಗಳ ಅಪರಾಧದಿಂದಲೂ ಉಂಟಾದ ಎಲ್ಲಾ ಪಾಪಗಳನ್ನೂ ಕೇಶವನು ನಾಶಮಾಡುತ್ತಾನೆ. ಸಕಲ ವಿಧವಾದ

ಸರ್ವಾಣಿ ಭದ್ರಾಣ್ಯಾಪ್ನೋತಿ ಶರೀರಾರೋಗ್ಯಮುತ್ತಮಂ ।
ಅನಂತಾಂ ಮನಸಃ ಪ್ರೀತಿಂ ರೂಪಂ ಚಾತೀವ ಶೋಭನಂ ॥ ೩೩ ॥

ವಾಙ್ಮಾಧುರ್ಯಂ ತಥಾ ಕಾಂತಿಂ ಯಚ್ಚಾನ್ಯದಭಿವಾಂಛಿತಂ ।
ದದಾತಿ ನಕ್ಷತ್ರಪುಮಾನ್ಪೂಜಿತಸ್ತು ಜನಾರ್ದನಃ ॥ ೩೪ ॥

ಉಪೋಷ್ಯ ಸಮ್ಯಗೇತೇಷು ಕ್ರಮೇಣರ್ಕ್ಷೇಷು ನಾರದ ।
ಅರುಂಧತೀ ಮಹಾಭಾಗಾ ಖ್ಯಾತಿಮಗ್ರ್ಯಾಂ ಜಗಾಮ ಹ ॥ ೩೫ ॥

*ಅದಿತಿಸ್ತನಯಾರ್ಥಾಯ ನಕ್ಷತ್ರಾಂಗಂ ಜನಾರ್ದನಂ ।
ಪೂಜಯಿತ್ವಾ ತು ಗೋವಿಂದಂ ರೈವತೇ ಪುತ್ರಮಾಪ್ತವಾನ್ ॥ ೩೬ ॥

ರಂಭಾ ರೂಪಂ ತಥಾ ಲೇಭೆ ವಾಙ್ಮಾಧುರ್ಯಂ ತಿಲೋತ್ತಮಾ ।
ಕಾಂತಿಂ ಶಶಿವದಗ್ರ್ಯಾಂ ಚ ರಾಜ್ಯಂ ರಾಜಾ ಪುರೂರವಾಃ ॥ ೩೭ ॥

ಮಂಗಳವೂ ಉಂಟಾಗುತ್ತದೆ. ಉತ್ತಮವಾದ ದೇಹಾರೋಗ್ಯವೂ ಮನಃಪ್ರೀತಿಯೂ ಸುರೂಪವೂ ಅವನಿಗೆ ಉಂಟಾಗುತ್ತದೆ. ಹೀಗೆನಕ್ಷತ್ರಪುರುಷ ರೂಪನಾಗಿ ಪೂಜಿಸಲ್ಪಟ್ಟ ಆ ಜಗತ್ಪತಿಯು ವಾಙ್ಮಾಧುರ್ಯವನ್ನೂ ದೇಹಕಾಂತಿಯನ್ನೂ ಅಭಿಮತವಾದ ಇತರ ಫಲಗಳನ್ನೂ ಕೊಡುವನು.

೩೫-೩೭. ಈ ನಕ್ಷತ್ರಗಳಲ್ಲಿ ಕ್ರಮವಾಗಿ ಉಪವಾಸವನ್ನೂ ಮಾಡಿ ಪೂಜ್ಯಳಾದ ಅರುಂಧತಿಯು ಪ್ರಖ್ಯಾತಿಪಡೆದಳು. ಅದಿತಿಯೂ ಸಹ ನಕ್ಷತ್ರಾಂಗನಾದ ಈ ಜನಾರ್ದನನ್ನೇ ಆರಾಧಿಸಿ ರೈವತದಲ್ಲಿ ಸುರೂಪನಾದ ಪುತ್ರನನ್ನು ಪಡೆದಳು. ಈ ವ್ರತದಿಂದಲೇ ರಂಭೆಯು ರೂಪವನ್ನೂ ತಿಲೋತ್ತಮೆಯು ವಾಙ್ಮಾಧುರ್ಯವನ್ನೂ ಹೊಂದಿದರು. ಪುರೂರವನೂ ಸಹ ಚಂದ್ರನಂತೆ ರಮ್ಯವಾದ ಕಾಂತಿಯನ್ನೂ ರಾಜ್ಯವನ್ನೂ ಹೊಂದಿದನು.

---

*ಇಲ್ಲಿ ಆಪ್ತವಾನ್ ಎಂಬ ಪುಲ್ಲಿಂಗಪ್ರಯೋಗವು ಆರ್ಷವಾಗಿಯೇ ಸಾಧುವಾಗಬೇಕು. ಅದಿತಿಯೆಂಬ ಬೇರೆ ಪುರುಷನು ಪ್ರಮಾಣಸಿದ್ಧನಾಗಿದ್ದಲ್ಲಿ ಬಾಧಕವಿಲ್ಲ.

ಏವಂ ವಿಧಾನತೋ ಬ್ರಹ್ಮನ್ ನಕ್ಷತ್ರಾಂಗೋ ಜನಾರ್ದನಃ ।
ಪೂಜಿತೋ ರೂಪಧಾರೀ ಯೈಃ ತೈಃ ಪ್ರಾಪ್ತಾ ತು ಸ್ವಕಾಮಿತಾ ॥ ೩೮ ॥

ಏವಂ ಪವಿತ್ರಂ ಚ ಶುಭಪ್ರದಾಯಿ
ಯಶಸ್ಯಮಾರೋಗ್ಯಕರಂ ತು ಪುಂಸಾಂ ।
ನಕ್ಷತ್ರಪುಂಸಃ ಪರಮಂ ವಿಧಾನಂ
ಶ್ರುಣುಷ್ವ ಪುಣ್ಯಾಮಿಹ ತೀರ್ಥಯಾತ್ರಾಂ ॥ ೩೯ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ಪ್ರಹ್ಲಾದ
ತೀರ್ಥಯಾತ್ರಾಯಾಂ ನಕ್ಷತ್ರಪುರುಷೋ
ನಾಮಾಶೀತಿತಮೋಽಧ್ಯಾಯಃ

೩೮-೩೯. ಈ ವಿಧಾನದಿಂದ ರೂಪಧಾರಿಯಾದ ಜನಾರ್ದನನನ್ನು ನಕ್ಷತ್ರ ಪುರುಷನನ್ನಾಗಿ ಭಾವಿಸಿ ಯಾರು ಪೂಜಿಸಿದರೋ ಅವರೆಲ್ಲರೂ ತಮ್ಮ ಇಷ್ಟಾರ್ಥವನ್ನು ಹೊಂದಿದ್ದಾರೆ. ಈರೀತಿ ಪವಿತ್ರವಾಗಿಯೂ ಪುರುಷರಿಗೆ ಶುಭ, ಆರೋಗ್ಯ. ಯಶಸ್ಸು ನ್ನುಂತಾದುವನ್ನುಂಟುಮಾಡುವದಾಗಿಯೂ ಇರುವ ನಕ್ಷತ್ರಪುರುಷ ವಿಧಾನವನ್ನು ಪ್ರಹ್ಲಾದನ ಪುಣ್ಯಕರವಾದ ಈ ತೀರ್ಥಯಾತ್ರಾಪ್ರಸಂಗದಲ್ಲಿ ನೀನು ಕೇಳಿದ್ದಾಯಿತು.

ಇಲ್ಲಿಗೆ ಶ್ರೀ ವಾಮನಪುರಾಣದ ವಾಮನಪ್ರಾದುರ್ಭಾವದಲ್ಲಿ ಪ್ರಹ್ಲಾದತೀರ್ಥ
ಯಾತ್ರೆಯಲ್ಲಿ ನಕ್ಷತ್ರಪುರುಷನೆಂಬ ಎಂಭತ್ತನೆಯ
ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ರೂಪಧಾರಿಯಾದ ವಿಷ್ಣುವನ್ನಾರಾಧಿಸಿ ಕುರೂಪಿ ಬ್ರಾಹ್ಮಣ ನಾಗಿದ್ದ ಪುರೂರವನು ಹೇಗೆ ಸುರೂಪನಾದನೆಂಬ ನಾರದರ ಉಪಪ್ರಶ್ನೆಗೆ ಸಮಾಧಾನ ವಾಗಿ ಮಹಾವಿಷ್ಣುವನ್ನು ನಕ್ಷತ್ರಪುರುಷರೂಪದಿಂದ ಆರಾಧಿಸಬೇಕೆಂದೂ ನಕ್ಷತ್ರ ಗಳಿಗೆ ಆಶ್ರಯವಾಗಿರುವ ಪರಮಾತ್ಮನ ಅಂಗಗಳನ್ನು ಉಪಪಾದಿಸಿ ಆ ನಕ್ಷತ್ರಗಳು ಚಂದ್ರಯೋಗವನ್ನು ಹೊಂದಿರುವ ಕಾಲಗಳಲ್ಲಿ ಅವಕ್ಕೆ ತಕ್ಕ ಆಶ್ರಯವಾದ ಪರಮಾತ್ಮನ ಅಂಗಗಳನ್ನು ಪೂಜಿಸಬೇಕೆಂದೂ ಹೇಳಿ ಆ ಪೂಜಾವಿಧಾನವನ್ನು ಫಲಶ್ರುತಿಯೊಡನೆ ಉಪಪಾದಿಸಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಏಕಾಶೀತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಇರಾವತೀಮನುಪ್ರಾಪ್ಯ ಪುಣ್ಯಾಂ ತಾಮೃಷಿಕನ್ಯಕಾಂ ।
ಸ್ನಾತ್ವಾ ಸಂಪೂಜಯಾಮಾಸ ಚೈತ್ರಾಷ್ಟಮ್ಯಾಂ ಜನಾರ್ದನಂ ॥ ೧ ॥

ನಕ್ಷತ್ರಪುರುಷಂ ಕೃತ್ವಾ ವ್ರತಂ ಪುಣ್ಯಪ್ರದಂ ಶುಚಿ ।
ಜಗಾಮ ಸ ಕುರುಕ್ಷೇತ್ರಂ ಪ್ರಹ್ಲಾದೋ ದಾನವೇಶ್ವರಃ ॥ ೨ ॥

ಐರಾವತೇನ ಮಂತ್ರೇಣ ಚಕ್ರತೀರ್ಥಂ ಸುದರ್ಶನಂ ।
ಉಪಾಮಂತ್ರ್ಯ ತತಃ ಸಸ್ನೌ ವೇದೋಕ್ತವಿಧಿನಾ ಮುನೇ ॥ ೩ ॥

ಉಪೋಷ್ಯ ಕ್ಷಣದಾಂ ಭಕ್ತ್ಯಾ ಪೂಜಯಿತ್ವಾ ಕುರುಧ್ವಜಂ ।
ಕೃತಶೌಚಸ್ತು ತಂ ದ್ರಷ್ಟುಂ ಯಯೌ ಪುರುಷಕೇಸರೀ ॥ ೪ ॥

ಎಂಭತ್ತೊಂದನೆಯ ಅಧ್ಯಾಯವು

೧-೪. ಪುಲಸ್ತ್ಯರು ಪ್ರಾಸಂಗಿಕ ವಿಷಯವನ್ನುಪಸಂಹರಿಸಿ ಪ್ರಹ್ಲಾದನ ತೀರ್ಥಯಾತ್ರೆಯನ್ನು ಮುಂದುವರಿಸುತ್ತಾರೆ. ಅನಂತರ ಪ್ರಹ್ಲಾದನು ಋಷಿಕನ್ಯೆಯಾಗಿಯೂ ಪುಣ್ಯಪ್ರದಳಾಗಿಯೂ ಇರುವ ಆ ಇರಾವತಿಯನ್ನು ಹೊಂದಿ ಅಲ್ಲಿ ಸ್ನಾನಮಾಡಿ ನಕ್ಷತ್ರಪುರುಷವ್ರತಾಚರಣಪುರಸ್ಸರವಾಗಿ ಚೈತ್ರಾಷ್ಟಮಿಯಲ್ಲಿ ಜನಾರ್ದನನನ್ನು ಆರಾಧಿಸಿ ಕೃತಕೃತ್ಯನಾಗಿ ಅಲ್ಲಿಂದ ಕುರುಕ್ಷೇತ್ರಕ್ಕೆ ತೆರಳಿದನು. ಅಲ್ಲಿ ಐರಾವತ ಮಂತ್ರದಿಂದ ರಮ್ಯವಾದ ಚಕ್ರತೀರ್ಥವನ್ನು ಆಮಂತ್ರಿಸಿ ಯಥಾವಿಧಿಯಾಗಿ ಸ್ನಾನ ಮಾಡಿ ಆ ರಾತ್ರಿ ಉಪವಾಸನಿಯಮದಿಂದಿದ್ದು ಅಲ್ಲಿ ನೆಲಸಿದ್ದ ಕುರುಧ್ವಜನನ್ನು ದರ್ಶನಮಾಡಿ ಭಕ್ತಿಯಿಂದ ಪೂಜಿಸಿ ಪರಿಶುದ್ಧನಾಗಿ ಮುಂದೆ ಹೊರಟನು.

ಸ್ನಾತ್ವಾ ತು ದೇವಿಕಾಯಾಂ ತು ನೃಸಿಹ್ಮಂ ಪ್ರತಿಪೂಜ್ಯ ಚ ।
ಉಪೋಷ್ಯ ರಜನೀಮೇಕಾಂ ಗೋಕರ್ಣಂ ದಾನವೋ ಯಯೌ ॥ ೫ ॥

ತಸ್ಮಿನ್ ಸ್ನಾತ್ವಾಥ ಪ್ರಾಚೀನೆ ಪೂಜ್ಯೇಶಂ ವಿಶ್ವಕಾರಕಂ ।
ಪ್ರಾಚೀನೆಚಾಪರೆ ದೈತ್ಯೋ ದ್ರಷ್ಟುಂ ಕಾಮೇಶ್ವರಂ ಯಯೌ ॥ ೬ ॥

ತತ್ರ ಸ್ನಾತ್ವಾ ಚ ದೃಷ್ಟ್ವಾ ಚ ಪೂಜಯಿತ್ವಾ ಚ ಶಂಕರಂ ।
ದ್ರಷ್ಟುಂ ಯಯೌ ಚ ಪ್ರಹ್ಲಾದಃ ಪುಂಡರೀಕಂ ಮಹಾಂಭಸಿ ॥ ೭ ॥

ಮಹಾಂಭಸಿ ತತಃ ಸ್ನಾತ್ವಾ ಸಂತರ್ಪ್ಯ ಪಿತೃದೇವತಾಃ ।
ಪುಂಡರೀಕಂ ಚ ಸಂಪೂಜ್ಯ ಉಪೋಷ್ಯ ದಿವಸತ್ರಯಂ ॥ ೮ ॥

ವಿಶಾಖಯೂಪೆ ತದನು ದೃಷ್ಟ್ವಾ ದೇವಂ ತಥಾऽಜಿತಂ ।
ಸ್ನಾತ್ವಾ ತಥಾ ಕೃಷ್ಣತೀರ್ಥೆ ತ್ರಿರಾತ್ರಂ ನ್ಯವಸದ್ಭುವಿ ॥ ೯ ॥

ತತೋ ಹಂಸಪದೆ ಹಂಸಂ ದೃಷ್ಟ್ವಾ ಸಂಪೂಜ್ಯ ಚೇಶ್ವರಂ ।
ಜಗಾಮಾಸೌ ಪಯೋಷ್ಣ್ಯಾಂ ತು ಅಖಂಡಂ ದ್ರಷ್ಟುಮಚ್ಯುತಂ ॥ ೧೦ ॥

೫-೮. ಅನಂತರ ದೇವಿಕಾ ನದಿಯಲ್ಲಿ ಸ್ನಾನಮಾಡಿ ಅಲ್ಲಿ ನೃಸಿಂಹನನ್ನು ಪೂಜಿಸಿ ಒಂದುರಾತ್ರಿ ಉಪವಾಸವಿದ್ದು ಅಲ್ಲಿಂದ ಗೋಕರ್ಣಕ್ಕೆ ಹೊರಟನು. ಅಲ್ಲಿ ಪ್ರಾಚೀನಗೋಕರ್ಣದಲ್ಲಿ ಸ್ನಾನಮಾಡಿ ಪೂರ್ವಪಶ್ಚಿಮ ಗೋಕರ್ಣಗಳಲ್ಲಿಯೂ ವಿಶ್ವ ಪತಿಯಾದ ಈಶ್ವರನನ್ನು ಪೂಜಿಸಿ ಕಾಮೇಶ್ವರನನ್ನು ಸೇವಿಸಲು ಹೊರಟನು. ಅಲ್ಲಿಯೂ ಸ್ನಾನಮಾಡಿ ಶಂಕರನನ್ನು ಸೇವಿಸಿ ಪೂಜಿಸಿ ಮಹಾಂಭಸ್ತೀರ್ಥದಲ್ಲಿರುವ ಪುಂಡರೀಕನನ್ನು ಸೇವಿಸಲು ಹೊರಟನು. ಅನಂತರ ಮಹಾಮ್ಭಸ್ತೀರ್ಥದಲ್ಲೂ ಸ್ನಾನಮಾಡಿ ಪಿತೃದೇವತೆಗಳನ್ನೂ ತರ್ಪಣದಿಂದ ತೃಪ್ತಿಪಡಿಸಿ ಪುಂಡರೀಕನನ್ನು ಪೂಜಿಸಿ ಅಲ್ಲಿಯೇ ಮೂರುದಿವಸ ಉಪವಾಸವಿದ್ದನು.

೯-೧೧. ವಿಶಾಖಯೂಪಕ್ಷೇತ್ರದಲ್ಲಿ ಪ್ರಭುವಾದ ಅಜಿತಮೂರ್ತಿಯನ್ನು ಸೇವಿಸಿ ಕೃಷ್ಣತೀರ್ಥದಲ್ಲಿ ಸ್ನಾನಮಾಡಿ ಅಲ್ಲಿಯೇ ಮೂರುದಿವಸ ವಾಸವಾಗಿದ್ದನು. ಅನಂತರ ಹಂಸಪದಕ್ಷೇತ್ರದಲ್ಲಿ ಹಂಸಮೂರ್ತಿಯನ್ನು ದರ್ಶನಮಾಡಿ ಈಶ್ವರನನ್ನೂ ಸೇವಿಸಿ ಪಯೋಷ್ಣಿಯಲ್ಲಿರುವ ಅಖಂಡಾಚ್ಯುತನನ್ನು ಸೇವಿಸಲು ಹೊರಟನು. ಅಲ್ಲಿ

ಸ್ನಾತ್ವಾ ಪಯೋಷ್ಣೀಸಲಿಲೆ ಪೂಜ್ಯಾಖಂಡಂ ಜಗತ್ಪತಿಂ ।
ದ್ರಷ್ಟುಂ ಜಗಾಮ ಮತಿಮಾನ್ವಿತಸ್ತಾಯಾಂ ಕುಮಾರಿಲಂ ॥ ೧೧ ॥

ತತ್ರ ಸ್ನಾತ್ವಾರ್ಚ್ಯ ದೇವೇಶಂ ವಾಲಖಿಲ್ಯೈರ್ಮರೀಚಿಭಿಃ ।
ಆರಾಧ್ಯಮಾನೋಽಪ್ಯಯುತಂ ಹೃತಂ ಪಾಪಪ್ರಣಾಶನಂ ॥ ೧೨ ॥

ಯತ್ರ ಸಾ ಸುರಭೀ ದೇವೀ ಸ್ವಸುತಾಂ ಕಪಿಲಾಂ ಶುಭಾಂ ।
ದೇವಪ್ರಿಯಾರ್ಥಮುಸೃಜದ್ಧಿತಾರ್ಥಂ ಜಗತಸ್ತಥಾ ॥ ೧೩ ॥

ತತ್ರ ದೇವಹ್ರದೆ ಸ್ನಾತ್ವಾ ಶಂಭುಂ ಸಂಪೂಜ್ಯ ಭಕ್ತಿತಃ ।
ವಿಧಿವಚ್ಚ ವಿಧಿಂ ಪ್ರಾಪ್ಯ ಮಣಿಮಂತಂ ತತೋ ಯಯೌ ॥ ೧೪ ॥

ತತ್ರ ತೀರ್ಥವರೆ ಸ್ನಾತ್ವಾ ಪ್ರಾಜಾಪತ್ಯೆ ಮಹಾಮತಿಃ ।
ದದರ್ಶ ಶಂಭುಂ ಬ್ರಹ್ಮಾಣಂ ದೇವೇಶಂ ಚ ಪ್ರಜಾಪತಿಂ ॥ ೧೫ ॥

ವಿಧಾನತಸ್ತು ತಾನ್‌ದೇವಾನ್ಪೂಜಯಿತ್ವಾ ತಪೋಧನ ।
ಷಡ್ರಾತ್ರಂ ತತ್ರ ಚ ಸ್ಥಿತ್ವಾ ಜಗಾಮ ಮಧುನಂದಿನೀಂ ॥ ೧೬ ॥

ಪಯೋಷ್ಣೀ ತೀರ್ಥದಲ್ಲಿ ಸ್ನಾನಮಾಡಿ ಅಖಂಡಾಚ್ಯುತನನ್ನು ಸೇವಿಸಿ ವಿತಸ್ತೆಯಲ್ಲಿ ಕುಮಾರಿಲನ ದರ್ಶನಕ್ಕಾಗಿ ಹೊರಟನು

೧೨-೧೪. ಆ ವಿತಸ್ತೆಯಲ್ಲಿ ಸ್ನಾನಮಾಡಿ ವಾಲಖಿಲ್ಯರಿಂದಲೂ ಮರೀಚಿಗಳಿಂದಲೂ ಪೂಜಿಸಲ್ಪಡುತ್ತಿರುವ ಪಾಪನಾಶಕನಾದ ದೇವೇಶನನ್ನು ಪೂಜಿಸಿದನು. ಯಾವ ಕ್ಷೇತ್ರದಲ್ಲಿ ಕಾಮಧೇನುವು ಪೂರ್ವದಲ್ಲಿ ದೇವತೆಗಳ ಸಂತೋಷಕ್ಕಾಗಿಯೂ ಜಗತ್ತಿನ ಹಿತಕ್ಕಾಗಿಯೂ ಕಪಿಲೆಯೆಂಬ ಮಗಳನ್ನು ಸೃಷ್ಟಿಸಿತೋ ಅಂತಹ ದೇವಹ್ರದದಲ್ಲಿ ಸ್ನಾನಮಾಡಿ ಶಂಭುವನ್ನು ಭಕ್ತಿಯಿಂದ ಪೂಜಿಸಿ ಯಥಾವಿಧಿಯಾಗಿ ಅಲ್ಲಿನ ಕಾರ್ಯವನ್ನು ನಡೆಸಿ ಅಲ್ಲಿಂದ ಮಣಿಮಂತವೆಂಬ ಕ್ಷೇತ್ರಕ್ಕೆ ಹೊರಟನು.

೧೫-೧೬. ಅಲ್ಲಿ ಬ್ರಹ್ಮತೀರ್ಥದಲ್ಲಿ ಸ್ನಾನಮಾಡಿ ಶಂಭುವನ್ನೂ ದೇವೇಶನಾದ ಬ್ರಹ್ಮನನ್ನೂ ಸೇವಿಸಿದನು. ಅನಂತರ ಯಥಾವಿಧಿಯಾಗಿ ಆ ದೇವತೆಗಳನ್ನು ಪೂಜಿಸಿ ಆರು ರಾತ್ರಿ ಅಲ್ಲಿ ವಾಸಮಾಡಿ ಅಲ್ಲಿಂದ ಮಧುನಂದಿನಿಗೆ ಹೊರಟನು.

ಮಧುಸಲಿಲೆ ಸ್ನಾತ್ವಾ ಚ ದೇವಂ ಚಕ್ರಧರಂ ಹರಂ ।
ಶೂಲಬಾಹುಂ ಚ ಗೋವಿಂದಂ ದದರ್ಶ ದನುಪುಂಗವಃ ॥ ೧೭ ॥

ನಾರದ ಉವಾಚ

ಕಿಮರ್ಥಂ ಭಗವಾನ್ ಶಂಭುಃ ದಧಾರಾಥ ಸುದರ್ಶನಂ ।
ಶೂಲಂ ತಥಾ ವಾಸುದೇವೋ ಮಮೈತದ್ಬ್ರೂಹಿ ಪೃಚ್ಛತಃ ॥ ೧೮ ॥

ಪುಲಸ್ತ್ಯ ಉವಾಚ

ಶ್ರೂಯತಾಂ ಕಥಯಿಷ್ಯಾಮಿ ಕಥಾಮೇತಾಂ ಪುರಾತನೀಂ ।
ಕಥಯಾಮಾಸ ತಾಂ ವಿಷ್ಣುಃ ಭವಿಷ್ಯಾಮ್ಯವನೌ ಸುರಾಃ ॥ ೧೯ ॥

ಜಲೋದ್ಭವೋ ನಾಮ ಮಹಾಸುರೇಂದ್ರೋ
ಘೋರಂ ಸ ತಪ್ತ್ವಾ ತಪ ಉಗ್ರವೀರ್ಯಃ ।
ಆರಾಧಯಾಮಾಸ ವಿರಂಚಿಮಾರಾ
ತ್ಸತಸ್ಸತುಷ್ಟೋ ವರದೋ ಬಭೂವ ॥ ೨೦ ॥

ಮಧುನಂದಿನಿಯತೀರ್ಥದಲ್ಲಿ ಸ್ನಾನಮಾಡಿ ಅಲ್ಲಿ ನೆಲಸಿದ್ದ ಚಕ್ರಧಾರಿಯಾದ ಹರನನ್ನೂ ಶೂಲಧಾರಿಯಾದ ವಿಷ್ಣುವನ್ನೂ ದರ್ಶನಮಾಡಿದನು.

೧೮-೧೯. ಈ ಮಧ್ಯದಲ್ಲಿ ನಾರದರು ಪ್ರಾಸಂಗಿಕವಾಗಿ ಪೂಜ್ಯನಾದ ಶಂಭುವು ಸುದರ್ಶನವನ್ನು ಏತಕ್ಕೆ ಧರಿಸಿದನು, ವಾಸುದೇವನೂ ಸಹ ಶೂಲಾಯುಧವನ್ನೇಕೆ ಧರಿಸಿದನೆಂದು ಪ್ರಶ್ನೆಮಾಡಲು ಪುಲಸ್ತ್ಯರು ಹೇಳುತ್ತಾರೆ:—ಪುರಾತನವಾದ ಈ ಕಥೆಯನ್ನು ಹೇಳುತ್ತೇನೆ ಕೇಳು. ಪೂರ್ವದಲ್ಲಿ ವಿಷ್ಣುವು ದೇವತೆಗಳನ್ನು ಕುರಿತು ಎಲೈ ಸುರರೇ, ಪುನಃ ನಾನು ಭೂಮಿಯಲ್ಲಿ ಅವತರಿಸುವೆನೆಂದು ಹೇಳಿ ಈ ಕಥೆಯನ್ನೂ ಸಹ ತಾನೇ ಹೇಳಿದನು.

೨೦-೨೨. ಜಲೋದ್ಭವನೆಂಬ ಮಹಾಸುರನು ಬಹಳ ಪರಾಕ್ರಮಶಾಲಿಯಾಗಿದ್ದು ಘೋರವಾದ ತಪಸ್ಸನ್ನು ಮಾಡಿ ಬ್ರಹ್ಮನನ್ನು ಮೆಚ್ಚಿಸಿದನು. ಬ್ರಹ್ಮನೂ ಸಂತುಷ್ಟನಾಗಿ ಅವನಿಗೆ ದೇವಾಸುರರಿಂದಲೂ ತನ್ನ ಶಸ್ತ್ರಗಳಿಂದಲೂ ಅಲಂಘ್ಯರಾದ

ದೇವಾಸುರಾಣಾಮುಜಯೋ ಮಹಾಹವೇ
ನಿಜ್ಯೈಶ್ಚ ಶಸ್ತ್ರೈರಮರ್ತ್ಯೈರವಧ್ಯಃ ।
ಅನನ್ಯಲಂಘ್ಯೈರ್ನತು ಬ್ರಹ್ಮಣಃ ಪುರಾ
ನಯಾತಿ ಶಾಪೈಃ ಶಮಮೇಷ ಶತ್ರುಃ ॥ ೨೧ ॥

ಏವಂ ಪ್ರಭಾವೋ ದನುಪುಂಗವೋಽಸೌ
ದೇವಾನ್ಮಹರ್ಷೀನ್ನೃಪತೀನ್ಸಮುಗ್ರಾನ್ ।
ಪ್ರಬಾಧಮಾನೋ ವಿಚಚಾರ ಭೂಮ್ಯಾಂ
ಸರ್ವಾಃ ಕ್ರಿಯಾಃ ಪ್ರಾಕ್ಷಿಪದುಗ್ರಮೂರ್ತಿಃ ॥ ೨೨ ॥

ತತೋಽಮರಾ ಭೂಮಿತಟೇ ನಿಷಣ್ಣಾ
ಜಗ್ಮುಃ ಶರಣ್ಯಂ ಹರಿಮೀಶಿತಾರಂ ।
ತೈಶ್ಚಾಪಿ ಸಾರ್ಧಂ ಭಗವಾನ್ ಜಗಾಮ
ಹಿಮಾಲಯಂ ಯತ್ರ ಹರಸ್ತ್ರಿನೇತ್ರಃ ॥ ೨೩ ॥

ಸಂಮಂತ್ರ್ಯ ದೇವರ್ಷಿಹಿತಂ ಚ ಕಾರ್ಯಂ
ಮತಿಂ ಚ ಕೃತ್ವಾ ನಿಧನಾಯ ಶತ್ರೋಃ ।
ನಿರಾಯುಧೌ ತಾವಪಿ ಪರ್ಯಟಂತೌ
ದೇವಾಧಿಪೌ ಚಕ್ರತುರುಗ್ರಕರ್ಮ ॥ ೨೪ ॥

ದೇವತೆಗಳಿಂದಲೂ ಅವಧ್ಯನಾಗಿರುವಂತೆ ವರವನ್ನು ಕೊಟ್ಟನು. ಈರೀತಿ ಅಜೇಯನಾಗಿದ್ದ ಈ ಶತ್ರುವು ಪೂರ್ವದಲ್ಲಿ ಬ್ರಹ್ಮನ ಶಾಪದಿಂದಲೂ ಶಾಂತಿಯನ್ನು ಹೊಂದಲಿಲ್ಲ. ಈರೀತಿ ಪ್ರಭಾವಶಾಲಿಯಾದ ಆ ದಾನವೋತ್ತಮನು ದೇವತೆಗಳನ್ನೂ ಮಹರ್ಷಿಗಳನ್ನೂ ಎಲ್ಲಾ ರಾಜರುಗಳನ್ನೂ ಬಾಧಿಸುತ್ತಾ ಭೂಮಿಯಲ್ಲಿ ಸಂಚರಿಸಿ ಭಯಂಕರ ರೂಪದಿಂದ ಸತ್ಕರ್ಮಗಳನ್ನೆಲ್ಲಾ ನಾಶಪಡಿಸಲಾರಂಭಿಸಿದನು.

೨೩-೨೫. ಆಗ ದೇವತೆಗಳು ನಿರಾಶ್ರಯರಾಗಿ ಭೂಮಿಯಲ್ಲಿ ನಿಂತು ಸರ್ವರಕ್ಷಕನಾದ ಹರಿಯಲ್ಲಿ ಶರಣಾಗತರಾದರು. ಆಗ ಹರಿಯೂ ಆ ದೇವತೆಗಳೊಡನೆ ಹರನು ವಾಸವಾಗಿರುವ ಹಿಮಾಚಲಕ್ಕೆ ಹೋದನು. ಅಲ್ಲಿ ದೇವತೆಗಳಿಗೂ ಋಷಿಗಳಿಗೂ ಯಾವ ರೀತಿ ಹಿತವನ್ನು ಮಾಡಬೇಕೆಂಬುದನ್ನು ಹರನೊಡನೆ ಆಲೋಚಿಸಿ ಶತ್ರುಸಂಹಾರವನ್ನು ಮಾಡಲೇಬೇಕೆಂದು ನಿಶ್ಚೈಸಿ ನಿರಾಯುಧರಾಗಿಯೇ ಅಲ್ಲಲ್ಲಿ

ತತಸ್ತ್ವಸೌ ದಾನವೋ ವಿಷ್ಣುಶರ್ವೌ
ಸಮಾಯಾತೌ ಹಂತುಕಾಮೌ ಸುರೇಶೌ ।
ಮತ್ವಾ ಜೇಯೌ ಶತ್ರುಭಿರ್ಘೋರ ರೂಪೈ
ರ್ಭಯಾತ್ತೋಯೇ ನಿಮ್ನಗಾಯಾಂ ವಿವೇಶ ॥ ೨೫ ॥

ಜ್ಞಾತ್ವಾ ಪ್ರವಿಷ್ಟಂ ತ್ರಿದಿವೇಂದ್ರಶತ್ರುಂ
ನದೀಂ ವಿಶಾಲಾಂ ದ್ವಿಜಮತ್ಸ್ಯಪೂರ್ಣಾಂ ।
ತೀರಂ ಸಮಾಶ್ರಿತ್ಯ ಸ್ಥಿತೌ ಹಿ ದೇವೌ
ಪ್ರಚ್ಛನ್ನಮೂರ್ತೀ ಸಹಸಾ ಬಭೂವತುಃ ॥ ೨೬ ॥

ದಿವಂ ಸಮೀಕ್ಷನ್ ಸಹಸಾ ಕಾತರಾಕ್ಷೋ
ದುರ್ಗಂ ಹಿಮಾದ್ರಿಂ ಸಹಸಾ ವಿವೇಶ ।
ಮಹೀಧ್ರಶೃಂಗೋಪರಿ ವಿಷ್ಣುಶಂಭೂ
ಬಂಭ್ರಮ್ಯಮಾಣಂ ಸ್ವರಿಪುಂ ಚ ಮತ್ವಾ ॥ ೨೭ ॥

ವೇಗಾದುಭೌ ದುದ್ರುವತುಃ ಸಶಸ್ತ್ರೌ
ವಿಷ್ಣುಸ್ತ್ರಿಶೂಲೀ ಗಿರಿಶಶ್ಚ ಚಕ್ರೀ ।

ಸಂಚರಿಸಿ ಶತ್ರುವನ್ನು ಹುಡುಕಲಾರಂಭಿಸಿದರು. ಅನಂತರ ಆ ಜಲೋದ್ಭವನು ಸುರಾಧಿಪರಾದ ವಿಷ್ಣುಶಂಕರರಿಬ್ಬರೂ ನನ್ನನ್ನು ಕೊಲ್ಲಲು ಬರುತ್ತಿದ್ದಾರೆ. ಇವರು ಅಜೇಯರು ಎಂದು ತಿಳಿದು ಭಯದಿಂದ ನೀರಿನಲ್ಲಿ ಪ್ರವೇಶಿಸಿದನು.

೨೬-೨೮. ದೇವಶತ್ರುವಾದ ಆ ದಾನವನು ಪಕ್ಷಿಮತ್ಸ್ಯಗಳಿಂದ ಪೂರ್ಣವಾದ ವಿಶಾಲವಾದ ನದಿಯನ್ನು ಪ್ರವೇಶಿಸಿರುವನೆಂದು ತಿಳಿದು ಹರಿಶಂಕರರಿಬ್ಬರೂ ನದಿಯ ತೀರವನ್ನಾಶ್ರಯಿಸಿ ಗೂಢವಾದ ರೂಪದಿಂದ ನಿಂತರು. ಆಗ ಭಯದಿಂದ ಆಕಾಶದಲ್ಲಿ ಕಣ್ಣುಕಣ್ಣು ಬಿಡುತ್ತಾ ಆ ದಾನವನು ಪ್ರಾಣರಕ್ಷಣೆಗಾಗಿ ತ್ವರೆಯಿಂದ ದುರ್ಗರೂಪ ವಾದ ಹಿಮವತ್ಪರ್ವತವನ್ನು ಹೊಕ್ಕನು. ಹರಿಶಂಕರರೂ ಸಹ ಆ ಪರ್ವತದ ಶಿಖರದಮೇಲೆ ಶತ್ರುವು ಸುಳಿದಾಡುತ್ತಿರುವನೆಂದೂ ತಿಳಿದು ಸಶಸ್ತ್ರರಾಗಿ ವಿಷ್ಣುವು ಶೂಲಧಾರಿಯಾಗಿಯೂ ಹರನು ಚಕ್ರಧಾರಿಯಾಗಿಯೂ ವೇಗದಿಂದ ಆ ಗಿರಿಶಿಖರಕ್ಕೆ ಓಡಿದರು. ಅಲ್ಲಿ ಅವರಿಂದ ನೋಡಲ್ಪಟ್ಟ ಆ ದಾನವನು ಚಕ್ರಶೂಲಗಳಿಂದ

ತಾಭ್ಯಾಂ ಸ ದೃಷ್ಟಃ ತ್ರಿದಶೋತ್ತಮಾಭ್ಯಾಂ
ಚಕ್ರೇಣ ಶೂಲೇನ ವಿಭಿನ್ನದೇಹಃ ॥ ೨೮ ॥

ಪಪಾತ ಶೈಲಾತ್ತಪನೀಯವರ್ಣೋ
ಯಥಾಂತರಿಕ್ಷಾದ್ಧಿ ಮನುಷ್ಯತಾರಾಃ ।
ಏವಂ ತ್ರಿಶೂಲಂ ಚ ದಧಾರ ವಿಷ್ಣುಃ
ಚಕ್ರಂ ತ್ರಿನೇತ್ರೋಽಪ್ಯರಿಸೂದನಾರ್ಥಂ ॥ ೨೯ ॥

ಯತ್ರಾಪ್ಯಸೌ ಶೂಲಭವಾಭಿಘಾತಾ
ದ್ಧರಾಂ ಪಪಾತಾಥ ಧರಾಚಲೇಂದ್ರಾತ್ ।
ಜಲೋದ್ಭವಶ್ಚಾಪಿ ಜಲಂ ವಿಮುಚ್ಯ
ಜ್ಞಾತ್ವಾಗತೌ ಶಂಕರವಾಸುದೇವೌ ॥ ೩೦ ॥

ತತ್ಪ್ರಾಪ್ಯ ತೀರ್ಥಂ ತ್ರಿದಶಾಧಿಪಾಭ್ಯಾ
ಮುಪೋಷಿತಂ ದೈತ್ಯಪತಿಃ ಸ್ವಶುದ್ಧಯೇ ।
ಉಪೋಷ್ಯ ಭಕ್ತ್ಯಾ ಹಿಮವಂತಮಾಗಾ
ದ್ದ್ರಷ್ಟುಂ ಗಿರೀಶಂ ಶಿವವಿಷ್ಣುಮಾರ್ಗಂ ॥ ೩೧ ॥

ಕತ್ತರಿಸಲ್ಪಟ್ಟದೇಹವುಳ್ಳವನಾಗಿ ಪ್ರಕಾಶಮಾನವಾದ ತನ್ನ ವೇಷದೊಡನೆ ಅಂತರಿಕ್ಷದಿಂದ ಮನುಷ್ಯನಕ್ಷತ್ರಗಳಂತೆ ಪರ್ವತದಿಂದ ಕೆಳಕ್ಕೆ ಬಿದ್ದನು.

೨೯-೩೧. ಈ ರೀತಿಯಾಗಿ ಶತ್ರುಸಂಹಾರಕ್ಕಾಗಿ ವಿಷ್ಣುವು ತ್ರಿಶೂಲವನ್ನೂ ಹರನು ಚಕ್ರವನ್ನೂ ಧರಿಸಿದ್ದರು. ಆ ದಾನವನು ಯಾವ ಸ್ಥಲದಲ್ಲಿ ಶೂಲಪ್ರಹಾರದಿಂದ ಭಿನ್ನನಾಗಿ ಪರ್ವತದಿಂದ ಭೂಮಿಗೆ ಬಿದ್ದನೋ ಶಂಕರ ವಾಸುದೇವರು ಹೊರಟುಹೋದರೆಂದು ತಿಳಿದು ಹಿಮವತ್ಪರ್ವತಕ್ಕೆ ಓಡಲು ನೀರಿನಿಂದ ಮೇಲಕ್ಕೆ ಎದ್ದನೋ ಅಂತಹ ಹರಿಹರ ಸೇವಿತವಾಗಿದ್ದ ತೀರ್ಥವನ್ನು ಹೊಂದಿ ಆ ದೈತ್ಯಾಧಿಪನು ಆತ್ಮಶುದ್ಧಿಗಾಗಿ ಭಕ್ತಿಯಿಂದ ಉಪವಾಸಮಾಡಿ ಶಿವವಿಷ್ಣುಮಾರ್ಗವನ್ನು ಹೊಂದಿರುವ ಶಂಕರನನ್ನು ಸೇವಿಸಲು ಹಿಮವತ್ಪರ್ವತಕ್ಕೆ ಬಂದನು.

ತಂ ಸಮಭ್ಯರ್ಚ್ಯ ವಿಧಿವದ್ದತ್ವಾ ದಾನಂ ದ್ವಿಜಾತಿಷು ।
ವಿತಸ್ತಾಹಿಮವತ್ಯೋಃಶ್ಚ ಭೃಗುತುಂಗಂ ಜಗಾಮ ಸಃ ॥ ೩೨ ॥

ಯತ್ರೇಶ್ವರೋ ದೇವವರಸ್ಯ ವಿಷ್ಣೋಃ
ಪ್ರಾದಾದ್ರಥಾಂಗಂ ಪ್ರವರಾಯುಧಂ ವೈ ।
ಚಿಚ್ಛೇದ ಯೇನಾರಿಬಲಂ ಚ ಶಂಕರೋ
ವಿಜ್ಞಾಯ ಮಾನೋಸ್ತ್ರಬಲಂ ಮಹಾತ್ಮಾ ॥ ೩೩ ॥

ಇತಿ ಶ್ರೀ ವಾಮನಪುರಾಣೇ ಪ್ರಹ್ಲಾದ ತೀರ್ಥಯಾತ್ರಾಯಾಂ
ಜಲೋದ್ಭವವಧೋ ನಾಮ್ಯೆಕಾಶೀತಿತಮೋಽಧ್ಯಾಯಃ

೩೨-೩೩. ಅಲ್ಲಿ ಶಂಕರನನ್ನೂ ಹರಿಯನ್ನೂ ಯಥಾವಿಧಿಯಾಗಿ ಪೂಜಿಸಿ ದಾನಾದಿಗಳಿಂದ ಬ್ರಾಹ್ಮಣಪ್ರೀತಿಯನ್ನುಂಟುಮಾಡಿ ವಿತಸ್ತಾ ಮತ್ತು ಹಿಮವತಿ ಗಳೆರಡನ್ನೂ ಸೇವಿಸಿ ಭೃಗುತುಂಗವೆಂಬ ಕ್ಷೇತ್ರಕ್ಕೆ ಬಂದನು. ಆ ಸ್ಥಳದಲ್ಲಿಯೇ ಮಹಾತ್ಮನಾದ ಶಂಕರನು ಶತ್ರುನಾಶಕವಾದ ಚಕ್ರದ ಸಾಮರ್ಥ್ಯವನ್ನು ತಿಳಿದು ಅಂತಹ ದಿವ್ಯಾಯುಧವನ್ನು ವಿಷ್ಣುವಿಗೆ ಕೊಟ್ಟಿದ್ದನು.

ಇಲ್ಲಿಗೆ ಶ್ರೀವಾಮನಪುರಾಣದ ಪ್ರಹ್ಲಾದ ತೀರ್ಥಯಾತ್ರೆಯಲ್ಲಿ ಜಲೋದ್ಭವವಧವೆಂಬ ಎಂಭತ್ತೊಂದನೆಯವು ಅಧ್ಯಾಯ ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಪ್ರಹ್ಲಾದನ ತೀರ್ಥಯಾತ್ರಾಪ್ರಸಂಗದಲ್ಲಿ ಅವನು ಸೇವಿಸಿದ ಅನೇಕ ತೀರ್ಥಗಳನ್ನು ವಿವರಿಸಲಾಯಿತು. ಪ್ರಾಸಂಗಿಕವಾಗಿ ನಾರದರ ಪ್ರಶ್ನೆಯ ಸಮಾಧಾನಕ್ಕಾಗಿ ಜಲೋದ್ಭವನೆಂಬ ದಾನವನ ನಾಶಕ್ಕಾಗಿ ಹರಿಯು ಶೂಲವನ್ನೂ ಹರನು ಚಕ್ರವನ್ನೂ ಧರಿಸಿದ್ದುದರಿಂದ ಪ್ರಹ್ಲಾದನು ಸೇವಿಸಲು ಹೋದ ಆ ಕ್ಷೇತ್ರದಲ್ಲಿ ಹರಿಹರರಿಬ್ಬರೂ ಅದೇ ರೂಪದಲ್ಲಿದ್ದರೆಂದು ಹೇಳಿ ಪ್ರಕೃತ ಪ್ರಸ್ತಾಪವನ್ನು ಮುಂದು ವರಿಯಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ದ್ವ್ಯಶೀತಿತಮೋಽಧ್ಯಾಯಃ

ನಾರದ ಉವಾಚ

ಭಗವಾನ್ ಲೋಕನಾಥಾಯ ವಿಷ್ಣವೇ ವಿಷಮೇಕ್ಷಣಃ ।
ಕಿಮರ್ಥಮಾಯುಧಂ ಚಕ್ರಂ ದತ್ತವಾನ್ ಲೋಕಪೂಜಿತಂ ॥ ೧ ॥

ಪುಲಸ್ತ್ಯ ಉವಾಚ

ಶೃಣುಷ್ವಾವಹಿತೋ ಭೂತ್ವಾ ಕಥಾಮೇತಾಂ ಪುರಾತನೀಂ ।
ಚಕ್ರಪ್ರದಾನಸಂಬದ್ಧಾಂ ಶಿವಮಾಹಾತ್ಮ್ಯವರ್ಧಿನೀಂ ॥ ೨ ॥

ಆಸೀದ್ದ್ವಿಜಾತಿಪ್ರವರೋ ವೇದವೇದಾಂಗಪಾರಗಃ ।
ಗೃಹಾಶ್ರಮೀ ಮಹಾಭಾಗೋ ವೀತಮನ್ಯುರಿತಿ ಸ್ಮೃತಃ ॥ ೩ ॥

ಎಂಭತ್ತೆರಡನೆಯ ಅಧ್ಯಾಯವು

೧-೩. ನಾರದರು ಪುಲಸ್ತ್ಯರನ್ನು ಪುನಃ ಪ್ರಶ್ನೆಮಾಡುತ್ತಾರೆ. ಪೂಜ್ಯನಾದ ಶಂಕರನು ಲೋಕಪತಿಯಾದ ವಿಷ್ಣುವಿಗೆ ಪೂಜ್ಯವಾದ ಚಕ್ರಾಯುಧವನ್ನು ಏತಕ್ಕಾಗಿ ಕೊಟ್ಟನು. ಇದನ್ನು ಕೇಳಿ ಪುಲಸ್ತ್ಯರು ಹೇಳುತ್ತಾರೆ. ಪುರಾತನವಾಗಿಯೂ ಶಂಕರನ ಮಾಹಾತ್ಮ್ಯಕ್ಕೆ ಅಭಿವೃದ್ಧಿದಾಯಕನಾಗಿಯೂ ಇರುವ ಚಕ್ರಪ್ರದಾನ ವಿಷಯಕವಾದ ಈ ಕಥೆಯನ್ನು ಅವಧಾನದಿಂದ ಕೇಳು, ವೇದವೇದಾಂಗಪಾರಂಗತನಾಗಿಯೂ, ಪುಣ್ಯಶಾಲಿಯಾಗಿಯೂ ಇದ್ದ ವೀತಮನ್ಯುವೆಂಬ ಬ್ರಾಹ್ಮಣನು ಗ್ರಹಸ್ಥಾಶ್ರಮದಲ್ಲಿದ್ದನು.

ತಸ್ಯಾತ್ರೇಯೀ ಮಹಾಭಾಗಾ ಭಾರ್ಯಾ ಸೀಚ್ಛೀಲಸಂಮತಾ ।
ಪತಿವ್ರತಾ ಪತಿಪ್ರಾಣಾ ಧರ್ಮಶೀಲೇತಿ ವಿಶ್ರುತಾ ॥ ೪ ॥

ಮುನೇಸ್ತಸ್ಯಾನಪತ್ಯಸ್ಯ ಋತುಕಾಲಾಭಿಗಾಮಿನಃ ।
ಸಂಬಭೂವ ಸುತಃ ಶ್ರೀಮಾನುಪಮನ್ಯುರಿತಿ ಶ್ರುತಃ ॥ ೫ ॥

ತಂ ಮಾತಾ ಮುನಿಶಾರ್ದೂಲಂ ಶಾಲಿಪಿಷ್ಟರಸೇನ ವೈ ।
ಪೋಷಯಾಮಾಸ ದದತೀ ಕ್ಷೀರಮೇತದ್ಧಿ ದುರ್ಗತಾ ॥ ೬ ॥

ಸೋಽಜಾನಾನೋಽಸ್ಯ ಕ್ಷೀರಸ್ಯ ಸ್ವಾದುತಾಂ ಪಯ ಇತ್ಯಥ ।
ಸಂಭಾವನಾಮುಪ್ಯಕರೋಚ್ಛಾಲಿಪಿಷ್ಟರಸೇಽಪಿ ಹಿ ॥ ೭ ॥

ಸತ್ವೇಕದಾ ಸಮಂ ಪಿತ್ರಾ ಕುತ್ರಚಿದ್ದ್ವಿಜವೇಶ್ಮನಿ ।
ಕ್ಷೀರೌದನಂ ಚ ಬುಭುಜೆ ಶ್ರದ್ಧಯಾ ಪ್ರಾಣಿಪುಷ್ಟಿದಂ ॥ ೮ ॥

ಸಲಬ್ಧ್ವಾನುಪಮಂ ಸ್ವಾದು ಕ್ಷೀರಂ ಚ ಋಷಿಪುತ್ರಕಃ ।
ಮಾತ್ರಾ ದತ್ತಂ ದ್ವಿತೀಯೇಽಹ್ನಿ ನಾದತ್ತೆ ಪಿಷ್ಟಕಾರಿತಂ ॥ ೯ ॥

೪-೫. ಆ ಬ್ರಾಹ್ಮಣನಿಗೆ ಪತಿಯನ್ನೇ ಪ್ರಾಣವೆಂದು ತಿಳಿದು ಪತಿವ್ರತೆಯಾಗಿಯೂ ಶುಭಶೀಲಳಾಗಿಯೂ ಭಾಗ್ಯವತಿಯಾಗಿಯೂ ಇದ್ದ ಆತ್ರೇಯಗೋತ್ರದವಳಾದ ಧರ್ಮಶೀಲಾ ಎಂಬ ಹೆಸರುಳ್ಳ ಪತ್ನಿಯಿದ್ದಳು ನಿಯಮಶೀಲನಾದ ಆ ಬ್ರಾಹ್ಮಣನಿಗೆ ಸಂತಾನವಿಲ್ಲದಿದ್ದುದರಿಂದ ಗ್ರಹಸ್ಥಾಶ್ರಮಕ್ಕೆ ತಕ್ಕಂತೆ ಋತುಕಾಲಗಮನದಿಂದ ತನ್ನ ಪತ್ನಿಯಲ್ಲಿ ಉಪಮನ್ಯುವೆಂಬ ಮಗನು ಹುಟ್ಟಿದನು.

೬-೭. ತಾಯಿಯು ದರಿದ್ರೆಯಾಗಿದ್ದುದರಿಂದ ಆ ಮುನಿಪುತ್ರನನ್ನು ಅಕ್ಕಿಯ ಹಿಟ್ಟಿನ ರಸವನ್ನೇ ಹಾಲು ಎಂದು ಹೇಳಿ ಅದನ್ನೇ ಕೊಟ್ಟು ಪೋಷಿಸಿದಳು, ಸರಿಯಾದ ಹಾಲಿನ ರುಚಿಯನ್ನು ತಿಳಿಯದಿದ್ದ ಆ ಮುನಿಪುತ್ರನು ತಾಯಿಯು ಕೊಡುತ್ತಿದ್ದ ಅಕ್ಕಿಯ ಹಿಟ್ಟಿನ ರಸವನ್ನೇ ಹಾಲು ಎಂದು ತಿಳಿದಿದ್ದನು.

೮-೯. ಆ ಬಾಲಕನು ಒಂದಾನೊಂದು ದಿನ ತಂದೆಯೊಡನೆ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಪುಷ್ಟಿದಾಯಕವಾದ ಕ್ಷೀರಾನ್ನವನ್ನು ಪ್ರೀತಿಯಿಂದ ಊಟ ಮಾಡಿದನು. ಅಸದೃಶವಾದ ಒಳ್ಳೆಯ ಹಾಲಿನ ರುಚಿಯನ್ನು ಅಲ್ಲಿ ತಿಳಿದ ಆ ಋಷಿಕುಮಾರನು ಮಾರನೇಯ ದಿನ ಮನೆಯಲ್ಲಿ ತಾಯಿಯಿಂದ ಕೊಡಲ್ಪಟ್ಟ ಅಕ್ಕಿಯಹಿಟ್ಟಿನ ರಸವನ್ನು ಸ್ವೀಕರಿಸಲೇ ಇಲ್ಲ.

ರುರೋದ ಚ ತಥಾ ಬಾಲ್ಯಾತ್ಪಯೋರ್ಥಂ ಚಾತಕೋ ಯಥಾ ।
ಮಾತಾ ರುದಂತಂ ತಂ ಪ್ರಾಹ ಬಾಷ್ಪಗದ್ಗದಯಾ ಗಿರಾ ॥ ೧೦ ॥

ಉಮಾಪತೌ ಪಶುಪತೌ ಶೂಲಧಾರಿಣಿ ಶಂಕರೇ ।
ಅಪ್ರಸನ್ನೇ ವಿರೂಪಾಕ್ಷೇ ಕುತಃ ಕ್ಷೀರೇಣ ಭೋಜನಂ ॥ ೧೧ ॥

ಯದೀಚ್ಛಸಿ ಪಯೋ ಭೋಕ್ತುಂ ಸದ್ಯಃ ಪುಷ್ಟಿಕರಂ ಸುತ ।
ತಮಾರಾಧಯ ದೇವೇಶಂ ವಿರೂಪಾಕ್ಷಂ ತ್ರಿಶೂಲಿನಂ ॥ ೧೨ ॥

ತಸ್ಮಿಂಸ್ತುಷ್ಟೇ ಜಗದ್ಧಾಮ್ನಿ ಸರ್ವಕಲ್ಯಾಣದಾಯಿನಿ ।
ಪ್ರಾಪ್ಯತೇಽಮೃತಪಾಯಿತ್ವಂ ಕಿಂ ಪುನಃ ಕ್ಷೀರಭೋಜನಂ ॥ ೧೩ ॥

ಸ ಮಾತುರ್ವಚನಂ ಶ್ರುತ್ವಾ ವೀತಮನ್ಯುಸ್ತತೋಽಬ್ರವೀತ್ ।
ಕೋಽಯಂ ವಿರೂಪಾಕ್ಷ ಇತಿ ತ್ವಯಾರಾಧ್ಯಸ್ತು ಕೀರ್ತಿತಃ ॥ ೧೪ ॥

ತತಃ ಸುತಂ ಧರ್ಮಶೀಲಾ ಧರ್ಮಾಢ್ಯಂ ವಾಕ್ಯಮಬ್ರವೀತ್ ॥ ೧೫ ॥

೧೦-೧೧. ಬಾಲಕನಾಗಿದ್ದುದರಿಂದ ಒಳ್ಳೆಯ ಹಾಲಿಗಾಗಿ ಚಾತಕದಂತೆ ಅಳಲಾರಂಭಿಸಿದನು. ಹಾಗೆ ಅಳುತ್ತಿರುವ ಆ ಮಗುವನ್ನು ಕುರಿತು ತಾಯಿಯು ದುಃಖದಿಂದ ಕಣ್ಣೀರು ಬಿಡುತ್ತಾ ಗದ್ಗದಸ್ವರದಿಂದ ಮಗುವೇ, ಪಾರ್ವತೀಪತಿಯಾಗಿಯೂ ಪಶುಪತಿಯಾಗಿಯೂ ಶೂಲಧಾರಿಯಾಗಿಯೂ ಇರುವ ವಿರೂಪಾಕ್ಷನಾದ ಶಂಕರನು ಪ್ರಸನ್ನನಾಗದಿರುವಾಗ ಒಳ್ಳೆಯ ಹಾಲಿನ ಭೋಜನವು ನಿನಗೆಲ್ಲಿ ದೊರೆತೀತು.

೧೨-೧೫. ಪುಷ್ಟಿಕರವಾದ ಒಳ್ಳೆಯ ಹಾಲನ್ನು ಊಟಮಾಡಲು ನೀನು ಅಪೇಕ್ಷಿಸುವುದಾದರೆ ತ್ರಿಶೂಲಿಯಾಗಿಯೂ ದೇವಪತಿಯಾಗಿಯೂ ಇರುವ ಆ ವಿರೂಪಾಕ್ಷನನ್ನು ಆರಾಧಿಸು. ಜಗನ್ಮೂರ್ತಿಯಾಗಿಯೂ ಸಕಲಕಲ್ಯಾಣಪ್ರದನಾಗಿಯೂ ಇರುವ ಆ ಪ್ರಭುವು ಸಂತುಷ್ಟನಾದಲ್ಲಿ ಅಮೃತಪಾನವೇ ಲಭಿಸೀತು. ಈ ಹಾಲಿನ ಭೋಜನವೆಷ್ಟರದು ಎನ್ನಲು ತಾಯಿಯ ಆ ಮಾತನ್ನು ಕೇಳಿ ಆ ಮುನಿಪುತ್ರನು ದುಃಖವನ್ನು ಬಿಟ್ಟು ನೀನು ಆರಾಧಿಸಬೇಕೆಂದು ಹೇಳಿದ ಆ ವಿರೂಪಾಕ್ಷನಾರು ಎಂದು ಆ ತಾಯಿಯನ್ನೇ ಪುನಃ ಕೇಳಿದನು. ಆಗ ಧರ್ಮಶೀಲೆಯೂ ಮಗನನ್ನು ಕುರಿತು ಧಾರ್ಮಿಕವಾದ ಈ ಮಾತನ್ನಾಡಿದಳು.

ಯೋಽಯಂ ವಿರೂಪಾಕ್ಷ ಇತಿ ಶ್ರೂಯತಾಂ ಕಥಯಾಮಿ ತಂ ।
ಆಸೀನ್ಮಹಾಸುರಪತಿಃ ಶ್ರೀದಾಮ ಇತಿ ವಿಶ್ರುತಃ ॥ ೧೬ ॥

ಯೇನಾಭ್ರಮ್ಯ ಜಗತ್ಸರ್ವಂ ಶ್ರೀದಾಮ್ನಾ ವಿಷ್ಣುವತ್ಪುರಾ ॥ ೧೭ ॥

ನಿಶ್ರೀಕಾಸ್ತು ತ್ರಯೋ ಲೋಕಾಃ ಕೃತಾಸ್ತೇನ ದುರಾತ್ಮನಾ ।
ಶ್ರೀವತ್ಸಂ ವಾಸುದೇವಸ್ಯ ಹರ್ತುಮಿಚ್ಛನ್ಮಹಾಸುರಃ ॥ ೧೮ ॥

ತಸ್ಯ ದುಷ್ಟಂ ಸ ಭಗವಾನಭಿಪ್ರಾಯಂ ಜನಾರ್ದನಃ ।
ಜ್ಞಾತ್ವಾ ತಸ್ಯ ವಧಾಕಾಂಕ್ಷೀ ಮಹೇಶ್ವರಮುಪಾಗಮತ್ ॥ ೧೯ ॥

ಏತಸ್ಮಿನ್ನಂತರೆ ಶಂಭುರ್ಯೋಗಮೂರ್ತಿಧರೋಽವ್ಯಯಃ ।
ತಸ್ಥೌ ಹಿಮಾಚಲಪ್ರಸ್ಥಮಾಶ್ರಿತ್ಯ ಶ್ಲಕ್ಷ್ಣಭೂಷಿತಂ ॥ ೨೦ ॥

ಅಥಾಭ್ಯೇತ್ಯ ಜಗನ್ನಾಥಃ ಸಹಸ್ರಶಿರಸಂ ವಿಭುಂ ।
ಆರಾಧಯಾಮಾಸ ಹರಿಃ ಸ್ವಯಮಾತ್ಮಾನಮಾತ್ಮನಾ ॥ ೨೧ ॥

೧೬-೧೯. ಮಗುವೇ, ಆ ವಿರೂಪಾಕ್ಷನು ಯಾರೆಂಬುದನ್ನು ಹೇಳುತ್ತೇನೆ ಕೇಳು. ಶ್ರೀದಾಮನೆಂದು ಪ್ರಸಿದ್ಧನಾದ ಒಬ್ಬ ದೊಡ್ಡ ಅಸುರಪತಿ ಇದ್ದನು. ಆ ಶ್ರೀದಾಮನು ವಿಷ್ಣುವಿನಂತೆ ಜಗತ್ತೆಲ್ಲವನ್ನೂ ಸುತ್ತಿ ತನ್ನ ದುರ್ವರ್ತನೆಯಿಂದ ಮೂರುಲೋಕದ ಸಂಪತ್ತನ್ನೆಲ್ಲಾ ಅಪಹರಿಸಿದನು. ವಾಸುದೇವನ ಶ್ರೀವತ್ಸವನ್ನೂ ಅಪಹರಿಸಲು ಮನಸ್ಸುಮಾಡಿದನು. ಆಗ ವಾಸುದೇವನು ಅವನ ದುರಭಿಪ್ರಾಯ ವನ್ನು ತಿಳಿದು ಅವನನ್ನು ನಾಶಮಾಡಬೇಕೆಂಬ ಇಚ್ಛೆಯಿಂದ ಶಂಕರನ ಸಮೀಪಕ್ಕೆ ಬಂದನು.

೨೦-೨೧. ಈ ಸಮಯದಲ್ಲಿ ಶಂಕರನು ಹಿಮವತ್ಪರ್ವತದ ಮಟ್ಟವಾಗಿಯೂ ನುಣುಪಾಗಿಯೂ ಇರುವ ಪ್ರಸ್ಥಭೂಮಿಯಲ್ಲಿ ಯೋಗಶರೀರವನ್ನು ಹೊಂದಿ ಧ್ಯಾನಾ ರೂಢನಾಗಿದ್ದನು. ಆಗ ಹರಿಯು ಅಲ್ಲಿಗೆ ಬಂದು ಸಾವಿರತಲೆಯುಳ್ಳ ದಿವ್ಯವಿಗ್ರಹ ವನ್ನು ಹೊಂದಿ ಅಲ್ಲಿ ಯೋಗಿಯಾಗಿ ಕುಳಿತಿರುವ ಆ ಶಂಕರನನ್ನು ಸ್ವಾತ್ಮಾಂತರ್ಯಾಮಿ ಯಂತೆ ಭಾವಿಸಿ ಸತ್ಕರಿಸಿದನು.

ಆಸೀದ್ವರ್ಷಸಹಸ್ರಂ ತು ಪಾದಾಂಗುಷ್ಠೇನ ತದ್ಗಿರಾ ।
ಗೃಣನ್ ಸನಾತನಂ ಬ್ರಹ್ಮ ಯೋಗಿಧ್ಯೇಯಮಲಕ್ಷಣಂ ॥ ೨೨ ॥

ತತಃ ಪ್ರೀತಃ ಪ್ರಭುಃ ಪ್ರಾದಾದ್ವಿಷ್ಣವೇ ಪರಮಂ ಪದಂ ।
ಪ್ರತ್ಯಕ್ಷತೇಜಸಾ ಯುಕ್ತಂ ದಿವ್ಯಂ ಚಕ್ರಂ ಸುದರ್ಶನಂ ॥ ೨೩ ॥

ತದ್ದತ್ತ್ವಾ ದೇವದೇವಾಯ ಸರ್ವಭೂತಮಯಃ ಪ್ರಭುಃ ।
ಕಾಲಚಕ್ರನಿಭಂ ಚಕ್ರಂ ಶಂಕರೋ ವಿಷ್ಣುಮಬ್ರವೀತ್ ॥ ೨೪ ॥

ವರಾಯುಧಂ ಹಿ ದೇವೇಶ ಸರ್ವಾಯುಧನಿಬರ್ಹಣಂ ।
ಸುದರ್ಶನಂ ದ್ವಾದಶಾರಂ ಷಣ್ಣಾಭಿ ದ್ವಿಜವಜ್ಜವೇ ॥ ೨೫ ॥

ಆರಾಸಂಸ್ಥಾಸ್ತ್ವಮೀ ತತ್ರ ದೇವಾ ಮಾಸಾಶ್ಚ ರಾಶಯಃ ।
ಶಿಷ್ಟಾನಾಂ ರಕ್ಷಣಾರ್ಥಾಯ ಸಂಸ್ಥಿತಾ ಋತವಶ್ಚ ಷಟ್ ॥ ೨೬ ॥

ಅಗ್ನಿಃ ಸೋಮಸ್ತಥಾ ಮಿತ್ರೋ ವರುಣಶ್ಚ ಶಚೀಪತಿಃ ।
ಇಂದ್ರಾಗ್ನೀವಾಪ್ಯಥೋ ವಿಶ್ವೆ ಪ್ರಜಾಪತಯ ಏವ ತು ॥ ೨೭ ॥

೨೨-೨೩. ಮತ್ತು ಯೋಗಿಧ್ಯೇಯವಾದ ನೀರೂಪವಾದ ಶಾಶ್ವತಬ್ರಹ್ಮವನ್ನು ಉಚ್ಚಾರಣದಿಂದಲೂ ಧ್ಯಾನದಿಂದಲೂ ಭಾವಿಸುತ್ತಾ ವರ್ಷಸಹಸ್ರಪರ್ಯಂತವೂ ಪಾದಾಂಗುಷ್ಠದಿಂದ ನಿಂತು ಆ ಹರಿಯು ತಪಸ್ಸನ್ನು ಮಾಡಿದನು. ಅನಂತರ ಸಂತುಷ್ಟನಾದ ಹರನು ವಿಷ್ಣುವಿಗೆ ಉತ್ಕೃಷ್ಟವಾದ ತೇಜಸ್ಸಿನಿಂದ ಕೂಡಿದ ಸುದರ್ಶನ ವೆಂಬ ದಿವ್ಯಚಕ್ರವನ್ನು ಕೊಟ್ಟನು.

೨೪-೨೭. ಸರ್ವಭೂತಮಯನಾದ ಆ ಶಂಕರನು ದೇವಾಧಿದೇವನಾದ ವಿಷ್ಣುವಿಗೆ ಕಾಲಚಕ್ರದಂತೆ ಉಜ್ಜ್ವಲವಾದ ಆ ಚಕ್ರವನ್ನು ಕೊಟ್ಟು ಹೀಗೆ ಹೇಳಿದನು. ಎಲೈ ದೇವತಾಧೀಶನೆ ಇದು ಸರ್ವಾಯುಧನಾಶಕವಾದ ಸುದರ್ಶನ ವೆಂಬ ಉತ್ತಮವಾದ ಅಸ್ತ್ರ, ಇದು ಹನ್ನೆರಡು ಅರ (ಶಲಾಕ) ಗಳುಳ್ಳದ್ದಾಗಿಯೂ ಆರುನಾಭಿ (ಆಸಲಾಕಿಗಳು ಸೇರುವ ಮಧ್ಯಭಾಗ) ಗಳುಳ್ಳದ್ದಾಗಿಯೂ ಪಕ್ಷಿಯಂತೆ ವೇಗಶಾಲಿಯಾಗಿಯೂ ಇದೆ. (ದುಷ್ಟನಿಗ್ರಹಮೂಲಕವಾದ) ಶಿಷ್ಟರಕ್ಷಣೆಗಾಗಿ ಇದರ ಅರಗಳಲ್ಲಿ ದೇವತೆಗಳೂ ಮಾಸಗಳೂ ರಾಶಿಗಳೂ ಷಡೃತುಗಳೂ ಸನ್ನಿಹಿತ ವಾಗಿವೆ. ಅಗ್ನಿ, ಚಂದ್ರ, ಸೂರ್ಯ, ವರುಣ, ಇಂದ್ರ, ಇಂದ್ರಾಗ್ನಿಗಳು ಎಲ್ಲಾ ಪ್ರಜಾಪತಿಗಳೂ ಸಹ ಇದರಲ್ಲಿ ಸಾನ್ನಿಧ್ಯಹೊಂದಿರುವರು.

ವಾಯುಶ್ಚ ಬಲವಾನ್ದೇವವೈದ್ಯೌ ಧನ್ವಂತರಿಸ್ತಥಾ ।
ತಪಸ್ಯಶ್ಚ ತಪಶ್ಚೋಗ್ರೋ ದ್ವಾದಶೇತಿ ಪ್ರತಿಷ್ಠಿತಾಃ ॥ ೨೮ ॥

ಚೈತ್ರಾದ್ಯಾಃ ಫಾಲ್ಗುನಾಂತಾಶ್ಚ ಮಾಸಾಸ್ತತ್ರ ಪ್ರತಿಷ್ಠಿತಾಃ ॥ ೨೯ ॥

ತದೇನದಾದಾಯ ವಿಭೋರಥಾಯುಧಂ
ಶತ್ರೂಂ ಸುರಾಣಾಂ ಜಹಿ ಮಾವಿಶಂಕಿಥಾಃ ।
ಅಮೋಘ ಏಷೋಽಮರರಾಜಪೂಜಿತೋ
ಧೃತೋ ಮಯಾ ಮಂತ್ರಗತಸ್ತಪೋ ಬಲಾತ್ ॥ ೩೦ ॥

ಇತ್ಯುಕ್ತಃ ಶಂಭುನಾ ವಿಷ್ಣುಸ್ತತೋ ವಚನಮಬ್ರವೀತ್ ।
ಕಥಂ ಶಂಭೋ ವಿಜಾನೀಯಾಮಮೋಘಂ ಮೋಘಮೇವ ಚ ॥ ೩೧ ॥

ಯಥಾ ಮೋಘಂ ವಿಭೋ ಚಕ್ರಂ ಸರ್ವತ್ರಾಪ್ರತಿಮಂ ತತಃ ।
ಜಿಜ್ಞಾಸಾರ್ಥಂ ತವೈವೇಹ ಪ್ರೇಕ್ಷಿಷ್ಯಾಮಿ ಪ್ರತೀಚ್ಛ ಮೇ ॥ ೩೨ ॥

ತದ್ವಾಕ್ಯಂ ವಾಸುದೇವಸ್ಯ ನಿಶಮ್ಯಾಹ ಪಿನಾಕಧೃಕ್ ।
ಯದ್ಯೇವಂ ಪ್ರಕ್ಷಿಪಸ್ವೇತಿ ನಿರ್ವಿಶಂಕೇನ ಚೇತಸಾ ॥ ೩೩ ॥

೨೮-೩೧. ಮತ್ತು ಬಲಶಾಲಿಯಾದ ವಾಯುವೂ ದೇವವೈದ್ಯರೂ ಧನ್ವಂತರಿಯೂ ಫಾಲ್ಗುನಮಾಸ ಮತ್ತು ಉಗ್ರವಾದ ಗ್ರೀಷ್ಮ ಇವೂ ಸಹ ಹನ್ನೆರಡು ಇದರ ಅರಗಳಲ್ಲಿ ನೆಲಸಿವೆ. ಚೈತ್ರಾದಿಫಾಲ್ಗುನಾಂತವಾದ ಎಲ್ಲಾ ಮಾಸಗಳೂ ಇದರಲ್ಲಿ ನೆಲಸಿವೆ. ಎಲೈ ಪ್ರಭುವೇ, ಇಂತಹ ಈ ಚಕ್ರವನ್ನು ತೆಗೆದುಕೊಂಡು ಸುರಶತ್ರುಗಳನ್ನು ನಾಶಮಾಡು, ಭಯಪಡಬೇಡ, ದೇವತೆಗಳಿಂದಲೂ ಪೂಜಿತವಾದ ಅಮೋಘವಾದ ಅಸ್ತ್ರವಿದು, ನಾನೂ ಸಹ ತಪೋಬಲದಿಂದ ಮಂತ್ರಮಯವಾದ ಈ ಅಸ್ತ್ರವನ್ನು ಧರಿಸಿದ್ದೆನು. ಈರೀತಿ ಶಂಕರನಿಂದ ಹೇಳಲ್ಪಟ್ಟ ವಿಷ್ಣುವು ಆ ಶಂಕರನನ್ನು ಕುರಿತು ಇದರ ಪ್ರಯೋಗವು ವ್ಯರ್ಥವೋ ಅಥವಾ ಸಾರ್ಥಕವೋ ಎಂಬುದನ್ನು ಹೇಗೆ ತಿಳಿಯಲಿ ಮತ್ತು

೩೨-೩೪. ಪ್ರಭುವೇ, ಈ ಚಕ್ರವು ಪ್ರಯೋಗಕಾಲದಲ್ಲೆಲ್ಲಾ ಸಫಲವೇ ಆದಲ್ಲಿ ಇದು ಅಸದೃಶವೇ ಸರಿ. ಇದನ್ನು ತಿಳಿಯಲು ಪರೀಕ್ಷಾರ್ಥವಾಗಿ ನಿನ್ನಲ್ಲಿಯೇ ಪ್ರಯೋಗಿಸಿನೋಡುತ್ತೇನೆ ಇದನ್ನು ಸ್ವೀಕರಿಸು ಎಂದನು. ವಾಸುದೇವನ ಈ ಮಾತನ್ನು ಕೇಳಿ ಶಂಕರನು ಹಾಗೆ ನೀನು ಅಪೇಕ್ಷಿಸುವುದಾದರೆ ನನ್ನಲ್ಲಿಯೇ

ತನ್ಮಹೇಶಾನವಚನಂ ಶ್ರುತ್ವಾ ವಿಷ್ಣುಃ ಸುದರ್ಶನಂ ।
ಮುಮೋಚ ತೇಜೋ ಜಿಜ್ಞಾಸುಃ ಶಂಕರಂ ಪ್ರತಿ ವೇಗವಾನ್ ॥ ೩೪ ॥

ಮುರಾರಿಕರವಿಭ್ರಷ್ಟಂ ಚಕ್ರಮಭ್ಯೇತ್ಯ ಶೂಲಿನಂ ।
ತ್ರಿಧಾ ಚಕಾರ ವಿಶ್ವೇಶ್ವಂ ಯಜ್ಞೇಶಂ ಯಜ್ಞಯಾಜಕಂ ॥ ೩೫ ॥

ಹರಂ ಹರಿಸ್ತ್ರಿಧಾಭೂತಂ ದೃಷ್ಟ್ವಾ ತೂರ್ಣ ಮಹಾಭುಜಃ ।
ವ್ರೀಡೋಪಪ್ಲುತದೇಹಸ್ತು ಪ್ರಣಿಪಾತಪರೋಭವತ್ ॥ ೩೬ ॥

ಪಾದಪ್ರಣಾಮನಿರತಂ ವೀಕ್ಷ್ಯ ದಾಮೋದರಂ ತತಃ ।
ಪ್ರಾಹ ಪ್ರೀತಮನಾಃ ಶ್ರೀಮಾನುತ್ತಿಷ್ಠೇತಿ ಪುನಃಪುನಃ ॥ ೩೭ ॥

ಪ್ರಾಕೃತೋಽಯಂ ಮಹಾಭಾಗ ವಿಕಾರೋ ಬ್ರಹ್ಮಣೋ ಮಮ ।
ನಿಕೃತ್ತೋ ನ ಸ್ವಭಾವೋ ಮೇಽಅಚ್ಛೇದ್ಯೋಽದಾಹ್ಯ ಏವ ಹಿ ॥ ೩೮ ॥

ತದೇತಾನೀಹ ಚಕ್ರೇಣ ತ್ರೀಣ್ಯಂಗಾನೀಹ ಕೇಶವ ।
ಕೃತ್ತಾನಿ ತಾನಿ ಪುಣ್ಯಾನಿ ಭವಿಷ್ಯಂತಿ ನ ಸಂಶಯಃ ॥ ೩೯ ॥

ಪ್ರಯೋಗಿಸು ಎಂದು ನಿಃಶಂಕವಾದ ಮನಸ್ಸಿನಿಂದ ಹೇಳಿದನು. ಶಂಕರನ ಆ ಮಾತನ್ನು ಕೇಳಿ ವಿಷ್ಣುವು ಆ ಸುದರ್ಶನವನ್ನು ಪರೀಕ್ಷಾರ್ಥವಾಗಿ ಶಂಕರನ ಮೇಲೆ ವೇಗದಿಂದ ಪ್ರಯೋಗಿಸಿದನು.

೩೫-೩೭. ವಿಷ್ಣುವಿನ ಕೈಯ್ಯಿನಿಂದ ಹೊರಟ ಆ ಚಕ್ರವು ಶಂಕರನ ಸಮೀಪವನ್ನು ಹೊಂದಿ ಯಜ್ಞಪತಿಯಾಗಿಯೂ ಯಜ್ಞನಿರ್ವಾಹಕನಾಗಿಯೂ ಇರುವ ಆ ಶಂಕರನನ್ನು ಮೂರುಭಾಗವಾಗಿ ಕತ್ತರಿಸಿತು. ಆ ರೀತಿ ಮೂರುಭಾಗವಾಗಿ ಕತ್ತರಿಸಲ್ಪಟ್ಟ ಹರನನ್ನು ನೋಡಿ ಹರಿಯು ಒಡನೆಯೇ ಲಜ್ಜಿತನಾಗಿ ನಮಸ್ಕರಿಸಲಾರಂಭಿಸಿದನು. ಅನಂತರ ಪಾದಪ್ರಮಾಣದಲ್ಲಿ ತತ್ಪರನಾಗಿದ್ದ ಆ ದಾಮೋದರನನ್ನು ನೋಡಿ ಸಂತುಷ್ಟನಾದ ಶಂಭುವು ಏಳು ಏಳು ಎಂದು ಬಾರಿಬಾರಿಗೂ ಹೇಳುತ್ತಾ ಹೀಗೆ ನುಡಿದನು.

೩೮-೪೧. ಮಹಾತ್ಮನೇ ಬ್ರಹ್ಮರೂಪಿಯಾದ ನನಗೆ ಈ ವಿಕಾರಗಳೆಲ್ಲವೂ ಪ್ರಕೃತಿಗೆ ಸಂಬಂಧಪಟ್ಟವು. ಇದರಿಂದ ನನ್ನ ಅಪ್ರಾಕೃತವಾದ ಸ್ವಭಾವವು ಕತ್ತರಿಸಲ್ಪಟ್ಟಿಲ್ಲ. ಅಂತಹ ನನ್ನ ಅಪ್ರಾಕೃತಾಂಶವು ಛೇದನಕ್ಕೂ ದಾಹಕ್ಕೂ ಸಿಲುಕದೆ ಶಾಶ್ವತವಾಗಿರತಕ್ಕದ್ದು. ಈ ಚಕ್ರದಿಂದ ಕತ್ತರಿಸಲ್ಪಟ್ಟ ಪ್ರಾಕೃತವಾದ ನನ್ನ ಈ

ಹಿರಣ್ಯಾಕ್ಷಸ್ತತೋಽಹ್ಯೇಷ ಸುವರ್ಣಾಕ್ಷಸ್ತಥಾಪರಃ ।
ತೃತೀಯೋ ವಿಶ್ವರೂಪಾಕ್ಷಸ್ತ್ರಯೋ ನೋ ಪುಣ್ಯದಾ ನೃಣಾಂ ॥ ೪೦ ॥

ಉತ್ತಿಷ್ಠ ಗಚ್ಛ ಚ ವಿಭೋ ನಿಹಂತುಂ ಚ ಮಮಾಹಿತಂ ।
ಶ್ರೀದಾಮಾನಂ ಹತಂ ಜ್ಞಾತ್ವಾ ನಂದಯಿಷ್ಯಂತಿ ದೇವತಾಃ ॥ ೪೧ ॥

ಇತ್ಯೇವಮುಕ್ತೋ ಭಗವಾನ್ ಹರೇಣ ಗರುಡಧ್ವಜಃ ।
ಗತ್ವಾ ಸುರಗಿರಿಪ್ರಸ್ಥಂ ಶ್ರೀದಾಮಾನಂ ದದರ್ಶಹ ॥ ೪೨ ॥

ತಂ ದೃಷ್ಟ್ವಾ ದೇವದರ್ಪಘ್ನಂ ದೈತ್ಯಂ ದೇವವರೋ ಹರಿಃ ।
ಮುಮೋಚ ಚಕ್ರಂ ವೇಗಾಢ್ಯಂ ಹತೋಽಸೀತಿ ಬ್ರುವನ್ ವಿಭುಃ ॥ ೪೩ ॥

ತತಸ್ತು ತೇನಾಪ್ರತಿ ಪೌರುಷೇಣ
ಚಕ್ರೇಣ ದೈತಸ್ಯ ಶಿರೋ ನಿಕೃತ್ತಂ ।
ಸಂಭಿನ್ನಶೀರ್ಷೋ ನಿಪಪಾತ ಶೈಲಾ
ದ್ವಜ್ರಾಹತಂ ಶೈಲಶಿರೋ ಯಥೈವ ॥ ೪೪ ॥

ಮೂರು ಅವಯವಗಳೂ ಮನುಷ್ಯರಿಗೆ ಪುಣ್ಯಪ್ರದವಾಗಿಯೇ ಆಗುತ್ತವೆ. ಇದರಲ್ಲಿ ಸಂದೇಹವಿಲ್ಲ. ಇವುಗಳಲ್ಲಿ ಒಂದು ಹಿರಣ್ಯಾಕ್ಷನೆಂದೂ ಮತ್ತೊಂದು ಸುವರ್ಣಾಕ್ಷನೆಂದೂ ಮೂರನೇಯದು ವಿರೂಪಾಕ್ಷನೆಂದೂ ಪ್ರಸಿದ್ಧಿಹೊಂದಿ ಮನುಷ್ಯರಿಗೆ ಪುಣ್ಯಪ್ರದಗಳಾಗಿ ಆಗುವುವು. ಇದಕ್ಕಾಗಿ ಸಂಕೋಚಪಡಬೇಡ. ಏಳು ನಿನ್ನ ಶತ್ರುವನ್ನು ಸಂಹರಿಸಲು ಹೊರಡು. ಶತ್ರುವಾದ ಶ್ರೀದಾಮನು ಹತನಾದುದನ್ನು ತಿಳಿದು ದೇವತೆಗಳು ಸಂತೋಷಪಟ್ಟು ನಿನ್ನನ್ನು ಕೊಂಡಾಡುವರು.

೪೨-೪೩. ಹೀಗೆ ಹರನಿಂದ ಹೇಳಲ್ಪಟ್ಟ ಗರುಡಧ್ವಜನಾದ ವಿಷ್ಣುವು ಅಲ್ಲಿಂದ ಮೇರುಪರ್ವತದ ತಪ್ಪಲಿಗೆ ಹೋಗಿ ಅಲ್ಲಿ ಶ್ರೀದಾಮನನ್ನು ನೋಡಿದನು. ದೇವತೆಗಳಿಗೂ ದರ್ಪನಾಶಕನಾಗಿದ್ದ ಅವನನ್ನು ನೋಡಿದೊಡನೆಯೇ ಇನ್ನು ನೀನು ಹತನಾದ ಎಂದು ಹೇಳುತ್ತಾ ವಿಷ್ಣುವು ಚಕ್ರವನ್ನು ವೇಗದಿಂದ ಅವನ ಮೇಲೆ ಪ್ರಯೋಗಿಸಿದನು.

೪೪-೪೫. ಅನಂತರ ಅಸದೃಶವಾದ ಆ ಚಕ್ರದಿಂದ ದೈತ್ಯನ ತಲೆಯು ಕತ್ತರಿಸಲ್ಪಟ್ಟಿತು. ಮುಂಡಮಾತ್ರನಾಗಿ ನಿಂತ ಅವನು ವಜ್ರಾಯುಧದಿಂದ ಭೇದಿಸಲ್ಪಟ್ಟ ಪರ್ವತದ ಶಿಖರದಂತೆ ಆ ಪರ್ವತದಿಂದ ಕೆಳಕ್ಕೆ ಬಿದ್ದನು. ದೇವಶತ್ರುವಾದ ಆ ಶ್ರೀದಾಮನು ಹತನಾದನಂತರ ವಿಷ್ಣುವು ತನಗೆ ಸಹಾಯಮಾಡಿದ ತಪೋನಿಧಿಯಾದ

ತಸ್ಮಿನ್ ಹತೇ ದೇವರಿಪೌ *ಸುರಾರಿ
ರೀಶಂ ಸಮಾರಾಧ್ಯ ವಿರೂಪನೇತ್ರಂ ।
ಲಬ್ಧ್ವಾಚ ಚಕ್ರಂ ಪ್ರವರಂ ಮಹಾಯುಧಂ
ಜಗಾಮ ದೇವೋ ನಿಲಯಂ ತಪೋನಿಧಿಂ ॥ ೪೫ ॥

ಸೋಽಯಂ ಪುತ್ರ ವಿರೂಪಾಕ್ಷೋ ದೇವದೇವೋ ಮಹೇಶ್ವರಃ ।
ತಮಾರಾಧಯ ಚೇತ್ಸಾಧೋ ಕ್ಷೀರೇಣೇಚ್ಛಸಿ ಭೋಜನಂ ॥ ೪೬ ॥

ತನ್ಮಾತುರ್ವಚನಂ ಶ್ರುತ್ವಾ ವೀತಮನ್ಯುಸುತೋ ಬಲೀ ।
ತಮಾರಾಧ್ಯ ವಿರೂಪಾಕ್ಷಂ ಪ್ರಾಪ್ಸ್ಯೇ ಕ್ಷೀರೇಣ ಭೋಜನಂ ॥ ೪೭ ॥

ಏತತ್ತ್ವಯೋಕ್ತಂ ಪರಮಂ ಪವಿತ್ರಂ
ಸಂಭೇದನಂ ಪಾಪತರೋರ್ಮುರಾರೇಃ ।
ತೀರ್ಥಂ ಚ ತತ್ರೈವ ಮಹಾಸುರೋ
ವೈ ಸಮಾಸಸಾದಾಥ ಸುಪುಣ್ಯಹೇತೋಃ ॥ ೪೮ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ಶ್ರೀದಾಮಚರಿತಂ
ನಾಮದ್ವ್ಯಶೀತಿತಮೋಽಧ್ಯಾಯಃ

ಶಂಕರನನ್ನು ಸತ್ಕರಿಸಿ ಮಹಾಯುಧವಾದ ಆ ಚಕ್ರವನ್ನೂ ಹೊಂದಿ ತನ್ನ ಆವಾಸ ಸ್ಥಾನಕ್ಕೆ ತೆರಳಿದನು.

೪೬-೪೮. ಮಗುವೇ, ಇವನೇ ದೇವದೇವನಾಗಿಯೂ ಮಹೇಶ್ವರನಾಗಿಯೂ ಇರುವ ವಿರೂಪಾಕ್ಷನು. ನೀನು ಕ್ಷೀರಭೋಜನವನ್ನು ಅಪೇಕ್ಷಿಸುವೆಯಾದರೆ ಇವನನ್ನು ಪೂಜಿಸು. ಹೀಗೆ ತಾಯಿಯ ಮಾತನ್ನು ಕೇಳಿ ಸಮರ್ಥನಾದ ಆ ವೀತಮನ್ಯುವಿನ ಮಗನು ಆ ವಿರೂಪಾಕ್ಷನನ್ನೇ ಪೂಜಿಸಿ ಕ್ಷೀರಭೋಜನವನ್ನು ಹೊಂದುತ್ತೇನೆ ಎಂದು ನಿರ್ಧರಿಸಿದನು. ಅಂತಹ ಸರ್ವಪಾಪನಾಶಕವಾಗಿಯೂ ಪರಮ ಪವಿತ್ರವಾಗಿಯೂ ಇರುವ ಚಕ್ರತೀರ್ಥದ ಮಾಹಾತ್ಮ್ಯವನ್ನು ನಿನಗೆ ಹೇಳಿದ್ದೇನೆ. ಅಂತಹ ಚಕ್ರತೀರ್ಥಕ್ಕೆ ಪ್ರಹ್ಲಾದನು ಪುಣ್ಯಪ್ರಾಪ್ತಿಗಾಗಿ ಹೋಗಿ ಸೇರಿದನು.

ಇಲ್ಲಿಗೆ ಶ್ರೀವಾಮನಪುರಾಣದ ವಾಮನಪ್ರಾದುರ್ಭಾವದಲ್ಲಿ ಶ್ರೀದಾಮಚರಿತವೆಂಬ
ಎಂಭತ್ತೆರಡನೆಯ ಅಧ್ಯಾಯವು ಮುಗಿದಿದೆ.

---

* ಇಲ್ಲಿ ಮುರಾರೀಶಂ ಎಂದು ಪಾಠವಿರಬೇಕು.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಹರನು ವಿಷ್ಣುವಿಗೆ ಏತಕ್ಕೆ ಚಕ್ರಾಯುಧವನ್ನು ಕೊಟ್ಟನೆಂಬ ನಾರದರ ಉಪಪ್ರಶ್ನೆಗೆ ಉತ್ತರವಾಗಿ ಪುಲಸ್ತ್ಯರು ಶ್ರೀದಾಮನೆಂಬ ಅಸುರನ ವೈಭವವನ್ನು ಹೇಳಿ ಅವನನ್ನು ನಾಶಮಾಡಲು ಪ್ರಯತ್ನಿಸಿದ ವಿಷ್ಣುವು ಶಂಕರನಲ್ಲಿ ಹೋಗಿ ತಪಸ್ಸಿನಿಂದ ಅವನನ್ನು ಸಂತೋಷಪಡಿಸಿ ಪ್ರಾರ್ಥಿಸಲು ಶಂಕರನು ಸರ್ವೋತ್ತಮವಾದ ಚಕ್ರಾಯುಧವನ್ನು ವಿಷ್ಣುವಿಗೆ ಕೊಟ್ಟನೆಂದೂ ವಿಷ್ಣುವು ಅದರ ಬಲವನ್ನು ಪರೀಕ್ಷಿಸಲು ಶಂಕರನ ಮೇಲೆಯೇ ಅವನ ಅನುಮತಿಯಿಂದ ಪ್ರಯೋಗಿಸಿದಾಗ ಶಂಕರನ ದೇಹವು ಮೂರು ಭಾಗವಾಗಿ ಕತ್ತರಿಸಲ್ಪಟ್ಟಿತೆಂದೂ ಆ ಭಾಗಗಳಿಗೆ ಹಿರಣ್ಯಾಕ್ಷ, ಸುವರ್ಣಾಕ್ಷ. ವಿಶ್ವರೂಪಾಕ್ಷರೆಂಬ ಹೆಸರು ಬಂದು ಅವೂ ಪೂಜ್ಯವಾದುವೆಂದೂ ಹೇಳಿ ಹರನ ಅನುಗ್ರಹದಿಂದ ಚಕ್ರವನ್ನು ಹೊಂದಿದ ವಿಷ್ಣುವು ಶ್ರೀದಾಮನನ್ನು ಸಂಹರಿಸಿದನೆಂದೂ ಪ್ರಕೃತವಿಷಯವನ್ನು ಉಪಪಾದಿಸಲು ಉಪಮನ್ಯುವಿನ ವೃತ್ತಾಂತವನ್ನೂ ಪ್ರಾಸಂಗಿಕವಾಗಿ ಸೇರಿಸಿರುತ್ತಾರೆ. (ಇಲ್ಲಿ ಚಕ್ರದಾನ ಪ್ರಸಂಗದಲ್ಲಿ ಹೇಳಲಾಗಿರುವ ಹರನ (ಕತ್ತರಿಸಲ್ಪಟ್ಟ) ದೇಹದ ಮೂರು ಭಾಗಗಳಲ್ಲಿ ವಿರೂಪಾಕ್ಷನೆಂಬ ಹೆಸರುಳ್ಳ ದೇಹಭಾಗವು ಸೇರಿರುವುದಿಲ್ಲ. ಆದುದರಿಂದ ಧರ್ಮಶೀಲೆಯು ಉಪಮನ್ಯುವಿಗೆ ಹೇಳಿದ ಸ್ವರೂಪಗಳಲ್ಲಿ ಇದನ್ನೂ ಸೇರಿಸಬೇಕಾದಲ್ಲಿ ಹಿಂದೆ ಹೇಳಿರುವ ಮೂರು ವಿಗ್ರಹಗಳಲ್ಲಿ ಇದರ ಪಾಠವೂ ಇರಬೇಕೆಂದು ತೋರುತ್ತದೆ. ಇಲ್ಲದಿದ್ದರೆ ಪ್ರಾಸಂಗಿಕವಾಗಿ ಬಂದ ಈ ಧರ್ಮಶೀಲೆಯ ಉಪದೇಶವೇ ಈ ಸ್ಥಲದಲ್ಲಿ ವ್ಯರ್ಥವಾದೀತು.)

॥ ಶ್ರೀಃ ॥

ಶ್ರೀವಾಮನಪುರಾಣಂ

ತ್ರ್ಯಶೀತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ತಸ್ಮಿಂಸ್ತೀರ್ಥವರೇ ಸ್ನಾತ್ವಾ ದೃಷ್ಟ್ವಾ ದೇವಂ ತ್ರಿಲೋಚನಂ ।
ಪೂಜಯಿತ್ವಾ ಸುವರ್ಣಾಕ್ಷಂ ನೈಮಿಷಂ ಪ್ರಾಯಯೌ ತತಃ ॥ ೧ ॥

ತತ್ರ ತೀರ್ಥಸಹಸ್ರಾಣಿ ತ್ರಿಂಶತ್ಪಾಪಹರಾಣಿ ಚ ।
ಗೋಮತ್ಯಾಃ ಕಾಂಚನಾಕ್ಷ್ಯಾಶ್ಚ ಶುಭದಾಯಾಶ್ಚ ಮಧ್ಯತಃ ॥ ೨ ॥

ತೇಷು ಸ್ನಾತ್ವಾಽರ್ಚ್ಯ ದೇವೇಶಂ ಪೀತವಾಸಸಮಚ್ಯುತಂ ।
ಋಷೀನಪಿ ಚ ಸಂಪೂಜ್ಯ ನೈಮಿಷಾರಣ್ಯವಾಸಿನಃ ॥ ೩ ॥

ದೇವದೇವಂ ತಥೇಶಾನಂ ಸಂಪೂಜ್ಯ ವಿಧಿನಾ ತತಃ ।
ಗಯಾಯಾಂ ಗೋಪತಿಂ ದ್ರಷ್ಟುಂ ಜಗಾಮ ಸ ಮಹಾಸುರಃ ॥ ೪ ॥

ಎಂಭತ್ತಮೂರನೆಯ ಅಧ್ಯಾಯ

೧-೪. ಪುಲಸ್ತ್ಯರು ಹೇಳುತ್ತಾರೆ, ಪ್ರಹ್ಲಾದನು ಆ ತೀರ್ಥದಲ್ಲಿ ಸ್ನಾನಮಾಡಿ ಅಲ್ಲಿ ನೆಲಸಿರುವ ಸುವರ್ಣಾಕ್ಷನೆಂಬ ತ್ರಿಲೋಚನನನ್ನು ಸೇವಿಸಿ ಯಥಾ ವಿಧಿಯಾಗಿ ಪೂಜಿಸಿ ಅನಂತರ ನೈಮಿಷಕ್ಷೇತ್ರಕ್ಕೆ ಹೊರಟನು. ಅಲ್ಲಿ ಗೋಮತಿ, ಕಾಂಚನಾಕ್ಷೀ, ಶುಭದಾ ಎಂಬ ಮಹಾನದಿಗಳ ಮಧ್ಯದಲ್ಲಿ ಸರ್ವಪಾಪನಾಶಕಗಳಾದ ಮೂವತ್ತು ಸಾವಿರ ತೀರ್ಥಗಳಿವೆ. ಆ ತೀರ್ಥಗಳಲ್ಲೆಲ್ಲಾ ಪ್ರಹ್ಲಾದನು ಸ್ನಾನಮಾಡಿ ಅಲ್ಲಿ ನೆಲಸಿರುವ ಪೀತವಾಸಸನೆಂಬ ಹರಿಯನ್ನು ಪೂಜಿಸಿ ನೈಮಿಷಾರಣ್ಯದಲ್ಲಿದ್ದ ಎಲ್ಲಾ ಋಷಿಗಳನ್ನೂ ಸೇವಿಸಿ, ಅಲ್ಲಿದ್ದ ಈಶ್ವರನನ್ನೂ ಯಥಾವಿಧಿಯಾಗಿ ಪೂಜಿಸಿ ಗಯೆಯಲ್ಲಿ ನೆಲಸಿರುವ ಗೋಪತಿಯನ್ನು ಸೇವಿಸಲು ಅಲ್ಲಿಂದ ಹೊರಟನು.

ಸ್ನಾತ್ವಾ ಬ್ರಹ್ಮತಡಾಗೇ ತು ಕೃತ್ವಾ ಚಾಸ್ಯ ಪ್ರದಕ್ಷಿಣಾಂ ।
ಪಿಂಡನಿರ್ವಪಣಂ ಪುಣ್ಯಂ ಪಿತೃಣಾಂ ಸ ಚಕಾರ ಹ ॥ ೫ ॥

ಉದಪಾನೆ ತಥಾ ಸ್ನಾತ್ವಾ ತತ್ರಾಭ್ಯರ್ಚ್ಯ ಪಿತೄನ್ ವಶೀ ।
ಗದಾಪಾಣಿಂ ಸಮಭ್ಯರ್ಚ್ಯ ಗೋಪತಿಂ ಚಾಪಿ ಶಂಕರಂ ॥ ೬ ॥

ಇಂದ್ರತೀರ್ಥೇ ತಥಾ ಸ್ನಾತ್ವಾ ಸಂತರ್ಪ್ಯ ಪಿತೃದೇವತಾಃ ।
ಮಹಾನದೀಜಲೆ ಸ್ನಾತ್ವಾ ಸರಯೂಂ ಚ ಜಗಾಮ ಸಃ ॥ ೭ ॥

ತಸ್ಯಾಂ ಸ್ನಾತ್ವಾ ಸಮಭ್ಯರ್ಚ್ಯ ಗೋಪ್ರತಾರಂ ಕುಶೇಶಯಂ ।
ಉಪೋಷ್ಯ ರಜನೀಮೇಕಾಂ ವಿನಯಾವನತೋ ಯಯೌ ॥ ೮ ॥

ಸ್ನಾತ್ವಾಚಾರ್ಚ್ಯ ರಜಸ್ತೀರ್ಥೇ ದತ್ವಾ ಪಿಂಡಂ ಪಿತೄಂಸ್ತಥಾ ।
ದರ್ಶನಾರ್ಥಂ ಯಯೌ ಶ್ರೀಮಾನಜಿತಂ ಪುರುಷೋತ್ತಮಂ ॥ ೯ ॥

ತಂ ದೃಷ್ಟ್ವಾ ಪುಂಡರೀಕಾಕ್ಷಮಕ್ಷರಂ ಪರಮಂ ಶುಚಿಃ ।
ಷಡ್ರಾತ್ರಂ ಸಮುಪೋಷ್ಯೈವ ಮಹೇಂದ್ರೇ ದಕ್ಷಿಣಂ ಯಯೌ ॥ ೧೦ ॥

೫-೮. ಅಲ್ಲಿ ಬ್ರಹ್ಮತಟಾಕ ತೀರ್ಥದಲ್ಲಿ ಸ್ನಾನಮಾಡಿ ಅದನ್ನು ಪ್ರದಕ್ಷಿಣ ಮಾಡಿ ಪಿತೃಗಳ ತೃಪ್ತಿಗಾಗಿ ಪಿಂಡಪ್ರದಾನವನ್ನೂ ಮಾಡಿದನು. ಹಾಗೆಯೇ ಉದ ಪಾನ ತೀರ್ಥದಲ್ಲೂ ಸ್ನಾನಮಾಡಿ ಅಲ್ಲಿಯೂ ಪಿತೃಗಳನ್ನು ಪೂಜಿಸಿ ಗದಾಪಾಣಿಯಾದ ನಾರಾಯಣನನ್ನೂ ಗೋಪತಿ ಎಂಬ ಶಂಕರನನ್ನೂ ಪೂಜಿಸಿ ಇಂದ್ರತೀರ್ಥದಲ್ಲೂ ಸ್ನಾನಮಾಡಿ ಪಿತೃಗಳನ್ನು ತರ್ಪಣದಿಂದ ತೃಪ್ತಿಪಡಿಸಿ ಪುನಃ ಮಹಾನದಿಯಲ್ಲಿ ಸ್ನಾನ ಮಾಡಿ ಸರಯೂ ನದಿಗೆ ಹೊರಟನು. ಅಲ್ಲಿಯೂ ಸ್ನಾನಮಾಡಿ ಗೋಪ್ರತಾರನೆಂಬ ಕುಶೇಶಯ ಸ್ವಾಮಿಯನ್ನು ಪೂಜಿಸಿ ಒಂದು ರಾತ್ರಿ ಉಪವಾಸವಿದ್ದು ಭಕ್ತಿವಿನಯ ಗಳಿಂದ ಕೂಡಿ ಮುಂದೆ ಹೊರಟನು.

೯-೧೧. ರಜಸ್ತೀರ್ಥದಲ್ಲಿಯೂ ಸ್ನಾನಮಾಡಿ ಪೂಜಾದಿಗಳನ್ನು ನೆರವೇರಿಸಿ ಪಿತೃಗಳನ್ನೂ ಪಿಂಡಪ್ರದಾನದಿಂದ ತೃಪ್ತಿಪಡಿಸಿ ಅಜಿತನೆಂಬ ಪುರಷೋತ್ತಮನ ದರ್ಶನಕ್ಕಾಗಿ ಹೊರಟನು. ಅಲ್ಲಿಯೂ ಶುಚಿಯಾಗಿದ್ದು ಶಾಶ್ವತನಾಗಿಯೂ ಪರಮ ಪುರುಷನಾಗಿಯೂ ಇರುವ ಪುಂಡರೀಕಾಕ್ಷನನ್ನು ದರ್ಶನಮಾಡಿ ಅಲ್ಲಿಯೇ ಆರುರಾತ್ರಿ

ತತ್ರ ದೇವವರಂ ಶುಭ್ರಮರ್ಧನಾರೀಧರಂ ಹರಂ ।
ದೃಷ್ಟ್ವಾ ಚ ಸಂಪೂಜ್ಯ ಪಿತೄನ್ ಮಹೇಂದ್ರೇ ಚೋತ್ತರಂ ಗತಃ ॥ ೧೧ ॥

ತತ್ರ ದೇವವರಂ ಶಂಭುಂ ಗೋಪಾಲಂ ಸೋಮಪೀಡಿತಂ ।
ದೃಷ್ಟ್ವಾ ಸ್ನಾತ್ವಾ ಸೋಮತೀರ್ಥೇ ಸಹ್ಯಾಚಲಮುಪಾಗತಃ ॥ ೧೨ ॥

ತತ್ರ ಸ್ನಾತ್ವಾ ಮಹೋದಕ್ಯಾಂ ವೈಕುಂಠಂ ಚಾರ್ಚ್ಯ ಭಕ್ತಿತಃ ।
ಸುರಾನ್ ಪಿತ್ವಾಂಶ್ಚ ಸಂತರ್ಪ್ಯ ಪಾರಿಯಾತ್ರಂ ಗಿರಿಂ ಗತಃ ॥ ೧೩ ॥

ತತ್ರ ಸ್ನಾತ್ವಾ ಲಾಂಗಲಿನ್ಯಾಂ ಪೂಜಯಿತ್ವಾ ಪರಾಜಿತಂ ।
ಕಶೇರುದೇಶಂ ಚಾಭ್ಯೇತ್ಯ ವಿಶ್ವರೂಪಂ ದದರ್ಶ ಸಃ ॥ ೧೪ ॥

ಯತ್ರ ದೇವವರಃ ಶಂಭುರ್ಗಣಾನಾಂ ತು ಸುಪೂಜಿತಃ ।
ವಿಶ್ವರೂಪಮಥಾತ್ಮಾನಂ ದರ್ಶಯಾಮಾಸ ಯೋಗವಿತ್ ॥ ೧೫ ॥

ಉಪವಾಸವಿದ್ದು ಮಹೇಂದ್ರದ ದಕ್ಷಿಣಭಾಗಕ್ಕೆ ಹೊರಟನು. ಅಲ್ಲಿಯೂ ಧವಲ ಮೂರ್ತಿಯೂ ಅರ್ಧನಾರೀಧರನೂ ಆಗಿರುವ ದೇವತಾಶ್ರೇಷ್ಠನಾದ ಹರನನ್ನು ದರ್ಶನಮಾಡಿ ಪಿತೃಗಳನ್ನೂ ತೃಪ್ತಿಪಡಿಸಿ ಮಹೇಂದ್ರದ ಉತ್ತರಭಾಗಕ್ಕೆ ಹೊರಟನು.

೧೨-೧೫. ಅಲ್ಲಿ ಪಶುಪತಿರೂಪನಾಗಿಯೂ ಚಂದ್ರಶೇಖರನಾಗಿಯೂ ಇರುವ ಶಂಕರನನ್ನು ದರ್ಶನಮಾಡಿ ಸೋಮತೀರ್ಥದಲ್ಲಿ ಸ್ನಾನಮಾಡಿ ಅಲ್ಲಿಂದ ಸಹ್ಯಾದ್ರಿಗೆ ಹೊರಟನು. ಅಲ್ಲಿ ಮಹೋದಕಿಯ ತೀರ್ಥದಲ್ಲಿ ಸ್ನಾನಮಾಡಿ ವೈಕುಂಠನನ್ನು ಭಕ್ತಿಯಿಂದ ಪೂಜಿಸಿ ದೇವತೆಗಳನ್ನೂ ಪಿತೃಗಳನ್ನೂ ತೃಪ್ತಿಪಡಿಸಿ ಪಾರಿಯಾತ್ರವೆಂಬ ಪರ್ವತಕ್ಕೆ ಹೊರಟನು, ಅಲ್ಲಿಯೂ ಲಾಂಗಲಿನೀ ನದಿಯಲ್ಲಿ ಸ್ನಾನಮಾಡಿ ಅಪ ರಾಜಿತಮೂರ್ತಿಯನ್ನು ಪೂಜಿಸಿ ಅಲ್ಲಿಂದ ಕಶೇರುದೇಶಕ್ಕೆ ಹೋಗಿ ವಿಶ್ವರೂಪನನ್ನು ದರ್ಶನಮಾಡಿದನು. ಅಲ್ಲಿಯೇ ದೇವತೋತ್ತಮನಾದ ಶಂಭುವು ಗಣಗಳಿಂದ ಪೂಜಿಸಲ್ಪಟ್ಟು ಯೋಗಬಲದಿಂದ ತನ್ನ ವಿಶ್ವರೂಪವನ್ನು ಹಿಂದೆ ತೋರ್ಪಡಿಸಿದ್ದನು.

ತತ್ರ ಮಂಕಣಿಕಾತೋಯೆ ಸ್ನಾತ್ವಾಭ್ಯರ್ಚ್ಯ ಮಹೇಶ್ವರಂ ।
ಜಗಾಮ ನಿತ್ಯಸೌಗಂಧಂ ಪ್ರಹ್ಲಾದೋ ಮಲಯಾಚಲಂ ॥ ೧೬ ॥

ಮಹಾಹ್ರದೆ ತತಃ ಸ್ನಾತ್ವಾ ಪೂಜಯಿತ್ವಾ ಚ ಶಂಕರಂ ।
ತತೋ ಜಗಾಮ ಯೋಗಾತ್ಮಾ ದ್ರಷ್ಟುಂ ವಿಂಧ್ಯೇ ಸದಾಶಿವಂ ॥ ೧೭ ॥

ತತೋ ವಿಪಾಶಾಸಲಿಲೆ ಸ್ನಾತ್ವಾಭ್ಯರ್ಚ್ಯ ಸದಾಶಿವಂ ।
ತ್ರಿರಾತ್ರಂ ಸಮುಪೋಷ್ಯಾಥ ಅವಂತೀಂ ನಗರೀಂ ಯಯೌ ॥ ೧೮ ॥

ತತ್ರ ಕ್ಷಿಪ್ರಾಜಲೆ ಸ್ನಾತ್ವಾ ವಿಷ್ಣುಂ ಸಂಪೂಜ್ಯ ಭಕ್ತಿತಃ ।
ಶ್ಮಶಾನಸ್ಥಂ ಜಗಾಮಾಥ ಮಹಾಕಾಲವಪುರ್ಧರಂ ॥ ೧೯ ॥

ತಸ್ಮಿನ್ ಸ ಸರ್ವಭೂತಾನಾಂ ತೇನ ರೂಪೇಣ ಶಂಕರಃ ।
ತಾಮಸಂ ರೂಪಮಾಸ್ಥಾಯ ಸಂಹಾರಂ ಕುರುತೇ ವಶೀ ॥ ೨೦ ॥

ತತ್ರಸ್ಥೇನ ಸುರೇಶೇನ ಶ್ವೇತಕಿರ್ನಾಮ ಭೂಪತಿಃ ।
ರಕ್ಷಿತಸ್ತ್ವಂತಕಂ ದಗ್ಧ್ವಾ ಸರ್ವಭೂತಾಪಹಾರಿಣಂ ॥ ೨೧ ॥

೧೬-೨೦. ಅಲ್ಲಿ ಮಂಕಣಿಕಾ ನದಿಯಲ್ಲಿ ಸ್ನಾನಮಾಡಿ ಮಹೇಶ್ವರನನ್ನು ಪೂಜಿಸಿ ಪ್ರಹ್ಲಾದನು ಅಲ್ಲಿಂದ ನಿತ್ಯಸುಗಂಧಿಯಾಗಿರುವ ಮಲಯ ಪರ್ವತಕ್ಕೆ ಹೊರಟನು, ಅಲ್ಲಿಯೂ ಮಹಾಹ್ರದದಲ್ಲಿ ಸ್ನಾನಮಾಡಿ ಶಂಕರನನ್ನು ಪೂಜಿಸಿ ವಿಂಧ್ಯಪರ್ವತದಲ್ಲಿರುವ ಸದಾಶಿವನ ದರ್ಶನಕ್ಕಾಗಿ ಹೊರಟನು. ಅಲ್ಲಿಯೂ ವಿಪಾಶಾ ನದಿಯಲ್ಲಿ ಸ್ನಾನಮಾಡಿ ಸದಾಶಿವನನ್ನು ಪೂಜಿಸಿ ಮೂರುರಾತ್ರಿ ಉಪವಾಸವಿದ್ದು ಅಲ್ಲಿಂದ ಅವಂತೀ ನಗರಿಗೆ ಹೊರಟನು. ಅಲ್ಲಿಯೂ ಕ್ಷಿಪ್ರಾನದಿಯಲ್ಲಿ ಸ್ನಾನಮಾಡಿ ಭಕ್ತಿಯಿಂದ ವಿಷ್ಣುವನ್ನು ಪೂಜಿಸಿ ಶ್ಮಶಾನದಲ್ಲಿರುವ ಮಹಾಕಾಲರೂಪಿಯಾದ ಶಂಕರನನ್ನು ನೋಡಲು ಹೊರಟನು, ಅಲ್ಲಿ ಶಂಕರನು ತಾಮಸರೂಪವನ್ನು ಹೊಂದಿ ಸರ್ವಪ್ರಾಣಿಗಳ ಸಂಹಾರಕ್ಕಾಗಿ ನೆಲಸಿರುವರು.

೨೧-೨೪. ಅಲ್ಲಿ ನೆಲಸಿರುವ ಮಹಾಕಾಲರೂಪಿಯಾದ ಶಂಕರನು ಸರ್ವಪ್ರಾಣಿ ನಾಶಕನಾದ ಯಮನನ್ನೂ ನೇತ್ರಾಗ್ನಿಯಿಂದ ದಹಿಸಿ ಶ್ವೇತಕಿಯೆಂಬ ಭಕ್ತನಾದ

ತತ್ರಾಪ್ರತಿಹೃಷ್ಟೋ ವಸತಿ ನಿತ್ಯಂ ವೈ ಸರ್ವದಾ ಭವಃ ।
ವೃತಃ ಪ್ರಮಥಕೋಟೀಭಿಸ್ತ್ರಿದಶಾರ್ಚಿತವಿಗ್ರಹಃ ॥ ೨೨ ॥

ತಂ ದೃಷ್ಟ್ವಾಥ ಮಹಾಕಾಲಂ ಕಾಲಕಾಲಾಂತಕಾಂತಕಂ ।
ಯಮಸಂಯಮನಂ ಮೃತ್ಯೋರ್ಮೃತ್ಯುಂ ಚಿತ್ರವಿಚಿತ್ರಕಂ ॥ ೨೩ ॥

ಶ್ಮಶಾನನಿಲಯಂ ಶಂಭುಂ ಭೂತನಾಥಂ ಜಗತ್ಪತಿಂ ।
ಪೂಜಯಿತ್ವಾ ಶೂಲಧರಂ ಜಗಾಮ ನಿಷದಾನ್ಪ್ರತಿ ॥ ೨೪ ॥

ತತ್ರಾಮರೇಶ್ವರಂ ದೇವಂ ದೃಷ್ಟ್ವಾ ಸಂಪೂಜ್ಯ ಭಕ್ತಿತಃ ।
ಮಹೋದಯಂ ಸಮಭ್ಯೇತ್ಯ ಹಯಗ್ರೀವಂ ದದರ್ಶ ಸಃ ॥ ೨೫ ॥

ಅಶ್ವತೀರ್ಥೇ ತತಃ ಸ್ನಾತ್ವಾ ದೃಷ್ಟ್ವಾ ಚ ತುರಗಾನನಂ ।
ಶ್ರೀಧರಂ ಚ ವಿಭುಂ ಪೂಜ್ಯ ಪಾಂಚಾಲವಿಷಯಂ ಯಯೌ ॥ ೨೬ ॥

ತತ್ರೇಶ್ವರಗಣೈರ್ಯುಕ್ತಂ ಪುತ್ರಮರ್ಥಪತೇರಥ ।
ಪಾಂಚಾಲಿಕಂ ವಶೀ ದೃಷ್ಟ್ವಾ ಪ್ರಯಾಗಂ ಪ್ರಯತೋ ಯಯೌ ॥ ೨೭ ॥

ಧೊರೆಯನ್ನು ರಕ್ಷಿಸಿದನು. ಆ ಸ್ಥಲದಲ್ಲಿ ಹರನು ನಿತ್ಯವೂ ಸಂತುಷ್ಟನಾಗಿ ಅನೇಕ ಕೋಟಿ ಪ್ರಮಥ ಗಣಗಳಿಂದ ಕೂಡಿ ದೇವತೆಗಳಿಂದಲೂ ಪೂಜಿಸಲ್ಪಡುತ್ತಾ ಸರ್ವ ಕಾಲದಲ್ಲಿಯೂ ವಾಸಿಸುತ್ತಿರುವನು. ಕಾಲ ಮತ್ತು ಕಾಲನಾಶಕ ಇವರುಗಳಿಗೂ ಅಂತಕನಾಗಿ ಅಲ್ಲಿ ನೆಲಸಿರುವ ಮಹಾಕಾಲನನ್ನು ಸೇವಿಸಿ ಯಮನಿಗೂ ನಾಶಕನಾಗಿಯೂ, ಮೃತ್ಯುವಿಗೂ ಮೃತ್ಯುಪ್ರದನಾಗಿಯೂ ಚಿತ್ರವಿಚಿತ್ರವಾದ ಮಹಾತ್ಮ್ಯವುಳ್ಳ ಮತ್ತು ಶ್ಮಶಾನವಾಸಿಯಾಗಿಯೂ, ಜಗತ್ಪತಿಯಾಗಿಯೂ, ಶೂಲಧಾರಿಯಾಗಿಯೂ ಇರುವ ಆ ಶಂಭುವನ್ನು ಪೂಜಿಸಿ ಅಲ್ಲಿಂದ ನಿಷಧ ದೇಶಕ್ಕೆ ನಡೆದನು.

೨೫-೨೮. ಅಲ್ಲಿ ಪ್ರಭುವಾದ ಅಮರೇಶ್ವರನನ್ನು ಸೇವಿಸಿ ಭಕ್ತಿಯಿಂದ ಪೂಜಿಸಿ ಮಹೋದಯ ಕ್ಷೇತ್ರಕ್ಕೆ ಬಂದು ಅಲ್ಲಿ ಹಯಗ್ರೀವನನ್ನೂ ದರ್ಶನಮಾಡಿದನು. ಅಶ್ವತೀರ್ಥದಲ್ಲಿ ಸ್ನಾನಮಾಡಿ ಹಯಮುಖನನ್ನೂ ಶ್ರೀಧರ ಮೂರ್ತಿಯನ್ನೂ ಪೂಜಿಸಿ ಅಲ್ಲಿಂದ ಪಾಂಚಾಲದೇಶಕ್ಕೆ ಬಂದನು. ಅಲ್ಲಿ ಈಶ್ವರನ ಗಣಗಳಿಂದ ಕೂಡಿ ನೆಲಸಿರುವ ಕುಬೇರ ಪುತ್ರನಾದ ಪಾಂಚಾಲಕನನ್ನೂ ದರ್ಶನಮಾಡಿ ಪರಿಶುದ್ಧನಾಗಿ ಪ್ರಯಾಗಕ್ಕೆ ನಡೆದನು. ಪ್ರಯಾಗದಲ್ಲಿಯೂ ಲೋಕಪ್ರಸಿದ್ಧವಾಗಿಯೂ, ಮಂಗಲ

ಪ್ರಯಾಗೆ ಶುಭದೆ ತೀರ್ಥೆ ಯಾಮುನೆ ಲೋಕವಿಶ್ರುತೆ ।
ದೃಷ್ಟ್ವಾ ವಟೇಶ್ವರಂ ರುದ್ರಂ ಮಾಧವಂ ಯೋಗಶಾಯಿನಂ ॥ ೨೮ ॥

ದ್ವಾವೇವ ಭಕ್ತಿಸಂಪೂಜ್ಯೌ ಪೂಜಯಿತ್ವಾ ಮಹಾಸುರಃ ।
ಮಾಘಮಾಸಮಥೋಪೋಷ್ಯ ತತೋ ವಾರಾಣಸೀಂ ಗತಃ ॥ ೨೯ ॥

ಸಮಾಸಾದ್ಯ ಚ ತಾಂ ಪುಣ್ಯಾಂ ತೀರ್ಥೇಷು ಚ ಪೃಥಕ್ಪೃಥಕ್ ।
ಸರ್ವಪಾಪಹರಾಹ್ಯೇಷಾ ಸ್ನಾತ್ವಾರ್ಚ್ಯ ಪಿತೃದೇವತಾಃ ॥ ೩೦ ॥

ಪ್ರದಕ್ಷಿಣೀಕೃತ್ಯ ಪುರೀಂ ಸಂಪೂಜ್ಯಾಮುಕ್ತಕೇಶವೌ ।
ಲೋಲಂ ದಿವಾಕರಂ ದೃಷ್ಟ್ವಾ ತತೋ ಮಧುವನಂ ಯಯೌ ॥ ೩೧ ॥

ತತ್ರ ಸ್ವಾಯಂಭುವಂ ದೇವಂ ದದರ್ಶಾಸುರಸತ್ತಮಃ ।
ತಮಭ್ಯರ್ಚ್ಯ ಮಹಾತೇಜಾಃ ಪುಷ್ಕರಾರಣ್ಯಮಾಗಮತ್ ॥
ತೇಷು ತ್ರಿಷ್ವಪಿತೀರ್ಥೇಷು ಸ್ನಾತ್ವಾರ್ಚ್ಯ ಪಿತೃದೇವತಾಃ ॥ ೩೨ ॥

ಪ್ರದವಾಗಿಯೂ ಇರುವ ಯಾಮುನ ತೀರ್ಥದಲ್ಲಿ ನೆಲಸಿರುವ ವಟೇಶ್ವರನೆಂಬ ಶಂಕರನನ್ನೂ ಯೋಗಶಾಯಿಯಾದ ನಾರಾಯಣನನ್ನೂ

೨೯-೩೧. ಇಬ್ಬರೂ ಸಹ ಭಕ್ತಿಯಿಂದ ಪೂಜನೀಯರೆಂದು ತಿಳಿದು ಅವರಿಬ್ಬರನ್ನೂ ಪೂಜಿಸಿ ಆ ಪ್ರಹ್ಲಾದನು ಮಾಘಮಾಸವೆಲ್ಲವೂ ಉಪವಾಸದಿಂದಿದ್ದು ಅಲ್ಲಿಂದ ವಾರಾಣಸೀ ನಗರಕ್ಕೆ ಹೊರಟನು. ಪುಣ್ಯಕರವಾದ ವಾರಾಣಸಿಯನ್ನು ಹೊಂದಿ ಅದು ಸರ್ವಪಾಪನಾಶಕವೆಂದು ತಿಳಿದು ಅಲ್ಲಿನ ಬೇರೆ ಬೇರೆಯಾಗಿರುವ ತೀರ್ಥಗಳಲ್ಲಿ ಸ್ನಾನಮಾಡಿ ಪಿತೃದೇವತೆಗಳನ್ನು ತೃಪ್ತಿಪಡಿಸಿ ನಗರವನ್ನೂ ಪ್ರದಕ್ಷಿಣಮಾಡಿ ಅಲ್ಲಿರುವ ಅಮುಕ್ತ ಮತ್ತು ಕೇಶವಸ್ವಾಮಿಗಳನ್ನೂ ಪೂಜಿಸಿ ಲೋಲನಾಮಕನಾದ ಸೂರ್ಯನನ್ನೂ ನೋಡಿ ಅಲ್ಲಿಂದ ಮಧುವನಕ್ಕೆ ಹೊರಟನು.

೩೨-೩೩. ಅಲ್ಲಿಯೂ ಪ್ರಹ್ಲಾದನು ಸ್ವಾಯಂಭುವದೇವನನ್ನು ದರ್ಶನಮಾಡಿ ಅವನನ್ನು ಪೂಜಿಸಿ ಅಲ್ಲಿಂದ ಪುಷ್ಕರಾರಣ್ಯಕ್ಕೆ ನಡೆದನು. ಅಲ್ಲಿರುವ ಮೂರು ತೀರ್ಥಗಳಲ್ಲಿಯೂ ಸ್ನಾನಮಾಡಿ ಪಿತೃದೇವತೆಗಳನ್ನೂ ತೃಪ್ತಿಪಡಿಸಿದನು. ಪವಿತ್ರವಾದ

ಏತತ್ಪವಿತ್ರಂ ಪರಮಂ ಪುರಾಣಂ
ಪ್ರೋಕ್ತಂ ತ್ವಗಸ್ತ್ಯೇನ ಮಹರ್ಷಿಣಾ ಚ ।
ಧನ್ಯಂ ಯಶಸ್ಯಂ ಬಹುಪಾಪನಾಶನಂ
ಸಂಕೀರ್ತನಾಚ್ಛ್ರವಣಾತ್ಸಂಸ್ಮೃತೇಶ್ಚ ॥ ೩೩ ॥

ಇತಿ ಶ್ರೀ ವಾಮನಪುರಾಣೆ ಪ್ರಹ್ಲಾದ ತೀರ್ಥಯಾತ್ರಾನಾಮ
ತ್ರ್ಯಶೀತಿತಮೋಽಧ್ಯಾಯಃ

ಈ ಪ್ರಹ್ಲಾದ ತೀರ್ಥಯಾತ್ರೆಯ ಉಪಾಖ್ಯಾನವು ಮಹರ್ಷಿಗಳಾದ ಅಗಸ್ತ್ಯರಿಂದ ಹೇಳಲ್ಪಟ್ಟಿತು. ಇದರ ಕೀರ್ತನವೂ ಶ್ರವಣವೂ. ಸ್ಮರಣವೂ ಕೂಡ ಪುಣ್ಯಕರವಾಗಿಯೂ ಯಶಸ್ಕರವಾಗಿಯೂ ಪಾಪನಾಶಕವಾಗಿಯೂ ಆಗುತ್ತದೆ.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಪ್ರಹ್ಲಾದನ ತೀರ್ಥಯಾತ್ರೆಯೊಂಬ
ಎಂಭತ್ತಮೂರನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ಪ್ರಹ್ಲಾದನ ತೀರ್ಥಯಾತ್ರೆಯನ್ನೇ ಮುಂದುವರಿಸಲಾಗಿದೆ.

॥ ಶ್ರೀಃ ॥

ಶ್ರೀ ವಾಮನ ಪುರಾಣಂ

ಚತುರಶೀತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಗತೇ ಚ ತೀರ್ಥಯಾತ್ರಾಯಾಂ ಪ್ರಹ್ಲಾದೇ ದಾನವೇಶ್ವರೇ ।
ಕುರುಕ್ಷೇತ್ರಂ ಸಮಭ್ಯಾಗಾದ್ದ್ರಷ್ಟುಂ ವೈರೋಚನೋ ಮುನೇ ॥ ೧ ॥

ತಸ್ಮಿನ್ಮಹಾಧರ್ಮಯುತೇ ತೀರ್ಥೇ ಬ್ರಾಹ್ಮಣಪುಂಗವಃ ।
ಶುಕ್ರೋ ದ್ವಿಜಾತಿಪ್ರವರಾನಾಮಂತ್ರಯತ ಭಾರ್ಗವಃ ॥ ೨ ॥

ಭೃಗುಣಾಽಮಂತ್ರ್ಯಮಾಣಾಸ್ತೇ ಶ್ರುತ್ವಾಽತ್ರೇಯಸಗೌತಮಾಃ ।
ಕೌಶಿಕಾಂಗಿರಸಶ್ಚೈವ ತತ್ವಜ್ಞಾಃ ಕುರುಜಾಂಗಲಂ ॥ ೩ ॥

ಉತ್ತರಾಶಾಂ ಪ್ರಜಗ್ಮುಸ್ತೇ ನದೀಮನು ಶತದ್ರವೀಂ ।
ಶಾತದ್ರವೇ ಜಲೇ ಸ್ನಾತ್ವಾ ವಿಪಾಸಂ ಪ್ರಯಯುಸ್ತತಃ ॥ ೪ ॥

ಎಂಭತ್ತನಾಲ್ಕನೆಯ ಅಧ್ಯಾಯವು

೧-೨. ದಾನವರಾಜನಾದ ಪ್ರಹ್ಲಾದನು ತೀರ್ಥಯಾತ್ರೆಗೆ ಹೊರಟನಂತರ ವಿರೋಚನ ಪುತ್ರನಾದ ಬಲಿಯು ಕುರುಕ್ಷೇತ್ರವನ್ನು ನೋಡಲು ಬಂದನು. ಆಗ ಮಹಾಧರ್ಮಸಂಪಾದಕವಾದ ಆ ತೀರ್ಥದಲ್ಲಿ ಬ್ರಾಹ್ಮಣೋತ್ತಮನಾದ ಶುಕ್ರಾಚಾರ್ಯನು ಅನೇಕ ಬ್ರಾಹ್ಮಣೋತ್ತಮರನ್ನು ಆಹ್ವಾನಿಸಿದ್ದನು.

೩-೪. ಶುಕ್ರಾಚಾರ್ಯನಿಂದ ಕರೆಯಲ್ಪಟ್ಟ ಆತ್ರೇಯ, ಗೌತಮ, ಕೌಶಿಕ, ಆಂಗಿರಸ ವಂಶಸ್ಥರಾದ ತತ್ವಜ್ಞರಾದ ಬ್ರಾಹ್ಮಣರೆಲ್ಲರೂ ಈ ಆಹ್ವಾನವನ್ನು ಕೇಳಿ ಉತ್ತರದಿಕ್ಕಿನಿಂದ ಶತದ್ರವೀನದಿಯನ್ನನುಸರಿಸಿ ಕುರುಜಾಂಲಗದೇಶಕ್ಕೆ ಹೊರಟರು. ಅಲ್ಲಿ ಶತದ್ರವೀ ನದಿಯಲ್ಲಿ ಸ್ನಾನಮಾಡಿ ವಿಪಾಸವೆಂಬ ಕ್ಷೇತ್ರಕ್ಕೆ ಹೊರಟರು.

ವಿಜ್ಞಾಯ ತತ್ರಾsಸ್ಯ ರತಿಂ ಸ್ನಾತ್ವಾsರ್ಚ್ಯ ಪಿತೃದೇವತಾಃ ।
ತತೋsಪಿ ಕಿರಣಾಂ ಪುಣ್ಯಾಂ ದಿನೇಶಕಿರಣಚ್ಯುತಾಂ ॥ ೫ ॥

ತಸ್ಯಾಂ ಸ್ನಾತ್ವಾ ಚ ದೇವರ್ಷೇ ಸರ್ವ ಏವ ಮಹರ್ಷಯಃ ।
ಸುಪುಣ್ಯೋದಾಂ ವೇಗವತೀಂ ಸ್ನಾತ್ವಾ ಜಗ್ಮುರಥೇಶ್ವರೀಂ ॥ ೬ ॥

ದೇವಿಕಾಯಾ ಜಲೇ ಸ್ನಾತ್ವಾ ಪಯೋಷ್ಣ್ಯಾಂ ಚ ತಾಪಸಾಃ ।
ಅವತೀರ್ಣಾ ಮುನೇ ಸ್ನಾತುಂ ಮಾಧವಾದ್ಯಾಃ ಸುಭಾನವೀಂ ॥ ೭ ॥

ತತೋ ನಿಮಗ್ನಾ ದದೃಶುಃ ಪ್ರತಿಬಿಂಬಮಥಾsತ್ಮನಃ ।
ಅಂತರ್ಜಲೇ ದ್ವಿಜಶ್ರೇಷ್ಠ ಮಹದಾಶ್ಚರ್ಯಕಾರಕಂ ॥ ೮ ॥

ಉನ್ಮಜ್ಜಂತಶ್ಚ ದದೃಶುಃ ಪುನರ್ವಿಸ್ಮಿತಮಾನಸಾಃ ।
ತತಃ ಸ್ನಾತ್ವಾ ಸಮುತ್ತೀರ್ಣಾ ಋಷಯಃ ಸರ್ವ ಏವ ಹಿ ॥ ೯ ॥

ಪುಷ್ಕರಾಕ್ಷಮಯೋಗಂಧಿಂ ಬ್ರಹ್ಮಾಣಂ ಚಾಪ ಪೂಜಯನ್ ।
ತತೋ ಭೂಯಃ ಸರಸ್ವತ್ಯಾಸ್ತೀರ್ಥೇ ತ್ರೈಲೋಕ್ಯವಿಶ್ರುತೇ ॥ ೧೦ ॥

೫-೬. ಅದು ಶುಕ್ರನಿಗೆ ಪ್ರೀತಿಪಾತ್ರವೆಂದು ತಿಳಿದು ಅಲ್ಲಿ ಸ್ನಾನಮಾಡಿ ಪಿತೃದೇವತೆಗಳನ್ನು ಪೂಜಿಸಿ ಅಲ್ಲಿಂದ ಸೂರ್ಯಕಿರಣಗಳಿಂದ ಉತ್ಪನ್ನವಾದ ಪುಣ್ಯಕರವಾದ ಕಿರಣಾನದಿಯನ್ನು ಹೊಂದಿ ಆ ಋಷಿಗಳೆಲ್ಲರೂ ಅಲ್ಲಿಯೂ ಸ್ನಾನಮಾಡಿ ಅನಂತರ ದೇವಿಕಾನದಿಗೆ ಹೊರಟರು.

೭-೮. ಅನಂತರ ಆ ದೇವಿಕಾನದಿಯಲ್ಲಿಯೂ ಸ್ನಾನಮಾಡಿ ಆ ತಾಪಸರು ಪಯೋಷ್ಣಿಯಲ್ಲಿಯೂ ಸ್ನಾನಮಾಡಿ ಅಲ್ಲಿಂದ ಭಾನವೀನದಿಗೆ ಹೋಗಿ ಎಲ್ಲರೂ ಅಲ್ಲಿ ಸ್ನಾನಕ್ಕಾಗಿ ಇಳಿದರು. ಸ್ನಾನಮಾಡುವಾಗ ನೀರಿನಲ್ಲಿ ಮುಳುಗಿದ ಆ ತಾಪಸರು ನೀರಿನೊಳಗೆ ಆಶ್ಚರ್ಯಕರವಾದ ತಮ್ಮ ಪ್ರತಿಬಿಂಬವನ್ನು ನೋಡಿದರು.

೯-೧೦. ಅವರು ನೀರಿನಿಂದ ಮೇಲಕ್ಕೆ ಎದ್ದಮೇಲೂ ಆ ಪ್ರತಿಬಿಂಬವನ್ನು ನೋಡಿ ಆಶ್ಚರ್ಯಚಕಿತರಾಗಿ ಪುನಃ ಸ್ನಾನಮಾಡಿ ಎಲ್ಲರೂ ಮೇಲಕ್ಕೆ ಬಂದು. ಅಲ್ಲಿ ಪ್ರತಿಷ್ಠಿತರಾಗಿದ್ದ ಪುಷ್ಕರಾಕ್ಷ, ಅಯೋಗಂಧಿ ಮತ್ತು ಬ್ರಹ್ಮ ಇವರನ್ನೆಲ್ಲಾ ಪೂಜಿಸಿದರು. ಅನಂತರ ಅವರು ಪುನಃ ಲೋಕವಿಖ್ಯಾತವಾದ ಸರಸ್ವತೀನದಿಯ ಕೋಟಿತೀರ್ಥವೆಂಬ ತೀರ್ಥದಲ್ಲಿ ವೃಷಭಧ್ವಜನಾದ ಶಂಕರನನ್ನು ನೋಡಿದರು.

ಕೋಟಿತೀರ್ಥೇ ರುದ್ರಕೋಟಿಂ ದದೃಶುಃ ವೃಷಭಧ್ವಜಂ ।
ನೈಮಿಷೇಯಾ ದ್ವಿಜವರಾ ಮಾಗಧೇಯಾಃ ಸಸೈಂಧವಾಃ ॥ ೧೧ ॥

ಧರ್ಮಾರಣ್ಯಾಃ ಪುಷ್ಕರೇಯಾ ದಂಡಕಾರಣ್ಯಕಾಸ್ತಥಾ ।
ಚಾಂಪೇಯಾಸ್ತಾರಕಚ್ಛೇಯಾ ದೇವಿಕಾತೀರ್ಥಕಾಶ್ಚ ಯೇ ॥ ೧೨ ॥

ತೇ ತತ್ರ ಶಂಕರಂ ದ್ರಷ್ಟುಂ ಸಮಾಯಾತಾ ದ್ವಿಜಾತಯಃ ।
ಕೋಟಿಸಂಖ್ಯಾಸ್ತಪಸ್ಸಿದ್ಧಾ ಹರದರ್ಶನಲಾಲಸಾಃ ॥ ೧೩ ॥

ಅಹಂಪೂರ್ವಮಹಂಪೂರ್ವಮಿತ್ಯೇವಂ ವಾದಿನೋ ಮುನೇ ।
ತಾನಾಕುಲಾನ್ಹರೋ ದೃಷ್ಟ್ವಾ ಮಹರ್ಷೀನ್ದಗ್ಧಕಿಲ್ಬಿಷಾನ್ ॥ ೧೪ ॥

ತೇಷಾಮೇವಾನುಕಂಪಾರ್ಥಂ ಕೋಟಿಮೂರ್ತಿರಭೂಚ್ಛಿವಃ ।
ತತಸ್ತೇ ಮುನಯಃ ಪ್ರೀತಾಃ ಸರ್ವ ಏವ ಮಹೇಶ್ವರಂ ॥ ೧೫ ॥

ಸಂಪೂಜಯಂತಸ್ತೇ ತಸ್ಥುಸ್ತೀರ್ಥಂ ಕೃತ್ವಾ ಪಥಕ್ಪೃಥಕ್ ।
ಇತ್ಯೇವಂ ರುದ್ರಕೋಟೇರ್ಭಿರ್ನಾಮ ಶಂಭೋರಜಾಯತ ॥ ೧೬ ॥

೧೧-೧೩. ಆ ಸಮಯದಲ್ಲಿ ಹರನನ್ನು ನೋಡುವ ಉತ್ಕಂಠೆಯಿಂದ ನೈಮಿಷೇಯರು ಮಗಧ ದೇಶದವರು, ಸೈಂಧವ ದೇಶದವರು, ಧರ್ಮಾರಣ್ಯರು, ಪುಷ್ಕರದವರು, ದಂಡಕಾರಣ್ಯದವರು, ಚಾಂಪೇಯರು, ತಾರಕಚ್ಛವೆಂಬ ದೇಶದವರು, ದೇವಿಕಾ ಮತ್ತು ತೀರ್ಥಕ ದೇಶದವರು ಮೊದಲಾದ ಬ್ರಾಹ್ಮಣೋತ್ತಮರೂ ಕೋಟಿ ಕೋಟಿ ಸಂಖ್ಯೆಯಿಂದ ಸಿದ್ಧತಾಪಸರೂ ಸಹ ಶಂಕರದರ್ಶನಕ್ಕಾಗಿ ಬಂದು ನಾನು ಮುಂದೆ, ನಾನು ಮುಂದೆ ಎಂದು ಹೇಳುತ್ತಾ ಬಂದು ಸೇರಿದರು.

೧೪-೧೬. ಆ ಪ್ರಕಾರ ಸಂಭ್ರಮದಿಂದ ಕೂಡಿರುವ, ನಿಷ್ಪಾಪರಾದ ಆ ಮಹರ್ಷಿಗಳನ್ನು ನೋಡಿ ಹರನು ಅವರಿಗೆ ತನ್ನ ದರ್ಶನವು ಅನಾಯಾಸವಾಗಿ ಲಭಿಸಲೆಂಬ ದಯೆಯಿಂದ ತಾನೂ ಕೋಟಿ ಮೂರ್ತಿಯಾಗಿ ಪರಿಣಮಿಸಿದನು. ಅನಂತರ ಆ ಮುನಿಗಳೆಲ್ಲರೂ ಸಂತೋಷದಿಂದ ಮಹೇಶ್ವರನನ್ನು ಪೂಜಿಸುತ್ತಾ ಬೇರೆ ಬೇರೆ ತೀರ್ಥಗಳನ್ನು ಆಶ್ರಯಿಸಿಕೊಂಡು ಅಲ್ಲಿಯೇ ನಿಂತರು. ಈ ರೀತಿ ಅಲ್ಲಿ ಕೋಟಿ ವಿಗ್ರಹವನ್ನು ರುದ್ರನು ಹೊಂದಿದುದರಿಂದ ಆ ತೀರ್ಥಕ್ಕೆ ರುದ್ರಕೋಟಿ ಎಂಬ ಹೆಸರುಂಟಾಯಿತು.

ತಂ ದದರ್ಶ ಮಹಾತೇಜಾಃ ಪ್ರಹ್ಲಾದೋ ಭಕ್ತಿಮಾನ್ವಶೀ ।
ಕೋಟಿತೀರ್ಥೇ ತತಃ ಸ್ನಾತ್ವಾ ತರ್ಪಯಿತ್ವಾ ವಸೂನ್ಪಿತೄನ್ ॥
ರುದ್ರಕೋಟಿಂ ಸಮಭ್ಯರ್ಚ್ಯ ಜಗಾಮ ಕುರುಜಾಂಗಲಂ ॥ ೧೭ ॥

ತತೋ ದೇವವರಂ ಸ್ಥಾಣುಂ ಶಂಕರಂ ಪಾರ್ವತೀಪ್ರಿಯಂ ।
ಸರಸ್ವತೀಜಲೆ ಮಗ್ನಂ ದದರ್ಶ ಸುರಪೂಜಿತಂ ॥ ೧೮ ॥

ಸಾರಸ್ವತೇಽಂಭಸಿ ಸ್ನಾತ್ವಾ ಸ್ಥಾಣುಂ ಸಂಪೂಜ್ಯ ಭಕ್ತಿತಃ ।
ಸ್ನಾತ್ವಾ ದಶಾಶ್ವಮೇಧೇ ಚ ಸಂಪೂಜ್ಯ ಚ ಸುರಾನ್ಪಿತೄನ್ ॥ ೧೯ ॥

ಸಹಸ್ರಲಿಂಗಂ ಸಂಪೂಜ್ಯ ಸ್ನಾತ್ವಾ ತಸ್ಮಿನ್ ಹ್ರದೇ ಶುಚಿಃ ।
ಅಭಿವಾದ್ಯ ಗುರುಂ ಶುಕ್ರಂ ಸೋಮತೀರ್ಥಂ ಜಗಾಮ ಹ ॥ ೨೦ ॥

ತತ್ರ ಸ್ನಾತ್ವಾಽಭ್ಯರ್ಚ್ಯ ಪಿತೄನ್ಸೋಮಂ ಸಂಪೂಜ್ಯ ಭಕ್ತಿತಃ ।
ಕ್ಷೀರಿಕಾವಾಸಮಭ್ಯೇತ್ಯ ಸ್ನಾನಂ ಚಕ್ರೇ ಮಹಾಮತಿಃ ॥ ೨೧ ॥

೧೭-೧೮. ಅಂತಹ ಕೋಟಿ ತೀರ್ಥವನ್ನು ಮಹಾಮಹಿಮನಾದ ಪ್ರಹ್ಲಾದನು ನೋಡಿ ಭಕ್ತಿಯಿಂದ ಆ ತೀರ್ಥದಲ್ಲಿ ಸ್ನಾನಮಾಡಿ ಪಿತೃಗಳನ್ನೂ ವಸುಗಳನ್ನೂ ತೃಪ್ತಿಗೊಳಿಸಿ ರುದ್ರಕೋಟಿಯನ್ನೂ ಆರಾಧಿಸಿ ಕುರುಜಾಂಗಲ ಕ್ಷೇತ್ರಕ್ಕೆ ಬಂದನು. ಅಲ್ಲಿ ಸರಸ್ವತಿಯ ತೀರ್ಥದಲ್ಲಿ ಮುಳುಗಿರುವ ದೇವಪೂಜ್ಯನಾಗಿಯೂ, ಪಾರ್ವತೀ ಪತಿಯಾಗಿಯೂ ಇರುವ ಸ್ಥಾಣುರೂಪಿಯಾದ ಶಂಕರನನ್ನು ನೋಡಿದನು.

೧೯-೨೦. ಅನಂತರ ಪ್ರಹ್ಲಾದನು ಸರಸ್ವತೀ ತೀರ್ಥದಲ್ಲಿ ಸ್ನಾನಮಾಡಿ ಭಕ್ತಿಯಿಂದ ಸ್ಥಾಣುರೂಪಿಯಾದ ಶಂಕರನನ್ನೂ ಪೂಜಿಸಿ ದಶಾಶ್ವಮೇಧವೆಂಬ ತೀರ್ಥದಲ್ಲಿಯೂ ಸ್ನಾನಮಾಡಿ ದೇವತೆಗಳನ್ನೂ, ಪಿತೃಗಳನ್ನೂ ತೃಪ್ತಿಪಡಿಸಿ ಅಲ್ಲಿರುವ ಸಹಸ್ರಲಿಂಗಗಳನ್ನೂ ಪೂಜಿಸಿ, ಅಲ್ಲಿರುವ ದೇವಹ್ರದದಲ್ಲಿಯೂ ಸ್ನಾನಮಾಡಿ ಅಲ್ಲಿ ಗುರುವಾದ ಶುಕ್ರಾಚಾರ್ಯರನ್ನೂ ನಮಸ್ಕರಿಸಿ ಅಲ್ಲಿಂದ ಸೋಮತೀರ್ಥಕ್ಕೆ ನಡೆದನು.

೨೧-೨೨. ಅಲ್ಲಿಯೂ ಸ್ನಾನಮಾಡಿ ಭಕ್ತಿಯಿಂದ ಸೋಮಪ್ರಭುವನ್ನು ಪೂಜಿಸಿ ಪಿತೃಗಳನ್ನೂ ತೃಪ್ತಿಪಡಿಸಿ ಕ್ಷೀರಿಕಾವಾಸವೆಂಬ ತೀರ್ಥವನ್ನು ಸೇರಿ ಅಲ್ಲಿಯೂ ಸ್ನಾನಮಾಡಿದನು. ಅಲ್ಲಿರುವ ವಟವೃಕ್ಷವನ್ನು ಪ್ರದಕ್ಷಿಣೆಮಾಡಿ ವರುಣನನ್ನೂ

ಪ್ರದಕ್ಷಿಣೀಕೃತ್ಯ ತರುಂ ವರುಣಂ ಚಾಭ್ಯರ್ಚ್ಯ ಬುದ್ಧಿಮಾನ್ ।
ಭೂಯಃ ಕುರುಧ್ವಜಂ ದೃಷ್ಟ್ವಾ ಪದ್ಮಾಕ್ಷೀಂ ನಗರೀಂ ತತಃ ॥ ೨೨ ॥

ತತ್ರಾಭ್ಯರ್ಚ್ಯ ಮಿತ್ರಾವರುಣೌ ಭಾಸ್ಕರೌ ಲೋಕಪೂಜಿತೌ ।
ಕುಮಾರಧಾರಾಮಭ್ಯೇತ್ಯ ದದರ್ಶ ಸ್ವಾಮಿನಂ ವಶೀ ॥ ೨೩ ॥

ಸ್ನಾತ್ವಾ ಕಪಿಲಧಾರಾಯಾಂ ಸಂತರ್ಪ್ಯರ್ಷೀನ್ಪಿತ್ರೂನ್ಸುರಾನ್ ।
ದೃಷ್ಟ್ವಾ ಸ್ಕಂದಂ ಸಮಭ್ಯರ್ಚ್ಯ ನರ್ಮದಾಯಾಂ ಜಗಾಮ ಹ ॥ ೨೪ ॥

ತಸ್ಯಾಂ ಸ್ನಾತ್ವಾ ಸಮಭ್ಯರ್ಚ್ಯ ವಾಸುದೇವಂ ಶ್ರಿಯಃ ಪತಿಂ ।
ಜಗಾಮ ಭೂಧರಂ ದ್ರಷ್ಟುಂ ವಾರಾಹಂ ಚಕ್ರಧಾರಿಣಂ ॥ ೨೫ ॥

ಸ್ನಾತ್ವಾ ಕೋಕಾಮುಖೇ ತೀರ್ಥೇ ಸಂಪೂಜ್ಯ ಧರಣೀಧರಂ ।
ತ್ರಿಸೌವರ್ಣಂ ಮಹಾದೇವಂ ಮಧುದೇಶಂ ಜಗಾಮ ಹ ॥ ೨೬ ॥

ಪೂಜಿಸಿ ಪುನಃ ಕುರುಧ್ವಜನನ್ನು ದರ್ಶನಮಾಡಿ ಪದ್ಮಾಕ್ಷೀ ಎಂಬ ನಗರಕ್ಕೆ ಹೊರಟನು.

೨೩-೨೪. ಅಲ್ಲಿ ಮಿತ್ರಾವರುಣರನ್ನೂ ಲೋಕಪ್ರಸಿದ್ಧರಾದ ಭಾಸ್ಕರನನ್ನೂ ಪೂಜಿಸಿ, ಕುಮಾರಧಾರಾ ಎಂಬ ಕ್ಷೇತ್ರಕ್ಕೆ ಹೋಗಿ ಷಣ್ಮುಖನನ್ನೂ ದರ್ಶನ ಮಾಡಿದನು. ಅಲ್ಲಿಯೂ ಕಪಿಲಧಾರಾ ತೀರ್ಥದಲ್ಲಿ ಸ್ನಾನಮಾಡಿ, ದೇವರ್ಷಿ ಪಿತೃಗಳನ್ನೂ ತರ್ಪಣದಿಂದ ತೃಪ್ತಿಪಡಿಸಿ, ಸ್ಕಂದನನ್ನು ಭಕ್ತಿಯಿಂದ ಸೇವಿಸಿ ಪೂಜಿಸಿ ಅಲ್ಲಿಂದ ನರ್ಮದಾನದಿಗೆ ಹೊರಟನು.

೨೫ ೨೬. ಅಲ್ಲಿ ಸ್ನಾನಮಾಡಿ ಲಕ್ಷ್ಮೀಪತಿಯಾದ ವಾಸುದೇವನನ್ನೂ ಪೂಜಿಸಿ, ಚಕ್ರಧಾರಿಯಾದ ಭೂವರಾಹನನ್ನು ದರ್ಶನಮಾಡಲು ವರಾಹ ಪರ್ವತಕ್ಕೆ ಹೊರಟನು. ಅಲ್ಲಿಯೂ ಕೋಕಾಮುಖವೆಂಬ ತೀರ್ಥದಲ್ಲಿ ಸ್ನಾನಮಾಡಿ ವರಾಹ ಮೂರ್ತಿಯನ್ನೂ ದರ್ಶನಮಾಡಿ ಮಧುದೇಶದಲ್ಲಿರುವ ತ್ರಿಸೌವರ್ಣವೆಂಬ ಮಹಾದೇವ ಕ್ಷೇತ್ರಕ್ಕೆ ಹೊರಟನು.

ತತ್ರ ನಾರೀಹ್ರದೇ ಸ್ನಾತ್ವಾ ಪೂಜಯಿತ್ವಾ ಚ ಶಂಕರಂ ।
ಕಾಲಂಜರಂ ಸಮಭ್ಯೇತ್ಯ ನೀಲಕಂಠಂ ದದರ್ಶ ಚ ॥ ೨೭ ॥

ನೀಲತೀರ್ಥಜಲೇ ಸ್ನಾತ್ವಾ ಪೂಜಯಿತ್ವಾ ತತಃ ಶಿವಂ ।
ಜಗಾಮ ಸಾಗರಾನೂಪೇ ಪ್ರಭಾಸೇ ದ್ರಷ್ಟುಮೀಶ್ವರಂ ॥ ೨೮ ॥

ಸ್ನಾತ್ವಾ ಚ ಸಂಗಮೇ ನದ್ಯಾಃ ಸರಸ್ವತ್ಯಾಽರ್ಣವಸ್ಯ ಚ ।
ಸೋಮೇಶ್ವರಂ ಲೋಕಪತಿಂ ಸ ದದರ್ಶ ಕಪರ್ದಿನಂ ॥ ೨೯ ॥

ಯೋ ದಕ್ಷಶಾಪನಿರ್ದಗ್ಧಃ ಕ್ಷಯೀ ತಾರಾಧಿಪಃ ಶಶೀ ।
ಆಪ್ಯಾಯಿತಃ ಶಂಕರೇಣ ವಿಷ್ಣುನಾ ಸ ಕಪರ್ದಿನಾ ॥ ೩೦ ॥

ತಾವರ್ಚ್ಯ ದೇವಪ್ರವರೌ ಸ ಜಗಾಮ ಮಹಾಲಯಂ ।
ತತ್ರ ರುದ್ರಂ ಸಮಭ್ಯರ್ಚ್ಯ ಪ್ರಜಗಾಮೋತ್ತರಾನ್ಕುರೂನ್ ॥ ೩೧ ॥

ಪದ್ಮನಾಭಂ ಸ ತತ್ರಾಭ್ಯರ್ಚ್ಯ ಸಪ್ತಗೋದಾವರಂ ಯಯೌ ।
ತತ್ರ ಸ್ನಾತ್ವಾಽರ್ಚ್ಯ ದೇವೇಶಂ ಭೀಮಂ ತ್ರೈಲೋಕ್ಯವಂದಿತಂ ॥ ೩೨ ॥

೨೭-೨೮. ಅಲ್ಲಿಯೂ ನಾರೀಹ್ರದವೆಂಬ ತೀರ್ಥದಲ್ಲಿ ಸ್ನಾನಮಾಡಿ ಶಂಕರನನ್ನೂ ಪೂಜಿಸಿ ಕಾಲಂಜರಕ್ಕೆ ಬಂದು ನೀಲಕಂಠನನ್ನು ದರ್ಶನಮಾಡಿದನು. ಅಲ್ಲಿಯೂ ನೀಲತೀರ್ಥದಲ್ಲಿ ಸ್ನಾನಮಾಡಿ ಶಿವನನ್ನು ಪೂಜಿಸಿ ಸಾಗರ ಸಮೀಪದಲ್ಲಿರುವ ಪ್ರಭಾಸ ತೀರ್ಥಕ್ಕೆ ಅಲ್ಲಿರುವ ಈಶ್ವರನ ದರ್ಶನಕ್ಕಾಗಿ ಹೊರಟನು.

೨೯-೩೦. ಅಲ್ಲಿ ಸರಸ್ವತಿಗೂ ಸಮುದ್ರಕ್ಕೂ ಸಂಬಂಧಿಸಿರುವ ನದೀಸಂಗಮದಲ್ಲಿ ಸ್ನಾನಮಾಡಿ ಲೋಕನಾಥನಾಗಿಯೂ ಕಪರ್ದಿಯಾಗಿಯೂ ಇರುವ ಸೋಮೇಶ್ವರನನ್ನು ದರ್ಶನಮಾಡಿದನು. ಅದೇ ಕ್ಷೇತ್ರದಲ್ಲಿಯೇ ಪೂರ್ವದಲ್ಲಿ ದಕ್ಷನ ಶಾಪಕ್ಕೆ ಗುರಿಯಾಗಿ ದಗ್ಧನಾಗಿ ಕ್ಷಯವನ್ನು ಹೊಂದಿದ ತಾರಕಾಪತಿಯಾದ ಚಂದ್ರನು ವಿಷ್ಣುವಿನಿಂದಲೂ ಕಪರ್ದಿಯಾಗಿರುವ ಈ ಶಂಕರನಿಂದಲೂ ಶೀತಲನಾಗಿ ಮಾಡಲ್ಪಟ್ಟು ರಕ್ಷಿಸಲ್ಪಟ್ಟನು.

೩೧-೩೨ ದೇವತಾಧಿಪರಾದ ಆ ವಿಷ್ಣು ಶಂಕರರಿಬ್ಬರನ್ನೂ ಪೂಜಿಸಿ ಅಲ್ಲಿಂದ ಮಹಾಲಯಕ್ಕೆ ಹೊರಟನು, ಅಲ್ಲಿಯೂ ರುದ್ರನನ್ನು ಪೂಜಿಸಿ ಉತ್ತರ ಕುರುದೇಶಗಳಿಗೆ ಹೊರಟನು. ಅಲ್ಲಿಯೂ ಆ ಪ್ರಹ್ಲಾದನು ಪದ್ಮನಾಭನನ್ನು ಪೂಜಿಸಿ ಸಪ್ತಗೋದಾವರ ಕ್ಷೇತ್ರಕ್ಕೆ ಹೊರಟನು. ಅಲ್ಲಿಯೂ ಸ್ನಾನಮಾಡಿ ಲೋಕಪೂಜ್ಯನಾದ ಭೀಮನೆಂಬ ದೇವೇಶನನ್ನು ಪೂಜಿಸಿದನು.

ಗತ್ವಾ ದಾರುವನೇ ಶ್ರೀಮಾನ್ ಶ್ರೀಲಿಂಗಂ ಪ್ರದದರ್ಶ ಹ ।
ತಮಾರ್ಚ್ಯ ಬ್ರಾಹ್ಮಣೀಂ ಗತ್ವಾ ಸ್ನಾತ್ವಾರ್ಚ್ಯ ತ್ರಿದಶೇಶ್ವರಂ ॥ ೩೩ ॥

ಪ್ಲಕ್ಷಾವತರಣಂ ಗತ್ವಾ ಶ್ರೀನಿವಾಸಮಪೂಜಯತ್ ।
ತತಶ್ಚ ಕುಂಡಿನಂ ಗತ್ವಾ ಸಂಪೂಜ್ಯ ಪ್ರಾಣತೃಪ್ತಿದಂ ॥ ೩೪ ॥

ಶೂರ್ಪಾರಕಂ ಚತುರ್ಬಾಹುಂ ಪೂಜಯಿತ್ವಾ ವಿಧಾನತಃ ।
ಮಾಗಧಾರಣ್ಯಮಾಸಾದ್ಯ ದದರ್ಶ ವಸುಧಾಧಿಪಂ ॥ ೩೫ ॥

ತಮರ್ಚಯಿತ್ವಾ ವಿಶ್ವೇಶಂ ಸ ಜಗಾಮ ಪ್ರಜಾಸುಖಂ ।
ಮಹೀತೀರ್ಥೇ ತತಃ ಸ್ನಾತ್ವಾ ವಾಸುದೇವಂ ಪ್ರಣಮ್ಯ ಚ ॥ ೩೬ ॥

ಶೋಣಂ ಸಂಪ್ರಾಪ್ಯ ಸಂಪೂಜ್ಯ ರುಕ್ಮಧರ್ಮಾಣಮೀಶ್ವರಂ ।
ಮಹಾಕೋಶ್ಯಾಂ ಮಹಾದೇವಂ ಹಂಸಾಖ್ಯಂ ಭಕ್ತಿಮಾನಥ ॥ ೩೭ ॥

ಪೂಜಯಿತ್ವಾ ಜಗನ್ನಾಥಂ ಸೈಂಧವಾರಣ್ಯಮುತ್ತಮಂ ।
ತಂ ದೃಷ್ಟ್ವಾಽರ್ಚ್ಯ ಹರಿಂ ಚಾಽಸೌ ತೀರ್ಥಂ ಕನಖಲಂ ಯಯೌ ॥ ೩೮ ॥

೩೩-೩೫. ಅಲ್ಲಿಂದ ದಾರುವನಕ್ಕೆ ಹೋಗಿ ಅಲ್ಲಿದ್ದ ಶ್ರೀಲಿಂಗವನ್ನು ದರ್ಶನ ಮಾಡಿದನು. ಅಲ್ಲಿ ಶ್ರೀಲಿಂಗವನ್ನು ಪೂಜಿಸಿ ಬ್ರಾಹ್ಮಣೀ ನದಿಗೆ ಹೋಗಿ ಸ್ನಾನಮಾಡಿ ಅಲ್ಲಿ ತ್ರಿದಶೇಶ್ವರನನ್ನು ಪೂಜಿಸಿ ಅಲ್ಲಿಂದ ಪ್ಲಕ್ಷಾವತರಣ ಕ್ಷೇತ್ರಕ್ಕೂ ಹೋಗಿ ಅಲ್ಲಿದ್ದ ಶ್ರೀನಿವಾಸನನ್ನೂ ಪೂಜಿಸಿದನು. ಅಲ್ಲಿಂದ ಕುಂಡಿನನಗರಕ್ಕೆ ಹೋಗಿ ಪ್ರಾಣಗಳಿಗೆ ತೃಪ್ತಿದಾಯಕನಾದ ಚತುರ್ಭುಜಗಳುಳ್ಳ ಶೂರ್ಪಾರಕ ದೇವನನ್ನೂ ಯಥಾವಿಧಿಯಾಗಿ ಪೂಜಿಸಿದನು. ಅಲ್ಲಿಂದ ಮಾಗಧಾರಣ್ಯಕ್ಕೂ ಹೋಗಿ ವಸುಧಾಧಿಪನನ್ನೂ ದರ್ಶನ ಮಾಡಿದನು.

೩೬-೩೮. ಅಲ್ಲಿಯೂ ವಿಶ್ವೇಶನನ್ನು ಪೂಜಿಸಿ ಅಲ್ಲಿಂದ ಪ್ರಜಾಸುಖವೆಂಬ ಕ್ಷೇತ್ರಕ್ಕೆ ಹೊರಟು ಅಲ್ಲಿರುವ ಮಹೀತೀರ್ಥದಲ್ಲಿ ಸ್ನಾನಮಾಡಿ ವಾಸುದೇವನನ್ನೂ ವಂದಿಸಿ ಅಲ್ಲಿಂದ ಶೋಣಕ್ಷೇತ್ರಕ್ಕೆ ಬಂದು ಅಲ್ಲಿರುವ ರುಕ್ಮಧರ್ಮನೆಂಬ ಈಶ್ವರನನ್ನೂ ಪೂಜಿಸಿ ಮಹಾಕೇಶಿಯಲ್ಲಿರುವ ಹಂಸಾಭಿದಾನವುಳ್ಳ ಮಹಾದೇವನನ್ನೂ ಸಹ ಭಕ್ತಿಯಿಂದ ಪೂಜಿಸಿ, ಅಲ್ಲಿಂದ ಸೈಂಧವಾರಣ್ಯಕ್ಕೆ ಹೋಗಿ ಅಲ್ಲಿರುವ ಜಗನ್ನಾಥನಾದ ಹರಿಯನ್ನೂ ಸೇವಿಸಿ, ಭಕ್ತಿಯಿಂದ ಪೂಜಿಸಿ ಅಲ್ಲಿಂದ ಕನಖಲವೆಂಬ ತೀರ್ಥಕ್ಕೆ ಹೊರಟನು.

ತತ್ರಾऽರ್ಚ್ಯ ಭದ್ರಕಾಲೀಶಂ ವೀರಭದ್ರಂ ಚ ದಾನವಃ ।
ಧನಾಧಿಪಂ ಚ ಮೇರ್ವರ್ಕಂ ಯಯಾವಥ ಗಿರಿವ್ರಜಂ ॥ ೩೯ ॥

ತತ್ರ ದೇವಂ ಪಶುಪತಿಂ ಲೋಕನಾಥಂ ಮಹೇಶ್ವರಂ ।
ಸಂಪೂಜಯಿತ್ವಾ ವಿಧಿವತ್ಕಾಮರೂಪಂ ಜಗಾಮ ಹ ॥ ೪೦ ॥

ಶಶಿಪ್ರಭಂ ದೇವವರಂ ತ್ರಿನೇತ್ರಂ
ಸಂಪೂಜಯಿತ್ವಾ ಸಹಿತಂ ಮೃಡಾನ್ಯಾ ।
ಜಗಾಮ ತೀರ್ಥಂ ಪ್ರವರಂ ಮಹಾಖ್ಯಂ
ತಸ್ಮಿನ್ಮಹಾದೇವಮಪೂಜಯಚ್ಚ ॥ ೪೧ ॥

ತತಸ್ತ್ರಿಕೂಟಂ ಗಿರಿಮದ್ರಿಪುತ್ರಂ
ಜಗಾಮ ದ್ರಷ್ಟುಂ ಸಹ ಚಕ್ರಪಾಣಿಂ ।
ತಮರ್ಚ್ಯ ಭಕ್ತ್ಯಾ ತು ಗಜೇಂದ್ರಮೋಕ್ಷಣಂ
ಜಜಾಪ ಜಪ್ಯಂ ಪರಮಂ ಪವಿತ್ರಂ ॥ ೪೨ ॥

ತತೋऽಷ ದೈತ್ಯೇಶ್ವರಸೂನುರಾದರಾತ್
ಮಾಸತ್ರಯಂ ಮೂಲಫಲಾಂಬುಭಕ್ಷೀ ।
ನಿವೇದ್ಯ ವಿಪ್ರಪ್ರವರೇಷು ಕಾಂಚನಂ
ಜಗಾಮ ಘೋರಂ ಸ ಹಿ ದಂಡಕಂ ವನಂ ॥ ೪೩ ॥

೩೯-೪೦. ಅಲ್ಲಿಯೂ ಸಹ ಆ ಪ್ರಹ್ಲಾದನು ಭದ್ರಕಾಲೀಶನನ್ನೂ, ವೀರಭದ್ರನನ್ನೂ, ಮೇರ್ವರ್ಕನೆಂಬ ದನಾಧಿಪತಿಯನ್ನೂ ಸಹ ಪೂಜಿಸಿ ಅಲ್ಲಿಂದ ಗಿರಿವ್ರಜಕ್ಕೆ ಹೊರಟನು. ಅಲ್ಲಿಯೂ ಲೋಕನಾಥನಾಗಿಯೂ ಪಶುಪತಿಯಾಗಿಯೂ ಇರುವ ಮಹೇಶ್ವರನನ್ನು ಯಥಾವಿಧಿಯಾಗಿ ಪೂಜಿಸಿ ಅಲ್ಲಿಂದ ಕಾಮರೂಪಕ್ಕೆ ಹೊರಟನು.

೪೧-೪೨. ಚಂದ್ರನಂತೆ ಶುಭ್ರನಾಗಿಯೂ ತ್ರಿನೇತ್ರನಾಗಿಯೂ ಪಾರ್ವತಿಯೊಡಗೂಡಿಯೂ ಇರುವ ಶಂಕರನನ್ನು ಅಲ್ಲಿಯೂ ಪೂಜಿಸಿ ಅಲ್ಲಿಂದ ಮಹಾತೀರ್ಥಕ್ಕೆ ಹೊರಟು ಅಲ್ಲಿಯೂ ಮಹಾದೇವನನ್ನು ಪೂಜಿಸಿದನು. ಅನಂತರ ಚಕ್ರಪಾಣಿಯನ್ನು ದರ್ಶನಮಾಡಲು ಪರ್ವತಪುತ್ರನಾದ ತ್ರಿಕೂಟಕ್ಕೆ ಹೊರಟನು, ಅಲ್ಲಿ ಆ ಚಕ್ರಪಾಣಿಯನ್ನೂ ಭಕ್ತಿಯಿಂದ ಪೂಜಿಸಿ, ಪರಮಪವಿತ್ರವಾಗಿಯೂ ಜಪಿಸಲು ಅರ್ಹವಾಗಿಯೂ ಇರುವ ಗಜೇಂದ್ರಮೋಕ್ಷಣವೆಂಬ ಸ್ತೋತ್ರವನ್ನು ಜಪಿಸಿದನು.

೪೩-೪೫. ಅಲ್ಲಿ ದೈತ್ಯೇಶ್ವರಪುತ್ರನಾದ ಪ್ರಹ್ಲಾದನು ಫಲ, ಗೆಡ್ಡೆ ಗೆಣಸುಗಳು ನೀರು ಇವುಗಳನ್ನೇ ಆದರದಿಂದ ಭಕ್ಷಿಸುತ್ತಾ ಸಂತುಷ್ಟನಾಗಿದ್ದು ಬ್ರಾಹ್ಮಣೋತ್ತಮ

ತತ್ರ ದಿವ್ಯಂ ಮಹಾಶಾಖಂ ವನಸ್ಪತಿವಪುರ್ಧರಂ ।
ದದರ್ಶ ಪುಂಡರೀಕಾಕ್ಷಂ ಮಹಾಸ್ವಾಪದವಾರಣಂ ॥ ೪೪ ॥

ತಸ್ಯಾಧಸ್ತಂ ತ್ರಿರಾತ್ರಂ ಸ ಮಹಾಭಾಗವತೋಽಸುರಃ ।
ಸ್ಥಿತಃ ಸ್ಥಂಡಿಲಶಾಯೀ ಚ ಪಠನ್ಸಾರಸ್ವತಂ ಸ್ತವಂ ॥ ೪೫ ॥

ತಸ್ಮಾತ್ತೀರ್ಥವರಂ ವಿದ್ವಾನ್ಸರ್ವಪಾಪಪ್ರಣಾಶನಂ ।
ಜಗಾಮ ದಾನವೋ ದ್ರಷ್ಟುಂ ಸರ್ವಪಾಪಹರಂ ಹರಿಂ ॥ ೪೬ ॥

ತಸ್ಯಾಽಗ್ರತೋ ಜಗಾದಾಽಸೌ ಸ್ತವೌ ಪಾಪಪ್ರಮೋಚನೌ ।
ಯೌ ಪುರಾ ಭಗವಾನ್ಪ್ರಾಹ ಕ್ರೋಡರೂಪೀ ಜನಾರ್ದನಃ ॥ ೪೭ ॥

ತಸ್ಮಾದಥಾಗಾದ್ದೈತ್ಯೇಂದ್ರಃ ಶಾಲಗ್ರಾಮಂ ಮಹಾಫಲಂ ।
ಯತ್ರ ಸನ್ನಿಹಿತೋ ವಿಷ್ಣುಃ ಸ್ಥಂಭೇಷು ಸ್ಥಾವರೇಷು ಚ ॥ ೪೮ ॥

ರಿಗೆ ಸುವರ್ಣಾದಿಗಳನ್ನೂ ದಾನಮಾಡಿ ಅಲ್ಲಿಂದ ಘೋರವಾದ ದಂಡಕಾವನಕ್ಕೆ ಹೊರಟನು. ಅಲ್ಲಿ ದೊಡ್ಡ ವೃಕ್ಷರೂಪವನ್ನು ಧರಿಸಿ ದಿವ್ಯಪ್ರಕೃತಿಯಾಗಿಯೂ ಅಜ್ಞಾನಕ್ಕೆ ಮೂಲ ನಾಶಕನಾಗಿಯೂ ಇರುವ ಪುಂಡರೀಕಾಕ್ಷನನ್ನು ದರ್ಶನಮಾಡಿ ಮಹಾಭಾಗವತನಾದ ಆ ಪ್ರಹ್ಲಾದನು ಆ ಮರದಕೆಳಗೆ ಮೂರುರಾತ್ರಿಯುವರೆಗೂ ವ್ರತನಿಯಮದಿಂದ ಸ್ಥಂಡಿಲ (ದರ್ಭಶಯನ) ದಲ್ಲಿ ಮಲಗಿದ್ದು ಸಾರಸ್ವತವೆಂಬ ಸ್ತೋತ್ರವನ್ನು ಪಠನಮಾಡಿದನು.

೪೬-೪೭. ಜ್ಞಾನಿಯಾದ ಆ ಪ್ರಹ್ಲಾದನು ಅಲ್ಲಿಂದ ಸರ್ವಪಾಪನಾಶಕನಾದ ಹರಿಯನ್ನು ದರ್ಶನಮಾಡಲು ಸರ್ವಪಾಪಪ್ರಣಾಶನವೆಂಬ ಕ್ಷೇತ್ರಕ್ಕೆ ಹೊರಟನು, ಅಲ್ಲಿ ಹರಿಯ ಎದುರಿಗೆ ನಿಂತು ಪೂರ್ವದಲ್ಲಿ ವರಾಹಮೂರ್ತಿಯಾದ ಭಗವಂತನು ಯಾವ ಸ್ತುತಿಗಳನ್ನು ಹೇಳಿದ್ದನೋ ಆ ಪಾಪಪ್ರಮೋಚನಗಳೆಂಬ ಎರಡು ಸ್ತುತಿಗಳನ್ನೂ ಪಠಿಸಿದನು.

೪೮-೪೯. ಅಲ್ಲಿಂದ ಮುಂದೆ ಹೊರಟ ಆ ಪ್ರಹ್ಲಾದನು ಬಹಳ ಪುಣ್ಯಕರವಾದ ಶಾಲಿಗ್ರಾಮವೆಂಬ ಕ್ಷೇತ್ರಕ್ಕೆ ಹೊರಟನು, ಸ್ತಂಭಗಳಲ್ಲಿಯೂ ಇತರ ಸ್ಥಿರ ಪದಾರ್ಥಗಳಲ್ಲಿಯೂ ವಿಷ್ಣುವಿನ ಸಾನ್ನಿಧ್ಯವನ್ನು ಹೊಂದಿರುವ ಆ ಕ್ಷೇತ್ರದಲ್ಲಿ ವಿಷ್ಣುವು ಸರ್ವವ್ಯಾಪಕನೆಂಬುದನ್ನು ಅನುಭವಿಸಿ ಪ್ರೀತಿಯಿಂದ ಅಲ್ಲಿಯೇ ಭಗವಂತನ ಪಾದಗಳನ್ನು ಪೂಜಿಸುತ್ತಾ ಮಹಾಭಾಗವತನಾಗಿ ನಿಂತನು.

ತತ್ರ ಸರ್ವಗತಂ ವಿಷ್ಣುಂ ಮತ್ವಾ ಚಕ್ರೇ ರತಿಂ ಬಲೀ ।
ಪೂಜಯನ್ಭಗವತ್ಪಾದೌ ಮಹಾಭಾಗವತೋ ಮುನೇ ॥ ೪೯ ॥

ಇಯಂ ತವೋಕ್ತಾ ಮುನಿಸಂಘಜುಷ್ಟಾ
ಪ್ರಹ್ಲಾದತೀರ್ಥಾನುಗತಿಃ ಸುಪುಣ್ಯಾ ।
ಯತ್ಕೀರ್ತನಾಚ್ಛ್ರವಣಾತ್ಸ್ಪರ್ಶನಾಚ್ಚ
ವಿಮುಕ್ತಪಾಪಾ ಮನುಜಾ ಭವಂತಿ ॥ ೫೦ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ಪ್ರಹ್ಲಾದ
ತೀರ್ಥಯಾತ್ರಾ ನಾಮ ಚತುರಶೀತಿತಮೋಽಧ್ಯಾಯಃ

---

೫೦. ಅನೇಕ ಮುನಿಗಳಿಂದ ಸೇವಿಸಲ್ಪಡುವ ಪುಣ್ಯಕರವಾದ ಈ ಪ್ರಹ್ಲಾದ ತೀರ್ಥಯಾತ್ರೆಯನ್ನು ನಿನಗೆ ಹೇಳಿದ್ದಾಯಿತು. ಯಾವ ಈ ಪ್ರಸಂಗವನ್ನು ಪಠಿಸುವುದರಿಂದಲೂ ಕೇಳುವುದರಿಂದಲೂ ಅಲ್ಪಸ್ವಲ್ಪ ಶ್ರವಣದಿಂದಲೂ ಸಹ ಮನುಷ್ಯರು ಪಾಪಗಳಿಂದ ಬಿಡುಗಡೆ ಹೊಂದುತ್ತಾರೆ.

ಇಲ್ಲಿಗೆ ಶ್ರೀ ವಾಮನಪುರಾಣದ ವಾಮನಪ್ರಾದುರ್ಭಾವದಲ್ಲಿ ಪ್ರಹ್ಲಾದ
ತೀರ್ಥಯಾತ್ರೆ ಎಂಬ ಎಂಭತ್ತನಾಲ್ಕನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ಕೋಟಿತೀರ್ಥವೇ ಮೊದಲಾದ ಕ್ಷೇತ್ರಗಳ ಮತ್ತು ತೀರ್ಥಗಳ ಮಾಹಾತ್ಮ್ಯವನ್ನು ವರ್ಣಿಸಿ ಪ್ರಹ್ಲಾದನ ತೀರ್ಥಯಾತ್ರೆಯನ್ನೇ ಮುಂದುವರಿಸಿ ಸರ್ವಪಾಪನಾಶನಕ್ಷೇತ್ರದಲ್ಲಿ ಹರಿಯನ್ನು ಪೂಜಿಸಿ ಪ್ರಹ್ಲಾದನು ಗಜೇಂದ್ರಮೋಕ್ಷ ಮತ್ತು ಪಾಪನಾಶಕಸ್ತುತಿಗಳನ್ನು ಪಠಿಸಿದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಪಂಚಾಶೀತಿತಮೋಽಧ್ಯಾಯಃ

ನಾರದ ಉವಾಚ

ಯಾಂಜಜಪ್ಯಾನ್ಭಗವದ್ಭಕ್ತ್ಯಾ ಪ್ರಹ್ಲಾದೋ ದಾನವೋಽಜಪತ್ ।
ಗಜೇಂದ್ರಮೋಕ್ಷಣಾದೀಂಸ್ತ್ವಂ ಚತುರಸ್ತಾನ್ವದಸ್ವ ಮೇ ॥ ೧ ॥

ಪುಲಸ್ತ್ಯ ಉವಾಚ

ಶೃಣುಷ್ವ ಕಥಯಿಷ್ಯಾಮಿ ಜಪ್ಯಾನೇತಾಂ ಸ್ತಪೋಧನ ।
ದುಃಸ್ವಪ್ನನಾಶೋ ಭವತಿ ಯೈರುಕ್ತೈಃ ಸಂಸ್ಮೃತೈಃ ಶ್ರುತೈಃ ॥ ೨ ॥

ಗಜೇಂದ್ರಮೋಕ್ಷಣಂ ತ್ವಾದೌ ಶೃಣು ತ್ವಂ ತದನಂತರಂ ।
ಸಾರಸ್ವತೌ ತತಃ ಪುಣ್ಯೌ ಪಾಪಪ್ರಶಮನೌ ಸ್ತವೌ ॥ ೩ ॥

ಎಂಭತ್ತೈದನೆಯ ಅಧ್ಯಾಯ

೧-೨. ಅನಂತರ ನಾರದನು ಪುಲಸ್ತ್ಯರನ್ನು ಕುರಿತು ಆ ಪ್ರಹ್ಲಾದನು ಭಗವದ್ಭಕ್ತಿಪುರಸ್ಸರವಾಗಿ ಗಜೇಂದ್ರಮೋಕ್ಷಣವೇ ಮೊದಲಾದ ಯಾವ ನಾಲ್ಕು ಸ್ತುತಿಗಳನ್ನು ಅಲ್ಲಿ ಜಪಿಸಿದನೋ ಆ ಸ್ತುತಿಗಳನ್ನು ದಯವಿಟ್ಟು ಹೇಳಬೇಕು. ಎಂದು ಪ್ರಶ್ನೆ ಮಾಡಲು ಪುಲಸ್ತ್ಯರು ಹೇಳುತ್ತಾರೆ. ಯಾವ ಆ ಸ್ತುತಿಗಳನ್ನು ಪಠಿಸುವುದರಿಂದಲೂ ಕೇಳುವುದರಿಂದಲೂ ಸ್ಮರಣಮಾತ್ರದಿಂದಲೂ ಸಹ ದುಸ್ಸ್ವಪ್ನಗಳು ತೊಲಗಿ ಹೋಗುವುವೋ ಅಂತಹ ಆ ಪುಣ್ಯಕರವಾದ ಸ್ತುತಿಗಳನ್ನು ಹೇಳುತ್ತೇನೆ ಕೇಳು.

೩-೪. ಮೊದಲು ಗಜೇಂದ್ರಮೋಕ್ಷಣವನ್ನು ನೀನು ಕೇಳು ಅನಂತರ ಪುಣ್ಯಕರವಾದ ಸಾರಸ್ವತಸ್ತೋತ್ರಗಳನ್ನೂ ಪಾಪಪ್ರಶಮನ ಸ್ತೋತ್ರಗಳನ್ನೂ ಹೇಳುವೆನು. ಪರ್ವತರಾಜನಾದ ಸೂರ್ಯನಂತೆ ಜ್ವಲಿಸುವ ಸುಮೇರುವಿನ ಪುತ್ರನಾದ ಸರ್ವರತ್ನಗಳಿಂದ ಕೂಡಿದ ತ್ರಿಕೂಟವೆಂಬ ಉತ್ತಮೋತ್ತಮವಾದ ಪರ್ವತವಿದ್ದಿತು.

ಸರ್ವರತ್ನಮಯಃ ಶ್ರೀಮಾಂಸ್ತ್ರಿಕೂಟೋ ನಾಮ ಪರ್ವತಃ ।
ಸುತಃ ಪರ್ವತರಾಜಸ್ಯ ಸುಮೇರೋರ್ಭಾಸ್ಕರದ್ಯುತೇಃ ॥ ೪ ॥

ಕ್ಷೀರೋದಜಲವೀಚ್ಯಗ್ರೈರ್ಧೌತಾಽಮಲಶಿಲಾತಲಃ ।
ಉತ್ಥಿತಃ ಸಾಗರಂ ಭಿತ್ವಾ ದೇವರ್ಷಿಗಣಸೇವಿತಃ ॥ ೫ ॥

ಅಪ್ಸರೋಭಿಃ ಪರಿವೃತಃ ಶ್ರೀಮಾನ್ಪ್ರಸ್ರವಣಾಕುಲಃ ।
ಗಂಧರ್ವೈಃ ಕಿನ್ನರೈರ್ಯಕ್ಷೈಃ ಸಿದ್ಧಚಾರಣಗುಹ್ಯಕೈಃ ॥ ೬ ॥

ವಿದ್ಯಾಧರೈಃ ಸಪತ್ನೀಕೈಃ ಸಂಯತೈಶ್ಚ ತಪಸ್ವಿಭಿಃ ।
ವೃಕದ್ವೀಪಗಜೇಂದ್ರೈಶ್ಚ ಧೃತಗಾತ್ರೋ ವಿರಾಜತೇ ॥ ೭ ॥

ಪುನ್ನಾಗೈಃ ಕರ್ಣಿಕಾರೈಶ್ಚ ಬಿಲ್ವಾಮಲಕಪಾಟಲೈಃ ।
ಚೂತನೀಪಕದಂಬೈಶ್ಚ ಚಂದನಾಗರುಚಂಪಕೈಃ ॥ ೮ ॥

ಶಾಲೈಸ್ತಾಲೈಸ್ತಮಾಲೈಶ್ಚ ಸರಲಾರ್ಜುನಪರ್ಪಟೈಃ ।
ತಥಾಽನ್ಯೈರ್ವಿವಿಧೈರ್ವೃಕ್ಷೈಃ ಸರ್ವತಃ ಸಮಲಂಕೃತಃ ॥ ೯ ॥

೪-೭ ಮಹಾಸಮುದ್ರವನ್ನೂ ಭೇದಿಸಿಕೊಂಡು ಎದ್ದು ನಿಂತಿರುವ ಆ ಪರ್ವತವು ಕ್ಷೀರಸಾಗರದ ಅಲೆಗಳ ಅಗ್ರಭಾಗದಿಂದ ತೊಳೆಯಲ್ಪಟ್ಟ ಶುಭ್ರವಾದ ಕಲ್ಲು ಬಂಡೆಗಳುಳ್ಳದ್ದಾಗಿಯೂ ಅನೇಕ ಗಿರಿನದಿಗಳಿಂದ ಕೂಡಿಯೂ, ಅಪ್ಸರೆಯರಿಂದಲೂ ಗಂಧರ್ವರು, ಕಿಂನರರು, ಯಕ್ಷರು, ಸಿದ್ಧಚಾರಣರು, ಗುಹ್ಯಕರು, ಸಪತ್ನೀಕರಾದ ವಿದ್ಯಾಧರರು, ನಿಯಮಶಾಲಿಗಳಾದ ಅನೇಕ ತಪಸ್ವಿಗಳು ವೃಕದ್ವೀಪದ ಅನೇಕಾನೇಕ ಗಜೇಂದ್ರಗಳು ಇವರುಗಳಿಂದ ಕೂಡಿ ಪರಿಪೂರ್ಣವಾದ ದೇಹದಿಂದ ಶೋಭಿಸುತ್ತಿತ್ತು

೮-೯. ಮತ್ತು ಸುರಗಿ, ಕಣಿಗಿಲೆ, ಬಿಲ್ವ, ನೆಲ್ಲಿ, ಪಾದರಿ, ಮಾವು, ನೊಲ್ಲೆ ಕದಂಬ, (ಈಚಲು) ಶ್ರೀಗಂಧ. ಅಗರು, ಸಂಪಿಗೆ, ಆನೆಬೇಲ (ಸರ್ಜ) ತಾಳೆ, ಹೊಂಗೆ, ಸರಲ (ತಿಲಕ) ಮಡ್ಡಿಗೋಣಿ ಇವೇ ಮೊದಲಾದ ಇನ್ನೂ ಬಹುವಿಧವಾದ ವೃಕ್ಷಗಳಿಂದ ಕೂಡಿ ರಮ್ಯವಾಗಿದ್ದಿತು.

ನಾನಾಧಾತ್ವಂಕಿತೈಃ ಶೃಂಗೈಃ ಪ್ರಸ್ರವದ್ಭಿಃ ಸಮಂತತಃ ।
ಶೋಭಿತೋ ರುಚಿರಪ್ರಸ್ಥೈಸ್ತ್ರಿಭಿರ್ವಿಸ್ತೀರ್ಣಸಾನುಭಿಃ ॥ ೧೦ ॥

ಮೃಗೈಃ ಶಾಖಾಮೃಗೈಃ ಸಿಂಹೈರ್ಮಾತಂಗೈಶ್ಚ ಸದಾ ಮದೈಃ ।
ಜೀವಂಜೀವಕಸಂಘುಷ್ಟೈಶ್ಚಕೋರಶಿಖಿನಾದಿತೈಃ ॥ ೧೧ ॥

ತಸ್ಯೈಕಂ ಕಾಂಚನಂ ಶೃಂಗಂ ಸೇವತೇ ಯದ್ದಿವಾಕರಃ ।
ನಾನಾಪುಣ್ಯಸಮಾಕೀರ್ಣಂ ನಾನಾಗಂಧಾದಿವಾಸಿತಂ ॥ ೧೨ ॥

ದ್ವಿತೀಯಂ ರಾಜತಂ ಶೃಂಗಂ ಸೇವತೇ ಯನ್ನಿಶಾಕರಃ ।
ಪಾಂಡುರಾಂಬುದಸಂಕಾಶಂ ತಥಾ ರತ್ನಚಯೋಪಮಂ ॥ ೧೩ ॥

ವಜ್ರೇಂದ್ರನೀಲವೈಡೂರ್ಯತೇಜೋಭಿರ್ಭಾಸಯನ್ ದಿಶಃ ।
ತೃತೀಯಂ ಬ್ರಹ್ಮಸದನಂ ಪ್ರಹೃಷ್ಟಂ ಶೃಂಗಮುತ್ತಮಂ ॥ ೧೪ ॥

೧೦-೧೧. ಹಾಗೂ ಎಲ್ಲಾ ಕಡೆಗಳಲ್ಲಿಯೂ ಜಲಪ್ರವಾಹವನ್ನು ಸುರಿಸುತ್ತಿರುವ ನಾನಾ ವಿಧವಾದ ಗೈರಿಕಾದಿ ಧಾತುಮಯಗಳಾದ ಶಿಖರಗಳಿಂದ ಕೂಡಿಯೂ, ರಮ್ಯವಾದ ಪ್ರಸ್ಥಭೂಮಿಗಳುಳ್ಳ ವಿಶಾಲವಾದ ಮೂರು ಸಾನು (ದಡ) ಪ್ರದೇಶಗಳಿಂದ ಕೂಡಿಯೂ ಜಿಂಕೆಗಳಿಂದಲೂ ಕಪಿಗಳು (ಸಿಂಹಗಳು) ಮದದಿಂದ ಕೂಡಿದ ಆನೆಗಳು; ಇವುಗಳಿಂದ ಕೂಡಿಯೂ ಲಾವಪಕ್ಷಿಗಳ ಧ್ವನಿಯಿಂದ ನಿಬಿಡಿತವಾಗಿಯೂ, ಚಕೋರ, ನವಿಲು ಮುಂತಾದ ಪಕ್ಷಿವಿಶೇಷಗಳ ನಾದದಿಂದಲೂ ಕೂಡಿ ರಮಣೀಯವಾಗಿದ್ದಿತು.

೧೨-೧೪. ಆ ತ್ರಿಕೂಟಪರ್ವತದಲ್ಲಿ ಬಹುವಿಧವಾದ ಪುಣ್ಯಗಳಿಗೆ ಆವಾಸಸ್ಥಾನವಾಗಿಯೂ ಬಹುವಿಧವಾದ ಸುಗಂಧಿದ್ರವ್ಯಗಳಿಂದ ಘಮಘಮಿಸುತ್ತಲೂ ಇರುವ ಸೂರ್ಯನಿಗೂ ವಿಶ್ರಾಂತಿ ಸ್ಥಾನವಾದ ಸುವರ್ಣಮಯವಾದ ಒಂದು ಶಿಖರವಿದ್ದಿತು, ಮತ್ತು ಶುಭ್ರವಾದ ಶರತ್ಕಾಲದ ಮೇಘದಂತೆ ಸ್ವಚ್ಛವಾಗಿಯೂ, ರತ್ನಗಳ ಸಮೂಹಕ್ಕೆ ಸದೃಶವಾಗಿಯೂ ಚಂದ್ರನಿಗೆ ವಿಶ್ರಾಂತಿಸ್ಥಾನವಾಗಿಯೂ ಇರುವ ರಜತಮಯವಾದ ಎರಡನೇಯ ಶಿಖರವೊಂದಿದ್ದಿತು. ಹಾಗೇ ವಜ್ರ ವೈಡೂರ್ಯ ಇಂದ್ರನೀಲ ಮಣಿಗಳ ಕಾಂತಿಗಳಿಂದ ದಿಕ್ಕುಗಳೆಲ್ಲವನ್ನೂ ಬೆಳಗುತ್ತಾ ಬ್ರಹ್ಮನಿಗೂ ಆವಾಸಸ್ಥಾನವಾದ ಸಂತುಷ್ಟರಾದ ದಿವ್ಯಪ್ರಕೃತಿಗಳಿಂದ ಸೇವಿಸಲ್ಪಡುವ ಲೋಕೋತ್ತರವಾದ ಮೂರನೇಯ ಶಿಖರವೂ ಇದ್ದಿತು.

ನ ತತ್ಕೃತಘ್ನಾಃ ಪಶ್ಯಂತಿ ನೃಶಂಸಾ ನೈವ ರಾಕ್ಷಸಾಃ ।
ನಾತಪ್ತತಪಸೋ ಲೋಕೇ ಯೇ ಚ ಪಾಪಕೃತೋ ಜನಾಃ ॥ ೧೫ ॥

ಯಸ್ಯ ಸಾನುಮತಃ ಪೃಷ್ಠೇ ಸರಃ ಕಾಂಚನ ಪಂಕಜಂ ।
ಕಾರಂಡವಸಮಾಕೀರ್ಣಂ ರಾಜಹಂಸೋಪಶೋಭಿತಂ ॥ ೧೬ ॥

ಕುಮುದೋತ್ಪಲಕಲ್ಹಾರೈಃ ಪುಂಡರೀಕೈಶ್ಚ ಶೋಭಿತಂ ।
ಕಮಲೈಃ ಶತಪತ್ರೈಶ್ಚ ಕಾಂಚನೈಃ ಸಮಲಂಕೃತಂ ॥ ೧೭ ॥

ಪತ್ರೈರ್ಮರಕತಪ್ರಖ್ಯೈಃ ಪುಷ್ಪೈಃ ಕಾಂಚನಸನ್ನಿಭೈಃ
ಗುಲ್ಮೈಃ ಕೀಚಕರೇಣೂನಾಂ ಸಮಂತಾತ್ಪರಿವೇಷ್ಟಿತಂ ॥ ೧೮ ॥

ತಸ್ಮಿನ್ಸರಸಿ ದುಷ್ಟಾತ್ಮಾ ನಿಗೂಢೋಽಂತರ್ಜಲೇ ಶಯಃ ।
ಆಸೀದ್ಗ್ರಾಹೋ ಗಜೇಂದ್ರಾಣಾಂ ದುರಾಧರ್ಷೋ ಮಹಾಬಲಃ ॥ ೧೯ ॥

೧೫-೧೭. ಕೃತಘ್ನರಿಗೂ ಘಾತುಕರಿಗೂ, ರಾಕ್ಷಸರಿಗೂ, ತಪಸ್ಸಿಲ್ಲದ ಸಾಮಾನ್ಯ ಜನರಿಗೂ ಪಾಪಿಗಳಾದ ಜನಗಳಿಗೂ ಸಹ ಪುಣ್ಯಕರವಾದ ಆ ಶಿಖರವನ್ನು ನೋಡುವ ಭಾಗ್ಯವೂ ಇಲ್ಲ. ಆ ಪರ್ವತದ ಹಿಂಭಾಗದಲ್ಲಿ ಒಂದು ಸರೋವರವಿದ್ದಿತು. ಅದು ಚಿನ್ನದ ಕಮಲಗಳಿಂದಲೂ, ಜಲಚರಪಕ್ಷಿ ವಿಶೇಷಗಳಿಂದಲೂ, ರಾಜಹಂಸ ಪಕ್ಷಿಗಳಿಂದಲೂ, ಕುಮುದ(ಕಪ್ಪುಕಮಲ) ನೈದಿಲೆ ಕಲ್ಹಾರ, ಬಿಳಿಯಕಮಲಗಳು, ನೂರಾರು ದಳಗಳಿಂದ ಕೂಡಿದ ಕೆಂದಾವರೆಗಳು, ಇವುಗಳಿಂದಲೂ ಶೋಭಿತವಾಗಿದ್ದಿತು.

೧೮-೧೯. ಪಚ್ಚೆಯ ಕಲ್ಲಿನಂತೆ ಹಸುರಾದ ಎಲೆಗಳೂ ಚಿನ್ನದಂತೆ ಹೊಂಬಣ್ಣವಾಗಿಯೂ ಕೆಂಪಾಗಿಯೂ ಇದ್ದ ಹೂವುಗಳೂ ಆ ಸರೋವರದಲ್ಲಿ ಪ್ರಕಾಶಿಸುತ್ತಿದ್ದವು. ಅದರ ಸುತ್ತಲೂ ಬಿದಿರಿನ ಪೊದರುಗಳು ದಟ್ಟವಾಗಿದ್ದುವು. ಆ ಸರೋವರದಲ್ಲಿ ಮಹಾಬಲಶಾಲಿಯಾದ ದುಷ್ಟಸ್ವಭಾವವುಳ್ಳ ಒಂದು ಮೊಸಳೆಯು ಗೂಢವಾಗಿ ನೀರಿನೊಳಗೆ ಹುದುಗಿಕೊಂಡು ಮಹಾಗಜಗಳಿಗೂ ಅಜೇಯವಾಗಿ ನೆಲಸಿದ್ದಿತು.

ಅಥ ದಂತೋಜ್ಜ್ವಲವಪುಃ ಕದಾಚಿದ್ಗಜಯೂಥಪಃ ।
ಮದಸ್ರಾವೀ ಜಲಾಕಾಂಕ್ಷೀ ಪಾದಚಾರೀವ ಪರ್ವತಃ ॥ ೨೦ ॥

ವಾಸಯನ್ಮದಗಂಧೇನ ಗಿರಿಮೈರಾವತೋಪಮಃ ।
ಸ ಗಜೋಂಜನಸಂಕಾಶೋ ಮದಾಘೂರ್ಣಿತಲೋಚನಃ ॥ ೨೧ ॥

ತೃಷಿತಃ ಸ್ನಾತುಕಾಮೋಽಸಾವವತೀರ್ಣಶ್ಚ ತಜ್ಜಲಂ ।
ಸಲೀಲಃ ಪಂಕಜವನೇ ಯೂಥಮಧ್ಯಗತಸ್ತ್ವರನ್ ॥ ೨೨ ॥

ಗೃಹೀತಸ್ತೇನ ರೌದ್ರೇಣ ಗ್ರಾಹೇಣಾವ್ಯಕ್ತಮೂರ್ತಿನಾ ।
ಪಶ್ಯಂತೀನಾಂ ಕರೇಣೂನಾಂ ಕ್ರೋಶಂತೀನಾಂ ಚ ದಾರುಣಂ ॥ ೨೩ ॥

ಹ್ರಿಯತೇ ಪಂಕಜವನೇ ಗ್ರಾಹೇಣಾತಿಬಲೀಯಸಾ ।
ಗಜ ಆಕರ್ಷತೇ ತೀರಂ ಗ್ರಾಹ ಆಕರ್ಷತೇ ಜಲಂ ॥ ೨೪ ॥

೨೦-೨೨. ಒಂದಾನೊಂದು ದಿವಸದಲ್ಲಿ ಶುಭ್ರವಾದ ಕೊಂಬುಗಳಿಂದ ಪ್ರಕಾಶಮಾನವಾದ ಆನೆಗಳ ಒಂದು ಯೂಥಪತಿಯು (ಸಲಗನು) ಮದವನ್ನು ಸುರಿಸುತ್ತಾ ಪಾದಚಾರಿಯಾದ ಪರ್ವತದಂತೆ ಮದೋದಕದ ವಾಸನೆಯಿಂದ ಪರ್ವತವನ್ನೆಲ್ಲಾ ಸುಗಂಧಿಯನ್ನಾಗಿ ಮಾಡುತ್ತಾ ಜಲಾಕಾಂಕ್ಷಿಯಾಗಿ ಅಲ್ಲಿಗೆ ಬಂದಿತು, ಐರಾವತದಂತೆ ಉನ್ನತವಾಗಿಯೂ ಮದೋದಕದ ಜಿಡ್ಡಿನಿಂದ ಕಪ್ಪಾಗಿಯೂ ಇದ್ದ ಆ ಆನೆಯು ಮದದಿಂದ ಕಣ್ಣುಗಳನ್ನು ತಿರುಗಿಸುತ್ತಾ ಬಹಳ ಬಾಯಾರಿಕೆಯಿಂದ ಸ್ನಾನಮಾಡಲಿಚ್ಛೆಯಿಂದ ಆ ಸರೋವರದ ನೀರಿನಲ್ಲಿಳಿಯಿತು, ಅಲ್ಲಿರುವ ಕಮಲವನದಲ್ಲಿ ತನ್ನ ಜೊತೆಯ ಆನೆಗಳೊಡನೆ ವಿಹರಿಸುತ್ತಿದ್ದಿತು.

೨೩-೨೪. ಆಗ ಆ ಸರೋವರದಲ್ಲಿ ಗುಟ್ಟಾಗಿ ಒಳಗೆ ಅಡಗಿದ್ದ ರೌದ್ರಾಕಾರವಾದ ಮೊಸಳೆಯು ವೇಗದಿಂದ ಬಂದು ಆ ಯೂಥಪತಿಯನ್ನು ಹಿಡಿದುಕೊಂಡಿತು. ಹೆಣ್ಣಾನೆಗಳೆಲ್ಲವೂ ಮೇಲೆ ನಿಂತು ನೋಡುತ್ತಾ ಘೋರವಾಗಿ ಚೀತ್ಕಾರಮಾಡುತ್ತಿದ್ದರೂ ಬಲಶಾಲಿಯಾದ ಮೊಸಳೆಯು ಆ ಆನೆಯನ್ನು ಕಮಲವನದಿಂದ ಒಳಕ್ಕೇ ಎಳೆಯುತ್ತಿದ್ದಿತು ಆನೆಯು ತೀರಕ್ಕೆ ಅಭಿಮುಖವಾಗಿ ಎಳೆಯುತ್ತಲೂ ಮೊಸಳೆಯು ನೀರಿಗೆ ಅಭಿಮುಖವಾಗಿ ಎಳೆಯುತ್ತಲೂ ಎರಡೂ ಈ ರೀತಿ ಹೋರಾಡಿದವು.

ತಯೋರ್ದಿವ್ಯಂ ಮಹಾಯುದ್ಧಂ ಜಾತಂ ವರ್ಷಸಹಸ್ರಕಂ ।
ವಾರುಣೈಃ ಸಂಯುತಃ ಪಾಶೈರ್ನಿಷ್ಪ್ರಯತ್ನಗತಿಃ ಕೃತಃ ॥ ೨೫ ॥

ವೇಷ್ಟ್ಯಮಾನಃ ಸುಘೋರೈಸ್ತು ಪಾಶೈರ್ನಾಗೋ ದೃಢೈಸ್ತಥಾ ।
ವಿಷ್ಫೂರ್ಯ ಚ ಯಥಾಶಕ್ತಿ ವಿಕ್ರೋಶಂಶ್ಚ ಮಹಾರವಾನ್ ॥ ೨೬ ॥

ವ್ಯಥಿತಃ ಸನ್ನಿರುಚ್ಛ್ವಾಸೋ ಗೃಹೀತೋ ಘೋರಕರ್ಮಣಾ ।
ಪರಮಾಮಾಪದಂ ಪ್ರಾಪ್ಯ ಮನಸಾಽಚಿಂತಯದ್ಧರಿಂ ॥ ೨೭ ॥

ಸ ತು ನಾಗವರಃ ಶ್ರೀಮಾನ್ನಾರಾಯಣಪರಾಯಣಃ ।
ತಮೇವ ಶರಣಂ ದೇವಂ ಗತಃ ಸರ್ವಾತ್ಮನಾ ತದಾ ॥ ೨೮ ॥

೨೫-೨೭. ಅವೆರಡಕ್ಕೂ ವರ್ಷಸಹಸ್ರಪರ್ಯಂತವಾಗಿ ಒಂದು ದಿವ್ಯಯುದ್ಧವೇ ನಡೆಯಿತು. ಅನಂತರ ನೀರಿನಲ್ಲಿಯೇ ಘೋರವಾದ ವರುಣಪಾಶದಿಂದ ಧೃಢವಾಗಿ ಕಟ್ಟಲ್ಪಟ್ಟ ಆ ಆನೆಯು ಗಮನ ಪ್ರಯತ್ನವಿಲ್ಲದೆ ಸೋತು ನಿಂತಿತು. ಹಾಗೆ ನಿಂತ ಆನೆಯು ಶಕ್ತಿ ಇರುವ ಪರ್ಯಂತವೂ ನಿಶ್ವಾಸವನ್ನು ವೇಗದಿಂದ ಬಿಡುತ್ತಾ ಮಹಾ ಧ್ವನಿಯುಂಟಾಗುವಂತೆ ಕಿರುಚುತ್ತಾ ಮಹಾವ್ಯಥೆಯಿಂದ ಕೊನೆಗೆ ನಿರುಚ್ಛ್ವಾಸವಾಗಿ ನಿಂತಿತು. ಹಾಗೆ ರೌದ್ರವಾದ ಆ ಮೊಸಳೆಯಿಂದ ಗ್ರಹಿಸಲ್ಪಟ್ಟು ಮಹಾವಿಪತ್ತಿನಲ್ಲಿ ಸಿಲುಕಿ ಬಿದ್ದ ಆ ಆನೆಯು ಆಗ ಸರ್ವದುಃಖನಾಶಕನಾದ ಹರಿಯನ್ನೇ ಶರಣುಹೊಂದಿ ಮನಸ್ಸಿನಲ್ಲಿ ಅವನನ್ನೇ ಚಿಂತಿಸತೊಡಗಿತು.

೨೮. ಭಗವದ್ಭಕ್ತಿಯೆಂಬ ಅಪರಿಮಿತೈಶ್ವರ್ಯವನ್ನು ಹೊಂದಿದ ಆ ಗಜೇಂದ್ರನು ನಾರಾಯಣನೇ ಪರಮಪ್ರಾಪ್ಯನೆಂದು ತಿಳಿದು ಸರ್ವಪ್ರಕಾರದಿಂದಲೂ ಅವನನ್ನೇ ಶರಣುಹೊಂದಿತು. ಇಲ್ಲಿ ನಾರಾಯಣನಿಗೆ ಅನುಕೂಲನಾಗಿಯೇ ವರ್ತಿಸುವೆನು ಎಂಬ ಆನುಕೂಲ್ಯ ಸಂಕಲ್ಪ. ಅವನಿಗೆ ಅನಭಿಮತವಾದ ವ್ಯಾಪಾರದಿಂದ ನಿವೃತ್ತಿಹೊಂದಿರುವೆನು, ಎಂಬ ಪ್ರಾತಿಕೂಲ್ಯವರ್ಜನ, ಅವನು ನನ್ನನ್ನು ರಕ್ಷಿಸಿಯೇ ರಕ್ಷಿಸುವನೆಂಬ ದೃಢವಾದ ನಂಬಿಕೆಯೆಂಬ ಮಹಾವಿಶ್ವಾಸ. ಅವನನ್ನೇ ರಕ್ಷಕನನ್ನಾಗಿ ಆಶ್ರಯಿಸುವಿಕೆ ಎಂಬ ಗೋಪ್ತೃತ್ವವರಣ, ಸ್ವಾತ್ಮನನ್ನೇ ಅವನ ಸ್ವತ್ತೆಂದು ಭಾವಿಸಿ ಸ್ವರಕ್ಷಣಕ್ಕೆ ತಕ್ಕ ವಿಶಿಷ್ಟಪ್ರಯತ್ನ ಮತ್ತು ಫಲಗಳೊಡನೆ ಅವನಲ್ಲಿ ಸಮರ್ಪಿಸುವಿಕೆ ಎಂಬ ಆತ್ಮನಿಕ್ಷೇಪ ಮತ್ತು ಅನನ್ಯಗತಿಕತ್ವರೂಪವಾದ ದೈನ್ಯ ಈ ರೀತಿಯಾದ ಆರು ಪದಾರ್ಥಗಳಲ್ಲಿ ಆತ್ಮನಿಕ್ಷೇಪವೇ ಅಂಗಿಯೆಂದೂ ಉಳಿದ ಐದೂ ಅಂಗಗಳೆಂದೂ ಭಗವಚ್ಛಾಸ್ತ್ರದಲ್ಲಿ

ನಿರೂಪಿಸಲ್ಪಟ್ಟ ಪಂಚಾಂಗ ಪ್ರಪತ್ತಿಯು ಸೂಚಿತವಾಗಿದೆ. ಯಮನಿಯಮಾದಿ ಯೋಗಾಂಗಗಳಲ್ಲಿಯೂ ಧ್ಯಾನವನ್ನು ಅಂಗಿಯನ್ನಾಗಿಯೂ ಉಳಿದ ಎಂಟು ಪದಾರ್ಥಗಳನ್ನು ಅಂಗಗಳನ್ನಾಗಿಯೂ ಪರಿಗಣಿಸಿ ಅಷ್ಟಾಂಗಯೋಗವೆಂದು ವ್ಯವಹರಿಸಿರುವಂತೆ ಇಲ್ಲಿಯೂ ಪ್ರಪತ್ತಿಯು ಪಂಚಾಗ (ಐದು ಅಂಗಗಳುಳ್ಳದ್ದು) ವೆಂದು ಭಾವಿಸಬೇಕು. "ಸ ತು ನಾಗವರಃ" ಎಂಬ ಶ್ಲೋಕದಲ್ಲಿಯೂ ಈ ಅಂಗಗಳು ಸೂಚಿತವಾಗುತ್ತವೆ. ಇಲ್ಲಿ ಶ್ರೀಮಾ್ ಎಂಬ ಪದದಿಂದ ಭಗವದ್ಭಕ್ತಿಯೆಂಬ ಐಶ್ವರ್ಯವನ್ನು ಹೊಂದಿರುವವನೆಂದು ಅರ್ಥವಾಗುತ್ತದೆ. (ಇಲ್ಲಿ "ಸಾ ಹಿ ಶ್ರೀರಮೃತಾ ಸತಾಂ" ಎಂಬ ಶ್ರುತ್ಯರ್ಥವು ಸೂಚಿತವಾಗಿದೆ.) ಇದರಿಂದ ಭಕ್ತಿಕಾರ್ಯವಾದ ಆನುಕೂಲ್ಯ ಸಂಕಲ್ಪವೂ ಪ್ರಾತಿಕೂಲ್ಯ ವರ್ಜನವೂ ಫಲಿತವಾಗುತ್ತವೆ, "ನಾರಾಯಣಪರಾಯಣಃ" ಎಂಬುದರಿಂದ ಮಹಾವಿಶ್ವಾಸವೂ, ಗೋಪ್ತೃತ್ವವರಣವೂ ಸೂಚಿತವಾಗುತ್ತವೆ, 'ತಮೇವ' ಎಂಬಲ್ಲಿರುವ ಏವ ಕಾರವು ಗೋಪ್ತೃತ್ವವರಣಕ್ಕೆ ಉಪಪಾದಕವಾಗಿಯೂ ಇರುತ್ತದೆ. ಸರ್ವಾತ್ಮನಾ ಎಂಬುವ ವಿಶೇಷಣದಿಂದ ಆತ್ಮನಿಕ್ಷೇಪವೂ ಸೂಚಿತವಾಗುತ್ತದೆ. ಇದರಿಂದ ಬೇರೆ ರಕ್ಷಕರಿಲ್ಲವೆಂಬ ಭಾವನೆಯಿಂದ ದೈನ್ಯವೂ ಅರ್ಥಸಿದ್ಧವಾಗುತ್ತದೆ. ಈ ರೀತಿ ಸ್ಥೂಲವಾದ ಪದಾರ್ಥ ದೃಷ್ಟಿಯಿಂದಲೇ ಗಜೇಂದ್ರನಿಂದ ಆಚರಿಸಲ್ಪಟ್ಟ ಪಂಚಾಗವುಳ್ಳ ಪ್ರಪತ್ತಿಯು ಇಲ್ಲಿ ನಿರೂಪಿಸಲ್ಪಟ್ಟಿದೆ. ಈ ವಿಧವಾದ ಪ್ರಪತ್ತಿಯ ಸ್ವರೂಪವನ್ನು ನಿರೂಪಿಸುವ ಉದ್ದೇಶದಿಂದ "ಆನುಕೂಲ್ಯಸ್ಯ ಸಂಕಲ್ಪಃ ಪ್ರಾತಿಕೂಲ್ಯಸ್ಯ ವರ್ಜನಂ। ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂ ತಥಾ। ಆತ್ಮನಿಕ್ಷೇಪಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ॥ ಎಂದು ಪ್ರಾರಂಭಿಸಿ ಅಂಗಾಂಗಿಗಳೊಡಗೂಡಿದ ಈ ಆರು ಪದಾರ್ಥಗಳಲ್ಲಿ ಅಂಗಿಯಾದ ಆತ್ಮನಿಕ್ಷೇಪವನ್ನು ಬೇರೆಮಾಡಿ ಐದು ಅಂಗಗಳನ್ನು ಪರಿಗಣಿಸಿ "ನ್ಯಾಸಃ ಪಂಚಾಂಗ ಸಂಯುತಃ" ಎಂದೂ "ಪ್ರಪತ್ತಿಂ ತಾಂ ಪ್ರಯುಂಜೀತ ಸ್ವಾಂಗೈಃ ಪಂಚಭಿರಾವೃತಾಂ (ಪಂಚಾಂಗಾಂ) ಎಂದೂ ಆಚಾರ್ಯರು ಉಪಸಂಹರಿಸಿರುತ್ತಾರೆ.

ಇಂತಹ ಜ್ಞಾನವಿಶೇಷರೂಪವಾದ ಪ್ರಪತ್ತಿಯು ಮೋಕ್ಷಫಲಕ್ಕಾಗಲೀ, ಇತರ ಫಲಪ್ರಾಪ್ತಿಗಾಗಲಿ ಸರ್ವೇಶ್ವರನಲ್ಲಿ ಆಚರಿಸಲ್ಪಡಬಹುದು, ಅರ್ಥಿಯಾದವನು ಜ್ಞಾನಿಯಾಗಿದ್ದಲ್ಲಿ ಉಪಾಯೋಪೇಯ ಸ್ವರೂಪವನ್ನು ತಿಳಿದು ತಾನೇ ಆಚರಿಸಬಹುದು. ಇಲ್ಲದಿದ್ದಲ್ಲಿ ಇದರ ಅಂಗಾಂಗಿಗಳ ಸ್ವರೂಪವನ್ನು ತಿಳಿದ ಕಾರುಣಿಕನಾದ ಆಚಾರ್ಯನ ಮೂಲಕ ಆಚರಿಸಬಹುದು. ಫಲವಿಶೇಷಾಪೇಕ್ಷೆ ಇದ್ದಲ್ಲಿ ಇದರ ಪ್ರಯೋಗಕ್ರಮವು ಸ್ವಲ್ಪ ಬದಲಾವಣೆಯನ್ನು ಹೊಂದುತ್ತದೆ. ಮೇಲೆ ನಿರೂಪಿಸಿರುವ ಐದು ಅಂಗಗಳೂ, ತನಗೂ ಭಗವಂತನಿಗೂ ಇರುವ ಶೇಷಶೇಷಿಭಾವಾನುಸಂಧಾನವೂ ಸಮಾನ. ಪ್ರಪತ್ತಿಯೆಂಬ ಈ ಸಾಧನವೂ ಜ್ಞಾನರೂಪವೇ ಆಗಿರುವದರಿಂದ ಜ್ಞಾನದಿಂದಲೇ ಮೋಕ್ಷವನ್ನು ಪ್ರತಿಪಾದಿಸುವ ಶ್ರುತಿಯೂ ಇದಕ್ಕೆ ವಿರೋಧಿಯಲ್ಲ. ಬಹುಜನ್ಮವಿಲಂಬನದಿಂದಲೂ

ಏಕಾತ್ಮ್ಯಾನುಗೃಹೀತಾತ್ಮಾ ವಿಶುದ್ಧೇನಾಂತರಾತ್ಮನಾ ।
ಜನ್ಮಜನ್ಮಾಂತರಾಭ್ಯಾಸಾದ್ಭಕ್ತಿಮಾನ್ಗರುಡಧ್ವಜೇ ॥ ೨೯ ॥

ಆದ್ಯಂ ದೇವಂ ಮಹಾದೇವಂ ಪೂಜಯಾಮಾಸ ಕೇಶವಂ ।
ಮಥಿತಾಮೃತಫೇನಾಂಭಂ ಶಂಖಚಕ್ರಗದಾಧರಂ ॥ ೩೦ ॥

ಸಹಸ್ರಶುಭನಾಮಾನಮಾದಿದೇವಮಜಂ ವಿಭುಂ ।
ಪ್ರಗೃಹ್ಯ ಪುಷ್ಕರಾಗ್ರೇಣ ಕಾಂಚನಂ ಕಮಲೋದ್ಭವಂ ।
ಆಪದ್ವಿಮೋಕ್ಷಮನ್ವಿಚ್ಛನ್ಗಜಃ ಸ್ತೋತ್ರಮುದೀರಯತ್ ॥ ೩೧ ॥

ಬಹ್ವಾಯಾಸದಿಂದಲೂ ಪೊಂದಲು ಅರ್ಹವಾದ ಉಪಾಸನವೆಂಬ ಸಾಧನಕ್ಕಿಂತಲೂ ಅಲ್ಪಾಯಾಸದಿಂದಲೂ ಅಲ್ಪಕಾಲದಲ್ಲಿ ಒಂದೇ ಆವರ್ತಿ ಆಚರಿಸಲು ಸಾಧ್ಯವಾದ ಈ ಪ್ರಪತ್ತಿಯು ಲಘೂಪಾಯವೆಂದು ಕರೆಯಲ್ಪಡುತ್ತದೆ. ಅಧಿಕಾರಿಭೇದದಿಂದ ಈ ಉಪಾಯಗಳು ನಿರ್ಧರಿಸಲ್ಪಟ್ಟಿರುವದ್ದರಿಂದ ಮೋಕ್ಷವೆಂಬ ಒಂದು ಫಲಕ್ಕೆ ಸಾಧನ ಗಳೆರಡಿರಬಹುದೇ ಎಂಬ ಯಾವ ಶಂಕೆಗೂ ಅವಕಾಶವಿರುವದಿಲ್ಲ. ಗಜೇಂದ್ರ, ದ್ರೌಪದೀ, ಕಾಕಾಸುರ, ವಿಭೀಷಣ ಇತ್ಯಾದಿ ಭಗವದ್ಭಕ್ತರಿಗೆ ಈ ಪ್ರಪತ್ತಿಯೇ ಅಪೇಕ್ಷಿತವಾದ ಆಯಾಯ ಫಲಪ್ರಾಪ್ತಿಗೆ ಸಾಧನವಾಗಿದೆ ಎಂಬ ಅಂಶವು ಆಯಾ ಪ್ರಕರಣಗಳನ್ನು ಪರ್ಯಾಲೋಚನೆ ಮಾಡಿದವರಿಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಎಂದು ಶಾಸ್ತ್ರಜ್ಞರಾದ ಆಚಾರ್ಯರು ನಿರ್ಣಯಿಸಿರುತ್ತಾರೆ.

೨೯. ಹಾಗೆ ಗರುಡಧ್ವಜನಾದ ನಾರಾಯಣನಲ್ಲಿ ಜನ್ಮಜನ್ಮಾಂತರಗಳಿಂದಲೂ ಪೊಂದಿದ್ದ ಭಾವನಾಭ್ಯಾಸ ಬಲದಿಂದ ವಿಶುದ್ಧವಾದ ಮನಸ್ಸನ್ನು ಹೊಂದಿ ಆ ಗಜೇಂದ್ರನು ಆ ಪ್ರಭುವಿನಲ್ಲಿ ಏಕಾತ್ಮಬುದ್ಧಿಯನ್ನು ಹೊಂದಿತು. (ಐಕಾತ್ಮ್ಯಭಾವನೆ ಎಂದರೆ ತನಗೂ ಇತರ ಚೇತನಾಚೇತನವಸ್ತುಗಳಿಗೂ ಅವನೊಬ್ಬನೇ ಅಂತರ್ಯಾಮಿ ಯಾಗಿರತಕ್ಕವನು ಎಲ್ಲಾ ಚರಾಚರ ವಸ್ತುಗಳಿಗೂ ಅವನೇ ಆತ್ಮನಾಗಿರುವನೆಂಬ ಆತ್ಮೈಕ್ಯಬುದ್ಧಿ, ಇಲ್ಲಿ ಲೋಕ ವ್ಯವಹಾರಕ್ಕೆ ವಿಷಯಗಳಾದ ಎಲ್ಲಾ ಪದಾರ್ಥಗಳಿಗೂ ಅವನೇ ಶರೀರಿಯಾಗಿರುವದ್ದರಿಂದ ಇತರ ಪದಾರ್ಥಗಳೆಲ್ಲಾ ಅವನ ಶರೀರಗಳು, ಅಂತಹ ಅವನ ವ್ಯಾಪ್ತಿಯಿಂದ ಬೇರೆಯಾಗಿ ಶರೀರ ಭಾವವನ್ನು ಹೊಂದದಿರುವ ಪದಾರ್ಥವೇ ಇಲ್ಲ. ಈ ವಿಧವಾದ ಅಬ್ರಹ್ಮಾತ್ಮಕವಾದ ವಸ್ತುಗಳ ನಿಷೇಧವನ್ನೇ " ನೇಹನಾನಾ " ಎಂಬ ಶ್ರುತಿಯು ಬೋಧಿಸುತ್ತದೆ ಎಂದು ತಾತ್ಪರ್ಯ)

೩೦-೩೧. ಈ ವಿಧವಾದ ಭಾವನೆಯಿಂದ ಆ ಗಜೇಂದ್ರನು ಕಡೆಯಲ್ಪಟ್ಟ ಅಮೃತದನೊರೆಯಂತೆ ಭೋಗ್ಯನಾಗಿಯೂ (ಇದರಿಂದ ಸಾರವಾದ ವಸ್ತುಗಳಲ್ಲಿಯೂ

ಗಜೇಂದ್ರ ಉವಾಚ

ಓಂ ನಮೋ ಮೂಲಪ್ರಕೃತಯೇ ಅಜಿತಾಯ ಮಹಾತ್ಮನೇ ।
ಅನಾಶ್ರಿತಾಯ ದೇವಾಯ ನಿಃಸ್ಪೃಹಾಯ ನಮೋಽಸ್ತು ತೇ ॥ ೩೨ ॥

ನಮ ಆದ್ಯಾಯ ವಾಮಾಯ ಆರ್ಷ್ಯಾಯಾದಿಪ್ರವರ್ತಿನೇ ।
ಅನಂತರಾಯ ಚೈಕಾಯ ಅವ್ಯಕ್ತಾಯ ನಮೋ ನಮಃ ॥ ೩೩ ॥

ಸಾರತಮವಾದ ಭೋಗ್ಯ ವಸ್ತುವೆಂದು ಸೂಚಿಸಿದಂತಾಯಿತು) ಆದಿಪುರುಷನಾಗಿಯೂ ದೇವತೋತ್ತಮನಾಗಿಯೂ, ಶಂಖಚಕ್ರಗದಾಧರನಾಗಿಯೂ, ಶುಭಕರವಾದ ಸಹಸ್ರ ನಾಮಗಳುಳ್ಳವನಾಗಿಯೂ ಇರುವ ಆ ಪ್ರಭುವನ್ನು ಸೊಂಡಲಿನ ಅಗ್ರಭಾಗದಿಂದ ಅಲ್ಲಿದ್ದ ಕೆಂಪು ಕಮಲಗಳನ್ನು ಆಹರಿಸಿ ಅವುಗಳಿಂದ ಪೂಜಿಸಿದನು. ತನ್ನ ವಿಪತ್ತಿನಿಂದ ಪಾರಾಗಲು ಆಶಿಸಿ ಈ ಸ್ತೋತ್ರವನ್ನೂ ಪಠಿಸಿದನು.

೩೨ ಗಜೇಂದ್ರನು ಸ್ತೋತ್ರಮಾಡುತ್ತಾನೆ, ಸರ್ವಜಗತ್ತಿಗೂ ಆದಿಕಾರಣನಾಗಿರುವ ಪ್ರಭುವೇ, ಅಥವಾ ಮೂಲ ಪ್ರಕೃತಿಯನ್ನು ಅಂತರ್ಯಾಮಿರೂಪದಿಂದ ಅಧಿಷ್ಠಾನಮಾಡಿ ಜಗದುತ್ಪತ್ತಿಗೆ ಕಾರಣನಾದವನೇ. (ಮೂಲಪ್ರಕೃತಿಯೆಂಬ ಸೂಕ್ಷ್ಮ ವಸ್ತುವೇ ಜಗತ್ತಿಗೆ ಕಾರಣವಾಗಲು ಮಹತ್ತತ್ವವೇ ಮೊದಲಾದ ವಿಕಾರಗಳನ್ನು ಹೊಂದುತ್ತದೆ ಎಂದು ಸಾಂಖ್ಯಶಾಸ್ತ್ರದ ನಿರ್ಣಯ, ಅಚೇತನವಾದ ಮೂಲ ಪ್ರಕೃತಿಯು ಕಾರಣವಾಗಲು ಅವಕಾಶವಿಲ್ಲದಿರುವದ್ದರಿಂದ ಚೇತನ ಸ್ವರೂಪನಾದ ಪರಮಾತ್ಮನಿಂದ ಅಧಿಕರಿಸಲ್ಪಟ್ಟ ಆ ಮೂಲ ಪ್ರಕೃತಿಯೇ ಕಾರಣವಾಗುತ್ತದೆ ಯಾದುದರಿಂದ ಸ್ವತಂತ್ರವಾದ ಪ್ರಕೃತಿಗೆ ಕಾರಣತ್ವವು ಯುಕ್ತಿಯುಕ್ತವಾಗಲಾರದೆಂದು ವೇದಾಂತ ಶಾಸ್ತ್ರದ ಸಿದ್ಧಾಂತ) ಅಜಿತ ಮೂರ್ತಿಯೇ ಮಹಾಮಹಿಮನೇ ನಿನಗೆ ನಮಸ್ಕಾರಗಳು. ಆಶ್ರಯಾಂತರ ರಹಿತನಾಗಿಯೂ ದಿವ್ಯ ಪ್ರಕೃತಿಯಾಗಿಯೂ ನಿಸ್ಪೃಹನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

೩೩. ಆದಿಪುರುಷನಾಗಿಯೂ ಶತ್ರುಗಳಿಗೆ ವಕ್ರಸ್ವರೂಪನಾಗಿಯೂ ಮಂತ್ರದರ್ಶಿಯಾಗಿಯೂ ಜಗತ್ತಿಗೆ ಪ್ರಥಮಪ್ರವರ್ತಕನಾಗಿಯೂ ಇರುವ ನಿನಗೆ ನಮಸ್ಕಾರಗಳು. ಹಾಗೆಯೇ ದೇಶಕಾಲವಸ್ತುಗಳಿಗಿರುವ ಮೂರು ವಿಧವಾದ ಪರಿಚ್ಛೇದ (ಅಳತೆ) ರಹಿತನಾಗಿಯೂ ಸ್ವಜಾತೀಯವಾದ ದ್ವಿತೀಯ ವಸ್ತುರಹಿತನಾಗಿಯೂ ಅವ್ಯಕ್ತಮೂರ್ತಿಯಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು. (ಇಲ್ಲಿ ಅನಂತರಾಯ ಎಂಬ ವಿಶೇಷಣದಿಂದ ಮೂರು ವಿಧವಾದ ಪರಿಚ್ಛೇದ (ಅಳತೆ)

ನಮೋ ಗುಹ್ಯಾಯ ಗೂಢಾಯ ಗುಣಾಯ ಗುಣವರ್ತಿನೇ ।
ಅತರ್ಕ್ಯಾಯಾಽಪ್ರಮೇಯಾಯ ಅತುಲಾಯ ನಮೋ ನಮಃ । ॥ ೩೪ ॥

ನಮಃ ಶಿವಾಯ ಶಾಂತಾಯ ನಿಶ್ಚಿಂತಾಯ ಯಶಸ್ವಿನೇ ।
ಸನಾತನಾಯ ಪೂರ್ವಾಯ ಪುರಾಣಾಯ ನಮೋ ನಮಃ ॥ ೩೫ ॥

ರಹಿತನೆಂದು ಹೇಳಲಾಗಿದೆ. ಇಲ್ಲಿ ದೇಶಪರಿಚ್ಛೇದವೆಂದರೆ "ಇದು ಸ್ಥಳದಲ್ಲಿದೆ, ಇಲ್ಲಿ ಇಲ್ಲ" ಎಂಬ ಆಯಾಯ ಪ್ರದೇಶದಲ್ಲಿ ಉಂಟಾಗುವ ವ್ಯವಹಾರದ ಫಲವಾದ ವಸ್ತುವಿನ ಸಂಕುಚಿತಸ್ವಭಾವ. ಕಾಲಪರಿಚ್ಛೇದವೆಂದರೆ "ಇದು ಈ ಕಾಲದಲ್ಲಿದ್ದೆ, ಈ ಕಾಲದಲ್ಲಿಲ್ಲ" ವೆಂಬ ಕಾಲಕೃತವಾಗಿ ವ್ಯವಹರಿಸಲ್ಪಡುವ ವಸ್ತುವಿನ ಸಂಕುಚಿತ ಸ್ವಭಾವ. ವಸ್ತುಪರಿಚ್ಛೇದವೆಂದರೆ "ಇದು ಈ ವಸ್ತುವಲ್ಲ" ಎಂದು ಮತ್ತೊಂದು ವಸ್ತುವಿನಲ್ಲಿ ಇಲ್ಲದಿರುವ ವಸ್ತುವಿನ ಸಂಕುಚಿತಸ್ವಭಾವ. ಈ ರೀತಿಯಾದ ದೇಶ, ಕಾಲ, ವಸ್ತುಕೃತವಾದ ಸಂಕುಚಿತಸ್ವಭಾವವು ಪ್ರಪಂಚದ ಎಲ್ಲಾ ವಸ್ತುಗಳಲ್ಲಿಯೂ ಇರುತ್ತದೆ. ಬ್ರಹ್ಮವು ಸರ್ವವ್ಯಾಪಕವಾದುದರಿಂದ ಸರ್ವಕಾಲದಲ್ಲಿಯೂ ಇರತಕ್ಕದಾದುದರಿಂದಲೂ ಸತ್ತಾಶ್ರಯವಾದ ಎಲ್ಲಾ ಪದಾರ್ಥಗಳಲ್ಲಿಯೂ ಇರುವದರಿಂದಲೂ ಈ ಮೂರು ವಿಧವಾದ ಸಂಕುಚಿತಸ್ವಭಾವವು ಪರಬ್ರಹ್ಮದಲ್ಲಿ ಇಲ್ಲವೆಂದೂ ಲೋಕಾತೀತವೆಂದೂ ತಾತ್ಪರ್ಯ.)

೩೪. ಗುಹೆಯಂತೆ ರಹಸ್ಯವಾಗಿರುವ ಚೇತನಾಚೇತನರ ಅಂತಃಪ್ರದೇಶದಲ್ಲಿ ವಾಸಿಸುವ ಆದುದರಿಂದಲೇ ಬಾಹ್ಯದೃಷ್ಟಿಯುಳ್ಳ ಇತರರಿಂದ ತಿಳಿಯಲಶಕ್ಯನಾಗಿರುವ ಹಾಗೂ ಗುಣಗಳಿಗೆ ಪ್ರವರ್ತಕನಾದ ಮತ್ತು ಪ್ರಕೃತಿಯ ಗುಣಸಂಬಂಧದಿಂದ ಪರಿಣಮಿಸುವ ಎಲ್ಲಾ ಪದಾರ್ಥಗಳಲ್ಲೂ ಆ ಗುಣಗಳಿಗೆ ಪ್ರವರ್ತಕನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು. ಮತ್ತು ಲೌಕಿಕವಸ್ತುಗಳಂತೆ ತರ್ಕದಿಂದ ತಿಳಿಯಲಶಕ್ಯನಾಗಿಯೂ (ಇಲ್ಲಿ ತರ್ಕವೆಂದರೆ ಕಾರ್ಯದ ಸಿದ್ಧಿಗಾಗಿ ಉಪಯೋಗಿಸಲ್ಪಡುವ ಕಾರಣದ ಉಪನ್ಯಾಸ. ಲೌಕಿಕಶಾಸ್ತ್ರಗಳಲ್ಲಿ ಕಾರ್ಯದಿಂದ ಕಾರಣವನ್ನು ಸಾಧ್ಯಸಾಧನಭಾವದಿಂದ ತಿಳಿಯುವಂತೆ ಪರಮಾತ್ಮನನ್ನು ಈ ವಿಧವಾದ ಸಾಧ್ಯಸಾಧನಭಾವರೂಪವಾದ ತರ್ಕದಿಂದ ತಿಳಿಯಲಶಕ್ಯವೆಂದೂ ತಾತ್ಪರ್ಯ.) ತಿಳಿಯಲಶಕ್ಯನಾಗಿಯೂ (ಇದಕ್ಕೆ ಪರಬ್ರಹ್ಮದ ಅಪರಿಮಿತತತ್ವವೇ ಕಾರಣ) ಅಸದೃಶನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

೩೫. ಮಂಗಲಸ್ವರೂಪನಾಗಿಯೂ (ಕಾಮಕ್ರೋಧಾದಿ ರಹಿತನಾದುದರಿಂದ) ಶಾಂತನಾಗಿಯೂ, (ಹೊಂದಬೇಕಾದ ವಸ್ತುಗಳಿಲ್ಲದಿರುವದ್ದರಿಂದ) ಚಿಂತಾ ರಹಿತ

ನಮೋಽಸ್ತು ತಸ್ಮೈ ದೇವಾಯ ನಿರ್ಗುಣಾಯ ಗುಣಾತ್ಮನೇ ।
ನಮೋ ಜಗತ್ಪ್ರತಿಷ್ಠಾಯ ಗೋವಿಂದಾಯ ನಮೋ ನಮಃ ॥ ೩೬ ॥

ನಮೋಽಸ್ತು ಪದ್ಮನಾಭಾಯ ಸಾಂಖ್ಯಯೋಗೋದ್ಭವಾಯ ಚ ।
ವಿಶ್ವೇಶ್ವರಾಯ ದೇವಾಯ ಶಿವಾಯ ಹರಯೇ ನಮಃ ॥ ೩೭ ॥

ನಮೋಽಸ್ತು ತಸ್ಮೈ ದೇವಾಯ ನಿರ್ಗುಣಾಯ ಗುಣಾತ್ಮನೇ ।
ನಾರಾಯಣಾಯ ವಿಶ್ವಾಯ ದೇವಾಯ ಪರಮಾತ್ಮನೇ ॥ ೩೮ ॥

ನಾಗಿಯೂ (ಸರ್ವವನ್ನೂ ಹೊಂದಿರುವ ಪೂರ್ಣ ಕಾಮನಾದ ಪರಮಾತ್ಮನಿಗೆ ಯಾವ ವಿಷಯದಲ್ಲೂ ಚಿಂತೆಗೆ ಅವಕಾಶವಿಲ್ಲವೆಂದು ತಾತ್ಪರ್ಯ) ಜಗತ್ಕಾರಣನೆಂದು ವೇದಗಳೂ ಕೊಂಡಾಡಲು ಕಾರಣವಾಗಿರುವ ಕೀರ್ತಿಯುಳ್ಳವನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು. ಹಾಗೆಯೇ ಸರ್ವಪೂರ್ವನಾಗಿಯೂ ಸರ್ವಕಾಲವ್ಯಾಪಿಯಾಗಿಯೂ ಪುರಾತನನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

೩೬. ದಿವ್ಯಪ್ರಕೃತಿಯಾಗಿಯೂ, ಹೇಯಗುಣ ಸಂಬಂಧ ಶೂನ್ಯನಾಗಿಯೂ, ಅನಂತ ಕಲ್ಯಾಣಗುಣಶಾಲಿಯಾಗಿಯೂ ಇರುವ ಆಶ್ಚರ್ಯ ಮಹಿಮನಾದ ನಿನಗೆ ನಮಸ್ಕಾರಗಳು, ಜಗತ್ತಿನ ಸ್ಥಿತಿಗೆ ಕಾರಣನಾಗಿಯೂ, ಅಥವಾ ಆಧಾರ ಭೂತನಾಗಿಯೂ, ಸರ್ವವಸ್ತು ಪ್ರಾಪ್ತಿಗೆ ಬೋಧಕವಾದ ಗೋವಿಂದ ನಾಮದಿಂದ ಕರೆಯಲ್ಪಡುತ್ತಲೂ ಇರುವ ನಿನಗೆ ಅನಂತ ನಮಸ್ಕಾರಗಳು.

೩೭. ಚತುರ್ಮುಖನಿಗೂ ಉತ್ಪತ್ತಿಸ್ಥಾನವಾದ ಪದ್ಮವನ್ನು ನಾಭಿಯಲ್ಲಿ ಧರಿಸಿರುವ (ಚತುರ್ಮುಖನಿಗೂ ವೇದಗಳನ್ನು ಉಪದೇಶ ಮಾಡಿದುದರಿಂದ ಅವನ ಮೂಲಕ ವೇದಗಳೆಂಬ ಮಹಾ ಶಾಸ್ತ್ರಗಳಿಗೆ ಪ್ರವರ್ತಕನಾಗಿರುವವನೆಂದು ತಾತ್ಪರ್ಯ) ಸಾಂಖ್ಯ ಶಾಸ್ತ್ರಕ್ಕೆ ಪ್ರವರ್ತಕನಾದ ಕಪಿಲ ಋಷಿಯಲ್ಲಿ ಅಂತರ್ಯಾಮಿಯಾಗಿ ನಿಂತು ಆ ಶಾಸ್ತ್ರಕ್ಕೂ ಪ್ರಕಾಶನಾಗಿ, ಹಾಗೆಯೇ ಯೋಗ ಶಾಸ್ತ್ರಕ್ಕೆ ಪ್ರವರ್ತಕನಾದ ಹಿರಣ್ಯಗರ್ಭನಲ್ಲೂ ಅಂತರ್ಯಾಮಿಯಾಗಿ ನಿಂತು ಆ ಶಾಸ್ತ್ರಕ್ಕೂ ಪ್ರಕಾಶಕನಾಗಿ ಸರ್ವಜಗತ್ಪತಿಯಾಗಿ ಶಿವನಿಗೂ ಅಂತರ್ಯಾಮಿಯಾಗಿ ಸರ್ವಪಾಪನಾಶಕನಾದುದರಿಂದ ಹರಿಶಬ್ದವಾಚ್ಯನಾಗಿರುವ ದೇವತೋತ್ತಮನಾದ ನಿನಗೆ ಅನೇಕ ನಮಸ್ಕಾರಗಳು.

೩೮-೩೯. ವಿಶ್ವರೂಪಿಯಾಗಿಯೂ ಅಸಾಧಾರಣವಾದ ನಾರಾಯಣಪದ ವಾಚ್ಯನಾಗಿಯೂ ಪರಮಾತ್ಮಸ್ವರೂಪನಾಗಿಯೂ ಹೇಯಗುಣರಹಿತನಾಗಿ ಅನಂತ ಕಲ್ಯಾಣಗುಣಕರನಾಗಿಯೂ ಇರುವ ದೇವತಾಸಾರ್ವಭೌಮನಾದ ಪ್ರಭುವಿಗೆ ಅನಂತ

ನಮೋ ನಮಸ್ತೇ ಕಾರಣವಾಮನಾಯ
ನಾರಾಯಣಾಯಾಽಮಿತವಿಕ್ರಮಾಯ ।
ಶ್ರೀ ಶಾರ್ಙ್ಗಚಕ್ರಾಸಿಗದಾಧರಾಯ
ನಮೋಽಸ್ತು ತಸ್ಮೈ ಪುರುಷೋತ್ತಮಾಯ ॥ ೩೯ ॥

ಗುಹ್ಯಾಯ ವೇದನಿಲಯಾಯ ಮಹೋರಗಾಯ
ಸಿಂಹಾಯ ದೈತ್ಯನಿಧನಾಯ ಚತುರ್ಭುಜಾಯ ।
ಬ್ರಹ್ಮೇಂದ್ರರುದ್ರಮುನಿಚಾರಣಸಂಸ್ತುತಾಯ
ದೇವೋತ್ತಮಾಯ ಸಕಲಾಯ ನಮೋಽಚ್ಯುತಾಯ ॥ ೪೦ ॥

ನಮಸ್ಕಾರಗಳು. ಕೃತ್ರಿಮವಾಮನನಾಗಿ ಅವತರಿಸಿ ತ್ರಿವಿಕ್ರಮರೂಪದಿಂದ ಅಪರಿಮಿತ ಪರಾಕ್ರಮವನ್ನು ತೋರಿಸಿದ ನಾರಾಯಣಮೂರ್ತಿಯಾದ ನಿನಗೆ ಅನಂತ ನಮಸ್ಕಾರ ಗಳು. ಚಾಪ, ಚಕ್ರ, ಖಡ್ಗ, ಗದಾಧಾರಿಯಾಗಿ ಅಸಾಧಾರಣವಾದ ಆಯುಧಗಳಿಂದ ಪುರುಷೋತ್ತಮನಾಗಿ ಪ್ರಕಾಶಿಸುತ್ತಿರುವ ನಿನಗೆ ಅನಂತ ನಮಸ್ಕಾರಗಳು.

೪೦. ಸಾಮಾನ್ಯಜನರಿಗೆ ಗೋಚರವಾಗದಿರುವ ಮತ್ತು ಮಹಾಪ್ರಲಯ ದಿಂದ ಸರ್ವವೂ ನಷ್ಟವಾದಾಗ ವೇದಗಳಿಗೂ ಆಶ್ರಯನಾಗಿ ನಿಂತ (ಪರಮಾತ್ಮನು ನಿತ್ಯಜ್ಞಾನವುಳ್ಳವನಾದುದರಿಂದ ಪ್ರಲಯಕಾಲದಲ್ಲಿ ಎಲ್ಲಾ ವಸ್ತುಗಳೂ ನಷ್ಟವಾದರೂ ವೇದಗಳು ಮಾತ್ರ ಅವನ ನಿತ್ಯಜ್ಞಾನರೂಪವಾಗಿ ಅವನಲ್ಲೇ ಅಡಗಿವೆಯೆಂದೂ ಚತುರ್ಮುಖನನ್ನು ಸೃಷ್ಟಿಮಾಡಿದಮೇಲೆ ಆ ವೇದಗಳನ್ನೇ ಅವನಿಗೆ ಉಪದೇಶಿಸಿ ಸರ್ವಜ್ಞತೆಯನ್ನುಂಟುಮಾಡಿ ಸೃಷ್ಟಿಕಾರ್ಯದಲ್ಲಿ ನಿಯೋಗಿಸಲ್ಪಟ್ಟ ಅವನಿಂದಲೇ ವೇದಗಳನ್ನು ಪುನಃ ಉಪದೇಶಪರಂಪರೆಯಿಂದ ಪರಮಾತ್ಮನೇ ಪ್ರಚಾರಮಾಡುತ್ತಾ ನಾದ್ದರಿಂದ ವೇದಗಳ ನಿತ್ಯತ್ವವೂ ಇದರಿಂದ ಉಪಪಾದಿಸಿದಂತಾಗುತ್ತದೆ.) ಭೂಮಿ ಯನ್ನು ಧರಿಸಿರುವ ಆದಿಶೇಷನಿಗೂ ಅಂತರ್ಯಾಮಿಯಾಗಿ ಆ ಕಾರ್ಯವನ್ನೂ ನಿರ್ವಹಿಸುತ್ತಿರುವ ಮತ್ತು ದೈತ್ಯರಾಜನ ನಾಶಕ್ಕಾಗಿ ಚತುರ್ಭುಜನಾಗಿಯೂ ಸಿಂಹ ರೂಪಿಯಾಗಿಯೂ ಅವತರಿಸಿದ ಬ್ರಹ್ಮ, ಇಂದ್ರ, ರುದ್ರ, ಮುನಿಗಳು, ಚಾರಣರು ಮೊದಲಾದವರಿಂದಲೂ ಪೂಜಿಸಲ್ಪಡುವ ಸಕಲವಸ್ತುಸ್ವರೂಪನಾದ ದೇವತೋತ್ತಮ ನಾದ ಅಚ್ಯುತನಾದ ನಿನಗೆ ಅನಂತ ನಮಸ್ಕಾರಗಳು.

ನಾಗೇಂದ್ರಭೋಗಶಯನಾಯ ಚ ಸುಪ್ರಿಯಾಯ
ಗೋಕ್ಷೀರಹೇಮಶುಕನೀಲಘನೋಪಮಾಯ ।
ಪೀತಾಂಬರಾಯ ಮಧುಕೈಟಭನಾಶನಾಯ
ವಿಶ್ವಾದ್ಯಚಾರುಮುಕುಟಾಯ ನಮೋಽಕ್ಷರಾಯ ॥ ೪೧ ॥

ನಾಭಿಪ್ರಜಾತಕಮಲಸ್ಥ ಚತುರ್ಮುಖಾಯ
ಕ್ಷೀರೋದಕಾರ್ಣವ ನಿಕೇತಯಶೋಧರಾಯ ।
ನಾನಾವಿಚಿತ್ರ ಕನಕಾಂಗದ ಭೂಷಣಾಯ
ಸರ್ವೇಶ್ವರಾಯ ವರದಾಯ ನಮೋ ವರಾಯ ॥ ೪೨ ॥

ಭಕ್ತಿಪ್ರಿಯಾಯ ವರದೀಪ್ತಸುದರ್ಶನಾಯ
ದೇವೇಂದ್ರವಿಘ್ನಶಮನೋದ್ಯತಪೌರುಷಾಯ ।
ಫುಲ್ಲಾರವಿಂದ ವಿಮಲಾಯತ ಲೋಚನಾಯ
ಯೋಗೇಶ್ವರಾಯ ವರದಾಯ ನಮೋ ವರಾಯ ॥ ೪೩ ॥

---

೪೧. ಹಸುವಿನ ಹಾಲಿನಂತೆ ಭೋಗ್ಯನಾಗಿಯೂ ಚಿನ್ನದಂತೆ ರಮ್ಯವಾದ ದೇಹಕಾಂತಿಯುಳ್ಳವನಾಗಿಯೂ ಗಿಣಿಯಂತೆ ಆಕರ್ಷಣೀಯವಾದ ಅವಯವ ಸನ್ನಿವೇಶವುಳ್ಳವನಾಗಿಯೂ ನೀಲಮೇಘದಂತೆ ಶ್ಯಾಮಲಮೂರ್ತಿಯಾಗಿಯೂ ಆಗಿ ಸರ್ವಪ್ರಿಯನಾಗಿಯೂ ಶೇಷಶಾಯಿಯಾಗಿಯೂ ಪೀತಾಂಬರಧಾರಿಯಾಗಿಯೂ ಕಿರೀಟವೇ ಮೊದಲಾದ ರಮ್ಯಾಭರಣಭೂಷಿತನಾಗಿಯೂ ಇರುವ ಅಕ್ಷಯಸ್ವರೂಪನಾದ ಮಧುಕೈಟಭನಾಶಕನಿಗೆ ಅನಂತ ನಮಸ್ಕಾರಗಳು.

೪೨. ಚತುರ್ಮುಖನಿಗೆ ಆಶ್ರಯವಾಗಿರುವ ಕಮಲವನ್ನು ನಾಭಿ ಪ್ರದೇಶದಲ್ಲಿ ಹೊಂದಿ ಯಶಸ್ವಿಯಾಗಿ ಕ್ಷೀರ ಸಮುದ್ರದಲ್ಲಿ ನೆಲಸಿ ನಾನಾ ವಿಧವಾದ ದಿವ್ಯಾಭರಣ ಶೋಭಿತನಾಗಿ ಸರ್ವೇಶ್ವರನಾಗಿಯೂ ವರಪ್ರದನಾಗಿಯೂ ಶೋಭಿಸುತ್ತಿರುವ ನಿನಗೆ ಅನಂತ ನಮಸ್ಕಾರಗಳು.

೪೩. ಭಕ್ತಿಯಲ್ಲಿ ಪ್ರೀತಿಯುಳ್ಳವನಾಗಿಯೂ, ಜಾಜ್ವಲ್ಯಮಾನವಾದ ಸುದರ್ಶನವನ್ನು ಧರಿಸಿ, ದೇವೇಂದ್ರನ ವಿಘ್ನನಾಶನದಲ್ಲಿಯೇ ಪರಾಕ್ರಮವನ್ನು ವಿನಿಯೋಗಿಸುತ್ತಲೂ, ಅರಳಿದ ಕಮಲಗಳಂತೆ ವಿಶಾಲವಾದ ಕಣ್ಣುಗಳುಳ್ಳವನಾಗಿಯೂ ಯೋಗಗಳಿಗೆ ಪ್ರವರ್ತಕನಾಗಿಯೂ ವರಪ್ರದನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

ಬ್ರಹ್ಮಾಯನಾಯ ತ್ರಿದಶಾಯನಾಯ
ಲೋಕಾಯನಾಯಾತ್ಮಹಿತಾಯನಾಯ ।
ನಾರಾಯಣಾಯಾತ್ಮವಿಕಾಸನಾಯ
ಮಹಾವರಾಹಾಯ ನಮಃ ಸುರೋಽಸಿ ॥ ೪೪ ॥

ಕೂಟಸ್ಥಮವ್ಯಕ್ತಮಚಿಂತ್ಯರೂಪಂ
ನಾರಾಯಣಂ ಕಾರಣಮಾದಿದೇವಂ ।
ಯುಗಾಂತಶೇಷಂ ಪುರುಷಂ ಪುರಾತನಂ
ತಂ ದೇವದೇವಂ ಶರಣಂ ಪ್ರಪದ್ಯೇ ॥ ೪೫ ॥

---

೪೪. ಬ್ರಹ್ಮನಿಗೂ ಮಾರ್ಗದರ್ಶಿಯಾಗಿಯೂ, ಅಥವಾ ವೇದಗಳಿಗೆ ಆವಾಸ ಸ್ಥಾನನಾಗಿಯೂ, ದೇವತೆಗಳಿಗೂ ಪ್ರಾಪ್ಯಸ್ಥಾನನಾಗಿಯೂ, ಲೋಕಕ್ಕೆಲ್ಲಾ ಗತಿ ಪ್ರದನಾಗಿಯೂ, ಆತ್ಮ ಹಿತಕ್ಕೆ ಮಾರ್ಗಪ್ರದನಾಗಿಯೂ, ಮನುಷ್ಯರೆಲ್ಲರಿಗೂ ಪ್ರಾಪ್ಯ ನಾಗಿಯೂ ಪ್ರಾಪ್ತಿಸಾಧನನಾಗಿಯೂ, ಮುಕ್ತದಶೆಯಲ್ಲುಂಟಾಗುವ ಆತ್ಮ ವಿಕಾಸಕ್ಕೆ ಕಾರಣನಾಗಿಯೂ (ಸಂಸಾರದಶೆಯಲ್ಲಿ ಜೀವನು ಕರ್ಮ ಸಂಬಂಧದಿಂದ ಜ್ಞಾನ ಸಂಕೋಚವನ್ನು ಹೊಂದಿರುವನೆಂದೂ. ಮೋಕ್ಷಾವಸ್ಥೆಯಲ್ಲಿ ಗುಣಾಷ್ಟಕಾವಿರ್ಭಾವದಿಂದ ಪರಮಾತ್ಮಸಾಮ್ಯವನ್ನು ಹೊಂದಿ ಅಸಂಕುಚಿತವಾದ ಧರ್ಮಭೂತ ಜ್ಞಾನದಿಂದ ವಿಕಾಸ ಹೊಂದುತ್ತಾನೆಂದೂ ಭೇದವಾದಿಗಳಾದ ವೇದಾಂತಿಗಳ ಸಿದ್ಧಾಂತ. ಉಪಾಧಿ ಸಂಸರ್ಗದಿಂದ ಸಂಕೋಚ ಹೊಂದಿರುವ ಸಂಸಾರಿ ಜೀವನಿಗೆ ಅವಿದ್ಯಾ ನಿವೃತ್ತಿಯಿಂದ ಔಪಾಧಿಕವಾದ ಭೇದಭಾವವು ತೊಲಗಿ ಬ್ರಹ್ಮೀಭಾವವುಂಟಾಗುವುದರಿಂದ ವಿಕಾಸ ವುಂಟಾಗುತ್ತದೆ, ಎಂದು ಅದ್ವೈತವೇದಾಂತಿಗಳ ಸಿದ್ಧಾಂತ. ಇಂತಹ ಮೋಕ್ಷದ ಸ್ವರೂಪವು ಬೇರೆಬೇರೆಯಾಗಿ ಆಯಾಯ ಆಚಾರ್ಯರಿಂದ ನಿರೂಪಿಸಲ್ಪಟ್ಟಿದ್ದರೂ ಇದಕ್ಕೆ ಪರಮಾತ್ಮನ ಅನುಗ್ರಹವೇ ಮುಖ್ಯಕಾರಣವೆಂಬ ವಿಷಯದಲ್ಲಿ ಯಾರಿಗೂ ವಿವಾದವಿರುವದಿಲ್ಲ.) ಮಹಾವರಾಹರೂಪಿಯಾಗಿಯೂ ಇರುವ ಸುರೋತ್ತಮನಾದ ನಿನಗೆ ಅನಂತ ನಮಸ್ಕಾರಗಳು.

೪೫. ಕೂಟಸ್ಥನಾಗಿಯೂ (ಅಂದರೆ ತಾನು ಯಾವ ವಿಕಾರವನ್ನೂ ಹೊಂದದೆ ತನ್ನ ಸಂಬಂಧದಿಂದ ಇತರ ವಸ್ತುಗಳಿಗೆ ವಿಕಾರವನ್ನುಂಟುಮಾಡುವವನೆಂದು ತಾತ್ಪರ್ಯ. ಕೂಟವೆಂದರೆ ಸ್ವರ್ಣಕಾರರ ಅಡಿಗಲ್ಲು ಅದರಂತೆ ಇರುವವನೆಂದರ್ಥ. ಅದು ತಾನು ಯಾವ ವಿಕಾರವನ್ನೂ ಹೊಂದದೆ ತನ್ನ ಸಂಬಂಧದಿಂದ ಚಿನ್ನ, ಬೆಳ್ಳಿ

ಯೋಗೇಶ್ವರಂ ಚಾರುವಿಚಿತ್ರಮೌಲಿ
ಮಜ್ಞೇಯಮಗ್ರ್ಯಂ ಪ್ರಕೃತೇಃ ಪರಸ್ಥಂ।
ಕ್ಷೇತ್ರಜ್ಞಮಾತ್ಮಪ್ರಭವಂ ವರೇಣ್ಯಂ
ತಂ ವಾಸುದೇವಂ ಶರಣಂ ಪ್ರಪದ್ಯೇ ॥ ೪೬ ॥

ಅದೃಶ್ಯಮವ್ಯಕ್ತಮಚಿಂತ್ಯಮವ್ಯಯಂ
ಬ್ರಹ್ಮರ್ಷಯೋ ಬ್ರಹ್ಮಮಯಂ ಸನಾತನಂ।
ವದಂತಿ ಯಂ ವೈ ಪುರುಷಂ ಸನಾತನಂ
ತಂ ದೇವಗುಹ್ಯಂ ಶರಣಂ ಪ್ರಪದ್ಯೇ ॥ ೪೭ ॥

ಮೊದಲಾದ ಇತರ ಲೋಹಗಳಿಗೆ ಹ್ರಸ್ವಭಾವ, ದೀರ್ಘಭಾವ ಮೊದಲಾದ ವಿಕಾರಗಳನ್ನು (ಅವಸ್ಥಾವಿಶೇಷಗಳನ್ನು) ಉಂಟುಮಾಡುತ್ತದೆ.) ಅವ್ಯಕ್ತಸ್ವರೂಪನಾಗಿಯೂ ಚಿಂತಿಸಲು ಅರ್ಹವಾಗದ ಅಪರಿಮಿತರೂಪವುಳ್ಳವನಾಗಿಯೂ ಸಕಲಕಾರಣನಾದ ನಾರಾಯಣಪದವಾಚ್ಯನಾಗಿಯೂ ಪ್ರಳಯಕಾಲದಲ್ಲಿಯೂ ಶಾಶ್ವತವಾಗಿ ನಿಲ್ಲುವ ಪುರಾಣಪುರುಷನಾಗಿಯೂ ಇರುವ ಆ ದೇವಾಧಿದೇವನಲ್ಲಿ ಶರಣಾಗತನಾಗಿರುವೆನು.

೪೬. ಯೋಗಗಳಿಗೆ ನಿಯಾಮಕನಾಗಿಯೂ ರಮ್ಯವಾಗಿಯೂ ವಿಚಿತ್ರವಾಗಿಯೂ ಇರುವ ಶಿರೋಭೂಷಣವುಳ್ಳವನಾಗಿಯೂ ಸಾಮಾನ್ಯಜನರಿಗೆ ತಿಳಿಯಲಶಕ್ಯನಾಗಿಯೂ ಆದಿಮೂರ್ತಿಯಾಗಿಯೂ ಪ್ರಕೃತಿಸಂಬಂಧರಹಿತನಾಗಿಯೂ ಸಕಲಜೀವರುಗಳಿಗೂ ಅಂತರ್ಯಾಮಿಯಾಗಿ ಪ್ರಧಾನಕ್ಷೇತ್ರಜ್ಞನಾಗಿಯೂ (ಕರ್ಮಸಂಬಂಧವಿಲ್ಲದೆ) ಸ್ವೇಚ್ಛಾಧೀನವಾದ ಅಭಿವ್ಯಕ್ತಿಯುಳ್ಳವನಾಗಿಯೂ ಉತ್ಕೃಷ್ಟಪ್ರಾಪ್ಯನಾಗಿಯೂ ಇರುವ ಆ ವಾಸುದೇವನನ್ನೇ ಶರಣುಹೊಂದಿದ್ದೇನೆ.

೪೭. ಅವ್ಯಕ್ತಮೂರ್ತಿಯಾಗಿಯೂ ಊಹಿಸಲಶಕ್ಯವಾದ ಮಹಿಮೆಯುಳ್ಳವನಾಗಿಯೂ ಇರುವ ಯಾವ ಪುರುಷೋತ್ತಮನನ್ನು ಮಹರ್ಷಿಗಳು ಅದೃಶ್ಯನೆಂದೂ (ಇಂದ್ರಿಯಗಳಿಗೆ ಗೋಚರನಾಗದಿರುವವನು) ನಾಶರಹಿತನೆಂದೂ ಜ್ಞಾನಮಯನೆಂದೂ ಶಾಶ್ವತನೆಂದೂ ಹೇಳುತ್ತಿರುವರೋ ಅಂತಹ ಪರಮಾತ್ಮನನ್ನು ಶರಣುಹೊಂದಿರುವೆನು.

ಯದಕ್ಷರಂ ಬ್ರಹ್ಮ ವದಂತಿ ಸರ್ವಗಂ
ನಿಶಮ್ಯ ಯಂ ಮೃತ್ಯುಮುಖಾತ್ಪ್ರಮುಚ್ಯತೇ ।
ತಮೀಶ್ವರಂ ತೃಪ್ತಮನುತ್ತಮೈರ್ಗುಣೈಃ
ಪರಾಯಣಂ ವಿಷ್ಣುಮುಪೈಮಿ ಶಾಶ್ವತಂ ॥ ೪೮ ॥

ಕಾರ್ಯಂ ಕ್ರಿಯಾ ಕಾರಣಮಪ್ರಮೇಯಂ
ಹಿರಣ್ಯನಾಭಂ ವರಪದ್ಮನಾಭಂ ।
ಮಹಾಬಲಂ ದೇವನಿಧಿಂ ಸುರೇಶಂ
ವ್ರಜಾಮಿ ವಿಷ್ಣುಂ ಶರಣಂ ಜನಾರ್ದನಂ ॥ ೪೯ ॥

---

೪೮. ಸರ್ವವ್ಯಾಪಕವಾದ ಯಾವ ಪರವಸ್ತುವನ್ನು ಅಕ್ಷರಸ್ವರೂಪವೆಂದೂ (ದೇಶಕಾಲಾದ್ಯಧೀನತೆಯಿಂದ ಆರು ವಿಧವಾದ ಭಾವವಿಕಾರವನ್ನು ಹೊಂದದಿರುವದು ಎಂದು ತಾತ್ಪರ್ಯ. ಉತ್ಪತ್ತಿ, ಅಭಿವೃದ್ಧಿ, ಸತ್ತಾ (ಸ್ಥಿತಿ) ಪರಿಣಾಮ, ಅಪಕ್ಷಯ, ನಾಶ ಇವೇ ಆರು ವಿಧವಾದ ಭಾವವಿಕಾರಗಳು.) ಬ್ರಹ್ಮವೆಂದೂ ಹೇಳುತ್ತಾರೆಯೋ ಯಾವ ಅಂತಹ ಪರವಸ್ತುವಿನ ಶ್ರವಣಮಾತ್ರದಿಂದ ಚೇತನರು ಮೃತ್ಯುಭಯದಿಂದ ಬಿಡುಗಡೆ ಹೊಂದುವರೋ ಅಂತಹ ಉತ್ತಮೋತ್ತಮ ಗುಣಗಳಿಂದ ತೃಪ್ತನಾದ ಪರಮಪ್ರಾಪ್ಯನಾದ ಸರ್ವೇಶ್ವರರೂಪಿಯಾದ ಮಹಾವಿಷ್ಣುವನ್ನೇ ನಾನು ಶರಣು ಹೊಂದಿರುವೆನು.

೪೯. ದೇವಾಧಿಪನಾದ ಯಾವ ಮಹಾವಿಷ್ಣುವು ಅಕ್ಷಯವಾದ ನಿಧಿಯಂತೆ ದೇವತೆಗಳಿಗೂ ಸರ್ವಾರ್ಥಪ್ರದನಾಗಿರುವನೋ ಮತ್ತು ಕಾರ್ಯ ಕ್ರಿಯಾ ಕಾರಣ ಇವುಗಳ ಸ್ವರೂಪನಾಗಿಯೂ ಇರುವನೋ ಅಂತಹ ಲೌಕಿಕ ಪ್ರಮಾಣಗಳಿಂದ ತಿಳಿಯಲಶಕ್ಯನಾದ ಪದ್ಮನಾಭ ಹಿರಣ್ಯನಾಭನೆಂದು ಸ್ತುತಿಸಲ್ಪಡುವ ಜನಾರ್ದನನನ್ನು ನಾನು ಶರಣು ಹೊಂದಿರುವೆನು. (ಇಲ್ಲಿ ಕಾರಣವೆಂದು ತಿಳಿದು ಬರುವ ವಸ್ತುಗಳಿಗೆ ಕಾರ್ಯೋತ್ಪಾದನ ಸಾಮರ್ಥ್ಯವೂ ಕಾರ್ಯವೆಂದು ತಿಳಿದು ಬಂದಿರುವ ವಸ್ತುಗಳಿಗೆ ಕಾರಣಸಾಮರ್ಥ್ಯದಿಂದ ಉಂಟಾಗಬಹುದಾದ ತನ್ನ ಪರಿಣಾಮವೂ ಕ್ರಿಯಾ ಎಂಬ ವ್ಯಾಪಾರವೂ ಪರಮಾತ್ಮನ ಸಂಕಲ್ಪಾಧೀನವಾದುದರಿಂದ ಅವೆಲ್ಲವೂ ಅವನ ಸ್ವರೂಪಗಳೆಂದು ವರ್ಣಿಸಲ್ಪಟ್ಟಿವೆ. ಬೀಜಗಳಿಗೆ ಮೊಳಕೆಯನ್ನುಂಟುಮಾಡುವ ಸಾಮರ್ಥ್ಯವೂ ಮೊಳಕೆಗಳಿಗೆ ಬೀಜಸಂಬಂಧದಿಂದುಂಟಾಗುವ ಕಾರ್ಯಾವಸ್ಥೆಯೂ ಮುಂದೆ ಉಂಟಾಗುವ ಅವಸ್ಥಾಪರಂಪರೆಗಳೂ ಅದಕ್ಕೆ ಸಾಧಕವಾದ ಮತ್ತು ಬಾಧಕವೂ ಆದ ಕ್ರಿಯಾ

ಕಿರೀಟಕೇಯೂರಮಹಾರ್ಹನಿಷ್ಕೈ
ರ್ಮಣ್ಯುತ್ತಮಾಲಂಕೃತ ಸರ್ವಗಾತ್ರಂ ।
ಪೀತಾಂಬರಂ ಕಾಂಚನ ಭಕ್ತಿಚಿತ್ರಂ
ಮಾಲಾಧರಂ ಕೇಶವಮಭ್ಯುಪೈಮಿ ॥ ೫೦ ॥

ತಾರೋದ್ಭವಂ ವೇದವಿದಾಂ ವರಿಷ್ಠಂ
ಯೋಗಾತ್ಮನಾಂ ಸಾಂಖ್ಯವಿದಾಂ ವರಿಷ್ಠಂ ।
ಆದಿತ್ಯರುದ್ರಾಶ್ವಿವಸು ಪ್ರಭಾವಂ
ಪ್ರಭುಂ ಪ್ರಪದ್ಯೇಽಚ್ಯುತಮಾದಿಭೂತಂ ॥ ೫೧ ॥

ಪರಂಪರೆಗಳೂ ಸಹ ಪರಮಾತ್ಮನ ಸಂಕಲ್ಪಕ್ಕೆ ಸೇರಿದುದೆಂದೇ ತಾತ್ಪರ್ಯ. ಇದು ಆಯಾಯ ವಸ್ತುಗಳ ಸ್ವಭಾವಕ್ಕೇ ಸೇರಿರುವದೆಂದು ನಾಸ್ತಿಕರ ವಾದವಿದೆ. ಆದರೂ ವಸ್ತುಗಳಿಗೆಲ್ಲಾ ವಸ್ತುತ್ವವೂ ಸಹ ಪರಮಾತ್ಮ ಸಂಬಂಧದಿಂದಲೇ ಉಂಟಾಗುವುದೆಂದು ಉಪಪಾದಿಸುವ ಆಸ್ತಿಕ ಸಿದ್ಧಾಂತವು, ವಸ್ತುಸ್ವಭಾವವೆಂದು ಹೇಳಲ್ಪಡುವ ಆ ಸಾಮರ್ಥ್ಯವನ್ನು (ಸ್ವಭಾವವನ್ನು) ಪರಮಾತ್ಮಸಂಬಂಧವಿಲ್ಲದ ಬೇರೆ ಪದಾರ್ಥವೆಂದು ಒಪ್ಪುವುದಿಲ್ಲ. ಆದುದರಿಂದ ಪರಮಾತ್ಮನಿಗೆ ಕಾರ್ಯಕಾರಣ ಕ್ರಿಯಾಸ್ವರೂಪವು ಯುಕ್ತಿಯುಕ್ತವೆಂದೇ ಹೇಳಬಹುದಾಗಿದೆ.)

೫೦. ಕಿರೀಟ ಮತ್ತು ತೋಳುಬಳೆಗಳೇ ಮೊದಲಾದ ಮಹಾರ್ಘರತ್ನಗಳಿಂದಲೂ ಸ್ವರ್ಣಗಳಿಂದಲೂ ಕೂಡಿದ ದಿವ್ಯಾಭರಣಗಳಿಂದ ಶೋಭಿತನಾಗಿ, ಮಾಲಿಕೆಯಿಂದಲೂ ಸುವರ್ಣ ತಂತುಗಳ ವಿಚಿತ್ರ ರಚನೆಯಿಂದ ಕೂಡಿದ ಪೀತಾಂಬರವನ್ನು ಧರಿಸಿ ಅಲಂಕರಿಸಲ್ಪಟ್ಟಿರುವ ಆ ಕೇಶವನನ್ನೇ ಶರಣು ಹೊಂದಿರುವೆನು. (ಇಲ್ಲಿ ಧ್ಯಾನದೃಷ್ಟಿಯಿಂದ ಸಾಕ್ಷಾತ್ಕರಿಸಲ್ಪಟ್ಟ ಪರಮಾತ್ಮನ ದಿವ್ಯಮಂಗಲ ವಿಗ್ರಹವು ವರ್ಣಿಸಲ್ಪಟ್ಟಿದೆ.)

೫೧. ತಾರವೆಂಬ ಸ್ವರಧರ್ಮಕ್ಕೆ ಕಾರಣನಾಗಿಯೂ, ವೇದಜ್ಞರಲ್ಲಿಯೂ, ಯೋಗಿಗಳಾದ ಸಾಂಖ್ಯರಲ್ಲಿಯೂ ಅಗ್ರೇಸರನಾಗಿಯೂ, ಸೂರ್ಯ, ರುದ್ರ, ಅಶ್ವಿನಿಗಳು, ವಸುಗಳು ಇವರ ಸಮೂಹಕ್ಕೆ ಸದೃಶವಾದ ಪ್ರಭಾವವುಳ್ಳವನಾಗಿಯೂ ಇರುವ ಆದಿಪುರುಷನಾದ ಅಚ್ಯುತನನ್ನು ಶರಣು ಹೊಂದಿರುವೆನು.

ಶ್ರೀವತ್ಸಾಂಕಂ ಮಹಾದೇವಂ ದೇವಗುಹ್ಯಂ ಮನೋರಮಂ ।
ಪ್ರಪದ್ಯೇ ಸೂಕ್ಷ್ಮಮತುಲಂ ವರೇಣ್ಯಮಭಯಪ್ರದಂ ॥ ೫೨ ॥

ಪ್ರಭವಂ ಸರ್ವಭೂತಾನಾಂ ನಿರ್ಗುಣಂ ಪರಮೇಶ್ವರಂ ।
ಪ್ರಪದ್ಯೇ ಮುಕ್ತಸಂಗಾನಾಂ ಯತೀನಾಂ ಪರಮಾಂ ಗತಿಂ ॥ ೫೩ ॥

ಭಗವಂತಂ ಗುಣಾಧ್ಯಕ್ಷಮಕ್ಷರಂ ಪುಷ್ಕರೇಕ್ಷಣಂ ।
ಶರಣ್ಯಂ ಶರಣಂ ಭಕ್ತ್ಯಾ ಪ್ರಪದ್ಯೇ ಭಕ್ತವತ್ಸಲಂ ॥ ೫೪ ॥

ತ್ರಿವಿಕ್ರಮಂ ತ್ರಿಲೋಕೇಶಂ ಸರ್ವೇಷಾಂ ಪ್ರಪಿತಾಮಹಂ ।
ಯೋಗಾತ್ಮಾನಂ ಮಹಾತ್ಮಾನಂ ಪ್ರಪೇದ್ಯೇಽಹಂ ಜನಾರ್ದನಂ ॥ ೫೫ ॥

ಆದಿದೇವಮಜಂ ಶಂಭುಂ ವ್ಯಕ್ತಾವ್ಯಕ್ತಂ ಸನಾತನಂ ।
ನಾರಾಯಣಮಣೀಯಾಂಸಂ ಪ್ರಪದ್ಯೇ ಬ್ರಾಹ್ಮಣಪ್ರಿಯಂ ॥ ೫೬ ॥

೫೨-೫೩. ಶ್ರೀವತ್ಸವೆಂಬ ಚಿಹ್ನೆಯಿಂದ ಕೂಡಿ ಮನೋಹರನಾಗಿ, ಸ್ಥೂಲನಾಗಿಯೂ, ಸೂಕ್ಷ್ಮನಾಗಿಯೂ ಇರುವ ದೇವವಂದ್ಯನಾದ ಸರ್ವಶರಣ್ಯನಾದ ಅಭಯಪ್ರದನಾದ ನಾರಾಯಣನನ್ನು ಶರಣು ಹೊಂದಿರುವೆನು. ಸರ್ವಭೂತಗಳಿಗೂ ಉತ್ಪಾದಕನಾಗಿಯೂ, ಹೇಯಗುಣರಹಿತನಾಗಿಯೂ, ಸರ್ವಸಂಗ ಪರಿತ್ಯಾಗಿಗಳಾದ ಯತಿಗಳಿಗೆ ಪರಮಗಮ್ಯಸ್ಥಾನನಾಗಿಯೂ ಇರುವ ಆ ಪರಮೇಶ್ವರನನ್ನು ಶರಣು ಹೊಂದಿರುವೆನು.

೫೪-೫೫. ಲಕ್ಷ್ಮೀಪತಿಯಾಗಿಯೂ, ಅಥವಾ ಮಾಹಾತ್ಮ್ಯಶಾಲಿಯಾಗಿಯೂ ಸತ್ತ್ವಾದಿಗುಣಗಳಿಗೆ ಪ್ರವರ್ತಕನಾಗಿಯೂ, ನಿತ್ಯಸ್ವರೂಪನಾಗಿಯೂ, ಕಮಲಾಕ್ಷನಾಗಿಯೂ, ಸರ್ವಶರಣ್ಯನಾದ ಆ ಭಕ್ತವತ್ಸಲನನ್ನೇ ಶರಣು ಹೊಂದಿರುವೆನು. ತ್ರಿವಿಕ್ರಮಾವತಾರವನ್ನು ಹೊಂದಿ ಲೋಕತ್ರಯಕ್ಕೂ ಅಧಿಪತಿಯಾಗಿಯೂ ಎಲ್ಲರಿಗೂ ಹೆತ್ತಾತನಾಗಿಯೂ, (ಎಲ್ಲರಿಗೂ ತಾತನಾದ ಬ್ರಹ್ಮನಿಗೂ ತಂದೆಯೆಂದು ತಾತ್ಪರ್ಯ) ಯೋಗಸ್ವರೂಪನಾಗಿಯೂ, ಮಹಾತ್ಮನಾಗಿಯೂ ಇರುವ ಆ ಜನಾರ್ದನನಲ್ಲಿ ಶರಣಾಗತನಾಗಿರುವೆನು.

೫೬-೫೭. ಆದಿಪುರುಷನಾಗಿಯೂ, ಉತ್ಪತ್ತಿ ರಹಿತನಾಗಿಯೂ, ಶಂಭುವಿಗೂ ಅಂತರ್ಯಾಮಿಯಾಗಿಯೂ, ವ್ಯಕ್ತಾವ್ಯಕ್ತಸ್ವರೂಪನಾಗಿಯೂ, ಅಣುವಾಗಿಯೂ,

ನಮೋ ಹರಾಯ ದೇವಾಯ ನಮಃ ಸರ್ವಸುಹಾಯ ಚ ।
ಪ್ರಪದ್ಯೇ ದೇವದೇವೇಶಮಣೀಯಾಂಸಂ ತನೋಃ ಸದಾ ॥ ೫೭ ॥

ಏಕಾಯ ಲೋಕತತ್ತ್ವಾಯ ಪರತಃ ಪರಮಾತ್ಮನೇ ।
ನಮಃ ಸಹಸ್ರಶಿರಸೇ ಅನಂತಾಯ ಮಹಾತ್ಮನೇ ॥ ೫೮ ॥

ತ್ವಮೇವ ಶರಣಂ ದೇವಮೃಷಯೋ ವೇದಪಾರಗಾಃ ।
ಕೀರ್ತಯಂತಿ ಚ ಯಂ ಸರ್ವೇ ಬ್ರಹ್ಮಾದೀನಾಂ ಪರಾಯಣಂ ॥ ೫೯ ॥

ನಮಸ್ತೇ ಪುಂಡರೀಕಾಕ್ಷ ಭಕ್ತಾನಾಮಭಯಪ್ರದ ।
ಅಬ್ರಹ್ಮಣ್ಯ ನಮಸ್ತೇಽಸ್ತು ತ್ರಾಹಿ ಮಾಂ ಶರಣಾಗತಂ ॥ ೬೦ ॥

ಪುರಾತನನಾಗಿಯೂ, ಇರುವ ಬ್ರಾಹ್ಮಣಪ್ರಿಯನಾದ ಆ ನಾರಾಯಣನನ್ನು ಶರಣು ಹೊಂದಿರುವೆನು. ಅಂತರ್ಯಾಮಿಯಾಗಿ ಸಂಹಾರಕ್ಕೆ ಕಾರಣನಾಗಿಯೂ ಮಹಾ ಪದಾರ್ಥಗಳಿಗಿಂತ ಮಹತ್ವವನ್ನೂ ಅಣುವಸ್ತುಗಳಿಗಿಂತ ಅಣುತ್ವವನ್ನೂ ಹೊಂದಿರುವ ದೇವತೋತ್ತಮನಿಗೆ ಅನಂತ ನಮಸ್ಕಾರಗಳು.

೫೮-೫೯. ಒಬ್ಬನೇ ಆಗಿಯೂ (ಸಮವಾದ ಎರಡನೇ ವಸ್ತುವಿಲ್ಲದವನೆಂದು ತಾತ್ಪರ್ಯ) ಪ್ರಮಾಣಸಿದ್ಧವಾದ ಲೋಕದ ತತ್ತ್ವ ಸ್ವರೂಪನಾಗಿಯೂ, ಉತ್ಕೃಷ್ಟನಾದ ಜೀವನಿಗಿಂತಲೂ ಬೇರೆಯಾದ ಉತ್ಕೃಷ್ಟ ತತ್ತ್ವರೂಪನಾಗಿಯೂ, ಸಾವಿರ ತಲೆಗಳನ್ನು ಹೊಂದಿ ಅನಂತಮೂರ್ತಿಯಾಗಿಯೂ ಇರುವ ಆ ಮಹಾತ್ಮನಿಗೆ ಅನಂತ ನಮಸ್ಕಾರಗಳು. ಎಲೈ ಪ್ರಭುವೇ ವೇದಪಾರಂಗತರಾದ ಋಷಿಗಳೆಲ್ಲರೂ, ಬ್ರಹ್ಮಾದಿಗಳಿಗೂ ಪ್ರಾಪ್ಯನಾದ ನಿನ್ನನ್ನೇ ಸರ್ವರಕ್ಷಕನೆಂದು ಹೇಳುತ್ತಿರುವರು.

೬೦. ಭಕ್ತರುಗಳಿಗೆ ಅಭಯಪ್ರದನಾದ ಎಲೈ ಪುಂಡರೀಕಾಕ್ಷನೇ, ನಿನಗೆ ಅನಂತ ನಮಸ್ಕಾರಗಳು. ಎಲ್ಲರಿಗೂ (ಅಭಯಪ್ರದಾನದಿಂದ) ಅವಧ್ಯತ್ವವನ್ನುಂಟು ಮಾಡುವ ಪ್ರಭುವೇ ನಿನಗೆ ಅನಂತ ನಮಸ್ಕಾರಗಳು ಶರಣಾಗತನಾದ ನನ್ನನ್ನು ಕಾಪಾಡು.

ಪುಲಸ್ತ್ಯ ಉವಾಚ

ಭಕ್ತಿಂ ತಸ್ಯಾಽನುಸಂಚಿಂತ್ಯ ನಾಗಸ್ಯಾಽಮೋಘಸಂಭವಃ ।
ಪ್ರೀತಿಮಾನಭವದ್ವಿಷ್ಣುಃ ಶಂಕಚಕ್ರಗದಾಧರಃ ॥ ೬೧ ॥

ಸಾನ್ನಿಧ್ಯಂ ಕಲ್ಪಯಾಮಾಸ ತಸ್ಮಿನ್ಸರಸಿ ಕೇಶವಃ ।
ಗರುಡಸ್ಥೋ ಜಗತ್ಸ್ವಾಮೀ ಲೋಕಾಧಾರಸ್ತಪೋಧನಃ ॥ ೬೨ ॥

ಗ್ರಾಹಗ್ರಸ್ತಂ ಗಜೇಂದ್ರಂ ತಂ ತಂ ಚ ಗ್ರಾಹಂ ಜಲಾಶಯಾತ್ ।
ಉಜ್ಜಹಾರಾಽಪ್ರಮೇಯಾತ್ಮಾ ತರಸಾ ಮಧುಸೂದನಃ ॥ ೬೩ ॥

ಜಲಸ್ಥಂ ದಾರಯಾಮಾಸ ಗ್ರಾಹಂ ಚಕ್ರೇಣ ಮಾಧವಃ ।
ಮೋಕ್ಷಯಾಮಾಸ ನಾಗೇಂದ್ರಂ ಪಾಶೇಭ್ಯಃ ಶರಣಾಗತಂ ॥ ೬೪ ॥

ಏವಂ ಹಿ ದೇವ ಶಾಪೇನ ಹೂಹೂರ್ಗಂಧರ್ವಸತ್ತಮಃ ।
ಗ್ರಾಹತ್ವಮಗಮತ್ಕೃಷ್ಣಾನ್ಮೋಕ್ಷಂ ಪ್ರಾಪ್ಯ ದಿವಂ ಗತಃ ॥ ೬೫ ॥

೬೧-೬೪. ಪುಲಸ್ತ್ಯರು ಹೇಳುತ್ತಾರೆ. ಈ ರೀತಿ ಆ ಗಜೇಂದ್ರನ ಸ್ತೋತ್ರದಿಂದ ಸಂತುಷ್ಟನಾಗಿ ಮಹಾವಿಷ್ಣುವು ಶಂಖಚಕ್ರಗದಾಧರನಾಗಿ ಸಫಲವಾದ ಆವಿರ್ಭಾವವನ್ನು ಹೊಂದಿ ಆ ವಿಧವಾದ ಗಜೇಂದ್ರನ ಭಕ್ತಿಯನ್ನು ಭಾವಿಸಿ ಆ ಸರೋವರದಲ್ಲಿಯೇ ಸಾನ್ನಿಧ್ಯವನ್ನು ಹೊಂದಿದನು. ಜಗತ್ಪ್ರಭುವಾಗಿಯೂ ಜಗದಾಧಾರನಾಗಿಯೂ ಮಹಾತಪಸ್ವಿಯಾಗಿಯೂ ಇರುವ ಆ ಮಹಾವಿಷ್ಣುವು ಗರುಡಾರೂಢನಾಗಿ ಅಲ್ಲಿ ನಿಂತು, ಮೊಸಳೆಯಿಂದ ಆಕ್ರಮಿಸಲ್ಪಟ್ಟಿದ್ದ ಆ ಗಜೇಂದ್ರನನ್ನು ಸರೋವರದ ನೀರಿನಿಂದ ಮೇಲಕ್ಕೆತ್ತಲು ಮೊಸಳೆಯನ್ನು ವೇಗದಿಂದ ನೀರಿನಲ್ಲಿರುವಾಗಲೇ ಚಕ್ರದಿಂದ ಕತ್ತರಿಸಿದನು. ಶರಣಾಗತನಾದ ಗಜೇಂದ್ರನನ್ನೂ ಪಾಶಗಳಿಂದ ಬಿಡಿಸಿ ಮೇಲಕ್ಕೆತ್ತಿದನು.

೬೫-೬೬. ದೇವತೆಗಳ ಶಾಪದಿಂದ ಮೊಸಳೆಯ ರೂಪವನ್ನು ಹೊಂದಿದ್ದ ಹೂಹೂ ಎಂಬ ಗಂಧರ್ವನು ಈ ಪ್ರಕಾರವಾದ ಕೃಷ್ಣನ ಚಕ್ರಸ್ಪರ್ಶದಿಂದ ಶಾಪವಿಮೋ

ಗಜೋಽಪಿ ವಿಷ್ಣುನಾ ಸ್ಪೃಷ್ಟೋ ಜಾತೋ ದಿವ್ಯವಪುಃ ಪುಮಾನ್ ।
ಶಾಪಾದ್ವಿಮುಕ್ತೌ ಯುಗಪದ್ಗಜಗಂಧರ್ವಸತ್ತಮೌ ॥ ೬೬ ॥

ಪ್ರೀತಿಮಾನ್ಪುಂಡರೀಕಾಕ್ಷಃ ಶರಣಾಗತವತ್ಸಲಃ ।
ಅಭವತ್ತ್ವಥ ದೇವೇಶಸ್ತಾಭ್ಯಾಂ ಚೈವ ಪ್ರಪೂಜಿತಃ ॥ ೬೭ ॥

ಇದಂ ಚ ಭಗವಾನ್ಯೋಗೀ ಗಜೇಂದ್ರಂ ಶರಣಾಗತಂ ।
ಪ್ರೋವಾಚ ಮುನಿಶಾರ್ದೂಲ ಮಧುರಂ ಮಧುಸೂದನಃ ॥ ೬೮ ॥

ಶ್ರೀ ಭಗವಾನುವಾಚ

ಯೋ ಮಾಂ ತ್ವಾಂ ಚ ಸರಶ್ಚೇದಂ ಗ್ರಾಹಸ್ಯ ಚ ವಿದಾರಣಂ ।
ಗುಲ್ಮಕೀಚಕರೇಣೂನಾಂ ರೂಪಂ ಮೇರುಸುತಸ್ಯ ಚ ॥ ೬೯ ॥

ಅಶ್ವತ್ಥಂ ಭಾಸ್ಕರಂ ಗಂಗಾಂ ನೈಮಿಷಾರಣ್ಯಮೇವ ಚ ।
ಸಂಸ್ಮರಿಷ್ಯಂತಿ ಮನುಜಾಃ ಪ್ರಯಾತಾಃ ಸ್ಥಿರಬುದ್ಧಯಃ ॥ ೭೦ ॥

ಚನೆಯನ್ನು ಹೊಂದಿ ಸ್ವರ್ಗಕ್ಕೆ ತೆರಳಿದನು. ಗಜೇಂದ್ರನೂ ಸಹ ವಿಷ್ಣುವಿನ ಸ್ಪರ್ಶ ಮಾತ್ರದಿಂದ ಗಜರೂಪವನ್ನು ಬಿಟ್ಟು ದಿವ್ಯ ಶರೀರವುಳ್ಳ ಪುರುಷನಾಗಿ ನಿಂತಿತು. ಇಬ್ಬರೂ ಈ ರೀತಿ ಒಂದೇ ಕಾಲದಲ್ಲಿ ಪಾಪವಿಮುಕ್ತರಾದರು.

೬೭-೬೮. ಶರಣಾಗತರಲ್ಲಿ ಪ್ರೀತಿಯುಳ್ಳ ಆ ಪ್ರಭುವೂ ಸಹ ಇವರಿಬ್ಬರಿಗೂ ಆದ ಉಪಕಾರದಿಂದ ತಾನೂ ಸಂತುಷ್ಟನಾದನು. ಅನಂತರ. ಇಬ್ಬರೂ ಕೃತಜ್ಞತೆ ಯಿಂದ ಆ ಪರಮಾತ್ಮನನ್ನು ಪೂಜಿಸಿದರು. ಆಗ ಮಹಾಯೋಗಿಯಾದ ಪರಮಾ ತ್ಮನು ಶರಣಾಗತನಾದ ಗಜೇಂದ್ರನನ್ನು ಕುರಿತು ಮಧುರವಾದ ಈ ಮಾತನ್ನಾಡಿ ದನು. ಭಗವಂತನು ಹೇಳುತ್ತಾನೆ.

೬೯-೭೧. ಎಲೈ ಭಕ್ತಾಗ್ರೇಸರನೇ, ಯಾರು ಅಶ್ವತ್ಥ, ಸೂರ್ಯ ಗಂಗಾ ನೈಮಿಷಾರಣ್ಯ ಇವುಗಳಂತೆ ನಿನಗೆ ವರಪ್ರದನಾಗಿ ಬಂದ ನನ್ನನ್ನೂ ನನ್ನಿಂದ ರಕ್ಷಿಸಲ್ಪಟ್ಟ ನಿನ್ನನ್ನೂ ಈ ಸರೋವರವನ್ನೂ ಮೊಸಳೆಯನ್ನು ಇಲ್ಲಿ ನಾನು ಭೇದಿಸಿದುದನ್ನೂ ಈ ಸರೋವರಕ್ಕೆ ಆಶ್ರಯವಾದ ಮೇರುವಿನ ಪುತ್ರನಾದ ಈ ತ್ರಿಕೂಟವನ್ನೂ, ಇದರಲ್ಲಿರುವ ಈ ಬಿದಿರಿನ ಪೊದರುಗಳನ್ನೂ ಸಹ ಸ್ಮರಿಸುತ್ತಾರೆಯೋ ಸ್ಥಿರಬುದ್ಧಿಯಿಂದ ಕೂಡಿ

ಕೀರ್ತಯಿಷ್ಯಂತಿ ಭಕ್ತ್ಯಾ ಚ ಶ್ರೋಷ್ಯಂತಿ ಚ ಶುಚಿವ್ರತಾಃ ।
ದುಃಸ್ವಪ್ನೋ ನಶ್ಯತೇ ತೇಷಾಂ ಸುಸ್ವಪ್ನಶ್ಚ ಭವಿಷ್ಯತಿ ॥ ೭೦ ॥

ಮಾತ್ಸ್ಯಂ ಕೌರ್ಮಂ ಚ ವಾರಾಹಂ ವಾಮನಂ ತಾರ್ಕ್ಷ್ಯಮೇವ ಚ ।
ನಾರಸಿಂಹಂ ಚ ನಾಗೇಂದ್ರಂ ಸೃಷ್ಟಿಪ್ರಲಯಕಾರಕಂ ॥ ೭೨ ॥

ಏತಾನಿ ಪ್ರಾತರುತ್ಥಾಯ ಸಂಸ್ಮರಿಷ್ಯಂತಿ ಯೇ ನರಾಃ ।
ಸರ್ವಪಾಪೈಃ ಪ್ರಮುಚ್ಯಂತೇ ಪುಣ್ಯಾನ್ಲೋಕಾನವಾಪ್ನುಯುಃ ॥ ೭೩ ॥

ಪುಲಸ್ತ್ಯ ಉವಾಚ

ಏವಮುಕ್ತ್ವಾ ಹೃಷೀಕೇಶೋ ಗಜೇಂದ್ರಂ ಗರುಡಧ್ವಜಃ ।
ಸ್ಪರ್ಶಯಾಮಾಸ ಹಸ್ತೇನ ಗಜಂ ಗಂಧರ್ವಮೇವ ಚ ॥ ೭೪ ॥

ತತೋ ದಿವ್ಯವಪುರ್ಭೂತ್ವಾ ಗಜೇಂದ್ರೋ ಮಧುಸೂದನಂ ।
ಜಗಾಮ ವಿಷ್ಣುಂ ಶರಣಂ ನಾರಾಯಣಪರಾಯಣಃ ॥ ೭೫ ॥

ಈ ಸ್ತುತಿಯನ್ನು ಪಠನಮಾಡುತ್ತಾರೆಯೋ ಅಥವಾ ಶುಚಿಯಾಗಿದ್ದು ಭಕ್ತಿಯಿಂದ ಕೇಳುತ್ತಾರೆಯೋ ಅಂತಹವರಿಗೆ ದುಸ್ಸ್ವಪ್ನವೆಲ್ಲವೂ ನಷ್ಟವಾಗುತ್ತದೆ ಸುಸ್ವಪ್ನವೂ ಉಂಟಾಗುತ್ತದೆ.

೭೨-೭೩. ಯಾರು ಮತ್ಸ್ಯಪುರಾಣದ ಮತ್ತು ಕೂರ್ಮ ವಾರಾಹ, ವಾಮನ, ಗರುಡ, ನಾರಸಿಹ್ಮ ಗಜೇಂದ್ರಮೋಕ್ಷ ಇವುಗಳ ಉಪಾಖ್ಯಾನವನ್ನು ಸೃಷ್ಟಿಪ್ರಳಯ ಪ್ರಸಂಗಗಳೊಡನೆ ಪ್ರಾತಃಕಾಲದಲ್ಲಿ ಎದ್ದು ಸ್ಮರಿಸುತ್ತಾರೆಯೋ ಅವರು ಸರ್ವಪಾಪ ಗಳಿಂದಲೂ ಬಿಡುಗಡೆಯನ್ನು ಹೊಂದಿ ಪುಣ್ಯಲೋಕಗಳನ್ನೂ ಹೊಂದುತ್ತಾರೆ.

೭೪-೭೫. ಪುಲಸ್ತ್ಯರು ಹೇಳುತ್ತಾರೆ:—ಗರುಡಧ್ವಜನಾದ ಆ ಹೃಷೀಕೇಶನು ಹೀಗೆ ಹೇಳಿ ಆ ಗಜೇಂದ್ರನನ್ನೂ ಗಂಧರ್ವನನ್ನೂ ಸಹ ಪ್ರೀತಿಯಿಂದ ಕೈಯ್ಯಿನಿಂದ ಮುಟ್ಟಿ ಸವರಿದನು, ಅನಂತರ ಆ ಹಸ್ತಸ್ಪರ್ಶದ ಮಹಿಮೆಯಿಂದ ಗಜೇಂದ್ರನು ದಿವ್ಯ ರೂಪವನ್ನು ಹೊಂದಿ ಆ ನಾರಾಯಣನೇ ಪರಮಪ್ರಾಪ್ಯನೆಂದು ಭಾವಿಸಿ ಅವನಲ್ಲಿಯೇ ಶರಣಾಗತನಾದನು.

ತತೋ ನಾರಾಯಣಃ ಶ್ರೀಮಾನ್ಮೋಕ್ಷಯಿತ್ವಾ ಗಜೋತ್ತಮಂ ।
ಪಾಪಂ ಬಂಧಾಚ್ಚ ಶಾಪಾಚ್ಚ ಗ್ರಾಹಂ ಚಾದ್ಭುತಕರ್ಮಕೃತ್ ॥ ೭೬ ॥

ಋಷಿಭಿಃ ಸ್ತೂಯಮಾನಶ್ಚ ದೇವಗುಹ್ಯಪರಾಯಣೈಃ ।
ತತಃ ಸ ಭಗವಾನ್ವಿಷ್ಣುರ್ದುರ್ವಿಜ್ಞೇಯಗತಿಃ ಪ್ರಭುಃ ॥ ೭೭ ॥

ಗಜೇಂದ್ರಮೋಕ್ಷಣಂ ದೃಷ್ಟ್ವಾ ದೇವಾಃ ಶಕ್ರಪುರೋಗಮಾಃ ।
ವವಂದಿರೇ ಮಹಾತ್ಮಾನಂ ಪ್ರಭುಂ ನಾರಾಯಣಂ ಹರಿಂ ॥ ೭೮ ॥

ಮಹರ್ಷಯಶ್ಚಾರಣಾಶ್ಚ ದೃಷ್ಟ್ವಾ ಗಜವಿಮೋಕ್ಷಣಂ ।
ವಿಸ್ಮಯೋತ್ಫುಲ್ಲನಯನಾಃ ಸಂಸ್ತುವಂತಿ ಜನಾರ್ದನಂ ॥ ೭೯ ॥

ಪ್ರಜಾಪತಿಪತಿರ್ಬ್ರಹ್ಮಾ ಚಕ್ರಪಾಣೇರ್ವಿಚೇಷ್ಟಿತಂ ।
ಗಜೇಂದ್ರಮೋಕ್ಷಣಂ ದೃಷ್ಟ್ವಾ ಇದಂ ವಚನಮಬ್ರವೀತ್ ॥ ೮೦ ॥

ಯ ಇದಂ ಶೃಣುಯಾನ್ನಿತ್ಯಂ ಪ್ರಾತರುತ್ಥಾಯ ಮಾನವಃ ।
ಪ್ರಾಪ್ನುಯಾತ್ಪರಮಾಂ ಸಿದ್ಧಿಂ ದುಃಸ್ವಪ್ನಶ್ಚ ವಿನಶ್ಯತಿ ॥ ೮೧ ॥

೭೬-೭೮. ಅನಂತರ ಅದ್ಭುತಕಾರ್ಯಕಾರಿಯಾದ ಆ ನಾರಾಯಣನು ಗಜೇಂದ್ರನನ್ನೂ ಮೊಸಳೆಯನ್ನೂ ಸಹ ಪಾಪದಿಂದಲೂ ಶಾಪದಿಂದಲೂ ಬಿಡುಗಡೆ ಮಾಡಿ ಋಷಿಗಳಿಂದಲೂ ದೇವತೆಗಳು ಗುಹ್ಯಕರು ಮೊದಲಾದವರಿಂದಲೂ ಸ್ತೋತ್ರ ಮಾಡಲ್ಪಡುತ್ತಾ ಅದೃಶ್ಯಗತಿಯಾಗಿ ಅಂತರ್ಧಾನಹೊಂದಿದನು. ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಗಜೇಂದ್ರಮೋಕ್ಷವನ್ನು ನೋಡಿ ಆಶ್ಚರ್ಯಚಕಿತರಾಗಿ ಮಹಾ ಮಹಿಮನಾಗಿಯೂ ಲೋಕಪ್ರಭುವಾಗಿಯೂ ಇರುವ ಆ ನಾರಾಯಣನನ್ನು ಬಾರಿ ಬಾರಿಗೂ ವಂದಿಸಿದರು.

೭೯-೮೦. ಮಹರ್ಷಿಗಳೂ ಚಾರಣರೂ ಸಹ ಗಜೇಂದ್ರಮೋಕ್ಷವನ್ನು ನೋಡಿ ಆಶ್ಚರ್ಯಭರಿತರಾಗಿ ಆ ಜನಾರ್ದನನನ್ನು ಸ್ತೋತ್ರಮಾಡತೊಡಗಿದರು. ಆಗ ಅನೇಕ ಪ್ರಜಾಪತಿಗಳಿಗೂ ಒಡೆಯನಾದ ಬ್ರಹ್ಮನು ಚಕ್ರಪಾಣಿಯಾದ ನಾರಾಯಣನ ಈ ವಿಲಾಸವನ್ನೂ ಗಜೇಂದ್ರಮೋಕ್ಷವನ್ನೂ ನೋಡಿ ಹೀಗೆ ಹೇಳಿದನು.

೮೧-೮೩. ಯಾವ ಪುರುಷನು ಈ ಗಜೇಂದ್ರ ಮೋಕ್ಷದ ಉಪಾಖ್ಯಾನವನ್ನು ಪ್ರಾತಃಕಾಲದಲ್ಲಿ ಎದ್ದು ನಿತ್ಯವೂ ಶ್ರವಣ ಮಾಡುತ್ತಾನೆಯೋ ಅಂತಹವನು ಪರಮ ಸಿದ್ಧಿಯನ್ನು ಹೊಂದುವದಲ್ಲದೆ ದುಃಸ್ವಪ್ನ ನಾಶವನ್ನೂ ಹೊಂದುತ್ತಾನೆ.

ಗಜೇಂದ್ರಮೋಕ್ಷಣಂ ಪುಂಸಾಂ ಸರ್ವಪಾಪಪ್ರಣಾಶನಂ ।
ಕಥಿತೇನ ಸ್ಮೃತೇನಾಽಥ ಶ್ರುತೇನ ಚ ತಪೋಧನ ॥ ೮೨ ॥

ಏತತ್ಪವಿತ್ರಂ ಪರಮಂ ಸುಪುಣ್ಯಂ
ಸಂಕೀರ್ತನೀಯಂ ಚರಿತಂ ಮುರಾರೇಃ ।
ಯಸ್ಮಿನ್ಕಿಲೋಕ್ತೇ ಬಹುಪಾಪಬಂಧನಾ
ಲ್ಲಭೇತ ಮೋಕ್ಷಂ ದ್ವಿರದೋನು ಯದ್ವತ್ ॥ ೮೩ ॥

ಅಜಂ ವರೇಣ್ಯಂ ವರಪದ್ಮನಾಭಂ
ನಾರಾಯಣಂ ಬ್ರಹ್ಮನಿಧಿಂ ಸುರೇಶಂ ।
ತಂ ದೇವಗುಹ್ಯಂ ಪುರುಷಂ ಪುರಾಣಂ
ವದಾಮ್ಯಹಂ ಲೋಕಪತಿಂ ವರೇಣ್ಯಂ ॥ ೮೪ ॥

ಇತಿ ಶ್ರೀ ವಾಮನಪುರಾಣೇ ವಾಮನ ಪ್ರಾದುರ್ಭಾವೇ
ಗಜೇಂದ್ರಮೋಕ್ಷಣಂ ನಾಮ ಪಂಚಾಶೀತಿತಮೋಽಧ್ಯಾಯಃ

ಈ ಗಜೇಂದ್ರ ಮೋಕ್ಷದ ಉಪಾಖ್ಯಾನವನ್ನು ಹೇಳುವುದರಿಂದಲೂ, ಕೇಳುವುದರಿಂದಲೂ ಸ್ಮರಣದಿಂದಲೂ ಕೂಡ ಮನುಷ್ಯನು ಸರ್ವಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

೮೩. ಮಹಾತ್ಮನಾದ ಮುರಾರಿಯ ಈ ಚರಿತ್ರೆಯು ಪವಿತ್ರವಾಗಿಯೂ, ಉತ್ಕೃಷ್ಟವಾಗಿಯೂ, ಪುಣ್ಯಪ್ರದವಾಗಿಯೂ ಇರುವದರಿಂದ ಎಲ್ಲರೂ ನಿತ್ಯವೂ ಇದನ್ನು ಪಠಿಸಬೇಕು. ಇದರ ಪಠನ ಮಾತ್ರದಿಂದಲೂ ಮನುಷ್ಯನು ಗಜೇಂದ್ರನಂತೆ ಸರ್ವಪಾಪಗಳಿಂದ ಬಿಡುಗಡೆಯನ್ನು ಹೊಂದಿ ಮುಕ್ತನಾಗುತ್ತಾನೆ.

೮೪. ಈ ರೀತಿ ಉಪಾಖ್ಯಾನದ ಮಾಹಾತ್ಮ್ಯವನ್ನು ವಿವರಿಸಿ ಪುಲಸ್ತ್ಯರು ಅಂತಹ ಪರಮಾತ್ಮನನ್ನು ತಾನೂ ನಮಸ್ಕರಿಸುತ್ತಾರೆ. ನಿತ್ಯನಾಗಿಯೂ ಆಶ್ರಯಣೀಯನಾಗಿಯೂ, ವೇದನಿಧಿಯಾಗಿಯೂ ಅಥವಾ ತಪೋನಿಧಿಯಾಗಿಯೂ, ಸುರಾಧಿಪನಾಗಿಯೂ ಪುರಾಣಪುರುಷನಾಗಿಯೂ ಇರುವ ಲೋಕನಾಥನಾದ ಆ ಪದ್ಮನಾಭನನ್ನು ಯಾವಾಗಲೂ ವಂದಿಸುತ್ತೇನೆ.

ಇಲ್ಲಿಗೆ ಶ್ರೀ ವಾಮನ ಪುರಾಣದ ವಾಮನ ಪ್ರಾದುರ್ಭಾವ ಪ್ರಕರಣದಲ್ಲಿ ಗಜೇಂದ್ರ ಮೋಕ್ಷಣವೆಂಬ ಎಂಭತ್ತೈದನೇ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಪಾಪಪ್ರಣಾಶನಕ್ಷೇತ್ರದಲ್ಲಿ ಭಾಗವತನಾದ ಪ್ರಹ್ಲಾದನು ಯಾವ ಯಾವ ಸ್ತೋತ್ರಗಳನ್ನು ಪಠಿಸಿದನೆಂದು ನಾರದರು ಪ್ರಶ್ನೆಮಾಡಲಾಗಿ ಅದಕ್ಕೆ ಉತ್ತರವಾಗಿ ಗಜೇಂದ್ರಮೋಕ್ಷಣವೆಂಬ ಉಪಾಖ್ಯಾನವನ್ನು ವಿವರಿಸಿದ್ದಾರೆ. ಕ್ಷೀರ ಸಮುದ್ರವನ್ನು ಭೇದಿಸಿಕೊಂಡು ಅದರ ಅಲೆಗಳಿಂದಲೂ ತೊಳೆಯಲ್ಪಡುವ ತಟಪ್ರದೇಶ ವುಳ್ಳ ದೇವದಾನವರೇ ಮೊದಲಾದವರಿಂದ ಸೇವಿತವಾದ ಗಿರಿನದಿಗಳಿಂದಲೂ ದೊಡ್ಡ ದೊಡ್ಡ ಕಾಡುಗಳಿಂದಲೂ ಅನೇಕ ಮೃಗಗಳಿಂದಲೂ, ಸೇವಿತವಾದ ಮೇರುಪುತ್ರನಾದ ತ್ರಿಕೂಟವೆಂಬ ಪರ್ವತವು ಸರ್ವರತ್ನಮಯವಾದ ಶಿಖರಗಳಿಂದ ಕೂಡಿ ಸರ್ವಭೋಗ್ಯ ವಾಗಿಯೂ ರಮ್ಯವಾಗಿಯೂ ಇದ್ದಿತು. ಆ ಪರ್ವತದ ಸಾನುಪ್ರದೇಶದಲ್ಲಿ ಸುವರ್ಣ ಕಮಲಗಳಿಂದಲೂ ಕೂಡಿದ ಸರೋವರವೊಂದಿದ್ದಿತು. ಸುತ್ತಲೂ ಬಿದಿರುಗಳ ಪೊದೆ ಯಿಂದ ಕೂಡಿ ಗಹನವಾಗಿದ್ದ ಆ ಸರೋವರದಲ್ಲಿ ಒಂದು ದುಷ್ಟಮೊಸಳೆಯು ನೀರಿ ನಲ್ಲಿ ಅಡಗಿಕೊಂಡಿದ್ದಿತು. ಆನೆಗಳನ್ನೂ ಜಯಿಸುವಷ್ಟು ಬಲಶಾಲಿಯಾಗಿಯೂ ಇದ್ದಿತು. ಹೀಗಿರುವಾಗ ಒಂದಾನೊಂದುದಿನ ಹೆಣ್ಣಾನೆಗಳೊಡಗೂಡಿದ ಒಂದು ಗಜಪತಿಯು ಪಾದಚಾರಿಯಾಗಿ ಸಂಚರಿಸುತ್ತಾ ಜಲಾಕಾಂಕ್ಷೆಯಿಂದ ಆ ಸರೋವರಕ್ಕೆ ಬಂದು ಕಮಲವನಗಳಲ್ಲಿ ವಿಹರಿಸುತ್ತಿರುವಾಗ ನೀರಿನೊಳಗಿನಿಂದ ಬಂದ ಘೋರಾ ಕಾರವಾದ ಆ ಮೊಸಳೆಯಿಂದ ಹಿಡಿಯಲ್ಪಟ್ಟಿತು. ಹೆಣ್ಣಾನೆಗಳೆಲ್ಲವೂ ಮೇಲಕ್ಕೆ ಓಡಿ ಚೀತ್ಕಾರಮಾಡುತ್ತಿದ್ದರೂ ಮೊಸಳೆಯು ಅದನ್ನು ಬಿಡದೆ ನೀರಿನೊಳಕ್ಕೆ ಸೆಳೆಯು ತ್ತಿದ್ದಿತು. ಆನೆಯು ಮೇಲಕ್ಕೆ ಸೆಳೆಯುತ್ತಲೂ ಮೊಸಳೆಯು ನೀರಿನೊಳಕ್ಕೆ ಸೆಳೆಯು ತ್ತಲೂ ಉಂಟಾದ ಅವರ ಪರಸ್ಪರ ಹೋರಾಟವು ದಿವ್ಯಸಹಸ್ರವರ್ಷ ಪರ್ಯಂತವೂ ನಡೆಯಿತು. ಆದರೂ ಯಥಾಶಕ್ತಿ ಶ್ರಮಪಟ್ಟು ಜಯಶಾಲಿಯಾಗದೆ ದುಃಖಪಟ್ಟ ಆ ಆನೆಯು ಕೊನೆಗೆ ತನ್ನ ವಿಪತ್ತಿನ ಬಿಡುಗಡೆಗಾಗಿ ಜಗತ್ಪತಿಯಾದ ನಾರಾಯಣನನ್ನು ಅಲ್ಲಿದ್ದ ಕಮಲಗಳಿಂದ ಪೂಜಿಸಿ ಪ್ರಪತ್ತಿಯೆಂಬ ಲಘೂಪಾಯದಿಂದ ಅವನಲ್ಲಿಯೇ ಸರ್ವಪ್ರಕಾರದಿಂದಲೂ ಶರಣಾಗತವಾಗಿ ತನ್ನ ಮಹಾವಿಶ್ವಾಸಕ್ಕೆ ತಕ್ಕಂತೆ ಸ್ತೋತ್ರ ಮಾಡಿತು. ಆ ಸ್ತುತಿಯನ್ನು ಲಾಲಿಸಿ ಭಕ್ತಪ್ರಿಯನಾದ ನಾರಾಯಣನು ಗರುಡಾ ರೂಢನಾಗಿ ಅಲ್ಲಿಗೆ ಬಂದು ಚಕ್ರಾಯುಧದಿಂದ ಮೊಸಳೆಯ ಬಾಯನ್ನು ಕತ್ತರಿಸಿ ಆರ್ತನಾದ ಗಜೇಂದ್ರನನ್ನು ಉದ್ಧರಿಸಿದನು. ಶಾಪದಿಂದ ಮೊಸಳೆಯಾಗಿದ್ದ ಹೂಹೂ ಎಂಬ ಗಂಧರ್ವನು ಚಕ್ರಸ್ಪರ್ಶಮಾತ್ರದಿಂದಲೇ ಶಾಪನಿವೃತ್ತಿಯನ್ನು ಹೊಂದಿ ತನ್ನ ರೂಪವನ್ನು ಧರಿಸಿ ನಿಂತನು. ಉಪಾಖ್ಯಾನದ ಮಹಿಮೆಯನ್ನು ಹೇಳುತ್ತ

ಪರಮಾತ್ಮನು ವಾತ್ಸಲ್ಯದಿಂದ ಗಜೇಂದ್ರನನ್ನು ಕೈಯ್ಯಿನಿಂದ ಸವರುತ್ತಿರಲು ಆ ಸ್ಪರ್ಶದಿಂದ ಆನೆಯ ರೂಪವನ್ನು ಬಿಟ್ಟು ಗಜೇಂದ್ರನೂ ದಿವ್ಯಪುರುಷನಾದನು. ಇಬ್ಬರೂ ಶಾಪದಿಂದುಂಟಾಗಿದ್ದ ಪಾಪಜನ್ಮದಿಂದ ಬಿಡುಗಡೆಯನ್ನು ಹೊಂದಿ ಆ ಪರಮಾತ್ಮನನ್ನು ಸ್ತುತಿಸಿದರು. ಪರಮಾತ್ಮನೂ ಸಹ ಅವರಿಬ್ಬರಿಗೂ ಒಂದೇ ಕಾಲದಲ್ಲಿ ಬಂಧವಿಮೋಚನೆಯಾದುದಕ್ಕೆ ಸಂತೋಷವನ್ನು ತೋರ್ಪಡಿಸಿ ಋಷಿಗಳಿಂದಲೂ ದೇವತೆಗಳಿಂದಲೂ ಸ್ತೋತ್ರಮಾಡಲ್ಪಡುತ್ತಾ ಅಂತರ್ಧಾನಹೊಂದಿದನು. ಬ್ರಹ್ಮನೂ ಈ ಗಜೇಂದ್ರಮೋಕ್ಷದಿಂದ ಸಂತೋಷಪಟ್ಟು ಈ ಉಪಾಖ್ಯಾನವು ದುಃಸ್ವಪ್ನನಾಶಕವೆಂದೂ ಪುಣ್ಯಕರವೆಂದೂ ಉಪದೇಶಿಸಿ ಭಗವಂತನನ್ನು ಸ್ತೋತ್ರಮಾಡಿ ನಮಸ್ಕರಿಸಿದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಷಡಶೀತಿತಮೋऽಧ್ಯಾಯಃ ॥

ಪುಲಸ್ತ್ಯ ಉವಾಚ

ಕಶ್ಚಿದಾಸೀದ್ದ್ವಿಜದ್ರೋಗ್ಧಾ ಪಿಶುನಃ ಕ್ಷತ್ರಿಯಾಧಮಃ ।
ಪರಪೀಡಾರುಚಿಃ ಕ್ಷುದ್ರಃ ಸ್ವಭಾವಾದೇವ ನಿರ್ಘೃಣಃ ॥ ೧ ॥

ನೋಽಪಾಸಿತಾಃ ಸದಾ ತೇನ ಪಿತೃದೇವದ್ವಿಜಾತಯಃ ।
ಸ ತ್ವಾಯುಷಿ ಪರಿಕ್ಷೀಣೇ ಜಜ್ಞೇ ಘೋರನಿಶಾಚರಃ ॥ ೨ ॥

ತೇನಾಽಸೌ ಕರ್ಮದೋಷೇಣ ಸ್ವೇನ ಪಾಪಕೃತಾಂ ವರಃ ।
ಕ್ರೂರೈಶ್ಚಕ್ರೇ ತದಾ ವೃತ್ತಿಂ ರಾಕ್ಷಸತ್ವಾದ್ವಿಶೇಷತಃ ॥ ೩ ॥

ಎಂಭತ್ತಾರನೆಯ ಅಧ್ಯಾಯವು

೧-೨. ಪುಲಸ್ತ್ಯರು ಹೇಳುತ್ತಾರೆ:—ಬ್ರಾಹ್ಮಣ ದ್ರೋಹಿಯಾಗಿಯೂ ಪಿಶುನ ಸ್ವಭಾವವುಳ್ಳವನಾಗಿಯೂ, ಪರಪೀಡೆಯಲ್ಲೇ ಅಭಿರುಚಿಯುಳ್ಳವನಾಗಿಯೂ, ನಿರ್ದಯತೆಯಿಂದ ಕೂಡಿದವನಾಗಿಯೂ ಇದ್ದ ಕ್ಷುದ್ರನಾದ ಒಬ್ಬ ಕ್ಷತ್ರಿಯಾಧಮನಿದ್ದನು, ಪಿತೃಗಳನ್ನೂ ದೇವತೆಗಳನ್ನೂ ಬ್ರಾಹ್ಮಣರನ್ನೂ ಸಹ ಅವನು ತನ್ನ ಜೀವಮಾನದಲ್ಲಿ ಯಾವಾಗಲೂ ಪೂಜಿಸಲೇ ಇಲ್ಲ ಅವನು ತನ್ನ ಆಯಸ್ಸೆಲ್ಲಾ ಕಳೆದನಂತರ ಘೋರವಾದ ರಾಕ್ಷಸಜನ್ಮಹೊಂದಿದನು.

೩-೪. ಪಾಪಿಗಳಲ್ಲಿ ಅಗ್ರೇಸರನಾದ ಆ ರಾಕ್ಷಸನು ಈ ವಿಧವಾದ ಪೂರ್ವಜನ್ಮದ ಕರ್ಮದೋಷದಿಂದ ರಾಕ್ಷಸನಾದುದಲ್ಲದೆ, ಆ ದೋಷದಿಂದಲೇ ಮತ್ತೂ ಪ್ರಬಲವಾದ ರಾಕ್ಷಸವೃತ್ತಿಗೆ ತಕ್ಕಂತೆ ಕ್ರೂರರಾದವರ ಸಹವಾಸಹೊಂದಿ ಜೀವಿಸತೊಡಗಿದನು.

ತಸ್ಯ ಪಾಪರತಸ್ಯೈವಂ ಜಗ್ಮುರ್ವರ್ಷಶತಾನಿ ತು ।
ತೇನೈವ ಕರ್ಮದೋಷೇಣ ನಾನ್ಯಾ ವೃತ್ತಿರರೋಚತ ॥ ೪ ॥

ಯಂ ಯಂ ಪಶ್ಯತಿ ಸತ್ವಂ ಸ ತಂ ತಮಾದಾಯ ರಾಕ್ಷಸಃ ।
ಚಖಾದ ರೌದ್ರಕರ್ಮಾಸೌ ಬಾಹುಗೋಚರಮಾಗತಂ ॥ ೫ ॥

ಏವಂ ತಸ್ಯಾತಿದುಷ್ಟಸ್ಯ ಕುರ್ವತಃ ಪ್ರಾಣಿನಾಂ ವಧಂ ।
ಜಗಾಮ ಸುಮಹಾನ್ಕಾಲಃ ಪರಿಣಾಮಂ ತಥಾ ವಯಃ ॥ ೬ ॥

ಸ ಕದಾಚಿತ್ತಪಸ್ಯಂತಂ ದದರ್ಶ ಸರಿತಸ್ತಟೇ ।
ಮಹಾಭಾಗಂಹ್ಯೂರ್ಧ್ವಭುಜಂ ಯಥಾ ವತ್ಸಂಜಿತೇಂದ್ರಿಯಂ ॥ ೭ ॥

ಅನಯಾ ರಕ್ಷಯಾ ಬ್ರಹ್ಮನ್ಕೃತರಕ್ಷಂ ತಪೋನಿಧಿಂ ।
ಯೋಗಾಚಾರ್ಯಂ ಶುಚಿಂ ದಕ್ಷಂ ವಾಸುದೇವಪರಾಯಣಂ ॥ ೮ ॥

ಇದೇ ರೀತಿಯಾಗಿ ಪಾಪಕರ್ಮದಲ್ಲಿ ಆಸಕ್ತನಾದ ಆ ರಾಕ್ಷಸನಿಗೆ ನೂರಾರು ವರ್ಷಗಳು ಕಳೆದುವು. ಆದರೂ ಹಿಂದಿನ ಆ ಕರ್ಮದ ವಾಸನಾಬಲದಿಂದ ಸರಿಯಾದ ಬೇರೆ ವೃತ್ತಿಯು ಅವನ ಮನಸ್ಸಿಗೆ ರುಚಿಸಲೇ ಇಲ್ಲ.

೫-೬. ಆ ರೀತಿಯಾದ ಜುಗುಪ್ಸಿತವ್ಯಾಪಾರವುಳ್ಳ ಆ ರಾಕ್ಷಸನು ಯಾವ ಯಾವ ಪ್ರಾಣಿಯನ್ನು ನೋಡುತ್ತಾನೆಯೋ, ಅದನ್ನೆಲ್ಲಾ ಕೈಯ್ಯಿಗಳಿಂದ ತೆಗೆದು ಭಕ್ಷಿಸಲಾರಂಭಿಸಿದನು. ಈ ರೀತಿ ಪ್ರಾಣಿವಧದಿಂದಲೇ ಜೀವಿಸುತ್ತಾ ದುರಾಚಾರ ಪರನಾದ ಆ ರಾಕ್ಷಸನಿಗೆ ಹೀಗೆಯೇ ಬಹಳ ಕಾಲವೂ ಕಳೆಯಿತು. ವಯಸ್ಸೂ ಪರಿಣಾಮ ಹೊಂದುತ್ತ ಬಂದಿತು.

೭-೮. ಒಂದಾನೊಂದು ದಿನ ಆ ರಾಕ್ಷಸನು ನದಿಯ ತೀರದಲ್ಲಿ ತಪಸ್ಸನ್ನು ಮಾಡುತ್ತಾ ಮೇಲಕ್ಕೆತ್ತಲ್ಪಟ್ಟ ಬಾಹುಗಳುಳ್ಳ ಜಿತೇಂದ್ರಿಯನಾದ ಒಬ್ಬ ಮಹಾತ್ಮ ನನ್ನು ನೋಡಿದನು. ಆ ಮಹಾಪುರುಷನು ವಾಸುದೇವನನ್ನೇ ರಕ್ಷಕನನ್ನಾಗಿ ನಂಬಿ ಶುಚಿಯಾಗಿಯೂ ಯೋಗನಿರತನಾಗಿಯೂ ಇದ್ದು ಈ ರೀತಿಯಾದ ರಕ್ಷೆಯಿಂದ ರಕ್ಷಿಸಲ್ಪಡುತ್ತಾ ತಪಸ್ವಿಯಾಗಿರುತ್ತಿದ್ದನು.

ವಿಷ್ಣುಃ ಪ್ರಾಚ್ಯಾಂ ಸ್ಥಿತಶ್ಚಕ್ರೀ ವಿಷ್ಣುರ್ದಕ್ಷಿಣತೋ ಗದೀ ।
ಪ್ರತೀಚ್ಯಾಂ ಶಾರ್ಙ್ಗಧೃಗ್ವಿಷ್ಣುರ್ವಿಷ್ಣುಃ ಖಡ್ಗೀ ಮಮೋತ್ತರೇ ॥ ೯ ॥

ಹೃಷೀಕೇಶೋ ವಿಕೋಣೇಷು ತಚ್ಛಿದ್ರೇಷು ಜನಾರ್ದನಃ ।
ಕ್ರೋಡರೂಪೀ ಹರಿರ್ಭೂಮೌ ನರಸಿಂಹೋಽಂಬರೇ ಮಮ ॥ ೧೦ ॥

ಕ್ಷುರಾಂತಮಮಲಂ ಚಕ್ರಂ ಭ್ರಮತ್ಯೇತತ್ಸುದರ್ಶನಂ ।
ತಸ್ಯಾಂಶುಮಾಲಾ ದುಷ್ಪ್ರೇಕ್ಷ್ಯಾ ಹಂತಿ ಪ್ರೇತನಿಶಾಚರಾನ್ ॥ ೧೧ ॥

ಗದಾ ಚೇಯಂ ಸಹಸ್ರಾರ್ಚಿರೂರ್ಧ್ವಗಂ ಹಂತು ವೃಕಾಂಸ್ತಥಾ ।
ರಕ್ಷೋಭೂತಪಿಶಾಚಾನಾಂ ಡಾಕಿನೀನಾಂ ಚ ಶಾತನೀ ॥ ೧೨ ॥

ಶಾರ್ಙ್ಗವಿಸ್ಫೂರ್ಜಿತಂ ಚೈವ ವಾಸುದೇವಸ್ಯ ಮದ್ರಿಪೂನ್ ।
ತಿರ್ಯಙ್ಮನುಷ್ಯಕೂಷ್ಮಾಂಡಪ್ರೇತಾದೀನ್ಹಂತ್ವಶೇಷತಃ ॥ ೧೩ ॥

೯-೧೦. (ಆ ತಪಸ್ವಿಯು ರಕ್ಷಣೆಗಾಗಿ ಹೊಂದಿದ್ದ ವಿಷ್ಣುಪಂಜರವನ್ನು ನಿರೂಪಿಸುತ್ತಾರೆ.) ನನ್ನ ಪೂರ್ವದಿಕ್ಕಿನಲ್ಲಿ ಚಕ್ರಧಾರಿಯಾದ ವಿಷ್ಣುವೂ ದಕ್ಷಿಣ ದಿಕ್ಕಿನಲ್ಲಿ ಗದಾಧಾರಿಯಾದ ಆ ವಿಷ್ಣುವೂ ರಕ್ಷಿಸಲಿ. ಪಶ್ಚಿಮದಲ್ಲಿ ಶಾರ್ಙ್ಗವೆಂಬ ಧನುರ್ಧಾರಿಯಾದ ಆ ವಿಷ್ಣುವೇ ರಕ್ಷಿಸಲಿ, ಉತ್ತರದಲ್ಲಿ ಖಡ್ಗಧಾರಿಯಾದ ಆ ವಿಷ್ಣುವು ರಕ್ಷಿಸಲಿ, ವಿದಿಕ್ಕುಗಳಲ್ಲಿ ಹೃಷೀಕೇಶನೂ ಆ ವಿದಿಕ್ಕುಗಳ ಅಂತರಭಾಗದಲ್ಲಿ ಜನಾರ್ದನನೂ ರಕ್ಷಿಸಲಿ ವರಾಹರೂಪಿಯಾದ ಆ ಹರಿಯು ಭೂಮಿಯಲ್ಲೂ ನೃಸಿಂಹನು ಆಕಾಶ ಭಾಗದಲ್ಲೂ ನನ್ನನ್ನು ರಕ್ಷಿಸಲಿ.

೧೧-೧೨. ತೀಕ್ಷ್ಣವಾದ ಅಲುಗಿನ ಅಗ್ರಭಾಗದಿಂದ ಜ್ವಲಿಸುತ್ತಾ ಸುದರ್ಶನವೆಂಬ ಚಕ್ರವು ತಿರುಗುತ್ತಿದೆ ನೋಡಲಶಕ್ಯವಾದ ಆ ಚಕ್ರದ ಪ್ರಭೆಯಲ್ಲಿ ಪಿಶಾಚಗಳು ರಾಕ್ಷಸರು ಎಲ್ಲರೂ ನಾಶಹೊಂದುವರು ರಾಕ್ಷಸರು ಭೂತಪಿಶಾಚಾದಿಗಳು ಡಾಕಿನಿಯೇ ಮೊದಲಾದ ಪಿಶಾಚ ವಿಶೇಷಗಳು ಇವುಗಳನ್ನೆಲ್ಲಾ ನಾಶಪಡಿಸುವ ಮಹಾವಿಷ್ಣುವಿನ ಆ ಗದೆಯು ಸಹಸ್ರಮುಖವಾದ ತೇಜಸ್ಸನ್ನು ಹೊಂದಿ ನನ್ನ ಮೇಲ್ಭಾಗದಲ್ಲಿ ಮಾಂಸಾಹಾರಿಗಳಾದ ಘಾತುಕರನ್ನು ನಾಶಪಡಿಸಲಿ.

೧೩-೧೪. ಆ ವಾಸುದೇವನ ಶಾರ್ಙ್ಗವೆಂಬ ಧನುಸ್ಸಿನ ಟಂಕಾರವು ನನಗೆ ಶತ್ರುಗಳಾಗಿ ಬರುವ ತಿರ್ಯಗ್ಜಂತುಗಳನ್ನೂ ಮನುಷ್ಯಕೂಶ್ಮಾಂಡ ಪ್ರೇತಾದಿಗಳನ್ನೂ

ಖಡ್ಗಾಧಾರಾ ಜಲಜ್ಯೋತ್ಸ್ನಾನಿರ್ಧೂತಾ ಯೇ ಮಮಾಹಿತಾಃ ।
ತೇಯಾಂ ತು ಸೌಮ್ಯತಾಂ ಸದ್ಯೋ ಗರುಡೇನೇವ ಪನ್ನಗಾಃ ॥ ೧೪ ॥

ಯೇ ಕೂಷ್ಮಾಂಡಾಸ್ತಥಾ ದೈತ್ಯಾ ಯಕ್ಷಾ ಯೇ ಚ ನಿಶಾಚರಾಃ ।
ಪ್ರೇತಾ ವಿನಾಯಕಾಃ ಕ್ರೂರಾ ಮನುಷ್ಯಾ ಜೃಂಭಕಾಃ ಖಗಾಃ ॥ ೧೫ ॥

ಸಿಂಹಾದಯೋ ಯೇ ಪಶವೋ ದಂದಶೂಕಾಶ್ಚ ಪನ್ನಗಾಃ ।
ಸರ್ವೇ ಭವಂತು ತೇ ಸೌಮ್ಯಾ ವಿಷ್ಣುಶಂಖರವಾಹತಾಃ ॥ ೧೬ ॥

ಚಿತ್ತವೃತ್ತಿಹರಾ ಯೇ ಚ ಯೇ ಜನಾಃ ಸ್ಮೃತಿಹಾರಕಾಃ ।
ಬಲೌಜಸಾಂ ಚ ಹರ್ತಾರಶ್ಛಾಯಾವಿಭ್ರಂಶಕಾಶ್ಚ ಯೇ ॥ ೧೭ ॥

ಯೇ ಚೋಪಭೋಗಹರ್ತಾರೋ ಯೇ ಚ ಲಕ್ಷಣನಾಶಕಾಃ ।
ಕೂಷ್ಮಾಂಡಾಸ್ತೇ ಪ್ರಣಶ್ಯಂತು ವಿಷ್ಣುಚಕ್ರರಯಾಹತಾಃ ॥ ೧೮ ॥

ನಾಶಪಡಿಸಲಿ ಖಡ್ಗದಧಾರೆಯೆಂಬ ಜಲದಿಂದಲೂ ಪ್ರಕಾಶದಿಂದಲೂ ಧಿಕ್ಕರಿಸಲ್ಪಟ್ಟ ನನ್ನ ಶತ್ರುಗಳೆಲ್ಲರೂ ಗರುಡನಿಂದ ಸರ್ಪಗಳಂತೆ ಸೌಮ್ಯತೆಯನ್ನು ಹೊಂದಲಿ.

೧೫-೧೬. ಯಾರು ಕೂಶ್ಮಾಂಡರಾಗಿರುವರೋ (ಇದರ ಅರ್ಥವನ್ನು ಮುಂದೆ ವಿವರಿಸುತ್ತಾರೆ.) ಹಾಗೆಯೇ ದೈತ್ಯರೂ ಯಕ್ಷರೂ ರಾಕ್ಷಸರೂ ಪಿಶಾಚಿಗಳೂ ವಿನಾಯಕರೆಂಬ ಗ್ರಹವಿಶೇಷಗಳೂ, ಕ್ರೂರಿಗಳಾದ ಮನುಷ್ಯರೂ, ಪಕ್ಷಿಗಳೂ, ಸಿಹ್ಮವೇ ಮೊದಲಾದ ದುಷ್ಟಪ್ರಾಣಿಗಳೂ, ಕಚ್ಚುವ ಪ್ರಾಣಿಗಳೂ ಸರ್ಪಗಳೂ ಇವೆಲ್ಲವೂ ವಿಷ್ಣುವಿನ ಶಂಖಧ್ವನಿಯಿಂದ ತಡೆಯಲ್ಪಟ್ಟು ಸೌಮ್ಯಗಳಾಗಲಿ.

೧೭-೧೮. ಯಾರು ಸಜ್ಜನರ ಮನಸ್ಸನ್ನೇ ಬೇರೆ ಕಡೆಗೆ ತಿರುಗಿಸಿ ಅಪಹರಿಸುತ್ತಾರೆಯೋ ಯಾರು ಸದ್ವಿಷಯಕಸ್ಮೃತಿಗೆ ಅಡಚಣೆಮಾಡುತ್ತಾರೆಯೋ ಬಲ ಮತ್ತು ತೇಜಸ್ಸುಗಳನ್ನು ನಾಶಪಡಿಸುವ ದುರ್ಮಾರ್ಗಕ್ಕೆ ಎಳೆಯುತ್ತಾರೆಯೋ ಛಾಯಾವೃಕ್ಷಗಳನ್ನು ನಾಶಪಡಿಸುತ್ತಾರೆಯೋ ಭೋಗ್ಯವಸ್ತುಗಳನ್ನು ಅಪಹರಿಸುತ್ತಾರೆಯೋ ಯಾರು ವಸ್ತುವಿನ ಅಸಾಧಾರಣ ಸೌಂದರ್ಯಕ್ಕೆ 'ಧಕ್ಕೆತರುತ್ತಾರೆಯೋ ಇಂತಹವರೇ ಕೂಶ್ಮಾಂಡರೆಂದು ಕರೆಯಲ್ಪಡುತ್ತಾರೆ. ಇಂತಹವರೆಲ್ಲರೂ ವಿಷ್ಣುವಿನ ಚಕ್ರದ ವೇಗದಿಂದ ತಡೆಯಲ್ಪಟ್ಟು ನಾಶಹೊಂದಲಿ.

ಬುದ್ಧಿಸ್ವಾಸ್ಥ್ಯಂ ಮನಸ್ಸ್ವಾಸ್ಥ್ಯಂ ಸ್ವಾಸ್ಥ್ಯಮೈಂದ್ರಿಯಕಂ ತಥಾ ।
ಮಮಾಸ್ತು ವಾಸುದೇವಸ್ಯ ದೇವದೇವಸ್ಯ ಕೀರ್ತನಾತ್ ॥ ೧೯ ॥

ಪೃಷ್ಠೇ ಪುರಸ್ತಾದಥ ದಕ್ಷಿಣೋತ್ತರೇ
ವಿಕೋಣತಶ್ಚಾಸ್ತು ಜನಾರ್ದನೋ ಹರಿಃ ।
ತಮೀಡ್ಯಮೀಶಾನಮನಂತಮಚ್ಯುತಂ
ಜನಾರ್ದನಂ ಪ್ರಾಣಪತಿಂ ನ ಸೀದತಿ ॥ ೨೦ ॥

ಯಥಾ ಪರಂ ಬ್ರಹ್ಮ ಹರಿಸ್ತಥಾ ಪರಂ
ಜಗತ್ಸ್ವರೂಪಂ ಚ ಸ ಏವ ಕೇಶವಃ ।
ಋತೇನ ತೇನಾಚ್ಯುತನಾಮಕೀರ್ತನಾತ್
ಪ್ರಣಾಶಮೇತತ್ತ್ರಿದಿವಂ ಮಮಾಶುಭಂ ॥ ೨೧ ॥

೧೯-೨೦. ದೇವಾಧಿಪತಿಯಾದ ವಾಸುದೇವನ ಸಂಕೀರ್ತನೆಯಿಂದ ನನಗೆ ಸ್ಥಿರವಾದ ಬುದ್ಧಿಯೂ ಸ್ಥಿರವಾದ ಮನಸ್ಸೂ ಇಂದ್ರಿಯಸ್ಥೈರ್ಯವೂ ಉಂಟಾಗಲಿ. ಸ್ತೋತ್ರಾರ್ಹನಾಗಿಯೂ ಪ್ರಭುವಾಗಿಯೂ ಅಪರಿಮಿತಸ್ವರೂಪನಾಗಿಯೂ ಶಾಶ್ವತ ನಾಗಿಯೂ ಇರುವ ಆ ಜನಾರ್ದನಮೂರ್ತಿಯು ನನ್ನ ಸಂಬಂಧವನ್ನು ಬಿಡದೆ ಯಾವಾಗಲೂ ಹಿಂಭಾಗದಲ್ಲಿಯೂ ಮುಂಭಾಗದಲ್ಲಿಯೂ ದಕ್ಷಿಣೋತ್ತರಪಾರ್ಶ್ವ ಗಳಲ್ಲಿಯೂ ವಿದಿಕ್ಕುಗಳ ಅಂತರಭಾಗಗಳಲ್ಲಿಯೂ ನಿಯತವಾಗಿ ನಿಲ್ಲಲಿ.

೨೧. ಹರಿಯೇ ಹೇಗೆ ಪರಬ್ರಹ್ಮಸ್ವರೂಪನಾಗಿರುವನೋ ಹಾಗೆಯೇ ಅವನಿಗಿಂತ ಬೇರೆಯಾಗದಿರುವ ಜಗತ್ತಿನ ಸ್ವರೂಪವೂ ಆ ಕೇಶವನಿಗೆ ಸೇರಿದ್ದೇ ಆಗಿದೆ. ಆ ಅಚ್ಯುತನ ನಾಮಸಂಕೀರ್ತನದಿಂದ ಇರುವ ನನಗೆ ಸತ್ಯಸ್ವರೂಪನಾದ ಅವನ ಸಂಬಂಧವಿಲ್ಲದಿದ್ದರೆ ಅಂತಹ ಸ್ವರ್ಗವೂ ಸಹ ಅಶುಭಕರವಾಗಿಯೂ ವಿನಾಶಕ ವಾಗಿಯೂ ಆದೀತು. (ಇಲ್ಲಿ ಕೀರ್ತನಾದಿಗಳಿಂದ ಪರಮಾತ್ಮನ ಭಾವನೆಯು ಯಾರಿಗಿರುತ್ತದೆಯೋ ಅವನಿಗೆ ಜಗತ್ತೇ ಸ್ವರ್ಗದಂತೆ ಸುಖಕರವಾಗುತ್ತದೆಯೆಂದೂ ಅಂತಹ ಭಾವನೆ ಇಲ್ಲದಿರುವವನಿಗೆ ಸ್ವರ್ಗವೂ ಸಹ ನರಕದಂತೆ ಅಶುಭಕರವಾಗಿ ಆಗುತ್ತದೆ ಎಂದೂ "ಅಥ ತಸ್ಯ ಭಯಂಭವತಿ" ಎಂಬ ತೈತ್ತರೀಯ ಶ್ರುತ್ಯರ್ಥವನ್ನು ಪ್ರತಿಪಾದಿಸಲಾಗಿದೆ.)

ಇತ್ಯೇವಂ ಚಾತ್ಮರಕ್ಷಾರ್ಥಂ ಕೃತ್ವಾ ವೈ ವಿಷ್ಣುಪಂಜರಂ ।
ಸಂಸ್ಥಿತೋಽಸಾವಪಿ ಬಲೀ ರಾಕ್ಷಸಃ ಸಮುಪಾದ್ರವತ್ ॥ ೨೨ ॥

ತತೋ ದ್ವಿಜಂ ನಿಯುಕ್ತಯಾ ರಕ್ಷಯಾ ರಜನೀಚರಃ ।
ನಿರ್ಧೂತವೇಗಃ ಸಹಸಾ ತಸ್ಥೌ ಮಾಸಚತುಷ್ಟಯಂ ॥ ೨೩ ॥

ಯಾವದ್ದ್ವಿಜಸ್ಯ ದೇವರ್ಷೇ ಸಮಾಪ್ತಿರ್ವೈ ಸಮಾಧಿತಃ ।
ತತೋ ಜಪ್ಯಾವಸಾನೇಽಸೌ ತಂ ದದರ್ಶ ನಿಶಾಚರಂ ॥ ೨೪ ॥

ದೀನಂ ಹತಬಲೋತ್ಸಾಹಂ ಕಾಂದಿಶೀಕಂ ಹತೌಜಸಂ ।
ತಂ ದೃಷ್ಟ್ವಾ ಕೃಪಯಾಽವಿಷ್ಟಃ ಸಮಾಶ್ವಾಸ್ಯ ನಿಶಾಚರಂ ॥ ೨೫ ॥

ಪಪ್ರಚ್ಛ ಗಮನೇ ಹೇತುಂ ಸಮಾಚಷ್ಟೇ ಯಥಾಗತಂ ।
ಸ್ವಭಾವಮಾತ್ಮನೋ ದ್ರಷ್ಟುಂ ರಕ್ಷಯಾ ತೇಜಸೋ ಹತಿಂ ॥ ೨೬ ॥

ಕಥಯಿತ್ವಾ ಚ ತದ್ರಕ್ಷಃ ಕಾರಣಂ ವಿಧಿವತ್ತತಃ ।
ಪ್ರಸೀದೇತ್ಯಬ್ರವೀದ್ವಿಪ್ರಂ ನಿರ್ವಿಣ್ಣಃ ಸ್ವೇನ ಕರ್ಮಣಾ ॥ ೨೭ ॥

೨೨-೨೩. ಈರೀತಿ ಆತ್ಮರಕ್ಷಣೆಗಾಗಿ ವಿಷ್ಣುಪಂಜರವನ್ನು ಕಲ್ಪಿಸಿಕೊಂಡು ತಪಸ್ಸಿನಲ್ಲಿ ನಿರತನಾಗಿರುವ ಆ ಮಹಾಪುರುಷನನ್ನು ನೋಡಿ ಬಲಿಷ್ಠನಾದ ಆ ರಾಕ್ಷಸನು ಅವನ ಸಮೀಪಕ್ಕೆ ಓಡಿದನು ಆಗ ಆ ತಾಪಸಬ್ರಾಹ್ಮಣನಿಂದ ಪ್ರೇರಿತವಾದ ಆ ರಕ್ಷೆಯು ರಾಕ್ಷಸನನ್ನು ಧಿಕ್ಕರಿಸಿ ತಳ್ಳಿದುದರಿಂದ ಆ ರಾಕ್ಷಸನೂ ನಾಲ್ಕು ತಿಂಗಳವರೆಗೂ ನಿರೀಕ್ಷಣೆಮಾಡುತ್ತಾ ಅಲ್ಲಿಯೇ ನಿಂತನು.

೨೪-೨೫. ತಪಸ್ಸಿನಲ್ಲಿ ನಿರತನಾಗಿದ್ದ ಆ ಬ್ರಾಹ್ಮಣನು ತನ್ನ ಸಮಾಧಿ (ಯೋಗ) ದೆಶೆಯಿಂದ ಎಚ್ಚೆತ್ತು ಬಾಹ್ಯದೃಷ್ಟಿಯನ್ನು ಹೊಂದಿದಾದ ಜಪವನ್ನೆಲ್ಲಾ ಮುಗಿಸಿಕೊಂಡು ಅಲ್ಲಿದ್ದ ಆ ರಾಕ್ಷಸನನ್ನು ನೋಡಿದನು ವಿಷ್ಣುಪಂಜರವೆಂಬ ರಕ್ಷೆಯಿಂದುಂಟಾದ ಧಿಕ್ಕಾರದಿಂದ ದೀನನಾಗಿಯೂ ಬಲೋತ್ಸಾಹರಹಿತನಾಗಿಯೂ, ಎಲ್ಲಿ ಹೋಗಲಿ ಎಂಬ ಕಾತರಭಾವದಿಂದ ನಿಸ್ತೇಜಸ್ಕನಾಗಿದ್ದ ಆ ರಾಕ್ಷಸನನ್ನು ನೋಡಿ ದಯೆಯಿಂದ ಸಮಾಧಾನಪಡಿಸಿ ಅವನ ಗಮನಕ್ಕೆ ಕಾರಣವೇನೆಂದು ಪ್ರಶ್ನೆ ಮಾಡಿದನು.

೨೬-೨೭. ಆಗ ಆ ರಾಕ್ಷಸನು ತಾನು ಬಂದುದಕ್ಕೆ ಕಾರಣವನ್ನೂ ತನ್ನ ನಿಂದ್ಯವಾದ ಸ್ವಭಾವವನ್ನೂ ಮತ್ತು ನೋಡಲು ಇಲ್ಲಿ ಬಂದಾಗ ರಕ್ಷೆಯಿಂದ ತನಗೆ ಉಂಟಾದ

ಬಹೂನಿ ಪಾಪಾನಿ ಮಯಾ ಕೃತಾನಿ
ತಥಾ ಚ ಸಂತೋ ಬಹವೋ ಮಯಾ ಹತಾಃ ॥ ೨೮ ॥

ಕೃತಾಃ ಸ್ತ್ರಿಯೋ ಮಯಾ ಬಹ್ವ್ಯೋ ವಿಧವಾಃ ಪುತ್ರವರ್ಜಿತಾಃ ।
ಅನಾಗಸಾಂ ಚ ಸತ್ತ್ವಾನಾಮನೇಕಾನಾಂ ಕ್ಷಯಃ ಕೃತಃ ॥ ೨೯ ॥

ತಸ್ಮಾತ್ಪಾಪಾದಹಂ ಮೋಕ್ಷಮಿಚ್ಛಾಮಿ ತ್ವತ್ಪ್ರಸಾದತಃ ।
ತತ್ಪಾಪಪ್ರಶಮಾಯಾಲಂ ಕುರು ಮೇಽಧರ್ಮನಾಶನಂ ॥ ೩೦ ॥

ಪಾಪಸ್ಯಾಽಸ್ಯ ಕ್ಷಯಕರಮುಪದೇಶಂ ಪ್ರಯಚ್ಛ ಮೇ ।
ವಚನಂ ಪ್ರಾಹ ಧರ್ಮಾರ್ಥಹೇತುಮುಚ್ಚಸ್ವಭಾಷಿತಂ ॥ ೩೧ ॥

ತೇಜೋಹಾನಿಯನ್ನೂ ಯಥಾರ್ಥವಾಗಿ ಹೇಳಿ ಇದಕ್ಕೆಲ್ಲಾ ತನ್ನ ದುಷ್ಕರ್ಮವೇ ಕಾರಣವೆಂಬುದನ್ನೂ ತಿಳಿಸಿ ಬ್ರಾಹ್ಮಣನನ್ನು ನೀನು ಪ್ರಸನ್ನನಾಗಬೇಕು ಎಂದು ಪ್ರಾರ್ಥಿಸಿ ತನ್ನ ದುಷ್ಕರ್ಮಪರಿಪಾಕದಿಂದ ತಾನೇ ನಿರ್ವೇದಹೊಂದಿ ನಿಂತನು.

೨೮-೩೦. ನಾನು ಇದುವರಿಗೆ ಅನೇಕ ಪಾಪಗಳನ್ನು ಮಾಡಿದ್ದಾಯಿತು. ಅನೇಕ ಸತ್ಪುರುಷರನ್ನೂ ಕೊಂದುದಾಯಿತು. ಅನೇಕ ಸ್ತ್ರೀಯರನ್ನು ವಿಧವೆಯರನ್ನಾಗಿಯೂ ಪುತ್ರಹೀನರನ್ನಾಗಿಯೂ ಮಾಡಿ ಆಯಿತು. ನಿರಪರಾಧಿಗಳಾದ ಅನೇಕ ಪ್ರಾಣಿಗಳನ್ನೂ ನಾಶಪಡಿಸಿದ್ದಾಯಿತು. ಇಂತಹ ಅನೇಕ ಪಾಪಗಳಿಂದ ಬಿಡುಗಡೆ ಹೊಂದಲು ಆಶೆಯಿಂದ ನಿನ್ನ ಅನುಗ್ರಹವನ್ನು ನಿರೀಕ್ಷಿಸುತ್ತಿದ್ದೇನೆ, ನನ್ನ ಈ ಪಾಪಗಳೆಲ್ಲವೂ ನಾಶವಾಗುವಂತೆ ಇದಕ್ಕೆ ಕಾರಣವಾದ ದುರದೃಷ್ಟವನ್ನು ಹೋಗಲಾಡಿಸು (ದುರದೃಷ್ಟದ ಬಲದಿಂದ ಪಾಪಕರ್ಮದಲ್ಲಿ ಅಭಿಲಾಷೆಯೂ ಅಂತಹ ಕರ್ಮಾಚರಣೆಯಿಂದ ಪಾಪಾಭಿವೃದ್ಧಿಯೂ ಆ ಪಾಪಗಳಿಂದ ದುಃಖವೂ ಉಂಟಾಗುತ್ತದೆ. ದುರದೃಷ್ಟವು ನಾಶವಾದಲ್ಲಿ ಇಂತಹ ಪಾಪಮೂಲಕವಾದ ದುಃಖಾನುಭವವು ತಪ್ಪುವುದೆಂದು ತಾತ್ಪರ್ಯ).

೩೧-೩೨. ಇಂತಹ ಪಾಪಗಳಿಗೆಲ್ಲಾ ನಾಶಕವಾದ ಸದುಪದೇಶವನ್ನು ನೀನು ಅನುಗ್ರಹಿಸು, ಎಂದು ಧರ್ಮಾರ್ಥರೂಪಗಳಾದ ಪುರುಷಾರ್ಥಪ್ರಾಪ್ತಿಗೆ ತಕ್ಕಂತೆ ಆ ರಾಕ್ಷಸನು ತಾನಾಗಿಯೇ ಪ್ರಾರ್ಥಿಸಿದನು. ರಾಕ್ಷಸನ ಆ ಮಾತನ್ನು ಕೇಳಿ ಅಲ್ಲಿದ್ದ

ತಸ್ಯ ತದ್ವಚನಂ ಶ್ರುತ್ವಾ ನಿಶಾಟಸ್ಯ ದ್ವಿಜೋತ್ತಮಾಃ ।
ಕಥಂ ಕ್ರೂರಸ್ವಭಾವಸ್ಯಾಽಸತಸ್ತವ ನಿಶಾಚರ ॥
ಸಹಸೈವ ಸಮಾಯಾತಾ ಜಿಜ್ಞಾಸಾ ಧರ್ಮವರ್ತ್ಮನಿ ॥ ೩೨ ॥

ರಾಕ್ಷಸ ಉವಾಚ

ತ್ವಾಂ ವೈ ಸಮಾಗತೋಽಸ್ಮ್ಯದ್ಯ ಕ್ಷಿಪ್ತೋಽಹಂ ರಕ್ಷಯಾ ಬಲಾತ್ ।
ತವ ಸಂಸರ್ಗತೋ ಬ್ರಹ್ಮನ್ ಜಾತೋ ನಿರ್ವೇದ ಉತ್ತಮಃ ॥ ೩೩ ॥

ಕಾ ಸಾ ರಕ್ಷಾ ನ ತಾಂ ವೇದ್ಮಿ ವೇದ್ಮಿ ನಾಸ್ಯಾಃ ಪರಾಯಣಂ ।
ಯಸ್ಯಾಃ ಸಂಸರ್ಗಮಾಸಾದ್ಯ ನಿರ್ವೇದಂ ಪ್ರಾಪಿತೋ ವರಂ ॥ ೩೪ ॥

ತ್ವಂ ಕೃಪಾಂ ಕುರು ಧರ್ಮಜ್ಞ ಮಯ್ಯನುಕ್ರೋಶಮಾವಹ ।
ಯಥಾ ಪಾಪಾಪನೋದೋ ಮೇ ಭವತ್ಯಾರ್ಯ ತಥಾ ಕುರು ॥ ೩೫ ॥

ಬ್ರಾಹ್ಮಣರೆಲ್ಲರೂ ಎಲೈ ರಾಕ್ಷಸನೇ ಇಷ್ಟು ಕ್ರೂರಸ್ವಭಾವನಾಗಿ ದುರ್ಮಾರ್ಗದಲ್ಲಿ ನೆಲಸಿದ್ದ ನಿನಗೆ ಇಷ್ಟು ಜಾಗ್ರತೆಯಾಗಿ ಧರ್ಮಮಾರ್ಗವನ್ನು ತಿಳಿಯಬೇಕೆಂಬ ಇಚ್ಛೆಯು ಹೇಗೆ ಉಂಟಾಯಿತು. ಎಂದು ಪ್ರಶ್ನೆ ಮಾಡಿದರು.

೩೩-೩೪. ರಾಕ್ಷಸನು ಹೇಳುತ್ತಾನೆ. ಎಲ್ಲರನ್ನೂ ಹಿಂಸಿಸಲು ಹೋಗುತ್ತಿದ್ದಂತೆ ನಿನ್ನನ್ನೂ ಹಿಂಸಿಸಲು ನಾನು ನಿನ್ನ ಸಮೀಪಕ್ಕೆ ಬಂದೆನು. ನಿನ್ನ ಈ ರಕ್ಷಾಬಲದಿಂದ ತಿರಸ್ಕರಿಸಲ್ಪಟ್ಟ ನನಗೆ ನಿನ್ನ ಸಂಬಂಧಮಾತ್ರದಿಂದಲೇ ಈ ವಿಧವಾದ ತತ್ವಜ್ಞಾನಪೂರ್ವಕವಾದ ನಿರ್ವೇದವು ಉಂಟಾಯಿತು. ಯಾವ ಈ ರಕ್ಷಾಸಂಬಂಧ ಮಾತ್ರದಿಂದ ನಾನು ಈ ವಿಧವಾದ ನಿರ್ವೇದವನ್ನು ಹೊಂದಿರುವೆನೋ ಆ ರಕ್ಷೆಯು ಯಾವುದೆಂಬುದನ್ನು ನಾನರಿಯೆ. ಅದರಿಂದ ಆಗುವ ಫಲವನ್ನೂ ನಾನರಿಯೆ.

೩೫. ಎಲೈ ಧರ್ಮಜ್ಞನೇ ನೀನು ನನ್ನಲ್ಲಿ ದಯೆಯಿಡು. ನನ್ನ ಈ ಪಾಪಗಳೆಲ್ಲವೂ ಹೋಗುವಂತೆ ಮಾಡಿ ನನ್ನಲ್ಲಿ ಹೆಚ್ಚಾದ ದಯೆಯನ್ನು ತೋರಿಸು.

ಪುಲಸ್ತ್ಯ ಉವಾಚ

ಇತ್ಯೇವಮುಕ್ತಃ ಸ ಮುನಿಸ್ತದಾ ತೇನ ಚ ರಾಕ್ಷಸಂ ।
ಪ್ರತ್ಯುವಾಚ ಮಹಾಭಾಗ ವಿಮೃಶ್ಯ ಸುಚಿರಂ ಬಹು ॥ ೩೬ ॥

ಋಷಿರುವಾಚ

ಯನ್ಮಾಮಾಹೋಪದೇಶಾರ್ಥಂ ನಿರ್ವಿಣ್ಣಃ ಸ್ವೇನ ಕರ್ಮಣಾ ।
ಯುಕ್ತಮೇತದ್ವಿಪಾಪಾನಾಂ ನಿವೃತ್ತಿರುಪಕಾರಿಕಾ* ॥ ೩೭ ॥

ಕರಿಷ್ಯೇ ಯಾತುಧಾನಾನಾಂ ನ ತ್ವಹಂ ಧರ್ಮದೇಶನಂ ।
ತಾನ್ಸಂಪೃಚ್ಛ ದ್ವಿಜಾನ್ಸೌಮ್ಯ ಯೇ ವೈ ಪ್ರವಚನೇ ರತಾಃ ॥ ೩೮ ॥

ಏವಮುಕ್ತೋ ಯಯೌ ವಿಪ್ರಾಂಶ್ಚಿಂತಾಮಾಪ ಚ ರಾಕ್ಷಸಃ ।
ಕಥಂ ಪಾಪಾಪನೋದಃ ಸ್ಯಾದಿತಿ ಚಿಂತಾಕುಲೇಂದ್ರಿಯಃ ॥ ೩೯ ॥

೩೬-೩೮. ಪುಲಸ್ತ್ಯರು ಹೇಳುತ್ತಾರೆ. ರಾಕ್ಷಸನಿಂದ ಹೀಗೆ ಪ್ರಾರ್ಥಿಸಲ್ಪಟ್ಟ ಆ ಬ್ರಾಹ್ಮಣನು ತಾನೂ ಬಹಳ ಕಾಲ ವಿಮರ್ಶೆಮಾಡಿ ಅವನನ್ನು ಕುರಿತು ಹೀಗೆ ಉತ್ತರವಿತ್ತನು. ಋಷಿಯು ಹೇಳುತ್ತಾನೆ. ನಿಂದ್ಯವಾದ ವ್ಯವಹಾರಗಳಿಂದ ನಿರ್ವೇದ ಹೊಂದಿ ಉಪದೇಶಕ್ಕಾಗಿ ನನ್ನನ್ನು ನೀನು ಪ್ರಾರ್ಥಿಸಿದುದು ನ್ಯಾಯವೇ ಆಗಿದೆ. ಈ ವಿಧವಾದ ನಿನ್ನ ಪಶ್ಚಾತ್ತಾಪವು ಪಾಪನಿವೃತ್ತಿಗೇ ಸೂಚಕವಾಗಿದೆ. ನಿನ್ನ ಈ ಪ್ರಯತ್ನವು ಶ್ಲಾಘ್ಯವಾದುದೇ ಸರಿ. ಆದರೆ ನಾನು ರಾಕ್ಷಸರಿಗೆ ಯಾವ ಉಪದೇಶವನ್ನೂ ಮಾಡುವ ಸಂಪ್ರದಾಯವಿಲ್ಲ. ಯಾರು ಪ್ರವಚನದಲ್ಲಿ ತೊಡಗಿ ಆ ಸಂಪ್ರದಾಯವನ್ನಿಟ್ಟುಕೊಂಡಿರುವರೋ ಅಂತಹ ಬ್ರಾಹ್ಮಣೋತ್ತಮರಲ್ಲಿ ನೀನು ಪ್ರಾರ್ಥಿಸು.

೩೯-೪೦. ಹೀಗೆ ಹೇಳಲ್ಪಟ್ಟ ಆ ರಾಕ್ಷಸನು ನನ್ನ ಈ ಪಾಪಗಳನ್ನು ಹೇಗೆ ಹೋಗಲಾಡಿಸಿಕೊಳ್ಳಲಿ ಎಂದು ಚಿಂತೆಯಿಂದ ವ್ಯಾಕುಲನಾಗಿ ಇದೇ ಆಲೋಚನೆ

---

* ಪಾಪಮಾಡಿದವರು ತಮ್ಮ ದುರ್ಮಾರ್ಗದಿಂದ ನಿವೃತ್ತರಾಗಿ ಹಿಂದೆ ಮಾಡಿದ ಪಾಪಕ್ಕಾಗಿ ಪಶ್ಚಾತ್ತಾಪ ಹೊಂದಿದ್ದೇ ಆದರೆ ಅಂತಹವರೇ ಪ್ರಾಯಶ್ಚಿತ್ತಕ್ಕೆ ಅರ್ಹರು ಎಂದು ಧರ್ಮಶಾಸ್ತ್ರವಿದೆ)

ನ ಚಖಾದ ಸ ಸತ್ವಾನಿ ಕ್ಷುಧಾ ಸಂಬಾಧಿತೋಽಪಿ ಸನ್ ।
ಷಷ್ಠೇ ಷಷ್ಠೇ ತದಾ ಕಾಲೇ ಜಂತುಮೇಕಮಭಕ್ಷಯತ್ ॥ ೪೦ ॥

ಸ ಕದಾಚಿತ್ಕ್ಷುಧಾವಿಷ್ಟಃ ಪರ್ಯಟನ್ವಿಪುಲೇ ವನೇ ।
ದದರ್ಶಾಥ ಫಲಾಹಾರಮಾಗತಂ ಬ್ರಹ್ಮಚಾರಿಣಂ ॥ ೪೧ ॥

ಗೃಹೀತೋ ರಕ್ಷಸಾ ತೇನ ಸ ತದಾ ಮುನಿದಾರಕಃ ।
ನಿರಾಶೋ ಜೀವಿತೇ ಪ್ರಾಹ ಸಾಮಪೂರ್ವಂ ನಿಶಾಚರಂ ॥ ೪೨ ॥

ಬ್ರಾಹ್ಮಣ ಉವಾಚ

ಭೋಽನಘ ಬ್ರೂಹಿ ತತ್ಕಾರ್ಯಂ ಗೃಹೀತೋ ಯೇನ ಹೇತುನಾ ।
ತದೇವಂ ಬ್ರೂಹಿ ಭದ್ರಂ ತೇ ಸ್ವಯಮಸ್ಮ್ಯನುಶಾಧಿ ಮಾಂ ॥ ೪೩ ॥

ಯಿಂದ ಬ್ರಾಹ್ಮಣರನ್ನು ಹುಡುಕುತ್ತ ಹೊರಟನು. ಹಸಿವಿನಿಂದ ಬಹಳ ದಣಿದಿದ್ದರೂ ಆ ರಾಕ್ಷಸನು ಯಾವ ಪ್ರಾಣಿಯನ್ನೂ ಭಕ್ಷಿಸಲು ಪ್ರಯತ್ನಪಡಲಿಲ್ಲ. ದಿವಸದ ಆರನೇಯ ಭಾಗದಲ್ಲಿ ಮಾತ್ರ ದೇಹಧಾರಣೆಗಾಗಿ ಒಂದೇ ಪ್ರಾಣಿಯನ್ನು ಭಕ್ಷಿಸ ತೊಡಗಿದನು.

೪೧-೪೨. ಒಂದಾನೊಂದು ದಿವಸದಲ್ಲಿ ಆ ರಾಕ್ಷಸನು ಹಸಿವಿನಿಂದ ದಣಿದು ದಟ್ಟವಾದ ಕಾಡಿನ ಮಧ್ಯದಲ್ಲಿ ಸಂಚರಿಸುತ್ತಿರುವಾಗ ಫಲಗಳನ್ನು ತೆಗೆದುಕೊಂಡು ಬರುತ್ತಿರುವ ಬ್ರಹ್ಮಚಾರಿಯೊಬ್ಬನು ಕಂಡನು. ನೋಡಿದೊಡನೆಯೇ ರಾಕ್ಷಸನು ಅವನನ್ನು ಹಿಡಿದುಕೊಂಡನು. ಪ್ರಾಣಗಳಲ್ಲಿ ನಿರಾಶನಾದ ಆ ಮುನಿಪುತ್ರನು ರಾಕ್ಷಸನನ್ನು ಕುರಿತು ಮೃದುವಾದ ಮಾತಿನಿಂದ ಹೀಗೆ ಹೇಳಿದನು.

೪೩-೪೪. ಬ್ರಾಹ್ಮಣನು ಹೇಳುತ್ತಾನೆ. ಎಲೈ ಸ್ವಜಾತಿಶ್ರೇಷ್ಠನೇ, ಯಾವ ಇಷ್ಟಾರ್ಥಕ್ಕಾಗಿ ನೀನು ನನ್ನನ್ನು ಹಿಡಿದುಕೊಂಡಿರುವೆ, ಹೇಳು. ನಿನಗೆ ಮಂಗಳ ವಾಗಲಿ. ನಾನೂ ಸಹ ನಿನಗೆ ಅನುಕೂಲಮಾಡಲು ಸಿದ್ಧನಾಗಿರುವೆನು. ನನಗೆ

ರಾಕ್ಷಸ ಉವಾಚ

ಷಷ್ಠೇ ಕಾಲೇ ತ್ವಮಾಹಾರಃ ಕ್ಷುಧಿತಸ್ಯ ಸಮಾಗತಃ ।
ನಿಷ್ಠುರಸ್ಯಾತಿಪಾಪಸ್ಯ ನಿರ್ಘೃಣಸ್ಯ ದ್ವಿಜದ್ರುಹಃ ॥ ೪೪ ॥

ಬ್ರಾಹ್ಮಣ ಉವಾಚ

ಯದ್ಯವಶ್ಯಂ ತ್ವಯಾ ಚಾಹಂ ಭಕ್ಷಿತವ್ಯೋ ನಿಶಾಚರ ।
ಆಯಾಸ್ಯಾಮಿ ತವಾದ್ಯೈವ ನಿವೇದ್ಯ ಗುರವೇ ಫಲಂ ॥ ೪೫ ॥

ಗುರ್ವರ್ಥಮೇತದಾಗತ್ಯ ಯತ್ಫಲಗ್ರಹಣಂ ಕೃತಂ ।
ಮಮಾತ್ರ ನಿಷ್ಠಾಂ ಪ್ರಾಪ್ತಸ್ಯ ಫಲಾನಿ ವಿನಿವೇದಿತುಂ ॥ ೪೬ ॥

ಸ ತ್ವಂ ಮುಹೂರ್ತಮಾತ್ರಂ ಮಾಮತ್ರೈವಮನುಪಾಲಯ ।
ನಿವೇದ್ಯ ಗುರವೇ ಯಾವದಿಹಾಗಚ್ಛಾಮ್ಯಹಂ ಫಲಂ ॥ ೪೭ ॥

ಅಪ್ಪಣೆ ಮಾಡು ಎಂದನು. ಆಗ ರಾಕ್ಷಸನು ಹೇಳುತ್ತಾನೆ. ಹಸಿದಿರುವ ನನಗೆ ದಿವಸದ ಆರನೇ ಭಾಗದಲ್ಲಿ ನೀನು ಆಹಾರವಾಗಿ ಲಭಿಸಿದ್ದೀಯೆ. ಕ್ರೂರಪ್ರಕೃತಿಯಾಗಿಯೂ ಪಾಪಿಯಾಗಿಯೂ ನಿರ್ದಯನಾಗಿಯೂ ಬ್ರಾಹ್ಮಣದ್ರೋಹಿಯಾಗಿಯೂ ಇರುವ ನನಗೆ ನಿನ್ನನ್ನೂ ಬಿಟ್ಟರೆ ಜೀವನ ಹೇಗೆ.

೪೫-೪೬. ಬ್ರಾಹ್ಮಣನು ಹೇಳುತ್ತಾನೆ. ಎಲೈ ರಾಕ್ಷಸನೇ ನೀನು ನನ್ನನ್ನು ಅವಶ್ಯವಾಗಿಯೂ ಭಕ್ಷಿಸಬೇಕೆಂದಿದ್ದಲ್ಲಿ ನಿನ್ನ ಇಷ್ಟವಿದ್ದಂತೆ ಹಾಗೆಯೇ ಆಗಲಿ. ನನ್ನ ಗುರುವಿನಲ್ಲಿ ಈ ಫಲಗಳನ್ನು ಒಪ್ಪಿಸಿ ಅನಂತರ ಪುನಃ ನಿನ್ನಲ್ಲಿಯೇ ಬಂದು ಸೇರುವೆನು. ನನ್ನ ಗುರುವಿಗಾಗಿಯೇ ಈ ಫಲಗಳನ್ನು ತರಲು ನಾನು ಪ್ರಯತ್ನಿಸಿದೆ ನನ್ನ ಗುರುಭಕ್ತಿಗೆ ತಕ್ಕಂತೆ ಈ ಫಲಗಳನ್ನು ಅವನಲ್ಲಿ ಒಪ್ಪಿಸಲು ನನಗೆ ಅವಕಾಶ ಕೊಡು.

೪೭-೪೮. ನನ್ನನ್ನು ಭಕ್ಷಿಸಲಪೇಕ್ಷೆಯುಳ್ಳ ನೀನು ಮುಹೂರ್ತಕಾಲ ನನ್ನನ್ನು ನಿರೀಕ್ಷಿಸುತ್ತ ಇಲ್ಲಿಯೇ ಇರು. ಈ ಫಲಗಳನ್ನು ಗುರುವಿಗೆ ಒಪ್ಪಿಸಿ ನಾನು ಇಲ್ಲಿಗೇ

ರಾಕ್ಷಸ ಉವಾಚ

ಷಷ್ಠೇ ಕಾಲೇ ನ ಮೇ ಬ್ರಹ್ಮನ್ಕಶ್ಚಿದ್ಗ್ರಹಣಮಾಗತಃ ।
ಪ್ರತಿಮುಚ್ಯೇತ ದೇವೋಽಪಿ ಇತಿ ಮೇ ಪಾಪಜೀವಿಕಾ ॥ ೪೮ ॥

ಏಕ ಏವಾತ್ರ ಮೋಕ್ಷಸ್ಯ ತವ ಹೇತುಃ ಶೃಣುಷ್ವ ತಂ ।
ಮುಂಚಾಮ್ಯಹಮಸಂದಿಗ್ಧಂ ಯದಿ ತತ್ಕುರುತೇ ಭವಾನ್ ॥ ೪೯ ॥

ಬ್ರಾಹ್ಮಣ ಉವಾಚ

ಗುರೋರ್ಯನ್ನ ವಿರುದ್ಧಂ ಸ್ಯಾದ್ಯನ್ನ ಧರ್ಮೋಪರೋಧಕಂ ।
ತತ್ಕರಿಷ್ಯಾಮ್ಯಹಂ ರಕ್ಷೋ ಯನ್ನ ವ್ರತಹರಂ ಮಮ ॥ ೫೦ ॥

ರಾಕ್ಷಸ ಉವಾಚ

ಮಯಾ ನಿಸರ್ಗತೋ ಬ್ರಹ್ಮನ್ ಜಾತಿದೋಷಾದ್ವಿಶೇಷತಃ ।
ನಿರ್ವಿವೇಕೇನ ಚಿತ್ತೇನ ಪಾಪಕರ್ಮ ಸದಾ ಕೃತಂ ॥ ೫೧ ॥

ತ್ವರೆಯಿಂದ ಬರುತ್ತೇನೆ. ಈ ಮಾತನ್ನು ಕೇಳಿ ರಾಕ್ಷಸನು ಹೇಳುತ್ತಾನೆ. ಎಲೆ ಬ್ರಾಹ್ಮಣನೇ ದಿವಸದ ಆರನೇ ಭಾಗದಲ್ಲಿ ನನಗೆ ಸಿಕ್ಕಿದವನು ದೇವತೆಯಾದರೂ ಅವನನ್ನು ನಾನು ಬಿಡಲು ಸಾಧ್ಯವೇ ಇಲ್ಲ. ನನ್ನ ಪಾಪಜೀವನವೇ ಈ ರೀತಿ ಇದೆ.

೪೯-೫೦. ಆದರೆ ನಿನ್ನ ಬಿಡುಗಡೆಗೆ ಒಂದೇಕಾರಣವಿದೆ. ಅದನ್ನು ನೀನು ನಡಿಸಿಕೊಟ್ಟಲ್ಲಿ ನಿನ್ನನ್ನು ಬಿಡುಗಡೆ ಮಾಡುತ್ತೇನೆ ಇದರಲ್ಲಿ ಸಂದೇಹವಿಲ್ಲ ಎಂದನು. ಆಗ ಬ್ರಾಹ್ಮಣನು ರಾಕ್ಷಸನೇ ಅದು ನನ್ನ ಗುರುವಿಗೆ ವಿರುದ್ಧವಾಗದೆಯೂ ಧರ್ಮಕ್ಕೆ ಬಾಧಕವಾಗದೆಯೂ ನನ್ನ ವ್ರತನಿಯಮಕ್ಕೆ ನಾಶವಾಗದೆಯೂ ಇದ್ದಲ್ಲಿ ಅದನ್ನು ನಾನು ಖಂಡಿತವಾಗಿ ನಡೆಸಿಕೊಡುತ್ತೇನೆ ಎಂದನು.

೫೧-೫೩. ಆಗ ರಾಕ್ಷಸನು ಹೇಳುತ್ತಾನೆ. ಎಲೈ ಬ್ರಾಹ್ಮಣೋತ್ತಮನೇ ನನ್ನ ಸ್ವಭಾವದೋಷದಿಂದಲೂ ವಿಶೇಷವಾಗಿ ರಾಕ್ಷಸಜಾತಿದೋಷದಿಂದಲೂ ಸಹ ಕರ್ತವ್ಯಾ ಕರ್ತವ್ಯ ವಿವೇಕವಿಲ್ಲದೆ ಅನೇಕ ಪಾಪಕರ್ಮಗಳನ್ನು ನಾನು ಮಾಡಿ ಆಯಿತು,

ಆಬಾಲ್ಯಾನ್ಮಮ ಪಾಪೇಷು ನ ಧರ್ಮೇಷು ರತಂ ಮನಃ ।
ತತ್ಪಾಪಸಂಕ್ಷಯಾನ್ಮೋಕ್ಷಂ ಪ್ರಾಪ್ನುಯಾಂ ಯೇನ ತತ್ವತಃ ॥ ೫೨ ॥

ಯಾನಿ ಕಾನಿ ಚ ಕರ್ಮಾಣಿ ಬಾಲತ್ವಾಚ್ಚರಿತಾನಿ ಚ ।
ದುಷ್ಟಾಂ ಯೋನಿಮಿಮಾಂ ಪ್ರಾಪ್ಯ ತನ್ಮುಕ್ತಿಂ ಕಥಯ ದ್ವಿಜ ॥ ೫೩ ॥

ಯದ್ಯೇತದ್ದ್ವಿಜಪುತ್ರ ತ್ವಂ ಸಮಾಖ್ಯಾಸ್ಯಸ್ಯಶೇಷತಃ ।
ತತಃ ಕ್ಷುಧಾರ್ತಾನ್ಮತ್ತಸ್ತ್ವಂ ನಿಯತಂ ಮೋಕ್ಷಮಾಪ್ಸ್ಯಸಿ ॥ ೫೪ ॥

ನ ಚೈತತ್ಪಾಪಶೀಲೋಽಹಮದ್ಯಾನ್ನಂ ಕ್ಷುತ್ಪಿಪಾಸಿತಃ ।
ಷಷ್ಠೇ ಷಷ್ಠೇ ನೃಶಂಸಾತ್ಮಾ ಭಕ್ಷಯಿಷ್ಯಾಮಿ ನಿರ್ಘೃಣಃ ॥ ೫೫ ॥

ಏವಮುಕ್ತೋ ಮುನಿಸುತಸ್ತೇನ ಘೋರೇಣ ರಕ್ಷಸಾ ।
ಚಿಂತಾಮವಾಪ ಮಹತೀಮಶಕ್ತಸ್ತದುದೀರಣೇ ॥ ೫೬ ॥

ಬಾಲ್ಯದಿಂದಲೂ ನನ್ನ ಮನಸ್ಸು ಪಾಪಾಚರಣದಲ್ಲಿ ನಿರತವಾಗಿದ್ದಿತೇ ಹೊರತು ಧರ್ಮಮಾರ್ಗದಲ್ಲಿ ಯಾವಾಗಲೂ ನಡೆಯಲೇ ಇಲ್ಲ. ಯಾವ ಯಾವ ದುಷ್ಕರ್ಮಗಳನ್ನು ಅವಿವೇಕದಿಂದ ಮಾಡಿದೆನೋ ಅದರ ಫಲವಾಗಿ ಈ ರಾಕ್ಷಸಜನ್ಮವನ್ನು ಹೊಂದಿ ಪುನಃ ಪಾಪಕರ್ಮಗಳಲ್ಲೇ ಆಸಕ್ತನಾಗಿರುವೆನೋ, ಅಂತಹ ಸರ್ವಪಾಪಗಳಿಂಲೂ ಬಿಡುಗಡೆ ಹೊಂದಲು ಯಾವುದು ಸಮರ್ಥವಾದ ಉಪಾಯವೋ ಅದನ್ನು ನನಗೆ ಉಪದೇಶಿಸು.

೫೪-೫೫. ಓ ಬ್ರಾಹ್ಮಣ ಕುಮಾರನೇ ಅಂತಹ ಉಪಾಯನ್ನು ನೀನು ಸಮಗ್ರವಾಗಿ ನನಗೆ ಹೇಳಿದ್ದೇ ಆದರೆ ನಾನು ಹಸಿದಿದ್ದರೂ ನಿನ್ನನು ಈಗಲೇ ಖಂಡಿತವಾಗಿಯೂ ಬಿಡುತ್ತೇನೆ. ಇಷ್ಟು ಪಾಪಾಚಾರ ನಿರತನಾದ ನಾನು ಹಸಿವು ಬಾಯಾರಿಕೆಗಳಿಂದ ವ್ಯಾಕುಲನಾಗಿದ್ದರೂ ಅನ್ನವನ್ನು ತಿನ್ನಲಾರೆ ಘಾತುಕನಾದ ನಾನು ದಿನದ ಆರನೇ ಭಾಗದಲ್ಲಿಯೇ ಇಂತಹ ಪಾಪಿಜೀವವನ್ನು ರಕ್ಷಿಸಬೇಕೆಂಬ ದುರಭಿಲಾಷೆಯಿಂದ ಭಕ್ಷಿಸುತ್ತಿದ್ದೇನೆ.

೫೬-೫೭. ಘೋರಾಕಾರನಾದ ಆ ರಾಕ್ಷಸನಿಂದ ಹೇಳಲ್ಪಟ್ಟ ಮುನಿಕುಮಾರನು ಅಂತಹ ಉಪಾಯವನ್ನು ಹೇಳಲಶಕ್ತನಾಗಿ ಬಹಳ ಮಟ್ಟಿಗೂ ಚಿಂತಿಸತೊಡಗಿದನು.

ಸ ವಿಮೃಶ್ಯ ಚಿರಂ ವಿಪ್ರಃ ಶರಣಂ ಜಾತವೇದಸಂ ।
ಜಗಾಮ ಜ್ಞಾನದಾನಾಯ ಸಂಶಯಂ ಪರಮಂ ಗತಃ ॥ ೫೭ ॥

ಯದಿ ಶುಶ್ರೂಷಿತೋ ವಹ್ನಿರ್ಗುರುಶುಶ್ರೂಷಣಾದನು ।
ವ್ರತಾನಿ ವಾ ಸುಚೀರ್ಣಾನಿ ಸಪ್ತಾರ್ಚಿಃ ಪಾತು ಮಾಂ ತತಃ ॥ ೫೮ ॥

ನ ಮಾತರಂ ನ ಪಿತರಂ ಗೌರವೇಣ ಯಥಾ ಗುರುಂ ।
ಯಥಾಹಮವಗಚ್ಛಾಮಿ ತಥಾ ಮಾಂ ಪಾತು ಪಾವಕಃ ॥ ೫೯ ॥

ಯಥಾ ಗುರುಂ ನ ಮನಸಾ ಕರ್ಮಣಾ ಮನಸಾಪಿ ಚ ।
ಅವಜಾನಾಮ್ಯಹಂ ತೇನ ಪಾತು ಮಾಂ ತೇನ ಪಾವಕಃ ॥ ೬೦ ॥

ಇತ್ಯೇವಂ ಮನಸಾ ಸತ್ಯಂ ಕುರ್ವತಃ ಶಪಥಾನ್ಮುನೇ ।
ಸಪ್ತಾರ್ಚಿಷಾ ಸಮಾದಿಷ್ಟಾ ಪ್ರಾದುರಾಸೀತ್ಸರಸ್ವತೀ ॥ ೬೧ ॥

ಹಾಗೆಯೇ ಬಹಳ ಹೊತ್ತು ಆಲೋಚಿಸಿ ತನ್ನ ಜೀವನದಲ್ಲೇ ಸಂಶಯಹೊಂದಿ ಜ್ಞಾನ ಪ್ರದಾನಮಾಡುವದಕ್ಕಾಗಿ ಅಗ್ನಿಯಲ್ಲಿ ಶರಣಾಗತನಾದನು.

೫೮-೫೯. ನಾನು ನಿತ್ಯವೂ ಗುರುಶುಶ್ರೂಷೆಯನ್ನು ಮಾಡಿದ ನಂತರ ಅಗ್ನಿಯನ್ನೂ ಪೂಜಿಸಿದ್ದಲ್ಲಿ, ಆಶ್ರಮೋಚಿತಗಳಾದ ವ್ರತಗಳನ್ನೂ ನಾನು ನೆರವೇರಿಸಿದ್ದಲ್ಲಿ ಆ ಅಗ್ನಿದೇವನು ನನ್ನನ್ನು ಈಗ ರಕ್ಷಿಸಲಿ, ಮಾತಾಪಿತೃಗಳಲ್ಲಿಯೂ, ಗುರುವಿನಲ್ಲಿಯೂ ಸಹ ಇಲ್ಲದಿರುವ ವಿಶೇಷವಾದ ಗೌರವಬುದ್ಧಿಯನ್ನು ಯಾವ ಅಗ್ನಿಯಲ್ಲಿ ನಾನು ಇಟ್ಟುಕೊಂಡಿರುವೆನೋ ಅಂತಹ ಅಗ್ನಿದೇವನು ಈಗ ನನ್ನನ್ನು ರಕ್ಷಿಸಲಿ.

೬೦-೬೧. ಯಾವ ಅಗ್ನಿದೇವನ ಅನುಗ್ರಹದಿಂದ ಗುರುವಿನ ವಿಷಯದಲ್ಲಿ ಮನಸ್ಸಿನಿಂದಲೂ ಕರ್ಮದಿಂದಲೂ ಅನಾದರವನ್ನು ಹೊಂದಿಲ್ಲವೋ ಅಂತಹ ಅಗ್ನಿದೇವನು ಈಗ ನನ್ನನ್ನು ರಕ್ಷಿಸಲಿ, ಈ ರೀತಿ ಮನಸ್ಸಿನ ಸತ್ಯತೆಯಿಂದ ಶಪಥ ಮಾಡುತ್ತಿರುವ ಆ ಮುನಿಕುಮಾರನೆದುರಿಗೆ ಅಗ್ನಿದೇವನಿಂದ ಪ್ರೇರಿಸಲ್ಪಟ್ಟ ಸರಸ್ವತಿಯೊಬ್ಬಳು ಆವಿರ್ಭವಿಸಿದಳು.

ಸಾ ಪ್ರೋವಾಚ ದ್ವಿಜಸುತಂ ರಾಕ್ಷಸಗ್ರಹಣಾಕುಲಂ ।
ಮಾ ಭೈರ್ದ್ವಿಜಸುತಾಽಹಂ ತ್ವಾಂ ಮೋಕ್ಷಯಾಮ್ಯದ್ಯ ಸಂಕಟಾತ್ ॥ ೬೨ ॥

ಯದಸ್ಯ ರಕ್ಷಸಃ ಶ್ರೇಯೋ ಜಿಹ್ವಾಗ್ರೇ ಸಂಸ್ಥಿತಾ ತವ ।
ತತ್ಸರ್ವಂ ಕಥಯಿಷ್ಯಾಮಿ ತತೋ ಮೋಕ್ಷಮವಾಪ್ಸ್ಯಸಿ ॥ ೬೩ ॥

ಅದೃಶ್ಯಾ ರಕ್ಷಸಾ ತೇನ ಪ್ರೋಕ್ತ್ವೇತ್ಥಂ ಚ ಸರಸ್ವತೀ ।
ಅದರ್ಶನಂ ಗತಾ ಸೋಽಪಿ ದ್ವಿಜಃ ಪ್ರಾಹ ನಿಶಾಚರಂ ॥ ೬೪ ॥

ಬ್ರಾಹ್ಮಣ ಉವಾಚ

ಶ್ರೂಯತಾಂ ತವ ಯಚ್ಛ್ರೇಯಸ್ತಥಾನ್ಯೇಷಾಂ ಚ ಪಾಪಿನಾಂ ।
ಸಮಸ್ತಪಾಪಶುದ್ಧ್ಯರ್ಥಂ ಪುಣ್ಯೋಪಚಯದಂ ಚ ಯತ್ ॥ ೬೫ ॥

ಪ್ರಾತರುತ್ಥಾಯ ಜಪ್ತವ್ಯಂ ಮಧ್ಯಾಹ್ನೇಽಹ್ನಃ ಕ್ಷಯೇಽಪಿ ವಾ ।
ಅಸಂಶಯಂ ಸದಾ ಜಾಪ್ಯೋ ಜಪತಾಂ ಪುಷ್ಟಿಶಾಂತಿದಃ ॥ ೬೬ ॥

೬೨-೬೩. ಆ ಸರಸ್ವತಿಯು ರಾಕ್ಷಸನ ಬಂಧನಕ್ಕೆ ಸಿಕ್ಕಿ ವ್ಯಾಕುಲನಾಗಿರುವ ಆ ಬ್ರಾಹ್ಮಣ ಕುಮಾರನನ್ನು ಕುರಿತು ಬ್ರಾಹ್ಮಣಪುತ್ರನೇ ಭಯಪಡಬೇಡ. ನಾನು ನಿನ್ನನ್ನು ಈ ವಿಪತ್ತಿನಿಂದ ಬಿಡಿಸುತ್ತೇನೆ. ಈ ರಾಕ್ಷಸನಿಗೆ ಶ್ರೇಯಸ್ಕರವಾದ ಉಪಾಯವು ನಿನ್ನ ನಾಲಗೆಯಲ್ಲಿಯೇ ಇರುತ್ತದೆ. ನಾನೇ ನಿನ್ನ ನಾಲಗೆಯಲ್ಲಿ ಕುಳಿತು ಅದನ್ನೆಲ್ಲಾ ಹೇಳುತ್ತೇನೆ. ಅನಂತರ ನೀನು ಈ ವಿಪತ್ತಿನಿಂದ ಪಾರಾಗುವೆ.

೬೪-೬೫. ಆ ಸರಸ್ವತಿಯು ರಾಕ್ಷಸನಿಗೆ ಗೋಚರಳಾಗದೆಯೇ ಹೀಗೆ ಹೇಳಿ ಅಂತರ್ಧಾನ ಹೊಂದಿದಳು. ಅನಂತರ ಆ ವಾಣಿಯಿಂದ ಆವೇಶಹೊಂದಿದ ಬ್ರಾಹ್ಮಣನು ರಾಕ್ಷಸನನ್ನು ಕುರಿತು ಹೇಳುತ್ತಾನೆ. ನಿನಗೂ ಇತರ ಪಾಪಿಗಳೆಲ್ಲರಿಗೂ ಯಾವುದು ಶ್ರೇಯಸ್ಕರವೋ ಸರ್ವಪಾಪಗಳನ್ನೂ ಹೋಗಲಾಡಿಸಿ ಪುಣ್ಯದ ಅಭಿವೃದ್ಧಿಗೆ ಯಾವುದು ಕಾರಣವಾಗುತ್ತದೆಯೋ ಅದನ್ನು ಹೇಳುತ್ತೇನೆ ಕೇಳು.

೬೬. ಇದನ್ನು ಪ್ರಾತಃಕಾಲದಲ್ಲಿ ಎದ್ದೊಡನೆಯೇ ಆಗಲಿ ಮಧ್ಯಾಹ್ನದಲ್ಲಿಯಾಗಲಿ ಹಗಲೆಲ್ಲಾ ಕಳೆದನಂತರ ಸಾಯಂಕಾಲದಲ್ಲೇ ಆಗಲಿ ನಿಯತವಾಗಿಯೂ ಜಪಿಸಬೇಕು. ಇದರ ಜಪವು ಜಪಮಾಡುವವರಿಗೆ ಶಾಂತಿಯನ್ನೂ ಪುಷ್ಟಿಯನ್ನೂ ಉಂಟುಮಾಡಿಯೇ ಮಾಡುತ್ತದೆ.

ಓಂ ಹರಿಂ ಕೃಷ್ಣಂ ಹೃಷೀಕೇಶಂ ವಾಸುದೇವಂ ಜನಾರ್ದನಂ।
ಪ್ರಣತೋಽಸ್ಮಿ ಜಗನ್ನಾಥಂ ಸ ಮೇ ಪಾಪಂ ವ್ಯಪೋಹತು ॥೬೭॥

ಚರಾಚರಗುರುಂ ನಾಥಂ ಗೋವಿಂದಂ ಶೇಷಶಾಯಿನಂ।
ಪ್ರಣತೋಽಸ್ಮಿ ಪರಂ ದೇವಂ ಸ ಮೇ ಪಾಪಂ ವ್ಯಪೋಹತು ॥೬೮॥

ಶಂಖಿನಂ ಚಕ್ರಿಣಂ ಶಾರ್ಙ್ಗಧಾರಿಣಂ ಸ್ರಗ್ಧರಂ ಪರಂ।
ಪ್ರಣತೋಽಸ್ಮಿ ಪತಿಂ ಲಕ್ಷ್ಮ್ಯಾಃ ಸ ಮೇ ಪಾಪಂ ವ್ಯಪೋಹತು ॥೬೯॥

ದಾಮೋದರಮುದಾರಂ ತಂ ಪುಂಡರೀಕಾಕ್ಷಮಚ್ಯುತಂ।
ಪ್ರಣತೋಽಸ್ಮಿ ಸ್ತುತಂ ಸ್ತುತ್ಯೈಃ ಸ ಮೇ ಪಾಪಂ ವ್ಯಪೋಹತು ॥೭೦॥

೬೭-೬೮. (ಪಾಪಹರನಾದುದರಿಂದ) ಹರಿಯಾಗಿಯೂ (ಕೃಷ್ಣವರ್ಣದಿಂದ) ಕೃಷ್ಣನಾಗಿಯೂ (ಇಂದ್ರಿಯಗಳಿಗೆ ನಿಯಾಮಕನಾಗಿರುವುದರಿಂದ) ಹೃಷೀಕೇಶ ನಾಗಿಯೂ (ಜಗದ್ರಕ್ಷಣೆಗಾಗಿ ವಸುದೇವನಲ್ಲಿ ಅವತರಿಸಿದುದರಿಂದ) ವಾಸುದೇವ ನಾಗಿಯೂ (ದುಷ್ಟನಿಗ್ರಹಕ್ಕೆ ಕಾರಣನಾಗಿ ದಂಡಧಾರಿಯಾಗಿರುವುದರಿಂದ) ಜನಾರ್ದನ ನಾಗಿಯೂ ಇರುವ ಆ ಜಗತ್ಪತಿಯನ್ನು ನಮಸ್ಕರಿಸುತ್ತೇನೆ. ಅವನು ಈ ನನ್ನ ಪಾಪವನ್ನು ಹೋಗಲಾಡಿಸಲಿ. ಚರಾಚರ ವಸ್ತುಗಳಿಗೆಲ್ಲಾ ಹಿತೈಷಿಯಾಗಿಯೂ ಪ್ರಭುವಾಗಿಯೂ ಶೇಷಶಾಯಿಯಾಗಿಯೂ ಇರುವ ಗೋವಿಂದನೆಂಬ ಆ ಪರದೇವತೆ ಯನ್ನು ನಮಸ್ಕರಿಸುತ್ತೇನೆ. ಅವನು ನನ್ನ ಈ ಪಾಪಗಳೆಲ್ಲವನ್ನೂ ನಾಶಮಾಡಲಿ.

೬೯-೭೦. ಶಂಖಚಕ್ರಗಳನ್ನೂ ಶಾರ್ಙ್ಗವೆಂಬ ಧನುಸ್ಸನ್ನೂ ಧರಿಸಿ ವನಮಾಲಾ ಭೂಷಿತನಾಗಿರುವ ಆ ಲಕ್ಷ್ಮೀಪತಿಯನ್ನು ನಮಸ್ಕರಿಸುತ್ತೇನೆ. ಅವನು ನನ್ನ ಈ ಪಾಪ ಗಳನ್ನು ಹೋಗಲಾಡಿಸಲಿ, (ಕೃಷ್ಣಾವತಾರದ ಲೀಲೆಗಳಿಂದ) ದಾಮೋದರನಾಗಿಯೂ, (ಗಜೇಂದ್ರನೇ ಮೊದಲಾದ ಭಕ್ತರಕ್ಷಣದಿಂದ) ಉದಾರನಾಗಿಯೂ (ಶಾಶ್ವತನಾಗಿರು ವುದರಿಂದ) ಅಚ್ಯುತನಾಗಿಯೂ ಇರುವ ಸ್ತೋತ್ರಾರ್ಹನಾದ ಆ ಪುಂಡರೀಕಾಕ್ಷನನ್ನು ಈ ಸ್ತುತಿಗಳಿಂದ ನಮಸ್ಕರಿಸುತ್ತೇನೆ. ಅವನು ನನ್ನ ಪಾಪಗಳನ್ನು ಹೋಗಲಾಡಿಸಲಿ.

ನಾರಾಯಣಂ ನರಂ ಶೌರಿಂ ಮಾಧವಂ ಮಧುಸೂದನಂ ।
ಪ್ರಣತೋಽಸ್ಮಿ ಧರಾಧಾರಂ ಸ ಮೇ ಪಾಪಂ ವ್ಯಪೋಹತು ॥ ೭೦ ॥

ಕೇಶವಂ ಕೇಶಿಹಂತಾರಂ ಕಂಸಾರಿಷ್ಟನಿಷೂದನಂ ।
ಪ್ರಣತೋಽಸ್ಮಿ ಮಹಾಬಾಹುಂ ಸ ಮೇ ಪಾಪಂ ವ್ಯಪೋಹತು ॥ ೭೧ ।

ಶ್ರೀವತ್ಸವಕ್ಷಸಂ ಶ್ರೀಶಂ ಶ್ರೀಧರಂ ಶ್ರೀನಿಕೇತನಂ ।
ಪ್ರಣತೋಽಸ್ಮಿ ಶ್ರಿಯಃ ಕಾಂತಂ ಸ ಮೇ ಪಾಪಂ ವ್ಯಪೋಹತು ॥ ೭೩ ॥

ಯಮೀಶಂ ಸರ್ವಭೂತಾನಾಂ ಧ್ಯಾಯಂತಿ ಯತಯೋಽಕ್ಷರಂ ।
ವಾಸುದೇವಮನಿರ್ದೇಶ್ಯಂ ತಮಸ್ಮಿ ಶರಣಂ ಗತಃ ॥ ೭೪ ॥

---

೭೦. (ಸರ್ವಪ್ರಾಣಿಗಳಿಗೂ ಪ್ರಾಪ್ಯನಾಗಿಯೂ ಪ್ರಾಪಕನಾಗಿಯೂ ಇರುವುದರಿಂದ) ನಾರಾಯಣನೆಂಬುದಾಗಿಯೂ ನರರೂಪಿ ಎಂಬುದಾಗಿಯೂ ಶೌರಿಯೆಂಬುದಾಗಿಯೂ (ಲಕ್ಷ್ಮೀಪತಿಯಾದುದರಿಂದ) ಮಾಧವನೆಂಬುದಾಗಿಯೂ (ವೇದೋದ್ಧಾರಕ್ಕಾಗಿ ಮಧುದೈತ್ಯನನ್ನು ನಾಶಮಾಡಿದುದರಿಂದ) ಮಧುಸೂದನನೆಂಬುದಾಗಿಯೂ ಕರೆಯಲ್ಪಡುವ ಆ ಜಗದಾಧಾರನನ್ನು ವಂದಿಸುತ್ತೇನೆ. ಅವನು ನನ್ನ ಈ ಪಾಪಗಳನ್ನು ಹೋಗಲಾಡಿಸಲಿ.

೭೧-೭೩. (ಬ್ರಹ್ಮರುದ್ರರುಗಳಿಗೂ ಆಶ್ರಯನಾಗಿರುವುದರಿಂದ) ಕೇಶವನೆಂದೂ ಮಹಾ ಬಲಶಾಲಿಯಾಗಿರುವುದರಿಂದ ಕೇಶಿನಾಶಕನೆಂದೂ ಕಂಸ, ಅರಿಷ್ಟ ಮುಂತಾದ ದುಷ್ಟನಾಶಕನೆಂದೂ ಪ್ರಸಿದ್ಧನಾಗಿರುವ ಆ ಪ್ರಭುವನ್ನು ನಮಸ್ಕರಿಸುತ್ತೇನೆ ಅವನು ಈ ನನ್ನ ಪಾಪಗಳನ್ನು ಹೋಗಲಾಡಿಸಲಿ (ಶ್ರೀವತ್ಸಧಾರಿಯಾದುದರಿಂದ) ಶ್ರೀವತ್ಸವಕ್ಷನೆಂದೂ (ಲಕ್ಷ್ಮೀಪತಿಯಾಗಿರುವುದರಿಂದ) ಶ್ರೀಶ, ಶ್ರೀಧರ, ಶ್ರೀನಿಕೇತನನೆಂದೂ ಕರೆಯಲ್ಪಡುವ ಆ ಲಕ್ಷ್ಮೀಪತಿಯನ್ನು ವಂದಿಸುತ್ತೇನೆ ಅವನು ಈ ನನ್ನ ಪಾಪಗಳನ್ನು ಹೋಗಲಾಡಿಸಲಿ.

೭೪-೭೫. ಸರ್ವಭೂತಪತಿಯಾದ ಆ ಪರಮಾತ್ಮನನ್ನು ಯತಿಗಳೆಲ್ಲರೂ ಅಕ್ಷರ (ನಾಶವಿಲ್ಲದ) ಸ್ವರೂಪನೆಂದು ತಿಳಿದು ಧ್ಯಾನಿಸುತ್ತಾರೆಯೋ ಅಂತಹ ನಿರೂಪಿಸಲಶಕ್ಯನಾದ ವಾಸುದೇವನನ್ನು ನಾನು ಶರಣುಹೊಕ್ಕಿರುವೆನು. ಮತ್ತು ಎಲ್ಲಾ ವಿಷಯ

ಸಮಸ್ತಾಲಂಬನೇಭ್ಯೋಽಯಂ ವ್ಯಾವರ್ತ್ಯ ಮನಸೋ ಗತಿಂ ।
ಧ್ಯಾಯಂತಿ ವಾಸುದೇವಾಖ್ಯಂ ತಮಸ್ಮಿ ಶರಣಂ ಗತಃ ॥ ೭೫ ॥

ಸರ್ವಗಂ ಸರ್ವಭೂತಂ ಚ ಸರ್ವಸ್ಯಾಧಾರಮೀಶ್ವರಂ ।
ವಾಸುದೇವಂ ಪರಂ ಬ್ರಹ್ಮ ತಮಸ್ಮಿ ಶರಣಾಗತಃ ॥ ೭೬ ॥

ಪರಮಾತ್ಮಾನಮವ್ಯಕ್ತಂ ಯಂ ಯಾಂತಿ ಚ ಸುಮೇಧಸಃ ।
ಕರ್ಮಕ್ಷಯೇಽಕ್ಷಯಂ ದೇವಂ ತಮಸ್ಮಿ ಶರಣಂ ಗತಃ ॥ ೭೭ ॥

ಪುಣ್ಯಪಾಪವಿನಿರ್ಮುಕ್ತೋ ಯಂ ಪ್ರಾಪ್ಯ ಚ ಪುನರ್ಭವಂ ।
ನ ಯೋಗಿನಃ ಪ್ರಾಪ್ನುವಂತಿ ತಮಸ್ಮಿ ಶರಣಂ ಗತಃ ॥ ೭೮ ॥

ಗಳಿಂದಲೂ ಮನೋವ್ಯಾಪಾರವನ್ನು ಹಿಂತಿರುಗಿಸಿ ಯಾವ ವಾಸುದೇವನನ್ನೇ ಧ್ಯಾನಿಸುತ್ತಾರೆಯೋ ಅಂತಹ ವಾಸುದೇವನಲ್ಲಿ ನಾನು ಶರಣಾಗತನಾಗಿರುವೆನು.

೭೬. ಮತ್ತು ಸರ್ವವ್ಯಾಪಕನಾಗಿಯೂ, (ಕಾರ್ಯರೂಪದಿಂದ) ಸರ್ವವಸ್ತುಸ್ವರೂಪನಾಗಿಯೂ ಸರ್ವಧಾರಕನಾಗಿಯೂ ಪ್ರಭುವಾಗಿಯೂ ಇರುವ ಪರಬ್ರಹ್ಮಸ್ವರೂಪನಾದ ಆ ವಾಸುದೇವನಲ್ಲಿಯೇ ನಾನು ಶರಣಾಗತನಾಗಿರುವೆನು.

೭೭-೭೮. ಜ್ಞಾನಿಗಳಾದ ಮಹಾತ್ಮರು ಜ್ಞಾನಬಲದಿಂದ ಸಕಲಕರ್ಮಕ್ಷಯ ಹೊಂದಿ ಅವ್ಯಕ್ತಮೂರ್ತಿಯಾಗಿಯೂ ಆವಾಸಸ್ಥಾನನಾಗಿಯೂ ಇರುವ ಯಾವ ಪರಮಾತ್ಮನನ್ನು ಹೊಂದುತ್ತಾರೆಯೋ ಅಂತಹ ವಾಸುದೇವನಲ್ಲಿ ನಾನು ಶರಣಾಗತನಾಗಿರುವೆನು. ಯೋಗಿಗಳಾದ ಮಹಾತ್ಮರು ಯೋಗಬಲದಿಂದ ಪುಣ್ಯಪಾಪಗಳಿಂದ ಬಿಡುಗಡೆಹೊಂದಿ ಯಾವ ಪರಮಾತ್ಮನನ್ನು ಆಶ್ರಯಿಸಿ ಪುನರ್ಜನ್ಮ ಹೊಂದುವುದೇ ಇಲ್ಲವೋ ಅಂತಹ ವಾಸುದೇವನಲ್ಲಿ ನಾನು ಶರಣಾಗತನಾಗಿರುವೆನು. (ಇಲ್ಲಿ ಪಾಪವು ತನ್ನ ಫಲದಿಂದ ಬಂಧಕವಾಗುವಂತೆ ಪುಣ್ಯವೂ ಇಹಲೋಕದ ಫಲದಿಂದ ಬಂಧಕವೇ ಆಗಿರುವುದರಿಂದ ಮೋಕ್ಷಾಪೇಕ್ಷೆಯುಳ್ಳವನಿಗೆ ಅವೆರಡೂ ತ್ಯಾಜ್ಯಗಳೆಂದು ವೇದಾಂತ ಶಾಸ್ತ್ರವು ಬೋಧಿಸುತ್ತದೆ)

ಬ್ರಹ್ಮ ಭೂತ್ವಾ ಜಗತ್ಸರ್ವಂ ಸದೇವಾಸುರಮಾನುಷಂ ।
ಯಃ ಸೃಜತ್ಯಚ್ಯುತೋ ದೇವಾಂಸ್ತಮಸ್ಮಿ ಶರಣಂ ಗತಃ ॥ ೭೯ ॥

ಬ್ರಹ್ಮತ್ವಂ ಯಸ್ಯ ವಕ್ತ್ರೇಭ್ಯಶ್ಚತುರ್ವೇದಮಯಂ ವಪುಃ ।
ವಪುಃ ಪ್ರಭೋಃ ಪರೋ ಜಜ್ಞೇ ತಮಸ್ಮಿ ಶರಣಂ ಗತಃ ॥ ೮೦ ॥

ಬ್ರಹ್ಮರೂಪಧರಂ ದೇವಂ ಜಗದ್ಯೋನಿಂ ಜನಾರ್ದನಂ ।
ಸ್ರಷ್ಟೃತ್ವೇ ಸಂಸ್ಥಿತಂ ಸೃಷ್ಟೌ ತಂ ನತೋಽಸ್ಮಿ ಜನಾರ್ದನಂ ॥ ೮೧ ॥

ಧೃತಾ ಮಹೀ ಹತಾ ದೈತ್ಯಾ ಪರಿತ್ರಾತಾಸ್ತಥಾಮರಾಃ ।
ಯೇನ ತಂ ವಿಷ್ಣುಮಾವೇಶ್ಯ ಪ್ರಣತೋಽಸ್ಮಿ ಜನಾರ್ದನಂ ॥ ೮೨ ॥

೭೯-೮೦. ಯಾವ ಅಚ್ಯುತನು ಬ್ರಹ್ಮ (ಎಲ್ಲಿಯೂ ಇಲ್ಲದ ಮಹತ್ವ) ರೂಪವನ್ನು ಹೊಂದಿ ದೇವಾಸುರ ಮನುಷ್ಯರಿಂದೊಡಗೂಡಿದ ಈ ಸರ್ವಜಗತ್ತನ್ನೂ ದೇವತೆಗಳನ್ನೂ ಸಹ ಸೃಷ್ಟಿಮಾಡುತ್ತಾನೆಯೋ ಆ ಅಚ್ಯುತನಲ್ಲಿ ನಾನು ಶರಣಾಗತನಾಗಿರುವೆನು. ಮುಖಗಳಲ್ಲಿ ನಾಲ್ಕು ವೇದಗಳನ್ನೂ ಹೊಂದಿರುವ ಯಾವ ಬ್ರಹ್ಮ (ಚತುರ್ಮುಖ) ಸ್ವರೂಪವಿರುವುದೋ ಅಂತಹ ಮತ್ತೊಂದು ಶರೀರವನ್ನು ಹೊಂದಿರುವ ಪರಬ್ರಹ್ಮನಲ್ಲಿ ನಾನು ಶರಣಾಗತನಾಗಿರುವೆನು. (ಇಲ್ಲಿ ಮೊದಲನೇಯ ಶ್ಲೋಕದಲ್ಲಿ ಕಾರಣತ್ವೋಪಪಾದಕವಾದ ಸೃಷ್ಟಿಕರ್ತೃತ್ವವನ್ನು ಸಂಗ್ರಹವಾಗಿ ವರ್ಣಿಸಿ ಎರಡನೇ ಶ್ಲೋಕದಲ್ಲಿ ಅದಕ್ಕೆ ವಿವರಣರೂಪವಾಗಿ ನಾಭಿಕಮಲದಲ್ಲಿ ಉದ್ಭವಿಸಿದ ಚತುರ್ಮುಖನಲ್ಲಿ ಅಂತರ್ಯಾಮಿಯಾಗಿ ನಿಂತು ಅವನ ಮೂಲಕ ಸೃಷ್ಟಿಕಾರ್ಯವನ್ನು ನಿರ್ವಹಿಸಿದನೆಂದು ಹೇಳಲಾಗಿದೆ. ಇದೇ ಪರಬ್ರಹ್ಮನ ಸೃಷ್ಟಿಕಾರ್ಯಕ್ಕೆ ಉಪಯುಕ್ತವಾದ ರೂಪಾಂತರ. "ರೇಜೆ ಸ ಪಂಚವದನೋ ವೇದವೇದಾಂಗಪಾರಗಃ" ಎಂಬ ಎರಡನೇ ಅಧ್ಯಾಯದ ಇಪ್ಪತ್ತನಾಲ್ಕನೇಯ ಶ್ಲೋಕದಲ್ಲಿಯೂ ಈ ರೀತಿಯಾಗಿಯೇ ಅರ್ಥವನ್ನು ಗ್ರಹಿಸಬೇಕು)

೮೧-೮೨. ಪರಬ್ರಹ್ಮನನ್ನು ಅಂತರ್ಯಾಮಿಯಾಗಿ ಹೊಂದಿ ಅವನದೇ ಆದ ರೂಪಾಂತರದಿಂದ ಸೃಷ್ಟಿಕಾರ್ಯದಲ್ಲಿ ಆಸಕ್ತನಾಗಿರುವ ಜಗತ್ಕಾರಣನಾದ ಜನಾರ್ದನನನ್ನು ನಮಸ್ಕರಿಸುತ್ತೇನೆ. (ವರಹಾವತಾರದಲ್ಲಿ) ಭೂಮಿಯನ್ನೂ ಧರಿಸಿ ದೈತ್ಯರನ್ನೂ ನಾಶಮಾಡಿ ದೇವತೆಗಳನ್ನೂ ರಕ್ಷಿಸಿದ ಆ ಮಹಾವಿಷ್ಣುವನ್ನು ನಮಸ್ಕರಿಸುತ್ತೇನೆ. ಯಾವ ಮಹಾವಿಷ್ಣುವನ್ನು ಯಜ್ಞಪತಿಯೆಂದೂ ಯಜ್ಞನಿರ್ವಾಹಕನೆಂದೂ ಯಜ್ಞಾ

ಯಜ್ಞೈರ್ಯಜಂತಿ ಯಂ ವಿಪ್ರಾ ಯಜ್ಞೇಶಂ ಯಜ್ಞಭಾವನಂ ।
ತಂ ಯಜ್ಞಪುರುಷಂ ವಿಷ್ಣುಂ ಪ್ರಣತೋಽಸ್ಮಿ ಜನಾರ್ದನಂ ॥ ೮೩ ॥

ಪಾತಾಲವೀಥೀಭೂತಾನಿ ತಥಾ ಲೋಕಾನ್ನಿಹಂತಿ ಯಃ ।
ತಮಂತಪುರುಷಂ ರುದ್ರಂ ಪ್ರಣತೋಽಸ್ಮಿ ಜನಾರ್ದನಂ ॥ ೮೪ ॥

ಸಂಭಕ್ಷಯಿತ್ವಾ ಸಕಲಂ ಯಥಾ ಸೃಷ್ಟಮಿದಂ ಜಗತ್ ।
ಯೋ ವೈ ನೃತ್ಯತಿ ರುದ್ರಾತ್ಮಾ ಪ್ರಣತೋಽಸ್ಮಿ ಜನಾರ್ದನಂ ॥ ೮೫ ॥

ಸುರಾಸುರಾಃ ಪಿತೃಗಣಾಃ ಯಕ್ಷಗಂಧರ್ವರಾಕ್ಷಸಾಃ ।
ಯಸ್ಯಾಂಶಭೂತಾ ದೇವಸ್ಯ ಸರ್ವಗಂ ತಂ ನಮಾಮ್ಯಹಂ ॥ ೮೬ ॥

ಸಮಸ್ತದೇವಾಃ ಸಕಲಾ ಮನುಷ್ಯಾಣಾಂ ಚ ಜಾತಯಃ ।
ಯಸ್ಯಾಂಶಭೂತಾ ದೇವಸ್ಯ ಸರ್ವಗಂ ತಂ ನಮಾಮ್ಯಹಂ ॥ ೮೭ ॥

ರಾಧ್ಯಪುರುಷನೆಂದೂ ಭಾವಿಸಿ ಯಜ್ಞ ರೂಪಗಳಾದವೇದೋಕ್ತ ಕರ್ಮಗಳಿಂದ ಬ್ರಾಹ್ಮಣರು ಪೂಜಿಸುವರೋ ಅಂತಹ ಯಜ್ಞಪುರುಷನಾದ ಜನಾರ್ದನನನ್ನು ನಮಸ್ಕರಿಸುತ್ತೇನೆ. ಇಲ್ಲಿ "ಯಜ್ಞೋ ಯಜ್ಞಪತಿರ್ಯಜ್ವಾಯಜ್ಞಾಂಗಃ" ಎಂಬ ಸಹಸ್ರನಾಮಶ್ಲೋಕದ ಅರ್ಥವು ಸಂಗ್ರಹಿಸಲ್ಪಟ್ಟಿದೆ.

೮೪-೮೫. ಪಾತಾಲಲೋಕದಲ್ಲಿರುವ ಪ್ರಾಣಿಗಳನ್ನೂ ಲೋಕಗಳೆಲ್ಲವನ್ನು ಸಹ ಕಾಲರೂಪಿಯಾಗಿ ಯಾವನು ನಾಶಮಾಡುತ್ತಾನೆಯೋ ಅಂತಹ ರುದ್ರನಲ್ಲೂ ಅಂತರ್ಯಾಮಿಯಾಗಿ ನಿಂತು ಪ್ರೇರಕನಾಗಿರುವ ಜನಾರ್ದನನನ್ನು ನಮಸ್ಕರಿಸುತ್ತೇನೆ. ತಾನು ಸೃಷ್ಟಿಸಿದ ಈ ಜಗತ್ತೆಲ್ಲವನ್ನೂ ತಾನೇ ಭಕ್ಷಿಸಿ ರುದ್ರರೂಪದಿಂದ ಯಾವನು ನರ್ತನಮಾಡುವನೋ ಅಂತಹ ಸರ್ವಾತ್ಮನಾದ ಜನಾರ್ದನನನ್ನು ನಮಸ್ಕರಿಸುತ್ತೇನೆ.

೮೬-೮೭. ದೇವತೆಗಳು, ರಾಕ್ಷಸರು, ಪಿತೃದೇವತೆಗಳು, ಯಕ್ಷ, ಗಂಧರ್ವ, ರಾಕ್ಷಸ ಮೊದಲಾದವರೂ ಸಹ ಯಾವ ಪರಮಾತ್ಮನ ಅಂಶಾಂಶದಿಂದ ಜನಿಸಿರುವರೋ ಅಂತಹ ಸರ್ವವ್ಯಾಪಕಮೂರ್ತಿಯನ್ನು ನಮಸ್ಕರಿಸುತ್ತೇನೆ. ಸಮಸ್ತದೇವತೆಗಳೂ ಎಲ್ಲಾ ವಿಧವಾದ ಮನುಷ್ಯ ಜಾತಿಗಳೂ ಯಾವ ಪ್ರಭುವಿನ ಅಂಶಗಳಾಗಿರುವುವೋ ಅಂತಹ ಸರ್ವವ್ಯಾಪಕನನ್ನು ನಮಸ್ಕರಿಸುತ್ತೇನೆ.

ವೃಕ್ಷಗುಲ್ಮಾದಯೋ ಯಸ್ಯ ತಥಾ ಪಶುಮೃಗಾದಯಃ ।
ಏಕಾಂಶಭೂತಾ ದೇವಸ್ಯ ಸರ್ವಗಂ ತಂ ನಮಾಮ್ಯಹಂ ॥ ೮೮ ॥

ಯಸ್ಮಾನ್ನಾನ್ಯತ್ಪರಂ ಕಿಂಚಿದ್ಯಸ್ಮಿನ್ಸರ್ವಂ ಮಹಾತ್ಮನಿ ।
ಯಃ ಸರ್ವಮವ್ಯಯೋಽನಂತಃ ಸರ್ವಗಂ ತಂ ನಮಾಮ್ಯಹಂ ॥ ೮೯ ॥

ಯಥಾ ಸರ್ವೇಷು ಭೂತೇಷು ಗೂಢೋಽಗ್ನಿರಿಹ ದಾರುಷು ।
ವಿಷ್ಣುರೇವಂ ತಥಾ ಪಾಪಂ ಮಮಾಽಶೇಷಂ ಪ್ರಣಶ್ಯತು ॥ ೯೦ ॥

ಯಥಾ ಸರ್ವಮಯಂ ವಿಷ್ಣುಂ ಬ್ರಹ್ಮಾದಿ ಸಚರಾಚರಂ ।
ಯಚ್ಚ ಜ್ಞಾನಪರಿಚ್ಛೇದ್ಯಂ ಪಾಪಂ ನಶ್ಯತು ಮೇ ತಥಾ ॥ ೯೧ ॥

ಶುಭಾಶುಭಾನಿ ಕಾರ್ಯಾಣಿ ರಜಃ ಸತ್ತ್ವತಮಾಂಸಿ ಚ ।
ಅನೇಕಜನ್ಮಕರ್ಮೋತ್ಥಂ ಪಾಪಂ ನಶ್ಯತು ಮೇ ತಥಾ ॥ ೯೨ ॥

೮೮-೮೯. ಮರ ಪೊದರು ಪಶು ಮೃಗ ಮೊದಲಾದ ಅಚೇತನ ಮತ್ತು ಚೇತನಗಳೆಲ್ಲವೂ ಯಾವ ಪರಮಾತ್ಮನ ಅಂಶಾಂಶಗಳಿಂದ ಉಂಟಾಗಿವೆಯೋ ಅಂತಹ ಸರ್ವವ್ಯಾಪಕನಾದ ದೇವನನ್ನು ನಮಸ್ಕರಿಸುತ್ತೇನೆ. ಯಾವ ಪರಮಾತ್ಮನಿಗಿಂತಲೂ ಬೇರೆಯಾದ ಉತ್ಕೃಷ್ಟ ವಸ್ತುವಿಲ್ಲವೋ ಯಾವ ಆ ಮಹಾಮಹಿಮನಲ್ಲಿ ಎಲ್ಲ ಜಗತ್ತೂ ನೆಲೆಮಾಡಿ ನಿಂತಿರುವುವೋ ಸರ್ವವ್ಯಾಪ್ತಿಯಿಂದ ಸರ್ವವಸ್ತುರೂಪನಾಗಿಯೇ ತೋರುತ್ತಿರುವನೋ ಅಂತಹ ಪರಮಾತ್ಮನನ್ನು ವಂದಿಸುತ್ತೇನೆ.

೯೦-೯೨. ಅಗ್ನಿಯು ಒಣಗಿದ ಮರಗಳಲ್ಲೆಲ್ಲಾ ಗೂಢವಾಗಿರುವಂತೆ ಯಾವ ವಿಷ್ಣುವು ಎಲ್ಲಾ ಪ್ರಾಣಿಗಳಲ್ಲಿಯೂ ನಿಗೂಢನಾಗಿರುವನೋ ಅವನು ನನ್ನ ಪಾಪ ಗಳನ್ನೆಲ್ಲಾ ನಾಶಮಾಡಲಿ, ಬ್ರಹ್ಮರುದ್ರಾದಿಗಳಿಗೂ ಅಂತರ್ಯಾಮಿಯಾಗಿ ಚರಾಚರ ವಸ್ತುರೂಪನಾಗಿ ಜ್ಞಾನಮಾತ್ರ ಸಾಧ್ಯನಾಗಿರುವನೋ ಅಂತಹ ಸರ್ವಜಗದ್ರೂಪನಾದ ವಿಷ್ಣುವು ನನ್ನ ಪಾಪಗಳನ್ನೆಲ್ಲಾ ನಾಶಪಡಿಸಲಿ ನನ್ನ ಸತ್ವರಜಸ್ತಮೋ ಗುಣಗಳೂ ಅವುಗಳಿಗೆ ಕಾರ್ಯಗಳಾದ ಇಷ್ಟಾನಿಷ್ಟಫಲಗಳೂ, ಅನೇಕ ಜನ್ಮಗಳಿಂದಲೂ ಸಂಚಿತ ವಾದ ಪಾಪರಾಶಿಯೂ ಆ ವಿಷ್ಣುವಿನ ಅನುಗ್ರಹದಿಂದ ನಾಶಹೊಂದಲಿ.

ಯನ್ನಿಶಾಯಾಂ ಚ ಯತ್ಪ್ರಾತರ್ಯನ್ಮಧ್ಯಾಹ್ನಾಪರಾಹ್ಣಯೋಃ ।
ಸಂಧ್ಯಯೋಶ್ಚ ಕೃತಂ ಪಾಪಂ ಕರ್ಮಣಾ ಮನಸಾ ಗಿರಾ ॥ ೯೩ ॥

ಯತ್ತಿಷ್ಠತಾ ಯದ್ವ್ರಜತಾ ಯಚ್ಚ ಶಯ್ಯಾಗತೇನ ಮೇ ।
ಕೃತಂ ಯದಶುಭಂ ಕರ್ಮ ಕಾಯೇನ ಮನಸಾಽಪಿ ವಾ ॥ ೯೪ ॥

ಅಜ್ಞಾನತೋ ಜ್ಞಾನತೋ ವಾ ಮದಾಚ್ಚಲಿತಮಾನಸೈಃ ।
ತತ್ಕ್ಷಿಪ್ರಂ ವಿಲಯಂ ಯಾತು ವಾಸುದೇವಸ್ಯ ಕೀರ್ತನಾತ್ ॥ ೯೫ ॥

ಪರದಾರಪರದ್ರವ್ಯವಾಂಛಾದ್ರೋಹೋದ್ಭವಂ ಚ ಯತ್ ।
ಪರಪೀಡೋದ್ಭವಾಂ ನಿಂದಾಂ ಕುರ್ವತಾ ಯನ್ಮಹಾತ್ಮನಾಂ ॥ ೯೬ ॥

ಯಚ್ಚ ಭೋಜ್ಯೇ ತಥಾ ಪೇಯೇ ಭಕ್ಷ್ಯೇ ಚೋಷ್ಯೇ ವಿಲೇಹನೇ ।
ತದ್ಯಾತು ವಿಲಯಂ ತೋಯೇ ಯಥಾ ಲವಣಭಾಜನಂ ॥ ೯೭ ॥

೯೩-೯೫. ರಾತ್ರಿಯ ಕಾಲದಲ್ಲಿಯೂ ಪ್ರಾತಃಕಾಲದಲ್ಲಿಯೂ ಮಧ್ಯಾಹ್ನ ಮತ್ತು ಅಪರಾಹ್ಣಕಾಲದಲ್ಲಿಯೂ ಎರಡು ಸಂಧ್ಯಾಕಾಲದಲ್ಲಿಯೂ ಕರ್ಮದಿಂದಲೂ ಮನಸ್ಸಿನಿಂದಲೂ, ವಾಕ್ಕಿನಿಂತಲೂ ಯಾವ ಯಾವ ಪಾಪಗಳನ್ನು ಮಾಡಿರುವೆನೋ ಹಾಗೆಯೇ ಮನೋವಾಕ್ಕಾಯಗಳಿಂದ ಕುಳಿತಿರುವಾಗಲೂ ನಡೆಯುತ್ತಿರುವಾಗಲೂ ಮಲಗಿರುವಾಗಲೂ ಯಾವ ಯಾವ ಪಾಪಗಳನ್ನು ಮಾಡಿರುವೆನೋ ಅಂತಹ ಪಾಪಗಳು ಅಜ್ಞಾನದಿಂದಲೇ ಆಗಲಿ ಜ್ಞಾನದಿಂದಲೇ ಆಗಲಿ ಮನೋದೋಷದಿಂದಾಗಲಿ ಉಂಟಾಗಿದ್ದಲ್ಲಿ ಅವೆಲ್ಲವೂ ವಾಸುದೇವನ ಈ ಕೀರ್ತನದಿಂದ ಜಾಗ್ರತೆಯಾಗಿ ನಾಶ ಹೊಂದಲಿ.

೯೬-೯೭. ಪರಸ್ತ್ರೀಯರ ಮತ್ತು ಪರದ್ರವ್ಯದ ಆಸೆಯಿಂದಲೂ ದ್ರೋಹದಿಂದಲೂ ಯಾವ ಪಾಪವು ಉಂಟಾಗಿರಬಹುದೋ ಇತರರಿಗೆ ತೊಂದರೆಯನ್ನುಂಟು ಮಾಡುವಂತಹ ಮಹಾತ್ಮರ ನಿಂದೆಯಿಂದ ಯಾವ ಪಾಪವು ಸಂಭವಿಸಿರಬಹುದೋ ಮತ್ತು ಭೋಜ್ಯವಸ್ತು ಸಂಬಂಧದಿಂದಲೂ, ಪೇಯ (ಕುಡಿಯತಕ್ಕ) ವಸ್ತು ಸಂಬಂಧದಿಂದಲೂ ಭಕ್ಷ್ಯಗಳ ಮತ್ತು ಚೋಷ್ಯ (ನೆಕ್ಕಿ ತಿನ್ನುವ) ವಸ್ತುಗಳ ಸಂಬಂಧದಿಂದಲೂ ಯಾವ ಯಾವ ಪಾಪಗಳುಂಟಾಗಿರಬಹುದೋ ಅವೆಲ್ಲವೂ ನೀರಿನಲ್ಲಿಟ್ಟ ಉಪ್ಪಿನ ಪಾತ್ರೆಯಂತೆ ಲಯಹೊಂದಲಿ. (ಭೋಜ್ಯವಸ್ತುಗಳಲ್ಲಿ ಸಂಪರ್ಕದೋಷದಿಂದಲೂ ಸ್ವಭಾವದೋಷದಿಂದಲೂ ಕೆಲವು ತ್ಯಾಜ್ಯಗಳೆಂದು ಧರ್ಮಶಾಸ್ತ್ರದಲ್ಲಿ ನಿರೂಪಿಸಲಾಗಿದೆ.)

'ಯದ್ಬಾಲ್ಯೇ ಯಚ್ಚ ಕೌಮಾರೇ ಯತ್ಪಾಪಂ ಯೌವನೇ ಮಮ ।
ವಯಃ ಪರಿಣತೌ ಯಚ್ಚ ಯಚ್ಚ ಜನ್ಮಾಂತರೇ ಕೃತಂ ॥ ೯೮ ॥

ತನ್ನಾರಾಯಣ ಗೋವಿಂದ ಹರಿ ಕೃಷ್ಣೇತಿ ಕೀರ್ತನಾತ್ ।
ಪ್ರಯಾತು ವಿಲಯಂ ತೋಯೇ ಯಥಾ ಲವಣಭಾಜನಂ ॥ ೯೯ ॥

ವಿಷ್ಣವೇ ವಾಸುದೇವಾಯ ಹರಯೇ ಕೇಶವಾಯ ಚ ।
ಜನಾರ್ದನಾಯ ಕೃಷ್ಣಾಯ ನಮೋ ಭೂಯೋ ನಮೋ ನಮಃ ॥ ೧೦೦ ॥

ಭವಿಷ್ಯನ್ನರಕಘ್ನಾಯ ನಮಃ ಕಂಸವಿಘಾತಿನೇ ।
ಅರಿಷ್ಟಕೇಶಿಚಾಣೂರದೇವಾರಿಕ್ಷಯಿಣೇ ನಮಃ ॥ ೧೦೧ ॥

ಕೋಽನ್ಯೋ ಬಲೇರ್ವಂಚಯಿತ್ವಾ ತ್ವಾಮೃತೇ ವೈ ಭವಿಷ್ಯತಿ ।
ಕೋಽನ್ಯೋ ಬಲಾನ್ನಾಶಯಿತಾ ದರ್ಪಂ ಹೈಹಯಭೂಪತೇಃ ॥ ೧೦೨ ॥

೯೮-೯೯. ಬಾಲ್ಯದಲ್ಲಿಯೂ, ಕೌಮಾರಾವಸ್ಥೆಯಲ್ಲಿಯೂ, ಯೌವನಕಾಲದಲ್ಲಿಯೂ ವಾರ್ಧಕ್ಯವೆಂಬ ವಯಃಪರಿಣಾಮದಲ್ಲಿಯೂ ಈ ಜನ್ಮದಲ್ಲಿಯೂ ಜನ್ಮಾಂತರದಲ್ಲಿಯೂ ಯಾವ ಯಾವ ಪಾಪಮಾಡಿರುವೆನೋ ಅವೆಲ್ಲವೂ ನಾರಾಯಣ, ಗೋವಿಂದ, ಹರಿ, ಕೃಷ್ಣ ಎಂಬ ಭಗವನ್ನಾಮ ಸಂಕೀರ್ತನದಿಂದ ಉಪ್ಪಿನಪಾತ್ರೆಯು ನೀರಿನಲ್ಲಿ ಕರಗಿಹೋಗುವಂತೆ ಲಯಹೊಂದಲಿ.

೧೦೦-೧೦೧. ವಿಷ್ಣುವೆಂದೂ ವಾಸುದೇವನೆಂದೂ ಹರಿಯೆಂದೂ ಕೇಶವನೆಂದೂ, ಜನಾರ್ದನನೆಂದೂ ಕೃಷ್ಣನೆಂದೂ ಅನೇಕ ನಾಮಗಳನ್ನು ಅಸಾಧಾರಣವಾದ ಆಯಾಯ ಲೀಲೆಯಿಂದ ಹೊಂದಿರುವ ಪರಮಾತ್ಮನಿಗೆ ಪುನಃ ಪುನಃ ಅನೇಕ ನಮಸ್ಕಾರಗಳು ಮುಂದಿನ ನರಕಗಳನ್ನೂ ನಾಶಮಾಡುವ ಮತ್ತು ಕಂಸ, ಅರಿಷ್ಟನೇಮಿ, ಕೇಶಿ, ಚಾಣೂರ, ದೇವಶತ್ರುಗಳಾದ ದೈತ್ಯರು ಇವರನ್ನೆಲ್ಲಾ ನಾಶಪಡಿಸಿ ಲೋಕರಕ್ಷಣೆಗೆ ನೆರವಾದ ಆ ಮಹಾಪುರುಷನಿಗೆ ನಮಸ್ಕಾರಗಳು, (ಇಲ್ಲಿ ಭವಿಷ್ಯನ್ನರಕಘ್ನಾಯ ಎಂಬುದರಿಂದ ಮುಂದೆ ನರಕಕ್ಕೂ ಕಾರಣವಾಗಬಹುದಾದ ಆಗಾಮಿ ಎಂಬ ಕರ್ಮವೂ ಸಹ ಭಗವದನುಗ್ರಹದಿಂದ ಫಲೋತ್ಪಾದಕವಾಗದೆ ಮೋಕ್ಷಕ್ಕೆ ಕಾರಣವಾಗದಿರುವ ದಗ್ಧಬೀಜಗಳಂತೆ ನಿಸ್ಸತ್ವವಾಗುತ್ತದೆ. ಎಂಬ ಅಂಶವು ಸೂಚಿತವಾಗಿದೆ).

೧೦೨-೧೦೪. ಮಹಾತ್ಮನೇ, ನಿನ್ನನ್ನು ಬಿಟ್ಟರೆ ಬಲಿಯನ್ನೂ ವಂಚನೆಯಿಂದ ಜಯಿಸಿದವರು ಮತ್ತಾರಿರುವರು, ಕಾರ್ತವೀರ್ಯನ ದರ್ಪವನ್ನು ನಾಶಪಡಿಸುವವರೂ

ಕಃ ಕರಿಷ್ಯತಿ ಚಾನ್ಯೋ ವೈ ಸಾಗರೇ ಸೇತುಬಂಧನಂ ।
ವಧಿಷ್ಯತಿ ದಶಗ್ರೀವಂ ಕಃ ಸಾಮಾತ್ಯಪುರಃಸರಂ ॥ ೧೦೩ ॥

ಕಸ್ತ್ವಾಮೃತೇಽನ್ಯೋ ನಂದಸ್ಯ ಗೋಕುಲೇ ರತಿಮೇಷ್ಯತಿ ।
ಪ್ರಲಂಬಪೂತನಾದೀನಾಂ ತ್ವಾಮೃತೇ ಮಧುಸೂದನ ।
ನಿಯಂತಾ ಹ್ಯಥವಾ ಶಾಸ್ತಾ ದೇವದೇವ ಭವಿಷ್ಯತಿ ॥ ೧೦೪ ॥

ಜಪತ್ಯೇವಂ ನರಃ ಪುಣ್ಯಂ ವೈಷ್ಣವಂ ಧರ್ಮಮುತ್ತಮಂ ।
ಇಷ್ಟಾಽನಿಷ್ಟಪ್ರಸಂಗೇಭ್ಯೋ ಜ್ಞಾನತೋಽಜ್ಞಾನತೋಽಪಿ ವಾ ॥ ೧೦೫ ॥

ಕೃತಂ ತೇನ ತು ಯತ್ಪಾಪಂ ಸಪ್ತಜನ್ಮಾಂತರೇಣ ವೈ ।
ಮಹಾಪಾತಕಸಂಜ್ಞಂ ವಾ ತಥಾ ಚೈವೋಪಪಾತಕಂ ॥ ೧೦೬ ॥

ಸಹ ನಿನ್ನ ಹೊರತು ಮತ್ತಾರಿರುವರು, ಹಾಗೆಯೇ ಸಾಗರದಲ್ಲಿ ಸೇತುವನ್ನು ಕಟ್ಟಿದವರೂ ಮತ್ತಾರಿರುವರು ಸಪರಿವಾರನಾದ ರಾವಣನನ್ನು ಕೊಲ್ಲುವವರೂ ನಿನ್ನ ಹೊರತು ಮತ್ತಾರಿರುವರು, ನಿನ್ನ ಹೊರತು ನಂದಗೋಕುಲದಲ್ಲಿ ಕ್ರೀಡಿಸುವವರೂ ಮತ್ತಾರಿರುವರು, ಓ ಮಧುಸೂದನನೇ, ಪ್ರಲಂಬ, ಪೂತನಾ ಮೊದಲಾದ ದುಷ್ಟರನ್ನು ನಿಗ್ರಹಿಸಲು, ಹಾಗೂ ಆಜ್ಞಾಧೀನರನ್ನಾಗಿ ಮಾಡಿಕೊಳ್ಳಲು ನಿನ್ನ ಹೊರತು ಮತ್ತಾರು ಸಮರ್ಥರಾದಾರು.

೧೦೫-೧೦೭. ಯಾವನು ಈ ರೀತಿಯಾದ ಉತ್ತಮೋತ್ತಮವಾದ ವೈಷ್ಣವಧರ್ಮರೂಪವಾದ ಈ ಸ್ತೋತ್ರವನ್ನು ನಿತ್ಯವೂ ಜಪಿಸುತ್ತಾನೆಯೋ ಅಂತಹ ಪುಣ್ಯಶಾಲಿಯು ಜ್ಞಾನಾಜ್ಞಾನ ಮೂಲಕವಾದ ಇಷ್ಟಾನಿಷ್ಟಕರ್ಮಗಳಿಂದಲೂ, ಹಿಂದಿನ ಏಳು ಜನ್ಮಗಳಿಂದಲೂ ಮಾಡಿರುವ ಮಹಾಪಾತಕ ಮತ್ತು ಉಪಪಾತಕಗಳಿಂದಲೂ ಮತ್ತು (ಯಜ್ಞದಾನಹೋಮಾದಿ ಕರ್ಮಗಳು ಸಂಕಲ್ಪಕ್ಕೆ ತಕ್ಕಂತೆ ಸ್ವರ್ಗಸಾಧಕವೂ ಆಗಬಹುದು. ಪರಮಾತ್ಮಪ್ರೀತಿಗೆ ಕಾರಣವೂ ಆಗಬಹುದು, ಸ್ವರ್ಗಸಾಧನ ದೃಷ್ಟಿಯಿಂದ ಆಚರಿಸಿದಲ್ಲಿ ಅದರಿಂದ ಉಂಟಾಗುವ ಸ್ವರ್ಗವೂ ಅನಿತ್ಯವಾದುದರಿಂದ ಮೋಕ್ಷಾಪೇಕ್ಷೆಯುಳ್ಳ ಅಧಿಕಾರಿಗೆ ಅಂತಹ ಸ್ವರ್ಗಸಾಧಕಕರ್ಮಗಳೂ ತ್ಯಾಜ್ಯಗಳೆಂದು

ಯಜ್ಞಾದೀನಿ ಚ ಪುಣ್ಯಾಸಿ ಜಪಹೋಮವ್ರತಾನಿ ಚ ।
ನಾಶಯೇದ್ಯೋಗಿನಾಂ ಸರ್ವಮಾಮಪಾತ್ರಮಿವಾಂಭಸಿ ॥ ೧೦೭ ॥

ನರಃ ಸಂವತ್ಸರಂ ಪೂರ್ಣತಿಲಪಾತ್ರಾಣಿ ಷೋಡಶ ।
ಅಹನ್ಯಹನಿ ಯೋ ದದ್ಯಾತ್ಪಠತ್ಯೇತಚ್ಚ ತತ್ಸಮಂ ॥ ೧೦೮ ॥

ಅವಿಪ್ಲುತ ಬ್ರಹ್ಮಚರ್ಯಂ ಸಂಪ್ರಾಪ್ಯ ಸ್ಮರಣಂ ಹರೇಃ ।
ವಿಷ್ಣುಲೋಕಮವಾಪ್ನೋತಿ ಸತ್ಯಮೇತನ್ಮಯೋದಿತಂ ॥ ೧೦೯ ॥

ತದೇತತ್ಸತ್ಯಮುಕ್ತಂ ಮೇ ನಹ್ಯಲ್ಪಮಪಿ ವೈ ಮೃಷಾ ।
ರಾಕ್ಷಸಗ್ರಸ್ತಸರ್ವಾಂಗಂ ತಥಾ ಮಾಮೇಷ ಮುಂಚತು ॥ ೧೧೦ ॥

ಪುಲಸ್ತ್ಯ ಉವಾಚ

ಏವಮುಚ್ಚಾರಿತೇ ತೇನ ಮುಕ್ತೋ ವಿಪ್ರಸ್ತು ರಕ್ಷಸಾ ।
ಅಕಾಮೇನ ದ್ವಿಜೋ ಭೂಯಸ್ತಮ್ಯಾಹ ರಜನೀಚರಂ ॥ ೧೧೧ ॥

ತಾತ್ಪರ್ಯ.) ಅನಿತ್ಯವಾದ ಸ್ವರ್ಗಸುಖಕ್ಕೆ ಕಾರಣಗಳಾದ ಯಜ್ಞದಾನ ಹೋಮಾದಿಗಳಿಂದಲೂ ಬಿಡುಗಡೆ ಹೊಂದುತ್ತಾನೆ, ಮಹಾಯೋಗಿಯಾಗಿ ಪರಿಣಮಿಸಿದ ಇಂತಹ ಭಾಗ್ಯಶಾಲಿಯ ಪುಣ್ಯಪಾಪಗಳೆಲ್ಲವೂ ಮಹಾವಿಷ್ಣುವಿನ ಅನುಗ್ರಹದಿಂದ ನೀರಿನಲ್ಲಿ ನೆನೆಹಾಕಿದ ಹಸಿಯ ಮಣ್ಣಿನಪಾತ್ರೆಯಂತೆ ಲಯಹೊಂದುತ್ತವೆ.

೧೦೮-೧೦೯. ಯಾವ ಮನುಷ್ಯನು ಪ್ರತಿ ದಿನದಲ್ಲಿಯೂ ಈ ಸ್ತೋತ್ರವನ್ನು ಜಪಿಸುತ್ತಾ ಇದರೊಡನೆ ಎಳ್ಳಿನಿಂದ ತುಂಬಿದ ಹದಿನಾರು ಪಾತ್ರೆಗಳನ್ನೂ ದಾನ ಮಾಡುತ್ತಾ ಸಂವತ್ಸರಪರ್ಯಂತ ನಿಯಮಶಾಲಿಯಾಗಿರುವನೋ ಅಂತಹ ಮಹಾತ್ಮನು ಹರಿಯ ಸ್ಮರಣದಿಂದ ದೃಢವಾದ ಬ್ರಹ್ಮಚರ್ಯವನ್ನು ಹೊಂದಿ ವಿಷ್ಣುಲೋಕವನ್ನು ಹೊಂದುತ್ತಾನೆ. ಇದನ್ನು ನಾನು ಸತ್ಯವಾಗಿ ಹೇಳುತ್ತೇನೆ.

೧೧೦-೧೧೧. ನಾನು ಹೇಳಿದುದೆಲ್ಲ ಸತ್ಯವಾಗಿದ್ದು ಇದರಲ್ಲಿ ಸ್ವಲ್ಪವೂ ಮಿಥ್ಯಾ ಭಾಷಣವಿಲ್ಲದಿದ್ದಲ್ಲಿ ರಾಕ್ಷಸನಿಂದ ಆಕ್ರಮಿಸಲ್ಪಟ್ಟ ಸರ್ವಾವಯವವುಳ್ಳ ನನ್ನನ್ನು ಇದರಿಂದ ಸಂತುಷ್ಟನಾದ ಆ ಹರಿಯು ಬಿಡುಗಡೆ ಮಾಡಲಿ.

ಪುಲಸ್ತ್ಯರು ಹೇಳುತ್ತಾರೆ, ಹೀಗೆ ಹೇಳಿದೊಡನೆಯೇ ಆ ಬ್ರಾಹ್ಮಣ ಕುಮಾರನು ರಾಕ್ಷಸನಿಂದ ಬಿಡುಗಡೆ ಹೊಂದಿದನು, ಆಗ ಸ್ವಾರ್ಥನಿರಪೇಕ್ಷೆಯಿಂದ ಆ ಬ್ರಾಹ್ಮಣನು ರಾಕ್ಷಸನನ್ನು ಕುರಿತು ಹೇಳುತ್ತಾನೆ.

ಬ್ರಾಹ್ಮಣ ಉವಾಚ

ಏತದ್ಭದ್ರ ಮಯಾಖ್ಯಾತಂ ತವ ಪಾತಕನಾಶನಂ ।
ವಿಷ್ಣೋಃ ಸಾರಸ್ವತಂ ಸ್ತೋತ್ರಂ ಯದ್ಯದೂಚೇ ಸರಸ್ವತೀ ॥ ೧೧೨ ॥

ಹುತಾಶನೇನ ದೀಪ್ತಾ ಚ ಮಮ ಜಿಹ್ವಾಗ್ರಸಂಸ್ಥಿತಾ ।
ಜಗಾದೇವಂ ಸ್ತವಂ ವಿಷ್ಣೋಃ ಸರ್ವೇಷಾಂ ಚೋಪಶಾಂತಿದಂ ॥ ೧೧೩ ॥

ಅನೇನೈವ ಜಗನ್ನಾಥಂ ತ್ವಮಾರಾಧಯ ಕೇಶವಂ ।
ತತಃ ಶಾಪಾಪನೋದಂ ತು ಸ್ತುತೇ ಲಪ್ಸ್ಯಸಿ ಕೇಶವೇ । ॥ ೧೧೪ ॥

ಪ್ರತ್ಯಹಂ ತ್ವಂ ಹೃಷೀಕೇಶಸ್ತವೇನಾನೇನ ರಾಕ್ಷಸ ।
ಸ್ತುತ್ವಾ ಭಕ್ತಿಂ ದೃಢಾಂ ಕೃತ್ವಾ ತತಃ ಪಾಪಾತ್ಪ್ರಮೋಕ್ಷ್ಯಸೇ ॥ ೧೧೫ ॥

ಸ್ತುತೋ ಹಿ ಸರ್ವಪಾಪಾನಿ ನಾಶಯಿಷ್ಯತ್ಯಸಂಶಯಂ ।
ಸ್ತುತೋ ಹಿ ಭಕ್ತ್ಯಾ ನೃಣಾಂ ಸ ಸರ್ವಪಾಪಹರೋ ಹರಿಃ ॥ ೧೧೬ ॥

೧೧೨-೧೧೩. ಬ್ರಾಹ್ಮಣನು ಹೇಳುತ್ತಾನೆ:–ಎಲೈ ಪುಣ್ಯಶಾಲಿಯೇ, ಯಾವ ಸರಸ್ವತಿಯು ಅಗ್ನಿಯಿಂದ ಪ್ರೇರಿತಳಾಗಿ ನನ್ನ ನಾಲಗೆಯಲ್ಲಿ ನಿಂತು ಸರ್ವಶಾಂತಿಪ್ರದವಾದ ಈ ವಿಷ್ಣುಸಾರಸ್ವತಸ್ತೋತ್ರವನ್ನು ಹೇಳಿರುವಳೋ ಅದನ್ನೇ ನಾನು ನಿನಗೆ ಹೇಳಿರುವೆನು. ಈ ಸಾರಸ್ವತಸ್ತೋತ್ರವು ನಿನ್ನ ಸರ್ವಪಾಪಗಳಿಗೂ ನಾಶಕವಾಗುತ್ತದೆ.

೧೧೪-೧೧೫. ಈ ಸ್ತೋತ್ರದಿಂದಲೇ ನೀನು ಜಗತ್ಪತಿಯಾದ ಕೇಶವನನ್ನು ಆರಾಧಿಸು ಇದರಿಂದ ಆ ಕೇಶವನನ್ನು ಸ್ತೋತ್ರಮಾಡಿದ್ದೇ ಆದರೆ ಎಲ್ಲಾ ಶಾಪಗಳಿಂದಲೂ ನೀನು ಮುಕ್ತನಾಗುತ್ತೀಯೇ, ಪ್ರತಿನಿತ್ಯವೂ ಈ ಸ್ತೋತ್ರದಿಂದ ಆ ಹೃಷೀಕೇಶನನ್ನು ದೃಢವಾದ ಭಕ್ತಿಯಿಂದ ಸ್ತೋತ್ರಮಾಡು, ಎಲ್ಲಾ ಪಾಪಗಳಿಂದಲೂ ಮುಕ್ತಿಹೊಂದುತ್ತೀಯೆ.

೧೧೬. ಸರ್ವಪಾಪನಾಶಕನಾದ ಹರಿಯು ಈ ಸ್ತುತಿಯಿಂದ ಭಕ್ತಿಪೂರ್ವಕವಾಗಿ ಯಾರು ಸ್ತೋತ್ರಮಾಡುವರೋ ಅಂತಹವರ ಎಲ್ಲಾ ಪಾಪಗಳನ್ನೂ ನಾಶಮಾಡುತ್ತಾನೆ ಇದರಲ್ಲಿ ಲೇಶವೂ ಸಂದೇಹವಿಲ್ಲ.

ಪುಲಸ್ತ್ಯ ಉವಾಚ

ತತಃ ಪ್ರಣಮ್ಯ ತಂ ವಿಪ್ರಮಾಸಾದ್ಯ ಚ ನಿಶಾಚರಃ ।
ತದೈವ ತಪಸೇ ಶ್ರೀಮಾನ್ ಶಾಲಿಗ್ರಾಮಮುಗಾದ್ವಲೀ ॥ ೧೧೭ ॥

ಅಹರ್ನಿಶಂ ಸ ಏವೈನಂ ಜಪನ್ಸಾರಸ್ವತಂ ಸ್ತವಂ ।
ದೇವಕ್ರಿಯಾರತಿರ್ಭೂತ್ವಾ ತಪಸ್ತೇಪೇ ನಿಶಾಚರಃ ॥ ೧೧೮ ॥

ಸಮಾರಾಧ್ಯ ಜಗನ್ನಾಥಂ ಸ ತತ್ರ ಪುರುಷೋತ್ತಮಂ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಮಗಾಚ್ಛುಭಂ ॥ ೧೧೯ ॥

ಏತತ್ತೇ ಕಥಿತಂ ಬ್ರಹ್ಮನ್ವಿಷ್ಣೋಃ ಸಾರಸ್ವತಂ ಸ್ತವಂ ।
ವಿಪ್ರವಕ್ತ್ರಸ್ಥಯಾ ಸಮ್ಯಕ್ಸರಸ್ವತ್ಯಾ ಸಮೀರಿತಂ ॥ ೧೨೦ ॥

೧೧೭-೧೧೮. ಪುಲಸ್ತ್ಯರು ಹೇಳುತ್ತಾರೆ:—ಅನಂತರ ಆ ರಾಕ್ಷಸನು ಆ ಬ್ರಾಹ್ಮಣನಿಂದ ಈ ಸ್ತೋತ್ರವನ್ನು ಹೊಂದಿ ಅವನನ್ನು ಭಕ್ತಿಯಿಂದ ನಮಸ್ಕರಿಸಿ ಜ್ಞಾನಿಯಾಗಿ ಆಗಲೇ ಶಾಲಿಗ್ರಾಮವೆಂಬಕ್ಷೇತ್ರಕ್ಕೆ ತಪಸ್ಸಿಗಾಗಿ ಹೊರಟನು. ಅಲ್ಲಿ ಈ ಸಾರಸ್ವತಸ್ತೋತ್ರವನ್ನು ಅಹೋರಾತ್ರಿಗಳಲ್ಲೂ ಜಪಿಸುತ್ತಾ ದೇವತಾರಾಧನದಲ್ಲಿ ತತ್ಪರನಾಗಿ ಆ ರಾಕ್ಷಸನು ನಿಯಮದಿಂದ ತಪಸ್ಸನ್ನಾಚರಿಸಿದನು.

೧೧೯. ಹಾಗೆ ಆ ಕ್ಷೇತ್ರದಲ್ಲಿ ಪುರುಷೋತ್ತಮನಾದ ಮಹಾವಿಷ್ಣುವನ್ನಾರಾಧಿಸಿ ಆ ರಾಕ್ಷಸನು ಸರ್ವಪಾಪಗಳಿಂದಲೂ ಮುಕ್ತಿಯನ್ನು ಹೊಂದಿ ಶುಭವಾದ ವಿಷ್ಣು ಲೋಕವನ್ನು ಹೊಂದಿದನು.

೧೨೦-೧೨೧. ಎಲೈ ಬ್ರಾಹ್ಮಣೋತ್ತಮನೇ, ಬ್ರಾಹ್ಮಣನ ಮುಖವನ್ನಾಶ್ರಯಿಸಿ ಸರಸ್ವತಿಯೇ ಹೇಳಿದ ಈ ವಿಷ್ಣುಸಾರಸ್ವತಸ್ತೋತ್ರವನ್ನು ನಿನಗೆ ಹೇಳಿರುವೆನು.

ಯ ಏತತ್ಪರಮಂ ಸ್ತೋತ್ರಂ ವಾಸುದೇವಸ್ಯ ಮಾನವಃ ।
ಪಠಿಷ್ಯತಿ ಸ ಸರ್ವೇಭ್ಯೋ ದುಃಖೇಭ್ಯೋ ಮೋಕ್ಷಮಾಪ್ಸ್ಯತಿ ॥ ೧೨೧ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ಸಾರಸ್ವತಸ್ತೋತ್ರಂ ನಾಮ ಷಡಶೀತಿತಮೋಽಧ್ಯಾಯಃ

ವಾಸುದೇವನ ಅನುಗ್ರಹಕ್ಕೆ ಕಾರಣವಾದ ಈ ಸ್ತೋತ್ರರತ್ನವನ್ನು ಯಾರು ಶ್ರದ್ಧೆಯಿಂದ ಪಠಿಸುತ್ತಾರೆಯೋ ಅವರು ಸರ್ವದುಃಖಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾರೆ.

ಇಲ್ಲಿಗೆ ಶ್ರೀ ವಾಮನಪುರಾಣದ ವಾಮನಪ್ರಾದುರ್ಭಾವ ಸಂದರ್ಭಲ್ಲಿ ಸಾರಸ್ವತ ಸ್ತೋತ್ರವೆಂಬ ಎಂಭತ್ತಾರನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಪ್ರಹ್ಲಾದನ ತೀರ್ಥಯಾತ್ರಾಪ್ರಸಂಗದಲ್ಲಿ ಪಾಪಪ್ರಣಾಶನ ಕ್ಷೇತ್ರದಲ್ಲಿ ಅವನು ಪಠಿಸಿದ ಸ್ತೋತ್ರವನ್ನು ಹೇಳಬೇಕೆಂಬ ನಾರದರ ಪ್ರಶ್ನೆಗೆ ಉತ್ತರವಾಗಿ ಸಾರಸ್ವತಸ್ತೋತ್ರವನ್ನು ಹೇಳಲಾಗಿದೆ. ಸ್ತೋತ್ರದ ಮಾಹಾತ್ಮ್ಯ ವನ್ನು ನಿರೂಪಿಸಲು ಉಪಾಖ್ಯಾನವನ್ನು ಈರೀತಿ ನಿರೂಪಿಸಿದ್ದಾರೆ.

ಕ್ಷುದ್ರನಾಗಿಯೂ ದಾನಭೋಗರಹಿತನಾಗಿಯೂ ಇದ್ದ ಒಬ್ಬ ಕ್ಷತ್ರಿಯಾಧಮನು ತನ್ನ ನೀಚಸ್ವಭಾವಕ್ಕೆ ತಕ್ಕಂತೆ ಆಯುಃಪರಿಮಾಣಕಳೆದನಂತರ ರಾಕ್ಷಸಜನ್ಮ ತಾಳಿದನು. ಆ ಜನ್ಮದಲ್ಲಿಯೂ ತನ್ನ ಪ್ರಬಲವಾದ ಕರ್ಮದೋಷದಿಂದ ಕ್ರೂರಿಗಳ ಸಹವಾಸವನ್ನೇ ಹೊಂದಿದ ಈ ರಾಕ್ಷಸನಿಗೆ ಪಾಪಬುದ್ಧಿಯೇ ಹೆಚ್ಚಾದುದರಿಂದ ಪರಹಿಂಸೆಯಿಂದಲೇ ಜೀವನವು ನಡೆಯುತ್ತಿದ್ದಿತು. ಹೀಗೆಯೇ ಬಹುದಿವಸ ಕಳೆದ ನಂತರ ಅವನಿಗೂ ವಯಃಪರಿಣಾಮವುಂಟಾಯಿತು. ಒಂದುದಿನ ಆ ರಾಕ್ಷಸನು ತನ್ನ ಸಂಚಾರಕಾಲದಲ್ಲಿ ನದಿಯುದಡದಲ್ಲಿ ಜಿತೇಂದ್ರಿಯನಾಗಿ ವಿಷ್ಣುಪಂಜರದಿಂದ ರಕ್ಷೆಯನ್ನು ಹೊಂದಿ ತಪಸ್ಸಿನಲ್ಲಿರುವ ಒಬ್ಬ ಬ್ರಾಹ್ಮಣನನ್ನು ನೋಡಿದನು. ಒಡನೆಯೇ ಅವನನ್ನು ಆಕ್ರಮಿಸಲು ಓಡಿಹೋದ ರಾಕ್ಷಸನು ವಿಷ್ಣುಪಂಜರದ ರಕ್ಷೆಯಿಂದ ತಡೆಯಲ್ಪಟ್ಟು ಆಕ್ರಮಿಸಲಾಗದೆ ಅಲ್ಲಿಯೇ ನಾಲ್ಕು ತಿಂಗಳವರಿಗೂ ಕಾದುನಿಂತನು. ಅನಂತರ ಸಮಾಧಿದೆಶೆಯಿಂದ ಎಚ್ಚೆತ್ತ ಬ್ರಾಹ್ಮಣನು ಜಪವೆಲ್ಲವನ್ನೂ ಮುಗಿಸಿಕೊಂಡು ಅಲ್ಲಿಯೇ ನಿಂತಿದ್ದ ಕಳೆಗುಂದಿ ದುರ್ಬಲನಾಗಿದ್ದ ಈ ರಾಕ್ಷಸನನ್ನು ಕಂಡನು. ದಯೆಯಿಂದ ಸಮಾಧಾನಪಡಿಸಿ ರಾಕ್ಷಸನ ಯೋಗಕ್ಷೇಮವನ್ನೆಲ್ಲಾ ವಿಚಾರಿಸಲು ವಿಷ್ಣುರಕ್ಷೆಯ ಸಂಬಂಧದಿಂದಲೂ ತಪಸ್ವಿಯಾದ ಬ್ರಾಹ್ಮಣನ ಕಟಾಕ್ಷದಿಂದಲೂ ಜ್ಞಾನೋದಯಹೊಂದಿದ ರಾಕ್ಷಸನು ತಾನು ಇದುವರಿಗೂ ಮಾಡಿದ ಪಾಪಗಳನ್ನೆಲ್ಲಾ ವಿವರಿಸಿ ಬಹಳ ನಿರ್ವೇದದಿಂದ ಇಂತಹ ಪಾಪಗಳಿಂದ ಬಿಡುಗಡೆಹೊಂದಲು ಬ್ರಾಹ್ಮಣನ ಅನುಗ್ರಹವನ್ನು ಪ್ರಾರ್ಥಿಸಿದನು. ಈರೀತಿ ರಾಕ್ಷಸನಿಂದ ಪ್ರಾರ್ಥಿಸಲ್ಪಟ್ಟ ಬ್ರಾಹ್ಮಣನು ಆಲೋಚಿಸಿ ನಿನಗೆ ಉಂಟಾಗಿರುವ ಪಶ್ಚಾತ್ತಾಪವೂ ನಿರ್ವೇದವೂ ನಿನ್ನ ಪಾಪಮೋಕ್ಷಕ್ಕೆ ಸೂಚಕವಾಗಿವೆ ಎಂದು ರಾಕ್ಷಸನನ್ನು ಪ್ರಶಂಸಿಸಿ ತಾನು ಧರ್ಮಾಚರಣೆ ಯಲ್ಲಿರುವವನೇ ಹೊರತು ರಾಕ್ಷಸರಿಗೆ ಉಪದೇಶಿಸುವ ಸಂಪ್ರದಾಯವನ್ನು ಹೊಂದಿಲ್ಲವೆಂದೂ ಪ್ರವಚನ ಸಂಪ್ರದಾಯವನ್ನು ಇಟ್ಟುಕೊಂಡಿರುವ ಬ್ರಾಹ್ಮಣೋತ್ತಮರಲ್ಲಿ ಈ ಪಾಪವಿಮೋಕ್ಷದ ಉಪಾಯವನ್ನು ಹೊಂದ ಬೇಕೆಂದೂ ಹೇಳಿ ಹೊರಟುಹೋದನು. ಅನಂತರ ರಾಕ್ಷಸನು ಬಹಳ ಚಿಂತಾಕುಲ

ನಾಗಿ ಪಾಪವಿಮೋಕ್ಷಕ್ಕೆ ಉಪಾಯವನ್ನು ಆಲೋಚಿಸುತ್ತಾ ಮನಬಂದಂತೆ ತಾನು ಮಾಡುತ್ತಿದ್ದ ಆಹಾರವ್ಯವಹಾರವನ್ನೆಲ್ಲಾ ಬಿಟ್ಟು ಪ್ರಾಣಧಾರಣಕ್ಕಾಗಿ ದಿವಸದ ಆರನೇಭಾಗದಲ್ಲಿ ಮಾತ್ರ ಸಿಕ್ಕಿದ ಆಹಾರದಿಂದ ಬದುಕಿಕೊಂಡು ಸಂಚರಿಸುತ್ತಿದ್ದನು. ಹೀಗೆ ಸಂಚರಿಸುತ್ತಿರುವಾಗ ಹಸಿವಿನಿಂದ ದಣಿದಿದ್ದ ಆ ರಾಕ್ಷಸನು ಗುರುವಿಗಾಗಿ ಫಲಗಳನ್ನು ಒಯ್ಯುತ್ತಿದ್ದ ಒಬ್ಬ ಬ್ರಾಹ್ಮಣ ಕುಮಾರನನ್ನು ನೋಡಿ ಅವನನ್ನು ಹಿಡಿದುಕೊಂಡನು. ಪ್ರಾಣಗಳಲ್ಲಿ ನಿರಾಶನಾದರೂ ಆ ಬ್ರಾಹ್ಮಣ ಕುಮಾರನು ಶಾಂತಿಯಿಂದ ನನ್ನನ್ನು ಏತಕ್ಕೆ ಹಿಡಿದುಕೊಂಡೆ ಎಂದು ರಾಕ್ಷಸನನ್ನು ಕೇಳಲು ರಾಕ್ಷಸನು ತನ್ನ ಆಹಾರಕ್ಕಾಗಿ ಹಿಡಿದಿರುವೆನೆಂದು ಉತ್ತರಕೊಟ್ಟನು. ಆಗ ಬ್ರಾಹ್ಮಣ ಕುಮಾರನು ನನ್ನಿಂದಲೇ ನಿನ್ನ ಆಹಾರವು ಪೂರ್ಣವಾಗಬೇಕಾಗಿದ್ದಲ್ಲಿ ಆಗಬಹುದು. ಗುರುವಿಗಾಗಿ ನಾನು ತಂದಿರುವ ಈ ಫಲಗಳನ್ನು ಅವನಿಗೆ ಅರ್ಪಿಸಿ ಇಲ್ಲಿಗೇ ಬರುವೆನು. ನೀನು ಇಲ್ಲಿಯೇ ನನ್ನನ್ನು ನಿರೀಕ್ಷಿಸುತ್ತಿರು ಎಂದು ಹೇಳಲು ರಾಕ್ಷಸನು ಅದಕ್ಕೆ ಒಪ್ಪಲಿಲ್ಲ. ಆದರೆ ನನ್ನ ಪಾಪಮೋಕ್ಷಕ್ಕೆ ತಕ್ಕ ಉಪಾಯವನ್ನು ನೀನು ಉಪದೇಶಿಸುವುದಾದರೆ ಅದೊಂದೇ ನಿನ್ನ ಬಿಡುಗಡೆಗೆ ದಾರಿ ಎಂದನು. ಆಗ ಬ್ರಾಹ್ಮಣ ಕುಮಾರನು ಅಂತಹ ಉಪಾಯೋಪದೇಶದಲ್ಲಿ ತನಗೆ ಸಾಮರ್ಥ್ಯವಿಲ್ಲದುದರಿಂದ ಚಿಂತಾಕುಲನಾಗಿ ಅಗ್ನಿದೇವನಲ್ಲಿ ಶರಣಾಗತನಾಗಿ ಪ್ರಾರ್ಥಿಸಿದನು. ಆ ಅಗ್ನಿಯ ದಯೆಯಿಂದ ಸರಸ್ವತಿಯು (ವಾಗಧಿದೇವತೆ) ಬ್ರಾಹ್ಮಣ ಪುತ್ರನನ್ನು ಸಂತೈಸಿ ಅವನ ನಾಲಗೆಯಲ್ಲಿ ಕುಳಿತಳು. ಆಗ ಬ್ರಾಹ್ಮಣನು ಈ ಸಾರಸ್ವತಸ್ತುತಿಯನ್ನು ಪಠನಮಾಡಿದನು. ಮಹಾವಿಷ್ಣುವಿನ ವೈಭವವನ್ನು ಕೊಂಡಾಡುವ ಈ ಸ್ತುತಿಯ ಮಾಹಾತ್ಮ್ಯದಿಂದ ಒಡನೆಯೇ ಆ ಬ್ರಾಹ್ಮಣ ಕುಮಾರನಿಗೆ ರಾಕ್ಷಸನಿಂದ ಬಿಡುಗಡೆಯೂ ಆಯಿತು. ಆಗ ಬ್ರಾಹ್ಮಣನು ಇದೇ ನಿನ್ನ ಪಾಪಮೋಕ್ಷಕ್ಕೆ ಉಪಾಯವೆಂದೂ ಈ ಸ್ತೋತ್ರವನ್ನು ಪಾಠಮಾಡುತ್ತಾ ನೀನು ವಿಷ್ಣುಭಕ್ತನಾಗಿದ್ದಲ್ಲಿ ನಿಷ್ಪಾಪನಾಗುವೆ ಎಂದು ಹೇಳಲು ರಾಕ್ಷಸನು ಆ ಮಾತಿನಂತೆ ಶಾಲಿಗ್ರಾಮವೆಂಬಕ್ಷೇತ್ರಕ್ಕೆ ಹೋಗಿ ಈ ಸ್ತುತಿಪಾಠದಿಂದ ವಿಷ್ಣುವನ್ನು ಆರಾಧಿಸಿ ಪಾಪಗಳಿಂದ ಬಿಡಲ್ಪಟ್ಟು ವಿಷ್ಣುಲೋಕವನ್ನು ಹೊಂದಿದನೆಂದು ಹೇಳಿ ಫಲಶ್ರುತಿಯೊಡನೆ ಉಪಾಖ್ಯಾನವನ್ನು ಉಪಸಂಹರಿಸಲಾಗಿದೆ.

॥ ಶ್ರೀಃ ॥

ಶ್ರೀವಾಮನಪುರಾಣಂ

ಸಪ್ತಾಶೀತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ನಮಸ್ತೇಽಸ್ತು ಜಗನ್ನಾಥ ದೇವದೇವ ನಮೋಽಸ್ತು ತೇ ।
ವಾಸುದೇವ ನಮಸ್ತೇಽಸ್ತು ಬಹುರೂಪ ನಮೋಽಸ್ತು ತೇ ॥ ೧ ॥

ಏಕಶೃಂಗ ನಮಸ್ತುಭ್ಯಂ ನಮಸ್ತುಭ್ಯಂ ವೃಷಾಕಪೇ ।
ಶ್ರೀನಿವಾಸ ನಮಸ್ತೇಽಸ್ತು ನಮಸ್ತೇ ಭೂತಭಾವನ ॥ ೨ ॥

ವಿಶ್ವಕ್ಸೇನ ನಮಸ್ತುಭ್ಯಂ ನಾರಾಯಣ ನಮೋಽಸ್ತು ತೇ ।
ವೃಷಧ್ವಜ ನಮಸ್ತೇಽಸ್ತು ಸತ್ಯಧ್ವಜ ನಮೋಽಸ್ತು ತೇ ॥ ೩ ॥

ಎಂಭತ್ತೇಳನೆಯ ಅಧ್ಯಾಯವು

೧-೨. ಪುಲಸ್ತ್ಯರು ಪ್ರಹ್ಲಾದನಿಂದ ಜಪಿಸಲ್ಪಟ್ಟ ಪಾಪಪ್ರಶಮನ ಸ್ತುತಿಯನ್ನು ಹೇಳುತ್ತಾರೆ. ಎಲೈ ಜಗನ್ನಾಥನೇ ನಿನಗೆ ನಮಸ್ಕಾರಗಳು. ದೇವತೆಗಳಿಗೆಲ್ಲರಿಗೂ ದೇವತೆಯಾಗಿರುವವನೇ ನಿನಗೆ ನಮಸ್ಕಾರಗಳು. ವಾಸುದೇವನೇ ಬಹುರೂಪನೇ ನಿನಗೆ ನಮಸ್ಕಾರಗಳು. ಉನ್ನತವಾದ ಪ್ರಧಾನವಸ್ತುವೇ ನಿನಗೆ ನಮಸ್ಕಾರಗಳು. (ಪುಣ್ಯಕ್ಕೆ ಪ್ರಕಾಶಕನಾಗಿರುವುದರಿಂದ) ವೃಷಾಕಪಿಯಾಗಿರುವ ನಿನಗೆ ನಮಸ್ಕಾರಗಳು. ಲಕ್ಷ್ಮೀದೇವಿಗೆ ನಿವಾಸಸ್ಥಾನನಾಗಿಯೂ ಸಕಲಪ್ರಾಣಿಗಳಿಗೆ ಕಾರಣನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

೩-೪. ಸರ್ವತೋಮುಖವಾದ ಬಲವುಳ್ಳವನಾಗಿಯೂ (ಪ್ರಾಪ್ಯನಾಗಿರುವುದರಿಂದ) ನಾರಾಯಣನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು. ಪುಣ್ಯಕ್ಕೆ ಪ್ರಕಾಶಕನಾಗಿಯೂ ಅಥವಾ ವೃಷಭಧ್ವಜನಾದ ಶಂಕರನಿಗೆ ಅಂತರ್ಯಾಮಿಯಾಗಿಯೂ

ಯಜ್ಞಧ್ವಜ ನಮಸ್ತುಭ್ಯಂ ಧರ್ಮಧ್ವಜ ನಮೋಽಸ್ತು ತೇ ।
ತಾಲಧ್ವಜ ನಮಸ್ತೇಽಸ್ತು ನಮಸ್ತೇ ಗರುಡಧ್ವಜ ॥ ೪ ॥

ವರೇಣ್ಯ ವಿಷ್ಣೋ ವೈಕುಂಠ ನಮಸ್ತೇ ಪುರುಷೋತ್ತಮ ।
ನಮೋ ಜಯಂತ ವಿಜಯ ಜಯಾನಂತಾಪರಾಜಿತ ॥ ೫ ॥

ಕೃತಾವರ್ತ ಮಹಾವರ್ತ ಮಹಾದೇವ ನಮೋಽಸ್ತು ತೇ ।
ಅನಾದ್ಯಾದ್ಯಂತಮಧ್ಯಾಂತ ನಮಸ್ತೇ ಪದ್ಮಜಪ್ರಿಯ ॥ ೬ ॥

ಪುರಂಜಯ ನಮಸ್ತುಭ್ಯಂ ಶತ್ರುಂಜಯ ನಮೋಽಸ್ತು ತೇ ।
ಧನಂಜಯ ನಮಸ್ತೇಽಸ್ತು ಶುಭಂಜಯ ನಮೋಽಸ್ತು ತೇ ॥ ೭ ॥

ಸತ್ಯಪ್ರಕಾಶನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು. ಯಜ್ಞಗಳಿಂದ ಹೊಂದಲು ಅರ್ಹನಾಗಿಯೂ ಧರ್ಮಗಳಿಗೆ ಪ್ರಕಾಶಕನಾಗಿಯೂ ಇರುವ ನಿನಗೆ ಅನೇಕ ವಂದನೆಗಳು. ತಾಲದಂತೆ ಉನ್ನತಧ್ವಜವುಳ್ಳ ಗರುಡವಾಹನನಾದ ನಿನಗೆ ಅನೇಕ ವಂದನೆಗಳು.

೫. ಸರ್ವಪ್ರಾಪ್ಯನಾಗಿಯೂ ವ್ಯಾಪಕನಾಗಿಯೂ ವೈಕುಂಠವಾಸಿಯಾಗಿಯೂ ಇರುವ ಪುರೋಷೋತ್ತಮನೇ ನಿನಗೆ ನಮಸ್ಕಾರ. ಜಯಂತಾಂತರ್ಯಾಮಿಯಾಗಿಯೂ ವಿಜಯಾಂತರ್ಯಾಮಿಯಾಗಿಯೂ ವಿಜಯಸ್ವರೂಪನಾಗಿಯೂ ಮತ್ತೊಬ್ಬರಿಂದ ಜಯಿಸಲ್ಪಡದೆಯೂ ಇರುವ ಅನಂತರೂಪಿಯಾದ ನಿನಗೆ ನಮಸ್ಕಾರಗಳು.

೬-೭. ಅವಾಂತರ ಪ್ರಳಯಗಳಿಗೂ ಮಹಾಪ್ರಳಯಕ್ಕೂ ಕಾರಣನಾದ ನಿನಗೆ ಅನೇಕ ನಮಸ್ಕಾರಗಳು, ಎಲೈ ಆದಿಮಧ್ಯಾಂತರಹಿತನಾದ ಪರಮಾತ್ಮನೇ, ಚತುರ್ಮುಖನಿಗೂ ಪ್ರಿಯನಾದ ನಿನಗೆ ಅನಂತ ನಮಸ್ಕಾರಗಳು, ಶತ್ರುಪುರಗಳನ್ನೂ ಶತ್ರುಗಳನ್ನೂ ಜಯಿಸಿ ಧನಂಜಯರೂಪನಾಗಿಯೂ ನಿಂತು, ಅಥವಾ ಆಶೆ ಇಲ್ಲದೆ ಧನವನ್ನೂ ಜಯಿಸಿ, ಶುಭವನ್ನೇ ಸಾಧಿಸಿರುವ ನಿನಗೆ ಅನಂತ ನಮಸ್ಕಾರಗಳು.

ಸೃಷ್ಟಿಗರ್ಭ ನಮಸ್ತುಭ್ಯಂ ಶುಚಿಶ್ರವಃ ಪೃಥುಶ್ರವಃ ।
ನಮೋ ಹಿರಣ್ಯಗರ್ಭಾಯ ಪದ್ಮಗರ್ಭಾಯ ತೇ ನಮಃ ॥ ೮ ॥

ನಮಃ ಕಮಲನೇತ್ರಾಯ ಕಾಲನೇತ್ರಾಯ ವೈ ನಮಃ ।
ಕಾಲನಾಭ ನಮಸ್ತುಭ್ಯಂ ಮಹಾನಾಭ ನಮೋಽಸ್ತು ತೇ ॥ ೯ ॥

ವೃಷ್ಣಿಮೂಲಮಹಾಮೂಲ ಮೂಲಾವಾಸ ನಮೋಽಸ್ತು ತೇ ॥
ಧರ್ಮಾವಾಸ ಜಲಾವಾಸ ಶ್ರೀನಿವಾಸ ನಮೋಽಸ್ತು ತೇ ॥ ೧೦ ॥

ಧರ್ಮಾಧ್ಯಕ್ಷ ಪ್ರಜಾಧ್ಯಕ್ಷ ಲೋಕಾಧ್ಯಕ್ಷ ನಮೋಽಸ್ತು ತೇ ।
ಸೇನಾಧ್ಯಕ್ಷ ನಮಸ್ತುಭ್ಯಂ ಕಾಲಾಧ್ಯಕ್ಷ ನಮೋಽಸ್ತು ತೇ ॥ ೧೧ ॥

೮-೯. ಸೃಷ್ಟಿಸುವ ಜಗತ್ತನ್ನೇ ಗರ್ಭದಲ್ಲಿ ಧರಿಸಿ ಶುಚಿಯಾದ ಕೀರ್ತಿಯುಳ್ಳವನಾಗಿಯೂ, ಅಪರಿಮಿತವಾದ ಶ್ರವಣೇಂದ್ರಿಯುಳ್ಳವನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು, ಹಿರಣ್ಯಗರ್ಭಮೂರ್ತಿಯಾಗಿಯೂ, ಬ್ರಹ್ಮನ ಉತ್ಪತ್ತಿ ಸ್ಥಾನವಾದ ಪದ್ಮವನ್ನು ಗರ್ಭದಲ್ಲಿ ಧರಿಸಿಯೂ ಇರುವ ನಿನಗೆ ಅನೇಕ ವಂದನೆಗಳು. ಕಮಲದಂತೆ ಸುಂದರವಾದ ನೇತ್ರಗಳುಳ್ಳವನಾಗಿದ್ದರೂ ಧರ್ಮಾಧರ್ಮದರ್ಶಿಯಾದ ಯಮನನ್ನೇ ನೇತ್ರವಾಗಿ ಹೊಂದಿರುವ ನಿನಗೆ ನಮಸ್ಕಾರಗಳು. ಮೂರು ವಿಧವಾದ ಕಾಲವನ್ನೇ ನಾಭಿರೂಪದಲ್ಲಿ ಧರಿಸಿ ಜಗಚ್ಚಕ್ರಸಂಚಾಲಕನಾಗಿಯೂ ಚತುರ್ಮುಖನಿಗೂ ಕಾರಣವಾದ ಯಾವ ಮಹಾಪದ್ಮವೋ ಅದಕ್ಕೂ ಆಶ್ರಯವಾದ ಮಹಾನಾಭಿಯುಳ್ಳವನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

೧೦. ವೃಷ್ಣಿವಂಶಕ್ಕೆ ಪ್ರವರ್ತಕನಾಗಿಯೂ, ವಿಶಾಲವಾದ ಆಶ್ರಯನಾಗಿಯೂ ಜಗತ್ತಿಗೇ ಆವಾಸಸ್ಥಾನನಾಗಿಯೂ ಇರುವ ನಿನಗೆ ಅನೇಕ ನಮಸ್ಕಾರಗಳು, ಧರ್ಮಗಳಿಗೆ ಆವಾಸದಾಯಿಯಾಗಿಯೂ, ಜಲವೇ ಮೊದಲಾದ ಪಂಚಭೂತಗಳಿಗೆ ಆವಾಸಸ್ಥಾನವಾಗಿಯೂ, ಮಹಾಲಕ್ಷ್ಮಿಗೆ ಆಶ್ರಯನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

೧೧-೧೨. ಎಲ್ಲಾ ಧರ್ಮಗಳಿಗೂ ಅಥವಾ ಯಮನಿಗೂ ನಿಯಾಮಕನಾಗಿ ಪ್ರಜೆಗಳಿಗೆ ಅಧಿಪತಿಯಾಗಿ ಲೋಕಾಧಿಪತಿಯಾಗಿಯೂ ಇರುವ ನಿನಗೆ ನಮಸ್ಕಾರಗಳು, ಸೇನಾಧಿಪತಿಯಾಗಿಯೂ ಕಾಲಗಳಿಗೂ ನಿಯಾಮಕನಾಗಿಯೂ ಇರುವ ನಿನಗೆ ಅನೇಕ

ಗದಾಧರ ಶ್ರುತಿಧರ ಚಕ್ರಧಾರಿನ್ ಶ್ರಿಯೋ ಧರ ।
ವನಮಾಲಾಧರ ಹರೇ ನಮಸ್ತೇ ಧರಣೀಧರ ॥ ೧೨ ॥

ಆರ್ಷ್ಟಿಷೇಣ ಮಹಾಸೇನ ನಮಸ್ತೇಽಸ್ತು ಪುರುಷ್ಟುತ ।
ಬಹುಕಲ್ಪ ಮಹಾಕಲ್ಪ ನಮಸ್ತೇ ಕಲ್ಪನಾಮುಖ ॥ ೧೩ ॥

ಸರ್ವಾತ್ಮನ್ಸರ್ವಗ ವಿಭೋ ವಿರಿಂಚೇ ಶ್ವೇತ ಕೇಶವ ।
ನಮೋ ನೀಲ ಮಹಾನೀಲ ಅನಿರುದ್ಧ ನಮೋಽಸ್ತು ತೇ ॥ ೧೪ ॥

ದ್ವಾದಶಾತ್ಮಕ ಕಾಲಾತ್ಮನ್ ಸಾಮಾತ್ಮನ್ಪರಮಾತ್ಮಕ ।
ವ್ಯೋಮಾರ್ಕಾತ್ಮಕ ಸುಬ್ರಹ್ಮನ್ ಸೂಕ್ಷ್ಮಾತ್ಮಕ ನಮೋಽಸ್ತು ತೇ ॥ ೧೫ ॥

ನಮಸ್ಕಾರಗಳು, ಗದಾಯುಧಧಾರಿಯಾಗಿಯೂ (ಪ್ರಳಯದಲ್ಲಿಯೂ ಸಹ) ವೇದಗಳನ್ನು ನಿತ್ಯಜ್ಞಾನ ರೂಪದಲ್ಲಿ ಧರಿಸಿ ರಕ್ಷಕನಾಗಿಯೂ, ಚಕ್ರಾಯುಧಧಾರಿಯಾಗಿಯೂ, ಲಕ್ಷ್ಮೀಧರನಾಗಿಯೂ ವನಮಾಲಾಧಾರಿಯಾಗಿಯೂ (ವರಹಾವತಾರದಲ್ಲಿ) ಭೂಮಿಧರನಾಗಿಯೂ ಆದ ನಿನಗೆ ಅನಂತ ನಮಸ್ಕಾರಗಳು.

೧೩-೧೪. ಆರ್ಷ್ಟಿಷೇಣನೇ ಮಹಾಸೇನನೇ ಅನೇಕರಿಂದ ಅಥವಾ ಅನೇಕ ಪ್ರಕಾರವಾಗಿ ಸ್ತೋತ್ರಮಾಡಲ್ಪಟ್ಟವನೇ ಬಹುರೂಪನೇ, ಮಹಾಕಲ್ಪಕ್ಕೂ ಪ್ರವರ್ತಕನೇ ಎಲ್ಲಾ ಭೇದಗಳನ್ನೂ ತೋರಿಸುತ್ತಿರುವವನೇ ಸರ್ವಾಂತರ್ಯಾಮಿಯಾಗಿರುವವನೇ ಅದುದರಿಂದಲೇ ಸರ್ವವ್ಯಾಪಕನೇ ಪ್ರಭುವೇ, ಬ್ರಹ್ಮನಿಗೂ ಅಂತರ್ಯಾಮಿಯಾಗಿ ಸೃಷ್ಟಿಯನ್ನು ನಡೆಸುತ್ತಿರುವವನೇ (ಸತ್ವಗುಣಪ್ರಾಚುರ್ಯದಿಂದ) ಧವಲಮೂರ್ತಿಯೇ ಅಥವಾ ಶ್ವೇತದ್ವೀಪವಾಸಿಯೇ, ಕೇಶವನೇ, ನೀಲಮೂರ್ತಿಯಾಗಿಯೂ *ಮಹಾನೀಲದಂತೆ ರಮಣೀಯನಾಗಿಯೂ, ಅನಿರುದ್ಧಮೂರ್ತಿಯಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

೧೫. ಹನ್ನೆರಡು ಆದಿತ್ಯರರೂಪನಾಗಿಯೂ ಅಥವಾ ದ್ವಾದಶಮಾಸರೂಪದಿಂದ ವತ್ಸರಾತ್ಮಕನಾಗಿಯೂ, ಮಹಾಕಾಲರೂಪಿಯಾಗಿಯೂ, ಸಾಮವೇದ ಸ್ವರೂಪನಾಗಿಯೂ ಜೀವಾತ್ಮರಿಗೂ ನಿಯಾಮಕನಾಗಿ ಪರಮಾತ್ಮ ಸ್ವರೂಪನಾಗಿಯೂ, ಆಕಾಶ ಮತ್ತು ಸೂರ್ಯ ಇವರಲ್ಲಿಯೂ ಅಂತರ್ಯಾಮಿಯಾಗಿ ನಿಂತು ಪ್ರೇರಕನಾಗಿಯೂ, ಬ್ರಹ್ಮರೂಪಿಯಾಗಿಯೂ, ಸೂಕ್ಷ್ಮರೂಪನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು

---

* (ಕ್ಷೀರಮಧ್ಯೇ ಕ್ಷಿಪೇನ್ನೀಲಂ ಕ್ಷೀರಂ ಚೇನ್ನೀಲತಾಂ ವ್ರಜೇತ್ ತನ್ಮಹಾನೀಲಸಜ್ಞಂ ಸ್ಯಾತ್ ಎಂದು ರತ್ನಶಾಸ್ತ್ರದಲ್ಲಿ ಹೇಳುವ ಮಹಾನೀಲವೆಂಬ ರತ್ನದ ಲಕ್ಷಣ.)

ಹರಿಕೇಶ ಮಹಾಕೇಶ ಗುಡಾಕೇಶ ನಮೋಽಸ್ತು ತೇ ।
ಮುಂಜಕೇಶ ಹೃಷೀಕೇಶ ಸರ್ವನಾಥ ನಮೋಽಸ್ತು ತೇ ॥ ೧೬ ॥

ಸೂಕ್ಷ್ಮ ಸ್ಥೂಲ ಮಹಾಸ್ಥೂಲ ಮಹಾಸೂಕ್ಷ್ಮ ಭಯಂಕರ ।
ಶ್ವೇತ ಪೀತಾಂಬರಧರಃ ನೀಲವಾಸೋ ನಮೋಽಸ್ತು ತೇ ॥ ೧೭ ॥

ಕುಶೇಶಯ ನಮಸ್ತೇಽಸ್ತು ಪದ್ಮೇಶಯ ಜಲೇಶಯ ।
ಗೋವಿಂದ ಪ್ರೀತಿಕರ್ತಶ್ಚ ಹಂಸ ಪೀತಾಂಬರಪ್ರಿಯ ॥ ೧೮ ॥

ಅಧೋಕ್ಷಜ ನಮಸ್ತೇಽಸ್ತು ಶಾರ್ಙ್ಗಧ್ವಜ ಜನಾರ್ದನ ।
ವಾಮನಾಯ ನಮಸ್ತುಭ್ಯಂ ನಮಸ್ತೇ ಮಧುಸೂದನ ॥ ೧೯ ॥

೧೬-೧೭. ಹರಿತವರ್ಣದ ಕೇಶಗಳುಳ್ಳ ಮಹಾಕೇಶನಾದ ರುದ್ರನಿಗೂ ಅಂತರ್ಯಾಮಿಯಾಗಿಯೂ ನಿದ್ರಾಲಸ್ಯಗನ್ನು ಜಯಿಸಿದವನಾಗಿಯೂ ಮುಂಜದಂತೆ ಸೂಕ್ಷ್ಮದೀರ್ಘಮೃದುಕೇಶನಾಗಿಯೂ, ಇಂದ್ರಿಯಗಳಿಗೆ ನಿಯಾಮಕನಾಗಿಯೂ ಇರುವ ಸರ್ವರಕ್ಷಕನಾದ ನಿನಗೆ ಅನಂತ ನಮಸ್ಕಾರಗಳು. ಸೂಕ್ಷ್ಮರೂಪನಾಗಿಯೂ ಸ್ಥೂಲರೂಪನಾಗಿಯೂ, ಮಹಾಸೂಕ್ಷ್ಮನಾಗಿಯೂ, ಮಹಾಸ್ಥೂಲನಾಗಿಯೂ, ಭಯಕಾರಕನಾಗಿಯೂ, ಹೊಂಬಣ್ಣದ ವಸ್ತ್ರವನ್ನು ಧರಿಸಿಯೂ, ಬಲರಾಮನ ರೂಪದಲ್ಲಿಯೂ ನಿಂತ ನಿನಗೆ ಅನಂತ ನಮಸ್ಕಾರಗಳು.

೧೮-೧೯. ವ್ರತನಿಯಮದಿಂದ ದರ್ಭಶಾಯಿಯಾಗಿಯೂ, ಸೌಕುಮಾರ್ಯದಿಂದ ಪದ್ಮಶಯನನಾಗಿಯೂ, ಯೋಗನಿದ್ರೆಯಿಂದ ಸಮುದ್ರಜಲಶಾಯಿಯಾಗಿಯೂ, ಇರುವ ಗೋವಿಂದನೇ, ಎಲ್ಲರನ್ನೂ ಪ್ರೀತಿಸುವವನೇ, ಹಂಸಾವತಾರಶಾಲಿಯೇ. ಪೀತಾಂಬರ ಪ್ರಿಯನೇ. ಅಧೋಕ್ಷಜನೇ. ಶಾರ್ಙ್ಗಧನುರ್ಧರನೇ, ಜನಾರ್ದನನೇ, ಮಧುದೈತ್ಯನಾಶಕನೇ ವಾಮನಮೂರ್ತಿಯಾದ ನಿನಗೆ ಅನೇಕ ನಮಸ್ಕಾರಗಳು.

ಸಹಸ್ರ ಶೀರ್ಷಾಯ ನಮೋ ಬ್ರಹ್ಮಶೀರ್ಷಾಯ ವೈ ನಮಃ ।
ನಮಃ ಸಹಸ್ರನೇತ್ರಾಯ ಸೋಮಸೂರ್ಯಾನಲೇಕ್ಷಣ ॥ ೨೦ ॥

ನಮಶ್ಚಾಥರ್ವಶಿರಸೇ ಮಹಾಶೀರ್ಷಾಯ ತೇ ನಮಃ ।
ನಮಸ್ತೇ ಧರ್ಮನೇತ್ರಾಯ ಮಹಾನೇತ್ರಾಯ ತೇ ನಮಃ ॥ ೨೧ ॥

ನಮಃ ಸಹಸ್ರಪಾದಾಯ ಸಹಸ್ರಭುಜಮನ್ಯವೇ ।
ನಮೋ ಯಜ್ಞವರಾಹಾಯ ಮಹಾರೂಪಾಯ ತೇ ನಮಃ ॥ ೨೨ ॥

ನಮಸ್ತೇ ವಿಶ್ವದೇವಾಯ ವಿಶ್ವಾತ್ಮನ್ವಿಶ್ವಸಂಭವ ।
ವಿಶ್ವರೂಪ ನಮಸ್ತೇಽಸ್ತು ತ್ವತ್ತೋ ವಿಶ್ವಮಭೂದಿದಂ ॥ ೨೩ ॥

---

೨೦. ಸಹಸ್ರ ಶಿರಸ್ಸುಳ್ಳವನಾಗಿಯೂ, ಬೃಹದಾಕಾರವುಳ್ಳ ವಸ್ತುಗಳಿಗೆಲ್ಲ ಮುಖ್ಯನಾಗಿಯೂ, ಅಥವಾ ಬೃಹದಾಕಾರವುಳ್ಳ ಪ್ರಕೃತಿಯನ್ನೇ ಪುರಸ್ಕರಿಸುವವನಾಗಿಯೂ, ಸಹಸ್ರನೇತ್ರನಾಗಿಯೂ, ಚಂದ್ರ, ಸೂರ್ಯ, ಅಗ್ನಿಗಳೆಂಬ ನೇತ್ರಗಳುಳ್ಳವನಾಗಿಯೂ, ಇರುವ ನಿನಗೆ ಅನೇಕ ನಮಸ್ಕಾರಗಳು.

೨೧-೨೨. ಅಥರ್ವಶಿರವೆಂಬ ವೇದಪ್ರತಿಪಾದ್ಯನಾಗಿ ಉನ್ನತ ಮಹಿಮನಾಗಿಯೂ ಧರ್ಮವೆಂಬ ನಿಯಾಮಕವಸ್ತುವಿನಿಂದ ಮಹಾನೇತ್ರವನ್ನು ಹೊಂದಿರುವವನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು. ಸಹಸ್ರಪಾದಗಳುಳ್ಳವನಾಗಿ ಬಹುಮುಖವಾದ ಭುಜಪ್ರರಾಕ್ರಮುವನ್ನು ಹೊಂದಿ ಯಜ್ಞವರಾಹರೂಪಿಯೂ ಆದ ಮಹಾರೂಪನಾದ ನಿನಗೆ ಅನೇಕ ನಮಸ್ಕಾರಗಳು.

೨೩-೨೪. ಎಲ್ಲರಿಗೂ ಪೂಜ್ಯನಾದ ದೇವತೆಯಾಗಿ ವಿಶ್ವಾತ್ಮಕನಾಗಿಯೂ ವಿಶ್ವೋತ್ಪತ್ತಿ ಕಾರಣನಾಗಿಯೂ ವಿಶ್ವರೂಪಿಯಾಗಿಯೂ ಇರುವ ನಿನಗೆ ಅನೇಕ ನಮಸ್ಕಾರಗಳು. ವಿಶ್ವವೆಲ್ಲವೂ ಪೂಜ್ಯನಾದ ನಿನ್ನಿಂದಲೇ ಉದ್ಭವಿಸಿದುದು. ಎಲ್ಲೈ ಜಗತ್ಕಾರಣನೇ ಮೂಲಕಾರಣನಾದ ನೀನೇ ಹೂವುಗಳಿಂದ ಪೂಜಿಸಲ್ಪಡುವ ದೊಡ್ಡ

ನ್ಯಗ್ರೋಧಸ್ತ್ವಂ ಮಹಾಶಾಖಸ್ತ್ವಂ ಮೂಲಕುಸುಮಾರ್ಚಿತಃ ।
ಸ್ಕಂಧಪತ್ರಾಂಕುರಲತಾಪಲ್ಲವಾಯ ನಮೋಽಸ್ತು ತೇ ॥ ೨೪ ॥

ಮೂಲಂ ತೇ ಬ್ರಾಹ್ಮಣಾಃ ಸ್ಕಂಧಾಃ ಕ್ಷತ್ರಿಯಾ ಭವತಃ ಪ್ರಭೋ ।
ವೈಶ್ಯಾಃ ಶಾಖಾಸ್ತ್ವಚಃ ಶೂದ್ರಾ ತೇ ನಮೋಽಸ್ತು ವನಸ್ಪತೇ ॥ ೨೫ ॥

ಬ್ರಾಹ್ಮಣಾಃ ಸಾಗ್ನಯೋ ವಕ್ತ್ರಾತ್ಸಾಯುಧಾ ಬಾಹುತೋ ನೃಪಾಃ ।
ಪಾರ್ಶ್ವಾದ್ವಿಶಶ್ಚೋರುಯುಗಾಜ್ಜಾತಾಃ ಶೂದ್ರಾಶ್ಚ ಪಾದತಃ ॥ ೨೬ ॥

ನೇತ್ರಾದ್ಭಾನುರಭೂತ್ತ್ವತ್ತಃ ಪದ್ಭ್ಯಾಂ ಭೂಃ ಶ್ರೋತ್ರಯೋರ್ದಿಶಃ ।
ನಾಭ್ಯಾಶ್ಚಾಭೂದಂತರಿಕ್ಷಂ ಶಶಾಂಕೋ ಮನಸಸ್ತವ ॥ ೨೭ ॥

ಪ್ರಾಣಾದ್ವಾಯುಃ ಸಮಭವತ್ಕಾಮಾದ್ಬ್ರಹ್ಮಾ ಪಿತಾಮಹಃ ।
ಕ್ರೋಧಾತ್ತ್ರಿನಯನೋ ರುದ್ರಃ ಶೀರ್ಷ್ಣೋ ದ್ಯೌಃ ಸಮವರ್ತತ ॥ ೨೮ ॥

ಆಲದಮರದಂತಿರುವೆ. ಅದರ ರೆಂಬೆಗಳೂ ಎಲೆಗಳೂ ಮೊಗ್ಗುಗಳೂ ಬಿಳಲುಗಳೂ ಚಿಗರುಗಳೂ ಸಹ ನೀನೇ ಆಗಿರುವೆ. ನಿನಗೆ ಅನೇಕ ವಂದನೆಗಳು. (ಗೀತೆಯಲ್ಲಿ ಹೇಳಿರುವ ಅಶ್ವತ್ಥಮರದ ಸ್ಥಾನದಲ್ಲಿ ಈ ಪುರಾಣಕಾರರು ಹಿಂದೆಯೂ ಇಲ್ಲಿಯೂ ಆಲದಮರವನ್ನೇ ಹೇಳಿರುವರು.)

೨೫-೨೬. ನಿನ್ನ ಮೂಲಸ್ಥಾನವೇ ಬ್ರಾಹ್ಮಣರು, ಕೊಂಬೆಗಳ ಬುಡವೇ ಕ್ಷತ್ರಿಯರು, ಕೊಂಬೆಗಳೇ ವೈಶ್ಯರು, ತೊಗಟೆಯೇ ಶೂದ್ರರು. ಇಂತಹ ವನಸ್ಪತಿ (ವೃಕ್ಷ) ರೂಪನಾದ ನಿನಗೆ ಅನಂತ ವಂದನೆಗಳು. ಅಗ್ನಿಯೊಡಗೂಡಿದ ಬ್ರಾಹ್ಮಣರು ನಿನ್ನ ಮುಖದಿಂದಲೂ, ಆಯುಧಧಾರಿಗಳಾದ ರಾಜರುಗಳು (ಕ್ಷತ್ರಿಯರು) ನಿನ್ನ ಬಾಹುಗಳಿಂದಲೂ ಪಾರ್ಶ್ವದಿಂದಲೂ ಊರು (ತೊಡೆ) ಗಳಿಂದಲೂ ವೈಶ್ಯರೂ, ಪಾದಗಳಿಂದ ಶೂದ್ರರೂ ಉದಯಿಸಿದರು.

೨೭-೨೮. ನಿನ್ನ ಕಣ್ಣಿನಿಂದ ಸೂರ್ಯನೂ, ಪಾದಗಳಿಂದ ಭೂಮಿಯೂ, ಕಿವಿಗಳಿಂದ ದಿಕ್ಕುಗಳೂ, ನಾಭಿಪ್ರದೇಶದಿಂದ ಅಂತರಿಕ್ಷವೂ, ಮನಸ್ಸಿನಿಂದ ಚಂದ್ರನೂ, ಪ್ರಾಣದಿಂದ ವಾಯುವೂ, ಕಾಮದಿಂದ ಪಿತಾಮಹನಾದ ಬ್ರಹ್ಮನೂ, ಕ್ರೋಧದಿಂದ ತ್ರಿನೇತ್ರನಾದ ರುದ್ರನೂ, ತಲೆಯಿಂದ ದ್ಯುಲೋಕವೂ ಉಂಟಾಯಿತು.

ಇಂದ್ರಾಗ್ನೀ ವದನಾಜ್ಜಾತೌ ಪಶವೋ ಮಲಸಂಭವಾಃ ।
ಓಷಧ್ಯೋ ರೋಮಸಂಭೂತಾ ವಿರಜಾಸ್ತ್ವಂ ನಮೋಽಸ್ತು ತೇ ॥ ೨೯ ॥

ಪುಷ್ಪಹಾಸ ನಮಸ್ತೇಽಸ್ತು ಮಹಾಹಾಸ ನಮೋಽಸ್ತು ತೇ ।
ಓಂಕಾರಸ್ತ್ವಂವಷಟ್ಕಾರೋ ವೌಷಟ್ತ್ವಂ ಚ ಸುಧಾ ಸ್ವಧಾ ॥ ೩೦ ॥

---

೨೯. ಇಂದ್ರಾಗ್ನಿಗಳು ನಿನ್ನ ಮುಖದಿಂದ ಉದಯಿಸಿದವರು. ಪಶುಗಳೆಲ್ಲವೂ ನಿನ್ನ ಮಲದಿಂದ ಉಂಟಾದುವು. ಓಷಧಿವಿಶೇಷಗಳೆಲ್ಲವೂ ನಿನ್ನ ರೋಮದಿಂದ ಉದಯಿಸಿದುವು. ಇವೆಲ್ಲಕ್ಕೂ ಉತ್ಪಾದಕನಾಗಿದ್ದರೂ ನೀನು ಮಾತ್ರ ಪಾಪಲೇಪ ವಿಲ್ಲದ ಶುದ್ಧಮೂರ್ತಿಯಾಗಿರುವೆ ನಿನಗೆ ಅನಂತ ನಮಸ್ಕಾರಗಳು.

೩೦. ಸತ್ವಗುಣದಿಂದ ಸುಕುಮಾರವಾದ ಮಂದಹಾಸವುಳ್ಳವನೇ, ಪ್ರಳಯ ಕಾಲದಲ್ಲಿ ಅಟ್ಟಹಾಸವುಳ್ಳವನೇ, ನೀನೇ ಓಂಕಾರರೂಪನಾಗಿರುವೆ, ನೀನೇ ವಷಟ್ ಕಾರ, ವೌಷಟ್, ಸ್ವಧಾ. ಸುಧಾ ಕಾರಗಳಾಗಿಯೂ ಇರುವೆ, (ಓಂಕಾರವು ಪರಬ್ರಹ್ಮ ವಾಚಕವೆಂದು "ತಸ್ಯ ವಾಚಕಃ ಪ್ರಣವಃ" ಎಂಬ ಯೋಗಸೂತ್ರವು ಬೋಧಿಸುತ್ತದೆ. ಚೇತನಾಚೇತನ ಸಂಘಾತರೂಪವಾದ ಪರಬ್ರಹ್ಮನಿಗೂ ಪ್ರಣವಕ್ಕೂ ಸಾಮ್ಯವಿರುವದ್ದ ರಿಂದಲೂ, ವಾಚ್ಯವಾದ ಪರಬ್ರಹ್ಮಕ್ಕೂ ವಾಚಕವಾದ ಪ್ರಣವಕ್ಕೂ ಅಭೇದ ಕಲ್ಪನ ದಿಂದಲೂ ಓಂಕಾರವೇ ಬ್ರಹ್ಮರೂಪವೆಂದು ಮಂತ್ರಶಾಸ್ತ್ರವು ಪ್ರತಿಪಾದಿಸುತ್ತದೆ. ಇಂತಹ ಓಂಕಾರದಲ್ಲಿ ಬ್ರಹ್ಮಬುದ್ಧಿಯಿಂದ ಮಾಡಬಹುದಾದ ಕೆಲವು ಉಪಾಸನೆಗಳೂ ವೇದಾಂತ ಶಾಸ್ತ್ರದಲ್ಲಿ ಹೇಳಲ್ಪಟ್ಟಿವೆ.) ಶ್ರೌಷಟ್, ವೌಷಟ್ ಇತ್ಯಾದಿ ಮಂತ್ರಗಳು ಯಜ್ಞದಲ್ಲಿ ದೇವತೆಯನ್ನುದ್ದೇಶಿಸಿ ಹವಿಸ್ಸನ್ನು ಅರ್ಪಿಸುವಾಗ ಇದು ದೇವತೆಗೋಸ್ಕರ ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಡುತ್ತವೆ. ಸ್ವಧಾ ಎಂಬುದು ಪಿತೃದೇವತೆಯನ್ನುದ್ದೇಶಿಸಿ ದ್ರವ್ಯಪ್ರದಾನಮಾಡುವ ಮಂತ್ರ. ಯಜ್ಞದಲ್ಲಿ ಅಗ್ನಿಯೇ ಮೊದಲಾದ ದೇವತೆಗಳನ್ನು ಮುಂದೆ ನಿಲ್ಲಿಸಿ ಅವರ ಮೂಲಕ ಸರ್ವೇಶ್ವರನೇ ಸಂತೋಷಪಡುತ್ತಾನೆ. ಹಾಗೆಯೇ ಶ್ರಾದ್ಧವೇ ಮೊದಲಾದ ಪಿತೃಕರ್ಮಗಳಲ್ಲಿ ಬ್ರಾಹ್ಮಣ ತೃಪ್ತಿಯನ್ನು ದ್ವಾರವನ್ನಾಗಿ ಏರ್ಪಡಿಸಿ ಪಿತೃದೇವತಾಂತರ್ಯಾಮಿಯಾಗಿ ಸಂತೋಷಪಡುವವನೂ ಅವನೇ, ಆದುದರಿಂದ ಹವ್ಯಕವ್ಯಭುಕ್ ಎಂದು ಶಾಸ್ತ್ರದಲ್ಲಿ ಭಗವಂತನನ್ನು ಬೋಧಿಸುವ ಪದ್ಧತಿಯೂ ಇದೆ. ಈ ದೃಷ್ಟಿಯಿಂದ ಸರ್ವೇಶ್ವರನನ್ನುದ್ದೇಶಿಸಿ ಯಜ್ಞಯಾಗಾದಿ ಗಳಲ್ಲಿ ಉಪಯೋಗಿಸುವ ಈ ಮಂತ್ರಗಳೆಲ್ಲವೂ ಅವನ ಸ್ವರೂಪವೇ ಆಗಿವೆ, ಎಂದು ತಾತ್ಪರ್ಯ.)

ಸ್ವಾಹಾಕಾರ ನಮಸ್ತುಭ್ಯಂ ಹಂತಕಾರ ನಮೋಽಸ್ತು ತೇ ।
ಸರ್ವಾಕಾರ ನಿರಾಕಾರ ವೇದಾಕಾರ ನಮೋಽಸ್ತು ತೇ ॥ ೩೧ ॥

ತ್ವಂ ಹಿ ವೇದಮಯೋ ದೇವಃ ಸರ್ವದೇವಮಯಸ್ತಥಾ ।
ಸರ್ವತೀರ್ಥಮಯಶ್ಚೈವ ಸರ್ವಯಜ್ಞಮಯೋ ರಸಃ ॥ ೩೨ ॥

ನಮಸ್ತೇ ಯಜ್ಞಪುರುಷ ಯಜ್ಞಭಾಗಭುಜೇ ನಮಃ ।
ನಮಃ ಸಹಸ್ರಧಾರಾಯ ಶತಧಾರಾಯ ತೇ ನಮಃ ॥ ೩೩ ॥

ಭೂರ್ಭುವಃ ಸ್ವಃ ಸ್ವರೂಪಾಯ ಗೋದಾಯಾಮೃತದಾಯಿನೇ ।
ಸುವರ್ಣಬ್ರಹ್ಮದಾತ್ರೇ ಚ ಸರ್ವಧಾತ್ರೇ ಚ ತೇ ನಮಃ ॥ ೩೪ ॥

---

೩೧. ಸ್ವಾಹಾಕಾರನಾಗಿಯೂ ಹಂತಕಾರನಾಗಿಯೂ, ಸರ್ವಾಕಾರನಾಗಿಯೂ ನಿರಾಕಾರರೂಪನಾಗಿಯೂ (ಇಲ್ಲಿ ಪ್ರಾಕೃತವಾದ ಕರ್ಮಮೂಲವಾಗಿ ಬಂದ ದೇವ ಮನುಷ್ಯಾದ್ಯಾಕಾರವಿಲ್ಲದವನೆಂದು ತಾತ್ಪರ್ಯ. ಅಪ್ರಾಕೃತವಾದ ದಿವ್ಯಮಂಗಳ ವಿಗ್ರಹ ವನ್ನು ಭಗವಚ್ಛಾಸ್ತ್ರದಲ್ಲಿ ನಿರೂಪಿಸಲಾಗಿರುವುದರಿಂದ ಸ್ವೇಚ್ಛಾಸಿದ್ಧಗಳಾದ ಅನೇಕ ಆಕಾರಗಳು ಈ ನಿಷೇಧಕ್ಕೆ ವಿಷಯಗಳಲ್ಲ) ಸಕಲ ವೇದಮಯನೂ ಆಗಿರುವ ನಿನಗೆ ಅನಂತನಮಸ್ಕಾರಗಳು.

೩೨-೩೩. ಪ್ರಭುವೇ ನೀನು ಸರ್ವವೇದಮಯನೂ ಸರ್ವದೇವಮಯನೂ ಸರ್ವತೀರ್ಥಸ್ವರೂಪನೂ ಸರ್ವಯಜ್ಞಮೂರ್ತಿಯೂ ಭೋಗ್ಯನೂ ಆಗಿರುವೆ. ಯಜ್ಞಪುರುಷನಾಗಿಯೂ ಯಜ್ಞಭಾಗಭೋಜಿಯಾಗಿಯೂ ಸಹಸ್ರಧಾರೆಗಳಿಂದಲೂ ಅನೇಕ ಧಾರೆಗಳಿಂದಲೂ ಆನಂದವನ್ನು ಬೀರುವ ಸ್ವಾದ್ಯವಸ್ತುವಾಗಿರುವೆ. ನಿನಗೆ ಅನಂತ ನಮಸ್ಕಾರಗಳು.

೩೪. ಭೂಲೋಕ ಭುವರ್ಲೋಕ ಸುವರ್ಲೋಕ ರೂಪನಾಗಿಯೂ ವಾಕ್ಪ್ರದ ನಾಗಿಯೂ ಅಥವಾ ತೇಜೋದಾಯಿಯಾಗಿಯೂ ಮೋಕ್ಷವೆಂಬ ಅಮೃತಪ್ರದಾನ ಮಾಡುವವನಾಗಿಯೂ ವರ್ಣಶುದ್ಧಿಯುಳ್ಳ ವೇದಗಳನ್ನು ಅನುಗ್ರಹಿಸುವವನಾಗಿಯೂ ಸರ್ವಪೋಷಕನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

ಬ್ರಹ್ಮೇಶಾಯ ನಮುಸ್ತುಭ್ಯಂ ಬ್ರಹ್ಮಣೇ ಬ್ರಹ್ಮರೂಪಧೃಕ್ ।
ಪರಂ ಬ್ರಹ್ಮ ನಮಸ್ತೇಽಸ್ತು ಶಬ್ದಬ್ರಹ್ಮನಮೋಽಸ್ತು ತೇ ॥ ೩೫ ॥

ವಿದ್ಯಾ ತ್ವಂ ವೇದ್ಯರೂಪಸ್ತ್ವಂ ವಂದನೀಯಸ್ತ್ವಮೇವ ಚ ।
ಬುದ್ಧಿಸ್ತ್ವಮಪಿ ಬೋಧ್ಯಶ್ಚ ಬೋದ್ಧಾ ತ್ವಂ ಚ ನಮೋಽಸ್ತು ತೇ ॥ ೩೬ ॥

ಹೋತಾ ಹೋಮಶ್ಚ ಹವ್ಯಂ ಚ ಹೂಯಮಾನಶ್ಚ ಹವ್ಯವಾಟ್ ।
ಪಾತಾ ಪೋತಾ ಚ ಪೂತಶ್ಚ ಪಾವನೀಯಶ್ಚ ಓಂ ನಮಃ ॥ ೩೭ ॥

---

೩೫. ಬ್ರಹ್ಮರೂಪನಾಗಿ ಚತುರ್ಮುಖನಿಗೂ ಪ್ರಭುವಾಗಿ ಸೃಷ್ಟಿಕಾರ್ಯವನ್ನು ನಿರ್ವಹಿಸುತ್ತಾ ಶಬ್ಧಬ್ರಹ್ಮನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು, (ಸ್ಫೋಟವೆಂಬ ನಿತ್ಯಶಬ್ದವನ್ನು ಪರಬ್ರಹ್ಮಸ್ವರೂಪವೆಂದು ವೈಯಾಕರಣರು ಹೇಳುತ್ತಾರೆ. ಇದು ವ್ಯವಹಾರದಲ್ಲಿರುವ ವರ್ಣಸಮುದಾಯರೂಪವಾದ ಅನಿತ್ಯ ಶಬ್ದದಿಂದ ವ್ಯಂಗ್ಯವಾಗಿ ನಿತ್ಯವಾಗಿಯೂ ನಿರವಯವನಾಗಿಯೂ ಇರುವ ಬ್ರಹ್ಮರೂಪವೆಂದು ಅವರ ಸಿದ್ಧಾಂತವಿದೆ. ಶಬ್ದಾರ್ಥಗಳಿಗೆ ಅಭೇದ (ತಾದಾತ್ಮ್ಯ) ವನ್ನು ಅಂಗೀಕರಿಸಿ ಶಾಬ್ದಾದ್ವೈತ ಸಿದ್ಧಾಂತದಿಂದ ಈ ಸ್ಫೋಟವೆಂಬ ಬ್ರಹ್ಮವೇ ಜಗತ್ಕಾರಣವೆಂದೂ ನಿರ್ಣಯಿಸುತ್ತಾರೆ.)

೩೬. ವಿದ್ಯಾಸ್ವರೂಪವೂ ವೇದ್ಯವಸ್ತುಗಳ ಆಕಾರವೂ ವೇದ್ಯವಸ್ತುವೂ ನೀನೇ ಆಗಿದ್ದೀಯೆ. ಬುದ್ಧಿಯೂ ಬೋಧ್ಯವಸ್ತುಗಳೂ, ತಿಳಿಯುವವನೂ ನೀನೇ ಆಗಿರುವೆ, (ಈ ಎಲ್ಲಾ ವಸ್ತುಗಳ ಅಸಾಧಾರಣ ಸಾಮರ್ಥ್ಯವು ನಿನ್ನ ಸಂಕಲ್ಪದಿಂದಲೇ ಉಂಟಾಗಿರುವುದರಿಂದ ಎಲ್ಲವೂ ನೀನೇ ಆಗಿರುವೆ ಎಂದು ತಾತ್ಪರ್ಯ.) ನಿನಗೆ ಅನಂತ ನಮಸ್ಕಾರಗಳು.

೩೭. ಯಜ್ಞದಲ್ಲಿ ಹೋತೃಗಳೂ, ಹೋಮವೂ, ಹೋಮಾರ್ಹವಾದ ಆಜ್ಯಪುರೋಡಾಶಾದಿಗಳೂ, ಹೋಮಾಧಾರನಾದ ಅಗ್ನಿಯೂ, ಯಜ್ಞರಕ್ಷಕನೂ ಪೋತಾ ಎಂಬ ಋತ್ವಿಕ್ಕೂ ಅದರಿಂದ ಪವಿತ್ರನಾಗುವವನೂ, ಪಾವನಮಾಡುವವನೂ ಓಂಕಾರವಾಚ್ಯನಾದ ನೀನೇ ಆಗಿರುವೆ, ನಿನಗೆ ಅನಂತ ನಮಸ್ಕಾರಗಳು.

ಹಂತಾ ಚ ಹನ್ಯಮಾನಶ್ಚ ಕ್ರಿಯಮಾಣಸ್ತ್ವಮೇವ ಚ ।
ಹರ್ತಾ ನೇತಾ ಚ ನೀತಿಶ್ಚ ಪೂಜ್ಯೋಽಗ್ರ್ಯೋ ವಿಶ್ವಧಾರ್ಯಪಿ ॥ ೩೮ ॥

ಸ್ರುಕ್ಸ್ರುವೌ ವಿಶ್ವಧಾಮಾಽಸಿ ಕಪಾಲೋಲೂಖಲೋರಣಿಃ ।
ಯಜ್ಞಪಾತ್ರಾರಣೇಯಸ್ತ್ವಮೇಕಧಾ ಬಹುಧಾ ತ್ರಿಧಾ ॥ ೩೯ ॥

ಯಜ್ಞಸ್ತ್ವಂ ಯಜಮಾನಸ್ತ್ವಮೀಡ್ಯಸ್ತ್ವಮಸಿ ಯಾಜಕಃ ।
ಜ್ಞಾತಾ ಜ್ಞೇಯಸ್ತಥಾ ಜ್ಞಾನಂ ಧ್ಯಾತಾ ಧ್ಯೇಯೋಽಸಿ ಚೇಶ್ವರ ॥ ೪೦ ॥

ಧ್ಯಾನಯೋಗಶ್ಚ ಯೋಗೀ ಚ ಗತಿರ್ಮೋಕ್ಷೋ ಧೃತಿಃ ಸುಖಂ ।
ಯೋಗಾಂಗಾನಿ ತ್ವಮೀಶಾನಃ ಸರ್ವಗಸ್ತ್ವಂ ನಮೋಽಸ್ತು ತೇ ॥ ೪೧ ॥

ಬ್ರಹ್ಮಾ ಹೋತಾ ತಥೋದ್ಗಾತಾ ಸೋಮಯೂಪೋಽಥ ದಕ್ಷಿಣಾ ।
ದೀಕ್ಷಾ ತ್ವಂ ತ್ವಂ ಪುರೋಡಾಶಸ್ತ್ವಂ ಪಶುಃ ಪಶುಹಾ ಹ್ಯಸಿ ॥ ೪೨ ॥

೩೮-೩೯. ಹನನಕರ್ತೃವೂ (ಕೊಲ್ಲತಕ್ಕವನು) ಕೊಲ್ಲಲ್ಪಡುವವನೂ ಹನನ ಕ್ರಿಯೆಯೂ ನೀನೇ ಆಗಿದ್ದೀಯೆ, ಮುಖ್ಯನಾದ ಅಪಹರಣ ಕರ್ತೃವೂ ನಿಯಾಮಕನೂ ನೀತಿಯೂ ಪೂಜ್ಯನೂ, ಸರ್ವೋತ್ಕೃಷ್ಟನೂ, ವಿಶ್ವಧಾರಕನೂ ನೀನೇ ಆಗಿರುವೆ. ಸ್ರುಕ್‌ಸ್ರುವವೆಂಬ ಹೋಮಸಾಧನಗಳೂ, ಕಪಾಲ, ಒರಳು, ಅರಣಿ, ಅರಣಿಯಿಂದ ಸಾಧ್ಯವಾದ ವಸ್ತು ಇವೆಲ್ಲವೂ ನೀನೇ ಆಗಿ ಒಂದೊಂದು ರೂಪದಲ್ಲಿಯೂ ಮೂರು ರೂಪದಲ್ಲಿಯೂ ಯಜ್ಞಪಾತ್ರಗಳೇ ಮೊದಲಾದ ಅನೇಕ ರೂಪದಲ್ಲಿಯೂ ತೋರುತ್ತಿರುವೆ.

೪೦-೪೧. ಯಜ್ಞಸ್ವರೂಪವೂ ಯಜಮಾನನೂ, ಸ್ತೋತ್ರಮಾಡಲ್ಪಡುವವನೂ, ಯಾಜಕನೂ, ಜ್ಞಾನಕರ್ತೃವೂ, ತಿಳಿಯಲ್ಪಡುವ ವಸ್ತುವೂ, ಜ್ಞಾನವೂ, ಧ್ಯಾನಧ್ಯೇಯಗಳೂ ಸಹ ಸರ್ವೇಶ್ವರನಾದ ನೀನೇ ಆಗಿರುವೆ, ಧ್ಯಾನಯೋಗವೂ, ಯೋಗಿಯೂ, ಗಮನಸ್ಥಾನನೂ, ಮೋಕ್ಷವೆಂಬ ಪುರುಷಾರ್ಥವೂ ಧಾರಣ ಸಾಮರ್ಥ್ಯವೂ, ಸುಖವೂ, ಯೋಗಾಂಗಗಳೂ, ಸರ್ವವ್ಯಾಪಕನೂ ಪ್ರಭುವೂ ಆದ ನೀನೇ ಆಗಿರುವೆ, ನಿನಗೆ ಅನಂತ ನಮಸ್ಕಾರಗಳು.

೪೨-೪೩. ಯಜ್ಞದಲ್ಲಿ ಬ್ರಹ್ಮನೂ ಹೋತಾ, ಉದ್ಗಾತಾ ಎಂಬ ಋತ್ವಿಕ್ಕುಗಳೂ, ಸೋಮವೂ, ಯೂಪವೂ, ದಕ್ಷಿಣೆಯೂ, ಯಜ್ಞದೀಕ್ಷೆಯೂ, ಪುರುಡಾಶವೂ, ಯಜ್ಞಪಶುವೂ, ಪಶುವನ್ನು ಕೊಲ್ಲುವ ಶಾಮಿತ್ರನೂ ನೀನೇ ಆಗಿರುವೆ, (ಯಜ್ಞಾ

ಗುಹ್ಯೋ ಧಾತಾ ಪರಮಸಿ ನರೋ ನಾರಾಯಣಸ್ತಥಾ ।
ಮಹಾಜನೋ ನಿರಯಣಃ ಸಹಸ್ರಾರ್ಕೇಂದುರೂಪವಾನ್ ॥ ೪೩ ॥

ದ್ವಾದಶಾರೋಽಥ ಷಣ್ಣಾಭಿಸ್ತ್ರಿವ್ಯೂಹೋ ದ್ವಿಗುಣಸ್ತಥಾ ।
ಕಾಲಚಕ್ರೋ ಮಹಾಮೇಧಾಃ ಶಂಭುಃ ಶಕ್ರಃ ಪ್ರಭಂಜನಃ ॥ ೪೪ ॥

ಮಿತ್ರಾವರುಣಮೂರ್ತಿಸ್ತ್ವಮಮೂರ್ತಿರನಘಃ ಶುಭಃ ।
ಪ್ರಾಗ್ವಂಶಕಾಯೋ ಭೂತಾದಿರ್ಮಹಾಭೂತೋಽಚ್ಯುತೋ ದ್ವಿಜಃ ॥ ೪೫ ॥

ತ್ವಮೂರ್ಧ್ವಕೇತೋರ್ಧ್ವಧರ ಊರ್ಧ್ವರೇತಾ ನಮೋಽಸ್ತು ತೇ ।
ಮಹಾಪಾತಕಹಾ ತ್ವಂ ಚ ಉಪಪಾತಕಹಾ ತಥಾ ॥ ೪೬ ॥

ಮುನೀಶಃ ಸರ್ವಪಾಪಘ್ನಸ್ತ್ವಾಮಹಂ ಶರಣಂ ಗತಃ ।
ಇತ್ಯೇತ್ಪರಮಂ ಸ್ತೋತ್ರಂ ಸರ್ವಪಾಪಪ್ರಮೋಚನಂ ॥ ೪೭ ॥

ವಯವವೆಲ್ಲವೂ ನಿನ್ನ ಶರೀರಗಳೆಂದು ತಾತ್ಪರ್ಯ.) ರಹಸ್ಯವಸ್ತುವೂ, ಮುಖ್ಯ ರಕ್ಷಕನೂ, ನರನೂ, ನಾರಾಯಣನೂ ನೀನೇ ಆಗಿರುವೆ. ಆಶೆ ಇಲ್ಲದ ಸಾಧು ಸ್ವರೂಪನೂ, ಸಾವಿರಾರು ಸೂರ್ಯಚಂದ್ರರ ರೂಪವುಳ್ಳವನೂ ಸಹ ನೀನೇ ಆಗಿದ್ದೀಯೆ.

೪೪. ಮಾಸಗಳೆಂಬ ಹನ್ನೆರಡು ಅರಗಳಿಂದಲೂ (ಚಕ್ರದ ಮಧ್ಯದಲ್ಲಿರುವ ಸರಳುಗಳು) ಆರು ಋತುಗಳೆಂಬ ನಾಭಿಸ್ಥಾನದಿಂದಲೂ, ವರ್ಷ, ಗ್ರೀಷ್ಮ ಶಿಶಿರಗಳೆಂಬ ಮೂರು ಭಾಗಗಳುಳ್ಳ ಉತ್ತರದಕ್ಷಿಣಾಯನಗಳುಳ್ಳ, ಕಾಲಚಕ್ರವೂ ನೀನೇ ಆಗಿರುವೆ ಮಹಾಮೇಧಾವಿಯಾದ ಶಂಭುವೂ, ಇಂದ್ರನೂ, ವಾಯುವೂ ನೀನೇ ಆಗಿರುವೆ.

೪೫. ಮಿತ್ರಾವರುಣರೆಂಬ ದೇವತೆಯ ಮೂರ್ತಿಯೂ ಪಾಪಸಂಬಂಧವಾದ ದೇಹರಹಿತನೂ, ಶುಭಮೂರ್ತಿಯೂ, ಪ್ರಾಗ್ವಂಶವೆಂಬ ಯಜ್ಞಭೂಮಿಯ ರೂಪನೂ ಪಂಚಭೂತಗಳಿಗೂ ಉತ್ಪತ್ತಿಸ್ಥಾನನೂ ಮಹಾಪುರುಷನೂ ಬ್ರಾಹ್ಮಣೋತ್ತಮನೂ ಅಚ್ಯುತರೂಪಿಯೂ ನೀನೇ ಆಗಿರುವೆ.

೪೬-೪೭. ನೀನೇ ಉನ್ನತಕೀರ್ತಿಯುಳ್ಳ ಊರ್ಧ್ವಲೋಕಧಾರಿಯಾದ ಮಹಾ ತಪಸ್ವಿಯಾಗಿರುವೆ ನಿನಗೆ ಅನಂತ ನಮಸ್ಕಾರಗಳು, ಮಹಾಪಾತಕಗಳಿಗೂ ಉಪ ಪಾತಕಗಳಿಗೂ ನೀನೇ ನಾಶಕನಾಗಿರುವೆ, ಮುನಿಗಳಿಗೆಲ್ಲಾ ರಕ್ಷಕನಾಗಿಯೂ ಸರ್ವ ಪಾಪನಾಶಕನಾಗಿಯೂ ಇರುವೆ. ನಿನ್ನಲ್ಲಿ ನಾನು ಶರಣಾಗತನಾಗಿರುವೆನು. ಎಲ್ಲೈ

ಮಹೇಶ್ವರೇಣ ಕಥಿತಂ ವಾರಾಣಸ್ಯಾಂ ಪುರಾ ಮುನೇ ।
ಕೇಶವಸ್ಯಾಗ್ರತೋ ಗತ್ವಾ ಸ್ನಾತ್ವಾ ತೀರ್ಥೋದಕೇ ಶುಭೇ ।
ಉಪಶಾಂತಸ್ತದಾ ಜಾತೋ ರುದ್ರಃ ಪಾಪೋಪಶಾಂತಿದಂ ॥ ೪೮ ॥

ಏತತ್ಪವಿತ್ರಂ ತ್ರಿಪುರಘ್ನಭಾಷಿತಂ
ಪಠನ್ನರೋ ವಿಷ್ಣುಪುರೇ ಮಹರ್ಷೇ ।
ವಿಮುಕ್ತಪಾಪೋಪ್ಯುಪಶಾಂತಮೂರ್ತಿಃ
ಸಂಪೂಜ್ಯತೇ ದೇವವರೈಃ ಸಸಿದ್ಧೈಃ ॥ ೪೯ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ಪಾಪಪ್ರಶಮನಸ್ತವೋ ನಾಮ ಸಪ್ತಾಶೀತಿತಮೋಽಧ್ಯಾಯಃ

ಮಹರ್ಷಿಯೇ ಸರ್ವಪಾಪನಾಶಕವಾದ ಈ ಉತ್ತಮ ಸ್ತೋತ್ರವನ್ನು ವಾರಾಣಸಿಯಲ್ಲಿ ಮಹೇಶ್ವರನು ಕೇಶವ ಸ್ವಾಮಿಯ ಮುಂದೆ ಪಠಿಸಿ ಅಲ್ಲಿರುವ ತೀರ್ಥದಲ್ಲಿ ಸ್ನಾನಮಾಡಿ ಬ್ರಹ್ಮಹತ್ಯಾಪಾಪದಿಂದ ಮುಕ್ತನಾಗಿ ಉಪಶಾಂತಿಯಿಂದ ಸಂತುಷ್ಟನಾದನು.

೪೯. ಮಹಾ ದೇವನಿಂದ ಹೇಳಲ್ಪಟ್ಟ ಪವಿತ್ರವಾದ ಈ ಸ್ತೋತ್ರವನ್ನು ಯಾರು ಪಠಿಸುತ್ತಾರೆಯೋ ಅವರು ಸರ್ವಪಾಪಗಳಿಂದಲೂ ಮುಕ್ತರಾಗಿ ದೇವತೆಗಳಿಂದಲೂ ಸಿದ್ಧರಿಂದಲೂ ಪೂಜಿಸಲ್ಪಡುತ್ತಾ ಶಾಂತಿಸುಖದಿಂದ ವಿಷ್ಣುಲೋಕದಲ್ಲಿ ಸಂತೋಷದಿಂದಿರುತ್ತಾರೆ.

ಇಲ್ಲಿಗೆ ಶ್ರೀ ವಾಮನಪುರಾಣದ ವಾಮನ ಪ್ರಾದುರ್ಭಾವ ಸಂದರ್ಭದಲ್ಲಿ ಪಾಪಪ್ರಶಮನಸ್ತವವೆಂಬ ಎಂಭತ್ತೇಳನೇ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ಹಿಂದಿನ ಅಧ್ಯಾಯದಂತೆಯೇ ಪಾಪಪ್ರಶಮನವೆಂಬ ಸ್ತೋತ್ರವನ್ನು ನಿರೂಪಿಸಲಾಗಿದೆ. ಉಪಾಖ್ಯಾನವಾವುದೂ ಇಲ್ಲಿ ಪ್ರಸ್ತಾಪಿಸಿಲ್ಲ. ಪ್ರಹ್ಲಾದನಿಂದ ಪಠಿಸಲ್ಪಟ್ಟ ಈ ಸೋತ್ರವು ಶಂಕರನಿಂದಲೇ ಹೇಳಲ್ಪಟ್ಟಿತೆಂದೂ ಇದರಿಂದಲೇ ಶಂಕರನು ಕೇಶವನ ಅನುಗ್ರಹದಿಂದ ಬ್ರಹ್ಮಹತ್ಯೆಯಿಂದ ಮುಕ್ತನಾದ ನೆಂದೂ ಹೇಳಿ ವಿಷ್ಣುವಿನ ಸರ್ವವ್ಯಾಪಕತ್ವವನ್ನೂ ಸರ್ವೋತ್ಕರ್ಷವನ್ನೂ ಸರ್ವ ಕರ್ಮಗಳಿಂದಲೂ ಅವನೇ ಆರಾಧ್ಯನೆಂಬುದನ್ನೂ ಸರ್ವಶಬ್ದಗಳಿಗೂ ಅವನೇ ಮುಖ್ಯವಾದ ವಾಚ್ಯನೆಂದೂ ಪ್ರತಿಪಾದಿಸಲಾಗಿದೆ.

॥ ಶ್ರೀಃ ॥

ಶ್ರೀ ವಾಮನ ಪುರಾಣಂ

ಅಷ್ಟಾಶೀತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ದ್ವಿತೀಯಂ ಪಾಪಶಮನಂ ಸ್ತವಂ ವಕ್ಷ್ಯಾಮಿ ತೇ ಮುನೇ ।
ಯೇನ ಸಮ್ಯಗಧೀತೇನ ಪಾಪನಾಶಂ ತು ಗಚ್ಛತಿ ॥ ೧ ॥

ಮತ್ಸ್ಯಂ ನಮಸ್ಯೇ ದೇವೇಶಂ ಕೂರ್ಮಂ ದೇವೇಶಮೇವ ಚ ।
ಹಯಶೀರ್ಷಂ ನಮಸ್ಯೇಽಹಂ ಭವಂ ವಿಷ್ಣುಂ ತ್ರಿವಿಕ್ರಮಂ ॥ ೨ ॥

ನಮಸ್ಯೇ ಮಾಧವೇಶಾನೌ ಹೃಷೀಕೇಶಕುಮಾರಿಲೌ ।
ನಾರಾಯಣಂ ನಮಸ್ಯೇಽಹಂ ನಮಸ್ತೆ ಗರುಡಾಸನ ॥ ೩ ॥

ಎಂಭತ್ತೆಂಟನೆಯ ಅಧ್ಯಾಯ

೧-೨. ಪುಲಸ್ತ್ಯರು ಪಾಪಶಮನವೆಂಬ ಮತ್ತೊಂದು ಸ್ತೋತ್ರವನ್ನು ಹೇಳುತ್ತಾರೆ ಎಲೈ ಮುನಿಯೇ, ಯಾವ ಈ ಸ್ತೋತ್ರದ ಅಧ್ಯಯನವು ಎಲ್ಲಾ ಪಾಪಗಳನ್ನೂ ನಾಶಮಾಡಬಲ್ಲದೋ. ಅಂತಹ ಎರಡನೇಯ ಪಾಪಶಮನಸ್ತುತಿಯನ್ನು ನಿನಗೆ ಹೇಳುತ್ತೇನೆ. ದೇವಾಧಿಪತಿಯಾದ ಮತ್ಸ್ಯರೂಪಿಯನ್ನೂ ಕೂರ್ಮರೂಪಿಯನ್ನೂ ನಮಸ್ಕರಿಸುತ್ತೇನೆ. ಹಯವದನನನ್ನೂ ಶಂಕರನನ್ನೂ ತ್ರಿವಿಕ್ರಮರೂಪಿಯಾದ ವಿಷ್ಣುವನ್ನೂ ನಮಸ್ಕರಿಸುತ್ತೇನೆ.

೩-೫. ಹೃಷೀಕೇಶರೂಪನಾದ ಮಾಧವನನ್ನೂ ಕುಮಾರಿಲರೂಪಿಯಾದ ಶಂಕರನನ್ನೂ ನಾರಾಯಣನನ್ನೂ ನಮಸ್ಕರಿಸುತ್ತೇನೆ. ಗರುಡವಾಹನನಿಗೆ ನಮಸ್ಕಾರಗಳು. ವಿಜಯಪ್ರದನಾದ ನರಸಿಹ್ಮಮೂರ್ತಿಯನ್ನೂ ರೂಪದಾರಿಯನ್ನೂ, ಕುರು

ಜಯೇಶಂ ನರಸಿಂಹಂ ಚ ರೂಪಧಾರಂ ಕುರುಧ್ವಜಂ।
ಕಾಮಪಾಲಮಖಂಡಂ ಚ ನಮಸ್ಯೇ ಬ್ರಾಹ್ಮಣಪ್ರಿಯಂ ॥ ೪ ॥

ಅಜಿತಂ ವಿಶ್ವಕರ್ಮಾಣಂ ಪುಂಡರೀಕಂ ದ್ವಿಜಪ್ರಿಯಂ।
ಹರಿಂ ಶಂಭುಂ ನಮಸ್ಯೇ ಚ ಬ್ರಹ್ಮಾಣಂ ಸಪ್ರಜಾಪತಿಂ ॥ ೫ ॥

ನಮಸ್ಯೇ ಶೂಲಬಾಹುಂ ಚ ದೇವಂ ಚಕ್ರಧರಂ ತಥಾ।
ಶಿವಂ ವಿಷ್ಣುಂ ಸುವರ್ಣಾಕ್ಷಂ ಗೋಪತಿಂ ಪೀತವಾಸಸಂ ॥ ೬ ॥

ನಮಸ್ಯೇ ಚ ಗದಾಪಾಣಿಂ ನಮಸ್ಯೇ ಚ ಕುಶೇಶಯಂ।
ಅರ್ಧನಾರೀಶ್ವರಂ ದೇವಂ ನಮಸ್ಯೇ ಪಾಪನಾಶನಂ ॥ ೭ ॥

ಗೋಪಾಲಂ ಚ ಸ ವೈಕುಂಠಂ ನಮಸ್ಯೇ ಚಾಪಧಾರಿಣಂ।
ನಮಸ್ಯೇ ವಿಷ್ಣುರೂಪಂ ಚ ಜ್ಯೇಷ್ಠೇಶಂ ಪಂಚಮಂ ತಥಾ ॥ ೮ ॥

ಧ್ವಜನನ್ನೂ ಬ್ರಾಹ್ಮಣಪ್ರಿಯನಾದ ಅಖಂಡನಾದ ಕಾಮಪಾಲನನ್ನೂ ನಮಸ್ಕರಿಸುತ್ತೇನೆ. ವಿಶ್ವಕಾರಣನಾದ ಅಜಿತಮೂರ್ತಿಯನ್ನೂ ಬ್ರಾಹ್ಮಣಪ್ರಿಯನಾದ ಪುಂಡರೀಕನನ್ನೂ ಹರಿಯನ್ನೂ ಶಂಭುವನ್ನೂ ಇತರ ಪ್ರಜಾಪತಿಗಳೊಡಗೂಡಿದ ಬ್ರಹ್ಮನನ್ನೂ ಸಹ ನಮಸ್ಕರಿಸುತ್ತೇನೆ.

೬-೮. ಶೂಲಪಾಣಿಯಾಗಿಯೂ ಸುವರ್ಣಾಕ್ಷನಾಗಿಯೂ ಇರುವ ಶಿವನನ್ನೂ, ಚಕ್ರಧರನಾಗಿಯೂ, ಗೋಪಾಲನಾಗಿಯೂ, ಪೀತಾಂಬರಧಾರಿಯಾಗಿಯೂ ಇರುವ ವಿಷ್ಣುವನ್ನೂ ಸಹ ನಮಸ್ಕರಿಸುತ್ತೇನೆ. ಗದಾಪಾಣಿಯಾಗಿಯೂ, ದರ್ಭಶಾಯಿಯಾಗಿಯೂ ಇರುವ ಮಹಾವಿಷ್ಣುವನ್ನೂ, ಪಾಪನಾಶಕನಾದ ಅರ್ಧನಾರೀಶ್ವರನನ್ನೂ ಸಹ ನಮಸ್ಕರಿಸುತ್ತೇನೆ. ಗೋಪಾಲನಾಗಿಯೂ, ವೈಕುಂಠಪತಿಯಾಗಿಯೂ, ಚಾಪಧಾರಿಯಾಗಿಯೂ, ವಿಷ್ಣುರೂಪಿಯಾಗಿಯೂ ಜ್ಯೇಷ್ಠೇಶನೆಂಬ ಐದನೇ ರೂಪವುಳ್ಳವನಾಗಿಯೂ ಇರುವ ಮಹಾವಿಷ್ಣುವನ್ನು ನಮಸ್ಕರಿಸುತ್ತೇನೆ.

ಉಪಶಾಂತಂ ನಮಸ್ಯೇಽಹಂ ಮಾರ್ಕಂಡೇಯಂ ಸಜಂಬುಕಂ ।
ನಮಸ್ಯೇ ಪದ್ಮಕಿರಣಂ ನಮಸ್ಯೇ ವಡವಾಮುಖಂ ॥ ೯ ॥

ಕಾರ್ತಿಕೇಯಂ ನಮಸ್ಯೇಽಹಂ ಬಾಹ್ಲಿಕಂ ಶಂಖಿನಂ ತಥಾ ।
ನಮಸ್ಯೇ ಪದ್ಮಕಿರಣಂ ನಮಸ್ಯೇ ಚ ಕುಶೇಶಯಂ ॥ ೧೦ ॥

ನಮಸ್ಯೇ ಸ್ಥಾಣುಮನಘಂ ನಮಸ್ಯೇ ವನಮಾಲಿನಂ ।
ನಮಸ್ಯೇ ಲಾಂಗಲೀಶಂ ಚ ನಮಸ್ಯೇಽಹಂ ಶ್ರಿಯಃ ಪತಿಂ ॥ ೧೧ ॥

ನಮಸ್ಯೇ ಚ ತ್ರಿನಯನಂ ನಮಸ್ಯೇ ಹವ್ಯವಾಹನಂ ।
ನಮಸ್ಯೇ ಚ ತ್ರಿಸೌವರ್ಣಂ ನಮಸ್ಯೇ ಧರಣೀಧರಂ ॥ ೧೨ ॥

ತ್ರಿಣಾಚಿಕೇತಂ ಬ್ರಹ್ಮಾಣಂ ನಮಸ್ಯೇ ಶಶಿಭೂಷಣಂ ।
ಕಪರ್ದಿನಂ ನಮಸ್ಯೇ ಚ ಸರ್ವಾಮಯವಿನಾಶನಂ ॥ ೧೩ ॥

ನಮಸ್ಯೇ ಶಶಿನಂ ಸೂರ್ಯಂ ಧ್ರುವಂ ರುದ್ರಂ ಮಹೌಜಸಂ ।
ಪದ್ಮನಾಭಂ ಹಿರಣ್ಯಾಕ್ಷಂ ನಮಸ್ಯೇ ಸ್ಕಂದಮವ್ಯಯಂ ॥ ೧೪ ॥

೯-೧೦. ಜಂಬುಕಮುನಿಯೊಡಗೂಡಿದ ಶಾಂತನಾದ ಮಾರ್ಕಂಡೇಯನನ್ನೂ ನಮಸ್ಕರಿಸುತ್ತೇನೆ. ಪದ್ಮಕಿರಣನನ್ನೂ ವಡವಾಮುಖನೆಂಬ ದೇವನನ್ನೂ ನಮಸ್ಕರಿಸುತ್ತೇನೆ. ಷಣ್ಮುಖನನ್ನೂ ಬಾಹ್ಲೀಕನನ್ನೂ ಶಂಖಿದೇವನನ್ನೂ ನಮಸ್ಕರಿಸುತ್ತೇನೆ. ಪದ್ಮಕಿರಣನನ್ನೂ ಕುಶೇಶಯನನ್ನೂ ನಮಸ್ಕರಿಸುತ್ತೇನೆ.

೧೧-೧೨. ನಿಷ್ಪಾಪನಾದ ಸ್ಥಾಣುದೇವನನ್ನೂ ವನಮಾಲಿಯಾದ ಕೃಷ್ಣನನ್ನೂ ಲಾಂಗಲೀಶ (ಬಲರಾಮ) ರೂಪನಾದ ಆ ಶ್ರೀಪತಿಯನ್ನೂ ನಮಸ್ಕರಿಸುತ್ತೇನೆ. ತ್ರಿಸೌವರ್ಣಮೂರ್ತಿಯನ್ನೂ ಭೂಮಂಡಲಧಾರಿಯಾದ ವರಾಹಮೂರ್ತಿಯನ್ನೂ ಸಹ ನಮಸ್ಕರಿಸುತ್ತೇನೆ.

೧೩-೧೪. ನಾಚಿಕೇತವೆಂಬ ಅಗ್ನಿತ್ರಯವುಳ್ಳ ಕರ್ಮದಿಂದ ಲಭ್ಯನಾಗುವ ಆ ಬ್ರಹ್ಮಮೂರ್ತಿಯನ್ನೂ ಸರ್ವವ್ಯಾಧಿನಾಶಕನಾದ ಜಟಾಧಾರಿಯಾದ ಶಂಕರನನ್ನೂ ಸಹ ನಮಸ್ಕರಿಸುತ್ತೇನೆ. ಚಂದ್ರಸೂರ್ಯರನ್ನೂ ಧ್ರುವನನ್ನೂ ತೇಜಸ್ವಿಯಾದ ರುದ್ರನನ್ನೂ ಪದ್ಮನಾಭನನ್ನೂ ತೇಜಸ್ವಿಯಾದ ನೇತ್ರಗಳುಳ್ಳ ಸ್ಕಂದನನ್ನೂ ನಮಸ್ಕರಿಸುತ್ತೇನೆ.

ನಮಸ್ಯೇಽಹಂ ಭೀಮಹಂಸೌ ನಮಸ್ಯೇ ಹಾಟಕೇಶ್ವರಂ ।
ಸದಾ ಹಂಸಂ ನಮಸ್ಯೇ ಚ ನಮಸ್ಯೇ ಘ್ರಾಣತರ್ಪಣಂ ॥ ೧೫ ॥

ನಮಸ್ಯೇ ರುಕ್ಮಕವಚಂ ಮಹಾಯೋಗಿನಮೀಶ್ವರಂ ।
ನಮಸ್ಯೇ ಶ್ರೀನಿವಾಸಂ ಚ ನಮಸ್ಯೇ ಪುರುಷೋತ್ತಮಂ ॥ ೧೬ ॥

ನಮಸ್ಯೇ ಚ ಚತುರ್ಬಾಹುಂ ನಮಸ್ಯೇ ಚ ಸುಧಾಧಿಪಂ ।
ವನಸ್ಪತಿಂ ಮಧುಪತಿಂ ನಮಸ್ಯೇ ಮಧುಮವ್ಯಯಂ ॥ ೧೭ ॥

ಶ್ರೀಕಂಠಂ ವಾಸುದೇವಂ ಚ ನೀಲಕಂಠಂ ಸದಾಶಿವಂ ।
ನಮಸ್ಯೇ ಶರ್ವಮನಘಂ ಗೌರೀಶಂ ಲಕುಡೇಶ್ವರಂ ॥ ೧೮ ॥

ಮನೋಹರಂ ಚ ಕೃಷ್ಣೇಶಂ ನಮಸ್ಯೇ ಚಕ್ರಪಾಣಿನಂ ।
ಯಶೋಧನಂ ಮಹಾಬಾಹುಂ ನಮಸ್ಯೇ ಚ ಕುಶಪ್ರಿಯಂ ॥ ೧೯ ॥

ಭೂಧರಂ ಛಾದಿತಗದಂ ಸುನೇತ್ರಂ ಸುರಶಂಸಿತಂ ।
ಭದ್ರಾಕ್ಷಂ ವೀರಭದ್ರಂ ಚ ನಮಸ್ಯೇ ಶಂಕುಕರ್ಣಿನಂ ॥ ೨೦ ॥

೧೫-೧೭. ಭೀಮೇಶ್ವರನನ್ನೂ ಹಂಸಮೂರ್ತಿಯನ್ನೂ ಹಾಟಕೇಶ್ವರನನ್ನೂ ನಮಸ್ಕರಿಸುತ್ತೇನೆ. ಸದಾಹಂಸನನ್ನೂ ಘ್ರಾಣತರ್ಪಣಮೂರ್ತಿಯನ್ನೂ ನಮಸ್ಕರಿಸುತ್ತೇನೆ. ಸುವರ್ಣಕವಚಧಾರಿಯಾದ ಮಹಾಯೋಗೀಶ್ವರನನ್ನೂ ಶ್ರೀನಿವಾಸನೆಂಬ ಪುರುಷೋತ್ತಮನನ್ನೂ ನಮಸ್ಕರಿಸುತ್ತೇನೆ. ಚತುರ್ಭುಜನನ್ನೂ ಸುಧಾಧಿಪನನ್ನೂ ವನಸ್ಪತಿ, ಮಧುಪತಿ, ಮನುಗಳನ್ನೂ ಸಹ ನಮಸ್ಕರಿಸುತ್ತೇನೆ.

೧೮-೨೦. ಶ್ರೀಕಂಠ, ನೀಲಕಂಠ, ಸದಾಶಿವ, ಶರ್ವ, ಗೌರೀಶ, ಲಕುಡೇಶ್ವರರೆಂಬ ತೀರ್ಥದೇವತೆಗಳನ್ನೂ ಮತ್ತು ಮನೋಹರನಾದ ವಾಸುದೇವ, ಕೃಷ್ಣ, ಚಕ್ರಪಾಣಿ ಇವರನ್ನೂ ಸಹ ನಮಸ್ಕರಿಸುತ್ತೇನೆ. ಯಶಸ್ವಿಯಾಗಿಯೂ ಮಹಾಬಾಹುವಾಗಿಯೂ ಇರುವ ಕುಶಪ್ರಿಯನನ್ನೂ ನಮಸ್ಕರಿಸುತ್ತೇನೆ. ಸುರರಿಂದ ಪೂಜಿತನಾಗಿ ಗದೆಯನ್ನು ಮರೆಮಾಚಿಕೊಂಡು ಪ್ರಕಾಶಿಸುವ ಸುನೇತ್ರನೆಂಬ ಭೂಧರಮೂರ್ತಿಯನ್ನೂ ಭದ್ರಾಕ್ಷ, ವೀರಭದ್ರ, ಶಂಕುಕರ್ಣೀ ಎಂಬ ಗಣಾಧಿಪತಿಗಳನ್ನೂ ನಮಸ್ಕರಿಸುತ್ತೇನೆ.

ವೃಷಧ್ವಜಂ ಮಹೇಶಂ ಚ ವಿಶ್ವಮಿತ್ರಂ ಶಶಿಪ್ರಭಂ ।
ಉಪೇಂದ್ರಂ ಚ ಸಗೋವಿಂದಂ ನಮಸ್ಯೇ ಪಂಕಜಪ್ರಿಯಂ ॥ ೨೧ ॥

ಸಹಸ್ರಶಿರಸಂ ದೇವಂ ನಮಸ್ಯೇ ಕುಂದಮಾಲಿನಂ ।
ಕಾಲಾಗ್ನಿಂ ರುದ್ರದೇವೇಶಂ ನಮಸ್ಯೇ ಕೃತ್ತಿವಾಸಸಂ ॥ ೨೨ ॥

ನಮಸ್ಯೇ ಛಾಗಲೇಶಂ ಚ ನಮಸ್ಯೇ ಪಂಕಜಾಸನಂ ।
ಸಹಸ್ರಾಕ್ಷಂ ಕೋಕನದಂ ನಮಸ್ಯೇ ಹರಿಶಂಕರಂ ॥ ೨೩ ॥

ಅಗಸ್ತ್ಯಂ ಗರುಡಂ ವಿಷ್ಣುಂ ಕಪಿಲಂ ಬ್ರಹ್ಮವಾಙ್ಮಯಂ ।
ಸನಾತನಂ ಚ ಬ್ರಹ್ಮಾಣಂ ನಮಸ್ಯೇ ಬ್ರಹ್ಮ ತತ್ಪರಂ ॥ ೨೪ ॥

ಅಪ್ರತರ್ಕ್ಯಂ ಚತುರ್ಬಾಹುಂ ಸಹಸ್ರಾಂಶುಂ ತಪೋಮಯಂ ।
ನಮಸ್ಯೇ ಧರ್ಮರಾಜಾನಂ ದೇವಂ ಗರುಡವಾಹನಂ ॥ ೨೫ ॥

೨೧-೨೨. ವೃಷಭಾರೂಢನಾದ ಶಂಕರನನ್ನೂ ಚಂದ್ರನಂತಿರುವ ವಿಶ್ವಮಿತ್ರನನ್ನೂ ಉಪೇಂದ್ರರೂಪಿಯಾಗಿರುವ ಗೋವಿಂದನನ್ನೂ ಪಂಕಜಪ್ರಿಯನನ್ನೂ ನಮಸ್ಕರಿಸುತ್ತೇನೆ. ಸಾವಿರತಲೆಯುಳ್ಳ ಕುಂದಮಾಲಿಯನ್ನೂ ಕಾಲಾಗ್ನಿರೂಪನಾದ ಗಜಚರ್ಮಧಾರಿಯಾದ ರುದ್ರದೇವನನ್ನೂ ನಮಸ್ಕರಿಸುತ್ತೇನೆ.

೨೩-೨೪. ಛಾಗಲೇಶನನ್ನೂ ಪಂಕಜಾಸನನನ್ನೂ ಸಹಸ್ರಕಣ್ಣುಗಳುಳ್ಳ ಕೋಕನದನನ್ನೂ ಹರಿಶಂಕರನನ್ನೂ ನಮಸ್ಕರಿಸುತ್ತೇನೆ. ಅಗಸ್ತ್ಯನನ್ನೂ ಗರುಡನನ್ನೂ ವಿಷ್ಣುವನ್ನೂ ಕಪಿಲನನ್ನೂ ವಾಗ್ರೂಪವಾದ ಬ್ರಹ್ಮವನ್ನೂ ಚತುರ್ಮುಖನನ್ನೂ ಪರಬ್ರಹ್ಮನನ್ನೂ ಸಹ ನಮಸ್ಕರಿಸುತ್ತೇನೆ.

೨೫-೨೬. ಊಹಿಸಲಶಕ್ಯನಾಗಿಯೂ ಅನೇಕಮುಖವಾದ ಜ್ಞಾನಜ್ಯೋತಿಯುಳ್ಳವನಾಗಿಯೂ ತಪೋಮಯನಾಗಿಯೂ, ಧರ್ಮನಿಯಾಮಕನಾಗಿಯೂ ಗರುಡವಾಹನನಾಗಿಯೂ ಇರುವ ಚತುರ್ಭುಜನಾದ ದೇವನನ್ನು ನಮಸ್ಕರಿಸುತ್ತೇನೆ. ಸರ್ವಭೂತಾಂತರ್ಯಾಮಿಯಾಗಿಯೂ, ಸರ್ವಲಕ್ಷಣಶಾಲಿಯಾಗಿಯೂ ಶಾಂತತೆಯಿಂದ ಮಹಾಯೋಗಿಯಾಗಿಯೂ ನಿರ್ಮಲನಾದ ಅವ್ಯಕ್ತರೂಪಿಯಾದ ಪಾಪನಾಶನಮೂರ್ತಿಯನ್ನೂ ನಮಸ್ಕರಿಸುತ್ತೇನೆ.

ಸರ್ವಭೂತಗತಂ ಶಾಂತಂ ನಿರ್ಮಲಂ ಸರ್ವಲಕ್ಷಣಂ ।
ಮಹಾಯೋಗಿನಮವ್ಯಕ್ತಂ ನಮಸ್ಯೇ ಪಾಪನಾಶನಂ ॥ ೨೬ ॥

ನಿರಂಜನಂ ನಿರಾಕಾರಂ ನಿರ್ಗುಣಂ ನಿಲಯಂ ಪದಂ ।
ನಮಸ್ಯೇ ಪಾಪಹರ್ತಾರಂ ಶರಣ್ಯಂ ಶರಣಂ ವ್ರಜೇ ॥ ೨೭ ॥

ಏತತ್ಪವಿತ್ರಂ ಪರಮಂ ಪುರಾಣಂ
ಪ್ರೋಕ್ತಂ ತ್ವಗಸ್ತ್ಯೇನ ಮಹರ್ಷಿಣಾ ಚ ।
ಧನ್ಯಂ ಯಶಸ್ಯಂ ಬಹುಪಾಪನಾಶನಂ
ಸಂಕೀರ್ತನಾತ್ಸ್ಮರಣಾತ್ಸ್ಪರ್ಶನಾ ಚ್ಚ ॥ ೨೮ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ಪ್ರಹ್ಲಾದ ತೀರ್ಥಯಾತ್ರಾಯಾಂ ದ್ವಿತೀಯಃ ಪಾಪನಾಶನಸ್ತವೋ ನಾಮಾಷ್ಟಾಶೀತಿತಮೋಽಧ್ಯಾಯಃ

೨೭-೨೮. ಪಾಪಲೇಪವಿಲ್ಲದೆಯೂ ಪ್ರಾಕೃತಾಕಾರವಿಲ್ಲದೆಯೂ ಹೇಯಗುಣ ಸಂಬಂಧವಿಲ್ಲದೆಯೂ, ಇರುವ ಸರ್ವಪಾಪನಾಶಕನಾದ ಸರ್ವಪ್ರಾಪ್ಯನಾದ ಆ ಶರಣ್ಯನಲ್ಲಿಯೇ ನಾನು ಶರಣಾಗತನಾಗಿರುವೆನು. ಅವನನ್ನೇ ನಮಸ್ಕರಿಸುತ್ತೇನೆ. ಪರಮ ಪವಿತ್ರವಾಗಿಯೂ ಪುರಾತನವಾಗಿಯೂ, ಯಶಸ್ಕರವಾಗಿಯೂ ಪಾಪನಾಶಕವಾಗಿಯೂ ಇರುವ ಈ ಸ್ತುತಿಯನ್ನು ಮಹರ್ಷಿಗಳಾದ ಅಗಸ್ತ್ಯರು ಹೇಳಿರುವರು ಇದರ ಸಂಕೀರ್ತನವೂ ಸ್ಮರಣೆಯೂ, ಸಂಬಂಧ ಮಾತ್ರವೂ ಕೂಡ ಸರ್ವಪಾಪಗಳಿಗೂ ನಾಶಕವಾಗಿ ಯಶಸ್ಕರವಾಗಿ ಆದೀತು.

ಇಲ್ಲಿಗೆ ಶ್ರೀ ವಾಮನಪುರಾಣದ ವಾಮನಪ್ರಾದುರ್ಭಾವದಲ್ಲಿ ಪ್ರಹ್ಲಾದ ತೀರ್ಥಯಾತ್ರೆಯ ಎರಡನೇ ಪಾಪನಾಶನಸ್ತವವೆಂಬ ಎಂಭತ್ತೆಂಟನೆಯ ಅಧ್ಯಾಯವು ಮುಗಿದಿದೆ

ಸರ್ವದೇವತಾ ನಮಸ್ಕಾರರೂಪವಾದ ಈ ಅಧ್ಯಾಯದಲ್ಲಿ ಕಥಾಸಂದರ್ಭವಾವುದನ್ನೂ ನಿರೂಪಿಸಿಲ್ಲ.

॥ ಶ್ರೀ ॥

ಶ್ರೀ ವಾಮನ ಪುರಾಣಂ

ನವಾಽಶೀತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಗತೇಽಥ ತೀರ್ಥಯಾತ್ರಾಯಾಂ ಪ್ರಹ್ಲಾದೇ ದಾನವೇಶ್ವರೇ ।
ಕುರುಕ್ಷೇತ್ರಂ ಸಮಭ್ಯಾಗಾದ್ದ್ರಷ್ಟುಂ ವೈರೋಚನೋ ಬಲಿಃ ॥ ೧ ॥

ತಸ್ಮಿನ್ಮಹಾಧರ್ಮಯುತೇ ತೀರ್ಥೇ ಬ್ರಾಹ್ಮಣಪುಂಗವಃ ।
ಶುಕ್ರೋ ದ್ವಿಜಾತಿಪ್ರವರಾನಾಮಂತ್ರಯತ ಭಾರ್ಗವಃ ॥ ೨ ॥

ಭೃಗುಣಾಽಮಂತ್ರ್ಯಮಾಣಾ ವೈ ಶ್ರುತ್ವಾಽತ್ರೇಯಾಃ ಸಗೌತಮಾಃ ।
ಕೌಶಿಕಾಂಗಿರಸಶ್ಚೈವ ತತ್ವಜ್ಞಾಃ ಕುರುಜಾಂಗಲಾನ್ ॥ ೩ ॥

ಉತ್ತರಾಶಾಂ ಪ್ರಜಗ್ಮುಸ್ತೇ ನದೀಮನುಶತದ್ರವೀಂ ।
ಶಾತದ್ರವೇ ಜಲೇ ಸ್ನಾತ್ವಾ ವಿಪ್ರಾಸ್ತೇ ಪ್ರಯಯುಸ್ತತಃ ॥ ೪ ॥

ವಿಧಾಯ ತತ್ರ ಸುಸ್ನಾನಂ ಸಂಪೂಜ್ಯ ಪಿತೃದೇವತಾಃ ।
ಪ್ರಜಗ್ಮುಃ ಕಿರಣಾಂ ಪುಣ್ಯಾಂ ದಿನೇಶಕಿರಣಚ್ಯುತಾಂ ॥ ೫ ॥

ಎಂಭತ್ತೊಂಭತ್ತನೆಯ ಅಧ್ಯಾಯ

೧-೫. ಪುಲಸ್ತ್ಯರು ಹೇಳುತ್ತಾರೆ. ದಾನವರಾಜನಾದ ಪ್ರಹ್ಲಾದನು ತೀರ್ಥಯಾತ್ರೆಗೆ ತೆರಳಿದ ಮೇಲೆ ವಿರೋಚನಪುತ್ರನಾದ ಬಲಿಯು ಕುರುಕ್ಷೇತ್ರವನ್ನು ನೋಡಲು ಬಂದನು. ಆಗ ಧರ್ಮಪ್ರದವಾದ ಆ ಮಹಾತೀರ್ಥದಲ್ಲಿ ಶುಕ್ರಾಚಾರ್ಯನು ಬ್ರಾಹ್ಮಣೋತ್ತಮರನ್ನು ಆಹ್ವಾನಿಸಿದನು, ಶುಕ್ರಾಚಾರ್ಯನ ಆಹ್ವಾನವನ್ನು ಕೇಳಿ, ಬ್ರಾಹ್ಮಣೋತ್ತಮರೂ ತತ್ವಜ್ಞರೂ ಆದ ಅತ್ರೇಯ, ಗೌತಮ, ಕೌಶಿಕ ಆಂಗೀರಸ ಸಗೋತ್ರರೆಲ್ಲರೂ ಕುರುಜಾಂಗಲ ದೇಶದ ಉತ್ತರಭಾಗದಿಂದ ಹೊರಟು ಶತದ್ರವೀ ನದಿಗೆ ಬಂದು ಅಲ್ಲಿ ಸ್ನಾನಮಾಡಿ ಪಿತೃದೇವತೆಗಳನ್ನೂ ತೃಪ್ತಿಪಡಿಸಿ ಅಲ್ಲಿಂದ ಸೂರ್ಯಕಿರಣಗಳಿಂದ ಉತ್ಪನ್ನವಾದ ಪುಣ್ಯಕರವಾದ ಕಿರಣಾ ಎಂಬ ನದಿಗೆ ಬಂದು ಸೇರಿದರು.

ತಸ್ಯಾಂ ಸ್ನಾತ್ವಾ ಚ ದೇವರ್ಷೇ ಸರ್ವ ಏವ ಮಹರ್ಷಯಃ ।
ಐರಾವತೀಂ ಸುಪುಣ್ಯೋದಾಂ ಸ್ನಾತ್ವಾ ಜಗ್ಮುರಥೇಶ್ವರೀಂ ॥ ೬ ॥

ದೇವಿಕಾಯಾ ಜಲೇ ಸ್ನಾತ್ವಾ ಪಯೋಷ್ಣ್ಯಾಶ್ಚೈವ ತಾಪಸಾಃ ।
ಅವತೀರ್ಣಾ ಮುನೇ ಸ್ನಾತುಮಾತ್ರೇಯಾದ್ಯಾಸ್ತು ತಾಂ ನದೀಂ ॥ ೭ ॥

ತತೋ ನಿಮಗ್ನಾ ದದೃಶುಃ ಪ್ರತಿಬಿಂಬಮಥಾತ್ಮನಃ ।
ಅಂತರ್ಜಲೇ ದ್ವಿಜಶ್ರೇಷ್ಠ ಮಹದಾಶ್ಚರ್ಯಕಾರಕಂ ॥ ೮ ॥

ಉನ್ಮಜ್ಜ್ಯಂತಶ್ಚ ದದೃಶುಃ ಪುನರ್ವಿಸ್ಮಿತಮಾನಸಾಃ ।
ತತಃ ಸ್ನಾತ್ವಾ ಸಮುತ್ತೀರ್ಣಾ ಋಷಯಃ ಸರ್ವ ಏವ ಹಿ ॥ ೯ ॥

ಜಗ್ಮುಸ್ತತೋಽಪಿ ತೇ ಬ್ರಹ್ಮನ್ಕಥಯಂತಃ ಪರಸ್ಪರಂ ।
ಚಿಂತಯುತಶ್ಚ ಸತತಂ ಕಿಮೇತದಿತಿ ವಿಸ್ಮಿತಾಃ ॥ ೧೦ ॥

ತತೋ ದೂರಾದಪಶ್ಯಂಸ್ತೇ ವನಷಂಡಂ ಸುವಿಸ್ತೃತಂ ।
ಘನಂ ಘನದಲಶ್ಯಾಮಂ ಖಗಶ್ರಮವಿನಾಶನಂ ॥ ೧೧ ॥

೬-೭. ಅಲ್ಲಿಯೂ ಸ್ನಾನಮಾಡಿ ಆ ಋಷಿಗಳೆಲ್ಲರೂ ಐರಾವತೀ ಎಂಬ ಪುಣ್ಯತೀರ್ಥದಲ್ಲೂ ಸ್ನಾನಮಾಡಿ ಈಶ್ವರೀ ಎಂಬ ದೇವಿಕಾನದಿಗೆ ಬಂದರು. ಆ ದೇವಿಕಾನದಿಯಲ್ಲಿಯೂ ಸ್ನಾನಮಾಡಿ ಅಲ್ಲಿಂದ ಪಯೋಷ್ಣಿ ಎಂಬ ನದಿಗೆ ಬಂದು ಎಲ್ಲ ತಾಪಸರೂ ಸ್ನಾನಕ್ಕಾಗಿ ಅಲ್ಲಿ ಇಳಿದರು.

೮-೧೦. ಸ್ನಾನಕ್ಕಾಗಿ ಆ ನೀರಿನಲ್ಲಿ ಇಳಿದ ಆ ಋಷಿಗಳೆಲ್ಲರೂ ನೀರಿನೊಳಗೆ ತಮ್ಮ ತಮ್ಮ ಪ್ರತಿಬಿಂಬವನ್ನು ಕಂಡರು. ಆಶ್ಚರ್ಯಕರವಾದ ಆ ದೃಶ್ಯವನ್ನು ನೋಡಿ ನೀರಿನಿಂದ ಮೇಲಕ್ಕೆದ್ದು ಪುನಃ ಆ ದೃಶ್ಯವನ್ನೇ ನೋಡಿ ಆಶ್ಚರ್ಯಪಟ್ಟು ಎಲ್ಲರೂ ಸ್ನಾನಮಾಡಿ ಮೇಲಕ್ಕೆ ಬಂದರು. ಅದೇ ವಿಷಯವನ್ನೇ ಆಲೋಚಿಸುತ್ತಾ ಇದೇನಿರಬಹುದೆಂದು ಪರಸ್ಪರವಾಗಿ ಮಾತನಾಡುತ್ತಾ ಆಶ್ಚರ್ಯಪಟ್ಟು ಅಲ್ಲಿಂದ ಮುಂದೆ ಹೊರಟರು.

೧೧-೧೩. ಮುಂದೆ ನಡೆಯುತ್ತಾ ಅವರು ದೂರದಲ್ಲಿದ್ದ ಒಂದು ವಿಸ್ತಾರವಾದ ವನವನ್ನು ಕಂಡರು. ಆ ವನವು ದಟ್ಟವಾಗಿಯೂ ಕಪ್ಪಾದ ಎಲೆಗಳ ತಂಡದಿಂದ

ಅತಿತುಂಗತಯಾ ವ್ಯೋಮ ಆವೃಣ್ವಾನಂ ನರೋತ್ತಮ ।
ವಿಸ್ತೃತಾಭಿರ್ಲತಾಭಿಸ್ತು ಅಂತರ್ಭೂಮಿಂ ಚ ನಾರದ ॥ ೧೨ ॥

ಕಾನನಂ ಪುಷ್ಪಿತೈರ್ವೃಕ್ಷೈಃ ಫಲಿತೈಶ್ಚ ತತಸ್ತತಃ ।
ದಶಾರ್ಧಬಾಣಸದೃಶೈರ್ನಭಸ್ತಾರಾಗಣೈರಿವ ॥ ೧೩ ॥

ತದ್ದೃಷ್ಟ್ವಾ ಕಮಲೈರ್ವ್ಯಾಪ್ತಂ ಪುಂಡರೀಕೈಶ್ಚ ಶೋಭಿತಂ ।
ತದ್ವತ್ಕೋಕನದೈರ್ವ್ಯಾಪ್ತಂ ವನಂ ಪದ್ಮವನಂ ಯಥಾ ॥ ೧೪ ॥

ಪ್ರಜಗ್ಮುಸ್ತುಷ್ಟಿಮತುಲಾಂ ತೇ ಹ್ಲಾದಂ ಪರಮಂ ಯಯುಃ ।
ವಿವಿಶುಃ ಪ್ರೀತಮನಸೋ ಹಂಸಾ ಇವ ಮಹಾಸರಃ ॥ ೧೫ ॥

ತನ್ಮಧ್ಯೇ ದದೃಶುಃ ಪುಣ್ಯಮಾಶ್ರಮಂ ಲೋಕಪೂಜಿತಂ ।
ಚತುರ್ಣಾಂ ಲೋಕಪಾಲಾನಾಂ ವರ್ಗಾಣಾಂ ಮುನಿಸತ್ತಮಾಃ ॥ ೧೬ ॥

ಧರ್ಮಾಶ್ರಮಂ ಪ್ರಾಙ್ಮುಖಂ ತು ಪಲಾಶವಿಟಪಾವೃತಂ ।
ಪ್ರತೀಚ್ಯಭಿಮುಖಂ ಬ್ರಹ್ಮನ್ನಥ ಪುಣ್ಯವನಾವೃತಂ ॥ ೧೭ ॥

ಕೂಡಿ ಪಕ್ಷಿಗಳಿಗೆ ಶ್ರಮನಾಶಕವಾಗಿ ವಿಹಾರಸ್ಥಾನವಾಗಿದ್ದಿತು. ಉನ್ನತವಾದ ಮರಗಳಿಂದ ಆಕಾಶವನ್ನು ಆವರಿಸುತ್ತಲೂ ವಿಸ್ತಾರವಾಗಿ ಹಬ್ಬಿರುವ ಲತೆಗಳಿಂದ ಭೂಮಿಯನ್ನು ಮುಚ್ಚುತ್ತಲೂ ಇದ್ದಿತು. ಹಣ್ಣುಗಳಿಂದಲೂ ಹೂವುಗಳಿಂದಲೂ ರಮ್ಯವಾಗಿ ಮನ್ಮಥನ ಬಾಣಗಳಂತೆ ಇದ್ದ ಆ ಮರಗಳಿಂದ ಆ ಕಾಡೆಲ್ಲವೂ ನಕ್ಷತ್ರಗಳಿಂದ ಆಕಾಶವೆಲ್ಲವೂ ಬೆಳಗುವಂತೆ ಬೆಳಗುತ್ತಿತ್ತು.

೧೪-೧೫. ಕಮಲಗಳಿಂದ ಕೂಡಿ ಬಿಳಿಯಕಮಲಗಳಿಂದಲೂ ರಮ್ಯವಾಗಿದ್ದ ಮತ್ತು ಪದ್ಮವನದಂತೆ ಕೆಂಪಾದ ನೈದಿಲೆಯಿಂದಲೂ ಕೂಡಿದ್ದ ಆ ವನವನ್ನು ನೋಡಿ ಆ ಋಷಿಗಳೆಲ್ಲರೂ ಬಹಳ ಸಂತೋಷದಿಂದ ಆಹ್ಲಾದಪಟ್ಟರು. ಮಹಾಸರೋವರಕ್ಕೆ ಹಂಸಗಳು ಪ್ರವೇಶಿಸುವಂತೆ ಎಲ್ಲರೂ ಸಂತೋಷದಿಂದ ಆ ವನಕ್ಕೆ ಪ್ರವೇಶಿಸಿದರು.

೧೬-೧೮. ಆ ವನದ ಮಧ್ಯದಲ್ಲಿ ಲೋಕಪೂಜ್ಯವೂ ಪುಣ್ಯಕರವೂ ಆಗಿದ್ದ ಆಶ್ರಮವನ್ನು ನೋಡಿದರು ಅದು ನಾಲ್ಕು ಲೋಕಪಾಲಕರಿಂದ ನಿರ್ಮಿತವಾಗಿದ್ದ ನಾಲ್ಕು ಪುರುಷಾರ್ಥಗಳಿಗೆ ಸೇರಿದುದಾಗಿದ್ದಿತು. ಅವುಗಳಲ್ಲಿ ಮುತ್ತುಗದ ಮರಗಳಿಂದ ಸುತ್ತುವರಿಯಲ್ಪಟ್ಟು ಪೂರ್ವಾಭಿಮುಖವಾಗಿರುವ ಧರ್ಮಾಶ್ರಮ. ಪುಣ್ಯಕರವಾದ ಇತರ ಮರಗಳಿಂದ ಸುತ್ತುವರಿಯಲ್ಪಟ್ಟು ಪೂರ್ವಾಭಿಮುಖವಾಗಿರುವ ಅರ್ಥದ

ದಕ್ಷಿಣಾಭಿಮುಖಂ ಕಾಮ್ಯಂ ರಂಭಾಶೋಕವನಾವೃತಂ ।
ಉದಙ್ಮುಖಂ ಚ ಮೋಕ್ಷಸ್ಯ ಶುದ್ಧಸ್ಫಟಿಕಸನ್ನಿಭಂ ॥ ೧೮ ॥

*ಕೃತಾಂ ತೇ ತ್ವಾಶ್ರಮಿಣೋ ಮೋಕ್ಷಕಾಮಸ್ತ್ರೇತಾಯುಗೇ ಸ್ಥಿತಃ ।
ಆಶ್ರಮ್ಯರ್ಥೋ ದ್ವಾಪರಂ ತೇ ತಿಷ್ಯಾಂ ತೇ ಧರ್ಮ ಆಶ್ರಮಿಣಿ ॥ ೧೯ ॥

ತಮಾಶ್ರಮಂ ಹಿ ಮುನಯೋ ದೃಷ್ಟ್ವಾ ತ್ರೇಯಾಸ್ತತೋವ್ಯಯಾಃ ।
ತತ್ರೈವ ಹಿ ರತಿಂ ಚಕ್ರುರಖಂಡೇ ಸಲಿಲಾಪ್ಲುತೇ ॥ ೨೦ ॥

ಧರ್ಮಾದ್ಯೋ ಭಗವಾನ್ವಿಷ್ಣುರಖಂಡ ಇತಿ ವಿಶ್ರುತಃ ।
ಚತುರ್ಮೂರ್ತಿರ್ಜಗನ್ನಾಥಃ ಪೂರ್ವಮೇವ ಪ್ರತಿಷ್ಠಿತಃ ॥ ೨೧ ॥

ಆಶ್ರಮ. ಮತ್ತು ಬಾಳೆ ಮತ್ತು ಅಶೋಕವನಗಳಿಂದ ಕೂಡಿದ ರಮ್ಯವಾದ ದಕ್ಷಿಣಾಭಿಮುಖವಾದ ಕಾಮದ ಆಶ್ರಮ. ಶುದ್ಧಸ್ಫಟಿಕದಂತೆ ಸ್ವಚ್ಛವಾದ ಉತ್ತರಾಭಿಮುಖವಾದ ಮೋಕ್ಷಾಶ್ರಮ.

೧೯. ಕೃತಯುಗದ ಕೊನೆಯವರಿಗೂ ಮೋಕ್ಷಕ್ಕೆ ಸಾಧಕವಾದ ಮೋಕ್ಷಾಶ್ರಮವೂ ತ್ರೇತಾಯುಗದ ಕೊನೆಯವರಿಗೂ ಕಾಮಕ್ಕೆ ಸಾಧಕವಾದ ಕಾಮಾಶ್ರಮವೂ ದ್ವಾಪರಯುಗದ ಕೊನೆಯವರಿಗೆ ಅರ್ಥಕ್ಕೆ ಸಾಧಕವಾದ ಅರ್ಥಾಶ್ರಮವೂ ಕಲಿಯ ಕೊನೆಯವರಿಗೂ ಧರ್ಮಕ್ಕೆ ಸಾಧಕವಾದ ಧರ್ಮಾಶ್ರಮವೂ ಅಲ್ಲಿದ್ದುವು.

೨೦-೨೨. ಆತ್ರೇಯರೇ ಮೊದಲಾದ ಮಹರ್ಷಿಗಳು ರಮ್ಯವಾಗಿದ್ದ ಆ ಆಶ್ರಮಗಳನ್ನು ನೋಡಿ ಅಖಂಡವಾದ ತೀರ್ಥದಿಂದಕೂಡಿದ್ದ ಆ ಕ್ಷೇತ್ರದಲ್ಲಿಯೇ ಬಹಳ ಪ್ರೀತಿಯುಳ್ಳವರಾದರು. ಧರ್ಮವೇ ಮೊದಲಾದ ಪುರುಷಾರ್ಥಗಳ ಅಖಂಡ ಸ್ವರೂಪನಾದ ಮಹಾವಿಷ್ಣುವೇ ಅಖಂಡನೆಂದು ಪ್ರಸಿದ್ಧನಾಗಿರುವುದರಿಂದಲೂ ಅಂತಹ ಜಗತ್ಪತಿಯಾದ ವಿಷ್ಣುವು (ಧರ್ಮಾರ್ಥಕಾಮಮೋಕ್ಷಗಳೆಂಬ) ತನ್ನ ನಾಲ್ಕು ಮೂರ್ತಿಗಳೊಡನೆ ಮೊದಲೇ ಅಲ್ಲಿ ಸ್ಥಾಪಿತನಾಗಿರುವುದರಿಂದಲೂ ಅಖಂಡವಾದ ಆ ಕ್ಷೇತ್ರದಲ್ಲಿ

---

* ಇಲ್ಲಿ ಶ್ಲೋಕವು ಈರೀತಿ ಇರಬೇಕೆಂದು ತೋರುತ್ತದೆ.

ಕೃತಾಂತೆ ತ್ವಾಶ್ರಮೋ ಮೋಕ್ಷಃ ಕಾಮಃ ತ್ರೇತಾಯುಗೆ ಸ್ಥಿತಃ ।
ಆಶ್ರಮೋರ್ಥೋ ದ್ವಾಪರಾಂತೆ ತಿಷ್ಯಾಂತೆ ಧರ್ಮ ಆಶ್ರಮಃ ॥

ತಮರ್ಚಯಂತಿ ಋಷಯೋ ಯೋಗಾತ್ಮಾನೋ ಬಹುಶ್ರುತಾಃ ।
ಶುಶ್ರೂಷಯಾ ಚ ತಪಸಾ ಬ್ರಹ್ಮಚರ್ಯೇಣ ನಾರದ ॥ ೨೨ ॥

ಏವಂ ತೇ ನ್ಯವಸಂಸ್ತತ್ರ ಸಮೇತಾ ಭಾರ್ಗವೇಣ ಹಿ ।
ಅಸುರೇಭ್ಯಸ್ತದಾ ಭೀತಾಸ್ತ್ವಾಶ್ರಿತಾಃ ಖಂಡಪರ್ವತಾಃ ॥ ೨೩ ॥

ತಥಾನ್ಯೇ ಬ್ರಾಹ್ಮಣಾ ಬ್ರಹ್ಮನ್ನಶ್ಮಕುಟ್ಟಾ ಮರೀಚಿಪಾಃ ।
ಸ್ನಾತ್ವಾ ಜಲೇ ಹಿ ಕಾಲಿಂದ್ಯಾಃ ಪ್ರಜಗ್ಮುರ್ದಕ್ಷಿಣಾಮುಖಾಃ ॥ ೨೪ ॥

ಅವಂತೀ ವಿಷಯಂ ಪ್ರಾಪ್ಯ ವಿಷ್ಣುಮಾಸಾದ್ಯ ಸಂಸ್ಥಿತಾಃ ।
ವಿಷ್ಣೋರಪಿ ಪ್ರಸಾದೇನ ದುಷ್ಪ್ರವೇಶಂ ಮಹಾಸುರೈಃ ॥ ೨೫ ॥

ವಾಲಖಿಲ್ಯಾದಯೋ ಜಗ್ಮುರವಶಾ ದಾನವಾದ್ಭಯಾತ್ ।
ರುದ್ರಕೋಟಿಂ ಸಮಾಶ್ರಿತ್ಯ ಸ್ಥಿತಾಸ್ತೇ ಬ್ರಹ್ಮಚಾರಿಣಃ ॥ ೨೬ ॥

ಅವರು ಸಂತುಷ್ಟರಾಗಿದ್ದರು. ಅಲ್ಲಿಯೇ ನೆಲಸಿದ ಆ ಋಷಿಗಳು ಯೋಗಿಗಳಾಗಿಯೂ ಶಾಸ್ತ್ರತತ್ವವನ್ನು ತಿಳಿದವರಾಗಿಯೂ ಇದ್ದುದರಿಂದ ಸೇವೆಯಿಂದಲೂ ತಪಸ್ಸಿನಿಂದಲೂ ಬ್ರಹ್ಮಚರ್ಯದಿಂದಲೂ ಆ ಅಖಂಡಮೂರ್ತಿಯನ್ನೇ ಅಲ್ಲಿ ಪೂಜಿಸುತ್ತಿದ್ದರು.

೨೩-೨೫. ಹೀಗೆಯೇ ಆ ತಪಸ್ವಿಗಳೆಲ್ಲರೂ ಭಾರ್ಗವನೊಡನೆ ಅಲ್ಲಿ ವಾಸ ಮಾಡುತ್ತಾ ಆಗಾಗ ಅಸುರರಿಂದ ಭಯವುಂಟಾದಲ್ಲಿ ಸಣ್ಣಸಣ್ಣ ಪರ್ವತಗಳಲ್ಲಿ ಅಡಗಿಕೊಳ್ಳುತ್ತಿದ್ದರು. ಮತ್ತೆ ಕೆಲವು ಬ್ರಾಹ್ಮಣರು ಕಲ್ಲುಕುಟುಕರಂತೆಯೂ ಮತ್ತೆ ಕೆಲವರು ಸೂರ್ಯಕಿರಣಗಳನ್ನು ಪಾನಮಾಡುತ್ತಲೂ ಕೆಲವರು ಕಾಲಿಂದೀನದಿಯಲ್ಲಿ ಸ್ನಾನಮಾಡಿ ಅಲ್ಲಿಂದ ದಕ್ಷಿಣದಿಕ್ಕಿಗೂ ಹೊರಟರು. ಅವರು ವಿಷ್ಣುವಿನ ಅನುಗ್ರಹ ದಿಂದ ಅಸುರೋತ್ತಮರಿಗೂ ಪ್ರವೇಶಿಸಲಶಕ್ಯವಾಗಿದ್ದ ಅವಂತೀದೇಶಕ್ಕೆ ಹೋಗಿ ವಿಷ್ಣುವನ್ನು ಸೇವಿಸುತ್ತಾ ಅಲ್ಲಿಯೇ ನಿಂತರು.

೨೬-೨೮. ವಾಲಖಿಲ್ಯರೇ ಮೊದಲಾದವರು ದಾನವರಿಂದ ಭಯಪಟ್ಟು ಪರಾ ಧೀನರಾಗಿ ರುದ್ರಕೋಟಿಕ್ಷೇತ್ರದಲ್ಲಿ ಹೋಗಿ ಸೇರಿ ಬ್ರಹ್ಮಚರ್ಯದಲ್ಲಿ ನಿರತರಾದರು.

ಏವಂ ಗತೇಷು ವಿಪ್ರೇಷು ಗೌತಮಾಂಗಿರಸಾದಿಷು ।
ಶುಕ್ರಸ್ತು ಭಾರ್ಗವಾನ್ಸರ್ವಾನ್ನಿತ್ಯೇ ಯಜ್ಞವಿಧೌ ಮುನೇ ॥ ೨೭ ॥

ಅಧಿಷ್ಠಿತೋ ಭಾರ್ಗವೇಣ ಮಹಾಯಜ್ಞೇಽಮಿತದ್ಯುತೇಃ ।
ಯಜ್ಞದೀಕ್ಷಾಂ ಬಲೇಃ ಶುಕ್ರಶ್ಚಕಾರ ವಿಧಿನಾ ಸ್ವಯಂ ॥ ೨೮ ॥

ಶ್ವೇತಾಂಬರಧರೋ ದೈತ್ಯಃ ಶ್ವೇತಮಾಲ್ಯಾನುಲೇಪನಃ ।
ಮೃಗಾಜಿನಾಸ್ತೃತಪೃಷ್ಠೋ ಬರ್ಹಪತ್ರವಿಚಿತ್ರಕಃ ॥ ೨೯ ॥

ಸಮಾಸ್ತೇ ವಿತತೇ ಯಜ್ಞೇ ಸದಸ್ಯೈರಭಿಸಂವೃತಃ ।
ಹಯಗ್ರೀವಕ್ಷುರಾದ್ಯೈಸ್ತು ಮಯಬಾಣಪುರೋಗಮೈಃ ॥ ೩೦ ॥

ಪತ್ನೀ ವಿಂಧ್ಯಾವಲೀ ತಸ್ಯ ದೀಕ್ಷಿತಾ ಯಜ್ಞಕರ್ಮಣಿ ।
ಲಲನಾನಾಂ ಸಹಸ್ರಸ್ಯ ಪ್ರಧಾನಮೃಷಿಕನ್ಯಕಾ ॥ ೩೧ ॥

ಹೀಗೆ ಭಾರ್ಗವಾಂಗಿರಸಾದಿಗಳು ಅಲ್ಲಲ್ಲಿ ಬಂದು ಸೇರಿದುದನ್ನು ತಿಳಿದು ಶುಕ್ರಾಚಾರ್ಯನು ಭಾರ್ಗವರೆಲ್ಲರನ್ನೂ ಕರೆದು ನಿತ್ಯವಾದ ಮಹಾಯಜ್ಞದಲ್ಲಿ ಪ್ರೇರಿಸಿ ಭಾರ್ಗವನೊಡನೆ ತಾನೂ ನಿಯಾಮಕನಾಗಿ ನಿಂತು ತೇಜಸ್ವಿಯಾದ ಬಲಿಚಕ್ರವರ್ತಿಗೆ ತಾನೇ ಯಜ್ಞದೀಕ್ಷೆಯನ್ನು ಕೊಟ್ಟನು.

೨೯-೩೦. ಯಜ್ಞದೀಕ್ಷೆಯನ್ನು ಹೊಂದಿದ ಬಲಿಚಕ್ರವರ್ತಿಯು ಬಿಳಿಯ ವಸ್ತ್ರವನ್ನುಟ್ಟು ಬಿಳಿಯ ಹೂವಿನ ಮಾಲೆ ಮತ್ತು ಗಂಧಗಳಿಂದ ಭೂಷಿತನಾಗಿ ಕೃಷ್ಣಾಜಿನದಲ್ಲಿ ಕುಳಿತು ನವಿಲುಗರಿಗಳ ಹಣೆಬೊಟ್ಟಿನಿಂದ ಅಲಂಕೃತನಾಗಿ ಹಯಗ್ರೀವ, ಕ್ಷುರ, ಮಯ, ಬಾಣ ಮೊದಲಾದ ಸದಸ್ಯರುಗಳಿಂದ ಕೂಡಿ ವಿಸ್ತಾರವಾದ ಆ ಯಜ್ಞಭೂಮಿಯ ಮಧ್ಯದಲ್ಲಿ ಕುಳಿತನು.

೩೧-೩೨. ಆ ಬಲಿಚಕ್ರವರ್ತಿಯ ಪತ್ನಿಯಾದ ವಿಂಧ್ಯಾವಲೀ ಎಂಬ ಋಷಿಕನ್ಯೆಯು ಪತಿಯ ಯಜ್ಞದಲ್ಲಿ ತಾನೂ ದೀಕ್ಷಾನಿಯಮಹೊಂದಿ ಸಹಸ್ರ ಸ್ತ್ರೀಪರಿವಾರದೊಡನೆ ಯಜ್ಞಶಾಲೆಯಲ್ಲಿ ಕುಳಿತಳು. ಶುಕ್ರನೂ ಸಹ ಸರ್ವಲಕ್ಷಣೋಪೇತವಾದ

ಶುಕ್ಲೇನಾಶ್ವಃ ಶ್ವೇತವರ್ಣೋ ಮಧುಮಾಸೇ ಸುಲಕ್ಷಣಃ ।
ಮಹೀಂ ಚರಿತುಮುತ್ಸೃಷ್ಟಸ್ತಾರಕಾಕ್ಷಸ್ತ್ವಗಾಚ್ಚ ತಂ ॥ ೩೨ ॥

ಏವಮಶ್ವೇ ಸಮುತ್ಸೃಷ್ಟೇ ವಿತತೇ ಯಜ್ಞಕರ್ಮಣಿ ।
ಗತೇ ಚ ಮಾಸತ್ರಿತಯೇ ಹ್ರಿಯಮಾಣೇ ಚ ಪಾವಕೇ ॥ ೩೩ ॥

ಪೂಜ್ಯಮಾನೇಷು ದೈತ್ಯೇಷು ಮಿಥುನಸ್ಥೇ ದಿವಾಕರೇ ।
ಸುಷುವೇ ದೇವಜನನೀ ಮಾಧವಂ ವಾಮನಾಕೃತಿಂ ॥ ೩೪ ॥

ಸಂಜಾತಮಾತ್ರಂ ಭಗವಂತಮೀಶಂ
ನಾರಾಯಣಂ ಲೋಕಪತಿಂ ಪುರಾಣಂ ।
ಬ್ರಹ್ಮಾ ಸಮಭ್ಯೇತ್ಯ ಸಮಂ ಮಹರ್ಷಿಭಿಃ
ಸ್ತೋತ್ರಂ ಜಗಾದಾಽಥ ಸಮಂ ಮಹರ್ಷೇ ॥ ೩೫ ॥

ನಮೋಽಸ್ತು ತೇ ಮಾಧವ ಸತ್ತ್ವಮೂರ್ತೇ
ನಮೋಽಸ್ತು ತೇ ಸಾತ್ವತ ವಿಶ್ವರೂಪ ।

ಬಿಳಿಯ ಕುದುರೆಯನ್ನು ಭೂಮಿಯನ್ನು ಸಂಚರಿಸಲು ಚೈತ್ರಮಾಸದಲ್ಲಿ ಬಿಟ್ಟನು. ತಾರಕಾಕ್ಷನೆಂಬ ದೈತ್ಯನು ಆ ಯಜ್ಞಾಶ್ವದ ರಕ್ಷಣೆಗಾಗಿ ಅದನ್ನು ಹಿಂಬಾಲಿಸಿ ಹೊರಟನು.

೩೩-೩೪. ಈ ರೀತಿಯಾಗಿ ಯಜ್ಞಾಶ್ವವನ್ನು ಬಿಟ್ಟೊಡನೆಯೇ ಯಜ್ಞಕರ್ಮಗಳೆಲ್ಲವೂ ಯಥಾವಿಧಿಯಾಗಿ ಆರಂಭಿಸಲ್ಪಟ್ಟವು. ಅಗ್ನಿಯ ಆಹರಣ ಮತ್ತು ಹೋಮ ಹವನಾದಿಗಳಿಂದಲೂ ಸದಸ್ಯರಾಗಿದ್ದ ದೈತ್ಯಶ್ರೇಷ್ಠರ ಪೂಜಾವಿಧಿಗಳಿಂದಲೂ ಮಹೋತ್ಸವದಂತೆ ಮೂರು ತಿಂಗಳು ಕಳೆದುವು. ಅನಂತರ ಸೂರ್ಯನು ಮಿಥುನರಾಶಿಯಲ್ಲಿರುವ ಶುಭಸಮಯದಲ್ಲಿ ದೇವಮಾತೆಯಾದ ದಿತಿಯು ವಾಮನಾಕಾರವುಳ್ಳ ಲಕ್ಷ್ಮೀಪತಿಯನ್ನು ಪ್ರಸವಿಸಿದಳು.

೩೫-೩೬. ಲೋಕನಾಯಕನಾಗಿಯೂ ಶಾಶ್ವತಮೂರ್ತಿಯಾಗಿಯೂ ಪೂಜ್ಯನಾಗಿಯೂ ಇರುವ ಆ ನಾರಾಯಣನು ಅವತರಿಸಿದೊಡನೆಯೇ ಚತುರ್ಮುಖನು ಮಹರ್ಷಿಗಳೊಡನೆ ಅಲ್ಲಿಗೆ ಬಂದು ಈ ರೀತಿಯಾಗಿ ಸ್ತೋತ್ರಮಾಡಿದನು. ಎಲೈ ಸತ್ವಮೂರ್ತಿಯಾದ ಮಾಧವನೇ ನಿನಗೆ ನಮಸ್ಕಾರಗಳು. ವಿಶ್ವಮೂರ್ತಿಯೇ

ನಮೋಽಸ್ತು ತೇ ಶತ್ರುವನೇಂಧನಾಗ್ನೇ
ನಮೋಽಸ್ತು ತೇ ಪಾಪಮಹಾದವಾಗ್ನೇ ॥ ೩೬ ॥

ನಮೋಽಸ್ತು ಪುಂಡರೀಕಾಕ್ಷ ನಮಸ್ತೇ ವಿಶ್ವಭಾವನ ।
ನಮಸ್ತೇ ಜಗದಾಧಾರ ನಮಸ್ತೇ ಪುರುಷೋತ್ತಮ. ॥ ೩೭ ॥

ನಾರಾಯಣ ಜಗನ್ಮೂರ್ತೇ ಜಗನ್ನಾಥ ಗದಾಧರ ।
ಪೀತವಾಸಃ ಶ್ರಿಯಃ ಕಾಂತ ಜನಾರ್ದನ ನಮೋಽಸ್ತು ತೇ ॥ ೩೮ ॥

ಭವಾಂಸ್ತ್ರಾತಾ ಚ ಗೋಪ್ತಾ ಚ ವಿಶ್ವಾತ್ಮಾ ಸರ್ವಗೋಽವ್ಯಯಃ ।
ಸರ್ವಧಾರಿನ್ ಧರಾಧಾರಿನ್ರೂಪಧಾರಿನ್ನಮೋಽಸ್ತು ತೇ ॥ ೩೯ ॥

ವರ್ಧಿಷ್ಣೋ ವರ್ಧಿತಾಽಶೇಷ ತ್ರೈಲೋಕ್ಯ ಸುರಪೂಜಿತ ।
ಕುರುಷ್ವ ತ್ವಂ ದೇವಪತೇ ಮಘೋನೋಽಶ್ರುಪ್ರಮಾರ್ಜನಂ ॥ ೪೦ ॥

ಶಾಶ್ವತಮೂರ್ತಿಯೇ ನಿನಗೆ ನಮಸ್ಕಾರಗಳು. ಶತ್ರುಗಳ ಸಮೂಹವೆಂಬ ವನಕ್ಕೆ ದಾವಾಗ್ನಿಯಂತೆ ನಾಶಕನಾಗಿರುವ ನಿನಗೆ ಅನಂತನಮಸ್ಕಾರಗಳು. ಎಲ್ಲಾ ಪಾಪಗಳಿಗೂ ಕಾಡುಗಿಚ್ಚಿನಂತೆ ನಾಶಕನಾದ ನಿನಗೆ ಅನೇಕ ನಮಸ್ಕಾರಗಳು.

೩೭-೩೮. ಎಲೈ ಪುಂಡರೀಕಾಕ್ಷನೇ ವಿಶ್ವೋತ್ಪತ್ತಿಕಾರಕನೇ ನಿನಗೆ ಅನಂತ ನಮಸ್ಕಾರಗಳು. ಜಗತ್ತಿಗೆ ಆಧಾರನಾಗಿಯೂ ಇರುವ ಪುರುಷೋತ್ತಮನೇ ನಿನಗೆ ಅನಂತ ನಮಸ್ಕಾರಗಳು. ಎಲೈ ನಾರಾಯಣನೇ ಜಗನ್ಮೂರ್ತಿಯೇ ಜಗತ್ಪತಿಯೇ ಗದಾಧರನೇ ಪೀತಾಂಬರಧಾರಿಯೇ ಲಕ್ಷ್ಮೀಪತಿಯೇ ಜನಾರ್ದನ ಮೂರ್ತಿಯೇ ನಿನಗೆ ಅನಂತ ನಮಸ್ಕಾರಗಳು.

೩೯. ನೀನೇ ಸರ್ವಜಗತ್ತಿಗೂ ಅನಿಷ್ಟನಿವಾರಕನೂ ಇಷ್ಟಪ್ರಾಪಕನೂ ಆಗಿದ್ದೀಯೆ. ಹಾಗೆಯೇ ವಿಶ್ವಾತ್ಮಕನಾಗಿಯೂ ಸರ್ವವ್ಯಾಪಕನಾಗಿಯೂ ಇರುವ ನೀನು ಸರ್ವಧಾರಕನಾಗಿಯೂ ಭೂಧಾರಕನಾಗಿಯೂ ನೃಪಧಾರಕನಾಗಿಯೂ ಇರುವೆ, ನಿನಗೆ ಅನಂತ ನಮಸ್ಕಾರಗಳು.

೪೦-೪೧. ಅಭಿವೃದ್ಧಿಹೊಂದುವವನೂ ಮೂರುಲೋಕದ ಅಭಿವೃದ್ಧಿಯನ್ನು ಉಂಟುಮಾಡಿರುವವನೂ ಸುರವಂದ್ಯನೂ ಆದ ನೀನು ಸರ್ವದೇವತೆಗಳಿಗೂ ಅಧಿಪತಿಯಾಗಿರುವುದರಿಂದ ನಿನ್ನ ಆಶ್ರಿತನಾಗಿರುವ ಇಂದ್ರನ ಕಣ್ಣೀರನ್ನು ನೀನೇ ಹೋಗ

ತ್ವಂ ಧಾತಾ ಚ ವಿಧಾತಾ ಚ ಸಂಹರ್ತಾ ತ್ವಂ ಮಹೇಶ್ವರ ।
ಮಹಾಲಯೋ ಮಹಾಯೋಗೀ ಯೋಗಶಾಯಿನ್ ನಮೋಽಸ್ತು ತೇ॥ ೪೧ ॥

ಇತ್ಥಂ ಸ್ತುತೋ ಜಗನ್ನಾಥಃ ಸರ್ವಾತ್ಮಾ ಸರ್ವಗೋ ಹರಿಃ ।
ಪ್ರೋವಾಚ ಭಗವಾನ್ಮಹ್ಯಂ ಕುರೂಪನಯನಂ ವಿಭೋ ॥ ೪೨ ॥

ತತಶ್ಚಕಾರ ದೇವಸ್ಯ ಜಾತಕರ್ಮಾದಿಕಾಃ ಕ್ರಿಯಾಃ ।
ಭಾರದ್ವಾಜೋ ಮಹಾತೇಜಾ ಬಾರ್ಹಸ್ಪತ್ಯಸ್ತಪೋಧನಃ ॥ ೪೩ ॥

ವ್ರತಬಂಧಂ ತಥೇಶಸ್ಯ ಕೃತವಾನ್ಸರ್ವಶಾಸ್ತ್ರವಿತ್ ।
ತತೋ ದದುಃ ಪ್ರೀತಿಯುತಾ ಸರ್ವ ಏವ ಯಥಾಕ್ರಮಂ ॥ ೪೪ ॥

ಯಜ್ಞೋಪವೀತಂ ಪುಲಹಃ ಪುಲಸ್ತ್ಯಃ ಸಿತವಾಸಸೀ ।
ಮೃಗಾಜಿನಂ ಕುಂಭಯೋನಿರ್ಭರದ್ವಾಜಸ್ತು ಮೇಖಲಾಂ ॥ ೪೫ ॥

ಪಾಲಾಶಮದದಾದ್ದಂಡಂ ಮರೀಚಿರ್ಬ್ರಹ್ಮಣಃ ಸುತಃ ।
ಅಕ್ಷಸೂತ್ರಂ ವಾರುಣಿಸ್ತು ಕೌಶಚೀರಮಥಾಂಗಿರಾಃ ॥ ೪೬ ॥

ಲಾಡಿಸಬೇಕು. ಸರ್ವೇಶ್ವರನಾದ ನೀನೇ ಧರಿಸುವವನಾಗಿಯೂ ಸೃಷ್ಟಿಕರ್ತನಾಗಿಯೂ ಸಂಹಾರಕನಾಗಿಯೂ ಆಗಿರುವೆ. ಮಹಾ ಪ್ರಲಯರೂಪನೂ ಯೋಗಿಯೂ ಯೋಗಶಾಯಿಯೂ ಆಗಿರುವ ನಿನಗೆ ಅನಂತ ನಮಸ್ಕಾರಗಳು.

೪೨-೪೪. ಹೀಗೆ ಚತುರ್ಮುಖನಿಂದ ಸ್ತುತಿಸಲ್ಪಟ್ಟ ಸರ್ವಾತ್ಮನಾಗಿಯೂ ಜಗತ್ಪತಿಯಾಗಿಯೂ ಇರುವ ಹರಿಯು ಪ್ರಭುವೇ ನನಗೆ ಉಪನಯನವನ್ನು ಮಾಡು ಎಂದುಪ್ರಾರ್ಥಿಸಲು ಬೃಹಸ್ಪತಿಪುತ್ರನಾಗಿಯೂ ತೇಜಸ್ವಿಯಾಗಿಯೂ ಇದ್ದ ಭಾರದ್ವಾಜ ಮುನಿಯು ಆ ಹರಿಗೆ ಜಾತಕರ್ಮಾದಿ ಸಂಸ್ಕಾರಗಳನ್ನೆಲ್ಲಾ ನೆರವೇರಿಸಿದನು. ಹಾಗೆಯೇ ಸರ್ವಶಾಸ್ತ್ರಜ್ಞನಾದ ಆ ಮುನಿಯು ಬ್ರಹ್ಮಚರ್ಯವ್ರತನಿಯಮವನ್ನೂ ನೆರವೇರಿಸಿದನು. ಆಗ ಅಲ್ಲಿದ್ದ ಮಹರ್ಷಿಗಳೆಲ್ಲರೂ ಸಂತೋಷದಿಂದ ಹರಿಯ ಬ್ರಹ್ಮಚರ್ಯವ್ರತಕ್ಕೆ ತಕ್ಕ ಈ ಉಪಕರಣಗಳನ್ನೆಲ್ಲಾ ಅರ್ಪಿಸಿದರು.

೪೫-೪೬. ಪುಲಹಮಹರ್ಷಿಯು ಯಜ್ಞೋಪವೀತವನ್ನೂ ಪುಲಸ್ತ್ಯನು ಬಿಳಿಯ ಯುಗ್ಮವಸ್ತ್ರವನ್ನೂ ಅಗಸ್ತ್ಯನು ಕೃಷ್ಣಾಜಿನವನ್ನೂ ಭರದ್ವಾಜನು ಮೌಂಜಿಯನ್ನೂ ಬ್ರಹ್ಮಪುತ್ರನಾದ ಮರೀಚಿಯು ಮುತ್ತುಗದ ದಂಡವನ್ನೂ ವರುಣಪುತ್ರನು ಅಕ್ಷಮಾಲೆಯನ್ನೂ ಅಂಗೀರಸನು ದರ್ಭಾಸನ ಮತ್ತು ನಾರುಮಡಿಗಳನ್ನೂ

ಛತ್ರಂ ದದೌ ದ್ಯುರಾಜಶ್ಚ ಉಪಾನದ್ಯುಗಲಂ ಭೃಗುಃ ।
ಕಮಂಡಲುಂ ಬೃಹತ್ತೇಜಾಃ ಪ್ರಾದಾದ್ವಿಷ್ಣೋರ್ಬೃಹಸ್ಪತಿಃ ॥ ೪೭ ॥

ಏವಂ ಕೃತೋಪನಯನೋ ಭಗವಾನ್ಭೂತಭಾವನಃ ।
ಸಂಸ್ತೂಯಮಾನೋ ಋಷಿಭಿರ್ವೇದಾನ್ಸಾಂಗಾನಧೀತವಾನ್ ॥ ೪೮ ॥

ಭಾರದ್ವಾಜಾತ್ಸಾಂಗಿರಸಾತ್ಸಾಮವೇದಂ ಮಹಾಸ್ವರಂ ।
ಮಹದಾಖ್ಯಾನಸಂಯುಕ್ತಂ ಗಾಂಧರ್ವಸಹಿತಂ ಮುನೇ ॥ ೪೯ ॥

ಮಾಸೇನೈಕೇನ ಭಗವಾನ್ ಜ್ಞಾತಶ್ರುತಿಮಹಾರ್ಣವಃ ।
ಲೋಕಾಚಾರಪ್ರವೃತ್ತ್ಯರ್ಥಮಭೂತ್ಸ ತು ವಿಶಾರದಃ ॥ ೫೦ ॥

ಸರ್ವಶಾಸ್ತ್ರೇಷು ನೈಪುಣ್ಯಂ ಗತ್ವಾ ದೇವೋऽಕ್ಷಯೋऽವ್ಯವಃ ।
ಪ್ರೋವಾಚ ಬ್ರಾಹ್ಮಣಶ್ರೇಷ್ಠಂ ಭಾರದ್ವಾಜಮಿದಂ ವಚಃ ॥ ೫೧ ॥

ಕೊಟ್ಟರು. ಸೂರ್ಯನು ಛತ್ರಿಯನ್ನೂ ಭೃಗುಋಷಿಯು ಪಾದುಕಾಯುಗ್ಮವನ್ನೂ ತೇಜಸ್ವಿಯಾದ ಬೃಹಸ್ಪತಿಯು ಕಮಂಡಲುವನ್ನೂ ಅರ್ಪಿಸಿದರು.

೪೮-೫೦. ಈ ರೀತಿ ಉಪನಯನದಿಂದ ಸಂಸ್ಕಾರಹೊಂದಿದ ಜಗತ್ಕಾರಣಮೂರ್ತಿಯಾದ ಆ ಪರಮಾತ್ಮನು ಎಲ್ಲ ಋಷಿಗಳ ಸ್ತುತಿಗೆ ಪಾತ್ರನಾಗಿ ಸಾಂಗಗಳಾದ ಎಲ್ಲಾ ವೇದಗಳನ್ನೂ ಅಧ್ಯಯನಮಾಡಿದನು. ಅಂಗೀರಸ ಮತ್ತು ಭರದ್ವಾಜ ಇವರುಗಳಿಂದ ಮಹಾಸ್ವರದಿಂದ ಕೂಡಿದ ಸಾಮವೇದವನ್ನು ಗಾಂಧರ್ವಸಹಿತವಾದ ಆಖ್ಯಾನದೊಡನೆ ಅಧ್ಯಯನಮಾಡಿದನು. ಆ ಮಹಾಪುರುಷನು ಸರ್ವಜ್ಞನಾಗಿದ್ದರೂ ವರ್ಣಾಶ್ರಮೋಚಿತವಾದ ಆಚಾರಗಳನ್ನು ಆಚರಿಸಿ ಲೋಕಕ್ಕೆ ತೋರಿಸಲು ಒಂದೇ ಒಂದು ತಿಂಗಳಿನಲ್ಲಿ ವೇದಮಹಾಸಮುದ್ರವೆಲ್ಲವನ್ನೂ ತಿಳಿದು ಪಂಡಿತೋತ್ತಮನಾಗಿ ಪರಿಣಮಿಸಿದನು.

೫೧-೫೨. ಆಗ ಅಕ್ಷಯಮೂರ್ತಿಯಾದ ಆ ಪರಮಾತ್ಮನು ಸರ್ವಶಾಸ್ತ್ರಗಳಲ್ಲೂ ನೈಪುಣ್ಯವನ್ನು ಹೊಂದಿ ಬ್ರಾಹ್ಮಣೋತ್ತಮನಾದ ಭಾರದ್ವಾಜನನ್ನು ಕುರಿತು

ಶ್ರೀ ವಾಮನ ಉವಾಚ

ಬ್ರಹ್ಮನ್ವ್ರಜಾಮಿ ದೇಹ್ಯಾಜ್ಞಾಂ ಕುರುಕ್ಷೇತ್ರಂ ಮಹೋದಯಂ ।
ತತ್ರ ದೈತ್ಯಪತೇಃ ಪುಣ್ಯೋ ಹಯಮೇಧಃ ಪ್ರವರ್ತತೇ ॥ ೫೨ ॥

ಸಮಾವಿಷ್ಟಾನಿ ಪಶ್ಯತ್ವಂ ತೇಜಾಂಸಿ ಪೃಥಿವೀತಲೇ ।
ಯೇ ಸಂವಿಧಾನಾಃ ಸತತಂ ಮದಂಶಾಃ ಪುಣ್ಯವರ್ಧನಾಃ ॥
ತೇನಾಽಹಂ ಪ್ರತಿಜಾನಾಮಿ ಕುರುಕ್ಷೇತ್ರಂ ಗತೋ ಬಲಿಃ ॥ ೫೩ ॥

ಹೇಳುತ್ತಾನೆ. ವಾಮನನು ಹೇಳುತ್ತಾನೆ. ಬ್ರಾಹ್ಮಣೋತ್ತಮನೇ ಪುಣ್ಯಕರವಾದ ಕುರುಕ್ಷೇತ್ರಕ್ಕೆ ನಾನು ಹೋಗಬೇಕೆಂದಿರುವೆನು. ನನಗೆ ಅಪ್ಪಣೆಯನ್ನು ಕೊಡು. ಅಲ್ಲಿ ದೈತ್ಯಪತಿಯಾದ ಬಲಿಚಕ್ರವರ್ತಿಯ ಪುಣ್ಯಕರವಾದ ಅಶ್ವಮೇಧಯಾಗವು ನಡೆಯುತ್ತಿದೆ.

೫೩. ಪುಣ್ಯಾಭಿವೃದ್ಧಿಗೆ ಕಾರಣಗಳಾದ (ಯಾವಾಗಲೂ ನನ್ನ ಆರಾಧನೆಗೆ ಸಾಧನವಾದುದರಿಂದ) ನನ್ನ ಅಂಶಗಳಾಗಿರುವ ಯಾವ ಯಾಗವೇ ಮೊದಲಾದ ಸಂವಿಧಾನಗಳುಂಟೋ ಅಂತಹ ಯಾಗಾದಿಗಳ ಆಚರಣದಿಂದುಂಟಾದ ತೇಜಸ್ಸೆಲ್ಲವೂ ಭೂಮಂಡಲದಲ್ಲಿ ವಿಸ್ತರಿಸಿದೆ ನೋಡು. ಈ ಕಾರಣದಿಂದಲೇ ಬಲಿಯು ಕುರುಕ್ಷೇತ್ರಕ್ಕೆ ಬಂದಿರುವನೆಂದೂ ನಾನು ಪ್ರತಿಜ್ಞೆ ಮಾಡಿ ಹೇಳುತ್ತಿದ್ದೇನೆ. (ಇಲ್ಲಿ ತೀರ್ಥ ವಿಶೇಷಗಳೂ ಕ್ಷೇತ್ರವಿಶೇಷಗಳೂ ಭಗವತ್ಪ್ರೀತಿಗೆ ಕಾರಣವಾಗಿರುವುದರಿಂದ ಅವುಗಳೇ ಭಗವದಂಶವೆಂದೂ ಅಲ್ಲಿ ಮಾಡಿದ ಯಜ್ಞಾದಿಗಳಿಂದ ಉಂಟಾದ ತೇಜಸ್ಸು ಭೂಮಂಡಲದಲ್ಲೆಲ್ಲಾ ವ್ಯಾಪಿಸಿದೆ ಎಂದು ಕ್ಷೇತ್ರದ ಉತ್ಕರ್ಷದಲ್ಲಿ ಪರ್ಯವಸಾನವಾಗುವಂತೆ ಅರ್ಥಹೇಳಲು ಅವಕಾಶವಿದೆ. ತೀರ್ಥಕ್ಷೇತ್ರಗಳ ಸಂವಿಧಾನವೂ ಪುಣ್ಯಾಭಿವೃದ್ಧಿಗೆ ಕಾರಣವಾಗಿರುವುದರಿಂದ ಕುರುಕ್ಷೇತ್ರದಲ್ಲಿ ನಡೆಯುತ್ತಿರುವ ಅಶ್ವಮೇಧವೇ ಭೂಮಿಯಲ್ಲೆಲ್ಲಾ ತೇಜಸ್ಸನ್ನು ಹರಡಲು ಕಾರಣವಾಗಿದೆ. ಆದುದರಿಂದ ಈ ಯಜ್ಞವು ಯಶಸ್ವಿಯೇ ಆದೀತು ಎಂದು ತಾತ್ಪರ್ಯ. ಈ ಎರಡನೆಯ ಯೋಜನೆಯೇ ಯುಕ್ತಿಯುಕ್ತವೆಂದು ತೋರುತ್ತದೆ. ಇತರ ಕಡೆಯಲ್ಲಿ ನಡೆಯುವ ಅಶ್ವಮೇಧಕ್ಕಿಂತಲೂ ಈ ಅಶ್ವಮೇಧದ ಉತ್ಕರ್ಷವು ಕ್ಷೇತ್ರಮಾಹಾತ್ಮ್ಯಮೂಲಕವಾದುದರಿಂದ ಕ್ಷೇತ್ರಕ್ಕೆ ಪ್ರಾಧಾನ್ಯಕೊಡುವದು ಉಚಿತ. ಹಿಂದೆ ಇಪ್ಪತ್ತೆಂಟನೇ ಶ್ಲೋಕದ ಯಜ್ಞದೀಕ್ಷಾಪ್ರಕರಣದಲ್ಲಿ "ಅಮಿತದ್ಯುತೇಃ" ಎಂದು ಹೇಳಿರುವ ಬಲಿಯ ವಿಶೇಷಣವೂ ಸಹ

ಭರದ್ವಾಜ ಉವಾಚ

ಸ್ವೇಚ್ಛಯಾ ತಿಷ್ಠ ಗಚ್ಛಾವೋ ನಾಹಮಾಜ್ಞಾಪಯಾಮಿ ತೇ ।
ಗಮಿಷ್ಯಾವೋ ವಯಂ ವಿಷ್ಣೋ ಬಲೇರಧ್ವರಮಾಶ್ರಿತಃ ॥ ೫೪ ॥

ಯಚ್ಛವಂತಮಹಂ ದೇವ ಪರಿಪೃಚ್ಛಾಮಿ ತದ್ವದ ।
ಕೇಷು ಕೇಷು ವಿಭೋ ನಿತ್ಯಂ ಸ್ಥಾನೇಷು ಪುರುಷೋತ್ತಮ ॥
ಸಾನ್ನಿಧ್ಯಂ ಭವತೋ ಬ್ರೂಹಿ ಜ್ಞಾತುಮಿಚ್ಛಾಮಿ ತತ್ವತಃ ॥ ೫೫ ॥

ವಿಷ್ಣುರುವಾಚ

ಶ್ರೂಯತಾಂ ಕಥಯಿಷ್ಯಾಮಿ ಯೇಷು ಯೇಷು ಗುರೋ ತ್ವಹಂ ।
ನಿವಸಾಮಿ ಸುಪುಣ್ಯೇಷು ಸ್ಥಾನೇಷು ಬಹುರೂಪವಾನ್ ॥ ೫೬ ॥

ಕ್ಷೇತ್ರಸಂಬಂಧದಿಂದುಂಟಾದ ತೇಜೋವಿಶೇಷದಲ್ಲಿ ಅನುಗುಣವಾಗುತ್ತದೆ. ಮುಂದೆ ಐವತ್ತೈದನೇಯ ಶ್ಲೋಕದ ಭರದ್ವಾಜರ ಪ್ರಶ್ನೆಯಲ್ಲಿ "ಕೇಷು ಕೇಷು ಸ್ಥಾನೇಷು" ಎಂಬ ಸ್ಥಲವಿಶೇಷ ನಿರ್ದೇಶವೂ ಸಮಂಜಸವಾಗುತ್ತದೆ)

೫೪-೫೫. ಭರದ್ವಾಜರು ಹೇಳುತ್ತಾರೆ:—ಎಲೈ ವಿಷ್ಣುವೇ, ಸ್ವೇಚ್ಛೆಯಿಂದ ಇಲ್ಲಿಯೇ ಇರು, ಹೋಗೋಣ, ಈ ವಿಷಯಗಳಲ್ಲಿ ನಾನು ನಿನಗೆ ಆಜ್ಞೆಮಾಡು ವವನಲ್ಲ. (ಇಲ್ಲಿರುವುದಕ್ಕೂ ಅಲ್ಲಿಗೆ ಹೊರಡುವುದಕ್ಕೂ ಸ್ವತಂತ್ರವಾದ ನಿನ್ನ ಇಚ್ಛೆಯೇ ಕಾರಣವೆಂದು ತಾತ್ಪರ್ಯ.) ಇಲ್ಲಿಂದ ಬಲಿಯ ಯಾಗಕ್ಕೆ ನಾವುಗಳು ಶೀಘ್ರವಾಗಿಯೇ ಹೊರಡುವೆವು. ಎಲೈ ಪ್ರಭುವೇ, ನಾನು ಈಗ ಯಾವುದನ್ನು ಕೇಳುತ್ತೇನೆಯೋ ಅದಕ್ಕೆ ಉತ್ತರವನ್ನು ದಯವಿಟ್ಟು ಹೇಳು. ಎಲೈ ಪುರುಷೋತ್ತಮನೇ, ನೀನು ಯಾವ ಯಾವ ಸ್ಥಾನಗಳಲ್ಲಿ ಸತತಸಾನ್ನಿಧ್ಯವನ್ನು ಹೊಂದಿರುವೆಯೋ ಅದನ್ನು ದಯವಿಟ್ಟು ಹೇಳು. ಅದರ ತತ್ವವನ್ನು ತಿಳಿಯಲು ನನಗೆ ಇಚ್ಛೆಯುಂಟಾಗಿದೆ.

೫೬-೫೭. ವಿಷ್ಣುವು ಹೇಳುತ್ತಾನೆ:—ಗುರುವೇ ಯಾವಯಾವ ಪುಣ್ಯಸ್ಥಾನ ಗಳಲ್ಲಿ ನಾನಾರೂಪದಿಂದ ನಾನು ವಾಸಮಾಡುತ್ತಿರುವೆನೋ ಅವೆಲ್ಲವನ್ನೂ ಹೇಳು ತ್ತೇನೆ ಕೇಳಬೇಕು. ಎಲೈ ಮುನಿವರ್ಯನೇ, ಭೂಮಿ, ಆಕಾಶ, ಪಾತಾಳ, ಸಮುದ್ರ

ಮದ್ರೂಪವತಾರೈರ್ವಸುಧಾ ನಭಸ್ತಲಂ
ಪಾತಾಲಮಂಭೋನಿಧಯೋ ದಿವಂ ಚ ।
ದಿಶಃ ಸಮಸ್ತಾ ಗಿರಯೋಂಬುದಾಶ್ಚ
ವ್ಯಾಪ್ತಾ ಭರದ್ವಾಜ ಮಮಾನುರೂಪೈಃ ॥ ೫೭ ॥

ಯೇ ದಿವ್ಯಾ ಯೇ ಚ ಭೌಮಾ
ಜಲಗಗನಚರಾಃ ಸ್ಥಾವರಾ ಯೇ ಚ ಬ್ರಹ್ಮನ್ ।
ಸೇಂದ್ರಾಃ ಸಾರ್ಕಾಃ ಸಚಂದ್ರಾ
ಯಮವಸುವರುಣಾ ಹ್ಯಗ್ನಯಃ ಸರ್ವಪಾಲಾಃ ॥
ಬ್ರಹ್ಮಾದ್ಯಾಃ ಸ್ಥಾವರಾಂತಾ ದ್ವಿಜಖಗಸಹಿತಾ
ಮೂರ್ತಿಮಂತೋ ಹ್ಯಮೂರ್ತೇ ।
ಸ್ತೇ ಸರ್ವೇ ಮತ್ಪ್ರಸೂತಾ ಬಹು
ವಿವಿಧಗುಣಾಃ ಪೂರಣಾರ್ಥಂ ಪೃಥಿವ್ಯಾಂ ॥ ೫೮ ॥

ಏತೇ ಹಿ ಪುಣ್ಯಾಃ ಸುರಸಿದ್ಧದಾನವೈಃ
ಪೂಜ್ಯಾ ನರಾಃ ಸನ್ನಿಹಿತಾ ಮಹೀತಲೇ ।

ಗಳು, ಸ್ವರ್ಗ, ದಿಕ್ಕುಗಳು, ಎಲ್ಲಾ ಪರ್ವತಗಳು, ಮೇಘಗಳು ಇವೆಲ್ಲವೂ ನನಗೆ ಅನುರೂಪಗಳಾದ ಆಯಾಯ ಅವತಾರಗಳಿಂದ ವ್ಯಾಪ್ತವಾಗಿವೆ. (ಎಲ್ಲ ವಸ್ತುಗಳಲ್ಲಿಯೂ ಒಂದೊಂದು ರೂಪದಲ್ಲಿ ಸಾನ್ನಿಧ್ಯಹೊಂದಿರುವೆನೆಂದು ತಾತ್ಪರ್ಯ.)

೫೮-೫೯. ಸ್ವರ್ಗ, ಭೂಮಿ, ಜಲ, ಆಕಾಶ ಇವುಗಳಲ್ಲಿ ಸಂಚರಿಸುವ ಎಷ್ಟು ಪ್ರಾಣಿಗಳಿವೆಯೋ ಎಷ್ಟು ಸ್ಥಿರವಾದ ವಸ್ತುಗಳಿವೆಯೋ ಇಂದ್ರ, ಸೂರ್ಯ, ಚಂದ್ರ, ಯಮ, ವಸು, ವರುಣ, ಅಗ್ನಿ, ದಿಕ್ಪಾಲಕರೇ ಮೊದಲಾದ ಬ್ರಹ್ಮ ಮೊದಲುಗೊಂಡು ಸ್ಥಾವರಪರ್ಯಂತವಾದ ಸಮಸ್ತ ಚೇತನಾಚೇತನಗಳೂ, ಪಶುಪಕ್ಷ್ಯಾದಿಗಳೂ ಸಹ ಪ್ರಪಂಚದ ಪೂರ್ತಿಗಾಗಿ ವಿವಿಧಗುಣಗಳಿಂದಕೂಡಿ ನನ್ನಿಂದಲೇ ಉತ್ಪತ್ತಿಹೊಂದಿರುವುವು. ದೇವತೆಗಳಿಂದಲೂ ಸಿದ್ಧರಿಂದಲೂ ಪೂಜಿಸಲ್ಪಡುವ ಭೂಮಂಡಲದಲ್ಲಿ ನೆಲಸಿ ಪುಣ್ಯಶಾಲಿಗಳಾಗಿ ಎಷ್ಟು ಮಂದಿ ಮನುಷ್ಯರಿರುವರೋ ಯಾವ ಈ ಮಹಾತ್ಮರ

ಯೈರ್ದೃಷ್ಟಮಾತ್ರೈಃ ಸಹಸೈವ ನಾಶಂ
ಪ್ರಯಾತಿ ಪಾಪಂ ದ್ವಿಜವರ್ಯ ಕೀರ್ತಿತೈಃ ॥ ೫೯ ॥

ಇತಿ ಶ್ರೀ ವಾಮನಪುರಾಣೇ ವಾಮನ ಪ್ರಾದುರ್ಭಾವೇ ಪ್ರಹ್ಲಾದ ತೀರ್ಥಯಾತ್ರಾಯಾಂ ವಾಮನ ಜನ್ಮನಾಮ ನವಾಶೀತಿತಮೋಽಧ್ಯಾಯಃ

ದರ್ಶನವೂ ಬ್ರಾಹ್ಮಣೋತ್ತಮರಿಂದ ಉಂಟಾದ ಶ್ರವಣವೂ ಸಮಸ್ತಪಾಪಗಳನ್ನು ನಾಶಮಾಡುತ್ತದೆಯೋ ಅಂತಹ ಈ ಮನುಷ್ಯರೂ ನನ್ನಿಂದಲೇ ಉತ್ಪನ್ನರಾದವರು.

ಇಲ್ಲಿಗೆ ಶ್ರೀ ವಾಮನಪುರಾಣದ ಪ್ರಹ್ಲಾದತೀರ್ಥಯಾತ್ರೆಯಲ್ಲಿ ವಾಮನಜನ್ಮವೆಂಬ ಎಂಭತ್ತೊಂಭತ್ತನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಪ್ರಹ್ಲಾದನು ತೀರ್ಥಯಾತ್ರೆಗೆ ಹೊರಟ ಮೇಲೆ ಬಲಿಯು ಕುರುಕ್ಷೇತ್ರಕ್ಕೆ ಬಂದನು. ಅವನೊಡನೆ ಅಲ್ಲಿಗೆ ಬಂದ ಶುಕ್ರಾಚಾರ್ಯನು ಬಲಿಯಿಂದ ಅಶ್ವಮೇಧಯಾಗವನ್ನು ನಡೆಯಿಸುವ ಉದ್ದೇಶದಿಂದ ಆತ್ರೇಯ ಭಾರ್ಗವರೇ ಮೊದಲಾದ ಬ್ರಾಹ್ಮಣೋತ್ತಮರನ್ನು ಆಹ್ವಾನಿಸಿದನು, ಆ ಋಷಿಗಳೆಲ್ಲರೂ ಶುಕ್ರಾಚಾರ್ಯನ ಆಹ್ವಾನವನ್ನು ಅಂಗೀಕರಿಸಿ ಕುರುಕ್ಷೇತ್ರಕ್ಕೆ ಹೊರಟು, ಕುರುಜಾಂಗಲದೇಶದ ಉತ್ತರ ಭಾಗದಿಂದ ಪ್ರಯಾಣಮಾಡಿ ಶತದ್ರು, ಕಿರಣಾ, ಐರಾವತೀ, ದೇವಿಕಾ ಎಂಬ ನದಿಗಳಲ್ಲಿ ಸ್ನಾನಾದಿಗಳನ್ನು ನೆರವೇರಿಸಿ ಪಯೋಷ್ಣೀ ಎಂಬ ನದಿಯಲ್ಲಿ ಸ್ನಾನಮಾಡಲು ಇಳಿದರು, ಅಲ್ಲಿ ನೀರಿನೊಳಗೆ ತಮ್ಮ ಅಖಂಡ ಪ್ರತಿಬಿಂಬವನ್ನು ಕಂಡು ಆಶ್ಚರ್ಯದಿಂದ ಸ್ನಾನಮಾಡಿ ಮೇಲಕ್ಕೆ ಬಂದು ಈ ವಿಚಾರವನ್ನೇ ಪರಸ್ಪರವಾಗಿ ಪ್ರಸ್ತಾಪಿಸುತ್ತಾ ಬರುತ್ತಿರುವಾಗ ದೂರದಲ್ಲಿ ಒಂದು ದೊಡ್ಡವನವನ್ನು ಕಂಡರು ಆ ವನವು ಮರಗಳಿಂದಲೂ ಲತೆಗಳು ಕಮಲಗಳು ಮೊದಲಾದ ರಮ್ಯವಸ್ತುಗಳಿಂದಲೂ ಕೂಡಿ ಮನೋಹರವಾಗಿದ್ದಿತು, ಋಷಿಗಳೆಲ್ಲರೂ ಸಂತೋಷದಿಂದ ಆ ವನಕ್ಕೆ ಪ್ರವೇಶಿಸಿದರು. ಅಲ್ಲಿ ಆಯಾಯ ಯುಗಕ್ಕೆ ತಕ್ಕಂತೆ ಧರ್ಮಾರ್ಥ ಕಾಮ ಮೋಕ್ಷ

ಗಳೆಂಬ ಪುರುಷಾರ್ಥಪ್ರಾಪ್ತಿಗೆ ಸಾಧಕವಾದ ನಾಲ್ಕು ಆಶ್ರಮಗಳು ನಾಲ್ಕು ದಿಕ್ಕಿಗೂ ಅಭಿಮುಖವಾಗಿ ಕಟ್ಟಲ್ಪಟ್ಟಿದ್ದವು. ಆ ವನದ ರಮಣೀಯತೆಯನ್ನು ನೋಡಿ ಋಷಿಗಳೆಲ್ಲರೂ ಸಂತೋಷದಿಂದ ಅಲ್ಲಿಯೇ ವಾಸಮಾಡುತ್ತ ನಿಂತರು, ದಾನವರ ಭಯದಿಂದ ಕೆಲವರು ಮಹಾವಿಷ್ಣುವಿನ ಅನುಗ್ರಹಕ್ಕೆ ಪಾತ್ರವಾದ ಅವಂತೀದೇಶಕ್ಕೂ, ರುದ್ರಕೋಟಿಕ್ಷೇತ್ರಕ್ಕೂ ತೆರಳಿದರು, ಆ ಸಮಯಕ್ಕೆ ಸರಿಯಾಗಿ ಶುಕ್ರಾಚಾರ್ಯನು ಭಾರ್ಗವನೊಡಗೂಡಿ ಬಲಿಚಕ್ರವರ್ತಿಯನ್ನು ಅಶ್ವಮೇಧವನ್ನು ಮಾಡಲು ಯಜಮಾನನ್ನಾಗಿ ಏರ್ಪಡಿಸಿ ದೀಕ್ಷಾವಿಧಿಯನ್ನು ನೆರವೇರಿಸಿದನು. ಸುಲಕ್ಷಣವಾದ ಯಜ್ಞಾಶ್ವವೂ ರಕ್ಷಕರೊಡನೆ ಬಿಡಲ್ಪಟ್ಟಿತು, ಹೋತೃಗಳಾಗಿಯೂ ಸದಸ್ಯರಾಗಿಯೂ ನಿಯಮಿತರಾದ ದಾನವೋತ್ತಮರಿಂದ ಯಜ್ಞಶಾಲೆಯಲ್ಲಿ ಅಗ್ನಿಯ ಆಹರಣ ಹೋಮಾದಿಗಳೆಲ್ಲವೂ ಉಪಕ್ರಮಿಸಲ್ಪಟ್ಟವು. ಈ ಸಮದಲ್ಲಿ ಅದೇ ಕುರುಕ್ಷೇತ್ರದಲ್ಲಿ ವಾಮನರೂಪವನ್ನು ಹೊಂದಿದ ನಾರಾಯಣನು ದಿತಿಯ ಗರ್ಭದಿಂದ ಅವತರಿಸಿದನು. ಒಡನೆಯೇ ಬ್ರಹ್ಮನು ಮಹರ್ಷಿಗಳೊಡನೆ ಅಲ್ಲಿಗೆ ಬಂದು ನಾನಾವಿಧವಾಗಿ ಆ ಪರಮಾತ್ಮನನ್ನು ಸ್ತೋತ್ರಮಾಡಿ ದೈತ್ಯರ ಬಾಧೆಯಿಂದ ಇಂದ್ರನಿಗೆ ಉಂಟಾಗಿರುವ ಕಣ್ಣೀರನ್ನು ಪ್ರಭುವಾದ ನೀನೇ ಹೋಗಲಾಡಿಸಬೇಕೆಂದು ಪ್ರಾರ್ಥಿಸಿದನು, ಆಗ ಪರಮಾತ್ಮನು ಮಾನುಷಾಚಾರಕ್ಕೆ ತಕ್ಕಂತೆ ತನಗೆ ಉಪನಯನವನ್ನು ನಡೆಸಬೇಕೆಂದು ಕೇಳಲು ಭರದ್ವಾಜ ಮುನಿಯು ಜಾತಕರ್ಮವೇ ಮೊದಲಾದ ಸಂಸ್ಕಾರಗಳನ್ನೆಲ್ಲಾ ಯಥಾವಿಧಿಯಾಗಿ ನಡೆಸಿ ಉಪನಯನವನ್ನೂ ಮಾಡಿದನು. ಸಂತುಷ್ಟರಾದ ಮಹರ್ಷಿಗಳೆಲ್ಲರೂ ಬ್ರಹ್ಮಚರ್ಯವ್ರತಕ್ಕೆ ಉಪಯುಕ್ತವಾದ ಯಜ್ಞೋಪವೀತ ದಂಡ ಕಮಂಡಲುವೇ ಮೊದಲಾದ ಎಲ್ಲಾ ಪದಾರ್ಥಗಳನ್ನೂ ಅರ್ಪಿಸಿದರು. ವ್ರತನಿಯಮದಿಂದ ಇದ್ದ ವಾಮನಮೂರ್ತಿಯು ಒಂದೇ ಒಂದು ತಿಂಗಳಿನಲ್ಲಿ ಎಲ್ಲಾ ವೇದಗಳನ್ನೂ ಶಾಸ್ತ್ರಗಳನ್ನೂ ಸಾಂಗವಾಗಿ ಗ್ರಹಿಸಿ ಮಹಾ ಪ್ರಾಜ್ಞನಾದನು ಬಲಿಯ ಅಶ್ವಮೇಧವು ಕುರುಕ್ಷೇತ್ರದಲ್ಲಿ ನಡೆಯುತ್ತಿರುವ ವಿಷಯವನ್ನು ಕ್ಷೇತ್ರಸಂಬಂಧದಿಂದ ಭೂಮಂಡಲದಲ್ಲುಂಟಾಗಿರುವ ತೇಜೋವ್ಯಾಪ್ತಿಯಿಂದ ತಿಳಿದು ತಾನೂ ಅಲ್ಲಿಗೆ ಹೊರಡಲು ಆಚಾರ್ಯನಾದ ಭರದ್ವಾಜನ ಅಪ್ಪಣೆಯನ್ನು ಬೇಡಿದನು. ಜ್ಞಾನಿಯಾದ ಭರದ್ವಾಜನು, ಪರಮಾತ್ಮನ ಇಚ್ಛೆಯೇ ಎಲ್ಲಕ್ಕೂ ಕಾರಣವೆಂದೂ, ತಾನು ಅಪ್ಪಣೆಮಾಡತಕ್ಕವನಲ್ಲವೆಂದು ಪ್ರಾರ್ಥಿಸಿ, ಕುರುಕ್ಷೇತ್ರದಲ್ಲಿರುವ ಆ ಭಗವಂತನ ಅಂಶವೇ ಕ್ಷೇತ್ರಮಾಹಾತ್ಮ್ಯಕ್ಕೆ ಕಾರಣವೆಂಬುದನ್ನು ಅವನ ವಾಕ್ಯದಿಂದಲೇ ತಿಳಿದು ಪೂಜ್ಯನಾದ ನೀನು ಯಾವ ಯಾವ ಸ್ಥಾನಗಳಲ್ಲಿ ಸಾನ್ನಿಧ್ಯಹೊಂದಿರುವೆ. ಅದನ್ನು ಅಪ್ಪಣೆಕೊಡಿಸು, ಅನಂತರ ಕುರುಕ್ಷೇತ್ರಕ್ಕೆ ಎಲ್ಲರೂ ಹೋಗೋಣವೆಂದು ಪ್ರಾರ್ಥಿಸಿದನು, ಆಗ ಪರಮಾತ್ಮನು ಎಲ್ಲಾ ಲೋಕಗಳಲ್ಲಿಯೂ ಅಲ್ಲಿರುವ ಸ್ಥಾವರ ಜಂಗಮಾತ್ಮಕ

ವಾದ ಎಲ್ಲಾ ವಸ್ತುಗಳಲ್ಲಿಯೂ ನಾನಾ ರೂಪದಿಂದ ನಾನೇ ನೆಲಸಿರುವೆನು ಚೇತನಾ ಚೇತನಾತ್ಮಕವಾದ ಎಲ್ಲಾ ಪ್ರಪಂಚವೂ ನನ್ನಿಂದಲೇ ಉಂಟಾದುದು ಎಂದು ಹೇಳಿ ತನ್ನ ಸರ್ವವ್ಯಾಪಕತ್ವವನ್ನೂ ಸರ್ವನಿಯಾಮಕತ್ವವನ್ನೂ ಸರ್ವವಿಭೂತಿಯನ್ನೂ ಸಂಗ್ರಹವಾಗಿ ಈ ಅಧ್ಯಾಯದಲ್ಲಿ ಹೇಳಿರುವನು, ಮುಂದಿನ ಅಧ್ಯಾಯದಲ್ಲಿ ಆಯಾಯ ಕ್ಷೇತ್ರಗಳಲ್ಲಿಯೂ ಅಧಿದೇವತೆಯಾಗಿ ನೆಲಸಿರುವವನು ನಾನೇ ಎಂಬುದನ್ನು ವಿಸ್ತಾರ ವಾಗಿಯೂ ಹೇಳುತ್ತಾನೆ.

॥ ಶ್ರೀಃ ॥

ಶ್ರೀವಾಮನಪುರಾಣಂ

ನವತಿತಮೋಽಧ್ಯಾಯಃ

ಶ್ರೀ ಭಗವಾನುವಾಚ

ಆದ್ಯಂ ಹಿ ಮತ್ಸ್ಯರೂಪಂ ಮೇ ಸಂಸ್ಥಿತಂ ಮಾನಸೇ ಹ್ರದೇ ।
ಸರ್ವಪಾಪಕ್ಷಯಕರಂ ಕೀರ್ತನಸ್ಪರ್ಶನಾದಿಭಿಃ ॥ ೧ ॥

ಕೌರ್ಮಮನ್ಯತ್ಸನ್ನಿಧಾನೇ ಕೌಶಿಕ್ಯಾಃ ಪಾಪನಾಶನಂ ।
ಹಯಶೀರ್ಷಂ ಚ ಕೃಷ್ಣಾಯಾಂ ಗೋವಿಂದಂ ಹಸ್ತಿನಾಪುರೇ ॥ ೨ ॥

ತ್ರಿವಿಕ್ರಮಂ ಚ ಕಾಲಿಂದ್ಯಾಂ ಲಿಂಗಭೇದೇ ಭವಂ ವಿಭುಂ ।
ಕೇದಾರೇ ಮಾಧವೇಶೌಚ ಕುಬ್ಜಾಮ್ರೇ ಕೃಷ್ಣಮೂರ್ಧಜಂ ॥ ೩ ॥

ತೊಂಭತ್ತನೆಯ ಅಧ್ಯಾಯವು

೧-೩. (ಭಗವಂತನು ಹೇಳುತ್ತಾನೆ) ಮಾನಸಹ್ರದವೆಂಬ ತೀರ್ಥದಲ್ಲಿ ಮೊದಲನೇಯದಾದ ನನ್ನ ಮತ್ಸ್ಯರೂಪವು ಸಾನ್ನಿಧ್ಯಹೊಂದಿದೆ. ಆದುದರಿಂದ ಆ ತೀರ್ಥದ ಕೀರ್ತನಸ್ಪರ್ಶನಾದಿಗಳೂ ಸರ್ವಪಾಪನಾಶಕವಾಗಿವೆ. ಹಾಗೆಯೇ ಸರ್ವಪಾಪನಾಶಕವಾದ ನನ್ನ ಕೂರ್ಮರೂಪವು ಕೌಶಿಕೀನದಿಯಲ್ಲಿ ಸಾನ್ನಿಧ್ಯಹೊಂದಿದೆ. ಕೃಷ್ಣಾನದಿಯಲ್ಲಿ ಹಯಗ್ರೀವವೆಂಬ ನನ್ನ ರೂಪವೂ ಹಸ್ತಿನಾಪುರದಲ್ಲಿ ಗೋವಿಂದನೆಂಬ ನನ್ನ ರೂಪವೂ ಸಾನ್ನಿಧ್ಯಹೊಂದಿದೆ ಕಾಲಿಂದೀನದಿಯಲ್ಲಿ ತ್ರಿವಿಕ್ರಮವೆಂಬ ನನ್ನ ರೂಪವೂ, ಲಿಂಗಭೇದ ತೀರ್ಥದಲ್ಲಿ ಭವನೆಂಬ ನನ್ನ ಮೂರ್ತಿಯೂ ಸಾನ್ನಿಧ್ಯಹೊಂದಿದೆ ಕೇದಾರದಲ್ಲಿ ಹರಿಹರರೂಪದಿಂದಲೂ ಕುಬ್ಜಾಮ್ರದಲ್ಲಿ ಕೃಷ್ಣಮೂರ್ಧಜನ ರೂಪದಿಂದಲೂ ಸಾನ್ನಿಧ್ಯ ಹೊಂದಿದೆ.

ನಾರಾಯಣಂ ಬದರ್ಯಾಂ ಚ ವಾರಾಹೇ ಗರುಡಧ್ವಜಂ ।
ಜಯೇಶಂ ಭದ್ರಕರ್ಣೇ ಚ ವಿಪಾಶಾಯಾಂ ದ್ವಿಜಪ್ರಿಯಂ ॥ ೪ ॥

ರೂಪಧಾರಮಿರಾವತ್ಯಾಂ ಕುರುಕ್ಷೇತ್ರೇ ಕುರುಧ್ವಜಂ ।
ಕೃತಶೌಚೇ ನೃಸಿಂಹಂ ಚ ಗೋಕರ್ಣೇ ವಿಶ್ವಧಾರಣಂ ॥ ೫ ॥

ಪ್ರಾಚೀನೇ ಕಾಮಪಾಲಂ ಚ ಪುಂಡರೀಕಂ ಮಹಾಂಭಸಿ ।
ವಿಶಾಖಯೂಪೇ ಹ್ಯಜಿತಂ ಹಂಸಂ ಹಂಸಪದೇ ತಥಾ ॥ ೬ ॥

ಪಯೋಷ್ಣ್ಯಾಂ ಯಮಖಂಡಂ ಚ ವಿತಸ್ತಾಯಾಂ ಕುಮಾರಿಲಂ ।
ಮಣಿಮತ್ಯಾ ಹ್ರದೇ ಶುಭ್ರಂ ಬ್ರಹ್ಮಣ್ಯೇ ಚ ಪ್ರಜಾಪತಿಂ ॥ ೭ ॥

ಮಧುನದ್ಯಾಂ ಚಕ್ರಧರಂ ಶೂಲಬಾಹುಂ ಹಿಮಾಚಲೇ ।
ವಿದ್ಧಿ ವಿಷ್ಣುಂ ಮುನಿಶ್ರೇಷ್ಠ ಸ್ಥಿತಮೌಷಧಸಾನುನಿ ॥ ೮ ॥

೪-೬ ಬದರಿಯ ಕ್ಷೇತ್ರದಲ್ಲಿ ನಾರಾಯಣ ರೂಪದಿಂದಲೂ ವಾರಾಹಕ್ಷೇತ್ರದಲ್ಲಿ ಗರುಡಧ್ವಜ ರೂಪದಿಂದಲೂ, ಭದ್ರಕರ್ಣದಲ್ಲಿ ಜಯೇಶನ ರೂಪದಿಂದಲೂ, ವಿಪಾಶಾ ಎಂಬ ತೀರ್ಥದಲ್ಲಿ ದ್ವಿಜಪ್ರಿಯನೆಂಬ ರೂಪದಿಂದಲೂ, ಇರಾವತಿಯಲ್ಲಿ ರೂಪಧಾರನ ರೂಪದಿಂದಲೂ, ಕುರುಕ್ಷೇತ್ರದಲ್ಲಿ ಕುರುಧ್ವಜನ ರೂಪದಿಂದಲೂ, ಕೃತಶೌಚವೆಂಬ ಕ್ಷೇತ್ರದಲ್ಲಿ ನೃಸಿಹ್ಮರೂಪದಿಂದಲೂ, ಗೋಕರ್ಣದಲ್ಲಿ ವಿಶ್ವಧಾರಣನೆಂಬ ರೂಪದಿಂದಲೂ ಪ್ರಾಚೀನಕ್ಷೇತ್ರದಲ್ಲಿ ಕಾಮಪಾಲನ ರೂಪದಿಂದಲೂ, ಮಹಾಂಭಸ್ಸೆಂಬ ತೀರ್ಥದಲ್ಲಿ ಪುಂಡರೀಕ ರೂಪದಿಂದಲೂ, ವಿಶಾಖಯೂಪದಲ್ಲಿ ಅಜಿತನರೂಪದಿಂದಲೂ, ಹಂಸ ಪದದಲ್ಲಿ ಹಂಸರೂಪದಿಂದಲೂ ಸಾನ್ನಿಧ್ಯವನ್ನು ಹೊಂದಿರುವೆನು.

೭-೮. ಪಯೋಷ್ಣೀ ಎಂಬ ನದಿಯಲ್ಲಿ ಅಖಂಡವೆಂಬ ರೂಪದಿಂದಲೂ ವಿತಸ್ತಾ ನದಿಯಲ್ಲಿ ಕುಮಾರಿಲನೆಂಬ ರೂಪದಿಂದಲೂ, ಮಣಿಮತೀಹ್ರದದಲ್ಲಿ ಶಂಭು ರೂಪದಿಂದಲೂ, ಬ್ರಹ್ಮಣ್ಯವೆಂಬ ಕ್ಷೇತ್ರದಲ್ಲಿ ಪ್ರಜಾಪತಿರೂಪದಿಂದಲೂ, ಮಧು ನದಿಯಲ್ಲಿ ಚಕ್ರಧರರೂಪದಿಂತಲೂ, ಹಿಮವತ್ಪರ್ವತದಲ್ಲಿ ಶೂಲಬಾಹುರೂಪ ದಿಂದಲೂ, ಔಷಧಸಾನುವೆಂಬ ಕ್ಷೇತ್ರದಲ್ಲಿ ವಿಷ್ಣುರೂಪದಿಂದಲೂ ನಾನು ಸಾನ್ನಿಧ್ಯ ಹೊಂದಿರುವೆನೆಂದು ತಿಳಿ

ಭೃಗುತುಂಗೇ ಸುವರ್ಣಾಖ್ಯಂ ನೈಮಿಷೇ ಪೀತವಾಸಸಂ ।
ಗಯಾಯಾಂ ಗೋಪತಿಂ ದೇವಂ ಗದಾಪಾಣಿಂ ತಮೀಶ್ವರಂ ॥ ೯ ॥

ತ್ರೈಲೋಕ್ಯನಾಥಂ ವರದಂ ಗೋಪ್ರಚಾರಂ ಕುಶೇಶಯಂ ।
ಅರ್ಧನಾರೀಶ್ವರಂ ಚಕ್ರೇ ಮಹೀಧ್ರಂ ದಕ್ಷಿಣೇ ಗಿರೌ ॥ ೧೦ ॥

ಗೋಪಾಲಮುತ್ತರೇ ನಿತ್ಯಂ ಮಹೇಂದ್ರೇ ಸೋಮಪೀಥಿನಂ ।
ವೈಕುಂಠಮಪಿ ಸಹ್ಯಾದ್ರೌ ಪಾರಿಯಾತ್ರೇಽಪರಾಜಿತಂ ॥ ೧೧ ॥

ಕಶೇರುದೇಶೇ ದೇವೇಶಂ ವಿಶ್ವರೂಪಂ ತಪೋಧನಂ ।
ಮಲಯಾದ್ರೌ ಚ ಸೌಗಂಧಿಂ ವಿಂಧ್ಯಪಾದೇ ಸದಾಶಿವಂ ॥ ೧೨ ॥

ಅವಂತಿವಿಷಯೇ ಧಿಷ್ಣ್ಯಂ ನಿಷಧೇಷ್ವಮರೇಶ್ವರಂ ।
ಪಾಂಚಾಲಿಕಂ ಚ ಬ್ರಹ್ಮರ್ಷೇ ಪಾಂಚಾಲೇಷು ಸದಾ ಸ್ಥಿತಂ ॥ ೧೩ ॥

ಮಹೋದಯೇ ಹಯಗ್ರೀವಂ ಪ್ರಯಾಗೇ ಯೋಗಶಾಯಿನಂ ।
ಸ್ವಯಂಭುವಂ ಮಧುವನೇ ಹ್ಯಬ್ಜಗಂಧಂ ಚ ಪುಷ್ಕರೇ ॥ ೧೪ ॥

೯-೧೧. ಹಾಗೆಯೇ ಭೃಗುತುಂಗವೆಂಬ ಕ್ಷೇತ್ರದಲ್ಲಿ ಸುವರ್ಣಾಖ್ಯನೆಂದೂ ನೈಮಿಷತೀರ್ಥದಲ್ಲಿ ಪೀತವಸ್ತ್ರನೆಂದೂ ಗಯಾಕ್ಷೇತ್ರದಲ್ಲಿ ಗೋಪತಿ, ಗದಾಧರ, ಈಶ್ವರ, ತ್ರೈಲೋಕ್ಯನಾಥವರದ ಗೋಪ್ರಚಾರ, ಕುಶೇಶಯರೆಂಬ ರೂಪಗಳಿಂದಲೂ, ಚಕ್ರ ತೀರ್ಥದಲ್ಲಿ ಅರ್ಧನಾರೀಶ್ವರನ ರೂಪದಿಂದಲೂ, ದಕ್ಷಿಣಪರ್ವತದಲ್ಲಿ ಮಹೀಧ್ರ ಮೂರ್ತಿಯ ರೂಪದಿಂದಲೂ, ಉತ್ತರಪರ್ವತದಲ್ಲಿ ಗೋಪಾಲರೂಪದಿಂದಲೂ, ಮಹೇಂದ್ರಪರ್ವತದಲ್ಲಿ ಸೋಮಪೀಥಿಯ ರೂಪದಿಂದಲೂ ಸಹ್ಯಪರ್ವತದಲ್ಲಿ ವೈಕುಂಠನ ರೂಪದಿಂದಲೂ, ಪಾರಿಯಾತ್ರ ಪರ್ವತದಲ್ಲಿ ಅಪರಾಜಿತನ ರೂಪದಿಂದಲೂ ಸಾನ್ನಿಧ್ಯ ಹೊಂದಿರುವೆನು.

೧೨-೧೫. ಕಶೇರು ದೇಶದಲ್ಲಿ ದೇವೇಶನೆಂದೂ ವಿಶ್ವರೂಪನೆಂದೂ, ಮಲಯ ಪರ್ವತದಲ್ಲಿ ಸೌಗಂಧಿ ಎಂದೂ, ವಿಂಧ್ಯಪರ್ವತದಲ್ಲಿ ಸದಾಶಿವನೆಂದೂ, ಅವಂತೀ ದೇಶದಲ್ಲಿ ಧಿಷ್ಣ್ಯನೆಂದೂ ನಿಷಧದೇಶದಲ್ಲಿ ಅಮರೇಶ್ವರನೆಂದೂ, ಪಾಂಚಾಲದೇಶದಲ್ಲಿ ಪಾಂಚಾಲಿಕನೆಂದೂ, ಮಹೋದಯದಲ್ಲಿ ಹಯಗ್ರೀವನೆಂದೂ, ಪ್ರಯಾಗದಲ್ಲಿ ಯೋಗಶಾಯಿಯೆಂದೂ, ಮಧುವನದಲ್ಲಿ ಸ್ವಯಂಭುವೆಂದೂ, ಪುಷ್ಕರದಲ್ಲಿ ಅಬ್ಜಗಂಧ

ತಥೈವ ವಿಪ್ರಪ್ರವರಂ ವಾರಾಣಸ್ಯಾಂ ಚ ಕೇಶವಂ ।
ಅವಿಮುಕ್ತಂ ಚ ತತ್ರೈವ ಗೀಯತೇ ಸುರಕಿನ್ನರೈಃ ॥ ೧೫ ॥

ಪಂಪಾಯಾಂ ಪದ್ಮಕಿರಣಂ ಸಮುದ್ರೇ ವಡವಾಮುಖಂ ।
ಕುಮಾರಧಾರೇ ಬಾಹ್ಲೀಶಂ ಕಾರ್ತಿಕೇಯಂ ಚ ಬರ್ಹಣೇ ॥ ೧೬ ॥

ಓಜಸೇ ಶಂಭುಮನಘಂ ಸ್ಥಾಣುಂ ಚ ಕುರುಜಾಂಗಲೇ ।
ವನಮಾಲಿನಮಾಹುರ್ಮಾಂ ಕಿಷ್ಕಿಂಧಾವಾಸಿನೋ ಜನಾಃ ॥ ೧೭ ॥

ವೀರಂ ಕುವಲಯಾರೂಢಂ ಶಂಖಚಕ್ರಗದಾಧರಂ ।
ಶ್ರೀವತ್ಸಾಂಕಮುದಾರಾಂಗಂ ನರ್ಮದಾಯಾಂ ಶ್ರಿಯಃ ಪತಿಂ ॥ ೧೮ ॥

ಮಾಹಿಷ್ಮತ್ಯಾಂ ತ್ರಿನಯನಂ ತತ್ರೈವ ಚ ಹುತಾಶನಂ ।
ಅರ್ಬುದೇ ಚ ತ್ರಿಸೌಪರ್ಣಂ ಕ್ಷ್ಮಾಧರಂ ಸೂಕರಾಲಯೇ ॥ ೧೯ ॥

ತ್ರಿಣಾಚಿಕೇತಂ ಬ್ರಹ್ಮರ್ಷೇ ಪ್ರಭಾಸೇ ಚ ಕಪರ್ದಿನಂ ।
ತತ್ರೈವಾತ್ರಾಪಿ ಚ ಖ್ಯಾತಂ ತೃತೀಯಂ ಶಶಿಶೇಖರಂ ॥ ೨೦ ॥

ನೆಂದೂ, ವಿಪ್ರಪ್ರವರನೆಂದೂ, ವಾರಾಣಸಿಯಲ್ಲಿ ಕೇಶವನೆಂದೂ, ಅಲ್ಲಿಯೇ ಅವಿಮುಕ್ತನೆಂದೂ ಸುರಕಿನ್ನರರೆಲ್ಲರೂ ನನ್ನನ್ನೇ ಹೇಳುತ್ತಾರೆ.

೧೬-೧೮. ಪಂಪಾಕ್ಷೇತ್ರದಲ್ಲಿ ಪದ್ಮಕಿರಣನೆಂದೂ ಸಮುದ್ರದಲ್ಲಿ ಬಡಬಾಮುಖನೆಂದೂ, ಕುಮಾರಧಾರ ಕ್ಷೇತ್ರದಲ್ಲಿ ಬಾಹ್ಲೀಶನೆಂದೂ, ಬರ್ಹಣ ಕ್ಷೇತ್ರದಲ್ಲಿ ಕಾರ್ತಿಕೇಯನೆಂದೂ, ಓಜಸಕ್ಷೇತ್ರದಲ್ಲಿ ಶಂಭುವೆಂದೂ, ಕುರುಜಾಂಗಲದಲ್ಲಿ ಸ್ಥಾಣುವೆಂದೂ, ನಾನೇ ನೆಲಸಿರುವೆನು, ಕಿಷ್ಕಿಂಧೆಯಲ್ಲಿರುವ ಜನಗಳು ನನ್ನನ್ನೇ ವನಮಾಲೀ ಎಂದು ಕರೆಯುವರು. ನರ್ಮದಾ ನದಿಯಲ್ಲಿ ವೀರನೆಂದೂ, ಕುವಲಯಾರೂಢನೆಂತಲೂ, ಶಂಖಚಕ್ರಗದಾಧರನೆಂತಲೂ, ಶ್ರೀವತ್ಸಾಂಕನೆಂತಲೂ ಶ್ರೀಪತಿ ಎಂತಲೂ ನನ್ನನ್ನೇ ಹೇಳುವರು.

೧೯-೨೧. ಮಾಹಿಷ್ಮತಿಯಲ್ಲಿ ತ್ರಿನಯನನೆಂತಲೂ, ಅಲ್ಲಿಯೇ ಹುತಾಶನನೆಂತಲೂ, ಅರ್ಬುದದಲ್ಲಿ ತ್ರಿಸೌಪರ್ಣನೆಂತಲೂ, ಸೂಕರಪರ್ವತದಲ್ಲಿ ಕ್ಷ್ಮಾಧರನೆಂತಲೂ, ತ್ರಿಣಾಚಿಕೇತನೆಂತಲೂ, ಪ್ರಭಾಸದಲ್ಲಿ ಕಪರ್ದಿಯೆಂತಲೂ, ಅಲ್ಲಿನಂತೆ ಇಲ್ಲಿಯೂ ಮೂರನೇಯ ಶಶಿಶೇಖರನೆಂತಲೂ, ಉದಯಪರ್ವತದಲ್ಲಿ ಶಶಿಯೆಂದೂ,

ಉದಯೇ ಶಶಿನಂ ಸೂರ್ಯಂ ಧ್ರುವಂ ಚ ತ್ರಿತಯೇ ಸ್ಥಿತಂ ।
ಹೇಮಕೂಟೇ ಹಿರಣ್ಯಾಕ್ಷಂ ಸ್ಕಂದಂ ಶರವಣೇ ಮುನೇ ॥ ೨೦ ॥

ಮಹಾಲಯೇ ಸ್ಮೃತಂ ರುದ್ರಮುತ್ತರೇಷು ಕುರುಷ್ವಥ ।
ಪದ್ಮನಾಭಂ ಮುನಿಶ್ರೇಷ್ಠ ಸರ್ವಸೌಖ್ಯಪ್ರದಾಯಕಂ ॥ ೨೨ ॥

ಸಪ್ತಗೋದಾವರೇ ಬ್ರಹ್ಮನ್ವಿಖ್ಯಾತಂ ಹಾಟಕೇಶ್ವರಂ ।
ತತ್ರೈವ ಚ ಮಹಾಹಂಸಂ ಪ್ರಯಾಗೇಽಪಿ ಮಹೇಶ್ವರಂ ॥ ೨೩ ॥

ಶೋಣೇ ಚ ರುಕ್ಮಕವಚಂ ಕುಂಡಿನೇ ಘ್ರಾಣತರ್ಪಣಂ ।
ಭಿಲ್ಲೀವನೇ ಮಹಾಯೋಗಂ ಮಂತ್ರೇಷು ಪುರುಷೋತ್ತಮಂ ॥ ೨೪ ॥

ಪ್ಲಕ್ಷಾವತರಣೇ ವಿಶ್ವಂ ಶ್ರೀನಿವಾಸಂ ದ್ವಿಜೋತ್ತಮಂ ।
ಸೂರ್ಯಾರಕೇ ಚತುರ್ಬಾಹುಂ ಮಗಧಾಯಾಂ ಸುಧಾಪತಿಂ ॥ ೨೫ ॥

ಗಿರಿವ್ರಜೇ ಪಶುಪತಿಂ ಶ್ರೀಕಂಠಂ ಯಮುನಾತಟೇ ।
ವನಸ್ಪತಿಂ ಸಮಾಖ್ಯಾತಂ ದಂಡಕಾರಣ್ಯವಾಸಿನಂ ॥ ೨೬ ॥

ಸೂರ್ಯನೆಂದೂ, ಈ ಮೂರರಲ್ಲೂ ಇರುವ ನನ್ನನ್ನು ಧ್ರುವನೆಂದೂ ತಿಳಿ. ಹೇಮಕೂಟಪರ್ವತದಲ್ಲಿ ಹಿರಣ್ಯಾಕ್ಷನ ರೂಪದಿಂದಲೂ, ಶರವಣಕ್ಷೇತ್ರದಲ್ಲಿ ಸ್ಕಂದನ ರೂಪದಿಂದಲೂ ನಾನೇ ಸಾನ್ನಿಧ್ಯ ಹೊಂದಿರುವೆನು.

೨೨-೨೫. ಮಹಾಪ್ರಳಯದಲ್ಲಿ ರುದ್ರನೆಂದೂ, ನಾನೇ ಹೇಳಲ್ಪಟ್ಟಿರುವೆನು, ಉತ್ತರ ಕುರುದೇಶಗಳಲ್ಲಿ ಸರ್ವಸೌಖ್ಯದಾಯಿಯಾದ ಪದ್ಮನಾಭನೆಂದೂ, ನನ್ನನ್ನು ಹೇಳುತ್ತಿರುವರು. ಸಪ್ತಗೋದಾವರ ಕ್ಷೇತ್ರದಲ್ಲಿ ಪ್ರಸಿದ್ಧನಾದ ಹಾಟಕೇಶ್ವರನ ರೂಪದಿಂದಲೂ. ಅಲ್ಲಿಯೇ ಮಹಾಹಂಸರೂಪದಿಂದಲೂ, ಪ್ರಯಾಗದಲ್ಲಿ ಮಹೇಶ್ವರನ ರೂಪದಿಂದಲೂ, ಶೋಣದಲ್ಲಿ ರುಕ್ಮಕವಚನ ರೂಪದಿಂದಲೂ, ಕುಂಡಿನಕ್ಷೇತ್ರದಲ್ಲಿ ಘ್ರಾಣತರ್ಪಣನೆಂಬ ದೇವನ ರೂಪದಿಂದಲೂ, ಭಿಲ್ಲೀವನದಲ್ಲಿ ಮಹಾಯೋಗನ ರೂಪದಿಂದಲೂ, ಮಂತ್ರಗಳಲ್ಲಿ ಪುರುಷೋತ್ತಮನೆಂದೂ, ಪ್ಲಕ್ಷಾವತರಣದಲ್ಲಿ ವಿಶ್ವ ರೂಪ, ಶ್ರೀನಿವಾಸ, ದ್ವಿಜೋತ್ತಮರೆಂದೂ, ಸೂರ್ಯಾರಕದಲ್ಲಿ ಚತುರ್ಬಾಹು ರೂಪದಿಂದಲೂ, ಮಗಧೆಯಲ್ಲಿ ಸುಧಾಪತಿಯ ರೂಪದಿಂದಲೂ ನಾನೇ ನೆಲಸಿರುವೆನು.

೨೬-೨೮. ಗಿರಿವ್ರಜದಲ್ಲಿ ಪಶುಪತಿರೂಪದಿಂದಲೂ ಯಮುನಾ ತೀರದಲ್ಲಿ ಶ್ರೀಕಂಠನ ರೂಪದಿಂದಲೂ ದಂಡಕಾರಣ್ಯದಲ್ಲಿ ವನಸ್ಪತಿಯೆಂಬ ಪ್ರಸಿದ್ಧಿಯಿಂದಲೂ

ಕಾಲಂಜರೇ ನೀಲಕಂಠಂ ಸರಯ್ವಾಮನುತ್ತಮಂ ।
ಹಂಸಯುಕ್ತಂ ಮಹಾಕೋಶ್ಯಾಂ ಸರ್ವಪಾಪಪ್ರಣಾಶನಂ ॥ ೨೭ ॥

ಗೋಕರ್ಣೇ ದಕ್ಷಿಣೇ ಶರ್ವಂ ವಾಸುದೇವಂ ಪ್ರಜಾಮುಖೇ ।
ವಿಂಧ್ಯಶೃಂಗೇ ಮಹಾಗೌರಂ ಕಂಥಾಯಾಂ ಮಧುಸೂದನಂ ॥ ೨೮ ॥

ತ್ರಿಕೂಟಶಿಖರೇ ಬ್ರಹ್ಮಂಶ್ಚಕ್ರಪಾಣಿನಮೀಶ್ವರಂ ।
ಲೋಹದಂಡೇ ಹೃಷೀಕೇಶಂ ಕೌಶಲಾಯಾಂ ಮಹೋದಯಂ ॥ ೨೯ ॥

ಮಹಾವಾಸಂ ಸುರಾಷ್ಟ್ರೇ ಚ ನವರಾಷ್ಟ್ರೇ ಯಶೋಧರಂ ।
ಭೂಧರಂ ದೇವಿಕಾನದ್ಯಾಂ ವಿದೇಹಾಯಾಂ ಕುಶಪ್ರಿಯಂ ॥ ೩೦ ॥

ಗೋಮತ್ಯಾಂ ಛಾದಿತಗದಂ ಶಂಖೋದ್ಧಾರೇ ಚ ಶಂಖಿನಂ ।
ಸುನೇತ್ರಂ ಸೈಂಧವಾರಣ್ಯೇ ಶೂರಂ ಶೂರಪುರೇ ಸ್ಥಿತಂ ॥ ೩೧ ॥

ಕಾಲಂಜರ ಕ್ಷೇತ್ರದಲ್ಲಿ ನೀಲಕಂಠನ ರೂಪದಿಂದಲೂ ಸರಯೂ ನದಿಯಲ್ಲಿ ಅನುತ್ತಮನ ರೂಪದಿಂದಲೂ ಮಹಾಕೋಶಿಯಲ್ಲಿ ಸರ್ವಪಾಪನಾಶಕನಾದ ಹಂಸಯುಕ್ತನ ರೂಪದಿಂದಲೂ ದಕ್ಷಿಣ ಗೋಕರ್ಣದಲ್ಲಿ ಶರ್ವನ ರೂಪದಿಂದಲೂ ಪ್ರಜಾಮುಖದಲ್ಲಿ ವಾಸುದೇವನ ರೂಪದಿಂದಲೂ ವಿಂಧ್ಯಶಿಖರದಲ್ಲಿ ಮಹಾ ಗೌರಸ್ವಾಮಿಯ ರೂಪದಿಂದಲೂ ಕಂಥಾ ಕ್ಷೇತ್ರದಲ್ಲಿ ಮಧುಸೂದನ ರೂಪದಿಂದಲೂ ನಾನೇ ನೆಲಸಿರುವೆನು.

೨೯-೩೧. ತ್ರಿಕೂಟ ಶಿಖರದಲ್ಲಿ ಚಕ್ರಪಾಣಿಯಾದ ಈಶ್ವರನ ರೂಪದಿಂದಲೂ ಲೋಹದಂಡದಲ್ಲಿ ಹೃಷೀಕೇಶನ ರೂಪದಿಂದಲೂ ಕೌಶಲೆಯಲ್ಲಿ ಮಹೋದಯ ರೂಪದಿಂದಲೂ ಸುರಾಷ್ಟ್ರದಲ್ಲಿ ಮಹಾವಾಸನ ರೂಪದಿಂದಲೂ ನವರಾಷ್ಟ್ರದಲ್ಲಿ ಯಶೋಧರನ ರೂಪದಿಂದಲೂ ದೇವಿಕಾನದಿಯಲ್ಲಿ ಭೂಧರನ ರೂಪದಿಂದಲೂ ವಿದೇಹಾ ನದಿಯಲ್ಲಿ ಕುಶಪ್ರಿಯನ ರೂಪದಿಂದಲೂ ಗೋಮತೀ ನದಿಯಲ್ಲಿ ಛಾದಿತಗದನ ರೂಪದಿಂದಲೂ ಶಂಖೋದ್ಧಾರದಲ್ಲಿ ಶಂಖಿಯ ರೂಪದಿಂದಲೂ ಸೈಂಧವಾರಣ್ಯದಲ್ಲಿ ಸುನೇತ್ರನ ರೂಪದಿಂದಲೂ ಶೂರಪುರದಲ್ಲಿ ಶೂರನ ರೂಪದಿಂದಲೂ ನಾನೇ ನೆಲಸಿರುವೆನು.

ರುದ್ರಾಂ ಹಿರಣ್ವತ್ಯಾಂ ವೀರಭದ್ರಂ ತ್ರಿವಿಷ್ಟಪೇ ।
ಶಂಕುಕರ್ಣೇ ಚ ನೀಲಾಭಂ ಭೀಮಂ ಶಾಲವನೇ ವಿದುಃ ॥ ೩೨ ॥

ವಿಶ್ವಾಮಿತ್ರಂ ಚ ಘಟಿತೇ ಕೈಲಾಸೇ ವೃಷಭಧ್ವಜಂ ।
ಮಹೇಶಂ ಮಹಿಲಾಶೈಲೇ ಕಾಮರೂಪಂ ಶಶಿಪ್ರಭಂ ॥ ೩೩ ॥

ವಲಭ್ಯಾಮಪಿ ಗೋಮಿತ್ರಂ ಕಟಾಹಂ ಬ್ರಾಹ್ಮಣಪ್ರಿಯಂ ।
ಉಪೇಂದ್ರಂ ಸಿಂಹಲದ್ವೀಪೇ ಶಕ್ರಾಹ್ವೇ ಕುಂದಮಾಲಿನಂ ॥ ೩೪ ॥

ರಸಾತಲೇ ಚ ವಿಖ್ಯಾತಂ ಸಹಸ್ರಶಿರಸಂ ಮುನೇ ।
ಕಾಲಾಗ್ನಿಂ ಕಪಿಲಂ ಚೈವ ತಥಾಽನ್ಯಂ ಕೃತ್ತಿವಾಸಸಂ ॥ ೩೫ ॥

ಸುತಲೇ ಕೂರ್ಮಮಚಲಂ ವಿತಲೇ ಪಂಕಜಾನನಂ ।
ಮಹಾತಲೇ ಗುರುಂ ಖ್ಯಾತಂ ದೇವೇಶಂ ವೃಷಲೇಶ್ವರಂ ॥ ೩೬ ॥

೩೨-೩೩. ಹಿರಣ್ವತೀ ನದಿಯಲ್ಲಿ ರುದ್ರನೆಂಬ ಹೆಸರಿನಿಂದಲೂ ತ್ರಿವಿಷ್ಟಪ ಕ್ಷೇತ್ರದಲ್ಲಿ ವೀರಭದ್ರನ ರೂಪದಿಂದಲೂ ಶಂಕುಕರ್ಣದಲ್ಲಿ ನೀಲಾಭನ ರೂಪದಿಂದಲೂ ಶಾಲವನದಲ್ಲಿ ಭೀಮನ ರೂಪದಿಂದಲೂ ನಾನು ನೆಲಸಿರುವನೆಂದು ಜ್ಞಾನಿಗಳು ತಿಳಿದಿರುವರು. ಘಟಿತ ಕ್ಷೇತ್ರದಲ್ಲಿ ವಿಶ್ವಾಮಿತ್ರನ ರೂಪದಿಂದಲೂ ಕೈಲಾಸದಲ್ಲಿ ವೃಷಭಧ್ವಜನ ರೂಪದಿಂದಲೂ ಮಹಿಲಾ ಶೈಲದಲ್ಲಿ ಮಹೇಶನ ರೂಪದಿಂದಲೂ ಕಾಮರೂಪದಲ್ಲಿ ಶಶಿಪ್ರಭನ ರೂಪದಿಂದಲೂ ನಾನೇ ಇರುವೆನು.

೩೪-೩೫. ವಲಭೀ ಕ್ಷೇತ್ರದಲ್ಲಿ ಗೋಮಿತ್ರನ ರೂಪದಿಂದಲೂ ಕಟಾಹದಲ್ಲಿ ಬ್ರಾಹ್ಮಣಪ್ರಿಯನ ರೂಪದಿಂದಲೂ ಸಿಂಹಲ ದ್ವೀಪದಲ್ಲಿ ಉಪೇಂದ್ರನ ರೂಪದಿಂದಲೂ ಶಕ್ರತೀರ್ಥದಲ್ಲಿ ಕುಂದಮಾಲಿಯ ರೂಪದಿಂದಲೂ ಪಾತಾಲದಲ್ಲಿ ಪ್ರಖ್ಯಾತನಾದ ಸಹಸ್ರಶಿರಸ್ಸುಳ್ಳ ಆದಿಶೇಷನ ರೂಪದಿಂದಲೂ ಹಾಗೆಯೇ ಕಾಲಾಗ್ನಿ ಕಪಿಲ ಕೃತ್ತಿವಾಸರ ರೂಪಗಳಿಂದಲೂ ನಾನೇ ಇರುವೆನು.

೩೬-೩೮. ಸುತಲವೆಂಬ ಲೋಕದಲ್ಲಿ ಸ್ಥಿರನಾದ ಕೂರ್ಮನ ರೂಪದಿಂದಲೂ, ವಿತಲದಲ್ಲಿ ಪಂಕಜಾನನ ರೂಪದಿಂದಲೂ, ಮಹಾತಲದಲ್ಲಿ ಪ್ರಸಿದ್ಧನಾದ ಗುರು

ತಲೇ ಸಹಸ್ರಚರಣಂ ಸಹಸ್ರಭುಜಮೀಶ್ವರಂ ।
ಸಹಸ್ರಾಖ್ಯಂ ಪರಿಖ್ಯಾತಂ ಮುಸಲಾಕೃಷ್ಟದಾನವಂ ॥ ೩೭ ॥

ಪಾತಾಲೇ ಯೋಗಿನಾಮೀಶಂ ಸಂಸ್ಥಿತಂ ಹರಿಶಂಕರಂ ।
ಧರಾತಲೇ ಕೋಕನದಂ ಮೇದಿನ್ಯಾಂ ಚಕ್ರಪಾಣಿನಂ ॥ ೩೮ ॥

ಭುವರ್ಲೋಕೇ ಚ ಗರುಡಂ ಸ್ವರ್ಲೋಕೇ ವಿಷ್ಣುಮವ್ಯಯಂ ।
ಮಹರ್ಲೋಕೇ ತಥಾಽಗಸ್ತ್ಯಂ ಕಪಿಲಂ ಚ ಜನೇ ಸ್ಥಿತಂ ॥ ೩೯ ॥

ತಪೋಲೋಕೇಽಖಿಲಂ ಬ್ರಹ್ಮನ್ವಾಙ್ಮಯಂ ಸಪ್ತಸಂಯುತಂ ।
ಬ್ರಹ್ಮಾಣಂ ಬ್ರಹ್ಮಲೋಕೇ ಚ ಸಮಮೇವ ಪ್ರತಿಷ್ಠಿತಂ ॥ ೪೦ ॥

ಸನಾತನಂ ತಥಾ ಶೈವೇ ಪರಂ ಬ್ರಹ್ಮ ಚ ವೈಷ್ಣವೇ ।
ಅಪ್ರತರ್ಕ್ಯಂ ನಿರಾಲಂಬೇ ನಿರಾಕಾರೇ ತಪೋಮಯಂ ॥ ೪೧ ॥

ಮತ್ತು ವೃಷಲೇಶ್ವರನ ರೂಪದಿಂದಲೂ, ತಲದಲ್ಲಿ ಸಹಸ್ರಪಾದನ ಮತ್ತು ಸಹಸ್ರ ಭುಜನ ರೂಪದಿಂದಲೂ ಕೂಡಿ ಸಹಸ್ರನೆಂಬ ಪ್ರಸಿದ್ಧಿಯಿಂದ ಮುಸಲಾಯುಧದಿಂದ ದಾನವರನ್ನು ಆಕರ್ಷಿಸಿ ಪ್ರಸಿದ್ಧಿಹೊಂದಿರುವೆನು. ಪಾತಾಲದಲ್ಲಿ ಯೋಗೀಶನ ರೂಪದಿಂದ ಹರಿಶಂಕರನಾಗಿರುವವನೂ ನಾನೇ ಧರಾತಲದಲ್ಲಿ ಕೋಕನದ ಮೂರ್ತಿಯಾಗಿಯೂ, ಭೂಮಿಯಲ್ಲಿ ಚಕ್ರಪಾಣಿಯ ರೂಪದಿಂದಿರುವವನೂ ನಾನೇ.

೩೯-೪೦. ಭುವರ್ಲೋಕದಲ್ಲಿ ಗರುಡನ ರೂಪದಿಂದಲೂ, ಸ್ವರ್ಲೋಕದಲ್ಲಿ ಶಾಶ್ವತನಾದ ವಿಷ್ಣು ರೂಪದಿಂದಲೂ, ಮಹರ್ಲೋಕದಲ್ಲಿ ಅಗಸ್ತ್ಯ ರೂಪದಿಂದಲೂ, ಜನಲೋಕದಲ್ಲಿ ಕಪಿಲನ ರೂಪದಿಂದಲೂ ನಾನೇ ಇರುವೆನು, ತಪೋಲೋಕದಲ್ಲಿ ಸಪ್ತವಿಧಸ್ವರಗಳೊಡಗೂಡಿದ ವಾಙ್ಮಯ ಬ್ರಹ್ಮ ರೂಪದಿಂದಲೂ, ಬ್ರಹ್ಮಲೋಕದಲ್ಲಿ ಚತುರ್ಮುಖನ ರೂಪದಿಂದಲೂ, ಎಲ್ಲಾ ಕಡೆಯಲ್ಲಿಯೂ ಒಂದೇ ಕಾಲದಲ್ಲಿ ಪ್ರತಿಷ್ಠೆ ಹೊಂದಿರುವೆನು.

೪೧-೪೩. ಶೈವಸಿದ್ಧಾಂತದಲ್ಲಿ ಸನಾತನನೆಂದೂ ವೈಷ್ಣವಸಿದ್ಧಾಂತದಲ್ಲಿ ಪರ ಬ್ರಹ್ಮನೆಂದೂ ನಿರಾಲಂಬ ಸಿದ್ಧಾಂತದಲ್ಲಿ ಅಪ್ರತರ್ಕ್ಯನೆಂದೂ ನಿರಾಕಾರಸಿದ್ಧಾಂತದಲ್ಲಿ

ಜಂಬೂದ್ವೀಪೇ ಚತುರ್ಬಾಹುಂ ಕುಶದ್ವೀಪೇ ಕುಶೇಶಯಂ।
ಪ್ಲಕ್ಷದ್ವೀಪೇ ಮುನಿಶ್ರೇಷ್ಠ ಖ್ಯಾತಂ ಗರುಡವಾಹನಂ ॥ ೪೨ ॥

ಪದ್ಮನಾಭಂ ತಥಾ ಕ್ರೌಂಚೇ ಶಾಲ್ಮಲೇ ವೃಷಭಧ್ವಜಂ।
ಸಹಸ್ರಾಕ್ಷಃ ಸ್ಥಿತಃ ಶಾಕೇ ವಾಮನಃ ಪುಷ್ಕರೇ ಸ್ಥಿತಃ ॥ ೪೩ ॥

ತಥಾ ಪೃಥಿವ್ಯಾಂ ಬ್ರಹ್ಮರ್ಷೇ ಶಾಲಿಗ್ರಾಮೇ ಸ್ಥಿತೋಽಪ್ಯಹಂ।
ಸಜಲಸ್ಥಲಪರ್ಯಂತಮಶೇಷಸ್ಥಾವರೇಷು ಚ ॥ ೪೪ ॥

ಏತಾನಿ ಪುಣ್ಯಾನಿ ಮಹಾಲಯಾನಿ
ಬ್ರಹ್ಮನ್ಪುರಾಣಾನಿ ಸನಾತನಾನಿ।
ಬ್ರಹ್ಮಪ್ರದಾನೀಹ ಮಹೌಜಸಾನಿ
ಸಂಕೀರ್ತನೀಯಾನ್ಯಘನಾಶನಾನಿ ॥ ೪೫ ॥

ಸಂಕೀರ್ತನಾತ್ಕ್ಷಯಮುಪೈತಿ ಪಾಪಂ
ಸಂದರ್ಶನಾದೇವ ಚ ದೇವತಾಯಾಃ।

ತಪೋಮಯನೆಂದೂ ನನ್ನನ್ನೇ ಹೇಳುವರು. ಜಂಬೂದ್ವೀಪದಲ್ಲಿ ಚತುರ್ಬಾಹು ರೂಪದಿಂದಲೂ, ಕುಶದ್ವೀಪದಲ್ಲಿ ಕುಶೇಶಯನ ರೂಪದಿಂದಲೂ, ಪ್ಲಕ್ಷದ್ವೀಪದಲ್ಲಿ ಗರುಡವಾಹನನೆಂಬ ಪ್ರಸಿದ್ಧಿಯಿಂದಲೂ, ಕ್ರೌಂಚದ್ವೀಪದಲ್ಲಿ ಪದ್ಮನಾಭನ ರೂಪ ದಿಂದಲೂ, ಶಾಲ್ಮಲಿ ದ್ವೀಪದಲ್ಲಿ ವೃಷಭಧ್ವಜನ ರೂಪದಿಂದಲೂ, ಶಾಕದ್ವೀಪದಲ್ಲಿ ಸಹಸ್ರಾಕ್ಷನ ರೂಪದಿಂದಲೂ, ಪುಷ್ಕರದ್ವೀಪದಲ್ಲಿ ವಾಮನರೂಪದಿಂದಲೂ ನಾನೇ ನೆಲಸಿರುವೆನು.

೪೪-೪೬. ಎಲೈ ಬ್ರಹ್ಮರ್ಷಿಯೇ, ಭೂಮಿಯಲ್ಲಿರುವ ಎಲ್ಲಾ ಸಾಲಿಗ್ರಾಮ ಗಳಲ್ಲೂ ಇರುವ ನಾನು ಜಲಸ್ಥಲಗಳಲ್ಲಿರುವ ಸಮಸ್ತ ಸ್ಥಾವರ ವಸ್ತುಗಳಲ್ಲಿಯೂ ನೆಲಸಿರುವೆನು. ನನಗೆ ಆವಾಸಸ್ಥಾನವಾಗಿರುವುದರಿಂದ ಪುಣ್ಯಕರಗಳಾಗಿಯೂ, ಪುರಾತನಗಳಾಗಿಯೂ ಜ್ಞಾನಪ್ರದಗಳಾಗಿಯೂ, ತೇಜಸ್ವಿಗಳಾಗಿಯೂ, ಸರ್ವಪಾಪ ನಾಶಕಗಳಾಗಿಯೂ ಇರುವ ಈ ಸ್ಥಾನಗಳೆಲ್ಲವೂ ಯಾವಾಗಲೂ ಪಠಿಸತಕ್ಕವು ಗಳಾಗಿವೆ. ಇವುಗಳ ಸಂಕೀರ್ತನದಿಂದ ಸಮಸ್ತ ಪಾಪಗಳೂ ನಾಶವಾಗುತ್ತವೆ ಆಯಾಯ ದೇವತಾ ರೂಪದಲ್ಲಿರುವ ನನ್ನ ದರ್ಶನದಿಂದ ದೇವತೆಗಳೂ ಮನುಷ್ಯರೂ

ಧರ್ಮಾರ್ಥಕಾಮಾವಪವರ್ಗಮೇವ
ದೇವಾ ಲಭಂತೇ ಮನುಜಾಃ ಸಸಾಧ್ಯಾಃ ॥ ೪೬ ॥

ಏತಾನಿ ತುಭ್ಯಂ ವಿನಿವೇದಿತಾನಿ
ಮಹಾಲಯಾನೀಹ ಮಯಾ ನಿಜಾನಿ ।
ಉತ್ತಿಷ್ಠ ಗಚ್ಛಾಮಿ ಮಹಾಸುರಸ್ಯ
ಯಜ್ಞಂ ಸುರಾಣಾಂ ಹಿ ಹಿತಾಯ ವಿಪ್ರ ॥ ೪೭ ॥

ಪುಲಸ್ತ್ಯ ಉವಾಚ

ಇತ್ಯೇವಮುಕ್ತ್ವಾ ವಚನಂ ಮಹರ್ಷೇ
ವಿಷ್ಣುರ್ಭರದ್ವಾಜಮೃಷಿಂ ಮಹಾತ್ಮಾ
ವಿಲಾಸಲೀಲಾಗಮನೋ ಗಿರೀಂದ್ರಾತ್
ಸ ಚಾಽಭ್ಯಗಚ್ಛತ್ಕುರುಜಾಂಗಲಂ ಹಿ ॥ ೪೮ ॥

ಇತಿ ಶ್ರೀ ವಾಮನಪುರಾಣೇ ವಾಮನ ಪ್ರಾದುರ್ಭಾವೇ
ಸ್ವಸ್ಥಾನಕಥನಂ ನಾಮ ನವತಿತಮೋಽಧ್ಯಾಯಃ

ಸಾಧ್ಯರೂ ಸಹ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳನ್ನೂ ಹೊಂದುತ್ತಾರೆ.

೪೭-೪೮. ನನ್ನ ಈ ಆವಾಸಸ್ಥಾನಗಳನ್ನೆಲ್ಲಾ ನಿನ್ನಲ್ಲಿ ಈ ರೀತಿ ಅರಿಕೆ ಮಾಡಿರುವೆನು. ಏಳು ಎಲೈ ಬ್ರಾಹ್ಮಣೋತ್ತಮನೇ, ನಾನು ದೇವತೆಗಳ ಹಿತಕ್ಕಾಗಿ ಮಹಾಸುರನಾದ ಬಲಿಯ ಯಜ್ಞಕ್ಕೆ ಹೊರಡುವೆನು ಎಂದು ಹೇಳಿದನು.

ಪುಲಸ್ತ್ಯರು ಹೇಳುತ್ತಾರೆ. ಆ ಮಹಾವಿಷ್ಣುವು ಭರದ್ವಾಜಮಹರ್ಷಿಯನ್ನು ಕುರಿತು ಈ ರೀತಿ ತನ್ನ ವೈಭವವನ್ನೆಲ್ಲಾ ಹೇಳಿ ಆ ಗಿರೀಂದ್ರವೆಂಬ ಕ್ಷೇತ್ರದಿಂದ ವಿಲಾಸದಿಂದೊಡಗೂಡಿದ ದಿವ್ಯಲೀಲೆಯ ಗಮನದಿಂದ ಕುರುಜಾಂಗಲವೆಂಬ ಬಲಿಯ ಯಜ್ಞಸ್ಥಾನಕ್ಕೆ ಹೊರಟನು.

ಇಲ್ಲಿಗೆ ಶ್ರೀವಾಮನಪುರಾಣದ ವಾಮನ ಪ್ರಾದುರ್ಭಾವ ಘಟ್ಟದಲ್ಲಿ ಸ್ವಸ್ಥಾನಕಥನ ವೆಂಬ ತೊಂಭತ್ತನೇಯ ಅಧ್ಯಾಯ ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಸಂಗ್ರಹವಾಗಿ ಹಿಂದಿನ ಅಧ್ಯಾಯದಲ್ಲಿ ನಿರೂಪಿತವಾದ ಪರಮಾತ್ಮನ ಸರ್ವವ್ಯಾಪಕತ್ವವು ವಿಸ್ತಾರವಾಗಿ ಉಪಪಾದಿಸಲ್ಪಟ್ಟಿದೆ. ಪ್ರಪಂಚದಲ್ಲಿರುವ ಎಲ್ಲಾ ತೀರ್ಥಗಳಲ್ಲೂ ಆಯಾಯ ತೀರ್ಥಾಧಿದೇವತಾರೂಪನಾಗಿಯೂ ಎಲ್ಲಾ ದೇವಗೃಹಗಳಲ್ಲಿಯೂ ಆಯಾಯ ಮೂರ್ತಿಯ ರೂಪದಲ್ಲಿಯೂ ಎಲ್ಲಾ ಲೋಕಗಳಲ್ಲಿಯೂ ಅಲ್ಲಿರುವ ಪ್ರಸಿದ್ಧ ದೇವತಾರೂಪನಾಗಿಯೂ ಸಾಲಿಗ್ರಾಮಗಳಲ್ಲಿಯೂ ಸಮಸ್ತ ಸ್ಥಿರಚರವಸ್ತುಗಳಲ್ಲಿಯೂ ನಾನೇ ಸಾನ್ನಿಧ್ಯವನ್ನು ಹೊಂದಿರುವೆನೆಂದು ಆ ಪರಮಾತ್ಮನ ವಿಶ್ವವ್ಯಾಪ್ತಿಯೇ ಬಹುಮುಖವಾಗಿ ವಿಸ್ತರಿಸಲ್ಪಟ್ಟಿದೆ.

॥ ಶ್ರೀಃ ॥

ಶ್ರೀ ವಾ ಮ ನ ಪು ರಾ ಣಂ

ಏಕನವತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ತತಃ ಸಮಾಗಚ್ಛತಿ ವಾಸುದೇವೇ
ಮಹೀ ಚಕಂಪೇ ಗಿರಯಶ್ಚ ಚೇಲುಃ ।
ಕ್ಷುಬ್ಧಾಃ ಸಮುದ್ರಾ ದಿವಿ ಸರ್ವಲೋಕೋ
ಬಭೌ ವಿಪರ್ಯಸ್ತಗತಿರ್ಮಹರ್ಷೇ ॥ ೧ ॥

ಯಜ್ಞಃ ಸಮಾಗಾತ್ಪರಮಾಕುಲತ್ವಂ
ನ ವೇದ್ಮಿ ಕಿಂ ಮಾಂ ಮಧುಹಾ ಕರಿಷ್ಯತಿ ।
ಯಥಾ ಪ್ರದಗ್ಧೋಽಸ್ಮಿ ಮಹೇಶ್ವರೇಣ
ಕಿಂ ಮಾಂ ನ ಸಂವಕ್ಷ್ಯತಿ ವಾಸುದೇವಃ ॥ ೨ ॥

ತೊಂಭತ್ತೊಂದನೆಯ ಅಧ್ಯಾಯವು

೧-೨. ಪುಲಸ್ತ್ಯರು ಹೇಳುತ್ತಾರೆ. ಆಗ ಆ ವಾಸುದೇವನು ಬಲಿಯ ಯಜ್ಞ ಭೂಮಿಗೆ ಬರುತ್ತಿರುವಾಗ ಭೂಮಿಯೂ ಪರ್ವತಗಳೂ ಸಹ ನಡುಗಿದವು. ಸಮುದ್ರ ಗಳೆಲ್ಲವೂ ಕ್ಷೋಭೆಗೊಂಡವು. ಮೇಲಿರುವ ಸರ್ವಲೋಕಗಳೂ ಅಸ್ತವ್ಯಸ್ತವಾದುವು. ಈ ಮಧುವೈರಿಯಾದ ವಾಸುದೇವನು ಏನು ಮಾಡುವನೋ ಎಂಬ ಭೀತಿಯಿಂದ ಆ ಮಹಾಯಜ್ಞವೂ ವ್ಯಾಕುಲತೆಯಿಂದ ತಲ್ಲಣಿಸಿತ್ತು. ಹಿಂದೆ ಮಹೇಶ್ವರನು (ದಕ್ಷನ ಯಜ್ಞಕಾಲದಲ್ಲಿ) ನನ್ನನ್ನು ಸುಟ್ಟು ನಾಶಮಾಡಿದನು. ಈಗ ಈ ವಾಸುದೇವನು ನನ್ನನ್ನು ಆಕ್ಷೇಪಿಸದಿರುವನೇ ಎಂದು ವ್ಯಾಕುಲಪಟ್ಟಿತು.

ಋಕ್ಸಾಮಮಂತ್ರಾಹುತಿಭಿರ್ಹುತಾಸ್ತು
ತೇ ಹ್ಯಾಸುರೀಯಾಜ್ಜ್ವಲನಾಸ್ತು ಭಾಗಾತ್ ।
ಭಕ್ಷ್ಯಾನ್ ದ್ವಿಜೇಂದ್ರೈರಪಿ ಸಂಪ್ರದತ್ತಾ
ನ್ನೈವ ಪ್ರತೀಚ್ಛತಿ ವಿಭೋರ್ಭಯೇನ ॥ ೩ ॥

ತಂ ದೃಷ್ಟ್ವಾ ಘೋರರರೂಪಂ ತು ನಿಮಿತ್ತಂ ದಾನವೇಶ್ವರಃ ।
ಪಪ್ರಚ್ಛೋಶನಸಂ ಶುಕ್ರಂ ಪ್ರಣಿಪತ್ಯ ಕೃತಾಂಜಲಿಃ ॥ ೪ ॥

ಕಿಮರ್ಥಮಾಚಾರ್ಯ ಮಹೀ ಸಶೈಲಾ
ರಂಭೇವ ವಾತಾಭಿಹತಾ ಚಚಾಲ ।
ಕಿಮಾಸುರೀಯಾಶ್ಚ ಹುತಾನಪೀಹ
ಭಾಗಾನ್ನಗೃಹ್ಣಂತಿ ಹುತಾಶನಾಶ್ಚ ॥ ೫ ॥

ಕ್ಷುಬ್ಧಾಃ ಕಿಮರ್ಥಂ ಮಕರಾಲಯಾ ವಿಭೋ
ಋಕ್ಷಾಣಿ ಖೇನ್ನೈವ ಚರಂತಿ ಪೂರ್ವವತ್ ।

೩-೪. ಅಸುರರಿಂದ ಸ್ಥಾಪಿತಗಳಾಗಿರುವ ಅಗ್ನಿಗಳು ಋಕ್ಸಾಮಾದಿ ವೇದ ಮಂತ್ರಗಳಿಂದ ಹೋಮಮಾಡಲ್ಪಟ್ಟಿದ್ದರೂ ಬ್ರಾಹ್ಮಣೋತ್ತಮರಿಂದ ಕೊಡಲ್ಪಡುತ್ತಿದ್ದ ತನ್ನ ಭಾಗದ ಭಕ್ಷ್ಯಗಳನ್ನು ಪ್ರಭುವಾದ ವಾಸುದೇವನ ಭಯದಿಂದ ಸ್ವೀಕರಿಸಲೇ ಇಲ್ಲ. ಈ ರೀತಿಯಾದ ಅಶುಭನಿಮಿತ್ತವನ್ನು ನೋಡಿ ದಾನವೇಶ್ವರನಾದ ಬಲಿಯು, ಶುಕ್ರಾಚಾರ್ಯನನ್ನು ವಂದಿಸಿ ವಿನಯದಿಂದ ಅಂಜಲಿಬಂಧಪೂರ್ವಕವಾಗಿ ಕೇಳುತ್ತಾನೆ.

೫-೬. ಎಲೈ ಆಚಾರ್ಯನೇ ಭೂಮಿಯೆಲ್ಲವೂ ಗಾಳಿಯ ಆಘಾತದಿಂದ ಚಲಿಸುವ ಬಾಳೆಯ ಕಂಬದಂತೆ ಏತಕ್ಕೆ ನಡುಗಿತು. ಅಸುರರಿಂದ ಸ್ಥಾಪಿತಗಳಾದ ಈ ಅಗ್ನಿಗಳು ಹೋಮಮಾಡಲ್ಪಟ್ಟ ತಮ್ಮ ಭಾಗಗಳನ್ನು ಏತಕ್ಕೆ ಸ್ವೀಕರಿಸುತ್ತಿಲ್ಲ. ಸಮುದ್ರಗಳೆಲ್ಲವೂ ಏತಕ್ಕೆ ಹೀಗೆ ಕ್ಷೋಭೆಗೊಂಡಿವೆ. ಆಕಾಶದಲ್ಲಿ ನಕ್ಷತ್ರಗಳೂ ಸಹ ಮೊದಲಿನಂತೆ ಏಕೆ ಸಂಚರಿಸುತ್ತಿಲ್ಲ. ದಿಕ್ಕುಗಳೆಲ್ಲವೂ ಏತಕ್ಕೆ ಅಂಧಕಾರದಿಂದ ಆವರಿಸಲ್ಪಟ್ಟಿವೆ, ಗುರುವೇ ಈ ಅಶುಭಗಳೆಲ್ಲಾ ಯಾರ ದೋಷದಿಂದ ಉಂಟಾಗಿವೆ ಎಂಬು

ದಿಶಃ ಕಿಮರ್ಥಂ ತಮಸಾ ಪರಿಪ್ಲುತಾ
ದೋಷೇಣ ಕಸ್ಯಾದ್ಯ ವದಸ್ವ ಮೇ ಗುರೋ ॥ ೬ ॥

ಪುಲಸ್ತ್ಯ ಉವಾಚ

ಶುಕ್ರಸ್ತದ್ವಾಕ್ಯಮಾಕರ್ಣ್ಯ ವಿರೋಚನಸುತೇರಿತಂ ।
ಅಥೋ ಜ್ಞಾತ್ವಾ ಕಾರಣಂ ಚ ತತೋ ವಚನಮಬ್ರವೀತ್ ॥ ೭ ॥

ಶುಕ್ರ ಉವಾಚ

ಶೃಣ್ವದ್ಯ ದೈತ್ಯೇಶ್ವರ ಯೇನ ಭಾಗಾ
ನ್ನಾಮೀ ಪ್ರಯಚ್ಛಂತಿ ಮಹಾಸುರೇಭ್ಯಃ ।
ಹುತಾಶನಾಮಂತ್ರಹುತಾಸ್ತ್ವಮೀಭಿ
ರ್ನೂನಂ ಸಮಾಗಚ್ಛತಿ ವಾಸುದೇವಃ ॥ ೮ ॥

ತದಂಘ್ರಿವಿಕ್ಷೇಪಮಪಾರಯಂತೀ
ಮಹೀ ಸಶೈಲಾ ಚಲಿತಾ ದಿಶಶ್ಚ ।
ತಸ್ಯಾಂ ಬಲಂ ಗಾಂ ಮಕರಾಲಯಾಶ್ಚ
ತೂದ್ವೃತ್ತವೇಲಾ ದಿತಿಜಾದ್ಯ ಜಾತಾಃ ॥ ೯ ॥

ದನ್ನು ದಯವಿಟ್ಟು ಹೇಳು. ಪುಲಸ್ತ್ಯರು ಹೇಳುತ್ತಾರೆ. ವಿರೋಚನಪುತ್ರನಾದ ಬಲಿಚಕ್ರವರ್ತಿಯ ಈ ಮಾತನ್ನು ಕೇಳಿ ಶುಕ್ರಾಚಾರ್ಯನು ಇದಕ್ಕೆ ಕಾರಣವೇ ನೆಂಬುದನ್ನು ಜ್ಞಾನದೃಷ್ಟಿಯಿಂದ ತಿಳಿದು ಬಲಿಯನ್ನು ಕುರಿತು ಹೀಗೆ ಹೇಳಿದನು.

೭-೯. ಶುಕ್ರಾಚಾರ್ಯನು ಹೇಳುತ್ತಾನೆ. ಎಲೈ ದೈತರಾಜನೇ, ಅಸುರರಿಂದ ಮಂತ್ರಪೂರ್ವಕವಾಗಿ ಹೋಮಮಾಡಲ್ಪಟ್ಟಿದ್ದರೂ ಈ ಅಗ್ನಿಗಳು, ಅಸುರರಿಂದ ತಮ್ಮ ಭಾಗವನ್ನು ಸ್ವೀಕರಿಸದಿರುವುದಕ್ಕೆ ಕಾರಣವನ್ನು ಹೇಳುತ್ತೇನೆ ಕೇಳು, ವಾಸುದೇವನು ಇಲ್ಲಿಗೆ ಬರುತ್ತಿರಬಹುದು, ಇದೇ ಕಾರಣ, ಅವನ ಪಾದವಿಕ್ಷೇಪವನ್ನು ಸಹಿಸಲು ಸಾಮರ್ಥ್ಯವಿಲ್ಲದೆ ಪರ್ವತಗಳೊಡನೆ ಭೂಮಿಯೂ, ದಿಕ್ಕುಗಳೂ ನಡುಗಿದವು. ಆ ಭೂಮಿಯ ಅವಲಂಬನವನ್ನು ಹೊಂದಿದ್ದ ಸಮುದ್ರಗಳೂ ದಡವನ್ನು ಮೀರಿ ಕ್ಷೋಭೆಗೊಂಡಿವೆ.

ಪುಲಸ್ತ್ಯ ಉವಾಚ

ಶುಕ್ರಸ್ಯ ವಚನಂ ಶ್ರುತ್ವಾ ಬಲಿರ್ಭಾರ್ಗವಮಬ್ರವೀತ್ ।
ಧರ್ಮ್ಯಂ ಸತ್ಯಂ ಚ ಪಥ್ಯಂ ಚ ಸತ್ತ್ವೋತ್ಸಾಹಸಮನ್ವಿತಂ ॥ ೧೦ ॥

ಬಲಿರುವಾಚ

ಆಯಾತೇ ವಾಸುದೇವೇ ವದ ಮಮ
ಭಗವನ್ ಧರ್ಮಕಾಮಾರ್ಥಯುಕ್ತಂ ।
ಕಿಂ ಕಾರ್ಯಂ ಕಿಂ ಚ ದೇಯಂ ಮಣಿಕನಕ
ಮಥೋ ರಾಜ್ಯಮುರ್ವೀ ಧನಂ ವಾ ॥
ಕಿಂ ವಾ ವಾಚ್ಯಂ ಮುರಾರೇರ್ನಿಜಹಿತ
ಮಥವಾ ತದ್ಧಿತಂ ವಾ ಪ್ರಯುಂಜೇ ।
ತಥ್ಯಂ ಪಥ್ಯಂ ಪ್ರಿಯಂ ಭೋ ವದ
ಮಮ ಶುಭದಂ ತತ್ಕರಿಷ್ಯೇ ನ ಚಾಽನ್ಯತ್ ॥ ೧೧ ॥

೧೦-೧೧. ಪುಲಸ್ತ್ಯರು ಹೇಳುತ್ತಾರೆ. ಶುಕ್ರಾಚಾರ್ಯನ ಈ ಮಾತನ್ನು ಕೇಳಿ ಬಲಿಯು ಸತ್ಯಧರ್ಮಗಳಿಂದ ಕೂಡಿ ಹಿತವಾಗಿಯೂ ಸತ್ವಗುಣಕ್ಕೂ ಉತ್ಸಾಹಕ್ಕೂ ಸೂಚಕವಾಗಿಯೂ ಇರುವ ಈ ಮಾತನ್ನು ಶುಕ್ರಾಚಾರ್ಯನಿಗೆ ಹೇಳಿದನು.

ಬಲಿಯು ಹೇಳುತ್ತಾನೆ. ಎಲೈ ಗುರುವೇ, ಪೂಜ್ಯನೇ, ಸರ್ವೇಶ್ವರನಾದ ಆ ವಾಸುದೇವನು ಇಲ್ಲಿಗೆ ಬಂದದ್ದೇ ಆದರೆ, ಧರ್ಮಾರ್ಥಕಾಮಾದಿ ಪುರುಷಾರ್ಥಗಳಿಗೆ ತಕ್ಕಂತೆ ಮಾಡತಕ್ಕ ಕಾರ್ಯವೇನು? ರತ್ನ. ಸುವರ್ಣ, ರಾಜ್ಯ, ಭೂಮಿ, ಧನ ಇವುಗಳಲ್ಲಿ ಯಾವುದನ್ನು ಅವನಿಗೆ ಅರ್ಪಿಸಬೇಕು? ಆ ಮುರಾರಿಯನ್ನು ಕುರಿತು ನನ್ನ ಮತ್ತು ಅವನ ಹಿತಕ್ಕೆ ತಕ್ಕಂತೆ ಯಾವ ಮಾತನ್ನಾಡಬೇಕು. ಅದು ಸತ್ಯವಾಗಿಯೂ, ಹಿತವಾಗಿಯೂ ಪ್ರಿಯವಾಗಿಯೂ ಇರಬೇಕು. ಇವುಗಳಲ್ಲಿ ನನಗೆ ಶುಭವನ್ನುಂಟುಮಾಡುವ ಕಾರ್ಯವನ್ನು ಮಾಡುತ್ತೇನೆ. ಬೇರೆ ಯಾವುದನ್ನೂ ಮಾಡುವುದಿಲ್ಲ. ನೀನು ಇದನ್ನು ಅಪ್ಪಣೆಮಾಡು.

ಪುಲಸ್ತ್ಯ ಉವಾಚ

ತದ್ವಾಕ್ಯಂ ಭಾರ್ಗವಃ ಶ್ರುತ್ವಾ ದೈತ್ಯನಾಥೇರಿತಂ ಮುಹಃ ।
ವಿಚಿಂತ್ಯ ನಾರದ ಪ್ರಾಹ ಭೂತಭವ್ಯಾರ್ಥವಿಾಶ್ವರಃ ॥ ೧೨ ॥

ಶುಕ್ರ ಉವಾಚ

ತ್ವಯಾ ಕೃತಾ ಯಜ್ಞಭುಜೋಽಸುರೇಂದ್ರಾ
ಬಹಿಷ್ಕೃತಾ ಯೇ ಶ್ರುತಿದೃಷ್ಟಮಾರ್ಗಾಃ ।
ಶ್ರುತಿಃ ಪ್ರಮಾಣಂ ಮಖಭಾಗಭಾಜಿನಃ
ಸುರಾಸ್ತದರ್ಥಂ ಹರಿರಭ್ಯುಪೈತಿ ॥ ೧೩ ॥

ತಸ್ಯಾಽಧ್ವರಂ ದೈತ್ಯ ಸಮಾಗತಸ್ಯ
ಕಾರ್ಯಂ ಶೃಣು ತ್ವಂ ಪರಿಪೃಚ್ಛಸೇ ಯತ್ ।
ಕಾರ್ಯಂ ನ ದೇಯಂ ಹಿ ವಿಭೋ ತೃಣಾಗ್ರಂ
ಯದಧ್ವರಂ ಭೂಕನಕಾದಿಕಂ ವಾ ॥ ೧೪ ॥

೧೨-೧೩. ಪುಲಸ್ತ್ಯರು ಹೇಳುತ್ತಾರೆ. ದೈತ್ಯರಾಜನಾದ ಬಲಿಯು ಈ ಮಾತನ್ನು ಕೇಳಿ ಹಿಂದುಮುಂದಿನ ಎಲ್ಲಾ ವಿಷಯಗಳನ್ನೂ ತಿಳಿದಿದ್ದ ಜ್ಞಾನಿಯಾದ ಶುಕ್ರಾಚಾರ್ಯನು ಆಲೋಚಿಸಿ ಬಲಿಯನ್ನು ಕುರಿತು ಹೀಗೆ ಹೇಳಿದನು.

ಶುಕ್ರನು ಹೇಳುತ್ತಾನೆ. ಅಸುರರಾಜನೇ ಯಾರು ವೇದೋಕ್ತಮಾರ್ಗದಿಂದ ಬಹಿಷ್ಕೃತರಾಗಿರುವರೋ ಅಂತಹ ಅಸುರರನ್ನೇ ನೀನು ಯಜ್ಞಭಾಗಾರ್ಹರನ್ನಾಗಿ ಮಾಡಿರುವೆ. ದೇವತೆಗಳೇ ಯಜ್ಞಭಾಗಕ್ಕೆ ಅರ್ಹರೆಂಬುದು ವೇದವೆಂಬ ಪ್ರಬಲ ಪ್ರಮಾಣದಿಂದ ಸಿದ್ಧವಾಗಿದೆ. (ಯಜ್ಞವನ್ನು ಮಾತ್ರ ವೇದೋಕ್ತವಿಧಿಯಿಂದಾಚರಿಸಿ ಹವಿರ್ಭಾಗವನ್ನು ವೇದಬಾಹಿರರಾದ ಅಸುರರಿಗೆ ಕೊಟ್ಟದರಿಂದ ವೇದವಿರೋಧವೂ ಸುರದ್ರೋಹವೂ ಉಂಟಾಗಿದೆ ಎಂದು ತಾತ್ಪರ್ಯ) ಇದಕ್ಕಾಗಿಯೇ (ಸುರರಹಿತಕ್ಕಾಗಿಯೇ) ಆ ಹರಿಯು ಇಲ್ಲಿಗೆ ಬರುತ್ತಿದ್ದಾನೆ.

೧೪-೧೫. ಆ ಹರಿಯು ಈ ಯಜ್ಞಕ್ಕೆ ಬಂದಾಗ ಏನು ಮಾಡಬೇಕು ಎಂಬ ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳುತ್ತೇನೆ ಕೇಳು. ಅವನು ಇಲ್ಲಿಗೆ ಬಂದಾಗ ಈ ಯಾಗದಲ್ಲಿಯಾಗಲಿ ಭೂಮಿ ಸುವರ್ಣ ಮೊದಲಾದುದರಲ್ಲಾಗಲೀ ಅವನಿಗೆ ಒಂದು ಹುಲ್ಲಿನ ಚೂರನ್ನೂ ಸಹ ನೀನು ಕೊಡಕೂಡದು. ಕೇವಲ ಮೃದುವಾದ ಸಾಮೋ

ವಾಚ್ಯಂ ತಥಾ ಸಾಮ ನಿರರ್ಥಕಂ ವಿಭೋ
ಕೆಸ್ತ್ವಾಂ ವರಂ ದಾತುಮಲಂ ಹಿ ಶಕ್ನುಯಾತ್ ।
ಯಸ್ಯೋದರೇ ಭೂರ್ಭುವನಾಕಪಾಲ
ರಸಾತಲೇಶಾ ನಿವಸಂತಿ ನಿತ್ಯಶಃ ॥ ೧೫ ॥

ಬಲಿರುವಾಚ

ಮಯಾ ತವೋಕ್ತಂ ವಚನಂ ಹಿ ಭಾರ್ಗವ
ನ ಚಾರ್ಥಿನೇ ಕಿಂಚನ ದಾತುಮುತ್ಸಹೇ ।
ಸಮಾಗತೇಽಪ್ಯರ್ಥಿನಿ ಹೀನವೃತ್ತೇ
ತದ್ವದ್ಧಿ ದೇವೇ ಕಥಮಾಗತೇ ಹಿ ॥ ೧೬ ॥

ಜನಾರ್ದನೇ ಲೋಕಪತೌ ಮಹರ್ಷೇ
ಸಮಾಗತೇ ನಾಸ್ತಿ ಕಥಂ ನು ವಚ್ಮಿ ।
ಏವಂ ಚ ಶ್ರೂಯತೇ ಲೋಕೇ
ಸತಾಂ ಕಥಯತಾಂ ವಿಭೋ ॥ ೧೭ ॥

ಪಾಯದ ಮಾತಿನಿಂದ ಪ್ರಭುವೇ ನಿನಗೆ ಉತ್ತಮವಸ್ತುಗಳನ್ನು ಕೊಟ್ಟು ತೃಪ್ತಿ ಪಡಿಸಲು ಯಾರುತಾನೇ ಸಮರ್ಥರಾದಾರು. ವಿಶ್ವರೂಪಿಯಾದ ಯಾವ ನಿನ್ನ ಉದರದಲ್ಲಿ ಭೂಲೋಕ ಭುವರ್ಲೋಕ ಸ್ವರ್ಗಲೋಕದ ನಾಯಕರುಗಳೂ ಪಾತಾಲಾಧಿಪತಿಗಳೂ ಯಾವಾಗಲೂ ವಾಸಮಾಡಿಕೊಂಡಿರುವರೋ ಅಂತಹ ಪರಿಪೂರ್ಣನಾದ ನಿನ್ನನ್ನು ತೃಪ್ತಿಪಡಿಸುವವರಾರು ಎಂದು ಮಾತ್ರ ಹೇಳಬೇಕು.

೧೬-೧೭. ಬಲಿಯು ಹೇಳುತ್ತಾನೆ. ಎಲೈ ಭಾರ್ಗವನೇ ಹೀನವೃತ್ತಿಯುಳ್ಳ ಅಲ್ಪನು ಅರ್ಥಿಯಾಗಿ ಬಂದರೂ ಏನನ್ನೂ ಕೊಡದೆ ಅವನನ್ನು ಹಿಂತಿರುಗಿಸಲು ನನಗೆ ಉತ್ಸಾಹವಿಲ್ಲ. ಹೀಗಿರುವ ನಾನು ಪ್ರಭುವಾದ ವಾಸುದೇವನು ಅರ್ಥಿಯಾಗಿ ಬಂದಲ್ಲಿ ಆ ಲೋಕಾಧಿಪತಿಯಲ್ಲಿ ನಾಸ್ತಿ ಶಬ್ದವನ್ನು ಹೇಗೆ ಹೇಳಲಿ ? ಇದಕ್ಕಾಗಿಯೇ ನಾನು ನಿನ್ನಲ್ಲಿ ಮೊದಲೇ ಅರಿಕೆಮಾಡಿದುದು. ಹೀಗೆ ಮಾಡಿದಲ್ಲಿ ಬಲಿಯೂ ನಾಸ್ತಿ ಶಬ್ದವನ್ನು ಹೇಳಿದನಲ್ಲಾ ಎಂದು ಲೋಕದಲ್ಲೆಲ್ಲಾ ಸತ್ಪುರುಷರು ಆಡಿಕೊಳ್ಳುವರು.

ಸದ್ಭಾವೋ ಬ್ರಾಹ್ಮಣೇಷ್ವೇವ ಕರ್ತವ್ಯೋ ಭೂತಿಮಿಚ್ಛತಾ ।
ದೃಶ್ಯತೇಽಪಿ ತಥಾ ತಚ್ಚ ಸತ್ಯಂ ಬ್ರಾಹ್ಮಣಪುಂಗವ ॥ ೧೮ ॥

ಪೂರ್ವಾಭ್ಯಾಸೇನ ಕರ್ಮಾಣಿ ಸಂಭವಂತಿ ನೃಣಾಂ ಸ್ಫುಟಂ ।
ವಾಕ್ಕಾಯಮಾನಸಾನೀಹ ಯೋನ್ಯಂತರಗತಾನ್ಯಪಿ ॥ ೧೯ ॥

ಕಿಂ ವಾ ತ್ವಯಾ ದ್ವಿಜಶ್ರೇಷ್ಠ ಪೌರಾಣೀ ನ ಶ್ರುತಾ ಕಥಾ ।
ಯಾ ವೃತ್ತಾ ಮಲಯೇ ಪೂರ್ವಂ ಕೋಶಕಾರಸುತಸ್ಯ ಚ ॥ ೨೦ ॥

ಶುಕ್ರ ಉವಾಚ

ಕಥಯಸ್ವ ಮಹಾಬಾಹೋ ಕೋಶಕಾರಸುತಾಶ್ರಯಾಂ ।
ಕಥಾಂ ಪೌರಾಣಿಕೀಂ ಬ್ರಹ್ಮನ್ಮಹಾಕೌತೂಹಲಂ ಹಿ ಮೇ ॥ ೨೧ ॥

ಬಲಿರುವಾಚ

ಶೃಣುಷ್ವ ಕಥಯಿಷ್ಯಾಮಿ ಕಥಾಮೇತಾಂ ಮಖಾಂತರೇ ।
ಪೂರ್ವಾಭ್ಯಾಸೇನ ವಿದ್ವಾನ್ಸ್ಥಿ ಸತ್ಯಂ ಭೃಗುಕುಲೋದ್ವಹ ॥ ೨೨ ॥

೧೮-೧೯. ತನ್ನ ಅಭ್ಯುದಯದಲ್ಲಿ ಆಶೆಯುಳ್ಳವನು ಬ್ರಾಹ್ಮಣರಲ್ಲಿ ಅಸ್ತಿ ಎಂದು ಸದ್ಭಾವವನ್ನು ಹೇಳಬೇಕೇ ಹೊರತು ನಾಸ್ತಿ ಎಂಬ ಶಬ್ದವನ್ನು ಹೇಳಬಾರದು. ಎಲೈ ಬ್ರಾಹ್ಮಣೋತ್ತಮನೇ ಅದೇ ಸತ್ಯವೆಂದೇ ತೋರುತ್ತಿದೆ. ಮನುಷ್ಯರ ವಾಕ್ಕಾಯ ಗಳೂ ಮನಸ್ಸೂಕೂಡ ಅವರು ಬೇರೆ ಜನ್ಮವನ್ನು ಹೊಂದಿದ್ದರೂ ಕೂಡ ಪೂರ್ವ ಜನ್ಮದ ಅಭ್ಯಾಸದಿಂದುಂಟಾದ ಸಂಸ್ಕಾರಕ್ಕೆ ತಕ್ಕಂತೆಯೇ ಉಂಟಾಗುತ್ತವೆ.

೨೦-೨೨. ಎಲೈ ಬ್ರಾಹ್ಮಣೋತ್ತಮನೇ ಪೂರ್ವದಲ್ಲಿ ಮಲಯದಲ್ಲಿ ನಡೆದ ಕೋಶಕಾರನ ಮಗನ ಕಥೆಯನ್ನು ನೀನು ಕೇಳಿಲ್ಲವೇ. ಶುಕ್ರನು ಹೇಳುತ್ತಾನೆ. ಎಲೈ ವೀರನೇ ಕೋಶಕಾರಸುತನ ಆ ಪೌರಾಣಿಕವಾದ ಕಥೆಯನ್ನು ಹೇಳು. ಅದನ್ನು ಕೇಳಲು ನನಗೆ ಬಹಳ ಕುತೂಹಲವುಂಟಾಗಿದೆ. ಬಲಿಯು ಹೇಳುತ್ತಾನೆ. ಎಲೈ ಭಾರ್ಗವೋತ್ತಮನೇ ಪೂರ್ವಾಭ್ಯಾಸದಿಂದಲೇ ಜ್ಞಾನವು ಉಂಟಾಗುತ್ತದೆ ಎಂಬುದನ್ನು ಯಜ್ಞಮಧ್ಯದಲ್ಲಿಯೇ ಈ ಕಥೆಯಿಂದ ಹೇಳುತ್ತೇನೆ ಕೇಳು.

ಮುದ್ಗಲಸ್ಯ ಮುನೇಃ ಪುತ್ರೋ ಜ್ಞಾನವಿಜ್ಞಾನಪಾರಗಃ ।
ಕೋಶಕಾರ ಇತಿ ಖ್ಯಾತ ಆಸೀದ್ಬ್ರಹ್ಮಂಸ್ತಪೋಧನಃ ॥ ೨೩ ॥

ತಸ್ಯಾಽಸೀದ್ದಯಿತಾ ಸಾಧ್ವೀ ಧರ್ಮಿಷ್ಠಾ ನಾಮತಃ ಶ್ರುತಾ ।
ಸತೀ ವಾತ್ಸ್ಯಾಯನಸುತಾ ಧರ್ಮಶೀಲಾ ಪತಿವ್ರತಾ ॥ ೨೪ ॥

ತಸ್ಯಾಮಸ್ಯ ಸುತೋ ಜಾತಃ ಪ್ರಕೃತ್ಯಾ ವೈ ಜಡಾಕೃತಿಃ ।
ನಾಽಸೌ ಬ್ರೂತೇ ಮೂರ್ಖವಚ್ಚ ನಾಽಸೌ ಪಶ್ಯತಿ ಚಾಂಧವತ್ ॥ ೨೫ ॥

ತಂ ಜಾತಂ ಬ್ರಾಹ್ಮಣೀಪುತ್ರಂ ಜಡಂ ಮೂಕಂ ವಿಚಕ್ಷುಷಂ ।
ಸಾ ಚ ಮಾತಾ ಗೃಹದ್ವಾರಿ ಷಷ್ಠೇಽಹ್ನಿ ತಮುವಾಸೃಜತ್ ॥ ೨೬ ॥

ತತೋಽಗಾಚ್ಚ ದುರಾಚಾರಾ ರಾಕ್ಷಸೀ ಜಾತಹಾರಿಣೀ ।
ಸ್ವಂ ಶಿಶುಂ ಕೃಶಮಾದಾಯ ಶೂರ್ಪಾಕ್ಷೀ ನಾಮ ನಾಮತಃ ॥ ೨೭ ॥

ತತೋಽತ್ಸೃಜ್ಯ ಸ್ವಪುತ್ರಂ ಸಾ ಜಗ್ರಾಹ ದ್ವಿಜನಂದನಂ ।
ತಮಾದಾಯ ಜಗಾಮಾಽಥ ಭೋಕ್ತುಂ ಶಾಲೋದರೇ ಗಿರೌ ॥ ೨೮ ॥

೨೩-೨೬. ಮುದ್ಗಲನೆಂಬ ಮುನಿಗೆ ಕೋಶಕಾರನೆಂಬ ಮಗನಿದ್ದನು. ಅವನು ತಪಸ್ವಿಯಾಗಿಯೂ ಜ್ಞಾನವಿಜ್ಞಾನ ಪಾರಂಗತನಾಗಿಯೂ ಇದ್ದನು. ಅವನಿಗೆ ವಾತ್ಸ್ಯಾಯನನ ಮಗಳಾದ ಧರ್ಮಿಷ್ಠೆಯೆಂಬ ಪತ್ನಿಯಿದ್ದಳು. ಆ ಸಾಧ್ವೀಮಣಿಯು ಧರ್ಮಶೀಲಳೆಂದೂ ಪತಿವ್ರತೆಯೆಂದೂ ಪ್ರಸಿದ್ಧಿಹೊಂದಿದ್ದಳು. ಆ ಸಾಧ್ವಿಯಲ್ಲಿ ಕೋಶಕಾರನಿಗೆ ಸ್ವಭಾವವಾಗಿಯೇ ಜಡನಾದ ಒಬ್ಬ ಮಗನು ಹುಟ್ಟಿದನು. ಅವನು ಮಾತನ್ನಾಡಲೂ ಸಾಧ್ಯವಿಲ್ಲದ ಮೂಗನಂತೆಯೂ ನೋಡುವುದಕ್ಕೂ ಸಾಮರ್ಥ್ಯವಿಲ್ಲದ ಕುರುಡನಂತೆಯೂ ಇದ್ದನು. ಹುಟ್ಟಿದ ಕಾಲದಲ್ಲೇ ಜಡನಾಗಿಯೂ ಮೂಗನಾಗಿಯೂ ಕುರುಡನಾಗಿಯೂ ಇದ್ದ ಆ ಮಗನನ್ನು ನೋಡಿ ತಾಯಿಯು ಹುಟ್ಟಿದ ಆರನೇಯ ದಿನದಲ್ಲಿಯೇ ಆ ಮಗುವನ್ನು ಮನೆಯ ಹೊರಬಾಗಿಲಿನಲ್ಲಿ ತಂದು ಹಾಕಿದಳು.

೨೭-೨೮. ಆ ಸಮಯಕ್ಕೆ ಸರಿಯಾಗಿ ಶಿಶುಗಳನ್ನು ಅಪಹರಿಸುವ ದುರಾಚಾರಶೀಲಳಾದ ಶೂರ್ಪಾಕ್ಷೀ ಎಂಬ ರಾಕ್ಷಸಿಯು ತನ್ನ ಕೃಶವಾಗಿದ್ದ ಮಗುವೊಂದನ್ನು ಎತ್ತಿಕೊಂಡು ಅಲ್ಲಿಗೆ ಬಂದಳು. ಅವಳು ತನ್ನ ಕೃಶವಾದ ಮಗುವನ್ನು ಅಲ್ಲಿ ಬಿಟ್ಟು ಅಲ್ಲಿದ್ದ ಬ್ರಾಹ್ಮಣ ಶಿಶುವನ್ನು ಎತ್ತಿಕೊಂಡಳು. ಅನಂತರ ಅವಳು ಆ ಮಗುವನ್ನು

ತತಸ್ತಾಮಾಗತಾಂ ವೀಕ್ಷ್ಯ ತಸ್ಯಾ ಭರ್ತಾ ಘಟೋದರಃ ।
ನೇತ್ರಹೀನಃ ಪ್ರತ್ಯುವಾಚ ಕಿಮಾನೀತಂ ತ್ವಯಾ ಪ್ರಿಯೇ ॥ ೨೯ ॥

ಸಾಽಬ್ರವೀದ್ರಾಕ್ಷಸಪತೇ ಮಯಾ ಸ್ಥಾಪ್ಯ ಶಿಶುಂ ನಿಜಂ ।
ಕೋಶಕಾರದ್ವಿಜಗೃಹೇ ತಸ್ಯಾಃ ನೀತಃ ಪ್ರಭೋ ಸುತಃ ॥ ೩೦ ॥

ಸ ಪ್ರಾಹ ನ ತ್ವಯಾ ಭದ್ರೇ ಭದ್ರಮಾಚರಿತಂ ತ್ವಿದಂ ।
ಮಹಾಜ್ಞಾನೀ ದ್ವಿಜೇಂದ್ರೋಽಸೌ ಸ ನಃ ಶಪ್ಸ್ಯತಿ ಕೋಪಿತಃ ॥ ೩೧ ॥

ತಸ್ಮಾಚ್ಛೀಘ್ರಮಿಮಂ ತ್ಯಕ್ತ್ವಾ ತನ್ನ್ಯೂನಂ ಘೋರರೂಪಿಣಂ ।
ಅನ್ಯಸ್ಯ ಕಸ್ಯಚಿತ್ಪುತ್ರಂ ಕ್ಷಿಪ್ರಮಾನಯ ಸುಂದರಿ ॥ ೩೨ ॥

ಇತ್ಯೇವಮುಕ್ತಾ ಸಾ ರೌದ್ರೀ ರಾಕ್ಷಸೀ ಕಾಮರೂಪಿಣೀ ।
ಸಮಾಜಗಾಮ ತ್ವರಿತಾ ಸಮುತ್ಪತ್ಯ ವಿಹಾಯಸಾ ॥ ೩೩ ॥

ಸ ಚಾಪಿ ರಾಕ್ಷಸಸುತೋ ನಿಸ್ಸೃಷ್ಟೋ ಗೃಹಬಾಹ್ಯತಃ ।
ರುರೋದ ಸತ್ವರಂ ಬ್ರಹ್ಮನ್ ಪ್ರಕ್ಷಿಪ್ಯಾಂಗುಷ್ಠಮಾನನೇ ॥ ೩೪ ॥

ಅಪಹರಿಸಿಕೊಂಡು ಅದನ್ನು ಭಕ್ಷಿಸಲು ಶಾಲೋದರ ಪರ್ವತಕ್ಕೆ ಹೊರಟುಹೋದಳು. ಹಾಗೆ ಬಂದ ಆ ಶೂರ್ಪಾಕ್ಷಿಯನ್ನು ನೋಡಿ ಅವಳ ಪತಿಯಾದ ಘಟೋದರನೆಂಬ ಅಂಧಕನು ಪ್ರಿಯೆಯೇ ನನಗೆ ಭಕ್ಷಿಸಲು ಏನು ತಂದಿದ್ದೀಯೆ ಎಂದು ಕೇಳಿದನು.

೩೦-೩೩. ಆಗ ಶೂರ್ಪಾಕ್ಷಿಯು ರಾಕ್ಷಸಾಧಿಪನೇ, ನನ್ನ ಮಗುವನ್ನು ಕೋಶಕಾರನೆಂಬ ಬ್ರಾಹ್ಮಣನ ಮನೆಯಲ್ಲಿಟ್ಟು ಅವನ ಮಗನನ್ನು ತಂದಿದ್ದೇನೆ ಎಂದಳು. ಆಗ ಆ ರಾಕ್ಷಸನು ಎಲೈ ಮಂಗಳಾಂಗಿಯೇ ನೀನು ಮಾಡಿದ ಈ ಕಾರ್ಯವು ಸರಿಯಾದುದಲ್ಲ. ಜ್ಞಾನಿಯಾದ ಆ ಬ್ರಾಹ್ಮಣೋತ್ತಮನು ನಮ್ಮನ್ನು ಶಪಿಸಿಯಾನು, ಆದುದರಿಂದ ಘೋರರೂಪನಾದ ಈ ಬ್ರಾಹ್ಮಣ ಪುತ್ರನನ್ನು ಅಲ್ಲಿಯೇ ಇಟ್ಟು ಬಿಡು, ಸುಂದರಿಯೇ ಇತರರ ಯಾವುದಾದರೊಂದು ಶಿಶುವನ್ನು ತ್ವರೆಯಿಂದ ತೆಗೆದುಕೊಂಡು ಬಾ ಎಂದನು. ಹೀಗೆ ರಾಕ್ಷಸನಿಂದ ಹೇಳಲ್ಪಟ್ಟ ಆ ರಾಕ್ಷಸಿಯು ಕಾಮರೂಪಿಣಿಯಾದುದರಿಂದ ಆಕಾಶಕ್ಕೆ ತ್ವರೆಯಿಂದ ಹಾರಿ ಆಕಾಶಮಾರ್ಗದಿಂದಲೇ ಆ ಬ್ರಾಹ್ಮಣನ ಮನೆಗೆ ಬಂದಳು.

೩೪-೩೬. ಆ ರಾಕ್ಷಸಿಯಿಂದ ಕೋಶಕಾರನ ಮನೆಯ ಬಾಗಿಲಿನಲ್ಲಿ ಬಿಡಲ್ಪಟ್ಟಿದ್ದ ಆ ರಾಕ್ಷಸಶಿಶುವು ಕಾಲಿನ ಅಂಗುಷ್ಠವನ್ನು ಬಾಯಿನಲ್ಲಿಟ್ಟುಕೊಂಡು ಗಟ್ಟಿಯಾಗಿ

ಸಾ ಶಬ್ದಂ ತಂ ಚಿರಾಚ್ಛ್ರುತ್ವಾ ಧರ್ಮಿಷ್ಠಾ ಪತಿಮಬ್ರವೀತ್ ।
ಪಶ್ಯ ಸ್ವಯಂ ಮುನಿಶ್ರೇಷ್ಠ ಸುಶಬ್ದಸ್ತನಯಸ್ತವ ॥ ೩೫ ॥

ತ್ರಸ್ತಾ ಸಾ ನಿರ್ಜಗಾಮಾಽಥ ಗೃಹಮಧ್ಯಾತ್ತಪಸ್ವಿನೀ ।
ಸ ಚಾಪಿ ಬ್ರಾಹ್ಮಣಶ್ರೇಷ್ಠಃ ಸಮುಪೇಕ್ಷ್ಯಚ್ಚ ತಂ ಶಿಶುಂ ॥ ೩೬ ॥

ವರ್ಣರೂಪಾದಿಸಂಯುಕ್ತಂ ತದ್ವತ್ಸ್ವತನಯಂ ಯಥಾ ॥
ತತೋ ವಿಹಸ್ಯ ಪ್ರೋವಾಚ ಕೋಶಕಾರೋ ನಿಜಾಂ ಪ್ರಿಯಾಂ ॥ ೩೭ ॥

ಏವಮಾವಿಶ್ಯ ಧರ್ಮಿಷ್ಠೇ ಭಾವ್ಯಂ ಭೂತೇನ ಸಾಂಪ್ರತಂ ।
ಕೋಽಪ್ಯಸ್ಮಾಕಂ ಛಲಯಿತುಂ ಸ್ವರೂಪೀ ಭುವಿ ಸಂಸ್ಥಿತಃ ॥ ೩೮ ॥

ಇತ್ಯುಕ್ತ್ವಾ ವಚನಂ ಪತ್ನೀಂ ಮಂತ್ರೈಸ್ತಂ ರಾಕ್ಷಸಾತ್ಮಜಂ ।
ಬಬಂಧೋಲ್ಲಿಖ್ಯ ವಸುಧಾಂ ಸಕುಶೇನಾಽಥ ಪಾಣಿನಾ ॥ ೩೯ ॥

ಏತಸ್ಮಿನ್ನಂತರೇ ಪ್ರಾಪ್ತಾ ಶೂರ್ಪಾಕ್ಷೀ ವಿಪ್ರಬಾಲಕಂ ।
ಅಂತರ್ಧಾನಂ ಗತಾ ಭೂಮೌ ಗೃಹೇ ಚಿಕ್ಷೇಪ ದೂರತಃ ॥ ೪೦ ॥

ಅಳತೊಡಗಿತು. ಆಗ ಧರ್ಮಿಷ್ಠೆಯೂ ಆ ಶಬ್ದವನ್ನು ಕೇಳಿ ಪತಿಯನ್ನು ಕುರಿತು, ಮುನಿವರ್ಯನೇ, ನೋಡು ನಿನ್ನ ಮಗನು ತಾನಾಗಿಯೇ ಸುಶಬ್ದದಿಂದ ಅಳುತ್ತಿದ್ದಾನೆ ಎಂದಳು. ಅವಳೂ ಸಹ ಭಯಪಟ್ಟು ಮನೆಯ ಮಧ್ಯದಿಂದ ಓಡಿಬಂದಳು. ಆ ಬ್ರಾಹ್ಮಣೋತ್ತಮನೂ ಮಗುವನ್ನು ನೋಡಿದನು.

೩೭-೪೦. ರೂಪ ಮತ್ತು ಅವಯವಸನ್ನಿವೇಶಗಳಿಂದ ಅದು ತನ್ನ ಮಗುವಿನಂತೆಯೇ ಇದ್ದಿತು. ಆಗ ಆ ಕೋಶಕಾರನು ನಗುತ್ತಾ ತನ್ನ ಪ್ರಿಯೆಯನ್ನು ಕುರಿತು ಧರ್ಮಿಷ್ಠೆಯೇ ಯಾವುದೋ ಒಂದು ಭೂತವು ನಮ್ಮನ್ನು ವಂಚಿಸಲು ಇದರಲ್ಲಿ ಆವೇಶಹೊಂದಿ ಈ ರೂಪದಿಂದ ಭೂಮಿಯಲ್ಲಿ ಮಲಗಿರಬಹುದು, ಎಂದು ಹೇಳಿ ದರ್ಭಪಾಣಿಯಾಗಿ ಭೂಮಿಯಲ್ಲಿ ರೇಖೆಗಳನ್ನು ಬರೆದು ಮಂತ್ರಗಳಿಂದ ಆ ರಾಕ್ಷಸ ಶಿಶುವನ್ನು ಅಲ್ಲಿಯೇ ಬಂಧಿಸಿದನು. ಈ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಬಂದ ಶೂರ್ಪಾಕ್ಷಿಯು ತಾನು ಅಂತರ್ಧಾನಹೊಂದಿಯೇ ತಾನು ಅಪಹರಿಸಿಕೊಂಡು ಹೋಗಿದ್ದ ಬ್ರಾಹ್ಮಣ ಕುಮಾರನನ್ನು ಅವನ ಮನೆಗೆ ಸ್ವಲ್ಪ ದೂರದಲ್ಲಿ ಭೂಮಿಯ ಮೇಲಿಟ್ಟಳು.

ಸ ಕ್ಷಿಪ್ತಮಾತ್ರಂ ಜಗ್ರಾಹ ಕೋಶಕಾರಸ್ತು ಪುತ್ರಕಂ ।
ಸಾ ಚಾsಭ್ಯೇತ್ಯ ಗೃಹೀತುಂ ಸ್ವಂ ನಾಶಕದ್ರಾಕ್ಷಸೀ ಸುತಂ ॥ ೪೧ ॥

ಇತಶ್ಚೇತಶ್ಚ ವಿಭ್ರಷ್ಟಾ ಸಾ ಭರ್ತಾರಮುಪಾಗತಾ ।
ಕಥಯಾಮಾಸ ಯದ್ವೃತ್ತಂ ಸ್ವಕೀಯಾತ್ಮಜಹಾರಿಣಂ ॥ ೪೨ ॥

ಏವಂ ಗತಾಯಾಂ ರಾಕ್ಷಸ್ಯಾಂ ಬ್ರಾಹ್ಮಣೇನ ಮಹಾತ್ಮನಾ ।
ಸ ರಾಕ್ಷಸಶಿಶುರ್ಬ್ರಹ್ಮನ್ಭಾರ್ಯಾಯೈ ವಿನಿವೇದಿತಃ ॥ ೪೩ ॥

ಕಪಿಲಾಯಾಃ ಸವತ್ಸಾಯಾಃ ಪಿತ್ರಾತ್ಮತನಯಸ್ತದಾ ।
ದಧ್ನಾ ಸಂತೋಷಿತೋsತ್ಯರ್ಥಂ ಕ್ಷೀರೇಣೇಕ್ಷುರಸೇನ ಚ ॥ ೪೪ ॥

ದ್ವಾವೇವ ವರ್ಧಿತೌ ಬಾಲೌ ಸಂಜಾತೌ ಸಪ್ತವಾರ್ಷಿಕೌ ।
ಪಿತ್ರಾ ಚ ಕೃತನಾಮಾನೌ ನಿಶಾಕರದಿವಾಕರೌ ॥ ೪೫ ॥

೪೧-೪೩. ಹಾಗೆ ಬಿಟ್ಟೊಡನೆಯೇ ಕೋಶಕಾರನು ಆ ಮಗುವನ್ನು ಎತ್ತಿಕೊಂಡನು. ಮಂತ್ರಬಲದಿಂದ ಬಂಧಿತನಾಗಿದ್ದ ತನ್ನ ಮಗನನ್ನು ಎತ್ತಿಕೊಳ್ಳಲು ಆ ರಾಕ್ಷಸಿಯು ಮಾತ್ರ ಸಾಧ್ಯವಾಗಲಿಲ್ಲ. ಆಗ ಅವಳು ಅಲ್ಲಿ ಇಲ್ಲಿ ತಿರುಗಿ ಎರಡು ಕೆಲಸದಲ್ಲಿಯೂ ಭಂಗಹೊಂದಿ ಗಂಡನ ಸಮೀಪಕ್ಕೆ ಹೊರಟು ಹೋದಳು. ತನ್ನ ಮಗನನ್ನು ಬ್ರಾಹ್ಮಣನು ಅಪಹರಿಸಿದುದನ್ನೂ ತನ್ನ ಪತಿಯೊಡನೆ ಹೇಳಿದಳು, ರಾಕ್ಷಸಿಯು ಹೀಗೆ ಹೊರಟು ಹೋದಮೇಲೆ ಮಹಾತ್ಮನಾದ ಆ ಬ್ರಾಹ್ಮಣನು ಆ ರಾಕ್ಷಸಶಿಶುವನ್ನೂ ರಕ್ಷಿಸಲು ತನ್ನ ಪತ್ನಿಯಲ್ಲಿಯೇ ಕೊಟ್ಟನು.

೪೪-೪೬. ಕರುವನ್ನು ಹಾಕಿರುವ ಕಪಿಲಧೇನುವಿನ ಹಾಲು ಮೊಸರುಗಳಿಂದಲೂ. ಕಬ್ಬಿನ ಹಾಲು ಮುಂತಾದ ಸ್ವಾದ್ಯವಸ್ತುಗಳಿಂದಲೂ, ಆ ಬ್ರಾಹ್ಮಣನು ತನ್ನ ಮಗುವನ್ನು ಸಂತೋಷಪಡಿಸಿ ಸಾಕಲಾರಂಭಿಸಿದನು. ಹೀಗೆ ಸಾಕಲ್ಪಡುತ್ತಿದ್ದ ಇಬ್ಬರೂ ಏಳು ವರ್ಷದವರಾದರು. ತಂದೆಯೂ ಅವರಿಗೆ ನಿಶಾಕರ ದಿವಾಕರರೆಂದು ಹೆಸರಿಟ್ಟನು, ರಾಕ್ಷಸಪುತ್ರನಿಗೆ(ಹಗಲಿನಂತೆ ಪ್ರಕಾಶಮಯವಾದ ಕೀರ್ತಿಯುಳ್ಳೋಣ

ನೈಶಾಕರಿರ್ದಿವಾಕೀರ್ತಿರ್ನಿಶಾಕೀರ್ತಿಃ ಸ್ವಪುತ್ರಕೇ ।
ತಯೋಶ್ಚಕಾರ ವಿಪ್ರೋಽಸೌ ವ್ರತಬಂಧಕ್ರಿಯಾಂ ಕ್ರಮಾತ್ ॥ ೪೬ ॥

ವ್ರತಬಂಧೇ ಕೃತೇ ವೇದಂ ಪಪಾಠಾಸೌ ದಿವಾಕರಃ ।
ನಿಶಾಕರೋ ಜಡತಯಾ ನ ಪಪಾಠೇತಿ ನಃ ಶ್ರುತಂ ॥ ೪೭ ॥

ತಂ ಬಾಂಧವಾಃ ಸ್ವಪಿತರೌ ಮಾತಾ ಭ್ರಾತಾ ಗುರುಸ್ತಥಾ ।
ಪರ್ಯನಿಂದಂಸ್ತಥಾಽನ್ಯೇ ಚ ಜನಾ ಮಲಯವಾಸಿನಃ ॥ ೪೮ ॥

ತತಃ ಸ ಪಿತ್ರಾ ಕ್ರುದ್ಧೇನ ಕ್ಷಿಪ್ತಃ ಕೂಪೇ ತು ನಿರ್ಜಲೇ ।
ಮಹಾಶಿಲಾಂ ತದುಪರಿ ಪಿತಾ ತಸ್ಯಾಽಥ ವ್ಯಕ್ಷಿಪತ್ ॥ ೪೯ ॥

ಏವಂ ಕ್ಷಿಪ್ತಸ್ತದಾ ಕೂಪೇ ಬಹುವರ್ಷಗಣಾನ್ ಸ್ಥಿತಃ ।
ತತ್ರಾಸ್ತ್ಯಾಮಲಕೀಗುಲ್ಮಃ ಪೋಷಾಯ ಫಲಿತೋಽಭವತ್ ॥ ೫೦ ॥

ತತೋ ದಶಸು ವರ್ಷೇಷು ಸಮತೀತೇಷು ಭಾರ್ಗವ ।
ತಸ್ಯ ಮಾತಾಽಗಮತ್ಕೂಪಂ ತಮಪಶ್ಯಚ್ಛಿಲಾನ್ವಿತಂ ॥ ೫೧ ॥

ದರಿಂದ) ದಿವಾಕೀರ್ತಿ ಎಂದೂ ತನ್ನ ಮಗನಿಗೆ (ರಾತ್ರಿಯಂತೆ ಮಲಿನವಾದ ಕೀರ್ತಿಯುಳ್ಳೋಣದರಿಂದ) ನಿಶಾಕೀರ್ತಿ ಎಂದೂ ಹೆಸರಾಯಿತು. ಅವರಿಬ್ಬರಿಗೂ ಬ್ರಾಹ್ಮಣನು ಕ್ರಮವಾಗಿಉಪನಯನವನ್ನೂ ನಡೆಸಿದನು.

೪೭-೫೦. ಉಪನಯನವಾದ ಮೇಲೆ ದಿವಾಕರನು ವೇದವನ್ನು ಪಠಿಸಿದನೆಂದೂ, ಜಡನಾದ ನಿಶಾಕರನು ಪಠಿಸಲಿಲ್ಲವೆಂದೂ ನಾವು ಕೇಳಿದ್ದೇವೆ. ಆ ನಿಶಾಕರನನ್ನು ಬಂಧುಗಳೂ ತಂದೆತಾಯಿಗಳೂ, ಗುರುವೂ ಆ ಮಲಯದಲ್ಲಿದ್ದ ಇತರ ಜನಗಳೂ ಕೂಡ ಬಹಳ ನಿಂದಿಸಿದರು. ಆಗ ಈ ಅಪವಾದದಿಂದ ದುಃಖಪಟ್ಟು ಮಗನ ಜಡತೆಯಿಂದ ಕೋಪಗೊಂಡ ತಂದೆಯು ನೀರಿಲ್ಲದ ಒಂದು ಭಾವಿಯಲ್ಲಿ ಆ ನಿಶಾಕರನನ್ನು ಮುಚ್ಚಿದನು. ಹೀಗೆ ಆ ಭಾವಿಯಲ್ಲಿ ಹಾಕಲ್ಪಟ್ಟ ಆ ನಿಶಾಕರನು, ಬಹಳ ವರ್ಷಗಳು ಅಲ್ಲಿಯೇ ಇದ್ದನು. ಅಲ್ಲಿ ಬೆಳೆದಿದ್ದ ಪೊದರಾಗಿದ್ದ ಒಂದು ನೆಲ್ಲಿಯ ಮರವು ಇವನ ಪೋಷಣೆಗಾಗಿ ಫಲಿತವಾಗಿದ್ದಿತು.

೫೧-೫೩. ಹೀಗೆಯೇ ಹತ್ತುವರ್ಷ ಕಳೆದವು. ಅನಂತರ ತಾಯಿಯಾದ ಧರ್ಮಿಷ್ಠೆಯು ಅಲ್ಲಿಗೆ ಬಂದು ಕಲ್ಲಿನಿಂದ ಮುಚ್ಚಲಾಗಿದ್ದ ಆ ಭಾವಿಯನ್ನು ನೋಡಿ

ಸಾ ದೃಷ್ಟ್ವಾ ನಿಚಿತಂ ಕೂಪೇ ಶಿಲಯಾ ಗಿರಿಕಲ್ಪಯಾ ।
ಉಚ್ಚೈಃ ಪ್ರೋವಾಚ ಕೇನೇಯಂ ಕೂಪೋಪರಿ ಶಿಲಾ ಕೃತಾ ॥ ೫೨ ॥

ಕೂಪಾಂತಸ್ಥಃ ಸುತೋ ವಾಣೀಂ ಶ್ರುತ್ವಾ ಮಾತುರ್ನಿಶಾಕರಃ ।
ಪ್ರಾಹಾಂಬ ದತ್ತಾ ತಾತೇನ ಕೂಪೋಪರಿ ಶಿಲಾತ್ವಿಯಂ ॥ ೫೩ ॥

ಸಾಽತಿಭೀತಾಽಬ್ರವೀತ್ಕೋಽಸಿ ಕೂಪಾಂತಸ್ಥೋಽದ್ಭುತಸ್ವರಃ ।
ಸೋಽಪ್ಯಾಹ ತವ ಪುತ್ರೋಽಸ್ಮಿ ನಿಶಾಕರ ಇತಿ ಶ್ರುತಃ ॥ ೫೪ ॥

ಸಾಽಬ್ರವೀತ್ತನಯೋ ಮೇಽಸ್ತಿ ನಾಮ್ನಾ ಖ್ಯಾತೋ ದಿವಾಕರಃ ।
ನಿಶಾಕರೇತಿ ನಾಮ್ನಾ ಚ ನ ಕಶ್ಚಿತ್ತನಯೋಽಸ್ತಿ ಮೇ ॥ ೫೫ ॥

ಸ ಚ ತತ್ಪೂರ್ವಚರಿತಂ ಮಾತುರ್ನಿರವಶೇಷತಃ ।
ಕಥಯಾಮಾಸ ಪುತ್ರೋಽಸೌ ಯದ್ವೃತ್ತಂ ಪೂರ್ವಮೇವ ಹಿ ॥ ೫೬ ॥

ಸಾ ಶ್ರುತ್ವಾ ತಾಂ ಶಿಲಾಂ ಸುಭ್ರೂಃ ಸಮುತ್ಕ್ಷಿಪ್ಯಾನ್ಯತೋಽಕ್ಷಿಪತ್ ।
ಸ ತು ಕೂಪಾತ್ಸಮುತ್ತೀರ್ಯ ಮಾತುಃ ಪಾದೌ ವವಂದ ಚ ॥ ೫೭ ॥

ದಳು. ಪರ್ವತದಂತೆ ಭಾರವಾಗಿರುವ ಆ ಕಲ್ಲಿನಿಂದ ಮುಚ್ಚಲ್ಪಟ್ಟಿದ್ದ ಭಾವಿಯನ್ನು ನೋಡಿ ಅವಳು ಈ ಭಾವಿಯ ಮೇಲೆ ಈ ಕಲ್ಲನ್ನು ಮುಚ್ಚಿದವರಾರು ಎಂದು ಗಟ್ಟಿಯಾಗಿ ಕೂಗಿ ಕೇಳಿದಳು. ಭಾವಿಯ ಒಳಗಿದ್ದ ನಿಶಾಕರನು ತಾಯಿಯ ಸ್ವರವನ್ನು ಕೇಳಿ ಅಮ್ಮಾ ತಂದೆಯೇ ಈ ಕಲ್ಲನ್ನು ಭಾವಿಯ ಮೇಲೆ ಎಳೆದಿರುವನೆಂದನು.

೫೪-೫೭. ಆಗ ಧರ್ಮಿಷ್ಠೆಯು ಬಹಳ ಭಯದಿಂದ ಭಾವಿಯೊಳಗೆ ಅದ್ಭುತ ಸ್ವರದಿಂದ ಮಾತನಾಡುತ್ತಿರುವ ನೀನು ಯಾರು ಎಂದು ಕೇಳಿದಳು. ಅವನೂ ಸಹ ನಿನ್ನ ಮಗನಾದ ನಿಶಾಕರನೇ ನಾನು ಎಂದನು. ಆಗ ಅವಳು ನನಗೆ ದಿವಾಕರನೆಂಬ ಪ್ರಸಿದ್ಧನಾದ ಮಗನಿರುವನು. ನಿಶಾಕರನೆಂಬ ಹೆಸರಿನ ಮಗನು ನನಗೆ ಯಾವನೂ ಇಲ್ಲವೆಂದಳು. ಆಗ ನಿಶಾಕರನು ತನ್ನ ಪೂರ್ವಚರಿತ್ರೆಯನ್ನೆಲ್ಲಾ ಸಮಗ್ರವಾಗಿ (ಅಂದರೆ ರಾಕ್ಷಸಪುತ್ರನು ಅಲ್ಲಿ ಬಂದು ಸೇರಿರುವುದನ್ನೂ ತನ್ನನ್ನು ಆ ರಾಕ್ಷಸಿಯು ಅಪಹರಿಸಿದ್ದು ಪುನಃ ತಂದುಕೊಟ್ಟುದುದನ್ನೂ) ಆ ತಾಯಿಗೆ ಹೇಳಿದನು. ಆಗ ಅವಳು ಆ ಮಾತನ್ನು ಕೇಳಿ ಭಾವಿಯ ಮೇಲಿದ್ದ ಕಲ್ಲಿನ ಚಪ್ಪಡಿಯನ್ನು ಕಿತ್ತು ಬೇರೆ ಕಡೆ ಹಾಕಿದಳು. ಆಗ ನಿಶಾಕರನು ಭಾವಿಯಿಂದ ಮೇಲಕ್ಕೆ ಬಂದು ತಾಯಿಯ ಪಾದಗಳಿಗೆ ನಮಸ್ಕರಿಸಿದನು.

ಸಾ ಸ್ವಾನುರೂಪಂ ತನಯಂ ದೃಷ್ಟ್ವಾ ಸ್ವಜನಮಗ್ರತಃ ।
ತತಸ್ತಮಾದಾಯ ಸುತಂ ಧರ್ಮಿಷ್ಠಾ ಪತಿಮೇತ್ಯ ಚ ॥ ೫೮ ॥

ಕಥಯಾಮಾಸ ತತ್ಸರ್ವಂ ಚೇಷ್ಟಿತಂ ಸ್ವಸುತಸ್ಯ ಚ ।
ತತೋ ಹ್ಯಪೃಚ್ಛದ್ವಿಪ್ರೋऽಸೌ ಕಿಮಿದಂ ಪಾತಕಾರಣಂ ॥ ೫೯ ॥

ಪ್ರೋಕ್ತವಾನ್ಯದಭೂತ್ಪೂರ್ವಂ ಮಹತ್ಕೌತೂಹಲಂ ಮಮ ।
ತಚ್ಛ್ರುತ್ವಾ ವಚನಂ ಧೀಮಾನ್ಕೋಶಕಾರಂ ದ್ವಿಜೋತ್ತಮಂ ॥
ಪ್ರಾಹ ಪುತ್ರೋऽದ್ಭುತಂ ವಾಕ್ಯಂ ಮಾತರಂ ಪಿತರಂ ತಥಾ ॥ ೬೦ ॥

ನಿಶಾಕರ ಉವಾಚ

ಶ್ರೂಯತಾಂ ಕಾರಣಂ ತಾತ ಯೇನ ಮೂಕತ್ವಮಾಶ್ರಿತಂ ।
ಮಯಾ ಜಡತ್ವಮನಘಂ ತಥಾಂಧತ್ವಂ ಸ್ವಚಕ್ಷುಷಾ ॥ ೬೧ ॥

ಪೂರ್ವಮಾಸಮಹಂ ವಿಪ್ರಕುಲೇ ವೃಂದಾರಕಸ್ಯ ತು ।
ವೃಷಾಕಪೇಶ್ಚ ತನಯೋ ಮಾಲಾಗರ್ಭಸಮುದ್ಭವಃ ॥ ೬೨ ॥

೫೮-೬೦. ಆಗ ಆ ಧರ್ಮಿಷ್ಠೆಯು ಆ ಮಗನು ತನಗೆ ಅನುರೂಪನಾಗಿರುವುದನ್ನು ನೋಡಿ ತಮ್ಮ ಸ್ವಜನರ ಎದುರಿಗೆ ಆ ಮಗನೊಡನೆ ಪತಿಯ ಸಮೀಪಕ್ಕೆ ಬಂದು ತನ್ನ ಮಗನ ವ್ಯಾಪಾರವೆಲ್ಲವನ್ನೂ ಅವನಲ್ಲಿ ಹೇಳಿದಳು. ಆಗ ಆ ಬ್ರಾಹ್ಮಣನು ಈ ರೀತಿ ನೀನು ಪಾಪಿಯಾಗಲು ಕಾರಣವೇನು. ಮೊದಲಿನ ಜನ್ಮದಲ್ಲಿ ಏನು ನಡೆಯಿತು. ನೀನೂ ಸಹ ಏನನ್ನಾಡಿದೆ. ಎಲ್ಲವನ್ನೂ ಹೇಳು. ನನಗೆ ಕುತೂಹಲವಾಗುತ್ತಿದೆ ಎಂದನು. ಆ ಮಾತನ್ನು ಕೇಳಿ ನಿಶಾಕರನು ಕೋಶಕಾರನನ್ನೂ ಅವನ ಪತ್ನಿಯಾದ ಧರ್ಮಿಷ್ಠೆಯನ್ನೂ (ತಂದೆತಾಯಿ) ಎದುರಿಗೆ ಇಟ್ಟುಕೊಂಡು ತನ್ನ ಹಿಂದಿನ ಜನ್ಮಗಳ ಸ್ಮರಣೆಯಿಂದ ಜ್ಞಾನಹೊಂದಿ ಆಶ್ಚರ್ಯಕರವಾದ ತನ್ನ ವೃತ್ತಾಂತವನ್ನೆಲ್ಲಾ ಹೇಳಲಾರಂಭಿಸಿದನು

೬೧-೬೪. ನಿಶಾಕರನು ಹೇಳುತ್ತಾನೆ. ಎಲೈ ತಂದೆಯೇ ನಾನು ಮೂಕನಾಗಿಯೂ ಜಡನಾಗಿಯೂ ಕಣ್ಣಿಲ್ಲದ ಕುರುಡನಾಗಿಯೂ ಆದುದಕ್ಕೆ ಕಾರಣವನ್ನು ಹೇಳುತ್ತೇನೆ ಕೇಳು. ನಾನು ಬಹಳ ಹಿಂದಿನ ಪೂರ್ವಜನ್ಮದಲ್ಲಿ ಬ್ರಾಹ್ಮಣೋತ್ತಮನಾದ ವೃಷಾಕಪಿ ಎಂಬುವನ ಮಗನಾಗಿ ಮಾಲಾ ಎಂಬ ಅವನ ಪತ್ನಿಯ ಗರ್ಭದಲ್ಲಿ

ತತಃ ಪಿತಾಽಪಾಠಯನ್ಮಾಂ ಶಾಸ್ತ್ರಂ ಧರ್ಮಾರ್ಥಕಾಮದಂ ।
ಮೋಕ್ಷಮಾರ್ಗಪರಾಂ ತಾತ ಸೇತಿಹಾಸಂ ಶ್ರುತಿಂ ತಥಾ ॥೬೩॥

ಸೋಽಹಂ ತಾತ ಮಹಾಜ್ಞಾನೀ ಪರಪಾರವಿಶಾರದಃ ।
ಜಾತೋ ಮದಾಂಧಸ್ತೇನಾಽಹಂ ದುಷ್ಕರ್ಮಾಭಿರತೋಽಭವಂ ॥೬೪॥

ಮದಾತ್ಸಮಭವಲ್ಲೋಭಸ್ತೇನ ನಷ್ಟಾ ಪ್ರಗಲ್ಭತಾ ।
ವಿವೇಕೋ ನಾಶಮಗಮನ್ಮದೋ ಮೇ ಮೋಹಮಾಗತಃ ॥೬೫॥

ಮೂಢಭಾವತಯಾ ಚಾಽಥ ಜಾತಃ ಪಾಪರತೋಽಸ್ಮ್ಯಹಂ ।
ಪರದಾರಪರಾರ್ಥೇಷು ಸದಾ ಮೇ ಮಾನಸಂಸ್ಥಿತಂ ॥೬೬॥

ಪರದಾರಾಭಿಮರ್ಶಿತ್ವಾತ್ಪರಾರ್ಥಹರಣಾದಪಿ ।
ಭೃತೋ ಹ್ಯುದ್ಬಂಧನೇನಾಽಹಂ ನರಕಂ ರೌರವಂ ಗತಃ ॥೬೭॥

ತಸ್ಮಾದ್ವರ್ಷಸಹಸ್ರಾಂತೇ ಭುಕ್ತಶಿಷ್ಟೇ ತದಾಽಗಸಿ ।
ಅರಣ್ಯೇ ಮೃಗಹಾ ಪಾಪಃ ಸಂಜಾತೋಽಹಂ ಮೃಗಾಧಿಪಃ ॥೬೮॥

ಜನಿಸಿದ್ದೆನು. ಆಗ ಆ ತಂದೆಯು ನನಗೆ ವೇದವನ್ನೂ ಧರ್ಮಾರ್ಥಕಾಮಮೋಕ್ಷ ಪುರುಷಾರ್ಥಪರವಾದ ಶಾಸ್ತ್ರಗಳನ್ನೂ ಅಧ್ಯಯನ ಮಾಡಿಸಿದ್ದನು. ನಾನು ಆಗ ಮಹಾಜ್ಞಾನಿಯಾಗಿ ಪರಾಪರ ತತ್ವಜ್ಞಾನಿಯಾಗಿಯೂ ಆದೆನು. ಹಾಗಿದ್ದರೂ ಮದಾಂಧನಾಗಿ ದುಷ್ಕಾರ್ಯದಲ್ಲಿಯೇ ಆಸಕ್ತನಾದೆನು.

೬೫-೬೭. ಆ ಮದದಿಂದಲೇ ಲೋಭವೂ (ಆಶೆ) ಉಂಟಾಯಿತು. ಅದರಿಂದ ನನ್ನ ವಾಗ್ಮಿತ್ವವೂ ವಿವೇಕವೂ ನಾಶವಾಗಿ ಆ ಮದವೇ ಆಶೆಯ ಸಹಕಾರದಿಂದ ಮೋಹರೂಪವಾಗಿ ಪರಿಣಮಿಸಿತು. ಆ ರೀತಿ ಮೂಢನಾದ ನಾನು ಪಾಪಕರ್ಮ ದಲ್ಲಿಯೇ ಆಸಕ್ತಿಹೊಂದಿದೆನು. ನನ್ನ ಮನಸ್ಸೆಲ್ಲವೂ ಪರಸ್ತ್ರೀಯರಲ್ಲೂ ಪರದ್ರವ್ಯದಲ್ಲೂ ಯಾವಾಗಲೂ ನಿರತವಾಗಿ ನಿಂತಿತು. ಹಾಗೆಯೇ ಪರಸ್ತ್ರೀಗಮನದಿಂದಲೂ ಪರ ದ್ರವ್ಯಾಪಹರಣದಿಂದಲೂ ಅಪರಾಧಿಯಾಗಿ ಕೊನೆಗೆ ಉದ್ಬಂಧನ (ನೇಣು) ದಿಂದ ನಾನು ಮೃತನಾಗಿ ರೌರವವೆಂಬ ನರಕಕ್ಕೆ ಹೋದೆನು.

೬೮-೭೦. ಅಲ್ಲಿ ಸಹಸ್ರವರ್ಷಪರ್ಯಂತವೂ ಪಾಪದ ಫಲವಾದ ದುಃಖವನ್ನನು ಭವಿಸಿ ಉಳಿದುಹೋದ ಪಾಪಗಳ ಫಲಾನುಭವಕ್ಕಾಗಿ ಅರಣ್ಯದಲ್ಲಿ ಮೃಗಹಿಂಸಕವಾದ

ವ್ಯಾಘ್ರತ್ವೇ ಸಂಸ್ಥಿತಸ್ತಾವದ್ಬದ್ಧಃ ಪಂಜರಗಃ ಕೃತಃ ।
ನರಾಧಿಪೇನ ವಿಭುನಾ ನೀತಶ್ಚ ನಗರಂ ದ್ವಿಜ ॥ ೧೯ ॥

ಬದ್ಧಸ್ಯ ಪಂಜರಸ್ಥಸ್ಯ ವ್ಯಾಘ್ರತ್ವೇಽಪಿ ಸ್ಥಿತಸ್ಯ ಚ ।
ಧರ್ಮಾರ್ಥಕಾಮಶಾಸ್ತ್ರಾಣಿ ಪ್ರತ್ಯಭಾಸಂತ ಸರ್ವಶಃ ॥ ೨೦ ॥

ತತೋ ನೃಪತಿಶಾರ್ದೂಲೋ ಗದಾಪಾಣಿಃ ಕದಾಚನ ।
ಏಕವಸ್ತ್ರಪರೀಧಾನೋ ನಗರಾನ್ನಿರ್ಯಯೌ ಬಹಿಃ ॥ ೨೧ ॥

ತಸ್ಯ ಭಾರ್ಯಾಽಜಿತಾ ನಾಮ ರೂಪೇಣಾಽಪ್ರತಿಮಾ ಭುವಿ ।
ಸಾ ನಿರ್ಗತೇ ಭರ್ತರಿ ತು ಮಮಾಂತಿಕಮುಪಾಗತಾ ॥ ೨೨ ॥

ತಾಂ ದೃಷ್ಟ್ವಾ ವವೃಧೇ ಚಿತ್ತೇ ಪೂರ್ವಾಭ್ಯಾಸಾನ್ಮನೋಭವಃ ।
ಯಥೈವ ಕಾಮಶಾಸ್ತ್ರೇಷು ತತೋಽಹಮವದಂ ಚ ತಾಂ ॥ ೨೩ ॥

ರಾಜಪುತ್ರಿ ಸುಕಲ್ಯಾಣಿ ನವಯೌವನಶಾಲಿನಿ ।
ಚಿತ್ತಂ ಹರಸಿ ಮೇ ಭೀರು ಕೋಕಿಲಾ ಧ್ವನಿನಾ ಯಥಾ ॥ ೨೪ ॥

ವ್ಯಾಘ್ರಜನ್ಮದಿಂದ ಪುನಃ ಹುಟ್ಟಿದೆನು. ಹಾಗೆ ಹುಲಿಯಾಗಿ ಅರಣ್ಯದಲ್ಲಿ ಸಂಚರಿಸುತ್ತಿದ್ದ ನನ್ನನ್ನು ಬೇಟೆಗೆ ಬಂದ ಒಬ್ಬ ದೊರೆಯು ಪಂಜರದಲ್ಲಿ ಬಂಧಿಸಿ ತನ್ನ ನಗರಕ್ಕೆ ಒಯ್ದನು. ಹಾಗೆ ಹುಲಿಯ ಜನ್ಮದಿಂದ ಪಂಜರದಲ್ಲಿ ಬಂಧಿತನಾಗಿದ್ದರೂ ಪೂರ್ವ ಜನ್ಮದಲ್ಲಿ ಹೊಂದಿದ್ದ ಅಭ್ಯಾಸಬಲದಿಂದ ಧರ್ಮಾರ್ಥಕಾಮಶಾಸ್ತ್ರಗಳು ಪುನಃ ಮನಸ್ಸಿನಲ್ಲಿ ನನಗೆ ಹೊಳೆದವು

೨೧-೨೫. ಒಂದಾನೊಂದು ಸಮಯದಲ್ಲಿ ಆ ದೊರೆಯು ಗದೆಯನ್ನು ಹಿಡಿದು ಒಂದೇ ವಸ್ತ್ರದಿಂದ ಕೂಡಿ ಯಾವುದೋ ಒಂದು ಕಾರಣದಿಂದ ನಗರದ ಹೊರಕ್ಕೆ ಹೊರಟನು. ಅವನ ಹೆಂಡತಿಯಾದ ಅಜಿತಾ ಎಂಬ ಅಪ್ರತಿಮರೂಪಳಾದ ಸುಂದರಿಯು ದೊರೆಯು ಹೊರಗೆ ಹೊರಟ ಮೇಲೆ ನನ್ನ ಸಮೀಪಕ್ಕೆ ಬಂದಳು. ಅವಳನ್ನು ನೋಡಿದೊಡನೆಯೇ ಪೂರ್ವಾಭ್ಯಾಸದಿಂದ ನನ್ನ ಮನಸ್ಸಿನಲ್ಲಿ ಕಾಮಾತುರತೆಯು ಅಭಿವೃದ್ಧಿಹೊಂದಿತು. ಆಗ ನಾನು ಕಾಮಶಾಸ್ತ್ರದಲ್ಲಿ ಹೇಳಿರುವ ಪರಸ್ತ್ರೀವಶೀಕರಣ ಮಾರ್ಗವನ್ನನುಸರಿಸಿ ಅವಳನ್ನು ಕುರಿತು, ಎಲೈ ಶೋಭನಾಂಗಿಯೇ ನವಯೌವನದಿಂದ ಮೆರೆಯುತ್ತಿರುವ ರಾಜಪುತ್ರಿಯೇ ಕೋಕಿಲೆಯು ತನ್ನ ಧ್ವನಿಯಿಂದ ಆಕರ್ಷಿಸುವಂತೆ ಸೌಂದರ್ಯದಿಂದ ನನ್ನ ಮನಸ್ಸನ್ನೇ ನೀನು ಸೂರೆಗೊಳ್ಳುತ್ತಿದ್ದೀಯೇ ಎಂದು

ಸಾ ತದ್ವಚನಮಾಕರ್ಣ್ಯ ಪ್ರೋವಾಚ ತನುಮಧ್ಯಮಾ ।
ಕಥಮೇನಾವಯೋರ್ವ್ಯಾಘ್ರ ರತಿಯೋಗ ಉಪೈಷ್ಯತಿ ॥ ೭೫ ॥

ತತೋಽಹಮಬ್ರವಂ ತಾತ ರಾಜಪುತ್ರೀಂ ಸುಮಧ್ಯಮಾಂ ।
ದ್ವಾರಮುದ್ಘಾಟಯಾದ್ಯ ತ್ವಂ ನಿರ್ಗಮಿಷ್ಯಾಮಿ ಸತ್ವರಂ ॥ ೭೬ ॥

ಸಾ ಪ್ಯಬ್ರವೀದ್ದಿವಾ ವ್ಯಾಘ್ರ ಲೋಕೋಽಯಂ ಪರಿಪಶ್ಯತಿ ।
ರಾತ್ರಾವುದ್ಘಾಟಯಿಷ್ಯಾಮಿ ತತೋ ರಂಸ್ಯಾವ ಚೇಚ್ಛಯಾ ॥ ೭೭ ॥

ತಾಮೇವಾಹಮವೋಚಂ ನೈ ಕಾಲಕ್ಷೇಪೋ ನ ಮೇ ಕ್ಷಮಃ ।
ತಸ್ಮಾದುದ್ಘಾಟಯ ದ್ವಾರಂ ಮಾಂ ಬಂಧಾಚ್ಚ ವಿಮೋಚಯ ॥ ೭೮ ॥

ತತಃ ಸಾಽಪಿ ವರಶ್ರೋಣೀ ದ್ವಾರಮುದ್ಘಾಟಯಚ್ಛನೈಃ ।
ಉದ್ಘಾಟಿತೇ ತತೋ ದ್ವಾರೇ ನಿರ್ಗತೋಽಹಂ ಬಹಿಃ ಕ್ಷಣಾತ್ ॥ ೭೯ ॥

ಚಾಟೂಕ್ತಿಯಿಂದ ನುಡಿದೆನು, ಸೂಕ್ಷ್ಮಮಧ್ಯೆಯಾದ ಆ ಸುಂದರಿಯೂ ಸಹ ನನ್ನ ಚಾಟುವಚನಕ್ಕೆ ಬೆರಗಾಗಿ ಹುಲಿಯೇ ನಮ್ಮಿಬ್ಬರಿಗೂ ರತಿಯ ಸಂಬಂಧವು ಹೇಗೆ ತಾನೆ ಆಗಬಹುದು ಎಂದು ಕೇಳಿದಳು.

೭೬-೭೯. ಆಗ ನಾನು ಆ ಸುಂದರಿಯನ್ನು ಕುರಿತು ನೀನು ಈ ಪಂಜರದ ಬಾಗಿಲನ್ನು ತೆರೆದದ್ದೇ ಆದರೆ ನಾನು ತ್ವರೆಯಿಂದ ಹೊರಗೆ ಬರುತ್ತೇನೆ. ಆಗ ನಮ್ಮ ರತಿಸುಖಕ್ಕೆ ಅನುಕೂಲ ಉಂಟು ಎಂದೆನು, ಆಗ ಅವಳು ವ್ಯಾಘ್ರನೇ ಈ ಹಗಲಿನಲ್ಲಿ ಜನರೆಲ್ಲರೂ ನೋಡುತ್ತಾರೆ. ರಾತ್ರಿಯಲ್ಲಿ ಬಾಗಿಲನ್ನು ತೆರೆಯುತ್ತೇನೆ ಆಗ ನಾವು ಯಥೇಚ್ಛವಾಗಿ ರಮಿಸಬಹುದು ಎಂದಳು. ಆಗ ಅವಳನ್ನು ಕುರಿತು ನಾನು ಕಾಲ ವಿಲಂಬವನ್ನು ಸಹಿಸಲಾರೆ ಜಾಗ್ರತೆಯಾಗಿ ಬಾಗಿಲನ್ನು ತೆಗೆದು ನನ್ನನ್ನು ಈ ಬಂಧನ ದಿಂದ ಬಿಡುಗಡೆ ಮಾಡು ಎಂದೆನು, ಆಗ ಆ ಸುಂದರಿಯು ಮೆಲ್ಲಗೆ ಬಾಗಿಲನ್ನು ತೆರೆದಳು, ಒಡನೆಯೇ ನಾನು ಆಕ್ಷಣದಲ್ಲಿಯೇ ಹೊರಗೆ ಬಂದೆನು.

ನಿಗಡಾದಿಕಪಾಶಾಶ್ಚ ಛಿನ್ನಾ ಬಲವತಾ ಮಯಾ ।
ಸಾ ತದಾ ನೃಪತೇರ್ಭಾರ್ಯಾ ಗೃಹೀತಾ ರಂತುಮಿಚ್ಛತಾ ॥ ೮೦ ॥

ತತೋ ದೃಷ್ಟೋಽಸ್ಮಿ ನೃಪತೇರ್ಭೃತ್ಯೈರತುಲವಿಕ್ರಮೈಃ ।
ಶಸ್ತ್ರಹಸ್ತೈಃ ಸರ್ವತಶ್ಚ ತೈರಹಂ ಪರಿವೇಷ್ಟಿತಃ ॥ ೮೧ ॥

ಮಹಾಪಾಶೈಃ ಶೃಂಖಲಾಭಿಃ ಸಮಾವೃತ್ಯ ಚ ಮುದ್ಗರೈಃ ।
ಬದ್ಧಸ್ತಾನಬ್ರವಂ ನ್ವೈವಂ ಮಾಂ ಹಂತುಂ ಯೂಯಮರ್ಹತ ॥ ೮೨ ॥

ತೇ ಚ ಮದ್ವಚನಂ ಶ್ರುತ್ವಾ ಮಾಮೇವಂ ರಜನೀಚರಂ ।
ವಟವೃಕ್ಷೇ ದೃಢಂ ಬದ್ಧ್ವಾ ಘಾತಯನ್ವೈ ತಪೋಧನ ॥ ೮೩ ॥

ಭೂಯಸ್ತತಶ್ಚ ನರಕಂ ಪರದಾರನಿಷೇವಣಾತ್ ।
ಗತೋ ವರ್ಷಸಹಸ್ರಾಂತೇ ಜಾತೋಽಹಂ ಶ್ವೇತಗರ್ದಭಃ ॥ ೮೪ ॥

೮೦-೮೨. ನನಗೆ ಹಾಕಿದ್ದ ಸಂಕೋಲೆ ಪಾಶಗಳೆಲ್ಲವನ್ನೂ ಸಾಮರ್ಥ್ಯದಿಂದ ಪುಡಿಪುಡಿಮಾಡಿ ರಮಿಸುವ ಇಚ್ಛೆಯಿಂದ ಆ ಧೊರೆಯ ಹೆಂಡತಿಯನ್ನು ಹಿಡಿದುಕೊಂಡೆನು. ಆಗ ಪರಾಕ್ರಮಿಗಳಾದ ಆ ಧೊರೆಯ ಭೃತ್ಯರು ನನ್ನನ್ನು ನೋಡಿ ಶಸ್ತ್ರಪಾಣಿಗಳಾಗಿ ನನ್ನನ್ನು ಸುತ್ತುವರಿದರು. ದೊಣ್ಣೆ ಮೊದಲಾದ ಆಯುಧಗಳಿಂದ ನನ್ನನ್ನು ಪ್ರಹರಿಸಿ ದೊಡ್ಡ ದೊಡ್ಡ ಪಾಶಗಳಿಂದಲೂ ಸರಪಣಿಗಳಿಂದಲೂ ನನ್ನನ್ನು ಕಟ್ಟಿದರು. ಅವರನ್ನು ಕುರಿತು ನೀವು ಹೀಗೆ ನನ್ನನ್ನು ಕೊಲ್ಲಲಾರಿರಿ ಎಂದೂ ನಾನು ಹೇಳಿದೆನು.

೮೩-೮೪. ಅವರು ಈ ನನ್ನ ಮಾತನ್ನು ಕೇಳಿ ನಾನು ರಾತ್ರಿಯಲ್ಲೂ ಸಂಚರಿಸತಕ್ಕವನು (ಅಥವಾ ರಾಕ್ಷಸನು) ಎಂದು ತಿಳಿದು ಒಂದು ಆಲದ ಮರಕ್ಕೆ ನನ್ನನ್ನು ಭದ್ರವಾಗಿ ಬಿಗಿದು ಹೊಡೆದು ಬಹಳ ಘಾಸಿಪಡಿಸಿದರು. ಆಗ ನಾನು ಅಲ್ಲಿಯೇ ಮೃತನಾಗಿ ಪರಸ್ತ್ರೀ ಸೇವನದಿಂದ ಪುನಃ ನರಕವನ್ನು ಹೊಂದಿದೆನು. ಅಲ್ಲಿ ಸಹಸ್ರ ವರ್ಷಪರ್ಯಂತವೂ ನರಕದ ದುಃಖವನ್ನನುಭವಿಸಿ ಉಳಿದ ಪಾಪದ ಅನುಭವಕ್ಕಾಗಿ

ಬ್ರಾಹ್ಮಣಸ್ಯಾಽಗ್ನಿವೇಶ್ಯಸ್ಯ ಗೃಹೇ ಬಹುಕಲತ್ರಿಣಃ ।
ತತ್ರಾಽಪಿ ಸರ್ವವಿಜ್ಞಾನಂ ಪ್ರತ್ಯಭಾಸತ ಮೇ ತದಾ ॥ ೮೫ ॥

ಉಪವಾಹ್ಯಃ ಕೃತಶ್ಚಾಸ್ಮಿ ದ್ವಿಜಯೋಷಿದ್ಭಿರಾದರಾತ್ ।
ಏಕದಾ ನವರಾಷ್ಟ್ರೀಯಾ ಭಾರ್ಯಾ ತಸ್ಯಾಗ್ರಜನ್ಮನಃ ॥ ೮೬ ॥

ವಿಮತಿರ್ನಾಮತಃ ಖ್ಯಾತಾ ಗಂತುಮಿಚ್ಛದ್ಗೃಹೇ ಪಿತುಃ ।
ತಾಮುವಾಚ ಪತಿರ್ಗಚ್ಛ ಆರುಹ್ಯೈನಂ ಚ ಗರ್ದಭಂ ॥ ೮೭ ॥

ಮಾಸೇನಾಗಮನಂ ಕಾರ್ಯಂ ನ ಸ್ಥೇಯಂ ಪರತಸ್ತತಃ ।
ಇತ್ಯೇವಮುಕ್ತಾ ಸಾ ಭರ್ತ್ರಾ ತನ್ಮೀ ಚಾರುಹ್ಯ ಗರ್ದಭಂ ॥ ೮೮ ॥

ಬಂಧನಾದವಮುಚ್ಯಾಥ ಜಗಾಮ ತ್ವರಿತಾ ಮುನೇ ।
ತತೋಽರ್ಧಪಥಿ ಸಾ ತನ್ಮೀ ಮತ್ಪೃಷ್ಠಾದವರುಹ್ಯ ವೈ ॥ ೮೯ ॥

ಬಿಳಿಯ ಕತ್ತೆಯಾಗಿ ಪುನಃ ಹುಟ್ಟಿದೆನು. ಬಹು ಕುಟುಂಬಿಯಾಗಿದ್ದ ಅಗ್ನಿವೇಶ್ಯನೆಂಬ ಬ್ರಾಹ್ಮಣನ ಮನೆಯನ್ನು ಸೇರಿದ ನನಗೆ ಆ ಕತ್ತೆಯ ಜನ್ಮದಲ್ಲೂ ಸಹ ಪೂರ್ವಾಭ್ಯಾಸದಿಂದ ಸರ್ವಶಾಸ್ತ್ರವಿಜ್ಞಾನವೂ ಮನಸ್ಸಿನಲ್ಲಿ ಹೊಳೆಯಿತು.

೮೬-೮೮. ಆ ಬ್ರಾಹ್ಮಣನ ಮನೆಯ ಸ್ತ್ರೀಯರು ನನ್ನನ್ನು ಪ್ರೀತಿಯಿಂದ ವಾಹನವನ್ನಾಗಿ ಮಾಡಿಕೊಂಡಿದ್ದರು. ಒಂದಾನೊಂದು ದಿನ ಆ ಬ್ರಾಹ್ಮಣಪತ್ನಿಯಾದ ನವರಾಷ್ಟ್ರದೇಶದ ವಿಮತಿ ಎಂಬುವಳು ತನ್ನ ತಂದೆಯ ಮನೆಗೆ ಹೊರಡಲು ಇಚ್ಛಿಪಟ್ಟಳು. ಆಗ ಅವಳನ್ನು ಕುರಿತು ಪತಿಯಾದ ಬ್ರಾಹ್ಮಣನು ಈ ಕತ್ತೆಯನ್ನು ಹತ್ತಿಕೊಂಡು ನೀನು ಪ್ರಯಾಣಮಾಡು, ಒಂದು ತಿಂಗಳಲ್ಲಿ ಇಲ್ಲಿಗೆ ಹಿಂದೆ ತಿರುಗಿ ಬಂದು ಸೇರಬೇಕು. ಅದಕ್ಕೂ ಹೆಚ್ಚುಕಾಲ ಅಲ್ಲಿರಕೂಡದು ಎಂದನು. ಹೀಗೆ ಪತಿಯಿಂದ ಹೇಳಲ್ಪಟ್ಟ ಆ ಯುವತಿಯು ಬಂಧನದಿಂದ ಬಿಡಿಸಿ ಕತ್ತೆಯಾಗಿದ್ದ ನನ್ನ ಮೇಲೆ ಕುಳಿತು ವೇಗದಿಂದ ಪ್ರಯಾಣಮಾಡಿ ಹೊರಟಳು.

೮೯-೯೧. ಹೀಗೆ ಹೋಗುತ್ತಾ ಅರ್ಧಮಾರ್ಗದಲ್ಲಿ ಆ ಯುವತಿಯು ನನ್ನ ಬೆನ್ನಿನಿಂದ ಕೆಳಕ್ಕೆ ಇಳಿದು ಸ್ನಾನಮಾಡಲು ನದಿಗೆ ಇಳಿದಳು. ಸ್ನಾನಮಾಡಿ ಒದ್ದೆಯ

ಅವತೀರ್ಣಾ ನದೀಂ ಸ್ನಾತುಂ ಸುರೂಪಾಮಾರ್ದ್ರವಾಸಸಂ ।
ಸರ್ವೈರಂಗೈ ರೂಪವತೀಂ ದೃಷ್ಟ್ವಾ ತಾಮುಹಮಾದ್ರವಂ ॥೯೦॥

ಮಯಾ ಚಾಽಭಿಧೃತಾ ತೂರ್ಣಂ ಪತಿತಾ ಪೃಥಿವೀತಲೇ ।
ತಸ್ಯಾ ಉಪರಿ ಭೋ ತಾತ ಪತಿತೋಽಹಂ ತದಾಽತುರಃ ॥೯೧॥

ದೃಷ್ಟೋಽಭವಂ ತದಾ ತಸ್ಯಾ ನೃಣಾ ತದನುಸಾರಿಣಾ ।
ತದೋದ್ಯಮ್ಯ ಯಷ್ಟಿಂ ಮಾಂ ಸಮಧಾವತ್ತ್ವರಾನ್ವಿತಃ ॥೯೨॥

ತದ್ಭಯಾತ್ತಾಂ ಪರಿತ್ಯಜ್ಯ ಪ್ರದ್ರುತೋ ದಕ್ಷಿಣಾಮುಖಃ ।
ತತೋಽಭಿದ್ರವತಸ್ತೂರ್ಣಂ ಖಲೀನರಶನಾ ಮುನೇ ॥೯೩॥

ಸಮಾಸನ್ನಾ ತದಾ ಬ್ರಹ್ಮನ್ಮಮಾಽಸೌ ಪ್ರಾಣನಾಶನೇ ।
ತತ್ರಾಽಸಕ್ತಸ್ಯ ಷಡ್ರಾತ್ರಾದಭೂನ್ಮೇ ಜೀವಿತಕ್ಷಯಃ ॥೯೪॥

ತತೋಽಸ್ಮಿ ನರಕಂ ಭೂಯಸ್ತಸ್ಮಾನ್ಮುಕ್ತೋಽಭವಂ ಶುಕಃ ।
ಮಹಾರಣ್ಯೇ ತತೋ ಬದ್ಧಃ ಶಬರೇಣ ದುರಾತ್ಮನಾ ॥೯೫॥

ವಸ್ತ್ರದಿಂದ ಸರ್ವಾವಯವಾಭಿವ್ಯಕ್ತಿಯುಳ್ಳ ಆ ಸುಂದರಿಯನ್ನು ನೋಡಿದೊಡನೆಯೇ ಕಾಮಾತುರನಾದ ನಾನು ಅವಳ ಸಮೀಪಕ್ಕೆ ಓಡಿಹೋದೆನು. ನನ್ನಿಂದ ಆಕ್ರಮಿಸಲ್ಪಟ್ಟ ಆ ಯುವತಿಯು ಒಡನೆಯೇ ಭೂಮಿಯಲ್ಲಿ ಬಿದ್ದಳು. ಕಾಮುಕನಾದ ನಾನು ಅಲ್ಲಿಯೇ ಅವಳ ಮೇಲೆ ಬಿದ್ದೆನು.

೯೨-೯೪. ಆಗ ಆ ಯುವತಿಗೆ ರಕ್ಷಕನಾಗಿ ಬಂದಿದ್ದ ಭೃತ್ಯನೊಬ್ಬನ ಕಣ್ಣಿಗೆ ನಾನು ಬಿದ್ದೆನು. ಆಗ ಅವನು ಕೋಲನ್ನು ಎತ್ತಿಕೊಂಡು ಹೊಡೆಯಲು ನನ್ನ ಸಮೀಪಕ್ಕೆ ಓಡಿಬಂದನು, ಆ ಭಯದಿಂದ ನಾನು ಅವಳನ್ನು ಬಿಟ್ಟು ದಕ್ಷಿಣದ ಕಡೆಗೆ ಓಡಿದೆನು, ಆಗ ವೇಗದಿಂದ ಓಡುವಾಗ ನನ್ನ ಕಡಿವಾಣದ ಹಗ್ಗವು ಸುತ್ತಿಕೊಂಡು ನನ್ನ ಪ್ರಾಣತ್ಯಾಗಕ್ಕೆ ಅದೇ ಕಾರಣವಾಯಿತು. ಅದರಿಂದ ಸುತ್ತುವರಿಯಲ್ಪಟ್ಟು ಅಲ್ಲಿಯೇ ಬಿದ್ದ ನನಗೆ ಆರು ರಾತ್ರಿಯಲ್ಲಿ ಮರಣವೇ ಉಂಟಾಯಿತು.

೯೫-೯೬. ಅನಂತರ ಪುನಃ ನರಕವನ್ನು ಸೇರಿದ ನನಗೆ ಪಾಪಶೇಷದ ಅನುಭವಕ್ಕಾಗಿ ಪುನಃ ಗಿಣಿಯ ಜನ್ಮವು ಬಂದಿತು. ಆ ಗಿಣಿಯ ರೂಪದಿಂದ ಅರಣ್ಯದಲ್ಲಿ ಸಂಚರಿಸುತ್ತಿದ್ದ ನನ್ನನ್ನು ಒಬ್ಬ ದುಷ್ಟನಾದ ಬೇಡನು ಬಂಧಿಸಿದನು. ಅವನು ನನ್ನನ್ನು

ಪಂಜರೇ ನ್ಯಸ್ಯ ವಿಕ್ರೀತೋ ವಣಿಕ್ಪುತ್ರಾಯ ಶಾಲಿನೇ ।
ತೇನಾಪ್ಯಂತಃಪುರತರೇ ಯುವತೀನಾಂ ಸಮೀಪತಃ ॥೯೭॥

ಸರ್ವಶಾಸ್ತ್ರವಿದಿತ್ಯೇವ ದೋಷಘ್ನಶ್ಚೇತ್ಯವಸ್ಥಿತಃ ।
ತತ್ರಾಸತಸ್ತರುಣ್ಯಸ್ತಾ ಓದನಾದಿಫಲಾದಿಭಿಃ ॥೯೭॥

ಪಕ್ವೈಶ್ಚ ದಾಡಿಮಫಲೈಃ ಪೋಷಯಂತ್ಯೋ ದಿನೇ ದಿನೇ ।
ಏಕದಾ ಪದ್ಮಪತ್ರಾಕ್ಷೀ ಶ್ಯಾಮಾ ಪೀನಪಯೋಧರಾ ॥೯೮॥

ಸುಶ್ರೋಣೀ ತನುಮಧ್ಯಾ ಚ ವಣಿಕ್ಪುತ್ರೀ ಪ್ರಿಯಾ ಶುಭಾ ।
ನಾಮ್ನಾ ಚಂದ್ರಾವಲೀ ನಾಮ ಸಮುದ್ಘೃಹ್ಯಾಥ ಪಂಜರಂ ॥೯೯॥

ಮಾಂ ಜಗ್ರಾಹ ಸುಚಾರ್ವಂಗೀ ಕರಾಭ್ಯಾಂ ಚಾರುಹಾಸಿನೀ ।
ಚಕಾರೋಪರಿ ಪೀನಾಭ್ಯಾಂ ಸ್ತನಾಭ್ಯಾಂ ಸಾ ತದಾ ಚ ಮಾಂ ॥೧೦೦॥

ತತೋಽಹಂ ಕೃತವಾನ್ಭಾವಂ ತಸ್ಯಾಂ ವಿಲಸಿತುಂ ಪ್ಲವನ್ ।
ತತೋಽನುಪ್ಲವಮಾನೋಽಹಂ ಹಾರೇ ಮರ್ಕಟಬಂಧನೇ ॥೧೦೧॥

ಪಂಜರದಲ್ಲಿಟ್ಟು ಶಾಲಿ ಎಂಬ ವೈಶ್ಯಪುತ್ರನಿಗೆ ಮಾರಿದನು, ಆ ವೈಶ್ಯಪುತ್ರನೂ ನನ್ನನ್ನು ಸರ್ವಶಾಸ್ತ್ರಜ್ಞನೆಂದೂ ಸರ್ವದೋಷನಾಶಕನೆಂದೂ ತಿಳಿದು ಅಂತಃಪುರದಲ್ಲಿ ಸ್ತ್ರೀಯರ ಸಮೀಪದಲ್ಲಿ ನನ್ನನ್ನು ಇಟ್ಟನು.

೯೭-೧೦೦. ಅಲ್ಲಿದ್ದ ನನ್ನನ್ನು ಅಂತಃಪುರದ ಸ್ತ್ರೀಜನಗಳು ಅನ್ನ ಹಣ್ಣುಗಳು ಇವೇ ಮೊದಲಾದವುಗಳಿಂದಲೂ ಹಣ್ಣಾಗಿ ಪಕ್ವವಾಗಿರುವ ದಾಳಿಂಬೆಯ ಬೀಜಗಳಿಂದಲೂ ನಿತ್ಯವೂ ಪೋಷಿಸುತ್ತಿದ್ದರು. ಒಂದಾನೊಂದು ದಿನ ಸುಂದರಿಯೂ ಪೃಥುಸ್ತನಿಯೂ ಆದ ಯೌವನ ಮಧ್ಯಸ್ಥೆಯಾದ ಚಂದ್ರಾವಲೀ ಎಂಬ ಆ ವೈಶ್ಯಪುತ್ರಿಯು ಪಂಜರದ ಬಾಗಿಲನ್ನು ತೆಗೆದು ಕೈಗಳಿಂದ ನನ್ನನ್ನು ಹಿಡಿದುಕೊಂಡಳು, ಹಾಗೆಯೇ ಹಿಡಿದುಕೊಂಡು ನಗುತ್ತಾ ತನ್ನ ಪೃಥುಗಳಾದ ಸ್ತನಗಳ ಮೇಲೆ ನನ್ನನ್ನು ಕುಳ್ಳಿರಿಸಿಕೊಂಡಳು.

೧೦೧-೧೦೪. ಅನಂತರ ಜನ್ಮಾಂತರ ಸಂಸ್ಕಾರದಿಂದ ಕಾಮುಕನಾದ ನಾನು ಆ ಯುವತಿಯಲ್ಲಿ ಭಾವಾವೇಶದಿಂದ ವಿಲಾಸವನ್ನು ಹೊಂದಿ ಹಾರಾಡಲು ಹೊರಟಾಗ

ತತ್ರಾಽಹಂ ಪಾಪಸಂಯುಕ್ತೋ ಮೃತಶ್ಚ ತದನಂತರಂ ।
ಭೂಯೋಽಪಿ ನರಕಂ ಘೋರಂ ಪ್ರಪನ್ನೋಽಸ್ಮಿ ಸುದುರ್ಗತಿಃ ॥ ೧೦೨ ॥

ತಸ್ಮಾನ್ನಿರ್ಗತೋ ವೃಷತ್ವಂ ಚ ಗತಶ್ಚಾಂಡಾಲಘಕ್ಕಣೇ ।
ಸ ಚೈಕದಾ ಮಾಂ ಶಕಟೇ ನಿಯೋಜ್ಯ ಸ್ವಾಂ ವಿಲಾಸಿನೀಂ ॥ ೧೦೩ ॥

ಸಮಾರೋಪ್ಯ ಮಹಾತೇಜಾ ಗಂತುಂ ಕೃತಮತಿರ್ವನಂ ।
ತತ್ರಾಽಗ್ರತಃ ಸ ಚಾಂಡಾಲೋ ಗತಃ ಸಾ ಚಾಽಸ್ಯ ಪೃಷ್ಠತಃ ॥ ೧೦೪ ॥

ಗಾಯಂತೀ ಯಾತಿ ತಚ್ಛ್ರುತ್ವಾ ಜಾತೋಽಹಂ ವ್ಯಥಿತೇಂದ್ರಿಯಃ ।
ಪೃಷ್ಠತಸ್ತು ಸಮಾಲೋಕ್ಯ ವಿಪರ್ಯಸ್ತಸ್ತಥಾಪ್ಲುತಃ ॥ ೧೦೫ ॥

ಪತಿತೋ ಭೂಮಿಮಗಮಂ ಕ್ಷಣೇನ ಕ್ಷಣವಿಭ್ರಮಾತ್ ।
ಯೋಕ್ತ್ರೇಣ ಬದ್ಧ ಏವಾಽಸ್ಮಿ ಪಂಚತ್ವಮಗಮಂ ತತಃ ॥ ೧೦೬ ॥

ಅಲ್ಲಿ ಕಪಿಗಳ ಬಂಧನಕ್ಕಾಗಿ, ಹಾಕಿದ್ದ ಹಾರಗಳಂತಿದ್ದ ಬಲೆಯಲ್ಲಿ ಬಿದ್ದೆನು. ಪಾಪಿಯಾದ ನನಗೆ ಅಲ್ಲೇ ಮರಣವುಂಟಾಗಿ ಪುನಃ ಘೋರವಾದ ನರಕವನ್ನೇ ಹೊಂದಿದೆನು, ಅನಂತರ ಪಾಪಾನುಭವಕ್ಕಾಗಿ ಚಂಡಾಲರ ಹಳ್ಳಿಯಲ್ಲಿ ಎತ್ತಿನ ರೂಪದಿಂದ ಹುಟ್ಟಿದೆನು ಆ ಚಂಡಾಲನು ಒಂದು ದಿನ ನನ್ನನ್ನು ಗಾಡಿಯಲ್ಲಿ ಕಟ್ಟಿ, ತನ್ನ ಹೆಂಡತಿಯನ್ನು ಗಾಡಿಯ ಮೇಲೆ ಕುಳ್ಳಿರಿಸಿ ವನಕ್ಕೆ ಹೊರಡಲು ಸಿದ್ಧನಾದನು. ಚಂಡಾಲನು ಮುಂದೆ ಹೋಗುತ್ತಿರುವಾಗ ಗಾಡಿಯ ಮೇಲಿದ್ದ ಅವನ ಪತ್ನಿಯು ಹಿಂದೆ ಬರುತ್ತಿದ್ದಳು.

೧೦೫-೧೦೬. ವಿಲಾಸದಿಂದ ಗಾನಮಾಡುತ್ತಾ ಬರುತ್ತಿದ್ದ ಅವಳ ಗಾನವನ್ನು ಕೇಳಿ ನನ್ನ ಇಂದ್ರಿಯಗಳು ವ್ಯಾಕುಲವಾದವು ಆಗ ನಾನು ಹಿಂಭಾಗದಿಂದಲೇ ಅವಳನ್ನು ನೋಡಿ ಹಿಂದೆ ತಿರುಗಿ ನೆಗೆದು ಅವಳ ಮೇಲೆ ಬೀಳುವಾಗ ಕ್ಷಣಕಾಲ ದಲ್ಲಿಯೇ ಭ್ರಮಣದಿಂದ ನೆಲದ ಮೇಲೆ ಬಿದ್ದನು. ನಡುವಿನ ಹಗ್ಗದಿಂದಲೇ ಕಟ್ಟಲ್ಪಟ್ಟ ನಾನು ಅಲ್ಲೇ ಮೃತಿಹೊಂದಿದೆನು. ಪುನಃ ನರಕದಲ್ಲಿ ಬಿದ್ದು ಸಾವಿರವರ್ಷಪರ್ಯಂತವೂ

ಭೂಯೋ ನಿಮಗ್ನೋ ನರಕೇ ದಶವರ್ಷಶತಾನ್ಯಹಂ ।
ಜಾತಸ್ತವ ಗೃಹೇ ತಾತ ಸೋऽಹಂ ಜಾತಿಮನುಸ್ಮರನ್ ॥
ತಾವಂತ್ಯೇವಾದ್ಯ ಜನ್ಮಾನಿ ಸ್ಮರಾಮಿ ಚಾऽನುಪೂರ್ವಶಃ ॥ ೧೦೭ ॥

ಪೂರ್ವಾಭ್ಯಾಸಾಚ್ಚ ಶಾಸ್ತ್ರಾಣಾಂ ವಚನಂ ಚಾಗತಂ ಮಮ ।
ತದಹಂ ಜ್ಞಾತವಿಜ್ಞಾನೋ ನಾಚರಿಷ್ಯೇ ಕಥಂಚನ ॥ ೧೦೮ ॥

ಪಾಪಾನಿ ಘೋರರೂಪಾಣಿ ಮನಸಾ ಕರ್ಮಣಾ ಗಿರಾ ।
ಶುಭಂ ವಾಪ್ಯಶುಭಂ ವಾऽಪಿ ಸ್ವಾಧ್ಯಾಯಃ ಶಾಸ್ತ್ರಜೀವಿಕಾ ॥ ೧೦೯ ॥

ಬಂಧನಂ ವಾ ವಧೋ ವಾಪಿ ಪೂರ್ವಾಭ್ಯಾಸೇನ ಜಾಯತೇ ।
ಜಾತಿಂ ಯದಾ ಪೌರ್ವಿಕೀಂ ತು ಸ್ಮರತೇ ತಾತ ಮಾನವಃ ॥
ತದಾ ಸ ತೇಭ್ಯಃ ಪಾಪೇಭ್ಯೋ ನಿವೃತ್ತಿಂ ಹಿ ಕರಿಷ್ಯತಿ ॥ ೧೧೦ ॥

ಅಲ್ಲಿ ಪಾಪಫಲವನ್ನನುಭವಿಸಿ ಈಗ ನಿನ್ನ ಮನೆಯಲ್ಲಿ ಹುಟ್ಟಿದೆನು, ನನಗೆ ಹಿಂದಿನ ಜನ್ಮಗಳ ಜ್ಞಾನವಿರುವುದರಿಂದ ಹೊಂದಿದ ಎಲ್ಲಾ ಜನ್ಮಗಳನ್ನೂ ಕ್ರಮವಾಗಿ ನಾನು ಸ್ಮರಿಸುತ್ತಿರುವೆನು.

೧೦೮-೧೧೦. ಪೂರ್ವಾಭ್ಯಾಸಬಲದಿಂದ ನಾನು ತಿಳಿದಿದ್ದ ಶಾಸ್ತ್ರವಚನಗಳೆಲ್ಲವೂ ಈಗ ನನಗೆ ಸ್ಮರಣೆಗೆ ಬರುತ್ತಿವೆ. ಈಗ ಜ್ಞಾನಹೊಂದಿದ ನಾನು ಘೋರವಾದ ಅಂತಹ ಪಾಪಗಳನ್ನು ಮನಸ್ಸಿನಿಂದಲಾಗಲಿ, ಕರ್ಮಗಳಿಂದಲಾಗಲಿ ಮಾತಿನಿಂದಲೇ ಆಗಲಿ ಇನ್ನುಮುಂದೆ ಯಾವಾಗಲೂ ಮಾಡುವುದಿಲ್ಲ. ಮನುಷ್ಯನಿಗೆ ಶುಭಾಶುಭರೂಪಗಳಾದ ಫಲಗಳೂ ಅಧ್ಯಯನ ಮತ್ತು ಶಾಸ್ತ್ರಜೀವನ ವಧ ಬಂಧಾದಿಗಳೂ ಸಹ ಪೂರ್ವಾಭ್ಯಾಸದಿಂದಲೇ ಉಂಟಾಗುತ್ತವೆ. ಆದರೆ ತನ್ನ ಪೂರ್ವಜನ್ಮವನ್ನು ಯಾವಾಗ ಮನುಷ್ಯನು ಸ್ಮರಿಸುತ್ತಾನೆಯೋ ಆಗ ಅವನಿಗೆ ಆ ಸ್ಮರಣೆಯೇ ಪಾಪಗಳಿಂದ ಅವನು ಮುಕ್ತನಾಗುವ ಮಾರ್ಗವನ್ನು ತೋರಿಸುತ್ತದೆ.

ತಸ್ಮಾದ್ಗಮಿಷ್ಯೇ ಶುಭವರ್ಧನಾಯ
ಪಾಪಕ್ಷಯಾಯಾಥ ಮುನೇ ಹ್ಯರಣ್ಯಂ ।
ಭವಾನ್ ದಿವಾಕೀರ್ತಿಮಿಮಂ ಸುಪುತ್ರಂ
ಗೃಹಸ್ಥಧರ್ಮೆ ವಿನಿಯೋಜಯಸ್ವ ॥ ೧೧೧ ॥

ಬಲಿರುವಾಚ

ಇತ್ಯೇವಮುಕ್ತ್ವಾ ಸ ನಿಶಾಕರಸ್ತದಾ
ಪ್ರಣಮ್ಯ ಮಾತಾಪಿತರೌ ಮಹರ್ಷೇ ।
ಜಗಾಮ ಪುಣ್ಯಂ ಸದನಂ ಮುರಾರೇಃ
ಖ್ಯಾತಂ ಬದರ್ಯಾಶ್ರಮಮಾದ್ಯಮೈಶಂ ॥ ೧೧೨ ॥

ಏವಂ ಪುರಾಭ್ಯಾಸರತಸ್ಯ ಪುಂಸೋ
ಭವಂತಿ ದಾನಾಧ್ಯಯನಾದಿಕಾನಿ ।
ತಸ್ಮಾಚ್ಚ ಪೂರ್ವಂ ದ್ವಿಜವರ್ಯ ವೈ ಮಯಾ
ತ್ವಭ್ಯಸ್ತಮಾಸ್ಮಿನ್ನ ತು ತೇ ಬ್ರವೀಮಿ ॥ ೧೧೩ ॥

ದಾನಂ ತಪೋ ವಾಧ್ಯಯನಂ ಮಹರ್ಷೇ
ಸ್ತೇಯಂ ಮಹಾಪಾತಕಮಗ್ನಿದಾಹಃ ।
ಜ್ಞಾನಾನಿ ಚೈವಾಭ್ಯಸನಾನಿ ಪೂರ್ವಂ
ಭವಂತಿ ಧರ್ಮಾರ್ಥಯಶಾಂಸಿ ನಾನ್ಯಥಾ ॥ ೧೧೪ ॥

೧೧೧-೧೧೨. ಎಲೈ ಮುನಿಯೇ ಹೀಗೆ ಜ್ಞಾನಹೊಂದಿರುವ ನಾನು ಪಾಪನಾಶಕ್ಕಾಗಿಯೂ ಪುಣ್ಯಸಂಪಾದನೆಗಾಗಿಯೂ ಸಹ ಅರಣ್ಯಕ್ಕೆ ಹೊರಡುತ್ತೇನೆ. ನೀನು ಸುಪುತ್ರನಾದ ಈ ದಿವಾಕೀರ್ತಿಯನ್ನೇ ವಂಶಾಭಿವೃದ್ಧಿಗಾಗಿ ಗೃಹಸ್ಥಧರ್ಮದಲ್ಲಿ ನಿಯೋಗಿಸು. ಬಲಿಯು ಹೇಳುತ್ತಾನೆ. ಆ ನಿಶಾಕರನು ಈ ರೀತಿ ತನ್ನ ವೃತ್ತಾಂತವನ್ನು ಹೇಳಿ ಆ ಮಾತಾಪಿತೃಗಳಿಗೆ ವಂದಿಸಿ ಪುಣ್ಯಕರವಾದ ಮುರಾರಿಯ ಸ್ಥಾನವೆಂದು ಪ್ರಸಿದ್ಧವಾಗಿರುವ ಬದರಿಕಾಶ್ರಮಕ್ಕೆ ಹೊರಟುಹೋದನು.

೧೧೩-೧೧೪. ಹೀಗೆಯೇ ಮನುಷ್ಯನಿಗೆ ಪೂರ್ವಾಭ್ಯಾಸಬಲದಿಂದ ದಾನಾಧ್ಯಯನಾದಿಗಳೂ ವಾಸನಾನುಸಾರವಾಗಿ ಉಂಟಾಗುತ್ತವೆ. ಎಲೈ, ಬ್ರಾಹ್ಮಣೋತ್ತಮನೇ, ಆದುದರಿಂದಲೇ ಅಭ್ಯಾಸಬಲದಿಂದ ಬಂದಿರುವ ಈ ದಾನವನ್ನು ಬಿಡಲು

ಇತ್ಯೇವಮುಕ್ತ್ವೋ ಬಲವಾನ್ಸ ಶುಕ್ರಂ
ದೈತ್ಯೇಶ್ವರಃ ಸ್ವಂ ಗುರುಮೀಶಿತಾರಂ ।
ಧ್ಯಾಯಂಸ್ತದಾ ತಂ ಮಧುಕೈಟಭಾರಿಂ
ನಾರಾಯಣಂ ಚಕ್ರಗದಾಸಿಪಾಣಿಂ ॥ ೧೧೫ ॥

ಇತಿ ಶ್ರೀ ವಾಮನಪುರಾಣೇ ವಾಮನ ಪ್ರಾದುರ್ಭಾವೇ ಶುಕ್ರಬಲಿ ಸಂವಾದೋ ನಾಮೈಕನವತಿತಮೋಽಧ್ಯಾಯಃ

ಸಾಧ್ಯವಾಗಲಾರದೆಂದು ನಿನ್ನಲ್ಲಿ ನಾನು ಹೇಳುತ್ತಿರುವೆನು ದಾನ, ಅಧ್ಯಯನ. ತಪಸ್ಸು ಚೌರ್ಯ ಮಹಾಪಾತಕಗಳು ಬೆಂಕಿಯಿಂದ ಮತ್ತೊಬ್ಬರ ಮನೆಮಠಗಳನ್ನು ಸುಡುವುದು ಜ್ಞಾನ ಧರ್ಮಾರ್ಥಯಶಸ್ಸುಗಳು ಇವುಗಳೆಲ್ಲಾ ಮನುಷ್ಯನಿಗೆ ಪೂರ್ವಾಭ್ಯಾಸದಿಂದಲೇ ಉಂಟಾಗುತ್ತವೆ. ಆಕಸ್ಮಿಕವಾಗಿ ಉಂಟಾಗುವುದೇ ಇಲ್ಲ.

ಈ ಪ್ರಕಾರ ಬಲಿಯು ಶುಕ್ರಾಚಾರ್ಯನಿಗೆ ಯುಕ್ತಿಯುಕ್ತವಾಗಿ ಹೇಳಿ ಸರ್ವೇಶ್ವರನಾಗಿಯೂ ಮಧುಕೈಟಭನಾಶಕನಾಗಿಯೂ ಶಂಕಚಕ್ರಗದಾಪಾಣಿಯಾಗಿಯೂ ಇರುವ ಆ ನಾರಾಯಣನನ್ನೇ ಧ್ಯಾನಿಸುತ್ತ ನಿಂತನು.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಶುಕ್ರಬಲಿಸಂವಾದವೆಂಬ ತೊಂಭತ್ತೊಂದನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ವಾಮನಾವತಾರಶಾಲಿಯಾದ ವಾಸುದೇವನು ಬಲಿಯ ಯಜ್ಞಶಾಲೆಗೆ ಬರಲು ಹೊರಟೊಡನೆಯೇ ಭೂಮಿ ಸಮುದ್ರ ಪರ್ವತಗಳೆಲ್ಲವೂ ನಡುಗಿದವೆಂದೂ ಅಗ್ನಿಗಳೆಲ್ಲವೂ ಹವಿಸ್ಸನ್ನು ಸ್ವೀಕರಿಸದೆ ತಟಸ್ಥವಾಗಿ ನಿಂತವೆಂದೂ ಹೇಳಿ, ಇದಕ್ಕೆ ಕಾರಣವೇನೆಂದು ಬಲಿಯು ಶುಕ್ರಾಚಾರ್ಯನನ್ನು ಪ್ರಶ್ನೆಮಾಡಲು ಆ ಶುಕ್ರಾಚಾರ್ಯನೂ ಜ್ಞಾನದೃಷ್ಟಿಯಿಂದ ವಿಷಯವನ್ನು ತಿಳಿದು ವಾಸುದೇವನ ಆಗಮನವೇ ಇದಕ್ಕೆ ಕಾರಣವೆಂದು ಬಲಿಯಲ್ಲಿ ಅರಿಕೆಮಾಡಿದನೆಂದೂ ಹೇಳಲಾಯಿತು. ಅನಂತರ ಬಲಿಚಕ್ರವರ್ತಿಯು ಶುಕ್ರಾಚಾರ್ಯರನ್ನು ಕುರಿತು ಆ ವಾಸುದೇವನು ಇಲ್ಲಿಗೆ ಬಂದುದೇ ಆದರೆ ನಾನು ಪುರುಷಾರ್ಥಗಳಿಗೆ ತಕ್ಕಂತೆ ಮಾಡತಕ್ಕ ಕಾರ್ಯವೇನು ಧನಕನಕಾದಿಗಳಲ್ಲಿ ಅವನಿಗೆ ಯಾವುದನ್ನು ಅರ್ಪಿಸಬೇಕು. ಸತ್ಯವಾಗಿಯೂ ಹಿತ ವಾಗಿಯೂ ಪ್ರಿಯವಾಗಿಯೂ ಇರುವ ಯಾವ ಮಾತನ್ನಾಡಬೇಕು. ಇವನ್ನು ದಯ ವಿಟ್ಟು ಆಲೋಚಿಸಿ ಹೇಳು. ಎಂದು ಪುನಃ ಪ್ರಶ್ನೆಮಾಡಲು ಶುಕ್ರಾಚಾರ್ಯನೂ ಆಲೋಚಿಸಿ ದೈತ್ಯರಾಜನೇ, ವೇದೋಕ್ತವಾದ ಮಹಾಯಜ್ಞವನ್ನು ತೊಡಗಿರುವ ನೀನು ವೇದವಿಧಿಯನ್ನು ಉಲ್ಲಂಘಿಸಿ ದೈತ್ಯರಿಗೇ ಯಜ್ಞಭಾಗವನ್ನು ಕೊಡುತ್ತಿರುವೆ. ವೇದದಲ್ಲಿ ಹೇಳಿರುವಂತೆ ಅದು ದೇವತೆಗಳಿಗೇ ಸೇರಬೇಕಾದುದು ಆದುದರಿಂದ ದೇವತೆಗಳಿಗೆ ಹಿತವನ್ನುಂಟುಮಾಡಲು ವಾಸುದೇವನು ಇಲ್ಲಿಗೆ ಬರುತ್ತಿದ್ದಾನೆ. ನೀನು ಮಾತ್ರ ಆ ವಾಸುದೇವನಿಗೆ ಯಜ್ಞದಲ್ಲಾಗಲಿ ರಾಜ್ಯದೇಶ ಕೋಶಧನಕನಕಾದಿ ಗಳಲ್ಲಿಯಾಗಲಿ ಒಂದು ಹುಲ್ಲುಕಡ್ಡಿಯಷ್ಟನ್ನೂ ಕೊಡಲು ಒಪ್ಪಕೂಡದು, ಕೇವಲ ಪ್ರಿಯವಾದ ಸಾಮೋಕ್ತಿಯಿಂದ ಸರ್ವಪ್ರಪಂಚವನ್ನೂ ಉದರದಲ್ಲಿ ಧರಿಸಿ ಪರಿಪೂರ್ಣ ನಾಗಿರುವ ಪ್ರಭುವಿಗೆ ನಾನು ಏನು ತಾನೆ ಕೊಡಲು ಸಮರ್ಥನಾದೇನು ಎಂದು ಮೆಲ್ಲಗೆ ನುಡಿಯಬೇಕು. ಎಂದನು.

ಈ ಮಾತನ್ನು ಕೇಳಿ ಬಲಿಯು ಸಾಮಾನ್ಯನಾದ ಅರ್ಥಿಯೊಬ್ಬನು ಬಂದರೂ, ಸುಮ್ಮನಿರದೆ ದಾನಮಾಡುವ ನಾನು ಆ ವಾಸುದೇವನೇ ಬಂದಲ್ಲಿ ಏನನ್ನೂ ದಾನ ಮಾಡದೆ ಸುಮ್ಮನಿರಲು ಹೇಗೆಸಾಧ್ಯ.

ಹಾಗೆ ಸುಮ್ಮನಿದ್ದಲ್ಲಿ ಸತ್ಪುರುಷರೂ ಸಹ ನನ್ನನ್ನಾಡಿಕೊಳ್ಳುವುದಿಲ್ಲವೇ ಬ್ರಾಹ್ಮಣನು ಯಾಚಕನಾಗಿ ಬಂದಲ್ಲಿ ಯಾವಾಗಲೂ ಶ್ರೇಯಸ್ಕಾಮನಾದವನು ನಾಸ್ತಿ ಶಬ್ದವನ್ನು ಹೇಳಬಾರದು. ವಾಸುದೇವನೇ ಅರ್ಥಿಯಾಗಿ ಬಂದಲ್ಲಿ ನಾಸ್ತಿ ಎಂದು ಹೇಗೆ ನುಡಿಯಲಿ. ನಾನು ಈ ಮಾತನ್ನು ವೈಭವಕ್ಕಾಗಿ ಹೇಳುತ್ತಿಲ್ಲ. ಯಾವ ಮನುಷ್ಯನಿಗಾದರೂ ಪೂರ್ವಜನ್ಮದ ಅಭ್ಯಾಸಕ್ಕೆ. ತಕ್ಕಂತೆ ಅವನು ಬೇರೆ ಜನ್ಮವನ್ನು ಹೊಂದಿದ್ದರೂ ದಾನ, ಅಧ್ಯಯನ, ಜ್ಞಾನಾದಿ ವ್ಯಾಪಾರಗಳು ಸಂಸ್ಕಾರ ಬಲದಿಂದ ಅನುವರ್ತಿಸುತ್ತವೆ ನನಗೂ ಈ ದಾನೋತ್ಸಾಹವು ಅಭ್ಯಾಸಬಲದಿಂದ ಬಂದದ್ದು. ಇದನ್ನು ಬಿಡಲು ಹೇಗೆತಾನೆ ಸಾಧ್ಯವಾದೀತು. ಈ ಜನ್ಮದ ಎಲ್ಲಾ ವ್ಯಾಪಾರಗಳಿಗೂ ಪೂರ್ವಾಭ್ಯಾಸವೇ ಕಾರಣವೆಂಬುದನ್ನು ಪೂರ್ವದಲ್ಲಿ ಮಲಯದಲ್ಲಿ ನಡೆದ ಕೋಶಕಾರನ ಮಗನ ವೃತ್ತಾಂತದಿಂದ ನೀನು ಅರಿತಿಲ್ಲವೇ ಎಂದನು.

ಆಗ ಶುಕ್ರಾಚಾರ್ಯನು ಆ ವೃತ್ತಾಂತವೇನೆಂದು ಪ್ರಶ್ನೆಮಾಡಲು ಆ ವೃತ್ತಾಂತವನ್ನು ದೃಷ್ಟಾಂತಕ್ಕಾಗಿ ಬಲಿಯು ಹೇಳುತ್ತಾನೆ. ಮಲಯದಲ್ಲಿ ಮುದ್ಗಲನೆಂಬ ಮುನಿಗೆ ಕೋಶಕಾರನೆಂಬ ಮಗನಿದ್ದನು. ಅವನೂ ತಪಸ್ವಿಯಾಗಿಯೂ ಜ್ಞಾನಿಯಾಗಿಯೂ ಇದ್ದನು. ಅವನಿಗೆ ಧರ್ಮಿಷ್ಠಾ ಎಂಬ ಪತಿವ್ರತೆಯಾದ ಪತ್ನಿ ಇದ್ದಳು. ಆ ಮುನಿಗೆ ಧರ್ಮಿಷ್ಠೆಯಲ್ಲಿ ಒಬ್ಬ ಮಗನು ಹುಟ್ಟಿದನು. ಆ ಮಗುವು ಹುಟ್ಟಿವಾಗಲೇ ಮೂಗಾಗಿಯೂ ಕುರುಡಾಗಿಯೂ ಇದ್ದುದರಿಂದ ಧರ್ಮಿಷ್ಠೆಯು ಆ ಮಗುವನ್ನು ಹುಟ್ಟಿದ ಆರನೇ ದಿನದಲ್ಲಿಯೇ ಬಾಗಿಲಿನಿಂದ ಹೊರಗೆ ಇಟ್ಟುಬಿಟ್ಟಳು. ಆ ಸಮಯಕ್ಕೆ ಸರಿಯಾಗಿ ಶಿಶುಹಾರಿಣಿಯಾದ ಶೂರ್ಪಾಕ್ಷಿ ಎಂಬ ರಾಕ್ಷಸಿಯು ತನ್ನ ಮಗುವನ್ನು ಅಲ್ಲಿ ಬಿಟ್ಟು ಅಲ್ಲಿದ್ದ ಬ್ರಾಹ್ಮಣ ಶಿಶುವನ್ನು ಹೊತ್ತುಕೊಂಡು ಪತಿಯಾದ ಘಟೋದರನಲ್ಲಿ ಹೋಗಿ ಈ ವೃತ್ತಾಂತವನ್ನು ಹೇಳಿದಳು. ಅಂಧನಾದ ಆ ರಾಕ್ಷಸನು ಜ್ಞಾನಿಯಾದ ಬ್ರಾಹ್ಮಣ ಪುತ್ರನನ್ನು ನೀನು ತಂದುದು ಸರಿಯಲ್ಲ. ಇವನನ್ನು ಅಲ್ಲಿಯೇ ಬಿಟ್ಟು ಬೇರೆ ಶಿಶುವನ್ನು ಬೇಗ ತೆಗೆದುಕೊಂಡು ಬಾ ಎನ್ನಲು ಆ ರಾಕ್ಷಸಿಯು ಕೋಶಕಾರನ ಆ ಮಗುವನ್ನು ತೆಗೆದುಕೊಂಡು ಹೋಗಿ ಪುನಃ ಅವನ ಮನೆಯ ಹತ್ತಿರವೇ ಬಿಟ್ಟಳು. ಇಷ್ಟರಲ್ಲೇ ಬಾಗಿಲಲ್ಲಿ ಅಳುತ್ತಿದ್ದ ರಾಕ್ಷಸ ಪುತ್ರನನ್ನು ನೋಡಿ ಕೋಶಕಾರನು ಯಾವುದೋ ಭೂತಾವೇಶದಿಂದ ಈ ಕಾರ್ಯವು ನಡೆದಿದೆ ಎಂದು

ಊಹಿಸಿ ಆ ಮಗುವನ್ನು ಭೂಮಿಯಲ್ಲಿ ಮಂತ್ರಪೂರ್ವಕಗಳಾದ ರೇಖೆಗಳಿಂದ ಬಂಧಿಸಿದ್ದನು. ಆದುದರಿಂದ ರಾಕ್ಷಸಿಯು ಬಂದಾಗ ಆ ಮಗುವನ್ನು ಕೊಂಡೊಯ್ಯಲಾಗಲಿಲ್ಲ.

ಬ್ರಾಹ್ಮಣನು ಮಾತ್ರ ರಾಕ್ಷಸಿಯಿಂದ ಬಿಡಲ್ಪಟ್ಟ ತನ್ನ ಮಗುವನ್ನು ಸ್ವೀಕರಿಸಿ ಎರಡು ಮಕ್ಕಳನ್ನೂ ಪೋಷಿಸಲು ಪತ್ನಿಯಾದ ಧರ್ಮಿಷ್ಠೆಯಲ್ಲಿ ಕೊಟ್ಟನು. ರಾಕ್ಷಸ ಪುತ್ರನಿಗೆ ದಿವಾಕರನೆಂದೂ ತನ್ನ ಮಗನಿಗೆ ನಿಶಾಕರನೆಂದೂ ಹೆಸರಿಟ್ಟನು. ಇಬ್ಬರಿಗೂ ಏಳುವರ್ಷವಾದಾಗ ತಂದೆಯು ಉಪನಯನವನ್ನು ನಡೆಸಿ ಇಬ್ಬರಿಗೂ ವೇದ ಪಾಠವನ್ನು ಪ್ರಾರಂಭಿಸಿದನು. ದಿವಾಕರನು ವೇದವನ್ನೂ ಪಠಿಸಿದನು. ನಿಶಾಕರನು ಪಠಿಸಲಿಲ್ಲ. ಬಂಧುಗಳೆಲ್ಲರೂ ಅವನನ್ನು ನಿಂದಿಸಿದರು. ತಂದೆಯು ಕೋಪದಿಂದ ಆ ನಿಶಾಕರನನ್ನು ನೀರಿಲ್ಲದ ಒಂದು ಭಾವಿಯಲ್ಲಿ ಹಾಕಿ ಮೇಲೆ ಕಲ್ಲುಚಪ್ಪಡಿಯನ್ನು ಮುಚ್ಚಿದನು. ಅಲ್ಲಿಯೇ ಬೆಳೆದು ಫಲಬಿಟ್ಟಿದ್ದ ಒಂದು ನೆಲ್ಲೀ ಮರದ ಆಶ್ರಯದಿಂದ ಆ ಬಾಲನು ಅಲ್ಲಿಯೇ ಬಹುವರ್ಷಗಳಿದ್ದನು. ಹತ್ತು ವರ್ಷಗಳು ಕಳೆದ ಮೇಲೆ ತಾಯಿಯಾದ ಧರ್ಮಿಷ್ಠೆಯು ಅಲ್ಲಿ ಹೋಗಿ ನೋಡಿ ಈ ಭಾವಿಯನ್ನು ಕಲ್ಲಿನಿಂದ ಮುಚ್ಚಿದವರಾರೆಂದು ಘಟ್ಟಿಯಾಗಿ ಕೇಳಿದಳು. ಭಾವಿಯೊಳಗಿದ್ದ ನಿಶಾಕರನು ತಾಯಿಯ ಸ್ವರವನ್ನು ಕೇಳಿ ತಂದೆಯು ಈ ಕಲ್ಲನ್ನು ಮುಚ್ಚಿದನೆಂದು ಉತ್ತರ ಕೊಟ್ಟನು. ಆಗ ತಾಯಿಯು ಭಯಪಟ್ಟು ನೀನು ಯಾರೆಂದು ಕೇಳಲು ನಿನ್ನ ಮಗನಾದ ನಿಶಾಕರನೆಂದು ಉತ್ತರವಿತ್ತನು.

ನನಗೆ ದಿವಾಕರನೆಂಬ ಮಗನಿರುವನು ನಿಶಾಕರನೆಂಬುವನು ನನ್ನ ಮಗನಲ್ಲ ಎಂದು ತಾಯಿಯು ಹೇಳಲು ನಿಶಾಕರನು ತನ್ನ ವೃತ್ತಾಂತವೆಲ್ಲವನ್ನೂ ಹೇಳಿದನು. ಅನಂತರ ತಾಯಿಯು ಕಲ್ಲನ್ನು ತೆರೆಯಲು ಮೇಲೆ ಬಂದ ನಿಶಾಕರನು ತಾಯಿಯ ಪಾದಗಳಿಗೆ ವಂದಿಸಿದನು. ತಾಯಿಯು ತನಗೆ ಅನುರೂಪನಾಗಿದ್ದ ಅವನನ್ನು ಮಗನೆಂದು ತಿಳಿದು ಬಂಧುಗಳ ಮತ್ತು ಪತಿಯ ಎದುರಿಗೆ ಕರೆತಂದು ಅವನ ವೃತ್ತಾಂತವನ್ನೆಲ್ಲಾ ಹೇಳಿದಳು. ತಂದೆಯು ಅವನನ್ನು ನೋಡಿ ಈ ವಿಧವಾದ ನಿನ್ನ ಪಾಪಕ್ಕೆ ಕಾರಣವೇನೆಂದು ಕೇಳಲು ನಿಶಾಕರನು ತನ್ನ ಪೂರ್ವಜನ್ಮದ ವೃತ್ತಾಂತವನ್ನೆಲ್ಲಾ ಹೇಳಿದನು.

ವೃಂದಾರಕವೆಂಬ ಬ್ರಾಹ್ಮಣ ಕುಲದಲ್ಲಿ ವೃಷಾಕಪಿ ಎಂಬ ಬ್ರಾಹ್ಮಣನಿದ್ದನು. ಅವನಿಗೆ ಮಾಲಾ ಎಂಬ ಪತ್ನಿಯಿದ್ದಳು. ಅವಳ ಗರ್ಭದಲ್ಲಿ ನಾನು ಮೊದಲು ಬ್ರಾಹ್ಮಣನಾಗಿ ಹುಟ್ಟಿ ತಂದೆಯಿಂದ ಸಕಲ ವೇದಶಾಸ್ತ್ರಗಳನ್ನೂ ಅಧ್ಯಯನ ಮಾಡಿ ಪಂಡಿತನಾದೆನು. ಆದರೂ ಮದದಿಂದ ಅಜ್ಞಾನಿಯಾಗಿ ಅವಿವೇಕದಿಂದ ಮೋಹಹೊಂದಿ ಪರದಾರಪರದ್ರವ್ಯಗಳಲ್ಲಿ ನಿರತನಾದೆನು. ಈ ಪಾಪಕಾರ್ಯದಲ್ಲಿ ಅಪ ರಾಧಿಯಾದ ನಾನು ಉದ್ಬಂಧನ (ನೇಣು) ದಿಂದ ಮೃತನಾಗಿ ಪಾಪದ ಫಲಾನು ಭವಕ್ಕಾಗಿ ರೌರವವೆಂಬ ನರಕವನ್ನು ಹೊಂದಿದೆನು. ಅಲ್ಲಿ ಸಾವಿರ ವರ್ಷದವರೆಗೂ ದುಃಖವನ್ನು ಅನುಭವಿಸಿ ಉಳಿದ ದುಃಖಾನುಭವಕ್ಕಾಗಿ ಹುಲಿಯ ಜನ್ಮದಿಂದ ಹುಟ್ಟಿದೆನು. ಕಾಡಿನಲ್ಲಿದ್ದ ನನ್ನನ್ನು ಒಬ್ಬ ಧೊರೆಯು ಬೇಟೆಗೆ ಬಂದಾಗ ಪಂಜರ ದಲ್ಲಿ ಬಂಧಿಸಿ ತನ್ನ ಮನೆಗೆ ಕರೆದೊಯ್ದನು. ಧೊರೆಯು ಹೊರಗೆಹೋದಾಗ ಪಂಜರ ದಲ್ಲಿದ್ದ ನನ್ನನ್ನು ಸುಂದರಿಯಾದ ರಾಜಪತ್ನಿಯು ನೋಡಿದಳು. ಅವಳನ್ನು ನೋಡಿದ ನನಗೂ ಪೂರ್ವಾಭ್ಯಾಸಬಲದಿಂದ ಕಾಮವಿಕಾರ ಉಂಟಾಯಿತು. ಕಾಮ ಶಾಸ್ತ್ರದ ವಿಧಾನವನ್ನನುಸರಿಸಿ ಆ ಸುಂದರಿಯನ್ನು ಮೋಹಗೊಳಿಸಿದೆನು. ಅವಳು ಪಂಜರದ ಬಾಗಿಲನ್ನು ತೆರೆದೊಡನೆಯೇ ನಾನು ಹೊರಗೆ ಬಂದು ಅವಳನ್ನು ಹಿಡಿದು ಕೊಂಡಾಗ ರಾಜಭೃತ್ಯರಿಂದ ಬಂಧಿತನಾಗಿ ಮೃತಿಹೊಂದಿ ಪುನಃ ನರಕಕ್ಕೆ ಬಿದ್ದೆನು. ಅಲ್ಲಿ ದುಃಖವನ್ನನುಭವಸಿ ಪುನಃ ಬಿಳಿಯ ಕತ್ತೆಯಾಗಿ ಹುಟ್ಟಿ ಒಬ್ಬ ಬ್ರಾಹ್ಮಣನ ಮನೆಯಲ್ಲಿದ್ದೆನು ಆ ಬ್ರಾಹ್ಮಣನ ಪತ್ನಿಯೊಬ್ಬಳು ತಂದೆಯ ಮನೆಗೆ ಹೊರಟು ನನ್ನನ್ನೇ ವಾಹನವನ್ನಾಗಿ ಸ್ವೀಕರಿಸಿದಳು. ಅರ್ಧದಾರಿಯಲ್ಲಿ ಹೋಗುತ್ತಿರುವಾಗ ನದಿಯಲ್ಲಿ ಸ್ನಾನಕ್ಕಾಗಿ ಇಳಿದು ಸ್ನಾನಮಾಡಿ ಒದ್ದೆಯ ವಸ್ತ್ರದಿಂದಿರುವ ಆ ಯುವತಿ ಯನ್ನು ನೋಡಿ ಪೂರ್ವಸಂಸ್ಕಾರದಿಂದ ನಾನು ಅವಳಲ್ಲಿ ಕಾಮುಕನಾದೆನು. ಓಡಿ ಹೋಗಿ ಅವಳ ಮೇಲೆ ಬಿದ್ದ ನನ್ನನ್ನು ಅವಳ ಭೃತ್ಯನು ಪ್ರಹರಿಸಿ ಓಡಿಸಿದನು. ಹಾಗೇ ದಕ್ಷಿಣದ ಕಡೆಗೆ ಓಡಿದ ನಾನು ಕಡಿವಾಣದ ಹಗ್ಗದಿಂದ ಬಂಧಿಸಲ್ಪಟ್ಟು ಆರು ದಿವಸ ಗಳವರಿಗೂ ಅಲ್ಲಿಯೇ ಬಿದ್ದಿದ್ದು ಮೃತನಾದೆನು. ಪುನಃ ನರಕವನ್ನು ಸೇರಿ ಅಲ್ಲಿ ದುಃಖಾನುಭವವಾದನಂತರ ಗಿಣಿಯಾಗಿ ಹುಟ್ಟಿ ಕಾಡಿನಲ್ಲಿ ಸೇರಿದೆನು. ನನ್ನನ್ನು ಅಲ್ಲಿ ಒಬ್ಬ ಬೇಡನು ಹಿಡಿದು ಪಂಜರದಲ್ಲಿಟ್ಟು ಒಬ್ಬ ವೈಶ್ಯಪುತ್ರನಿಗೆ ಮಾರಿದನು.

ಆ ವೈಶ್ಯಪುತ್ರನಿಂದ ಅಂತಃಪುರದಲ್ಲಿ ಇಡಲ್ಪಟ್ಟ ನನ್ನನ್ನು ಅಲ್ಲಿದ್ದ ಸ್ತ್ರೀಯರು ಹಣ್ಣು ಮೊದಲಾದುವುಗಳಿಂದ ಪ್ರೀತಿಸುತ್ತಿದ್ದರು. ಒಂದಾನೊಂದು ದಿನ ಸುಂದರಿಯಾದ ವೈಶ್ಯಪುತ್ರಿಯೊಬ್ಬಳು ನನ್ನನ್ನು ಪಂಜರದಿಂದ ಹೊರಕ್ಕೆ ತೆಗೆದು ಕೈಗಳಿಂದ ಹಿಡಿದು ಕೊಂಡು ತನ್ನ ಉನ್ನತವಾದ ಸ್ತನಗಳ ಮೇಲೆ ಕುಳ್ಳಿರಿಸಿಕೊಂಡಳು. ಆಗ ಪೂರ್ವ ಜನ್ಮ ಸಂಸ್ಕಾರದಿಂದ ಅವಳಲ್ಲಿ ಕಾಮುಕನಾದ ನಾನು ವಿಲಾಸದಿಂದ ಸಂಚರಿಸುತ್ತಿರು ವಾಗ ಬಂಧನಕ್ಕಾಗಿ ಅಲ್ಲಿ ಕಟ್ಟಿದ್ದ ಬಲೆಯಲ್ಲಿ ಬಿದ್ದು ಮೃತನಾದೆನು. ಅನಂತರ ಪುನಃ ನರಕವನ್ನು ಸೇರಿ ದುಃಖವನ್ನನುಭವಿಸಿ ಅನಂತರವೂ ಒಂದು ಎತ್ತಿನ ಜನ್ಮ ಹೊಂದಿ ಚಂಡಾಲನ ಮನೆಯನ್ನು ಸೇರಿದೆನು. ಆ ಚಂಡಾಲನು ನನ್ನನ್ನು ಒಂದು ಗಾಡಿಯಲ್ಲಿ ಕಟ್ಟಿ ತನ್ನ ಹೆಂಡತಿಯನ್ನು ಗಾಡಿಯ ಮೇಲೆ ಕುಳ್ಳಿರಿಸಿ ತಾನು ಮುಂದೆ ಹೋಗುತ್ತಿದ್ದನು. ಆ ಗಾಡಿಯಲ್ಲಿದ್ದ ಚಂಡಾಲಿಯ ಗಾನವನ್ನು ಕೇಳಿ ಕಾಮಾತುರ ನಾದ ನಾನು ಹಿಂದೆ ತಿರುಗಿ ಅವಳ ಮೇಲೆ ಬೀಳಲು ಹೋಗಿ ತಲೆಕೆಳಕಾಗಿ ಭೂಮಿ ಯಲ್ಲಿ ಬಿದ್ದು ಮೃತನಾದೆನು. ಪುನಃ ಸಾವಿರವರ್ಷ ನರಕವಾಸವನ್ನನುಭವಿಸಿ ಈಗ ನಿನ್ನ ಗರ್ಭದಲ್ಲಿ ಹುಟ್ಟಿರುವೆನು. ಪೂರ್ವದಲ್ಲಿ ನಾನು ಹೊಂದಿದ್ದ ಶಾಸ್ತ್ರಜ್ಞಾನವೆಲ್ಲವೂ ಈಗ ನನಗೆ ಉಂಟಾಗಿದೆ. ನನ್ನ ಪೂರ್ವಜನ್ಮದ ವೃತ್ತಾಂತವೆಲ್ಲವೂ ನನಗೆ ಸ್ಮರಣೆಗೆ ಬಂದಿದೆ. ಜ್ಞಾನಹೊಂದಿರುವ ನಾನು ಇನ್ನು ಮುಂದೆ ಯಾವ ಪಾಪವನ್ನೂ ಮಾಡು ವುದಿಲ್ಲ. ಶುಭಾಶುಭಗಳು ಅಧ್ಯಯನ ಜ್ಞಾನಾದಿಗಳು ವಧ ಬಂಧ ಮೊದಲಾದುವೂ ಸಹ ಮನುಷ್ಯನಿಗೆ ಪೂರ್ವಾಭ್ಯಾಸ ಬಲದಿಂದ ಅನುಸರಿಸಿ ಬರುತ್ತವೆ. ನೀನು ದಿವಾಕರ ನನ್ನೇ ಪುತ್ರನನ್ನಾಗಿ ಗೃಹಸ್ಥ ಧರ್ಮಕ್ಕೆ ನಿಯಮಿಸಿಕೊಳ್ಳಬೇಕು. ನಾನು ಪಾಪ ಕ್ಷಯಕ್ಕೂ ಪುಣ್ಯಸಂಪಾದನೆಗೂ ಸಹ ಬದರಿಕಾಶ್ರಮಕ್ಕೆ ಹೊರಡುತ್ತೇನೆ ಎಂದು ಹೇಳಿ ಮಾತಾಪಿತೃಗಳಿಗೆ ವಂದಿಸಿ ಹೊರಟುಹೋದನು.

॥ ಶ್ರೀಃ ॥

ಶ್ರೀ ವಾಮನ ಪುರಾಣಂ

ದ್ವಿನವತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಏತಸ್ಮಿನ್ನಂತರೇ ಪ್ರಾಪ್ತೇ ಭಗವಾನ್ವಾಮನಾಕೃತಿಃ ।
ಯಜ್ಞವಾಟಸಮೀಪೇ ಸ ಉಚ್ಚೈರ್ವಚನಮಬ್ರವೀತ್ ॥ ೧ ॥

ಓಂಕಾರಪೂರ್ವಾಃ ಶ್ರುತಯೋ ಮಖೇಽಸ್ಮಿನ್
ತಿಷ್ಠಂತಿ ರೂಪೇಣ ತಪೋಧನಾನಾಂ ।
ಯಜ್ಞೋಽಶ್ವಮೇಧಃ ಪ್ರವರಃ ಕ್ರತೂನಾಂ
ಯುಕ್ತಂ ಯಥಾ ಸ್ಯಾತ್ಕುರು ದೈತ್ಯನಾಥ ॥ ೨ ॥

ತೊಂಭತ್ತೆರಡನೆಯ ಅಧ್ಯಾಯವು

೧-೨. ಪುಲಸ್ತ್ಯರು ಹೇಳುತ್ತಾರೆ :—ಈ ಸಮಯಕ್ಕೆ ಸರಿಯಾಗಿ ವಾಮನ ರೂಪಿಯಾದ ಪರಮಾತ್ಮನು ಯಜ್ಞಶಾಲೆಯ ಸಮೀಪಕ್ಕೆ ಬಂದು ಎಲೈ ದೈತ್ಯಾಧಿಪತಿಯೇ, ಓಂಕಾರಪೂರ್ವಕವಾದ ವೇದಗಳೆಲ್ಲವೂ ತಪಸ್ವಿಗಳ ರೂಪದಿಂದ ಈ ಯಜ್ಞದಲ್ಲಿ ನೆಲಸಿವೆ. ಅಶ್ವಮೇಧವೆಂಬ ಈ ಯಜ್ಞವೂ ಸಹ ಕ್ರತುಗಳಲ್ಲಿ ಶ್ರೇಷ್ಠವಾದುದು. ಈ ಸಮಯದಲ್ಲಿ ನಿನಗೆ ಯಾವುದು ಯುಕ್ತವೆಂದು ತೋರಿಬರುವುದೋ, ಅದನ್ನು ನೀನು ಮಾಡು ಎಂದು ಉಚ್ಚಸ್ವರದಿಂದ ಹೇಳಿದನು.

ಇತ್ಥಂ ವಚನಮಾಕರ್ಣ್ಯ ದಾನವಾಧಿಪತಿರ್ವಶೀ ।
ಸಾರ್ಘ್ಯಪಾತ್ರಃ ಸಮುತ್ಥ್ಯಾಗಾದ್ಯತ್ರ ದೇವಃ ಸ್ಥಿತೋಽಭವತ್ ॥ ೩ ॥

ತತಃ ಸ ದೇವದೇವೇಶಂ ಪೂಜಯಿತ್ವಾ ವಿಧಾನತಃ ।
ಪ್ರೋವಾಚ ಭಗವನ್ಬ್ರೂಹಿ ಕಿಂ ದದ್ಮಿ ತವ ಮಾನದ ॥ ೪ ॥

ತತೋಽಬ್ರವೀನ್ಮಧುರಿಪುರ್ದೈತ್ಯರಾಜಂ ತಮವ್ಯಯಂ ।
ವಿಹಸ್ಯ ಸುಚಿರಂ ಕಾಲಂ ಭರದ್ವಾಜಮವೇಕ್ಷ್ಯ ಚ ॥ ೫ ॥

ಗುರೋರ್ಮದೀಯಸ್ಯ ಗುರುಸ್ತಸ್ಯಾಸ್ತ್ಯಗ್ನಿಪರಿಗ್ರಹಃ ।
ನ ಸ ಧಾರಯತೇ ಭೂಮ್ಯಾಂ ಪಾರಕ್ಯಾಯಾಂ ಚ ಪಾವಕಂ ॥ ೬ ॥

ತದರ್ಥಮಭಿಯಾಚ್ಞೇಽಯಂ ಮಮ ದಾನವಪಾರ್ಥಿವ ।
ಮಚ್ಛರೀರಪ್ರಮಾಣೇನ ದೇಹಿ ರಾಜನ್ಕ್ರಮತ್ರಯಂ ॥ ೭ ॥

ಮುರಾರಿವಚನಂ ಶ್ರುತ್ವಾ ಬಲಿರ್ಭಾರ್ಯಾಮವೇಕ್ಷ್ಯ ಚ ।
ಬಾಣಂ ಚ ತನಯಂ ವೀಕ್ಷ್ಯ ಇದಂ ವಚನಮಬ್ರವೀತ್ ॥ ೮ ॥

೩-೫. ಈ ಮಾತನ್ನು ಕೇಳಿದೊಡನೆಯೇ ಜಿತೇಂದ್ರಿಯನಾದ ಬಲಿಯು ಅರ್ಘ್ಯಪಾದ್ಯಾದಿ ಪೂಜಾಸಾಮಗ್ರಿಗಳೊಡನೆ ವಾಮನನಿರುವ ಸ್ಥಳಕ್ಕೆ ಬಂದು ನಿಂತನು. ಅಲ್ಲಿಯೇ ದೇವಾಧಿಪತಿಯಾದ ಆ ವಾಮನನನ್ನು ಯಥಾವಿಧಿಯಾಗಿ ಪೂಜಿಸಿ ಪೂಜ್ಯನೇ, ನಿನಗೆ ಏನನ್ನು ಕೊಡಬೇಕು ಹೇಳು ಎಂದನು. ಆಗ ಮಧುವೈರಿಯಾದ ವಾಮನನು ಬಹಳ ನಗುತ್ತಾ ಸಮೀಪದಲ್ಲಿದ್ದ ಭರದ್ವಾಜನನ್ನೂ ನೋಡಿ ಬಲಿಯನ್ನು ಕುರಿತು ಹೀಗೆ ಹೇಳಿದನು.

೬-೮. ನನ್ನ ಗುರುವಿಗೂ ಒಬ್ಬ ಗುರುಗಳಿರುವರು. ಆ ಮಹಾಗುರುವು ಶುಶ್ರೂಷೆಗಾಗಿ ಅಗ್ನಿಯುಪರಿಗ್ರಹವನ್ನು ಹೊಂದಿರುವರು. ಅವರು ಪರಕೀಯವಾದ ಭೂಮಿಯಲ್ಲಿ ಅಗ್ನಿಯನ್ನು ಸ್ಥಾಪಿಸಲಾರರು. ಆದಕ್ಕಾಗಿ ದಾನವರಾಜನಾದ ನಿನ್ನಲ್ಲಿ ಮೂರುಹೆಜ್ಜೆಯ ಪರಿಮಿತಿಯುಳ್ಳ ಭೂಮಿಯನ್ನು ಯಾಚಿಸುತ್ತಿರುವೆನು. ದೊರೆಯೇ, ನನ್ನ ಶರೀರಪ್ರಮಾಣಕ್ಕನುಗುಣವಾಗಿ ಮೂರು ಹೆಜ್ಜೆಯ ಭೂಮಿಯನ್ನು ದಾನಮಾಡು. ವಾಮನನ ಈ ಮಾತನ್ನು ಕೇಳಿ ಬಲಿಯು ಸಮೀಪದಲ್ಲಿದ್ದ ತನ್ನ ಹೆಂಡತಿಯನ್ನೂ ಮಗನಾದ ಬಾಣನನ್ನೂ ನೋಡಿ ಹೀಗೆಂದನು.

ನ ಕೇವಲಂ ಪ್ರಮಾಣೇನ ವಾಮನೋಽಯಂ ಲಘುಪ್ರಿಯಃ ।
ಯೇನ ಕ್ರಮತ್ರಯಂ ಚೋಕ್ತಂ ಯಾಚ ತೇ ಮದ್ವಿಧೇಽಪಿ ಚ ॥೯॥

ಪ್ರಾಯೋ ವಿಧಾತ್ರಾಽಲ್ಪಧಿಯಾಂ ನರಾಣಾಂ
ಬಹಿಃ ಕೃತಾನಾಂ ಖಲು ದಿವ್ಯಪುಣ್ಯೈಃ ।
ಧನಾಧಿಕಂ ಭೂರಿ ನ ವೈ ದದಾತಿ
ಯಥೈವ ವಿಷ್ಣೋರ್ನ ಬಹುಪ್ರಯಾಸಃ ॥೧೦॥

ನ ದದಾತಿ ವಿಧಿಸ್ತಸ್ಯ ಯಸ್ಯ ಭಾಗ್ಯವಿಪರ್ಯಯಃ ।
ಮಯಿ ದಾತರಿ ಯಶ್ಚಾಽಯಂ ಯಾಚತೇ ಚ ಕ್ರಮತ್ರಯಂ ॥೧೧॥

ಇತ್ಯೇವಮುಕ್ತ್ವಾ ವಚನಂ ಮಹಾತ್ಮಾ
ಭೂಯೋಽಪ್ಯುವಾಚಾಥ ಹರಿಂ ಸುರಾರಿಃ ।
ಯಾವಚ್ಛ ವಿಷ್ಣೋ ಗಜವಾಜಿಭೂಮಿ
ದಾಸೀರ್ಹಿರಣ್ಯಂ ಯದಪೀಪ್ಸಿತಂ ಚ ॥೧೨॥

೯-೧೦. ಈ ವಾಮನನು ಆಕಾರದಲ್ಲಿ ಮಾತ್ರವೇ ಲಘುವಾಗಿಲ್ಲ. ಮನೋರಥದಲ್ಲಿಯೂ ಲಘುವೇ ಆಗಿರುವನು. ಆದುದರಿಂದಲೇ ದಾನಶೀಲನಾದ ನನ್ನಲ್ಲಿಯೂ ಮೂರು ಹೆಜ್ಜೆಯ ಭೂಮಿಯನ್ನು ಮಾತ್ರ ಯಾಚಿಸುತ್ತಿರುವನು. ಅಲ್ಪವಸ್ತುವಿಗಾಗಿ ಪ್ರಯಾಸಪಡುತ್ತಿರುವ ಈ ವಿಷ್ಣುವಿನಂತೆಯೇ ಪುಣ್ಯಹೀನರಾದ (ಅದುದರಿಂದಲೇ) ಅಲ್ಪಬುದ್ಧಿಯುಳ್ಳ ಮನುಷ್ಯರೂ ಲಘುವಾದ ವಸ್ತುವನ್ನೇ ಅಪೇಕ್ಷಿಸುತ್ತಾರೆ. ಅಂತಹ ನಿರ್ಭಾಗ್ಯರಿಗೆ ವಿಧಿಯೂ ಸಹ ಪ್ರಾಯಕವಾಗಿ ಧನಾದಿ ಸಮೃದ್ಧಿಯನ್ನು ಕೊಡುವುದೇ ಇಲ್ಲ ಭಾಗ್ಯಹೀನನಾದವನಿಗೆ ಧನಾದಿಗಳನ್ನು ಹೊಂದುವ ಅದೃಷ್ಟವೂ ಇರುವುದಿಲ್ಲ. ಆದುದರಿಂದಲೇ ದಾನಶೀಲನಾದ ನನ್ನಲ್ಲಿಯೂ ಈ ವಾಮನನು ಮೂರು ಹೆಜ್ಜೆಯ ಭೂಮಿಯನ್ನು ಯಾಚಿಸುತ್ತಿದ್ದಾನೆ.

೧೨-೧೩. ಮಹಾದಾನಶೀಲನಾದ ಆ ಬಲಿಯು ಸತೀಸುತರನ್ನು ಕುರಿತು ತನ್ನ ಔದಾರ್ಯಕ್ಕೆ ತಕ್ಕಂತೆ ಹೀಗೆ ಹೇಳಿ ಹರಿಯನ್ನು ಕುರಿತು ಹೀಗೆ ಹೇಳುತ್ತಾನೆ. ಎಲೈ, ವಿಷ್ಣುವೇ ನೀನು ಯಾಚಕನಾಗಿ ಬಂದಿರುವೆ. ಜಗತ್ಪತಿಯಾದ ನಾನು ದಾತೃವಾಗಿರುವೆನು. ನನ್ನಲ್ಲಿರುವ ಆನೆ, ಕುದುರೆ, ಭೂಮಿ, ದಾಸಿಗಳು ಧನಕನಕಾದಿಗಳು ಇವುಗಳಲ್ಲಿ ನನ್ನ ಗೌರವಕ್ಕೆ ತಕ್ಕ ಯಾವುದನ್ನಾದರೂ ನಿನಗೆ ಇಷ್ಟವಾದುದನ್ನು ಕೇಳು. ನೀನು ಕೇಳುತ್ತಿರುವ ಮೂರು ಹೆಜ್ಜೆಯ ಭೂಮಿಯನ್ನು ಕೊಡಲು ನನಗೆ

ಭವಾಂಶ್ಚ ಯಾಚಿತಾ ವಿಷ್ಣೋ ತ್ವಹಂ ದಾತಾ ಜಗತ್ಪತಿಃ ।
ದಾತುಂ ನ್ಯೆ ಮಮ ಲಜ್ಜೇಯಂ ಕಥಂ ನ ಸ್ಯಾತ್ಪದತ್ರಯಂ ॥ ೧೩ ॥

ರಸಾತಲಂ ಸ್ವಾಂ ಪೃಥಿವೀಂ ಭುವಂ ನಾಕಮಥಾಪಿ ವಾ ।
ಏತೇಭ್ಯಃ ಕತಮಂ ದದ್ಯಾಂ ಸ್ವಸ್ಥೋ ಯಾಚಸ್ವ ವಾಮನ ॥ ೧೪ ॥

ವಾಮನ ಉವಾಚ

ಗಜಾಶ್ವಭೂಹಿರಣ್ಯಾದಿ ತದರ್ಥಿಭ್ಯಃ ಪ್ರದೀಯತಾಂ ।
ಏತಾವದೇವ ಸಂಪ್ರಾರ್ಥೀ ದೇಹಿ ರಾಜನ್ಪದತ್ರಯಂ ॥ ೧೫ ॥

ಇತ್ಯೇವಮುಕ್ತೇ ವಚನೇ ವಾಮನೇನ ಮಹಾತ್ಮನಾ ।
ಬಲಿರ್ಭೃಂಗಾರಮಾದಾಯ ದದೌ ವಿಷ್ಣೋಃ ಕ್ರಮತ್ರಯಂ ॥ ೧೬ ॥

ಲಜ್ಜೆಯಾಗುವುದಿಲ್ಲವೇ (ಲಘುಪ್ರಿಯನಾದ ನೀನಾದರೂ ಲಜ್ಜೆಯಿಲ್ಲದೆ ಇದನ್ನು ಕೇಳಬಹುದು. ಉದಾರಿಯಾದ ನಾನು ಇದನ್ನು ನಾಚಿಕೆಯಿಲ್ಲದೆ ಹೇಗೆ ಕೊಡಲಿ ಎಂದು ತಾತ್ಪರ್ಯ).

೧೪. ನನ್ನ ಪಾತಾಳಲೋಕ, ಭೂಲೋಕ ಸ್ವರ್ಗಲೋಕ, ಇವುಗಳಲ್ಲಿ ಯಾವುದನ್ನಾದರೂ ಕೊಡಲು ಸಿದ್ಧನಾಗಿರುವೆನು ಎಲೈ, ವಾಮನನೇ. ನಿಶ್ಶಂಕೆಯಿಂದ ಯಾಚಿಸು.

೧೫-೧೬. ವಾಮನನು ಹೇಳುತ್ತಾನೆ. ಧೊರೆಯೇ, ಉದಾರನಾದ ನೀನು ಆನೆ ಕುದುರೆ ಭೂಮಿ ಧನಕನಕಾದಿಗಳು ಇವುಗಳನ್ನು ಅಪೇಕ್ಷಿಸುವವರಿಗೆ ಯಥೇಚ್ಛವಾಗಿ ಕೊಡು, ನಾನು ಮಾತ್ರ ಇಷ್ಟಕ್ಕೇ ಯಾಚಕನಾಗಿರುವೆನು, ಮೂರು ಹೆಜ್ಜೆಯ ಪ್ರದೇಶವನ್ನು ಮಾತ್ರ ನನಗೆ ಕೊಡು ಎನ್ನಲು ಒಡನೆಯೇ ಬಲಿಯು ಚಿನ್ನನ ಬಟ್ಟಲಿನಿಂದ ದಾನೋದಕವನ್ನೆರೆದು ವಿಷ್ಣುವಿಗೆ ಮೂರು ಹೆಜ್ಜೆಯ ಪ್ರದೇಶವನ್ನು ದಾನಮಾಡಿದನು.

ಪಾಣೌ ತು ಪತಿತೇ ತೋಯೇ ದಿವ್ಯಂ ರೂಪಂ ಚಕಾರ ಹ ।
ತ್ರೈಲೋಕ್ಯಕ್ರಮಣಾರ್ಥಾಯ ವಜ್ರರೂಪಂ ಜಗನ್ಮಯಂ ॥ ೧೭ ॥

ಪಾದೇ ಭೂಮಿಸ್ತಥಾ ಜಂಘೇ ನಭಸ್ತ್ರೈಲೋಕ್ಯವಂದಿತಂ ।
ಸತ್ಯಂ ತಪೋ ಜಾನುಯುಗ್ಮೇ ಊರೂಸ್ತೋ ಮೇರುಮಂದರೌ ॥ ೧೮ ॥

ವಿಶ್ವೇದೇವಾಃ ಕಟೀಭಾಗೇ ಮರುತೋ ಬಸ್ತಿಶೀರ್ಷಯೋಃ ।
ಲಿಂಗಸ್ಥಿತೋ ಮನ್ಮಥಶ್ಚ ವೃಷಣಸ್ಥಃ ಪ್ರಜಾಪ್ರತಿಃ ॥ ೧೯ ॥

ಕುಕ್ಷಿಸ್ಥಾ ಅರ್ಣವಾಃ ಸಪ್ತ ಜಠರೇ ಭುವನಾನ್ಯಥೋ ।
ವಲೀಷು ತ್ರಿಷು ನದ್ಯಶ್ಚ ಯಜ್ಞೋಂತರ್ಜಠರೇ ಸ್ಥಿತಃ ॥ ೨೦ ॥

ಇಷ್ಟಾಪೂರ್ತಾದಯಃ ಸರ್ವಾಃ ಕ್ರಿಯಾ ಮಂತ್ರಾಶ್ಚ ಸಂಸ್ಥಿತಾಃ ।
ಪೃಷ್ಠಸ್ಥಾ ವಸವೋ ದೇವಾಃ ಸ್ಕಂಧೋ ರುದ್ರೈರಧಿಷ್ಠಿತಃ ॥ ೨೧ ॥

೧೭-೧೯. ದಾನೋದಕವು ಕೈಗೆ ಬಿದ್ದೊಡನೆಯೇ ಆ ವಾಮನನು ಮೂರು ಲೋಕವನ್ನೂ ಆಕ್ರಮಿಸಲು ಸಮರ್ಥವಾದ ದೃಢವಾಗಿಯೂ ಜಗದ್ವ್ಯಾಪಿಯಾಗಿಯೂ ಇರುವ ದಿವ್ಯರೂಪವನ್ನು ಧರಿಸಿದನು, ಆ ದಿವ್ಯರೂಪದಲ್ಲಿ ಭೂಮಿಯು ಪಾದದಲ್ಲಿಯೂ ಅಂತರಿಕ್ಷವು, ಮೊಣಕಾಲುಗಳಲ್ಲಿಯೂ, ಲೋಕವಂದ್ಯವಾದ ಸತ್ಯಲೋಕ ಮತ್ತು ತಪೋಲೋಕಗಳು ಎರಡು ಮಂಡಿಗಳಲ್ಲಿಯೂ, ಮೇರು ಮತ್ತು ಮಂದರಪರ್ವತಗಳು, ತೊಡೆಗಳಲ್ಲಿಯೂ ವಿಶ್ವೇದೇವತೆಗಳು ಸೊಂಟದಲ್ಲಿಯೂ, ಮರುತ್ತುಗಳು ಹೊಕ್ಕಳಿನ ಕೆಳಭಾಗ ಮತ್ತು ಮೇಲ್ಭಾಗದಲ್ಲಿಯೂ ಮನ್ಮಥನು ಲಿಂಗದಲ್ಲಿಯೂ, ಪ್ರಜಾಪತಿಯು ವೃಷಣಪ್ರದೇಶದಲ್ಲಿಯೂ.

೨೦-೨೧. ಸಪ್ತಸಮುದ್ರಗಳು ಹೊಟ್ಟೆಯಲ್ಲಿಯೂ, ಎಲ್ಲಾ ಲೋಕಗಳೂ ಜಠರದಲ್ಲಿಯೂ, ನದಿಗಳೆಲ್ಲವೂ ಹೊಟ್ಟೆಯ ಮೇಲಿನ ವಲಿತ್ರಯ (ಮಡಿಕೆ) ದಲ್ಲಿಯೂ ಯಜ್ಞವು ಜಠರದ ಒಳಭಾಗದಲ್ಲಿಯೂ ನಿಂತವು, ಇಷ್ಟಾಪೂರ್ತಾದಿ ಸರ್ವಕ್ರಿಯೆಗಳೂ ಮಂತ್ರಗಳೂ ಆ ದೇಹದಲ್ಲಿ ನೆಲಸಿದವು. ಅಷ್ಟವಸುಗಳಾದ ದೇವತೆಗಳು ಎಲ್ಲರೂ ಪೃಷ್ಠಭಾಗದಲ್ಲಿಯೂ ಏಕಾದಶರುದ್ರರು ಭುಜದ ಮೇಲೆಯೂ ನಿಂತರು.

ಬಾಹವಶ್ಚ ದಿಶಃ ಸರ್ವಾ ವಸವೋಽಷ್ಟೌ ಕರಾಃ ಸ್ಮೃತಾಃ ।
ಹೃದಯೇ ಸಂಸ್ಥಿತೋ ಬ್ರಹ್ಮಾ ಕುಲಿಶೋ ಹೃದಯಾಸ್ಥಿಷು ॥ ೨೨ ॥

ಶ್ರೀಸಹಸ್ರಮುರೋಮಧ್ಯೇ ಚಂದ್ರಮಾ ಮನಸಿ ಸ್ಥಿತಃ ।
ಗ್ರೀವ್ಯಾದಿತಿರ್ದೇವಮಾತಾ ವಿದ್ಯಾಸ್ತದ್ವಲಯೇ ಸ್ಥಿತಾಃ ॥ ೨೩ ॥

ಮುಖೇ ತು ಸಾಗ್ನಯೋ ವಿಪ್ರಾಃ ಸಂಸ್ಕಾರಾ ದಶನಚ್ಛದಾಃ ।
ಧರ್ಮಕಾಮಾರ್ಥಮೋಕ್ಷಾಶ್ಚ ಶಾಸ್ತ್ರೈಶ್ಚೈವ ಸಮನ್ವಿತಾಃ ॥ ೨೪ ॥

ಲಕ್ಷ್ಮ್ಯಾ ಸಹ ಲಲಾಟಸ್ಥೌ ಶ್ರವಣಸ್ಥೌ ಹಿ ಚಾಶ್ವಿನೌ ।
ಶ್ವಾಸಸ್ಥೋ ಮಾತರಿಶ್ವಾ ಚ ಮರುತಃ ಸರ್ವಸಂಧಿಷು ॥ ೨೫ ॥

ಸರ್ವಸೂಕ್ತಾನಿ ದಶನಾ ಜಿಹ್ವಾ ದೇವೀ ಸರಸ್ವತೀ ।
ಚಂದ್ರಾದಿತ್ಯೌ ಚ ನಯನೇ ಪಕ್ಷ್ಮಸ್ಥಾಃ ಕೃತ್ತಿಕಾದಯಃ ॥ ೨೬ ॥

ವಿಶಾಖಾ ದೇವದೇವಸ್ಯ ಭ್ರುವೋರ್ಮಧ್ಯೇ ವ್ಯವಸ್ಥಿತಾಃ ।
ತಾರಕಾ ರೋಮಕೂಪೇಭ್ಯೋ ರೋಮಾಣಿ ಚ ಮಹರ್ಷಯಃ ॥ ೨೭ ॥

೨೨-೨೪. ದಿಕ್ಕುಗಳೆಲ್ಲವೂ ಅವನ ತೋಳುಗಳಾದುವು. ಅಷ್ಟವಸುಗಳು ಕೈಯ್ಯಿಗಳಾದರು. ಬ್ರಹ್ಮನು ಹೃದಯದಲ್ಲಿ ಪ್ರತಿಷ್ಠೆಹೊಂದಿದನು. ವಜ್ರಾಯುಧವು ಹೃದಯ ಪಂಜರದ ಅಸ್ಥಿಗಳಾಗಿ ನಿಂತಿತು. ಹೃದಯದ ಮಧ್ಯದಲ್ಲಿ ಸಹಸ್ರಲಕ್ಷ್ಮಿಗಳು ನಿಂತರು. ಚಂದ್ರನು ಮನಸ್ಸಿನಲ್ಲಿ ನಿಂತನು. ಅವನ ಕುತ್ತಿಗೆಯಲ್ಲಿ ದೇವಮಾತೆಯಾದ ಅದಿತಿಯು ನಿಂತಳು, ವಿದ್ಯೆಗಳೆಲ್ಲವೂ ಅವನ ಹಸ್ತಾಭರಣದಲ್ಲಿ ನಿಂತವು ಮುಖದಲ್ಲಿ ಅಗ್ನಿಸಹಿತರಾದ ಬ್ರಾಹ್ಮಣರೂ ತುಟಿಗಳಲ್ಲಿ ಸಂಸ್ಕಾರಗಳೂ ಮತ್ತು ಧರ್ಮಾರ್ಥ ಕಾಮಮೋಕ್ಷಗಳೆಂಬ ಪುರುಷಾರ್ಥಗಳೂ ಶಾಸ್ತ್ರಗಳೂ ಸಹ ಸನ್ನಿಹಿತವಾದುವು.

೨೫-೨೭. ಅಶ್ವಿನೀ ದೇವತೆಗಳು ಲಕ್ಷ್ಮಿಯೊಡನೆ ಹಣೆಯಲ್ಲಿಯೂ ಕಿವಿಗಳಲ್ಲಿಯೂ ನಿಂತರು. ವಾಯುವು ಶ್ವಾಸದಲ್ಲಿಯೂ ಮರುತ್ತುಗಳು ಸಂಧಿಬಂಧಗಳಲ್ಲಿಯೂ ನಿಂತರು. ಸಮಸ್ತ ಸೂಕ್ತಗಳೂ ಹಲ್ಲುಗಳಲ್ಲಿಯೂ ಸರಸ್ವತೀದೇವಿಯು ನಾಲಗೆಯಲ್ಲಿಯೂ ನಿಂತರು. ಚಂದ್ರಸೂರ್ಯರು ನೇತ್ರಗಳಾದರು. ಕೃತ್ತಿಕಾ ನಕ್ಷತ್ರಗಳು ಕಣ್ಣಿನ ರೆಪ್ಪೆಯಲ್ಲಿ ನಿಂತವು. ವಿಶಾಖಾ ನಕ್ಷತ್ರಗಳು ಆ ದೇವತೋತ್ತಮನ ಮಧ್ಯದಲ್ಲಿ ನಿಂತವು. ನಕ್ಷತ್ರಗಳು ರೋಮಕೂಪಗಳಾಗಿಯೂ ರೋಮಗಳೆಲ್ಲವೂ

ಗುಣೈಃ ಸರ್ವಮಯೋ ಭೂತ್ವಾ ಭಗವಾನ್ಭೂತಭಾವನಃ ।
ಕ್ರಮೇಣೈಕೇನ ಜಗತೀಂ ಜಹಾರ ಸಚರಾಚರಂ ॥ ೨೮ ॥

ಊರ್ಧ್ವಂ ವಿಕ್ರಮಮಾಣಸ್ಯ ಮಹಾರೂಪಸ್ಯ ತಸ್ಯ ವೈ ।
ದಕ್ಷಿಣೋಽಭೂತ್ತತಶ್ಚಂದುಃ ಸೂರ್ಯೋಽಭೂತ್ಸವ್ಯತಸ್ತಥಾ ॥ ೨೯ ॥

ದ್ವಿತೀಯಕ್ರಮಣೇನಾಥ ಸ್ವರ್ಮಹರ್ಜನತಾಪಸಾಃ ।
ಕ್ರಾಂತಾಸ್ತ್ವರ್ಧೇನ ವೈ ರಾಜನ್ನರ್ಧೇನಾಪೂರ್ಯತಾಂಬರಂ ॥ ೩೦ ॥

ತತಃ ಪ್ರವರ್ಧಿತೋ ಬ್ರಹ್ಮನ್ವಿಷ್ಣುರ್ವೈ ದಕ್ಷಿಣಾಂತರೇ ।
ಬ್ರಹ್ಮಾಂಡೋದರಮಾಹತ್ಯ ನಿರಾಲೋಕಂ ಜಗಾಮ ಸಃ ॥ ೩೧ ॥

ವಿಶ್ವಾಂಘ್ರಿಣಾ ಪ್ರಸರತಾ ಕಟಾಹೇ ಭೇದಿತೇಽಂಬರಾತ್ ।
ಕುಟಿಲಾ ವಿಷ್ಣುಪಾದಾತ್ತು ಸಸಾರಾಽಽಕುಲಿತಾ ತತಃ ॥ ೩೨ ॥

ಮಹರ್ಷಿಗಳಾಗಿಯೂ ಆದರು. ಈ ವಿಧವಾದ ಗುಣಗಳಿಂದ ಸರ್ವಜಗನ್ಮಯನಾಗಿ ಪರಿಣಮಿಸಿದ ಆ ಕಾರಣಮೂರ್ತಿಯು ಒಂದೇ ಹೆಜ್ಜೆಯಿಂದ ಚರಾಚರಾತ್ಮಕವಾದ ಜಗತ್ತೆಲ್ಲವನ್ನೂ ಸ್ವೀಕರಿಸಿದನು.

೨೯-೩೧. ಮೇಲು ಭಾಗವನ್ನು ಆಕ್ರಮಿಸಲು ವೃದ್ಧಿಹೊಂದಿದ ಆ ವಾಮನನಿಗೆ ಚಂದ್ರನು ಬಲಭಾಗದಲ್ಲಿಯೂ ಸೂರ್ಯನು ಎಡಭಾಗದಲ್ಲಿಯೂ ನಿಂತರು. ಹೀಗೆ ಬೆಳೆದ ಆ ವಾಮನನು ಎರಡನೇಯ ಹೆಜ್ಜೆಯಲ್ಲಿ ಅರ್ಧಭಾಗದಿಂದ ಸ್ವರ್ಲೋಕ ಮಹೋಲೋಕ ಜನಲೋಕ ತಾಪಸಲೋಕಗಳನ್ನೂ ಅರ್ಧಭಾಗದಿಂದ ದ್ಯುಲೋಕಗಳನ್ನೂ ಆಕ್ರಮಿಸಿದನು. ಅನಂತರವೂ ಮೇಲಕ್ಕೆ ಬೆಳೆದ ಆ ವಿಷ್ಣುವು ದಕ್ಷಿಣದ ಅಂತರಭಾಗದಲ್ಲಿ ಮೇಲಕ್ಕೂ ವ್ಯಾಪಿಸಿ ಬ್ರಹ್ಮಾಂಡದ ಮಧ್ಯಭಾಗವನ್ನೂ ಭೇದಿಸಿಕೊಂಡು ಬೆಳಕಿಲ್ಲದ ಅದರ ಮೇಲುಭಾಗವನ್ನೂ ಸೇರಿದನು.

೩೨-೩೪. ವಿಶ್ವಾಕ್ರಮಣವಂ ಮಾಡಿರುವ ಪಾದದಿಂದ ಕೂಡಿ ಮೇಲಕ್ಕೂ ಪ್ರಹರಿಸಿದ ಆ ಮಹಾಮೂರ್ತಿಯ ಪಾದದಿಂದ ಬ್ರಹ್ಮಾಂಡದ ಮೇಲಿನ ಮುಚ್ಚಳವೂ ಭಗ್ನವಾಗಲು ಅಲ್ಲಿದ್ದ ಕುಟಿಲಾ ಎಂಬ ನದಿಯು ವ್ಯಾಕುಲವಾಗಿ ಆ ವಿಷ್ಣುಪಾದದ ಮಾರ್ಗದಿಂದಲೇ ಕೆಳಮುಖದಿಂದ ಹರಿಯಿತು. ಆದುದರಿಂದಲೇ ಆ ನದಿಯನ್ನು ವಿಷ್ಣುಪದೀ ಎಂಬ ಹೆಸರಿನಿಂದ ತಪಸ್ವಿಗಳು ಸ್ತೋತ್ರಮಾಡುತ್ತಾರೆ. ಆಗ ವಾಮನನು ತನ್ನ ಮೂರನೇ ಹೆಜ್ಜೆಯು ಸಂಪೂರ್ಣವಾಗದಿದ್ದುದರಿಂದ ಬಲಿಯ ಸಮೀಪಕ್ಕೆ

ಕೆಚಾಧ್ವಿಷ್ಣುಪದೀತ್ಯೇವಂ ತಾಂ ಸ್ತುವಂತಿ ಚ ತಾಪಸಾಃ ।
ಭಗವಾನಪ್ಯಸಂಪೂರ್ಣೇ ತೃತೀಯೇsನುಕ್ರಮೆ ವಿಭುಃ ॥ ೩೩ ॥

ಸಮುಭ್ಯೇತ್ಯ ಬಲಿಂ ಪ್ರಾಹ ಈಷತ್ಪ್ರಸ್ಫುರಿತಾಧರಃ ।
ಋಣೇ ಭವಸಿ ದೈತ್ಯೇಂದ್ರ ಬಂಧನಂ ಘೋರದರ್ಶನಂ ॥
ತ್ವಂ ಪೂರಯ ಪದಂ ತನ್ಮೇ ನೋಚೇದ್ಬಂಧಂ ಪ್ರತಿಚ್ಛ ಮೇ ॥ ೩೪ ॥

ತನ್ಮುರಾರಿವಚಃ ಶ್ರುತ್ವಾ ವಿಹಸ್ಯಾಥ ಬಲೇಃ ಸುತಃ ।
ಬಾಣಃ ಪ್ರಾಹಾsಮರಪತಿಂ ವಚನಂ ಹೇತುಸಂಯುತಂ ॥ ೩೫ ॥

ಬಾಣಾಸುರ ಉವಾಚ

ಕೃತ್ವಾ ಮಹೀಮಲ್ಪತರಾಂ ಜಗತ್ಪತೇ
ಸ್ವಯಂ ವಿಧಾತಾ ಭುವನೇಶ್ವರಾಣಾಂ ।
ಕಥಂ ಬಲಿಂ ಪ್ರಾರ್ಥಯಸೇ ಸುವಿಸ್ತೃತಾಂ
ಯಾಂ ಪ್ರಾಗ್ಭವಾನ್ನೋ ವಿಪುಲಾಂ ಚಕಾರ ॥ ೩೬ ॥

ಬಂದು ಉಪಹಾಸಕ್ಕಾಗಿ ತುಟಿಯನ್ನು ಅರಳಿಸುತ್ತಾ ದೈತ್ಯರಾಜನೇ! ಮೂರನೇಯ ಹೆಜ್ಜೆಗೆ ಸ್ಥಾನವನ್ನು ಕೊಡದಿರುವುದರಿಂದ ನೀನು ಆ ಋಣದಲ್ಲಿ ಬಿದ್ದಿದ್ದೀಯೆ. ಆ ಋಣಬಂಧವು ಘೋರವಾದುದು. ಅದನ್ನು ನೀನು ಪೂರ್ತಿಗೊಳಿಸು. ಇಲ್ಲವಾದರೆ ನನ್ನ ಬಂಧನವನ್ನು ಒಪ್ಪಿಕೋ ಎಂದನು.

೩೫-೩೬. ವಿಷ್ಣುವಿನ ಆ ಮಾತನ್ನು ಕೇಳಿ ಬಲಪುತ್ರನಾದ ಬಾಣನು ನಗುತ್ತಾ ಆ ವಿಷ್ಣುವನ್ನೇ ಕುರಿತು ಯುಕ್ತಿಯುಕ್ತವಾದ ಈ ಮಾತನ್ನಾಡಿದನು. ಬಾಣಾಸುರನು ಹೇಳುತ್ತಾನೆ. ಎಲೈ, ಜಗತ್ಪತಿಯೇ ಲೋಕಗಳನ್ನೂ ಲೋಕಾಧಿಪತಿಗಳನ್ನೂ ಸ್ವೇಚ್ಛೆಯಿಂದ ನಿರ್ಮಿಸಿದ ನೀನು ಭೂಮಿಯನ್ನು ಇಷ್ಟು ಚಿಕ್ಕದ್ದನ್ನಾಗಿಮಾಡಿ ವಿಸ್ತಾರವಾದ ಭೂಮಿಗಾಗಿ ಬಲಿಯನ್ನು ಹೇಗೆ ತಾನೇ ಪ್ರಾರ್ಥಿಸುತ್ತಿದ್ದೀಯೆ ವಿಸ್ತಾರವಾದ ಭೂಮಿಯನ್ನು ಮೊದಲು ನೀನೇ ಸೃಷ್ಟಿಮಾಡಿಲ್ಲವಲ್ಲ! ಪ್ರಭುವೇ ಎಷ್ಟುಮಟ್ಟಿನ ವಿಸ್ತಾರವುಳ್ಳ ಭೂಮಿಯನ್ನು ನೀನು ಸೃಷ್ಟಿಮಾಡಿದ್ದೆಯೋ, ಅಂತರಾಳದಲ್ಲಿರುವ ಸಮಸ್ತ ವಸ್ತುಗಳೊಡನೆ ಅಷ್ಟು ವಿಸ್ತಾರವುಳ್ಳ ಭೂಮಿಯೂ ನಮ್ಮ ತಂದೆಯಿಂದ ನಿನಗೆ ಕೊಡ

ವಿಭೋ ಮಹೀ ಯಾವತೀ ಚ ತ್ವಯಾದ್ಯ
ಸೃಷ್ಟಾ ಸಮೇತಾ ಭುವನಾಂತರಾಲೇ ।
ದತ್ತಾ ಚ ತಾತೇನ ಹಿ ತಾವತೀಯಂ
ಕಿಂ ವಾ ಛಲೇನೈಷ ನಿಬಧ್ಯತೇಽದ್ಯ ॥ ೩೭ ॥

ಯಯೈವ ಶಕ್ತ್ಯಾ ಭವತಾ ಹಿ ಪೂರ್ವಂ
ತಯೈವ ಶಕ್ತ್ಯಾ ದಿತಿಜೇಶ್ವರೋಽಸೌ ।
ಶಕ್ತಸ್ತು ಸಂಪೂಜಯಿತುಂ ಮುರಾರೇ
ಪ್ರಸೀದ ಮಾ ಬಂಧನಮಾದಿಶಸ್ವ ॥ ೩೮ ॥

ಪ್ರೋಕ್ತಂ ಶ್ರುತೌ ಭವತಾಽಪೀಶ ವಾಕ್ಯಂ
ದಾನಂ ಪಾತ್ರೇ ಜಾಯತೇ ಸೌಖ್ಯದಾಯಿ ।
ದೇಶೇ ಪುಣ್ಯೇ ತದ್ವದೇವಾಪಿ ಕಾಲೇ
ತಚ್ಚಾಽಶೇಷಂ ದೃಶ್ಯತೇ ಚಕ್ರಪಾಣೌ ॥ ೩೯ ॥

ಲ್ಪಟ್ಟಿದೆ. ಹೀಗಿದ್ದರೂ ಇಲ್ಲದೆ ಇರುವ ವಿಸ್ತಾರವನ್ನು ಅಪೇಕ್ಷಿಸುವ ನೀನು ಕೇವಲ ವಂಚಕವಾದ ಮಾತಿನಿಂದ ತಂದೆಯನ್ನು ಬಂಧಿಸಲು ಏಕೆ ಪ್ರಯತ್ನಿಸುತ್ತಿದ್ದೀಯೆ.

೩೮-೪೦. ನೀನು ಮೊದಲು ಎಷ್ಟರಮಟ್ಟಿಗೆ ದಾನಕೊಡಲು ಬಲಿಯು ಸಮರ್ಥನೆಂದು ತಿಳಿದು ಯಾಚಿಸಿದೆಯೋ ಅಂತಹ ಶಕ್ತಿಗನುಗುಣವಾಗಿ ನಮ್ಮ ದೈತ್ಯರಾಜನು ನಿನ್ನನ್ನು ಪೂಜಿಸಲು ಸಮರ್ಥನಾಗಿರುವನು ಪೂಜಿಸಿಯೂ ಇರುವನು ಆದುದರಿಂದ ನೀನು ಪ್ರಸನ್ನನಾಗು ವ್ಯರ್ಥವಾಗಿ ಬಂಧನವನ್ನು ಆಜ್ಞಾಪಿಸಬೇಡ. ಪ್ರಭುವೇ, ಸತ್ಪಾತ್ರದಲ್ಲಿ ಮಾಡಿದ ದಾನವು ಸೌಖ್ಯಪ್ರದವಾಗುತ್ತದೆ ಎಂದು ನೀನೇ ನಿನ್ನ ಆಜ್ಞಾರೂಪವಾದ ವೇದದಲ್ಲಿ ಹೇಳಿರುವೆ. ಪುಣ್ಯಕರವಾದ ದೇಶದಲ್ಲಿಯೂ ಕಾಲದಲ್ಲಿಯೂ ಮಾಡಿರುವ ಅಂತಹ ದಾನವು ಚಕ್ರಪಾಣಿಯಾಗಿರುವ ನಿನ್ನಲ್ಲಿಯೇ

ದಾನಂ ಭೂಮಿಃ ಸರ್ವಕಾಮಪ್ರದಾತಾ
ಭವಾನ್ಪಾತ್ರಂ ದೇವದೇವೋಽಜಿತಾತ್ಮಾ ।
ಕಾಲೋ ಜ್ಯೇಷ್ಠಾ ಮೂಲಯೋಗೇ ಮೃಗಾಂಕಃ
ಕುರುಕ್ಷೇತ್ರಂ ಪುಣ್ಯದೇಶಃ ಪ್ರಸಿದ್ಧಃ ॥ ೪೦ ॥

ಕಿಂ ವಾ ದೇವೈರ್ಮದ್ವಿಧೈರ್ಬುದ್ಧಿಹೀನೈಃ
ಶಿಕ್ಷಾಂ ನೇಯಃ ಸಾಧು ವಾऽಸಾಧು ಚೈವ ।
ಸ್ವಯಂ ಶ್ರುತೀನಾಮಪಿ ಚಾಽದಿಕರ್ತಾ
ವ್ಯವಸ್ಥಿತಃ ಸದಸದ್ರೂಪೀ ಜಗದ್ವೈ ॥ ೪೧ ॥

ಕೃತ್ವಾ ಪ್ರಮಾಣಂ ಸ್ವಯಮೇವ ಹೀನಂ
ಪದತ್ರಯಂ ಯಾಚಿತವಾಂಸ್ತು ಯಚ್ಚ ।
ಕಿಂ ತ್ವಂ ಹಿ ಗೃಹ್ಣಾಸಿ ವಿಭೋ ಮಹಾತ್ಮಾ
ರೂಪೇಣ ಲೋಕಪ್ರತಿವಂದಿತೇನ ॥ ೪೨ ॥

ಈಗ ತೋರುತ್ತಿದೆ. ಮಾಡಿರುವ ದಾನವಾದರೋ ಭೂಮಿ, ಸಕಲಪುರುಷಾರ್ಥ ಪ್ರದನಾಗಿಯೂ ಅಜಿತಮೂರ್ತಿಯಾಗಿಯೂ ಇರುವ ದೇವತೋತ್ತಮನಾದ ನೀನೇ ಅಂತಹ ದಾನಕ್ಕೆ ಪಾತ್ರನು. ಜ್ಯೇಷ್ಠ ಮತ್ತು ಮೂಲಾನಕ್ಷತ್ರಗಳ ಯೋಗವುಳ್ಳ ಚಂದ್ರನಿಂದ ಕೂಡಿರುವ ಪ್ರಶಸ್ತವಾದಕಾಲ, ದೇಶವಾದರೋ, ಜಗತ್ಪ್ರಸಿದ್ಧವಾದ ಕುರುಕ್ಷೇತ್ರವೆಂಬ ಪುಣ್ಯಭೂಮಿ.

೪೧-೪೨. ಪ್ರಭುವೇ, ವೇದಗಳಿಗೆ ಪ್ರಥಮ ಪ್ರವರ್ತಕನಾಗಿಯೂ ಸದಸದಾತ್ಮಕವಾದ ಜಗದ್ರೂಪನಾಗಿಯೂ ಇರುವ ನಿನಗೆ ನನ್ನಂತಹ ಬುದ್ಧಿಹೀನರಾದ ದೇವತೆಗಳಿಂದಾಗಬೇಕಾದುದೇನು. ಅಂತಹ ದೇವತೆಗಳ ಹಿತಕ್ಕಾಗಿ ನ್ಯಾಯಾನ್ಯಾಯಗಳನ್ನು ವಿಚಾರಮಾಡದೆ ದೈತ್ಯರಾಜನನ್ನು ಶಿಕ್ಷೆಗೆ ಗುರಿಪಡಿಸುವುದು ನ್ಯಾಯವೇ? ಪ್ರಭುವೇ, ಅಲ್ಪಪ್ರಮಾಣವನ್ನು ಆಶ್ರಯಿಸಿ ಮೂರು ಹೆಜ್ಜೆಯ ಭೂಮಿಯನ್ನು ಹೊಂದಿದ ನೀನು ಈಗ ಈ ಪ್ರಮಾಣಕ್ಕೆ ತಕ್ಕಂತೆಮೂರು ಹೆಜ್ಜೆಯ ಪ್ರದೇಶವನ್ನು ಸ್ವೀಕರಿಸುವುದು ಯುಕ್ತವೇ?

ನಾತ್ರಾಶ್ಚರ್ಯಂ ಯಜ್ಜಗದ್ದ್ವೈ ಸಮಗ್ರಂ
ಕ್ರಮದ್ವಯೇನೈವ ಪೂರ್ಣಂ ತವಾದ್ಯ ।
ಕ್ರಮೇಣ ಭೋ ಲಂಘಯಿತುಂ ಸಮರ್ಥೋ
ಮಹೀಂ ಸಮಗ್ರಾಂ ನನು ಲೋಕನಾಥ ॥ ೪೩ ॥

ಪ್ರಮಾಣಹೀನಾಂ ಸ್ವಯಮೇವ ಕೃತ್ವಾ
ವಸುಂಧರಾಂ ಮಾಧವ ಪದ್ಮನಾಭ ।
ವಿಷ್ಣೋ ನಿಬಧ್ನಾಸಿ ಕಥಂ ಬಲಿಂ ತ್ವಂ
ವಿಭುರ್ಯದೇವೇಚ್ಛಸಿ ತತ್ಕುರುಷ್ವ ॥ ೪೪ ॥

---

೪೩. ಎಲೈ ಲೋಕಪತಿಯೇ, ಸಮಗ್ರವಾದ ಈ ಜಗತ್ತೆಲ್ಲವೂ ನಿನ್ನ ಎರಡು ಪಾದಗಳಿಂದ ಪೂರ್ಣವಾಯಿತೆಂಬುದು ಏನು ಆಶ್ಚರ್ಯ. ಎಲ್ಲಾ ಭೂಮಿಯನ್ನೂ ಒಂದೇ ಪಾದದಲ್ಲಿ ಆಕ್ರಮಿಸಲು ನೀನು ಸಮರ್ಥನೇ ಆಗಿದ್ದೀಯೆ. (ಮಹಾಮಹಿಮೆಯುಳ್ಳ ಇಂತಹ ನೀನು ಒಂದೇ ಹೆಜ್ಜೆಯಿಂದ ಎಲ್ಲವನ್ನೂ ಸ್ವೀಕರಿಸಿ ಬಲಿಯಮೇಲೆ ಎರಡು ಹೆಜ್ಜೆಯನ್ನೂ ಆಪಾದನಮಾಡಬಹುದಾಗಿದ್ದಿತು. ಒಂದು ಹೆಜ್ಜೆಯನ್ನು ಮಾತ್ರವೇ ಆಪಾದಿಸಿ ಬಂಧಿಸುವ ಕುಟಿಲಪ್ರಯತ್ನವೇಕೆ. ಎಷ್ಟು ವಿಚಾರಮಾಡಿದರೂ ಇದು ನಿನ್ನ ಗೌರವಕ್ಕೆ ಅನನುಗುಣವಾದ ವಂಚನೆಯೇ ಹೊರತು ಋಜುಮಾರ್ಗಕ್ಕೆ ಸೇರಿದುದಲ್ಲವೆಂದು ಭಾವ.)

೪೪. ಎಲೈ ಮಾಧವನೇ, (ಲಕ್ಷ್ಮೀಪತಿಯೇ) ಪದ್ಮನಾಭನೇ, (ಬ್ರಹ್ಮನಿಗೂ ಕಾರಣನಾದ ಆದಿಮೂರ್ತಿಯೇ) ವಿಷ್ಣುವೇ, (ಸರ್ವವ್ಯಾಪಕನೇ) ವಾಮನನ ಮಹತ್ವ ಸೂಚಕಗಳಾದ ಈ ವಿಶೇಷಣಗಳೆಲ್ಲವೂ ನ್ಯಾಯಬಾಹಿರವಾದ ಕಾರ್ಯದಲ್ಲಿ ನೀನು ಪ್ರವರ್ತಿಸಬಾರದು ಎಂಬ ಅಂಶಕ್ಕೆ ಸೂಚಕವಾಗಿವೆ. (ದರಿದ್ರನಾಗಿಯೂ ಅಲ್ಪನಾಗಿಯೂ ಕರ್ಮಬಂಧದಿಂದ ಸಂಕುಚಿತನಾಗಿಯೂ ಇರುವ ಚೇತನನು ಅನ್ಯಾಯದಿಂದಾದರೂ "ಅಪ್ಯಕಾರ್ಯಶತಂ ಕೃತ್ವಾ ಭರ್ತವ್ಯಾ ಮನುರಬ್ರವೀತ್" ಎಂಬ ಮನುವಚನಾವಲಂಬನದಿಂದ ಇಂತಹ ವಂಚನೆಯಲ್ಲಿ ತೊಡಗಬಹುದು. ಲಕ್ಷ್ಮೀಪತಿಯಾಗಿಯೂ ಪದ್ಮನಾಭನಾಗಿಯೂ ವಿಷ್ಣುವಾಗಿಯೂ ಇರುವ ನಿನಗೆ ಅನ್ಯಾಯಾಚರಣಕ್ಕೆ ಲೇಶಮಾತ್ರವೂ ಅವಕಾಶವಿಲ್ಲವೆಂದು ಭಾವ.) ಹೀನಪ್ರಮಾಣದ ಭೂಮಂಡಲವನ್ನು ನೀನೇ ಸೃಷ್ಟಿಮಾಡಿ ಬಲಿಯನ್ನು ನಿಗ್ರಹಿಸುವುದು ನಿನಗೆ ನ್ಯಾಯವೇ! ಇದನ್ನು ನೀನೇ ಆಲೋಚಿಸು. ಅಥವಾ ಪ್ರಭುತ್ವವನ್ನೇ ಪುರಸ್ಕರಿಸಿ ನಡೆಯುವವರಿಗೆ ನ್ಯಾಯಾನ್ಯಾಯದ ಕಥೆ ಏಕೆ! ನಿನ್ನ ಇಚ್ಛೆಬಂದಂತೆ ಮಾಡು.

ಪುಲಸ್ತ್ಯ ಉವಾಚ

ಇತ್ಯೇವಮುಕ್ತೇ ವಚನೇ ಬಲಿನಾ ಬಲಿಸೂನುನಾ ।
ಪ್ರೋವಾಚ ಭಗವಾನ್ವಾಕ್ಯಂ ಹ್ಯಾದಿಕರ್ತಾ ಜನಾರ್ದನಃ ॥ ೪೫ ॥

ತ್ರಿವಿಕ್ರಮ ಉವಾಚ

ಯಾನ್ಯುಕ್ತಾನಿ ವಚಾಂಸೀತ್ಥಂ ತ್ವಯಾ ಬಾಲೇಯ ಸಾಂಪ್ರತಂ ।
ತೇಷಾಂ ವೈ ಹೇತುಸಂಯುಕ್ತಂ ಶೃಣು ಪ್ರತ್ಯುತ್ತರಂ ಮಮ ॥ ೪೬ ॥

ಪೂರ್ವಮುಕ್ತಸ್ತವ ಪಿತಾ ಮಯಾ ರಾಜನ್ಪದತ್ರಯಂ ।
ದೇಹಿ ಮಹ್ಯಂ ಪ್ರಮಾಣೇನ ತದೇತತ್ಸಮನುಷ್ಠಿತಂ ॥ ೪೭ ॥

ಕಿಂ ನ ವೇತ್ತಿ ಪ್ರಮಾಣಂ ಮೇ ಬಲಿಸ್ತವ ಪಿತಾsಸುರಃ ।
ಪ್ರಾಯಚ್ಛದ್ಯೇನ ನಿಃಶಂಕಂ ಮಮ ಮಾನಂ ಪದತ್ರಯಂ ॥ ೪೮ ॥

೪೫-೪೬. ಪುಲಸ್ತ್ಯರು ಹೇಳುತ್ತಾರೆ. ಹೀಗೆ ಬಲಿಪುತ್ರನಾದ ಬಾಣನು ಆಕ್ಷೇಪಿಸುವುದನ್ನು ಕೇಳಿ ಆದಿಕರ್ತೃವಾದ ಆ ಜನಾರ್ದನ ಮೂರ್ತಿಯು ಅವನನ್ನು ಕುರಿತು ಹೀಗೆ ಹೇಳಿದನು. ತ್ರಿವಿಕ್ರಮನು ಹೇಳುತ್ತಾನೆ. ಎಲೈ ಬಲಿಪುತ್ರನೇ, ನೀನು ಇದುವರಿಗೂ ಯಾವ ಯಾವ ಮಾತುಗಳನ್ನು ಹೇಳಿದೆಯೋ ಅವಕ್ಕೆಲ್ಲಾ ಸಯುಕ್ತಿಕವಾದ ಪ್ರತ್ಯುತ್ತರವನ್ನು ಹೇಳುತ್ತೇನೆ. ಕೇಳು.

೪೭-೪೮. ಮೊದಲು ನಾನು ನಿನ್ನ ತಂದೆಯನ್ನು ಕುರಿತು ಧೊರೆಯೇ ನನ್ನ ಪ್ರಮಾಣಕ್ಕೆ ತಕ್ಕಂತೆ ಮೂರು ಹೆಜ್ಜೆಯ ಪ್ರದೇಶವನ್ನು ಕೊಡು ಎಂದು ಕೇಳಿದೆನು. ನಾನು ಕೇಳಿದಂತೆಯೇ ಅವನೂ ಕೊಟ್ಟನು. ನಿನ್ನ ತಂದೆಯಾದ ಅಸುರರಾಜನು ನನ್ನ ಪ್ರಮಾಣವನ್ನು ತಿಳಿದಿರಲಿಲ್ಲವೇ ? ಹಾಗೆ ತಿಳಿಯದಿದ್ದಲ್ಲಿ ನಿರ್ಭಯನಾಗಿ!ನಾನು ಕೇಳಿದ ಪಾದತ್ರಯವನ್ನು ಹೇಗೆ ಕೊಡುತ್ತಿದ್ದನು. (ಈ ಉತ್ತರದಿಂದ ದಾನಮಾಡುವ ಮೊದಲು ಪ್ರಮಾಣ ನಿರ್ಣಯವನ್ನು ತಿಳಿಯದೆ ಹೋದದ್ದು ನಿನ್ನ ತಂದೆಯ ತಪ್ಪೇ ಹೊರತು ನನ್ನ ತಪ್ಪಲ್ಲ. ದಾನಕ್ಕೆ ಪೂರ್ವದಲ್ಲಿಯೂ ಈಗಲೂ ಸಹ ಅಳತೆಯಲ್ಲಿ ತೊಡಗಿರುವ ಪಾದವು ನನ್ನದೇ ಹೊರತು ಮತ್ತೊಬ್ಬರದಲ್ಲ. ಆದುದರಿಂದ ನನ್ನ ಮೇಲೆ ನೀನು ಆಕ್ಷೇಪಿಸಲು ಕಾರಣವಿಲ್ಲವೆಂದು ತಾತ್ಪರ್ಯವನ್ನು ಊಹಿಸಬೇಕು.)

ಸತ್ಯಂ ಕ್ರಮೇಣ ಚೈಕೈನ ಕ್ರಮೇಯಂ ಭೂರ್ಭುವಾದಿಕಂ ।
ಬಲೇರಪಿ ಹಿತಾರ್ಥಾಯ ಕೃತಮೇತತ್ಕ್ರಮದ್ವಯಂ ॥ ೪೯ ॥

ತಸ್ಮಾದ್ಯನ್ಮಮ ಬಾಲೇಯ ತ್ವತ್ಪಿತ್ರಾಂಬುಕರೇ ಮಹತ್ ।
ದತ್ತಂ ತೇನಾಯುರೇತಸ್ಯ ಕಲ್ಪಂ ಯಾವದ್ಭವಿಷ್ಯತಿ ॥ ೫೦ ॥

ಇದಮುಕ್ತ್ವಾ ಬಲಿಸುತಂ ಬಾಣಂ ದೇವಸ್ತ್ರಿವಿಕ್ರಮಃ ।
ಪ್ರೋವಾಚ ಬಲಿಮಭ್ಯೇತ್ಯ ವಚನಂ ಮಧುರಾಕ್ಷರಂ ॥ ೫೧ ॥

ಶ್ರೀ ಭಗವಾನುವಾಚ

ಆಪೂರಣಾದ್ದಕ್ಷಿಣಾಯಾ ಗಚ್ಛ ರಾಜನ್ಮಹಾಫಲಂ ।
ಸುತಲಂ ನಾಮ ಪಾತಾಲಂ ವಸ ತತ್ರ ನಿರಾಮಯಃ ॥ ೫೨ ॥

೪೯-೫೦. ನೀನು ಹೇಳಿದಂತೆ ಒಂದೇ ಹೆಜ್ಜೆಯಿಂದ ಭೂರ್ಭುವಾದಿಲೋಕಗಳನ್ನೆಲ್ಲಾ ನಾನು ಆಕ್ರಮಿಸಬಲ್ಲನೆಂಬುದು ನಿಜ. ಆದರೆ ಬಲಿಯ ಹಿತಕ್ಕಾಗಿ ಎರಡು ಹೆಜ್ಜೆಯನ್ನಾಗಿ ಮಾಡಿರುವೆನು. (ಅಂದರೆ ಒಂದೇ ಹೆಜ್ಜೆಯಿಂದ ಎಲ್ಲವನ್ನೂ ಆಕ್ರಮಿಸಿ ಉಳಿದ ಎರಡು ಹೆಜ್ಜೆಗಳನ್ನೂ ಬಲಿಯ ಮೇಲೆ ಆರೋಪಿಸಿ ಅವನನ್ನು ಋಣಿಯನ್ನಾಗಿ ಮಾಡುವುದಕ್ಕಿಂತಲೂ ಒಂದೇ ಹೆಜ್ಜೆಗಾಗಿ ಋಣಿಯನ್ನಾಗಿ ಮಾಡಿ ಅವನ ಭಾರವನ್ನು ಕಡಿಮೆಮಾಡಿರುವುದು ಅವನ ಹಿತಕ್ಕಾಗಿ ಎಂದು ತಾತ್ಪರ್ಯ) ಎಲೈ ಬಲಿಪುತ್ರನೇ ನಿನ್ನ ತಂದೆಯು ಉದಾರತೆಯ ಆವೇಶದಿಂದ ಸಂದೇಹಪಡದೆ ನನ್ನ ಕೈಯ್ಯಿನಲ್ಲಿ ದಾನೋದಕವನ್ನು ಬಿಟ್ಟುದರಿಂದಲೇ ಅವನಿಗೆ ಕಲ್ಪಪರ್ಯಂತವಾದ ಆಯುಸ್ಸು ಉಂಟಾಗುತ್ತದೆ. (ಇದು ಪಾತ್ರವಿಶೇಷದಲ್ಲಿ ದೇಶಕಾಲಾನುಸಾರಿಯಾಗಿ ಮಾಡಿದ ದಾನಕ್ಕೆ ಫಲವಿದ್ದೇ ಇದೆ ಎಂದು ದಾನಕ್ಕೆ ಸಾಫಲ್ಯವನ್ನು ಉಪಪಾದಿಸಲು ಹೇಳಿದ ಉತ್ತರ)

೫೧-೫೨. ಬಲಿಪುತ್ರನಾದ ಬಾಣನನ್ನು ಕುರಿತು ತ್ರಿವಿಕ್ರಮನು ಹೀಗೆ ಉತ್ತರಹೇಳಿ ಬಲಿಯ ಸಮೀಪಕ್ಕೆ ಬಂದು ಮಧುರವಾದ ಈ ಮಾತನ್ನು ಹೇಳಿದನು. ಭಗವಂತನು ಹೇಳುತ್ತಾನೆ:—ದೈತ್ಯರಾಜನೇ, ಯಜ್ಞದಕ್ಷಿಣೆಯನ್ನು ಪೂರ್ತಿಯಾಗಿ ಸಲ್ಲಿಸಿದುದರಿಂದ ಇದಕ್ಕೆ ಮಹಾಫಲರೂಪವಾದ ಸುತಲವೆಂಬ ಪಾತಾಲಲೋಕಕ್ಕೆ ಹೋಗಿ ಅಲ್ಲಿ ಸುಖದಿಂದ ವಾಸಮಾಡು.

ಬಲಿರುವಾಚ

ಸುತಲೇ ವಸತೋ ನಾಥ ಮಮ ಭೋಗಾಃ ಕುತೋಽವ್ಯಯಾಃ ।
ಭವಿಷ್ಯಂತಿ ತು ಯೇನಾಽಹಂ ವಸಿಷ್ಯಾಮಿ ನಿರಾಮಯಃ ॥ ೫೩ ॥

ತ್ರಿವಿಕ್ರಮ ಉವಾಚ

ಸುತಲಸ್ಥಸ್ಯ ದೈತ್ಯೇಂದ್ರ ಯಾನಿ ಭೋಗ್ಯಾನಿ ತೇಽಧುನಾ ।
ಭವಿಷ್ಯಂತಿ ಮಹಾರ್ಹಾಣಿ ತಾನಿ ವಕ್ಷ್ಯಾಮಿ ಸರ್ವಶಃ ॥ ೫೪ ॥

ದಾನಾನ್ಯವಿಧಿದತ್ತಾನಿ ಶ್ರಾದ್ಧಾನ್ಯಶ್ರೋತ್ರಿಯಾಣಿ ಚ ।
ತಥಾಽಧೀತಾನ್ಯವ್ರತಿಭಿರ್ದಾಸ್ಯಂತಿ ಭವತಃ ಫಲಂ ॥ ೫೫ ॥

ತಥಾಽನ್ಯಮುತ್ಸವಂ ಪುಣ್ಯಂ ವೃತ್ತೇ ಶಕ್ರಮಹೋತ್ಸವೇ ।
ದೀಪಪ್ರದಾನನಾಮಾಽಸೌ ತವ ಭಾವೀ ಮಹೋತ್ಸವಃ ॥ ೫೬ ॥

ತತ್ರ ತ್ವಾಂ ನರಶಾರ್ದೂಲಾ ಹೃಷ್ಟಾಃ ಪುಷ್ಟಾಃ ಸ್ವಲಂಕೃತಾಃ ।
ಪುಷ್ಪದೀಪಪ್ರದಾನೇನ ಅರ್ಚಯಿಷ್ಯಂತಿ ಯತ್ನತಃ ॥ ೫೭ ॥

೫೩-೫೪. ಬಲಿಯು ಹೇಳುತ್ತಾನೆ:-ಪ್ರಭುವೇ, ಸುತಲದಲ್ಲಿ ವಾಸಮಾಡುವ ನನಗೆ ಸುಖದಿಂದ ಅಲ್ಲಿ ಜೀವಿಸಲು ಭೋಗಸಾಮಗ್ರಿಗಳು ಹೇಗೆ ಲಭಿಸುವುವು? ತ್ರಿವಿಕ್ರಮನು ಹೇಳುತ್ತಾನೆ:—ದೈತ್ಯರಾಜನೇ, ಸುತಲದಲ್ಲೂ ವಾಸಿಸುವ ನಿನಗೆ ಮಹಾಭೋಗಕ್ಕೂ ಅರ್ಹಗಳಾದ ಭೋಗ್ಯವಸ್ತುಗಳು ಹೇಗೆ ಲಭಿಸುವುವೆಂಬುದನ್ನು ಹೇಳುತ್ತೇನೆ ಕೇಳು.

೫೫-೫೭. ವಿಧಿಯನ್ನು ಉಲ್ಲಂಘಿಸಿ ಯಾರು ದಾನಮಾಡುತ್ತಾರೆಯೋ ಅಂತಹ ದಾನವೂ ಶ್ರೋತ್ರಿಯರಲ್ಲದವರ ಶ್ರಾದ್ಧಗಳೂ ವ್ರತನಿಯಮವಿಲ್ಲದ ಅಧ್ಯಯನವೂ ನಿನಗೇ ಫಲವನ್ನುಂಟುಮಾಡುತ್ತವೆ. ಹಾಗೆಯೇ ಇಂದ್ರನ ಮಹೋತ್ಸವವು ಮುಗಿದಮೇಲೆ ದೀಪಪ್ರದಾನವೆಂಬ (ದೀಪಾವಳಿ) ಮಹೋತ್ಸವವು ನಿನಗಾಗಿಯೇ ನಡೆಯುತ್ತದೆ. ಆ ಉತ್ಸವದಲ್ಲಿ ಮನುಷ್ಯಶ್ರೇಷ್ಠರೆಲ್ಲರೂ ಹೂವುಗಳು ದೀಪಗಳು ಎಲ್ಲವನ್ನೂ ನಿನಗೆ ಅರ್ಪಿಸಿ ಪ್ರಯತ್ನದಿಂದ ಪೂಜಿಸುತ್ತಾರೆ.

ತತ್ರೋತ್ಸವೋ ಮುಖ್ಯತಮೋ ಭವಿಷ್ಯತಿ
ಸ ಚಾಪಿ ಲೋಕೇ ತವ ನಾಮಚಿಹ್ನಿತಃ ।
ಯಥೈವ ರಾಜ್ಯೇ ಭವತಸ್ತು ಸಾಂಪ್ರತಂ
ತಥೈವ ಸಾ ಭಾವ್ಯಥ ಕೌಮುದೀತಿ ॥ ೫೮ ॥

ಇತ್ಯೇವಮುಕ್ತ್ವಾ ಮಧುಹಾ ದಿತೀಶ್ವರಂ
ವಿಸರ್ಜಯಿತ್ವಾ ಸಸುತಂ ಸಭಾರ್ಯಂ ।
ಉರ್ವೀಂ ಸಮಾದಾಯ ಜಗಾಮ ತೂರ್ಣಂ
ಸಶಕ್ರ ಬ್ರಹ್ಮಾಮರಸಂಘಜುಷ್ಟಃ ॥ ೫೯ ॥

ದತ್ವಾ ಮಘೋನೇ ಮಧುಜಿತ್ತ್ರಿವಿಷ್ಟಪಂ
ಕೃತ್ವಾ ಚ ದೇವಾನ್ಮಖಭಾಗಭೋಗಿನಃ ।
ಅಂತರ್ದಧೇ ವಿಶ್ವಪತಿರ್ಮಹೇಶಃ
ಸಪಶ್ಯತಾಮೇವ ಸುರಾಧಿಪಾನಾಂ ॥ ೬೦ ॥

ಸ್ವರ್ಗಂ ಗತೇ ಧಾತರಿ ವಾಸುದೇವೇ
ಶಾಲ್ವೋಽಸುರಾಣಾಂ ಮಹತಾ ಬಲೇನ ।

೫೮-೫೯. ಅಂತಹ ಆ ಉತ್ಸವವೂ ಸಹ ನೀನಿರುವ ಸ್ಥಳದಲ್ಲಿಯೇ ನಿನ್ನ ಹೆಸರಿನಿಂದ ಪ್ರಖ್ಯಾತಿಗೊಳ್ಳುತ್ತದೆ. ನಿನ್ನ ರಾಜ್ಯದಲ್ಲಿ ಈಗ ಇರುವಂತೆಯೇ ಅಲ್ಲಿಯೂ ಕೌಮುದೀ ಎಂಬ ಮಹೋತ್ಸವವೂ ನಡೆಯುತ್ತದೆ. ಆ ವಾಸುದೇವನು ದೈತ್ಯರಾಜನಾದ ಬಲಿಯನ್ನು ಕುರಿತು ಹೀಗೆ ಹೇಳಿ ಪುತ್ರ ಮತ್ತು ಪತ್ನಿಯೊಡನೆ ಅವನನ್ನು ಕಳುಹಿಸಿಕೊಟ್ಟು ಭೂಮಿಯನ್ನೆಲ್ಲಾ ಸ್ವಾಧೀನಪಡಿಸಿಕೊಂಡು ಇಂದ್ರ ಬ್ರಹ್ಮಾದಿಗಳಿಂದ ಪೂಜಿತನಾಗಿ ಅಲ್ಲಿಂದ ಹೊರಟನು.

೬೦-೬೩. ಅನಂತರ ಆ ಮಧುಸೂದನನು ಇಂದ್ರನಿಗೆ ಸ್ವರ್ಗವನ್ನು ಕೊಟ್ಟು ದೇವತೆಗಳನ್ನೆಲ್ಲಾ ಯಜ್ಞಭಾಗಾರ್ಹರನ್ನಾಗಿಮಾಡಿ ಸುರಪತಿಗಳಲ್ಲರೂ ನೋಡುತ್ತಿರುವಾಗಲೇ ಅಂತರ್ಧಾನಹೊಂದಿದನು. ಹೀಗೆ ವಾಸುದೇವನು ಸ್ವಸ್ಥಾನಕ್ಕೆ ತೆರಳಿದೊಡನೆಯೇ ಶಾಲ್ವನು ಅಸುರರ ಮಹಾಸೈನ್ಯದೊಡನೆ ಸೌಭವೆಂಬ ನಗರವನ್ನು ನಿರ್ಮಿಸಿ ಆಕಾಶದಲ್ಲೆಲ್ಲಾ ಮನಬಂದಂತೆ ಸಂಚರಿಸಲು ಹೊರಟನು. ಮಯನೂ ಸಹ ಇಚ್ಛಾಮಾತ್ರದಿಂದ ಚಿನ್ನ, ಕಬ್ಬಿಣ, ತಾಮ್ರ ಮೊದಲಾದುವುಗಳಿಂದ ಸೌಖ್ಯಕರ

ಕೃತ್ವಾ ಪುರಂ ಸೌಭಮಿತಿ ಪ್ರಸಿದ್ಧಂ
ತದಾಽಂತರಿಕ್ಷೇ ವಿಚಚಾರ ಕಾಮಾತ್ ॥ ೬೧ ॥

ಮಯಶ್ಚ ಕಾಮಾತ್ತ್ರಿಪುರಂ ಮಹಾತ್ಮಾ
ಸುವರ್ಣತಾಮ್ರಾಯಸಮುಗ್ರಸೌಖ್ಯಂ ।
ಸ ತಾರಕಾಖ್ಯಃ ಸಹ ವೈದ್ಯುತೇನ
ಸಂತಿಷ್ಠತೇ ಮಿತ್ರಕಲತ್ರವಾಂಶ್ಚ ॥ ೬೨ ॥

ಬಾಣೋಽಪಿ ದೇವೇಶಗತೇ ತ್ರಿವಿಷ್ಟಪಂ
ಬದ್ಧೇ ಬಲೌ ಚಾಪಿ ರಸಾತಲಸ್ಥೇ ।
ಕೃತ್ವಾ ಸುಗುಪ್ತಂ ಭುವಿ ಶೋಣಿತಾಖ್ಯಂ
ಪುರಂ ಸ ಚಾಸ್ತೇ ಸಹ ದಾನವೇಂದ್ರೈಃ ॥ ೬೩ ॥

ಏವಂ ಪುರಾ ಚಕ್ರಧರೇಣ ವಿಷ್ಣುನಾ
ಬದ್ಧೋ ಬಲಿರ್ವಾಮನರೂಪಧಾರಿಣಾ ।
ಶಕ್ರಪ್ರಿಯಾರ್ಥಂ ಸುರಕಾರ್ಯಸಿದ್ಧಯೇ
ಹಿತಾಯ ವಿಪ್ರರ್ಷಭಗೋದ್ವಿಜಾನಾಂ ॥ ೬೪ ॥

ವಾದ ತ್ರಿಪುರವೆಂಬ ನಗರವನ್ನು ನಿರ್ಮಿಸಿದನು. ತಾರಕನೆಂಬ ದೈತ್ಯನೂ ಸಹ ಮಿತ್ರಕಲತ್ರರಿಂದಕೂಡಿ ವೈದ್ಯುತನೊಡನೆ ಅಲ್ಲಿದ್ದನು. ಬಲಿಪುತ್ರನಾದ ಬಾಣನೂ ಸಹ ವಾಸುದೇವನು ಸ್ವಸ್ಥಾನಕ್ಕೂ ಬಲಿಯು ಬಂಧಿತನಾಗಿ ಪಾತಾಲಕ್ಕೂ ತೆರಳಿದ ಮೇಲೆ ಭೂಮಿಯಲ್ಲಿಯೇ ಶೋಣಿತವೆಂಬ ದೃಢವಾದ ನಗರವನ್ನು ನಿರ್ಮಿಸಿ ದಾನವ ರೊಡನೆ ಅಲ್ಲಿ ನೆಲಸಿದನು.

೬೪-೬೬. ಎಲೈ ಬ್ರಾಹ್ಮಣೋತ್ತಮನೇ ಹೀಗೆ ಪೂರ್ವದಲ್ಲಿ ವಾಮನರೂಪ ಧಾರಿಯಾದ ಚಕ್ರಧರನಾದ ವಿಷ್ಣುವಿನಿಂದ ಇಂದ್ರನ ಪ್ರೀತಿಗಾಗಿಯೂ ಸುರರ ಮತ್ತು ಗೋಬ್ರಾಹ್ಮಣರ ಹಿತಕ್ಕಾಗಿಯೂ ಬಲಿಯು ಬಂಧಿತನಾದನು. ಎಲೈ, ಮಹರ್ಷಿಯೇ

ಪ್ರಾದುರ್ಭವಸ್ತೇ ಕಥಿತೋ ಮಹರ್ಷೇ
ಪುಣ್ಯಃ ಶುಚಿರ್ವಾಮನಸ್ಯಾದ್ಯ ಹಾರೀ ।
ಶ್ರುತೇ ಯಸ್ಮಿನ್ಕೀರ್ತಿತೇ ಸಂಸ್ಮೃತೇ ಚ
ಪಾಪಂ ಯಾತಿ ಪ್ರಕ್ಷಯಂ ಪುಣ್ಯಮೇತಿ ॥ ೬೫ ॥

ಏತತ್ಪ್ರೋಕ್ತಂ ವಾಮನೀಯಂ ಚರಿತ್ರಂ
ಬದ್ಧೋ ಬಲಿಃ ಪುಣ್ಯಕೀರ್ತಿರ್ಯಥಾಸೌ ।
ಯಚ್ಚಾನ್ಯಚ್ಛ್ರೋತುಕಾಮೋಽಸಿ ವಿಪ್ರ
ತತ್ತೇ ವಕ್ಷ್ಯೇ ಬ್ರೂಹಿ ಬ್ರಹ್ಮನ್ನಶೇಷಂ ॥ ೬೬ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ಬಲಿಬಂಧನಂ ನಾಮ ದ್ವಿನವತಿತಮೋಽಧ್ಯಾಯಃ

ಪುಣ್ಯಕರವಾಗಿಯೂ ಸ್ವತಃ ಪವಿತ್ರವಾಗಿಯೂ ರಮಣೀಯವಾಗಿಯೂ ಇರುವ ಈ ವಾಮನ ಪ್ರಾದುರ್ಭಾವವನ್ನು ನಿನಗೆ ಹೇಳಿರುವೆನು. ಯಾವ ಈ ಉಪಾಖ್ಯಾನದ ಶ್ರವಣವೂ, ಕೀರ್ತನವೂ, ಸ್ಮರಣಮಾತ್ರವೂ ಸಹ ಸರ್ವಪಾಪನಾಶಕವಾಗಿಯೂ ಪುಣ್ಯಕರವಾಗಿಯೂ ಆಗುತ್ತದೆ. ಮುನಿಯೇ ಪುಣ್ಯಕೀರ್ತಿಯಾದ ಬಲಿಯು ಬಂಧ ಹೊಂದಿದ ಈ ವಾಮನ ಚರಿತ್ರೆಯನ್ನು ನಿನಗೆ ಹೇಳಿದ್ದಾಯಿತು, ಇನ್ನುಮುಂದೆ ಮತ್ತೇನನ್ನು ಕೇಳಲು ಆಶಿಸುತ್ತೀಯೆ, ಕೇಳು, ಅದನ್ನೂ ಹೇಳುವೆನು.

ಇಲ್ಲಿಗೆ ಶ್ರೀ ವಾಮನಪುರಾಣದ ಬಲಿಬಂಧನವೆಂಬ ತೊಂಭತ್ತೆರಡನೇ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಬಲಿ ಶುಕ್ರರು ಸಂಭಾಷಣಮಾಡುತ್ತಿರುವಾಗಲೇ ವಾಮನನು ಯಜ್ಞಶಾಲೆಗೆ ಬಂದು ರಾಜನೇ ಪ್ರಣವಪೂರ್ವಕವಾದ ವೇದಗಳು ಮೊಳಗುತ್ತಿವೆ. ಈ ಅಶ್ವಮೇಧ ಮಹಾಯಾಗಕ್ಕೆ ತಕ್ಕಂತೆ ನನ್ನ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೋ ಅಂತಹ ಉಚಿತವಾದ ಕಾರ್ಯದಲ್ಲಿ ಪ್ರಯತ್ನಪಡು ಎಂದು ವಾಮನನು ಎಚ್ಚರಿಸಿದೊಡನೆಯೇ ಬಲಿಯು ಪೂಜಾದ್ರವ್ಯಗಳೊಡನೆ ಪತ್ನೀಪುತ್ರಸಮನ್ವಿತನಾಗಿ ಅಲ್ಲಿಗೇ ಬಂದು ಆ ಹರಿಯನ್ನು ಪೂಜಿಸಿದನು. ಅನಂತರ ಹರಿಯೇ, ನಿನಗೆ ಏನನ್ನು ದಾನಮಾಡಲಿ ಹೇಳು ಎಂದು ಕೇಳಲು ಹರಿಯು ಮಂದಹಾಸದಿಂದ ನನ್ನ ಮಹಾಗುರುವಿಗೆ ಅಗ್ನಿ ಗೃಹಕ್ಕಾಗಿ ಮೂರು ಹೆಜ್ಜೆಯ ಪ್ರದೇಶವು ಬೇಕಾಗಿದೆ. ಅದನ್ನು ನಿನ್ನಲ್ಲಿ ಯಾಚಿಸುತ್ತಿದ್ದೇನೆ, ಎಂದನು. ಆಗ ಬಲಿಯು ನಗುತ್ತಾ ಪತ್ನೀಪುತ್ರರನ್ನು ನೋಡಿ, ಈ ವಾಮನನು ಆಕಾರದಿಂದಲಲ್ಲದೆ ಬುದ್ಧಿಯಿಂದಲೂ ಲಘುವಾಗಿರುವನು, ಇಂತಹ ಪುಣ್ಯ ಹೀನರು ನನ್ನಂಥವರಲ್ಲಿ ಬಂದರೂ ಈ ರೀತಿ ಲಘುಬುದ್ಧಿಯುಳ್ಳವರಾಗಿರುವುದರಿಂದ ವಿಧಿಯು ಇವರ ಹಣೆಯಲ್ಲಿ ಭಾಗ್ಯವನ್ನೇ ಬರೆದಿಲ್ಲವೆಂದು ತೋರುತ್ತದೆ ನಾನು ದಾತೃವಾಗಿದ್ದರೂ ಇವನು ಮೂರು ಹೆಜ್ಜೆಯನ್ನು ಮಾತ್ರ ಕೇಳುತ್ತಿರುವನು ಎಂದು ಹೇಳಿ ಹರಿಯನ್ನು ಕುರಿತು ವಿಷ್ಣುವೇ, ನನಗಿರುವ ಗಜಾಶ್ವ ಧನಕನಕಗಳೇ ಮೊದಲಾದ ಐಶ್ವರ್ಯಗಳಲ್ಲಿ ನಿನಗೆ ಬೇಕಾದುದನ್ನು ನಿಸ್ಸಂಕೋಚವಾಗಿ ಕೇಳು, ಮೂರು ಹೆಜ್ಜೆಯ ಪ್ರದೇಶವನ್ನು ಕೊಡಲು ನನಗೇ ನಾಚಿಕೆಯಾಗುತ್ತಿದೆ ಎಂದನು. ಆಗ ಹರಿಯು ಧೊರೆಯೇ ಅಂತಹ ಐಶ್ವರ್ಯಗಳನ್ನು ಅಪೇಕ್ಷಿಸುವವರಿಗೆ ನೀನು ಕೊಡು. ನನಗೆ ಮಾತ್ರ ಬೇಕಾದುದು ಮೂರುಹೆಜ್ಜೆಯ ಪ್ರದೇಶ ಮಾತ್ರ. ಅದನ್ನು ನೀನು ಕೊಟ್ಟರೆ ಸಾಕು ಎಂದನು. ಹೀಗೆ ಹರಿಯು ಹೇಳಿದೊಡನೆಯೇ ಬಲಿಯು ಚಿನ್ನದ ಬಟ್ಟಲಿದಿಂದ ಧಾರೋದಕವನ್ನೆರೆದು ಮೂರು ಹೆಜ್ಜೆಯ ಭೂಮಿಯನ್ನು ದಾನಮಾಡಿದನು. ದಾನೋದಕವು ಕೈಯ್ಯಿಗೆ ಬಿದ್ದೊಡನೆಯೇ ವಾಮನನು ಅವಾಮನನಾಗಿ ಮಹಾರೂಪವನ್ನು ಧರಿಸಿ, ಸರ್ವದೇವಮಯನಾಗಿಯೂ ಸರ್ವಲೋಕವ್ಯಾಪಕನಾಗಿಯೂ ಪರಿಣಮಿಸಿದನು. ಆ ಮಹಾರೂಪ

ಹೊಂದಿದ ಅವನು ಒಂದು ಪಾದದಿಂದ ಭೂಮಿಯನ್ನೆಲ್ಲಾ ಆಕ್ರಮಿಸಿದನು. ಎರಡನೇ ಹೆಜ್ಜೆಯಿಂದ ಸ್ವರ್ಮಹಾಜನಲೋಕಗಳೂ ದ್ಯುಲೋಕವೂ ಆವರಿಸಲ್ಪಟ್ಟಿತು. ಬ್ರಹ್ಮಾಂಡದ ಮೇಲ್ಭಾಗವನ್ನೂ ಭೇದಿಸಿ ಮೇಲಕ್ಕೆ ಹೊರಟ ಅವನ ಪಾದದಿಂದ ಅಲ್ಲಿದ್ದ ಕುಟಿಲಾ ಎಂಬ ನದಿಯೂ ವ್ಯಾಕುಲವಾಗಿ ಅಧೋಮುಖವಾಗಿ ಪ್ರವಹಿಸಿತು. ಅವನ್ನೇ ದೇವತೆಗಳು ವಿಷ್ಣುಪದೀ (ಗಂಗಾ) ಎಂದು ಕರೆದು ಪೂಜಿಸಿದರು. ಅನಂತರ ಆ ತ್ರಿವಿಕ್ರಮಮೂರ್ತಿಯು ಮೂರನೇ ಹೆಜ್ಜೆಯ ಪೂರ್ತಿಗಾಗಿ ಬಲಿಯನ್ನು ಕುರಿತು ಧೊರೆಯೇ ಮೂರನೇ ಹೆಜ್ಜೆಯನ್ನು ಪೂರ್ತಿಗೊಳಿಸದಿರುವುದರಿಂದ ನೀನು ಈ ಋಣದಲ್ಲಿ ಬಿದ್ದಿರುವೆ.

ಇದು ಘೋರವಾದ ಬಂಧನಕ್ಕೆ ಕಾರಣವಾದೀತು. ಇದಕ್ಕೇನು ಹೇಳುತ್ತೀಯೆ ಎಂದು ಕೇಳಿದನು. ಆಗ ಸಮೀಪದಲ್ಲಿದ್ದ ಬಲಿಪುತ್ರನಾದ ಬಾಣನು ಪ್ರಭುವೇ, ಜಗತ್ತೆಲ್ಲವನ್ನೂ ನಿರ್ಮಾಣಮಾಡಿದ ನೀನು ವಿಸ್ತಾರವಾದ ಭೂಮಂಡಲವನ್ನು ಮೊದಲು ನಿರ್ಮಿಸಲಿಲ್ಲ. ಅಲ್ಪಪರಿಮಾಣದ ಭೂಮಿಯನ್ನು ನಿರ್ಮಿಸಿ ಈಗ ವಿಸ್ತಾರವಾದ ಭೂಮಿಯನ್ನು ಬಲಿಯನ್ನು ಕೇಳುತ್ತಿದ್ದೀಯೆ. ನೀನು ಸೃಷ್ಟಿಮಾಡಿರುವ ಭಾಗವೆಲ್ಲವನ್ನೂ ಬಲಿಯು ನಿನಗೆ ಕೊಟ್ಟಮೇಲೆ ಅವನನ್ನು ಮೋಸದಿಂದ ಬಂಧಿಸುವುದು ನ್ಯಾಯವೇ? ಯಾಚಿಸುವಾಗ ಬಲಿಯು ಎಷ್ಟುಮಟ್ಟಿನ ಶಕ್ತಿಯುಳ್ಳವನೆಂದು ನೀನು ತಿಳಿದಿದ್ದೆಯೋ ಅಷ್ಟರಮಟ್ಟಿನ ಶಕ್ತಿಯಿಂದಲೇ (ವಂಚನೆಯಿಲ್ಲದೆ) ಅವನು ನಿನ್ನನ್ನು ಆರಾಧಿಸಿರುವನು. ಈ ವಿಷಯದಲ್ಲಿ ಪ್ರಸನ್ನನಾಗು, ಬಲಿಯನ್ನು ಬಂಧಿಸಬೇಡ. ನಿನ್ನ ಅಜ್ಞಾರೂಪಗಳಾದ ವೇದಗಳಲ್ಲಿ ದೇಶಕಾಲಾನುಗುಣವಾಗಿ ಸತ್ಪಾತ್ರದಲ್ಲಿ ಮಾಡಿದ ದಾನವು ಸುಖಪ್ರದವೆಂದು ನೀನೇ ಹೇಳಿರುವೆ. ಕುರುಕ್ಷೇತ್ರವೆಂಬ ಈ ಪುಣ್ಯಭೂಮಿಯಲ್ಲಿ ಜಗನ್ಮಯನಾದ ನಿನ್ನಲ್ಲಿ ಬಲಿಯು ಮಾಡಿದ ಈ ದಾನಕ್ಕೆ ಈ ವಿಧವಾದ ಅನಿಷ್ಟಫಲವು ಬರಬಹುದೇ? ನನ್ನಂತಹ ಬುದ್ಧಿಹೀನರಾದ ದೇವತೆಗಳಿಗಾಗಿ ಸರ್ವಜ್ಞನಾಗಿಯೂ ಜಗನ್ಮಯಮೂರ್ತಿಯಾಗಿಯೂ ಇರುವ ನೀನು ಬಲಿಯನ್ನು ಶಿಕ್ಷಿಸಬಹುದೇ? ಸಣ್ಣರೂಪವನ್ನು ತಾಳಿ ಬಂದು ಈ ರೂಪದ ಪರಿಮಾಣಕ್ಕೆ ತಕ್ಕಂತೆ ಮೂರು ಹೆಜ್ಜೆಯನ್ನು ಅಪೇಕ್ಷಿಸುವುದು ನ್ಯಾಯವೇ? ಅದರೆ ಇಂತಹ ರೂಪವುಳ್ಳ ನೀನು ಒಂದೇ ಪಾದದಿಂದ ಎಲ್ಲವನ್ನೂ ಆಕ್ರಮಿಸುವ ಸಂಭವವಿರುವಾಗ ಎರಡು ಹೆಜ್ಜೆಗಳಿಂದ ಆಕ್ರಮಿಸಿರುವುದರಲ್ಲಿ ಆಶ್ಚರ್ಯವೇನು? ಒಟ್ಟಿನಲ್ಲಿ ಹೆಚ್ಚು

ಪರಿಮಾಣದ ಭೂಮಂಡಲನನ್ನು ಮೊದಲೇ ಸೃಷ್ಟಿಸದಿರುವ ನೀನು ಈಗ ಅದನ್ನು ಅಪೇಕ್ಷಿಸುವುದು ಯಾವ ನ್ಯಾಯ ! ನ್ಯಾಯಾನ್ಯಾಯಗಳನ್ನು ಬಿಟ್ಟು ಪ್ರಭುತ್ವವನ್ನೇ ಪುರಸ್ಕರಿಸುವವರಲ್ಲಿ ನಾನೇನು ಹೇಳಲಿ. ನಿನಗೆ ತೋರಿದಂತೆ ಮಾಡು ಎಂದನು.

ಹೀಗೆ ಆಕ್ಷೇಪಿಸಿದ ಬಲಿಪುತ್ರನನ್ನು ಕುರಿತು ತ್ರಿವಿಕ್ರಮನು ಎಲೈ ಬಲಿಪುತ್ರನೇ ನಿನ್ನ ಆಕ್ಷೇಪಗಳಿಗೆ ಯುಕ್ತಿಯುಕ್ತವಾದ ಉತ್ತರವನ್ನು ಹೇಳುತ್ತೇನೆ ಕೇಳು. ನಿನ್ನ ತಂದೆಯಾದ ಬಲಿಯನ್ನು ನಾನು ಪಾದತ್ರಯವನ್ನು ಕೇಳಿದೊಡನೆ ಅವನು ಅದರಂತೆ ಪಾದತ್ರಯವನ್ನು ನನಗೆ ಕೊಟ್ಟಾಯಿತು. ಅವನು ನನ್ನ ಪಾದಪ್ರಮಾಣವನ್ನು ಅರಿಯದಿದ್ದಲ್ಲಿ ನಿಸ್ಸಂದೇಹದಿಂದ ಅದನ್ನು ಕೊಡುತ್ತಿದ್ದನೋ! ಆದುದರಿಂದ ಪ್ರಮಾಣ ತಾರತಮ್ಯದ ಆಕ್ಷೇಪಕ್ಕೆ ಅವಕಾಶವಿಲ್ಲ. ನಾನು ಒಂದೇ ಪಾದದಿಂದ ಎಲ್ಲವನ್ನೂ ಆಕ್ರಮಿಸಲು ಸಮರ್ಥನೆಂಬುದು ನಿಜ. ಆದರೆ ಬಲಿಯ ಹಿತಕ್ಕಾಗಿ ಹಾಗೆಮಾಡದೆ ಒಂದೇ ಪಾದವೆಂಬ ಸ್ವಲ್ಪವಾದ ಋಣದಿಂದ ಅವನನ್ನು ಬಂಧಿಸಿರುವೆನು. ನನ್ನಲ್ಲಿ ಮಾಡಿದ ಈ ದಾನವು ನಿಷ್ಫಲವೆಂಬ ಭಾವನೆಯೂ ಬೇಡ. ಈ ದಾನೋದಕವನ್ನು ಬಲಿಯು ನನ್ನ ಕೈಯ್ಯಿನಲ್ಲಿ ಬಿಟ್ಟದ್ದರಿಂದ ಅವನಿಗೆ ಕಲ್ಪಪರ್ಯಂತವಾದ ದೀರ್ಘಾಯಸ್ಸೂ ಉಂಟಾಗುತ್ತದೆ ಎಂದು ಸಮಾಧಾನಹೇಳಿ ಬಲಿಯನ್ನು ಕುರಿತು ರಾಜನೇ, ನಿನ್ನ ಯಜ್ಞದಕ್ಷಿಣೆಯ ಪೂರ್ತಿಯಿಂದ ನಿನಗೆ ಮಹಾಫಲವೊಂದು ದೊರೆತಿದೆ. ನೀನು ಸುತಲವೆಂಬ ಪಾತಾಲದಲ್ಲಿ ಸುಖದಿಂದ ವಾಸಿಸು. ಅಲ್ಲಿರುವ ನಿನಗೆ ವಿಧಿನಿಯಮಬಾಹಿರವಾದ ದಾನ, ಶ್ರಾದ್ಧ ಅಧ್ಯಯನ ಇವುಗಳ ಫಲವೆಲ್ಲ ನಿನ್ನನ್ನು ಹೊಂದುತ್ತದೆ. ನಿನ್ನ ಹೆಸರಿನಿಂದ ದೀಪಪ್ರದಾನವೆಂಬ ಮಹೋತ್ಸವವು ನಡೆಯುತ್ತದೆ. ಜನರು ನಿನ್ನನ್ನು ಆ ಉತ್ಸವದಲ್ಲಿ ಪೂಜಿಸುತ್ತಾರೆ. ಇಲ್ಲಿರುವಂತೆ ಅಲ್ಲಿಯೂ ಕೌಮುದೀ ಎಂಬ ಮಹೋತ್ಸವವೂ ಉಂಟಾಗುತ್ತದೆ. ನಿನಗೆ ಅಲ್ಲಿ ಯಾವ ಭಾಗಕ್ಕೂ ಕೊರತೆಯಿಲ್ಲ ಎಂದು ಸಮಾಧಾನಪಡಿಸಿ ಬಲಿಯನ್ನು ಅವನ ಪತ್ನಿಯೊಡನೆ ಕಳುಹಿಸಿ ಇಂದ್ರನಿಗೆ ಸ್ವರ್ಗವನ್ನೂ ಕೊಟ್ಟು ಅಂತರ್ಧಾನಹೊಂದಿದನು. ಅನಂತರ ಬಲಿಯ ಅನುಗಾಮಿಗಳೂ ಬಾಣನೂ ಸಹ ತಮ್ಮ ಅನುಕೂಲ್ಯಕ್ಕೆ ತಕ್ಕಂತೆ ನಗರಗಳನ್ನು ನಿರ್ಮಿಸಿಕೊಂಡು ವಾಸಮಾಡಲು ಹೊರಟರು. ಹೀಗೆಂದು ಹೇಳಿ ಮೊದಲನೇ ಅಧ್ಯಾಯದಲ್ಲಿ ನಾರದರು ಕೇಳಿದ್ದ ಪ್ರಧಾನಪ್ರಶ್ನೆಗೆ ಉತ್ತರವಾಗಿ ವಾಮನನ ಪ್ರಾದುರ್ಭಾವವನ್ನು ಹೇಳಿ ಬೇರೆ ಏನನ್ನಾದರೂ ನೀನು ಕೇಳಲು ಇಚ್ಛೆ ಇದ್ದಲ್ಲಿ ಕೇಳು, ಅದನ್ನೂ ಹೇಳುವೆನು ಎಂದು ಪುಲಸ್ತ್ಯರು ನಾರದರನ್ನು ಪ್ರೇರಿಸಿದರು.

॥ ಶ್ರೀ ॥

ಶ್ರೀವಾಮನಪುರಾಣಂ

ತ್ರಿನವತಿತಮೋಽಧ್ಯಾಯಃ

ನಾರದ ಉವಾಚ

ಶ್ರುತಂ ಯಥಾ ಭಗವತಾ ಬಲಿರ್ಬದ್ಧೋ ಮಹಾತ್ಮನಾ ।
ಕಿಮನ್ಯತ್ತ್ವಿಹ ಪ್ರಷ್ಟವ್ಯಂ ತಚ್ಛ್ರುತ್ವಾ ಕಥಯಾಮಿ ತೇ ॥ ೧ ॥

ಭಗವಾನ್ ದೇವರಾಜಾಯ ವಿಷ್ಣುರ್ದತ್ವಾ ತ್ರಿವಿಷ್ಟಪಂ ।
ಅಂತರ್ಧಾನಯ ಗತಃ ಕ್ವಾಽಸೌ ಸರ್ವಾತ್ಮಾ ತಾತ ಕಥ್ಯತಾಂ ॥ ೨ ॥

ಪರಿಚರ್ಯಾರ್ಥ ವಿಧಿನಾ ಬ್ರಹ್ಮಾ ಪೂಜಾದಿನಾ ಹರಿಂ ।
ಪಪ್ರಚ್ಛ ಕಿಂ ಚಿರೇಣ್ಯಾಥ ಭವತಾ ಗಮನಂ ಕೃತಂ ॥ ೩ ॥

ತೊಂಭತ್ತಮೂರನೇ ಅಧ್ಯಾಯವು

೧-೨. ನಾರದರು ಹೇಳುತ್ತಾರೆ. ಮಹಾಪುರುಷನಾದ ಪರಮಾತ್ಮನು ಬಲಿಯನ್ನು ಬಂಧಿಸಿದ ಈ ಉಪಾಖ್ಯಾನವನ್ನೆಲ್ಲಾ ತಮ್ಮಿಂದ ಕೇಳಿದ್ದಾಯಿತು. ಇದನ್ನು ತಿಳಿದ ಮೇಲೆ ಮತ್ತೇನನ್ನು ಕೇಳಬೇಕಾಗಿದೆ? ಆದರೂ ವಿಷ್ಣುವು ಇಂದ್ರನಿಗೆ ಸ್ವರ್ಗವನ್ನು ಕೊಟ್ಟಮೇಲೆ ಅಂತರ್ಧಾನ ಹೊಂದಿದನೆಂದು ಹೇಳಿರುವಿರಿ. ಆ ಮಹಾ ವಿಷ್ಣುವು ಅಂತರ್ಧಾನ ಹೊಂದಿ ಎಲ್ಲಿಗೆ ಹೋದನು ಎಂಬುದನ್ನು ಹೇಳಬೇಕು ಎಂದು ಪ್ರಶ್ನೆ ಮಾಡಿದನು.

೩-೪. ಪುಲಸ್ತ್ಯರು ಹೇಳುತ್ತಾರೆ. ಅನಂತರ ಬ್ರಹ್ಮನು ಯಥಾವಿಧಿಯಾಗಿ ಹರಿಯನ್ನು ಪೂಜಿಸಿ ಪ್ರಭುವೇ ಬಹಳ ದಿವಸದ ಮೇಲೆ ಈ ಸಂಚಾರವನ್ನು ಏತಕ್ಕೆ ಕೈಕೊಳ್ಳಲಾಯಿತು ಎಂದು ಪ್ರಶ್ನೆಮಾಡಲು ಜಗತ್ಪತಿಯಾದ ವಿಷ್ಣುವು ಸುರರು ತಮ್ಮ

ಅಥೋವಾಚ ಜಗತ್ಸ್ವಾಮೀ ಮಯಾ ಕಾರ್ಯಂ ಮಹತ್ಕೃತಂ ।
ಸುರಾಣಾಂ ರಿಪುಭೋಗಾರ್ಥಂ ಸ್ವಯಂ ಭೋ ಬಲಿಬಂಧನಂ ॥ ४ ॥

ಪಿತಾಮಹಸ್ತದ್ವಚನಂ ಶ್ರುತ್ವಾ ಮುದಿತಮಾನಸಃ ।
ಕಥಂ ಕಥಮಿತಿ ಪ್ರಾಹ ತ್ವಂ ಮಾಂ ದ್ರಷ್ಟುಮಿಹಾಽರ್ಹಸಿ ॥ ೫ ॥

ಇತ್ಯೇವಮುಕ್ತೋ ಭಗವಾನ್ವಚನೇ ಗರುಡಧ್ವಜಃ ।
ದರ್ಶಯಾಮಾಸ ತದ್ರೂಪಂ ಸರ್ವದೇವಮಯಂ ಲಘು ॥ ೬ ॥

ತಂ ದೃಷ್ಟ್ವಾ ಪುಂಡರೀಕಾಕ್ಷಂ ಯೋಜನಾಯುತವಿಸ್ತೃತಂ ।
ತಾವಾನೇವೋರ್ಧ್ವಮಾನೇನ ತತೋಽಯಂ ಪ್ರಣತೋಽಭವತ್ ॥ ೭ ॥

ಸಮ್ಯಕ್ಸುಚರಿತಂ ಸಾಧು ಸಾಧು ಸಾಧ್ವಿತ್ಯುದೀರ್ಯ ಚ ।
ಭಕ್ತಿಂ ಗತೋ ಮಹಾದೇವೇ ಪದ್ಮಜಃ ಸ್ತೋತ್ರಮೈರಯತ್ ॥ ೮ ॥

ಶತ್ರುಗಳನ್ನು ತಿರಸ್ಕರಿಸಿ ಅವರಿಂದಲೂ ಭೋಗಹೊಂದಲು ಅನುಕೂಲಿಸುವಂತೆ ಬಲಿಬಂಧನವೆಂಬ ಈ ಮಹಾಕಾರ್ಯವನ್ನು ನಾನೇ ಮಾಡಿದೆನು ಎಂದು ಉತ್ತರವಿತ್ತನು.

೫-೮. ಬ್ರಹ್ಮನು ಆ ಮಾತನ್ನು ಕೇಳಿ ಸಂತೋಷಪಟ್ಟು ನಾನಾಪ್ರಕಾರವಾದ ನಿನ್ನ ಅಂತಹ ರೂಪವನ್ನು ನಾನು ಹೇಗೆ ತಿಳಿಯಲಿ ಎಂದು ಕೇಳಲು ವಿಶ್ವರೂಪಿಯಾದ ಆ ಗರುಡಧ್ವಜನು ಸಮಸ್ತ ದೇವಾತ್ಮಕವಾದ ತನ್ನ ಆ ರೂಪವನ್ನು ಅಲ್ಲೇ ಶೀಘ್ರವಾಗಿ ತೋರಿಸಿದನು. ಒಂದು ಯೋಜನ ವಿಸ್ತಾರವುಳ್ಳ ಅಷ್ಟೇ ಎತ್ತರದಿಂದಲೂ ಕೂಡಿರುವ ಆ ಪುಂಡರೀಕಾಕ್ಷನ ಆ ರೂಪವನ್ನು ನೋಡಿ ಬ್ರಹ್ಮನು ಭಕ್ತಿಯಿಂದ ಪ್ರಣಾಮಮಾಡಿದನು. ಅವನು ಮಾಡಿದ ಶ್ಲಾಘ್ಯವಾದ ಕೆಲಸವನ್ನು ಬಹಳವಾಗಿ ಶ್ಲಾಘಿಸಿ ಬಹಳ ಭಕ್ತಿಯಿಂದ ಈ ರೀತಿಯಾಗಿ ಆ ಪರಮಾತ್ಮನನ್ನು ಸ್ತೋತ್ರ ಮಾಡಿದನು.

ಗದ್ಯ ॥ ಓಂ ನಮಸ್ತೇ ದೇವಾಧಿದೇವ ವಾಸುದೇವ ಏಕಶೃಂಗ ಬಹುರೂಪ ವೃಷಾಕಪೇ ಭೂತಭಾವನ ಸುರಾಸುರವೃಷ ಸುರಾಸುರಮಥನ ಸುರಪತಿವಾಸ ಸುರನಿರ್ಮಾಣ ಅವಿಘ್ನ ಕಪಿಲ ಮಹಾಕಪಿಲ ವಿಷ್ವಕ್ಸೇನ ನಾರಾಯಣ

---

೯. ಗದ್ಯ–ಓಂಕಾರವಾಚ್ಯನಾದ ಮಹಾಪುರುಷನೇ, ನಿನಗೆ ನಮಸ್ಕಾರಗಳು. ದೇವತೆಗಳಿಗೂ ಅಧಿಪತಿಯಾಗಿರುವವನೇ, †ಸರ್ವ ವಸ್ತುಗಳಲ್ಲಿಯೂ ವಾಸಮಾಡುವ ಹಾಗೂ ಸಮಸ್ತ ಪ್ರಪಂಚರೂಪನಾಗಿಯೂ ಇರುವವನೇ, ಶಿಖರದಂತೆ ಉನ್ನತವಾದ ಮತ್ಸ್ಯಾವತಾರದಿಂದ ಪ್ರಳಯಮಹಾಸಮುದ್ರದಲ್ಲಿ ತೋರಿದವನೇ, ಸಂಕಲ್ಪ ಕಲ್ಪಿತಗಳಾದ ಅನೇಕ ರೂಪಗಳುಳ್ಳವನೇ, §ಧರ್ಮವರಾಹಮೂರ್ತಿಯೇ ಸಮಸ್ತ ಪ್ರಪಂಚಕ್ಕೂ ಕಾರಣನಾಗಿರುವವನೇ, ಅಥವಾ *ಎಲ್ಲಾ ಪ್ರಾಣಿಗಳನ್ನೂ ಭೋಗ್ಯ ವಸ್ತು ಪ್ರದಾನದಿಂದ ಅಭಿವೃದ್ಧಿಪಡಿಸುವವನೇ, ಸುರಾಸುರರಿಂದಲೂ ಪೂಜಿಸಲ್ಪಡುವ ಉತ್ಕೃಷ್ಟವಸ್ತುವೇ, ಸುರಾಸುರರನ್ನು ನಿಗ್ರಹಿಸುವ ಸಾಮರ್ಥ್ಯವುಳ್ಳವನೇ, ಸುರಪತಿಯಾದ ಇಂದ್ರನಿಗೂ ಆಶ್ರಯನಾಗಿರುವವನೇ, ದೇವತೆಗಳ ನಿರ್ಮಾಣಕ್ಕೂ ಕಾರಣನಾಗಿರುವವನೇ, ಎಲ್ಲಾ ವಿಘ್ನಗಳಿಗೂ ವಿರೋಧಿಯಾಗಿರುವವನೇ ⚘ಮಿಂಚಿನ ಸಮೂಹದಿಂದ ಕೂಡಿದ ಮೇಘದಂತೆ ಉಜ್ವಲಮೂರ್ತಿಯೇ, ಧ್ಯಾನದಿಂದ ಕಪಿಲವರ್ಣನಾದ ಆಚಾರ್ಯಮೂರ್ತಿಯೇ, ⁂ಎಲ್ಲಾ ಕಡೆಯಲ್ಲೂ ಅನೇಕ ರಕ್ಷಕರಿಂದ ಕೂಡಿರುವಪ್ರಾಣಿಗಳುಳ್ಳವನೇ, +ನಿತ್ಯವಾದ ಚಿದಚಿದ್ವರ್ಗದಲ್ಲಿ ಎಲ್ಲಾ ಕಡೆಯಲ್ಲೂ ವ್ಯಾಪಿಸಿ ಆಶ್ರಯನಾಗಿರುವವನೇ,

---

†ನಿರುಕ್ತ॥ ಸರ್ವತ್ರಾಸೌ ಸಮಸ್ತಂ ಚ ವಸತ್ಯತ್ರೇತಿ ವೈ ಯತಃ । ತತಸ್ಸ ವಾಸುದೇವೇತಿ ವಿದ್ವದ್ಭಿಃ ಪರಿಪಠ್ಯತೇ॥

§ಕಪಿರ್ವರಾಹಶ್ರೇಷ್ಠಶ್ಚ ಧರ್ಮಶ್ಚ ವೃಷ ಉಚ್ಯತೇ । ತಸ್ಮಾದ್ವೃಷಾಕಪಿಂ ಪ್ರಾಹ ಕಾಶ್ಯಪೋ ಮಾಂ ಪ್ರಜಾಪತಿಃ ॥ ಮ॥ಭಾ॥ಶಾಂ॥

*ಧಾರಕಾದಿಪ್ರದಾನೇನ ಯಶ್ಚ ವರ್ಧಯತಿ ಸ್ವಯಂ । ಭೂತಾನಿ ನಿತ್ಯಂ ಝುಟಿತಿ ಸತು ಸ್ಯಾತ್ ಭೂತಭಾವನಃ ॥

⚘ವಿದ್ಯುನ್ಮಂಡಲಮಧ್ಯಸ್ಥನೀಲಮೇಘವದುಜ್ಜ್ವಲಃ । ಕಪಿಲಸ್ಸ ಸಮಾಖ್ಯಾತಃ ಸಪ್ತವರ್ಣೋ ಮಹಾಮನುಃ ॥

⁂ಇನೇನ ಸ್ವಾಮಿನಾ ಸಾಕಂ ವರ್ತತೇ ಸೇನ ಇತ್ಯತಃ । ವಿಷ್ವಗ್ರಕ್ಷ್ಯೋ ಜನೋ ಯಸ್ಯ ವಿಷ್ವಕ್ಸೇನ ಇತೀರಿತಃ ॥

+ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಮೃತಃ ॥

ಧ್ರುವಧ್ವಜ ಭಾಲಧ್ವಜ ವೈಕುಂಠ ಪುರುಷೋತ್ತಮ ವರೇಣ್ಯ ವಿಷ್ಣೋ ಅಪರಾಜಿತ ಜಯಜಯಂತವಿಜಯಕೃತಾವರ್ತ ಮಹಾದೇವ ಅನಾದೇ ಅನಂತ ಅನಾದ್ಯಂತಮಧ್ಯನಿಧನ ಪುರಂಜಯ ಧನಂಜಯ ಸುರಸ್ತುತ ಪೃಥುಶ್ರವಃ ಪೃಶ್ನಿಗರ್ಭ ಹಿರಣ್ಯಗರ್ಭ ಕಮಲಗರ್ಭ ಕಮಲಾಯತಾಕ್ಷ ಕಮಲಾಲಯಾ ಪ್ರಿಯ ವೃಷ್ಣಿಮೂಲ ಭೂತಾಧಿವಾಸ ವರ್ಗಾಧ್ಯಕ್ಷ ಗದಾಧರ

ಕೀರ್ತಿಗೆ ಧ್ವಜದಂತಿರುವ ಧ್ರುವನನ್ನೂ ಉದ್ಧರಿಸಿದವನೇ, ತೇಜಸ್ವಿಯಾದ ಹಣೆಯುಳ್ಳವವನೇ, ಅಪ್ರತಿಹತವಾದ ಸ್ವಪ್ರಯತ್ನವುಳ್ಳವನೇ, ಅಥವಾ ✝ಭೂಮಿ, ಜಲ, ವಾಯು ಮೊದಲಾದ ಪಂಚಭೂತಗಳ ಪರಸ್ಪರ ಯೋಜನೆಯಿಂದ ಉಂಟು ಮಾಡಿರುವ ಪ್ರಪಂಚರೂಪನೇ,

ಸರ್ವಪಾಪನಾಶಕನಾದ ಪುರುಷಶ್ರೇಷ್ಠನೇ, ಆಶ್ರಯಿಸಲು ಅರ್ಹನಾದವನೇ, ಸರ್ವವ್ಯಾಪಕನೇ, ಇತರರಿಂದ ಜಯಿಸಲಶಕ್ಯವಾದ ಅಜೇಯವಸ್ತುವೇ ಅಥವಾ ಅಭಕ್ತರಿಗೆ ವಶ್ಯನಾಗದಿರುವವನೇ, ಜಯ ಜಯಂತ ವಿಜಯ (ಅರ್ಜುನ) ಇವರ ಅನುಪ್ರವೇಶದಿಂದ ಲೀಲೆಹೊಂದಿದವನೇ, ಬ್ರಹ್ಮಾದಿ ದೇವತೆಗಳೊಡನೆಯೂ ಕ್ರೀಡಿಸುವವನೇ, ಆದಿ ಇಲ್ಲದ ನಿತ್ಯಸ್ವರೂಪನೇ, ಕೊನೆ ಇಲ್ಲದಿರುವವನೇ, ಉತ್ಪತ್ತಿ ನಾಶ ಮಧ್ಯದಶೆಗಳೆಂಬ ಭಾವವಿಕಾರವಿಲ್ಲದವನೇ, ಶತ್ರುಪುರಗಳನ್ನು ಜಯಿಸುವವನೇ, ನಿರಾಶನಾಗಿ ಧನವನ್ನೂ ಜಯಿಸಿದವನ್ನೇ, ದೇವತೆಗಳಿಂದಲೂ ಸ್ತೋತ್ರಮಾಡಲ್ಪಟ್ಟವನೇ, ಮಹಾಕೀರ್ತಿಯುಳ್ಳವನೇ, ಕೃಷ್ಣಾವತಾರಕ್ಕೆ ಮೊದಲು ಪೃಶ್ನಿಯ ಗರ್ಭದಲ್ಲುದಯಿಸಿದವನೇ, ಹಿರಣ್ಯಗರ್ಭಮೂರ್ತಿಯೇ, ಬ್ರಹ್ಮನಿಗೂ ಉತ್ಪತ್ತಿ ಸ್ಥಾನವಾದ ಕಮಲವನ್ನು ಗರ್ಭದಲ್ಲಿ ಧರಿಸುವವನೇ, ಅಥವಾ ಕಮಲದ ಮೊಗ್ಗಿನಂತಿರುವ ಭೂಮಂಡಲವನ್ನು ಗರ್ಭದಲ್ಲಿ ಧರಿಸಿದವನೇ, ಕಮಲಗಳಂತೆ ವಿಶಾಲವಾದ ನೇತ್ರವುಳ್ಳವನೇ, ಲಕ್ಷ್ಮೀಪ್ರಿಯನೇ, ವೃಷ್ಣಿವಂಶಕ್ಕೂ ಮೂಲಪುರುಷನಾಗಿರುವವನೇ ಸರ್ವಪ್ರಾಣಿಗಳಿಗೂ ಆವಾಸಸ್ಥಾನನೇ, ಧರ್ಮವೇ ಮೊದಲಾದ ಚತುರ್ವರ್ಗಕ್ಕೆ ಅಧಿಪತಿಯಾಗಿರುವವನೇ, ಗದಾಧಾರಿಯೇ,

---

✝ಮಯಾ ಸಂಶ್ಲೇಷಿತಾ ಭೂಮಿರದ್ಭಿರ್ವ್ಯೋಮ ಚ ವಾಯುನಾ । ವಾಯುಶ್ಚ ತೇಜಸಾ ಸಾರ್ಧಂ ವೈಕುಂಠತ್ವಂ ತತೋ ಮಮ ॥ ಮ।ಭಾ।ಶಾಂ।

ಶ್ರೀಧರ ವನಮಾಲಾಧರ ಲಕ್ಷ್ಮೀಧರ ಧರಣೀಧರ ಪದ್ಮನಾಭ ವಿರಿಂಚೇ ಆರ್ಷ್ಟಿಷೇಣ ಮಹಾಸೇನ ಸೇನಾಧ್ಯಕ್ಷ ಪರಿಷ್ಟುತ ಬಹುಕಲ್ಪ ಮಹಾಕಲ್ಪ ಕಲ್ಪನಾಮುಖ ಅನಿರುದ್ಧ ಸರ್ವಗ ಸರ್ವಾತ್ಮಕ ದ್ವಾದಶಾತ್ಮಕ ಶರ್ವಾತ್ಮಕ ಸೋಮಾತ್ಮಕ ಕಲಾತ್ಮಕ ಭೂತಾತ್ಮಕ ರಮಾತ್ಮಕ ಸನಾತನ ಮುಂಜಕೇಶ ಹರಿಕೇಶ ಹೃಷೀಕೇಶ ಗುಡಾಕೇಶ ಕೇತುಮನ್ ನೀಲ ಸೂಕ್ಷ್ಮ ಸ್ಥೂಲ ಪೀತ ರಕ್ತಶ್ವೇತ ಶ್ವೇತಾಧಿವಾಸ ರಕ್ತಾಂಬರಪ್ರಿಯ ಪ್ರೀತಿಕರ ಪ್ರೀತಿವಾಸ ಹಂಸಸೀರಧ್ವಜ ನೀಲವಾಸಃ ಸರ್ವಲೋಕಾಧಿವಾಸ ಕುಶೇಶಯ ಅಧೋಕ್ಷಜ ಗೋವಿಂದ ಜನಾರ್ದನ ಮಧುಸೂದನ ವಾಮನ ನಮಸ್ತೇಽಸ್ತು ॥

ಲಕ್ಷ್ಮೀಧರನೇ, (ವರಹಾವತಾರದಲ್ಲಿ) ಭೂಮಿಯನ್ನು ಧರಿಸಿದವನೇ, ಪದ್ಮವನ್ನು ನಾಭಿಯಲ್ಲಿ ಧರಿಸಿರುವವನೇ, ಚತುರ್ಮುಖಾಂತರ್ಯಾಮಿಯೇ, ಆರ್ಷ್ಟಿಷೇಣನೆಂಬ ಮಹರ್ಷಿಯ ರೂಪದಿಂದ ಧರ್ಮಪ್ರಕಾಶಕನಾದವನೇ, ಮಹಾಸೇನೆಯುಳ್ಳವನೇ, ಸೇನಾಧಿಪತಿಯೇ, ಎಲ್ಲರಿಂದಲೂ ಸ್ತೋತ್ರಮಾಡಲ್ಪಟ್ಟಿರುವವನೇ, ನಾನಾರೂಪಧಾರಿಯೇ, ಮಹಾಪ್ರಳಯಕಲ್ಪನವನ್ನೇ, ಸೃಷ್ಟಿಕಾರಣವನ್ನಾಗಿ ಪುರಸ್ಕರಿಸುವವನೇ, ಅನಿರುದ್ಧಮೂರ್ತಿಯೇ, ಸರ್ವವ್ಯಾಪಕನೇ, ಸರ್ವಶರೀರಿಯೇ, ದ್ವಾದಶಾದಿತ್ಯರೂಪನೇ, ಅಥವಾ ದ್ವಾದಶಮಾಸರೂಪನೇ, ಸರ್ವನಾಶಕಮೂರ್ತಿಯೇ, ಚಂದ್ರಸ್ವರೂಪನಾಗಿರುವವನೇ, ಕಾಲಸ್ವರೂಪನೇ, ಸರ್ವಭೂತಾಂತರ್ಯಾಮಿಯಾಗಿರುವವನೇ, ಲಕ್ಷ್ಮಿಗೂ ಅಂತರ್ಯಾಮಿಯಾಗಿರುವವನೇ, ಪುರಾತನಮೂರ್ತಿಯೇ, ಸೂಕ್ಷ್ಮಕೇಶನೇ, ಹರಿದ್ವರ್ಣದ ಕೇಶಕಲಾಪವುಳ್ಳ ರುದ್ರಾಂತರ್ಯಾಮಿಯೇ, ಇಂದ್ರಿಯಾಧಿಪತಿಯೇ. ನಿದ್ರಾಲಸ್ಯಗಳನ್ನು ಜಯಿಸಿದವನೇ, ಉನ್ನತಧ್ವಜಶಾಲಿಯೇ, ನೀಲವರ್ಣನೇ, ಸೂಕ್ಷ್ಮರೂಪನೇ, ಸ್ಥೂಲರೂಪನೇ, ಹೊಂಬಣ್ಣವುಳ್ಳವನೇ, ಕೆಂಪುಮಿಶ್ರವಾದ ಬಿಳಿಯವರ್ಣವುಳ್ಳವನೇ, ಶ್ವೇತದ್ವೀಪಾಧಿಪತಿಯೇ, ರಕ್ತವಸ್ತ್ರದಲ್ಲಿ ಪ್ರೀತಿಯುಳ್ಳವನೇ, ಸಂತೋಷಪಡಿಸುವವನೇ, ಸಂತೋಷಸ್ಥಾನನೇ, ಹಂಸರೂಪಿಯೇ, ಬಲರಾಮಮೂರ್ತಿಯೇ, ಬಲರಾಮನರೂಪದಿಂದ ನೀಲವಸ್ತ್ರವುಳ್ಳವನೇ, ಸರ್ವಲೋಕಗಳಿಗೂ ವಾಸಸ್ಥಾನನಾಗಿರುವವನೇ, ದರ್ಭಶಯನನೇ, ಅಕ್ಷಯಮೂರ್ತಿಯೇ, ವಾಗಧಿಪತಿಯೇ, ಜನಾರ್ದನಮೂರ್ತಿಯೇ, ಮಧುದೈತ್ಯನಾಶಕನೇ, ವಾಮನಮೂರ್ತಿಯೇ ನಿನಗೆ ಅನಂತ ನಮಸ್ಕಾರಗಳು.

ಓಂ ಸಹಸ್ರಶೀರ್ಷಾ ಅಸಿ ಸಹಸ್ರದೃಗಸಿ ಸಹಸ್ರಪಾದೋಽಸಿ ಅಧೋಮುಖೋಽಸಿ ಮಹಾಪುರುಷೋಽಸಿ ಸಹಸ್ರಬಾಹುರಸಿ ಸಹಸ್ರಮೂರ್ತಿರಸಿ ತ್ವಾಂ ವೇದಾಃ ಪ್ರಾಹುಃ ಸಹಸ್ರವದನಂ ನಮಸ್ತೇ ನಮಸ್ತೇ ॥

ಓಂ ನಮಸ್ತೇ ವಿಶ್ವೇದೇವ ವಿಶ್ವಭೃತ ವಿಶ್ವಾತ್ಮಕ ವಿಶ್ವರೂಪ ವಿಶ್ವಸಂಭವ ತ್ವತ್ತೋ ವಿಶ್ವಮಿದಮಭವತ್ ಬ್ರಾಹ್ಮಣಸ್ತೇ ಮುಖಮಾಸೀತ್ ಕ್ಷತ್ರಿಯೋ ದೋಃ ಸಮಭೂತ್ ಊರು ಯುಗ್ಮಾದ್ವಿಶೋಽಭವನ್ ಶೂದ್ರಾಶ್ಚರಣಕಮಲೇಭ್ಯಃ ॥

ನಾಭೇಸ್ತ್ವಥಾಂತರಿಕ್ಷಂ ಚ ಇಂದ್ರಾಗ್ನೀ ವಕ್ತ್ರಪಂಕಜಾತ್ ।
ಮನಸಸ್ತು ಶಶೀ ಜಾತಃ ಪ್ರಸಾದಾತ್ತವ ಚಾಪ್ಯಹಂ ॥
ಕ್ರೋಧಾಜ್ಜಾತಸ್ತು ತ್ರ್ಯಂಬಕಃ ಪ್ರಾಣಾಜ್ಜಾತೋ ಮಾತರಿಶ್ವಾ ।
ಶಿರಸೋ ದ್ಯೌರಜಾಯತ ಶ್ರೋತ್ರಾದ್ದಿಶೋಽಭವನ್ ಸ್ವಯಂಭೋ ॥

ಸಾವಿರತಲೆಗಳುಳ್ಳವನೂ ನೀನೇ ಆಗಿದ್ದೀಯೆ, ಸಾವಿರಕಣ್ಣುಗಳುಳ್ಳವನೂ ನೀನೇ ಆಗಿದ್ದೀಯೆ, ಸಾವಿರಪಾದಗಳುಳ್ಳವನೂ ನೀನೇ, ಅಧೋಮುಖವಾಗಿ ಬೆಳೆದಿರುವ ಜಗದ್ರೂಪನೂ ನೀನೇ, ಮಹಾಪುರುಷನೂ ಸಹ ನೀನೇ, ಸಾವಿರತೋಳುಗಳುಳ್ಳವನೂ ನೀನೇ, ಸಹಸ್ರ ಮೂರ್ತಿಯಾಗಿತೋರುವವನೂ ನೀನೇ, ವೇದಗಳೆಲ್ಲವೂ ನಿನ್ನನ್ನೇ ಸಹಸ್ರಮುಖನೆಂದು ಹೇಳುತ್ತಿರುವುವು. ನಿನಗೆ ಅನಂತ ನಮಸ್ಕಾರಗಳು. ಪುನಃ ಪುನಃ ನಮಸ್ಕಾರಗಳು.

ದೇವತೆಗಳೆಲ್ಲರಿಗೂ ಪ್ರಭುವಾಗಿರುವವನೇ ವಿಶ್ವವನ್ನು ಧರಿಸಿರುವವನೇ, ವಿಶ್ವಶರೀರನೇ, ವಿಶ್ವರೂಪನೇ, ವಿಶ್ವೋತ್ಪತ್ತಿಕಾರಣನೇ, ನಿನ್ನಿಂದಲೇ ಈ ಜಗತ್ತು ಉತ್ಪತ್ತಿ ಹೊಂದಿತು. ಬ್ರಾಹ್ಮಣನು ನಿನ್ನ ಮುಖದಿಂದ ಉದಯಿಸಿದನು, ಕ್ಷತ್ರಿಯನು ನಿನ್ನ ಬಾಹುವಿನಿಂದ ಉದಯಿಸಿದನು. ತೊಡೆಗಳ ಯುಗ್ಮದಿಂದ ವೈಶ್ಯರು ಉದಯಿಸಿದರು, ಪಾದಕಮಲಗಳಿಂದ ಶೂದ್ರರು ಜನಿಸಿದರು, ನಿನ್ನ ನಾಭಿ ಪ್ರದೇಶದಿಂದ ಅಂತರಿಕ್ಷವೂ, ಮುಖಕಮಲದಿಂದ ಇಂದ್ರಾಗ್ನಿಗಳೂ, ಮನಸ್ಸಿನಿಂದ ಚಂದ್ರನೂ ಸಹ ಉತ್ಪನ್ನರಾದರು. ನಿನ್ನ ಅನುಗ್ರಹದಿಂದಲೇ ನಾನೂ ಜನಿಸಿದೆನು. ನಿನ್ನ ಕ್ರೋಧದಿಂದ ರುದ್ರನು ಜನಿಸಿದನು. ಪ್ರಾಣಗಳಿಂದ ವಾಯುವು ಉದಯಿಸಿದನು, ನಿನ್ನ ಶಿರಸ್ಸಿನಿಂದ ದ್ಯುಲೋಕವು ಜನಿಸಿತು, ಕಿವಿಯಿಂದ ದಿಕ್ಕುಗಳೆಲ್ಲವೂ ಜನಿಸಿದವು, ಎಲೈ ಸ್ವಸಂಕಲ್ಪಾಧೀನವಾದ ಆವಿರ್ಭಾವವುಳ್ಳ ಪ್ರಭುವೇ.

ಭೂರಿಯಂ ಚರಣಾಜ್ಞಾತಾ ಗೋತ್ರೋದ್ಭವಾsತಿ ಶೋಭಿತಾ ।
ತ್ವಂ ನಭಸ್ತ್ವಂ ಚ ನಕ್ಷತ್ರಂ ಸ್ವೇದೋದ್ಭಿಜ್ಞಾಸ್ತಥಾಂಡಜಾಃ ।
ಮೂರ್ತಾಶ್ಚೈವಾಪ್ಯಮೂರ್ತಾಶ್ಚ ಸರ್ವೇ ತ್ವತ್ತಃ ಸಮುದ್ಭವಾಃ ॥

ಅತೋ ವಿಶ್ವಾತ್ಮನಾ ದ್ಯೋsಸಿ ಓಂ ನಮಸ್ತೇ ಪುಷ್ಪಹಾಸೋsಸಿ ಪರಮೋsಸಿ ಮಹಾಹಾಸೋsಸಿ ಓಂಕಾರೋsಸಿ ವಷಟ್ಕಾರೋsಸಿ ಸ್ವಾಹಾಕಾರೋsಸಿ ಮಾತರಿಶ್ವಾsಸಿ ಯಜ್ಞಚರೋsಸಿ ತ್ರಿಕೋಶಿರಸಿ ಹೋತಾsಸಿ ಹೋಮೋsಸಿ ಹೂಯಮಾನೋsಸಿ ಪಾತಾsಸಿ ಪರಿತಾsಸಿ ಹಂತಾsಸಿ ಹನ್ಯಮಾನೋsಸಿ ನೀತಿರಸಿ ಮೇಧಾsಸಿ ಅಗ್ನಿರಸಿ ವಿಶ್ವಧಾಮಾsಸಿ ಅಘೋರೋsಸಿ ಪರಮಧಾಮಾsಸಿ ಸ್ರುಗ್ಭಾಂಡೋsಸಿ ಅರಣಿರಸಿ

ಪರ್ವತಗಳಿಗೂ ಉತ್ಪತ್ತಿ ಸ್ಥಾನವಾದ ಮಂಗಳಕರವಾದ ಈ ಭೂಮಿಯು ನಿನ್ನ ಪಾದಗಳಿಂದಲೇ ಉದ್ಭವಿಸಿತು. ದೃಶ್ಯಗಳಾಗಿಯೂ ಅದೃಶ್ಯಗಳಾಗಿಯೂ ಇರುವ ಎಲ್ಲಾ ವಸ್ತುಗಳೂ ನಿನ್ನಿಂದಲೇ ಉಂಟಾಗಿರುವುದರಿಂದ ನೀನೇ ಆಕಾಶ, ನಕ್ಷತ್ರ, ಸ್ವೇದಜ, ಉದ್ಭಿಜ್ಜ ಜ, ಅಂಡಜವೆಂಬ ಪ್ರಾಣಿ ವಿಶೇಷರೂಪನಾಗಿಯೂ ಇರುತ್ತೀಯೇ, ಆದುದರಿಂದ ವಿಶ್ವಕ್ಕೆಲ್ಲಾ ಉತ್ಪಾದಕನಾಗಿ ವಿಶ್ವಶರೀರಿಯೂ ಆದ್ಯನೂ ನೀನೇ ಆಗಿದ್ದೀಯೆ, ನಿನಗೆ ನಮಸ್ಕಾರಗಳು. ಹೂವಿನಂತೆ ಸುಕುಮಾರವಾದ ಮಂದಹಾಸವುಳ್ಳವನಾಗಿರುವೆ, ಪರಮೈಶ್ವರ್ಯಶಾಲಿಯೂ ಆಗಿರುವೆ, ಪ್ರಳಯದಲ್ಲಿ ಜಗತ್ತಿಗೆ ನಾಶಕವಾದ ಅಟ್ಟಹಾಸವುಳ್ಳವನೂ ನೀನೇ ಆಗಿದ್ದೀಯೆ, ಯಜ್ಞಾಂಗಗಳಾದ ಓಂಕಾರ, ವಷಟ್ಕಾರ ಸ್ವಾಹಾಕಾರಗಳಿಂದ ಪೂಜಿಸಲ್ಪಡುವ ನೀನು ಆಯಾಯ ಪುಣ್ಯಸ್ವರೂಪನೂ ಆಗಿರುವೆ, ಗಗನಚಾರಿಯೂ ನೀನೇ, ಯಜ್ಞಸಂಚಾರಿಯೂ ನೀನೇ, ಮೂರು ಲೋಕಗಳಿಗೂ ಕೋಶದಂತೆ ಆಶ್ರಯನಾಗಿರುವವನೂ ನೀನೇ, ಹೋತೃಸ್ವರೂಪನೂ, ಹೋಮಸ್ವರೂಪನೂ, ಹೋಮಮಾಡಲ್ಪಡುವ ದ್ರವ್ಯಸ್ವರೂಪನೂ ನೀನೇ ಆಗಿರುವೆ. ರಕ್ಷಕನೂ. ಪತನಮಾಡುವವನೂ ನೀನೇ ಆಗಿರುವೆ ಕೊಲ್ಲತಕ್ಕವನೂ, ಕೊಲ್ಲಲ್ಪಡತಕ್ಕವನೂ ನೀನೇ ಆಗಿರುವೆ ನೀತಿ, ಅತಿಶಯವಾದ ಬುದ್ಧಿ, ಇವೂ ನೀನೇ ಆಗಿರುವೆ, ಉನ್ನತಗತಿಪ್ರಾಪಕನೂ, ಜಗತ್ಪ್ರಕಾಶಕನೂ, ಪೂಜ್ಯನೂ, ಉತ್ತಮಸ್ಥಾನವೂ ನೀನೇ ಆಗಿದ್ದೀಯೆ, ಸ್ರುಗ್ಭಾಂಡವೆಂಬ ಯಜ್ಞಸಾಧನವೂ ಆರಣಿ ಎಂಬ ಅಗ್ನಿಮಥನಕಾಷ್ಠವೂ ನೀನೇ ಆಗಿದ್ದೀಯೆ.

ಅರಣೀಯೋಽಸಿ ಜ್ಞಾನಮಯೋಽಸಿ ಧ್ಯಾನಮಸಿ ಧ್ಯೇಯೋಽಸಿ ಯಜ್ಞೋಽಸಿ ಇಷ್ಟೋಽಸಿ ಯಷ್ಟಾಽಸಿ ಹೋತಾಽಸಿ ಗೀತೋಽಸಿ ಉದ್ಗಾತಾಽಸಿ ಯಜಮಾನೋಽಸಿ ಗತಿಮಾನಸಿ ಜ್ಞಾನಿನಾಂ ಜ್ಞಾನಮಸಿ ಯೋಗಿನಾಂ ಯೋಗೋಽಸಿ ಮೋಕ್ಷ ಗಾಮಿನಾಂ ಮೋಕ್ಷೋಽಸಿ ಶ್ರೀಮತಾಂ ಶ್ರೀರಸಿ ಗುಹ್ಯೋಽಸಿ ಧಾತಾಽಸಿ ಪರಮಸಿ ಸೋಮೋಽಸಿ ಸೂರ್ಯೋಽಸಿ ದಕ್ಷಿಣಾಽಸಿ ದೀಕ್ಷಿತೋಽಸಿ ನರೋಽಸಿ ತ್ರಿನಯನೋಽಸಿ ಆದಿತ್ಯಪ್ರಭೋಽಸಿ ಶುಚಿರಸಿ ಶುಕ್ರೋಽಸಿ ನಭೋಽಸಿ ನಭಸ್ಯಸಿ ಯಜ್ಞೋಽಸಿ ಸಹೋಽಸಿ ಸಹಸ್ಯೋಽಸಿ ತಪೋಽಸಿ ತಪಸ್ಯೋಽಸಿ ಮಧುರಸಿ ಮಾಧವೋಽಸಿ ಕಾಲೋಽಸಿ

ಆ ಅರಣಿಯಿಂದ ಸಂಸ್ಕರಿಸಲ್ಪಡುವವನೂ ನೀನೇ ಜ್ಞಾನಮಯನೂ, ಧ್ಯಾನ ರೂಪನೂ, ಧ್ಯೇಯಸ್ವರೂಪನೂ ನೀನೇ ಆಗಿರುವೆ, ಯಜ್ಞಪುರುಷ ರೂಪನೂ, ಇಷ್ಟನೂಯಾಗ ಮಾಡುವವನೂ ನೀನೇ ಆಗಿರುವೆ. ಯಜ್ಞದ ದಾನವೂ ಪಶುವೂ, ಪೂಜ್ಯನೂ, ಯಾಗಕ್ಕೆ ಉದ್ದೇಶ್ಯನೂ, ಹೋತೃವೂ ನೀನೇ ಆಗಿದ್ದೀಯೆ, ಗಾನ ಮಾಡಲ್ಪಡುವವನೂ, ಆ ಗಾನವನ್ನು ಮಾಡುವ ಉದ್ಗಾತೃವೆಂಬ ಸಾಮವೇದಾ ಭಿಜ್ಞನೂ, ಯಜಮಾನನೂ, ಗತಿಪ್ರದನೂ ಸಹ ನೀನೇ ಆಗಿರುವೆ.

ಜ್ಞಾನಿಗಳಿಗೆ ನೀನೇ ಜ್ಞಾನರೂಪ ಯೋಗಿಗಳ ಯೋಗಜ್ಞಾನರೂಪನೂ ನೀನೇ ಮೋಕ್ಷವನ್ನು ಹೊಂದುವವರ ಮೋಕ್ಷ ಸ್ವರೂಪನೂ ನೀನೇ ಭಾಗ್ಯಶಾಲಿಗಳ ಭಾಗ್ಯವೂ ನೀನೇ, ಜ್ಞಾನಗಮ್ಯನಾಗಿರುವೆ, ಪೋಷಕನಾಗಿಯೂ ಇರುವೆ, ಉತ್ತಮ ವಸ್ತುವಾಗಿ ರುವೆ, ಚಂದ್ರನೂ ಸೂರ್ಯನೂ ನೀನೇ ಆಗಿರುವೆ, ಯಜ್ಞದಕ್ಷಿಣೆಯೂ, ಯಜ್ಞದೀಕ್ಷಿ ತನೂ ಸಹ ನೀನೇ ಆಗಿರುವೆ, ಕ್ಷಯವಿಲ್ಲದ ನಿತ್ಯಸ್ವರೂಪನೂ, ಸೂರ್ಯ, ಚಂದ್ರ, ಅಗ್ನಿರೂಪವಾದ ಮೂರು ನೇತ್ರಗಳಿಂದ ಜಗತ್ಪ್ರಕಾಶನೂ, ಸೂರ್ಯನಿಗೂ ಪ್ರಭಾ ದಾತನೂ ನೀನೇ ಆಗಿರುವೆ ಶುದ್ಧಮೂರ್ತಿಯೂ ಜ್ಯೇಷ್ಠಮಾಸರೂಪನೂ, ಶ್ರಾವಣ ಮಾಸರೂಪನೂ, ಭಾದ್ರಪದ ಮಾಸರೂಪನೂ, ಯಜ್ಞರೂಪನೂ ನೀನೇ ಆಗಿರುವೆ, ಭೂಮಿಯೇ ಮೊದಲಾದ ಸರ್ವಭಾರ ಸಹಿಷ್ಣುವೂ ನೀನೇ ಆಗಿರುವೆ. ಪುಷ್ಯಮಾಸವೂ ಮಾಘಮಾಸವೂ ಫಾಲ್ಗುನಮಾಸವೂ ನೀನೇ ಆಗಿರುವೆ, ಚೈತ್ರಮಾಸವೂ ವೈಶಾ ಖವೂ ನೀನೇ ಆಗಿರುವೆ, ಅಖಂಡವಾದ ಸರ್ವಕಾಲರೂಪನೂ ನೀನೇ ಆಗಿರುವೆ,

ಸಂಕ್ರಮೋಽಸಿ ವಿಕ್ರಮೋಽಸಿ ಪರಾಕ್ರಮೋಽಸಿ ಅಶ್ವಗ್ರೀವೋಽಸಿ ಮಹಾಮೇಧೋಽಸಿ ಶಂಕರೋಽಸಿ ಹರೀಶ್ವರೋಽಸಿ ಸತ್ತ್ವಮಸಿ ಬ್ರಹ್ಮಚಾರ್ಯಸಿ ಸ್ವರಸಿ ಮಿತ್ರಾವರುಣೋಽಸಿ ಪ್ರಾಗ್ವಂಶ ಪ್ರಕಾಶೋಽಸಿ ಭೂತಾದಿರಸಿ ಮಹಾಭೂತೋಽಸಿ ಊರ್ಧ್ವಕರ್ಮಾಂತಕರ್ತಾಽಸಿ ವ್ಯಾಪ್ತಾಽಸಿ ಸರ್ವಪಾಪವಿಮೋಚನೋಽಸಿ ತ್ರಿವಿಕ್ರಮೋಽಸಿ ನಮಸ್ತೇ ॥

ಪುಲಸ್ತ್ಯ ಉವಾಚ

ಇತ್ಥಂ ಸ್ತುತೋಽಸೌ ಪ್ರಪಿತಾಮಹೇನ
ವಿಷ್ಣುಃ ಸದೈವಾದ್ಭುತಕರ್ಮಚಾರೀ ।
ಪ್ರೋವಾಚ ಚೇದಂ ಪ್ರಪಿತಾಮಹಂ ತು
ವರಂ ವೃಣೀಷ್ವಾಮಲಸತ್ತ್ವವೃತ್ತ ॥ ೯ ॥

ತಮಬ್ರವೀತ್ಪ್ರೀತಿಯುತಃ ಪಿತಾಮಹೋ
ವರಂ ಮಮೇಹಾದ್ಯ ವಿಭೋ ಪ್ರಯಚ್ಛ ।

ದುರ್ಗಸ್ಥಾನವೂ, ಅತಿಶಕ್ತಿಯೂ, ಶಕ್ತಿಶಾಲಿಯೂ ನೀನೇ ಆಗಿರುವೆ, ಹಯಗ್ರೀವ ರೂಪದಿಂದ ವೇದಗಳನ್ನು ಉಪದೇಶಿಸಿದವನೂ ನೀನೇ ಮಹಾ ಬುದ್ಧಿಶಾಲಿಯೂ ನೀನೇ ಪ್ರಾಣಿಗಳಿಗೆ ಸುಖಪ್ರದನೂ ನೀನೇ ಪಾಪನಾಶಕರಾದ ದೇವತೆಗಳಿಗೆಲ್ಲಾ ನೀನೇ ಪ್ರಭುವು, ಶುದ್ಧ ಸತ್ತ್ವರೂಪನೂ, ಬ್ರಹ್ಮಚಾರಿಯೂ ನೀನೇ ಆಗಿದ್ದೀಯೆ, ಸ್ವರ್ಲೋಕವೂ ನೀನೇ ಮಿತ್ರಾವರುಣನೂ ನೀನೇ, ಪ್ರಾಗ್ವಂಶವೆಂಬ ಹವಿರ್ಗೃಹಕ್ಕೆ ಪ್ರಕಾಶಕನೂ ನೀನೇ ಸರ್ವಭೂತಗಳಿಗೂ ಆದಿಕಾರಣನಾಗಿರುವವನೂ ನೀನೇ, ಪಂಚ ಮಹಾಭೂತಗಳಿಂದ ಕೂಡಿದ ಜಗದಾತ್ಮಕನೂ ನೀನೇ, ಊರ್ಧ್ವರೇತಸ್ಸುಗಳಾದ ಮಹಾತಪಸ್ವಿಗಳಿಗೆ ಗತಿಪ್ರದನೂ ನೀನೇ ವ್ಯಾಪಕನೂ ನೀನೇ, ಸರ್ವಪಾಪನಾಶಕನೂ ನೀನೇ, ತ್ರಿವಿಕ್ರಮಾವತಾರಶಾಲಿಯೂ ನೀನೇ ನಿನಗೆ ಅನಂತ ನಮಸ್ಕಾರಗಳು.

೧೦. ಪುಲಸ್ತ್ಯರು ಹೇಳುತ್ತಾರೆ:—ಈರೀತಿಯಾಗಿ ಅದ್ಭುತವ್ಯಾಪಾರವನ್ನು ನೆರವೇರಿದ ಆ ಮಹಾವಿಷ್ಣುವನ್ನು ಚತುರ್ಮುಖನು ಸ್ತೋತ್ರಮಾಡಲಾಗಿ ಸಂತುಷ್ಟನಾದ ಆ ಹರಿಯು ಬ್ರಹ್ಮನನ್ನು ಕುರಿತು ಎಲೈ ಸತ್ತ್ವಗುಣಪೂರ್ಣನೇ ನಿನಗೆ

ರೂಪೇಣ ಪುಣ್ಯೇಣ ವಿಭೋರನೇನ
ಸಂಸ್ಥೀಯತಾಂ ಮದ್ಭವನೇ ಮುರಾರೇ ॥ ೧೦ ॥

ಇತ್ಥಂ ವೃತೇ ತೇನ ವರೇ ವರೇಣ್ಯೇ
ದೇವೋಽಪ್ಯಥಾಽಚಿಂತಿತಮುವ್ಯಯಾತ್ಮಾ ।
ತಸ್ಥೌ ಸ್ವರೂಪೇಣ ಹಿ ವಾಮನೇನ
ಸಂಪೂಜ್ಯಮಾನಃ ಸದನೇ ಸ್ವಯಂಭೋಃ ॥ ೧೧ ॥

ನೃತ್ಯಂತಿ ತತ್ರಾಪ್ಸರಸಾಂ ಸಮೂಹಾ
ಗಾಯಂತಿ ಗೀತಾನಿ ಸುರೇಂದ್ರನಾರ್ಯಃ ।
ವಿದ್ಯಾಧರಾಸ್ತೂರ್ಯಮವಾದಯಂತ
ಸ್ತುವಂತಿ ದೇವಾಸುರಸಿದ್ಧಸಂಘಾಃ ॥ ೧೨ ॥

ತತಃ ಸಮಾರಾಧ್ಯ ವಿಭುಂ ಮುರಾರಿಂ
ಪಿತಾಮಹೋ ಧೌತಮಲಃ ಸುಶುದ್ಧಃ ।
ಸ್ವರ್ಗಂ ವಿರಿಂಚೇಃ ಸದನಾತ್ಸುಪುಣ್ಯಾ
ದಾನೀಯ ಪೂಜಾಂ ಪ್ರಚಕಾರ ವಿಷ್ಣೋಃ ॥ ೧೩ ॥

ಬೇಕಾದ ವರವನ್ನು ಕೇಳಿಕೋ ಎಂದನು. ಆಗ ಸಂತುಷ್ಟನಾದ ಬ್ರಹ್ಮನು ಎಲೈ ಪ್ರಭುವೇ, ಮುರಾರಿಯೇ, ಪುಣ್ಯಕರವಾದ ಈ ನಿನ್ನ ರೂಪದಿಂದಲೇ ನೀನು ನನ್ನ ಮನೆಯಲ್ಲಿ ನೆಲಸಿ ನನ್ನನ್ನು ನಿನ್ನ ದರ್ಶನದಿಂದ ಪವಿತ್ರಗೊಳಿಸು ಎಂದು ಬೇಡಿದನು.

೧೧-೧೨. ಈ ಪ್ರಕಾರವಾದ ವರವನ್ನು ಬ್ರಹ್ಮನು ಬೇಡಲಾಗಿ ಪರಮಾತ್ಮನೂ ಸಹ ಭಕ್ತನಾದ ಅವನ ಪ್ರಾರ್ಥನೆಯಂತೆ ತನ್ನ ಆ ವಾಮನರೂಪದಿಂದಲೇ ಆ ಬ್ರಹ್ಮನ ಮನೆಯಲ್ಲಿ ನೆಲಸಿ ಅವನಿಂದ ಪೂಜಿಸಲ್ಪಡುತ್ತಿರುವನು. ಅಲ್ಲಿಯೇ ಆ ಪರಮಾತ್ಮನ ಪ್ರೀತಿಗಾಗಿ ಅಪ್ಸರೆಯಲ್ಲರೂ ಸೇರಿ ನರ್ತನಮಾಡುತ್ತಾರೆ. ದೇವತಾ ಸ್ತ್ರೀಯರೂ ಗಾನಮಾಡುತ್ತಾರೆ. ವಿದ್ಯಾಧರರೆಲ್ಲರೂ ವಾದ್ಯಗಳನ್ನು ಬಾರಿಸುತ್ತಾರೆ. ದೇವತೆಗಳೂ ಸಿದ್ಧರೂ ಸಹ ಸ್ತೋತ್ರಮಾಡುತ್ತಾರೆ.

೧೩-೧೪. ಆ ಬ್ರಹ್ಮನ ಗೃಹದಲ್ಲಿ ಹರಿಯನ್ನು ಭಕ್ತಿಯಿಂದ ಪೂಜಿಸಿ ಬ್ರಹ್ಮನು ನಿಷ್ಪಾಪನಾಗಿ ಶುದ್ಧನಾದನು. ಅನಂತರ ಆ ಸತ್ಯಲೋಕದಿಂದ ಇಂದ್ರನು ಸ್ವರ್ಗ ಲೋಕಕ್ಕೆ ಕರೆದುಕೊಂಡು ಬಂದು ಪೂಜಿಸಿದನು. ಆ ಸ್ವರ್ಗದಲ್ಲಿಯೂ ಸಹಸ್ರ

ಸ್ವರ್ಗೇ ಸಹಸ್ರಂ ಸ ತು ಯೋಜನಾನಾಂ
ವಿಷ್ಣೋಃ ಪ್ರಮಾಣೇನ ಹಿ ವಾಮನೋಽಭೂತ್ ।
ತತ್ರಾಸ್ಯ ಶಕ್ರಃ ಪ್ರಚಕಾರ ಪೂಜಾಂ
ಸ್ವಯಂಭುವಸ್ತುಲ್ಯಗುಣಾಂ ಮಹರ್ಷೇ ॥ ೧೪ ॥

ಏತತ್ತವೋಕ್ತಂ ಭಗವಾಂಸ್ತ್ರಿವಿಕ್ರಮ
ಶ್ಚಕಾರ ಯದ್ದೇವಹಿತಂ ಮಹಾತ್ಮಾ ।
ರಸಾತಲಸ್ಥಂ ದಿತಿಜಂ ಹಿ ಕುರ್ವ
ನ್ನಿವೇದಿತಂ ತೇಽದ್ಯ ಮಯಾ ಹಿ ವಿಪ್ರ ॥ ೧೫ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ
ಬ್ರಹ್ಮೋಕ್ತಸ್ತವೋ ನಾಮ ತ್ರಿನವತಿತಮೋಽಧ್ಯಾಯಃ

ಯೋಜನಪರಿಮಿತವಾದ ಮಹಾಕ್ಷೇತ್ರದಲ್ಲಿ ಭಗವಂತನು ವಾಮನಮೂರ್ತಿಯಾಗಿಯೇ ಇದ್ದು ಇಂದ್ರನಿಂದಲೂ ಬ್ರಹ್ಮನು ಮಾಡಿದ ಪೂಜೆಗೆ ಸಮಾನವಾದ ಪೂಜೆಯನ್ನೇ ಅಂಗೀಕರಿಸಿದನು. ಎಲೈ ಮಹರ್ಷಿಯೇ, ಪೂಜ್ಯನಾದ ತ್ರಿವಿಕ್ರಮನು ತನ್ನ ಅವತಾರದಿಂದ ದೇವತೆಗಳಿಗೆ ಉಂಟುಮಾಡಿದ ಹಿತವನ್ನೂ ಇದಕ್ಕಾಗಿ ಬಲಿಯನ್ನು ಪಾತಾಲದಲ್ಲೇ ನಿಲ್ಲಿಸಿದುದನ್ನೂ ಸಹ ನಿನಗೆ ಹೇಳಿರುವೆನು.

ಇಲ್ಲಿಗೆ ಶ್ರೀ ವಾಮನಪುರಾಣದ ವಾಮನಪ್ರಾದುರ್ಭಾವದಲ್ಲಿ ಬ್ರಹ್ಮನಸ್ತುತಿ ಎಂಬ
ತೊಂಭತ್ತಮೂರನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯ ೯೩

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಬಲಿಯನ್ನು ನಿಗ್ರಹಿಸಿ ಪಾತಾಳಕ್ಕೆ ಕಳುಹಿಸಿ ಇಂದ್ರನಿಗೆ ಸ್ವರ್ಗಸಾಮ್ರಾಜ್ಯವನ್ನು ಭಗವಂತನು ಅನುಗ್ರಹಿಸಿ ಅಂತರ್ಧಾನಹೊಂದಿದನೆಂದು ಪುಲಸ್ತ್ಯರು ಹೇಳಲಾಗಿ ನಾರದರು ಆ ಪುರುಷೋತ್ತಮನು ಅಂತರ್ಧಾನಹೊಂದಿ ಎಲ್ಲಿಗೆ ಹೋದನು ? ಅವನ ಮುಂದಿನ ವೃತ್ತಾಂತವೇನು ಎಂದು ಪ್ರಶ್ನೆಮಾಡಲು ಪುಲಸ್ತ್ಯರು ಅದಕ್ಕೆ ಉತ್ತರವಾಗಿ ಬಲಿನಿಗ್ರಹವಾದನಂತರ ಸ್ವಸ್ಥಾನಕ್ಕೆ ತೆರಳುತ್ತಿದ್ದ ಆ ಪರಮಾತ್ಮನನ್ನು ಚತುರ್ಮುಖನು ಕಂಡು ಈ ವೃತ್ತಾಂತವನ್ನೆಲ್ಲಾ ಕೇಳಿ ಸಂತೋಷಪಟ್ಟು ನಿನ್ನ ಆ ರೂಪವನ್ನು ನಾನು ದರ್ಶನಮಾಡಬೇಕೆಂದು ಪ್ರಾರ್ಥಿಸಲು ಸರ್ವದೇವತಾಮಯವಾದ ತನ್ನ ಆ ರೂಪವನ್ನು ಹರಿಯು ತೋರ್ಪಡಿಸಿದನೆಂದೂ ಆಗ ಆಶ್ಚರ್ಯದಿಂದಲೂ ಸಂತೋಷದಿಂದಲೂ ಬ್ರಹ್ಮನು ನಾನಾವಿಧವಾಗಿ ಸ್ತೋತ್ರ ಮಾಡಿದನೆಂದೂ ಆ ಸ್ತೋತ್ರದಿಂದ ಸಂತೋಷಪಟ್ಟು ಪರಮಾತ್ಮನು ಬ್ರಹ್ಮನನ್ನು ವರವನ್ನು ಕೇಳಿಕೋ ಎಂದು ಅಪ್ಪಣೆಮಾಡಲು ಬ್ರಹ್ಮನು ಸಂತೋಷದಿಂದ ಪೂಜ್ಯನೇ ನಿನ್ನ ಈ ವಾಮನರೂಪದಿಂದಲೇ ನನಗೆ ದರ್ಶನಕೊಡುತ್ತಾ ನನ್ನ ಮನೆಯಲ್ಲಿಯೇ ನನ್ನಿಂದ ಪೂಜಿಸಲ್ಪಡುತ್ತ ನೆಲಸಿರಬೇಕೆಂದು ಪ್ರಾರ್ಥಿಸಲು ಭಕ್ತಪರವಶನಾದ ಹರಿಯು ಅವನ ಕೋರಿಕೆಯಂತೆ ಅಲ್ಲಿಯೇ ನೆಲಸಿ ಪೂಜಿಸಲ್ಪಡುತ್ತಿದ್ದನೆಂದೂ ಅನಂತರ ಇಂದ್ರನು ಆ ವಾಮನಮೂರ್ತಿಯನ್ನು ತಾನೂ ಪೂಜಿಸಲು ಸ್ವರ್ಗ ಲೋಕಕ್ಕೆ ಕರೆದುಕೊಂಡು ಬಂದು ಬ್ರಹ್ಮನಂತೆಯೇ ತಾನೂ ಪೂಜಿಸಿದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಚತುರ್ನವತಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಗತ್ವಾ ರಸಾತಲಂ ದೈತ್ಯೋ ಮಹಾಮಣಿವಿಚಿತ್ರಿತಂ ।
ಶುದ್ಧಸ್ಫಟಿಕಸೋಪಾನಂ ಕಾರಯಾಮಾಸ ವೈ ಪುರಂ ॥ ೧ ॥

ತತ್ರ ಮಧ್ಯೇ ಸುವಿಸ್ತೀರ್ಣೇ ಪ್ರಾಸಾದೋ ಬಹುವೇದಿಕಃ ।
ಮುಕ್ತಾಜಾಲಾಂತರದ್ವಾರೋ ನಿರ್ಮಿತೋ ವಿಶ್ವಕರ್ಮಣಾ ॥ ೨ ॥

ತತ್ರಾಽಸ್ತೇ ವಿವಿಧಾನ್ಭೋಗಾನ್ಭುಂಜನ್ದಿವ್ಯಾನ್ಸಮಾನುಷಾನ್ ।
ನಾಮ್ನಾ ವಿಂಧ್ಯಾವಲೀತ್ಯೇವಂ ಭಾರ್ಯಾಽಸ್ಯ ದಯಿತಾಽಭವತ್ ॥ ೩ ॥

ತೊಂಭತ್ತನಾಲ್ಕನೆಯ ಅಧ್ಯಾಯವು

೧-೩. ಪುಲಸ್ತ್ಯರು ಹೇಳುತ್ತಾರೆ :-ದೈತ್ಯರಾಜನಾದ ಬಲಿಯು ತ್ರಿವಿಕ್ರಮನ ಆಜ್ಞೆಯಂತೆ ಪಾತಾಳಲೋಕಕ್ಕೆ ಹೋಗಿ ಅಲ್ಲಿ ಮಹಾರತ್ನಗಳಿಂದ ಚಿತ್ರವಿಚಿತ್ರವಾಗಿಯೂ ಸ್ಫಟಿಕಮಣಿಗಳ ಶುಭ್ರಸೋಪಾನಗಳಿಂದಕೂಡಿಯೂ ಇರುವ ಮಹಾನಗರವನ್ನೇ ನಿರ್ಮಿಸಿದನು. ಆ ನಗರದ ವಿಸ್ತಾರವಾದ ಮಧ್ಯಭಾಗದಲ್ಲಿ ಅನೇಕ ವೇದಿಕೆಗಳಿಂದಕೂಡಿ ಮುತ್ತಿನಗೊಂಚಲುಗಳಿಂದ ಅಲಂಕರಿಸಲಾಗಿದ್ದ ಬಾಗಿಲುಗಳಿಂದ ರಮ್ಯವಾದ ಒಂದು ಉಪ್ಪರಿಗೆಯನ್ನು ವಿಶ್ವಕರ್ಮನೇ ಮಾಡಿದ್ದನು. ಆ ರಾಜಗೃಹದಲ್ಲಿ ವಿವಿಧವಾದ ದಿವ್ಯಮಾನುಷಭೋಗಗಳನ್ನನುಭವಿಸುತ್ತಾ ಪ್ರಿಯಪತ್ನಿಯಾದ ವಿಂಧ್ಯಾವಲಿಯೊಡನೆ ಬಲಿಯು ವಾಸಿಸುತ್ತಿದ್ದನು.

ಯುವತೀನಾಂ ಸಹಸ್ರಸ್ಯ ಪ್ರಧಾನಾ ಶೀಲಮಂಡನಾ ।
ತಯಾ ಸಹ ಮಹಾತೇಜಾ ರೇಮೇ ವೈರೋಚನಿರ್ಮುನೇ ॥ ೪ ॥

ಭೋಗಾಸಕ್ತಸ್ಯ ದೈತ್ಯಸ್ಯ ವಸತಃ ಸುತಲೇ ತದಾ ।
ದೈತ್ಯತೇಜೋಹರಂ ಪ್ರಾಪ ಪಾತಾಲಂ ವೈ ಸುದರ್ಶನಂ ॥ ೫ ॥

ಚಕ್ರೇ ಪ್ರವಿಷ್ಟೇ ಪಾತಾಲೇ ದಾನವಾನಾಂ ಭಯಂ ಮಹತ್ ।
ಅಭೂದ್ಧಲಹಲಾಶಬ್ದಃ ಕ್ಷುಭಿತಾರ್ಣವಸನ್ನಿಭಃ ॥ ೬ ॥

ತಂ ಶ್ರುತ್ವಾ ಸುಮಹಚ್ಛಬ್ದಂ ಬಲಿಃ ಖಡ್ಗಂ ಸಮಾದದೇ ।
ಆಃ ಕಿಮೇತದಿತೀತ್ಥಂ ಚ ಪಪ್ರಚ್ಛಾಸುರಪುಂಗವಃ ॥ ೭ ॥

ತತೋ ವಿಂಧ್ಯಾವಲಿಃ ಪ್ರಾಹ ಸಾಂತ್ವಯಂತೀ ನಿಜಂ ಪತಿಂ ।
ಕೋಶೇ ಖಡ್ಗಂ ಸಮಾಧಾಯ ಧರ್ಮಪತ್ನೀ ಶುಚಿವ್ರತಾ ॥ ೮ ॥

ಉವಾಚ ಮಧುರಂ ವಾಕ್ಯಂ ದೈತ್ಯರಾಜಂ ಸುನಿಶ್ಚಿತಂ ।
ಏತದ್ಭಾಗವತಂ ಚಕ್ರಂ ದೈತ್ಯಚಕ್ರಕ್ಷಯಂಕರಂ ॥ ೯ ॥

೪-೭. ಅನೇಕಾನೇಕ ಸ್ತ್ರೀಸಮುದಾಯಕ್ಕೂ ಪ್ರಧಾನಳಾಗಿ ಶೀಲವತಿಯಾಗಿದ್ದ ಆ ವಿಂಧ್ಯಾವಲಿಯೊಡನೆ ಸುತಲವೆಂಬ ಪಾತಾಲಲೋಕದಲ್ಲಿ ತೇಜಸ್ವಿಯಾದ ಬಲಿಯು ಭೋಗಾಸಕ್ತಿಯಿಂದ ವಾಸಮಾಡುತ್ತಿರುವಾಗ ದೈತ್ಯರ ತೇಜಸ್ಸನ್ನಡಗಿಸುವ ಸುದರ್ಶನವೆಂಬ ವಿಷ್ಣುಚಕ್ರವು ಅಲ್ಲಿಗೆ ಬಂದಿತು. ಆ ಚಕ್ರವು ಪಾತಾಲಲೋಕಕ್ಕೆ ಬಂದೊಡನೆಯೇ ಅಲ್ಲಿದ್ದ ದೈತ್ಯರೆಲ್ಲರೂ ಕ್ಷೋಭೆಗೊಂಡ ಸಮುದ್ರಧ್ವನಿಯಂತೆ ಭಯದಿಂದ :ಹಲಹಲಧ್ವನಿಮಾಡತೊಡಗಿದರು. ಆ ಶಬ್ದವನ್ನು ಕೇಳಿದೊಡನೆಯೇ ದೈತ್ಯರಾಜನಾದ ಬಲಿಯು ಖಡ್ಗಪಾಣಿಯಾಗಿ ನಿಂತು ಆಃ! ಇದೇನು ಎಂದು ಕೇಳಿದನು.

೮-೧೦. ಆಗ ಶೀಲವತಿಯಾಗಿಯೂ ಪತಿಹಿತವನ್ನು ಬಯಸುವ ಧರ್ಮಪತ್ನಿಯಾಗಿಯೂ ಇದ್ದ ವಿಂಧ್ಯಾವಲಿಯು ಹೊರಗೆ ತೆಗೆದಿದ್ದ ಕತ್ತಿಯನ್ನು ಒರೆಯಲ್ಲಿಟ್ಟು ಪತಿಯನ್ನು ಸಮಾಧಾನಪಡಿಸುತ್ತಾ ದೈತ್ಯರಾಜನಾದ ಬಲಿಯನ್ನು ಕುರಿತು ಮೃದುಮಧುರವಾಕ್ಯಗಳಿಂದ ದೈತ್ಯರಾಜನೇ, ಇದು ವಾಮನನಾಗಿ ಅವತರಿಸಿದ್ದ ಮಹಾಮಹಿಮನಾದ ಭಗವಂತನ ಚಕ್ರಾಯುಧ. ಇದು ದೈತ್ಯರಿಗೆ ನಾಶಕ

ಸಂಪ್ರೂಜನೀಯಂ ದೈತ್ಯೇಂದ್ರ ವಾಮನಸ್ಯ ಮಹಾತ್ಮನಃ ।
ಇತ್ಯೇವಮುಕ್ತ್ವಾ ಚಾರ್ವಂಗೀ ಪ್ರಯತಾ ಸಾ ವಿನಿರ್ಯಯೌ ॥ ೧೦ ॥

ಅಥಾಽಭ್ಯಾಗಾತ್ಸಹಸ್ರಾರಂ ವಿಷ್ಣೋಶ್ಚಕ್ರಂ ಸುದರ್ಶನಂ ।
ತತೋಽಸುರಪತಿಃ ಪ್ರಾಹ ಕೃತಾಂಜಲಿಪುಟೋ ಮುನೇ ॥
ಸಂಪೂಜ್ಯ ವಿಧಿವಚ್ಚಕ್ರಮಿದಂ ಸ್ತೋತ್ರಮುದೈರಯತ್ ॥ ೧೧ ॥

ಬಲಿರುವಾಚ

ನಮಸ್ಯಾಮಿ ಹರೇಶ್ಚಕ್ರಂ ದೈತ್ಯಚಕ್ರವಿದಾರಣಂ ।
ಸಹಸ್ರಾಂಶುಂ ಸಹಸ್ರಾಭಂ ಸಹಸ್ರಾರಂ ಸುದರ್ಶನಂ ॥ ೧೨ ॥

ನಮಸ್ಯಾಮಿ ಹರೇಶ್ಚಕ್ರಂ ಯಸ್ಯ ನಾಭ್ಯಾಂ ಪಿತಾಮಹಃ ।
ತುಂಗೇ ತ್ರಿಶೂಲಧೃಕ್ಶರ್ವ ಅರಾಮೂಲೇ ಮಹಾದ್ರಯಃ ॥ ೧೩ ॥

ಅರಾ ಸುಸಂಸ್ಥಿತಾ ದೇವಾಃ ಸೇಂದ್ರಾರ್ಕಾಶ್ಚ ಸಪಾವಕಾಃ ।
ಜವೇ ಯಸ್ಯ ಸ್ಥಿತೋ ವಾಯುರಾಪೋಽಗ್ನಿಃ ಪೃಥಿವೀ ನಭಃ ॥ ೧೪ ॥

ವಾದದ್ದು. ಇದನ್ನು ಭಕ್ತಿಯಿಂದ ಪೂಜಿಸಬೇಕು (ಪರಾಕ್ರಮದಿಂದ ಫಲವಿಲ್ಲ) ಎಂದು ಹೇಳಿ ಪರಿಶುದ್ಧಮನಸ್ಸಿನಿಂದ ಭಕ್ತಿಯನ್ನು ಹೊಂದಿ ಅಲ್ಲಿಂದ ಹೊರಟುಹೋದಳು.

೧೧-೧೨. ಅನಂತರ ಸಹಸ್ರಅರಗಳಿಂದ ಕೂಡಿದ ವಿಷ್ಣುವಿನ ಸುದರ್ಶನವು ಅಲ್ಲಿಗೆ ಬಂದಿತು. ಆಗ ದೈತ್ಯರಾಜನಾದ ಬಲಿಯು ಆ ಚಕ್ರವನ್ನು ಯಥಾವಿಧಿಯಾಗಿ ಪೂಜಿಸಿ ಭಕ್ತಿಯಿಂದ ಕೈಮುಗಿದುಕೊಂಡು ಅದನ್ನು ಈ ರೀತಿ ಸ್ತೋತ್ರಮಾಡಿದನು. ಬಲಿಯು ಹೇಳುತ್ತಾನೆ:—ದೈತ್ಯಸಮೂಹಕ್ಕೆ ನಾಶಕವಾಗಿ ಸಹಸ್ರಕಿರಣಗಳಿಂದಲೂ ಸಹಸ್ರಮುಖವಾದ ಪ್ರಕಾಶದಿಂದಲೂ ಸಹಸ್ರಅರ(ಚಕ್ರದಮಧ್ಯದಲ್ಲಿರು ವಸರಳುಗಳು) ಗಳಿಂದಲೂ ಕೂಡಿರುವ ವಿಷ್ಣುಸುದರ್ಶನವನ್ನು ನಮಸ್ಕರಿಸುತ್ತೇನೆ

೧೩-೧೬. ಯಾವ ಚಕ್ರದ ಮಧ್ಯಭಾಗದಲ್ಲಿ ಬ್ರಹ್ಮನೂ, ಮೇಲುಭಾಗದಲ್ಲಿ ತ್ರಿಶೂಲಧಾರಿಯಾದ ರುದ್ರನೂ, ಅರಗಳ ಬುಡದಲ್ಲಿ ಮಹಾ ಪರ್ವತಗಳೂ, ಅರಗಳಲ್ಲಿ ಚಂದ್ರಸೂರ್ಯಾಗ್ನಿಗಳೊಡಗೂಡಿದ ದೇವತೆಗಳೂ ನೆಲಸಿರುವರೋ ಮತ್ತು ವಾಯು, ಜಲ, ಅಗ್ನಿ, ಭೂಮಿ, ಆಕಾಶ, ಈ ಪಂಚಭೂತಗಳೂ ಸಹ ಯಾವ ಸುದರ್ಶನದ

ಅರಾಸಂಧಿಷು ಜೀಮೂತಾಃ ಸೌದಾ ಮ್ನ್ಯೃಕ್ಷಾಣಿ ತಾರಕಾಃ ।
ಬಾಹ್ಯತೋ ಮುನಯೋ ಯಸ್ಯ ವಾಲಖಿಲ್ಯಾದಯಸ್ತಥಾ ॥ ೧೫ ॥

ತದ್ಯಾಯುಧವರಂ ದೇವಂ ವಾಸುದೇವಸ್ಯ ಭಕ್ತಿತಃ ।
ತ್ರಿಧಾ ಪಾಪಂ ಶರೀರೋತ್ಥಂ ವಾಗ್ಜಂ ಮಾನಸಮೇವ ಚ ॥ ೧೬ ॥

ತನ್ಮೇ ದಹಸ್ವ ದೀಪ್ತಾಂಶೋ ದೀಪ್ತಂ ಚಕ್ರಂ ಸುದರ್ಶನಂ ।
ಯತ್ಕಲೌ ಬಹುಲಂ ಪಾಪಂ ಪೈತೃಕಂ ಮಾತೃಕಂ ತಥಾ ॥ ೧೭ ॥

ತನ್ಮೇ ಹರಸ್ವ ತರಸಾ ನಮಸ್ತೇ ತ್ವಚ್ಯುತಾಯುಧ ।
ಆಪದೋ ಮಮ ನಶ್ಯಂತು ವ್ಯಾಧಯೋ ಯಾಂತು ಸಂಕ್ಷಯಂ ॥
ತ್ವನ್ನಾಮಕೀರ್ತನಾಚ್ಚಕ್ರ ದುರಿತಂ ಯಾತು ಸಂಕ್ಷಯಂ ॥ ೧೮ ॥

ಇತ್ಯೇವಮುಕ್ತ್ವಾ ಮತಿಮಾನ್ಸಮಭ್ಯರ್ಚ್ಯಥ ಭಕ್ತಿತಃ ।
ಸಂಸ್ಮರನ್ಪುಂಡರೀಕಾಕ್ಷಂ ಸರ್ವಪಾಪವಿನಾಶನಂ ॥ ೧೯ ॥

ವೇಗಕ್ಕೆ ಸಾಧಕಗಳಾಗಿ ನಿಂತಿರುವುವೋ ಮತ್ತು ಅರಗಳ ಸಂಧಿ ಬಂಧಗಳಲ್ಲಿ ಮೇಘಗಳೂ, ಮಿಂಚು, ನಕ್ಷತ್ರ, ತಾರಕೆಗಳೂ ಸಹ ನೆಲಸಿವೆಯೋ, ಹೊರಭಾಗದಲ್ಲಿ ವಾಲಖಿಲ್ಯರೇ ಮೊದಲಾದ ಮಹಾಮುನಿಗಳು, ನೆಲಸಿರುವರೋ ಅಂತಹ ವಾಸುದೇವನ ಆಯುಧ ಶ್ರೇಷ್ಠವಾದ ಚಕ್ರವನ್ನು ನಮಸ್ಕರಿಸುತ್ತೇನೆ. ಎಲೈ, ವಿಷ್ಣುಚಕ್ರವೇ, ನನಗೆ ಶಾರೀರವಾಗಿಯೂ ವಾಚನಿಕವಾಗಿಯೂ, ಮಾನಸವಾಗಿಯೂ ಉಂಟಾಗಿರುವ ಮೂರು ವಿಧವಾದ ಪಾಪಗಳನ್ನೂ ಉಜ್ವಲವಾದ ಕಿರಣಗಳುಳ್ಳ ನೀನು ಭಸ್ಮೀಕರಿಸು.

೧೭-೧೯. ಎಲೈ, ವಿಷ್ಣುವಿನ ಆಯುಧವೇ, ಕಲಿಸಂಬಂಧದಿಂದ ಹಾಗೂ ಮಾತಾಪಿತೃಗಳ ಸಂಬಂಧದಿಂದಲೂ ನನಗೆ ಉಂಟಾಗಿರುವ ಪಾಪವನ್ನು ಜಾಗ್ರತೆಯಾಗಿ ನಾಶಮಾಡು ನಿನಗೆ ಅನಂತ ನಮಸ್ಕಾರಗಳು. ಎಲೈ, ಚಕ್ರಾಯುಧವೇ, ನಿನ್ನ ನಾಮ ಕೀರ್ತನದಿಂದ ನನ್ನ ವಿಪತ್ತುಗಳೂ ವ್ಯಾಧಿಗಳೂ ನಾಶಹೊಂದಲಿ. ಹೀಗೆ ಸ್ತೋತ್ರಮಾಡಿ ಬುದ್ಧಿಶಾಲಿಯಾದ ಆ ಬಲಿಯು ಭಕ್ತಿಯಿಂದ ಆ ಸುದರ್ಶನವನ್ನು ಪೂಜಿಸಿ ಸರ್ವಪಾಪನಾಶಕನಾದ ಪುಂಡರೀಕಾಕ್ಷನನ್ನು ಸ್ಮರಿಸುತ್ತಾ ನಿಂತನು.

ಪೂಜಿತಂ ಬಲಿನಾ ಚಕ್ರಂ ಕೃತ್ವಾ ನಿಸ್ತೇಜಸೋಽಸುರಾನ್ ।
ನಿಶ್ಚಕ್ರಾಮಾಥ ಪಾತಾಲಾ ದ್ವಿಷುವೇ ದಕ್ಷಿಣೇ ಮುನೇ ॥ ೨೯ ॥

ಸುದರ್ಶನೇ ವಿನಿಷ್ಕ್ರಾಂತೇ ಬಲಿರ್ವಿಕ್ಲವತಾಂ ಗತಃ ।
ಪರಮಾಪದಂ ಪ್ರಾಪ್ಯ ಸಸ್ಮಾರ ಸ್ವಂ ಪಿತಾಮಹಂ ॥ ೩೦ ॥

ಸಚಾಪಿ ಸಂಸ್ಮೃತಃ ಪ್ರಾಪ್ತಃ ಸುತಲಂ ದಾನವೇಶ್ವರಃ ।
ದೃಷ್ಟ್ವಾ ತಸ್ಥೌ ಮಹಾತೇಜಾಃ ಸಾರ್ಘ್ಯಪಾತ್ರೋ ಬಲಿಸ್ತದಾ ॥ ೩೨ ॥

ಸ ತಮಭ್ಯರ್ಚ್ಯ ವಿಧಿನಾ ಪಿತುಃ ಪಿತರಮೀಶ್ವರಂ ।
ಕೃತಾಂಜಲಿಪುಟೋ ಭೂತ್ವಾ ಇದಂ ವಚನಮಬ್ರವೀತ್ ॥ ೩೩ ॥

ಸಂಸ್ಮೃತೋಽಪಿ ಸಮಾಯಾತಃ ಸುವಿಷಣ್ಣೇನ ಚೇತಸಾ ।
ತನ್ಮೇ ಹಿತಂ ಚ ಪಥ್ಯಂ ಚ ಶ್ರೇಯಾಂಸಿ ತ್ವಂ ತಥಾ ಶುಭಂ ॥ ೩೪ ॥

೨೦-೨೨. ಬಲಿಯಿಂದ ಈ ರೀತಿ ಪೂಜಿಸಲ್ಪಟ್ಟ ಆ ಚಕ್ರವೂ ಸಹ ದಾನವರೆಲ್ಲರನ್ನೂ ನಿಸ್ತೇಜಸ್ಕರನ್ನಾಗಿಮಾಡಿ ಪಾತಾಲದಿಂದ ವಿಷುವವೆಂಬ ದಕ್ಷಿಣದಿಕ್ಕಿನ ಕಡೆಗೆ ತೆರಳಿತು. ಆ ಸುದರ್ಶನವು ದೈತ್ಯರ ತೇಜಸ್ಸನ್ನಾಕರ್ಷಿಸಿ ಹೊರಟಮೇಲೆ ದೈತ್ಯರಾಜನಾದ ಬಲಿಯು ಬಹಳ ದುಃಖಿತನಾಗಿ ಬಹಳವುಟ್ಟಿಗೂ ವಿಪತ್ತನ್ನೇ ಹೊಂದಿ ತನ್ನ ಪಿತಾಮಹನಾದ ಪ್ರಹ್ಲಾದನನ್ನು ಸ್ಮರಿಸಿದನು. ಸ್ಮರಣಮಾತ್ರದಿಂದಲೇ ದಾನವ ಶ್ರೇಷ್ಠನಾದ ಪ್ರಹ್ಲಾದನು ಸುತಲವೆಂಬ ಆ ಪಾತಾಲಲೋಕಕ್ಕೆ ಬಂದು ಬಲಿಯ ಸಾನ್ನಿಧ್ಯವನ್ನು ಹೊಂದಿದನು. ಅವನನ್ನು ನೋಡಿದೊಡನೆಯೇ ಬಲಿಯು ಅರ್ಘ್ಯಪಾದ್ಯಾದಿ ಪೂಜಾಸಾಮಗ್ರಿಗಳೊಡನೆ ಅಲ್ಲಿ ಸಿದ್ಧನಾಗಿ ನಿಂತನು.

೨೩-೨೬. ಆಗ ಬಲಿಯು ಪಿತಾಮಹನಾದ ಪ್ರಹ್ಲಾದನನ್ನು ಯಥಾವಿಧಿಯಾಗಿ ಸತ್ಕರಿಸಿ ಕೈಮುಗಿದು ನಿಂತು ಭಕ್ತಿಯಿಂದ ಹೀಗೆ ಪ್ರಾರ್ಥಿಸಿದನು. ತಾತನೇ, ನಾನು ದುಃಖಹೊಂದಿದ ಮನಸ್ಸಿನಿಂದ ಸ್ಮರಿಸಿದೊಡನೆಯೇ ಸ್ಮರಣಮಾತ್ರದಿಂದಲೇ ನೀನು ಇಲ್ಲಿ ಸನ್ನಿಹಿತನಾದೆ. ಆದುದರಿಂದ ನೀನೇ ನನಗೆ ಹಿತವೂ ಪಥ್ಯವೂ ಸರ್ವವಿಧವಾದ ಶ್ರೇಯಸ್ಸೂ ಶುಭವೂ ಆಗಿದ್ದೀಯೆ. (ಇಲ್ಲಿ ಕಾರ್ಯಕಾರಣಗಳಿಗೆ ಅಭೇ

ಕಿಂ ಕಾರ್ಯಂ ತಾತ ಸಂಸಾರೇ ವಸತಾ ಪುರುಷೇಣ ಹಿ ।
ಕೃತೇನ ಯೇನ ವೈ ನಾಸ್ಯ ಬಂಧಃ ಸಮುಪಜಾಯತೇ ॥ ೨೫ ॥

ಸಂಸಾರಾರ್ಣವಮಗ್ನಾನಾಂ ನರಾಣಾಮಲ್ಪಮೇಧಸಾಂ ।
ತಾರಣಾಯ ಭವೇದ್ಯಸ್ತು ತನ್ಮೇ ವ್ಯಾಖ್ಯಾತುಮರ್ಹಸಿ ॥ ೨೬ ॥

ಪುಲಸ್ತ್ಯ ಉವಾಚ

ಏತದ್ವಚನಮಾಕರ್ಣ್ಯ ತತ್ಪೌತ್ರಾದ್ದಾನವೇಶ್ವರಃ ।
ವಿಚಿಂತ್ಯ ಪ್ರಾಹ ವಚನಂ ಸಂಸಾರೇ ಯದ್ಧಿತಂ ಪರಂ ॥ ೨೭ ॥

ಪ್ರಹ್ಲಾದ ಉವಾಚ

ಸಾಧು ದಾನವಶಾರ್ದೂಲ ಯತ್ತೇ ಜಾತಾ ಮತಿಸ್ತ್ವಿಯಂ ।
ಪ್ರವಕ್ಷ್ಯಾಮಿ ಹಿತಾಂ ತೇಽದ್ಯ ತಥಾಽನ್ಯೇಷಾಂ ನೃಣಾಮಪಿ ॥ ೨೮ ॥

ಭವಜಲಧಿಗತಾನಾಂ ದ್ವಂದ್ವವಾತಾಹತಾನಾಂ
ಸುತದುಹಿತೃಕಲತ್ರತ್ರಾಣ ಭಾರಾರ್ದಿತಾನಾಂ ।

ದೋಪಚಾರ) ಆದುದರಿಂದ ಈ ವಿಷಯವನ್ನು ನನಗೆ ದಯೆಯಿಂದ ಉಪದೇಶಿಸು. ಸಂಸಾರದಲ್ಲಿ ಸಿಲುಕಿರುವ ಮನುಷ್ಯನ ಕರ್ತವ್ಯವೇನು, ಯಾವ ಕಾರ್ಯವನ್ನು ಮಾಡಿದಲ್ಲಿ ಮನುಷ್ಯನಿಗೆ ಈ ಬಂಧವು ತಪ್ಪುವುದು. ಸಂಸಾರದಲ್ಲಿಯೇ ಮುಳು ಗಿರುವ ಮಂದಬುದ್ಧಿಗಳಾದ ಮನುಷ್ಯರಿಗೆ ಇದನ್ನು ದಾಟಿಸಲು ಯಾವ ಕಾರ್ಯವು ಸಮರ್ಥವಾದೀತು ಇದನ್ನು ದಯೆಯಿಟ್ಟು ಹೇಳಬೇಕು.

೨೭-೨೮. ಪುಲಸ್ತ್ಯರು ಹೇಳುತ್ತಾರೆ. ಮೊಮ್ಮಗನಾದ ಬಲಿಯಿಂದ ಹೇಳಲ್ಪಟ್ಟ ಈ ಮಾತನ್ನು ಕೇಳಿ ದಾನವಶ್ರೇಷ್ಠನಾದ ಪ್ರಹ್ಲಾದನು ಸಂಸಾರದಲ್ಲಿ ಮನುಷ್ಯನಿಗೆ ಯಾವುದು ಹಿತವೆಂಬುದನ್ನು ಆಲೋಚಿಸಿ ಹೀಗೆ ಹೇಳಿದನು. ಪ್ರಹ್ಲಾದನು ಹೇಳುತ್ತಾನೆ. ಎಲೈ ದಾನವಶ್ರೇಷ್ಠನೇ ನಿನಗೆ ಈ ಬುದ್ಧಿಯುಂಟಾದದ್ದು ಬಹಳ ಶ್ಲಾಘ್ಯವಾದುದು. ನಿನಗೂ ಇತರ ಮನುಷ್ಯರಿಗೂ ಸಹ ಯಾವುದು ಹಿತ ವೆಂಬುದನ್ನು ಹೇಳುತ್ತೇನೆ. ಸಂಸಾರವೆಂಬ ಮಹಾಸಮುದ್ರವನ್ನು ಹೊಕ್ಕು ಶೀತೋಷ್ಣಸುಖದುಃಖಗಳೇ ಮೊದಲಾದ ದ್ವಂದ್ವವಾಯುವಿನಿಂದ ಇತ್ತಕಡೆಗೂ ಅತ್ತ ಕಡೆಗೂ ಹೊಡೆಯಲ್ಪಟ್ಟು ಪತ್ನೀಪುತ್ರರೇ ಮೊದಲಾದವರ ರಕ್ಷಣಭಾರದಿಂದ ದುಃಖ

ವಿಷಯವಿಷಮತೋಯೇ ಮಜ್ಜತಾಮಪ್ಲವಾನಾಂ
ಭವತಿ ಶರಣಮೇಕೋ ವಿಷ್ಣುಪೋತೋ ನರಾಣಾಂ ॥ ೨೯ ॥

ಯೇ ಸಂಶ್ರಿತಾ ಹರಿಮನಂತಮನಿಂದ್ಯಮಾದ್ಯಂ
ನಾರಾಯಣಂ ಸುರಗುರುಂ ಶುಭದಂ ವರೇಣ್ಯಂ ।
ಶುದ್ಧಂ ಖಗೇಂದ್ರಗಮನಂ ಕಮಲಾಲಯೇಶಂ
ತೇ ಧರ್ಮರಾಜ ಶರಣಂ ನ ವಿಶಂತಿ ಧೀರಾಃ ॥ ೩೦ ॥

ಸ್ವಪುರುಷಮಭಿವೀಕ್ಷ್ಯ ಪಾಶಹಸ್ತಂ
ವದತಿ ಯಮಃ ಕಿಲ ತಸ್ಯ ಕರ್ಣಮೂಲೇ ।
ಪರಿಹರ ಮಧುಸೂದನ ಪ್ರಸನ್ನಾ
ನ್ಪ್ರಭುರಹಮನ್ಯನೃಣಾಂ ನ ವೈಷ್ಣವಾನಾಂ ॥ ೩೧ ॥

ತಥಾನ್ಯದುಕ್ತಂ ನರಸತ್ತಮೇನ
ಇಕ್ಷ್ವಾಕುಣಾ ಭಕ್ತಿಯುಕ್ತೇನ ನೂನಂ ।

ಪಟ್ಟು ದುಃಖಪ್ರದಗಳಾದ ವಿಷಯಗಳೆಂಬ ನೀರಿನಲ್ಲಿ ಮುಳುಗುತ್ತಿರುವ ಆಶ್ರಯವಿಲ್ಲದ ಜನಗಳಿಗೆ ವಿಷ್ಣುವೆಂಬ ದೋಣಿಯೇ ಈ ಸಮುದ್ರವನ್ನು ದಾಟಲು ಸಾಧನವಾದೀತು. ಮತ್ತಾವುದೂ ಇಲ್ಲ.

೩೦. ಯಾರು ಸ್ವರೂಪದಿಂದಲೂ. ಮಹಿಮೆಯಿಂದಲೂ, ಅಪಾರನಾಗಿಯೂ, ನಿರ್ದೋಷನಾಗಿಯೂ, ಆದಿಮೂರ್ತಿಯಾಗಿಯೂ, ಶುಭಪ್ರದನಾಗಿಯೂ, ಸುರಾಧಿಪನಾಗಿಯೂ, ಸರ್ವಸಮಾಶ್ರಯಣೀಯನಾಗಿಯೂ, ಗರುಡವಾಹನನಾಗಿಯೂ. ಶುದ್ಧ ಸತ್ವ ಮೂರ್ತಿಯಾಗಿಯೂ, ಲಕ್ಷ್ಮೀಪತಿಯಾಗಿಯೂ ಇರುವ ನಾರಾಯಣನನ್ನು ಆಶ್ರಯಿಸಿರುವರೋ ಅಂತಹ ಧೀರರು ಯಮನ ಸ್ಥಾನವನ್ನು ಪ್ರವೇಶಿಸುವುದಿಲ್ಲ.

೩೧-೩೨. ಅಂತಹ ವೈಷ್ಣವಾಗ್ರೇಸರನ ಸಮೀಪಕ್ಕೆ ಪಾಶಧಾರಿಯಾಗಿ ಬಂದ ತನ್ನ ಕಿಂಕರನನ್ನು ನೋಡಿ ಯಮನು ಮಧುಸೂದನನ ಭಕ್ತರನ್ನು ನೀನು ಬಿಟ್ಟು ಬಿಡು, ಇತರರಿಗೆ ನಾನು ಪ್ರಭವೇ ಹೊರತು ವೈಷ್ಣವರಿಗೆ ನಾನು ಪ್ರಭುವಲ್ಲ ಎಂದು ಆ ಭೃತ್ಯನ ಕಿವಿಯಲ್ಲಿ ಹೇಳುತ್ತಾನೆ. ಹಾಗೆಯೇ ಪ್ರಪಂಚದಲ್ಲಿ ಯಾರು ವಿಷ್ಣುಭಕ್ತ

ಯೇ ವಿಷ್ಣುಭಕ್ತಾಃ ಪುರುಷಾಃ ಪೃಥಿವ್ಯಾಂ
ಯಮಸ್ಯ ತೇ ನಿರ್ವಿಷಯಾ ಭವಂತಿ ॥ ೩೨ ॥

ಸಾ ಜಿಹ್ವಾ ಯಾ ಹರಿಂ ಸ್ತೌತಿ ತಚ್ಚಿತ್ತಂ ಯತ್ತದರ್ಪಿತಂ ।
ತಾವೇವ ಕೇವಲೌ ಶ್ಲಾಘ್ಯೌ ಯೌ ತತ್ಪೂಜಾಕರೌ ಕೃತೌ ॥ ೩೩ ॥

ನೂನಂ ನ ತೌ ಕರೌ ಪ್ರೋಕ್ತೌ ವೃಕ್ಷಶಾಖಾಗ್ರಪಲ್ಲವೌ ।
ನ ಯೌ ಪೂಜಯಿತುಂ ಶಕ್ತೌ ಹರಿಪಾದಾಂಬುಜದ್ವಯಂ ॥ ೩೪ ॥

ನೂನಂ ತತ್ಕಂಠಶಾಲೂಕಮಥವಾ ಪ್ರತಿಜಿಹ್ವಿಕಾ ।
ರೋಗಶ್ಚಾನ್ಯೋ ನ ಸಾ ಜಿಹ್ವಾ ಯಾ ನ ವಕ್ತಿ ಹರೇರ್ಗುಣಾನ್ ॥ ೩೫ ॥

ರಾಗಿರುವರೋ, ಅವರು ಯಮನ ಆಜ್ಞೆಗೆ ಗುರಿಯಾಗುವುದಿಲ್ಲ ಎಂದು ಭಕ್ತಾಗ್ರೇಸರನಾದ ಇಕ್ಷ್ವಾಕುವೆಂಬ ರಾಜರ್ಷಿಯು ಹೇಳಿರುವುದೂ ಸತ್ಯವಾದ ಮಾತು.

೩೩-೩೪. ಯಾವ ನಾಲಗೆಯು ಹರಿಯನ್ನು ಸ್ತೋತ್ರಮಾಡುತ್ತದೆಯೋ ಅದೇ ಪ್ರಶಸ್ತವಾದ ನಾಲಗೆ, ಯಾವ ಮನಸ್ಸು ಹರಿಯಲ್ಲಿ ತತ್ಪರತೆಯಿಂದ ಅರ್ಪಿಸಲ್ಪಡುವದೋ ಅಂತಹ ಮನಸ್ಸೇ ಪ್ರಶಸ್ತವಾದ ಮನಸ್ಸು, ಯಾವ ಕೈಗಳು ಅವನ ಪೂಜೆಯಲ್ಲಿ ಆಸಕ್ತವಾಗುವುವೋ ಅಂತಹ ಕೈಗಳೇ ಶ್ಲಾಘ್ಯವಾದ ಕೈಗಳು, ಯಾವ ಕೈಗಳು ಹರಿಯ ಪಾದ ಕಮಲಗಳನ್ನು ಪೂಜಿಸಲು ಸಮರ್ಥಗಳಾಗುವುದಿಲ್ಲವೋ, ಮರ, ಕೊಂಬೆ, ಚಿಗರು ಮೊದಲಾದ ಅನ್ಯವಿಷಯಗಳಲ್ಲಿ ನಿರತಗಳಾದ ಆ ಕೈಗಳು ಕೈಗಳೇ ಅಲ್ಲ.

೩೫. ಯಾವ ನಾಲಗೆಯು ಹರಿಯ ಗುಣಗಳನ್ನು ಗಾನಮಾಡುವುದಿಲ್ಲವೋ, ಅಂತಹ ನಾಲಗೆಯೂ ನಾಲಗೆಯೇ ಅಲ್ಲ. ಅದು ಕಂಠಕ್ಕೆ ತೊಂದರೆ ಕೊಡುವ ಒಂದು ಗೆಡ್ಡೆ. ಅಥವಾ ಕೃತ್ರಿಮವಾದ ಬಣ್ಣದ ನಾಲಗೆ, ಅಥವಾ ಅದೊಂದು ವಿಲಕ್ಷಣವಾದ ರೋಗ.

ಶೋಚನೀಯಃ ಸ ಬಂಧೂನಾಂ ಜೀವನ್ನಪಿ ಮೃತೋ ನರಃ ।
ಯಃ ಪಾದಪಂಕಜಂ ವಿಷ್ಣೋರ್ನ ಪೂಜಯತಿ ಭಕ್ತಿತಃ ॥ ೩೬ ॥

ಯೇ ನರಾ ವಾಸುದೇವಸ್ಯ ಸತತಂ ಪೂಜನೇ ರತಾಃ ।
ಮೃತಾ ಅಪಿ ನ ಶೋಚ್ಯಾಸ್ತೇ ಸತ್ಯಂ ಸತ್ಯಂ ಮಯೋದಿತಂ ॥ ೩೭ ॥

ಶಾರೀರಂ ಮಾನಸಂ ವಾಗ್ಜಂ ಮೂರ್ತಾಮೂರ್ತಂ ಚರಾಚರಂ ।
ದೃಶ್ಯಂ ಸ್ಪೃಶ್ಯಮದೃಶ್ಯಂ ವಾ ತತ್ಸರ್ವಂ ಕೇಶವಾತ್ಮಕಂ ॥ ೩೮ ॥

ಯೇನಾರ್ಚಿತೋ ಹಿ ಭಗವಾನ್ *ಚತುರ್ಧಾಪಿ ತ್ರಿವಿಕ್ರಮಃ ।
ತೇನಾರ್ಚಿತಾ ನ ಸಂದೇಹೋ ಲೋಕಾಃ ಸಾಮರದಾನವಾಃ ॥ ೩೯ ॥

೩೬-೩೮. ಯಾವ ಮನುಷ್ಯನು ವಿಷ್ಣುವಿನ ಪಾದಪದ್ಮಗಳನ್ನು ಭಕ್ತಿಯಿಂದ ಪೂಜಿಸುವುದಿಲ್ಲವೋ ಅಂತಹವನು ಎಲ್ಲಾ ಬಂಧುಗಳಿಂದಲೂ ಶೋಚನೀಯನಾಗುವನು. ಅವನು ಬದುಕಿದ್ದರೂ ಮೃತನೇ ಆಗುತ್ತಾನೆ. ಯಾವ ಪುಣ್ಯಶಾಲಿಗಳು ಇರುವವರಿಗೂ ವಾಸುದೇವನ ಪೂಜೆಯಲ್ಲಿ ನಿರತರಾಗಿರುವರೋ ಅವರು ಮೃತರಾದರೂ ಬಂಧುಗಳಿಗೂ ಇತರರಿಗೂ ದುಃಖಪ್ರದರಾಗುವುದಿಲ್ಲ. ಈ ನನ್ನ ಮಾತು ಸತ್ಯವಾದುದು, ಸತ್ಯವಾದುದು. ಲೋಕದಲ್ಲಿ ಶಾರೀರವಾಗಿಯೂ ಮಾನಸವಾಗಿಯೂ ವಾಚನಿಕವಾಗಿಯೂ ಉಂಟಾಗಬಹುದಾದ ಗುಣದೋಷಗಳಿಗೂ ದೃಶ್ಯವಾಗಿಯೂ ಅದೃಶ್ಯವಾಗಿಯೂ ಸ್ಪಶ್ಯವಾಗಿಯೂ ಇರುವ ಚರಾಚರವಸ್ತುಗಳಿಗೂ ಆ ಕೇಶವನೇ ನಿಯಾಮಕನಾಗಿರುವನು. ಆದುದರಿಂದ ಸಮಸ್ತವೂ ಕೇಶವಾತ್ಮಕವಾದದು.

೩೯-೪೦. ಯಾವ ಮನುಷ್ಯನು ಪೂಜ್ಯನಾದ ತ್ರಿವಿಕ್ರಮನನ್ನು ನಾಲ್ಕು ರೀತಿಯಿಂದಲೂ ಪೂಜಿಸುತ್ತಾನೆಯೋ ಅಂತಹ ಮನುಷ್ಯನು ಮನುಷ್ಯದೇವದಾನವಾದಿ ಸಹಿತವಾದ ಸರ್ವಲೋಕವನ್ನೂ ಪೂಜಿಸಿದಂತಾಗುತ್ತದೆ. (ನಮಸ್ಕಾರವೇ ಮೊದಲಾದ ದೇಹವ್ಯಾಪಾರದಿಂದಲೂ ಧ್ಯಾನಸ್ಮರಣವೇ ಮೊದಲಾದ ಮನೋ

---

* ಕಾಯೇನ ಮನಸಾ ವಾಚಾ ಕೇವಲೈರಿಂದ್ರಿಯೈರಪಿ । ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮ ಶುದ್ಧಯೆ ॥ ಎಂಬ ಗೀತಾವಚನವು ಸೂಚಿಸಲ್ಪಡುತ್ತದೆ.

ಯಥಾ ರತ್ನಾನಿ ಜಲಧೇರಸಂಖ್ಯೇಯಾನಿ ಪುತ್ರಕ।
ತಥಾ ಗುಣಾಶ್ಚ ದೇವಸ್ಯ ತ್ವಸಂಖ್ಯೇಯಾ ಹಿ ಚಕ್ರಿಣಃ ॥ ೪೦ ॥

ಯೇ ಶಂಖಚಕ್ರಾಬ್ಜಕರಂ ಚ ಶಾರ್ಙ್ಗಿಣಂ
ಖಗೇಂದ್ರಕೇತುಂ ವರದಂ ಶ್ರಿಯಃ ಪತಿಂ।
ಸಮಾಶ್ರಿತಾಸ್ತೇ ನ ಭವಂತಿ ದುಃಖಿತಾಃ
ಸಂಸಾರಗರ್ತೇ ನ ಪತಂತಿ ತೇ ಪುನಃ ॥ ೪೧ ॥

ಯೇಷಾಂ ಮನಸಿ ಗೋವಿಂದೋ ನಿವಾಸೀ ಸತತಂ ಭವೇತ್।
ನ ತೇ ಪರಿಭವಂ ಯಾಂತಿ ನ ಮೃತ್ಯೋರುದ್ವಿಜಂತಿ ಚ ॥ ೪೨ ॥

ದೇವಂ ಶಾರ್ಙ್ಗಧರಂ ವಿಷ್ಣುಂ ಯೇ ಪ್ರಪನ್ನಾಃ ಪರಾಯಣಂ।
ನ ತೇಷಾಂ ಯಮಲೋಕೋಽಸ್ತಿ ನ ಚ ತೇ ನರಕೌಕಸಃ ॥ ೪೩ ॥

ವ್ಯಾಪಾರದಿಂದಲೂ ಕೀರ್ತನಸ್ತುತಿರೂಪವಾದ ವಾಗ್ವ್ಯಾಪಾರದಿಂದಲೂ ಇವುಗಳೊಡ ಗೂಡಿದ ಯಜ್ಞ, ಯಾಗ, ನಿತ್ಯನೈಮಿತ್ತಿಕಕರ್ಮ, ದೇವಪೂಜಾದಿ ಶಾಸ್ತ್ರೋಕ್ತ ವಿಧಾನದಿಂದಲೂ ಪೂಜೆಯು ನಾಲ್ಕುವಿಧವೆಂದು ಹೇಳಲ್ಪಟ್ಟಿದೆ.) ಎಲೈ ಪುತ್ರನೇ, ಸಮುದ್ರದಲ್ಲಿರುವ ರತ್ನಗಳಿಗೆ ಹೇಗೆ ಗಣನೆಯೇ ಇಲ್ಲವೋ ಹಾಗೆಯೇ ಹರಿಯಲ್ಲಿ ನೆಲಸಿರುವ ಗುಣಗಳೂ ಅಸಂಖ್ಯಾತವಾದುವು.

೪೧-೪೩. ಯಾರು ಶಂಖಚಕ್ರಗದಾಪಾಣಿಯಾಗಿಯೂ ಶಾರ್ಙ್ಗಧಾರಿಯಾಗಿಯೂ ಗರುಡವಾಹನನಾಗಿಯೂ ಇರುವ ವರಪ್ರದನಾದ ಆ ಲಕ್ಷ್ಮೀಪತಿಯನ್ನು ಆಶ್ರಯಿಸುವರೋ ಅವರು ಎಂದೂ ದುಃಖಭಾಗಿಗಳಾಗುವುದಿಲ್ಲ. ಸಂಸಾರವೆಂಬ ಈ ಕೊರಕಲಿನಲ್ಲಿ ಪುನಃ ಅವರು ಬೀಳುವುದೇ ಇಲ್ಲ. ಯಾರ ಮನಸ್ಸಿನಲ್ಲಿ ಆ ಗೋವಿಂದನು ನಿತ್ಯನಿವಾಸಿಯಾಗಿರುವನೋ ಅವರು ಎಂದಿಗೂ ಯಾರಿಂದಲೂ ಪರಿಭವವನ್ನು ಹೊಂದುವುದಿಲ್ಲ. ಮೃತ್ಯುಭಯದಿಂದ ದುಃಖಿಸುವುದೂ ಇಲ್ಲ. ಶಾರ್ಙ್ಗಧಾರಿಯಾದ ಆ ಮಹಾವಿಷ್ಣುವನ್ನು ಪ್ರಪತ್ತಿ ಎಂಬ ಲಘೂಪಾಯದಿಂದ ಆಶ್ರಯಿಸಿರುವರೋ ಅಂತಹವರಿಗೆ ಯಮಲೋಕದ ಭಯವೂ ಇಲ್ಲ. ಅವರು ನರಕವನ್ನೂ ಸೇವಿಸುವ ಸಂಭವವಿಲ್ಲ.

ಸತಾಂ ಗತಿಂ ಪ್ರಾಪ್ನುವಂತಿ ಶ್ರುತಿಶಾಸ್ತ್ರವಿಶಾರದಾಃ ।
ಯಾಂತಿ ದಾನವಶಾರ್ದೂಲ ವಿಷ್ಣುಭಕ್ತಾ ವ್ರಜಂತಿ ತಾಂ ॥ ೪೪ ॥

ಯಾ ಗತಿರ್ದೈತ್ಯಶಾರ್ದೂಲ ಸಂಗ್ರಾಮೇ ನಿಹತಾತ್ಮನಾಂ ।
ತತೋಽಧಿಕಾಂ ಗತಿಂ ಯಾಂತಿ ವಿಷ್ಣುಭಕ್ತಾ ನರೋತ್ತಮಾಃ ॥ ೪೫ ॥

ಯಾ ಗತಿರ್ಧರ್ಮಶೀಲಾನಾಂ ಸಾತ್ವಿಕಾನಾಂ ಮಹಾತ್ಮನಾಂ ।
ಸಾ ಗತಿರ್ಗದಿತಾ ದೈತ್ಯ ಭಗವದ್ವೇದಿನಾಮಪಿ ॥ ೪೬ ॥

ಸರ್ವಾವಾಸಂ ವಾಸುದೇವಂ ಸೂಕ್ಷ್ಮಮವ್ಯಕ್ತವಿಗ್ರಹಂ ।
ಪ್ರಪಶ್ಯಂತಿ ಮಹಾತ್ಮಾನಸ್ತೀರ್ಥಭೂತಾ ಭವಚ್ಛಿದಂ ॥ ೪೭ ॥

೪೪-೪೬. ವೇದಶಾಸ್ತ್ರಗಳಲ್ಲಿ ಪಂಡಿತರಾಗಿ ತಮ್ಮ ತಮ್ಮ ಜ್ಞಾನಕ್ಕೆ ಉಚಿತವಾದ ಆಚರಣೆಗಳಿಂದ ಜ್ಞಾನಿಗಳಾದವರು ಯಾವ ಸದ್ಗತಿಯನ್ನು ಹೊಂದುತ್ತಾರೆಯೋ ಅಂತಹ ಸದ್ಗತಿಯನ್ನೇ ವಿಷ್ಣುಭಕ್ತರು ಹೊಂದುತ್ತಾರೆ. ಎಲೈ ದೈತ್ಯಶ್ರೇಷ್ಠನೇ, ಯುದ್ಧದಲ್ಲಿ ಪರಾಙ್ಮುಖರಾಗದೆ ಅಲ್ಲಿಯೇ ಹತರಾದವರು ಯಾವ ಸದ್ಗತಿಯನ್ನು ಹೊಂದುತ್ತಾರೆಯೋ ವಿಷ್ಣುಭಕ್ತರಾದ ಮನುಷ್ಯಶ್ರೇಷ್ಠರೂ ಸಹ ಅದಕ್ಕಿಂತಲೂ ಉನ್ನತವಾದ ಸದ್ಗತಿಯನ್ನು ಹೊಂದುತ್ತಾರೆ. ಸಾತ್ವಿಕರಾಗಿ ಧರ್ಮನಿರತರಾಗಿರುವ ಮಹಾತ್ಮರು ಯಾವ ಸದ್ಗತಿಯನ್ನು ಹೊಂದುತ್ತಾರೆಯೋ ಭಗವಂತನ ಸ್ವರೂಪವನ್ನು ತಿಳಿದಿರುವ ಭಕ್ತರಿಗೂ ಅಂತಹ ಸದ್ಗತಿಯೇ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ

೪೭-೪೮. ಪ್ರಪಂಚದ ಎಲ್ಲಾ ಭಾಗದಲ್ಲಿಯೂ ಜಗದ್ರೂಪನಾಗಿ ಸೂಕ್ಷ್ಮನಾಗಿಯೂ ಅವ್ಯಕ್ತಮೂರ್ತಿಯಾಗಿಯೂ ನೆಲಸಿರುವ ಸಂಸಾರನಾಶಕನಾದ ಆ *ವಾಸುದೇವನನ್ನು ಪುಣ್ಯಶಾಲಿಗಳಾದ ಮಹಾತ್ಮರೇ ಸಾಕ್ಷಾತ್ಕರಿಸುತ್ತಾರೆ. (ಅಲ್ಪಜ್ಞರಾದ ಸಾಮಾನ್ಯರಿಂದ ಅದು ಸಾಧ್ಯವಾಗುವುದಿಲ್ಲವೆಂದು ತಾತ್ಪರ್ಯ) ಅಂತಹ ಪರಮಾತ್ಮನನ್ನು ಶಾಸ್ತ್ರರೀತಿಯಿಂದ ಸೇವಿಸಿದವನು ಪುನಃ ಸಂಸಾರದಲ್ಲಿ ಬೀಳುವದೇ ಇಲ್ಲ.

* ಸರ್ವತ್ರಾಸೌ ಸಮಸ್ತಂ ಚ ವಸತ್ಯತ್ರೇತಿ ವೈ ಯತಃ। ತತಸ್ಸ ವಾಸುದೇವೇತಿ ವಿದ್ವದ್ಭಿಃ ಪರಿಪಠ್ಯತೇ॥ ಎಂಬ ಅವಯವಾರ್ಥ ಇಲ್ಲಿ ಸಂಗ್ರಹಿಸಲಾಗಿದೆ.

ಪ್ರಣಿಪತ್ಯ ಯಥಾನ್ಯಾಯಂ ಸಂಸಾರೇ ನ ಪುನರ್ಭವೇತ್ ।
ಕೃತೇಷು ವಸತೇ ನಿತ್ಯಂ ಕ್ರೀಡಾನ್ನಾಸ್ತ್ಯೇಮಿತದ್ಯುತಿಃ ॥ ೪೮ ॥

ಆಸೀನಃ ಸರ್ವದೇಹೇಷು ಕರ್ಮಭಿರ್ನ ಸ ಬಧ್ಯತೇ ।
ಯೇಷಾಂ ವಿಷ್ಣುಃ ಪ್ರಿಯೋ ನಿತ್ಯಂ ತೇ ವಿಷ್ಣೋಃ ಸತತಂ ಪ್ರಿಯಾಃ॥ ೪೯ ॥

ನ ತೇ ಪುನಃ ಸಂಭವಂತಿ ತದ್ಭಕ್ತಾಸ್ತತ್ಪರಾಯಣಾಃ ।
ಧ್ಯಾಯೇದ್ದಾಮೋದರಂ ಯಸ್ತು ಭಕ್ತಿನಮ್ರಸ್ತಥಾರ್ಚಯೇತ್ ॥ ೫೦ ॥

ನ ಹಿ ಸಂಸಾರಪಂಕೇಽಸ್ಮಿನ್ಮಜ್ಜತೇ ದಾನವೇಶ್ವರ ।
ಕಲ್ಯಮುತ್ಥಾಯ ಯೇ ಭಕ್ತ್ಯಾ ಸ್ಮರಂತಿ ಮಧುಸೂದನಂ ॥ ೫೧ ॥

ಶ್ರಾವಯಂತಿ ಚ ಶೃಣ್ವಂತಿ ದುರ್ಗಾಣ್ಯತಿತರಂತಿ ತೇ ॥ ೫೨ ॥

ಸುಕೃತಶಾಲಿಯಾಗಿಯೇ ಅವನು ವಾಸಿಸುತ್ತಾನೆ. ತೇಜಸ್ವಿಯಾಗಿ ಲೀಲೆಯಿಂದ ಸಂತೋಷಿಸುತ್ತಾನೆ. (ಅವನ ವ್ಯಾಪಾರಗಳೆಲ್ಲವೂ ಸ್ವಯಂಪ್ರಯೋಜನವಾದ ಲೀಲಾ ರೂಪವೇ ಹೊರತು ಫಲೇಚ್ಛಾಮೂಲಕವಲ್ಲ. ಸಕಲಫಲಗಳನ್ನೂ ಬಿಟ್ಟು ಅವನು ಪರಿಪೂರ್ಣನಾಗಿರುವುದೇ ಇಂತಹ ಲೀಲಾರತಿಗೆ ಕಾರಣವೆಂದು ತಾತ್ಪರ್ಯ)

೪೯-೫೦. ಅವನು ಸ್ವೇಚ್ಛೆಯಿಂದ ಯಾವ ಯಾವ ದೇಹಗಳನ್ನು ಹೊಂದಿದರೂ ಕರ್ಮಬಂಧವು ಅವನಿಗಿರುವುದಿಲ್ಲ. (ಇಚ್ಛಾನಿರ್ಮಿತವಾದ ಅವನ ದೇಹವು ಕರ್ಮಸಂಬಂಧಮೂಲಕವಲ್ಲ) ಯಾರಿಗೆ ವಿಷ್ಣುವಿನಲ್ಲಿ ದೃಢವಾದ ಪ್ರೀತಿ ಇರುವುದೋ ಅಂತಹವರು ವಿಷ್ಣುವಿನ ಪ್ರೀತಿಗೂ ಪಾತ್ರರಾಗುತ್ತಾರೆ. ಅಂತಹ ವಿಷ್ಣುವಿನಲ್ಲಿ ಭಕ್ತರಾಗಿ ಅವನನ್ನೇ ಗತಿಯೆಂದು ನಂಬಿರುವವರು ಪುನಃ ಜನ್ಮವನ್ನೇ ಹೊಂದುವುದಿಲ್ಲ. ಎಲೈ ದಾನವೇಶ್ವರನೇ ಅಂತಹ ದಾಮೋದರನನ್ನು ಯಾರು ಧ್ಯಾನಮಾಡುತ್ತಾರೆಯೋ ಭಕ್ತಿಯಿಂದ ಪೂಜಿಸುತ್ತಾರೆಯೋ ಅಂತಹವರು ಈ ಸಂಸಾರವೆಂಬ ಕೆಸರಿನಲ್ಲಿ ಬೀಳುವದೇ ಇಲ್ಲ.

೫೧-೫೨. ಯಾರು ಪ್ರಾತಃಕಾಲದಲ್ಲಿ ಎದ್ದು ಆ ಮಧುಸೂದನನ್ನು ಭಕ್ತಿಯಿಂದ ಸ್ಮರಿಸುತ್ತಾರೆಯೋ ಅವನ ಮಹಿಮೆಯನ್ನು ಹೇಳುತ್ತಾರೆಯೋ ಅಥವಾ ಕೇಳುತ್ತಾರೆಯೋ ಅವರು ಸರ್ವದುಃಖಗಳನ್ನೂ ದಾಟುತ್ತಾರೆ.

ಹರಿಗಾಥಾಮೃತಂ ಪೀತ್ವಾ ಬಲೇ ವೈ ಶ್ರೋತ್ರಭಾಜನೈಃ ।
ಪ್ರಹೃಷ್ಯತಿ ಮತೋ ಯೇಷಾಂ ದುರ್ಗಾಣ್ಯತಿತರಂತಿ ತೇ ॥ ೫೩ ॥

ಯೇಷಾಂ ಚಕ್ರಗದಾಪಾಣೌ ಭಕ್ತಿರವ್ಯಭಿಚಾರಿಣೀ ।
ತೇ ಯಾಂತಿ ನಿಯತಂ ಸ್ಥಾನಂ ಯತ್ರ ಯೋಗೇಶ್ವರೋ ಹರಿಃ ॥ ೫೪ ॥

ವಿಷ್ಣುಧರ್ಮಪ್ರಸಕ್ತಾನಾಂ ತೇಷಾಂ ಯಾ ಪರಮಾ ಗತಿಃ ।
ಸಾ ತು ಜನ್ಮಸಹಸ್ರೇಣ ನ ತಪೋಭಿರವಾಪ್ಯತೇ ॥ ೫೫ ॥

ಕಿಂ ಜಪ್ತೈಸ್ತಸ್ಯ ಮಂತ್ರೈರ್ವಾ ಕಿಂ ತಪೋಭಿಃ ಕಿಮಾಶ್ರಮೈಃ ।
ಯಸ್ಯ ನಾಸ್ತಿ ಪರಾಭಕ್ತಿಃ ಸತತಂ ಮಧುಸೂದನೇ ॥ ೫೬ ॥

೫೩-೫೫. ಎಲೈ ಬಲಿಯೇ ಯಾವ ಭಾಗ್ಯಶಾಲಿಗಳ ಮನಸ್ಸು ಕಿವಿಯೆಂಬ ಪಾತ್ರೆಗಳಿಂದ ಹರಿಯ ಕಥೆ ಎಂಬ ಅಮೃತವನ್ನು ಪಾನಮಾಡಿ ಸಂತೋಷಪಡುವುದೋ ಅಂತಹ ಪುಣ್ಯಶಾಲಿಗಳು ಸಮಸ್ತ ದುರ್ಗಗಳನ್ನೂ ದಾಟುತ್ತಾರೆ. ಚಕ್ರಗದಾಪಾಣಿಯಾದ ಆ ಹರಿಯಲ್ಲಿ ಯಾರ ಭಕ್ತಿಯು ಮತ್ತೊಂದು ವಿಷಯದಲ್ಲಿ ಪ್ರವರ್ತಿಸದೆ ನಿಯತವಾಗಿ ನೆಲಸುವುದೋ ಅಂತಹವರು ಯೋಗೇಶ್ವರನಾದ ಆ ಹರಿಯ ಸ್ಥಾನವನ್ನೇ ಹೊಂದುವರು. ವೈಷ್ಣವ ಧರ್ಮದಲ್ಲಿ ಆಸಕ್ತರಾದ ಅವರಿಗೆ ಎಂತಹ ಉನ್ನತವಾದ ಗತಿಯು ಲಭಿಸುವುದೋ ಅಂತಹ ಗತಿಯು ಜನ್ಮಸಹಸ್ರಪರ್ಯಂತ ತಪಸ್ಸು ಮಾಡುವವರಿಗೂ ಲಭಿಸಲಾರದು.

೫೬. ಯಾವನಿಗೆ ಮಧುಸೂದನನಲ್ಲಿ ಉತ್ಕೃಷ್ಟವಾದ ಭಕ್ತಿ ಇರುವದಿಲ್ಲವೋ ಅಂತಹವನಿಗೆ ಜಪಿಸಲು ಯೋಗ್ಯಗಳಾದ ಮಹಾ ಮಂತ್ರಗಳಿಂದಲೇ ಆಗಲಿ, ತಪಸ್ಸಿನಿಂದಲೇ ಆಗಲಿ, ಆಶ್ರಮೋಚಿತ ಕರ್ಮಗಳಿಂದಲೇ ಆಗಲಿ ಏನು ಫಲ. (ಇಲ್ಲಿ ಭಕ್ತಿಯಿಂದೊಡಗೂಡಿದ ಜಪಾದಿಗಳಿಗೆ ಉತ್ಕರ್ಷವೇ ಹೊರತು ಭಕ್ತಿರಹಿತವಾದ ಕೇವಲ ಜಪಾದಿಗಳು ನಿಷ್ಫಲವೆಂಬ ತಾತ್ಪರ್ಯದಿಂದ ವಿಷ್ಣು ಭಕ್ತಿಯಲ್ಲಿ ಉತ್ಕರ್ಷವು ನಿರೂಪಿತವಾಗಿದೆ ಆದುದರಿಂದ ಮಹಾಮಂತ್ರಜಪದ ತಿರಸ್ಕಾರವು ಮೊದಲು ತೋರಿಬಂದರೂ ಮಂತ್ರಗಳ ತಿರಸ್ಕಾರವೇ ಇಲ್ಲಿ ವಿವಕ್ಷಿತವಲ್ಲ, ಹರಿಭಕ್ತಿಯ ಉತ್ಕರ್ಷಬೋಧನದಲ್ಲಿ ತಾತ್ಪರ್ಯ, ಗೀತೆಯಲ್ಲಿಯೂ ಯಥಾರ್ಥವಾದ ಆತ್ಮತತ್ವ ಜ್ಞಾನದಿಂದೊಡಗೂಡಿದ ಕರ್ಮಯೋಗಾದಿಗಳೇ ಫಲಪ್ರದವೆಂಬುದನ್ನು ಉಪದೇಶಿಸಲಾಗಿದೆ)

ವೃಥಾ ಯಜ್ಞೋ ವೃಥಾ ದಾನಂ ವೃಥಾ ಧರ್ಮೋ ವೃಥಾಶ್ರಮಃ ।
ವೃಥಾ ತಪಶ್ಚ ಕೀರ್ತಿಶ್ಚ ಯೋ ದ್ವೇಷ್ಟಿ ಮಧುಸೂದನಂ ॥ ೫೭ ॥

ಕಿಂ ತಸ್ಯ ಬಹುಭಿರ್ಮಂತ್ರೈರ್ಭಕ್ತಿರ್ಯಸ್ಯ ಜನಾರ್ದನೇ ।
ನಮೋ ನಾರಾಯಣಾಯೇತಿ ಮಂತ್ರಃ ಸರ್ವಾರ್ಥಸಾಧಕಃ ॥ ೫೮ ॥

ವಿಷ್ಣುರ್ಯೇಷಾಂ ಜಯಸ್ತೇಷಾಂ ಕುತಸ್ತೇಷಾಂ ಪರಾಜಯಃ ।
ಯೇಷಾಮಿಂದೀವರಶ್ಯಾಮೋ ಹೃದಯಸ್ಥೋ ಜನಾರ್ದನಃ ॥ ೫೯ ॥

ಸರ್ವಮಂಗಲಮಾಂಗಲ್ಯಂ ವರೇಣ್ಯಂ ವರದಂ ಪ್ರಭುಂ ।
ನಾರಾಯಣಂ ನಮಸ್ಕೃತ್ಯ ಸರ್ವಕರ್ಮಾಣಿ ಕಾರಯೇತ್ ॥ ೬೦ ॥

೫೭-೫೮. ಯಾರು ಅಂತಹ ಮಧುಸೂದನನಲ್ಲಿ (ಪ್ರೀತಿಇಲ್ಲದೆ) ದ್ವೇಷವನ್ನೇ ಹೊಂದಿರುವರೋ ಅಂತಹವರಿಗೆ ಯಜ್ಞ, ದಾನ, ಧರ್ಮ, ಆಶ್ರಮಕರ್ಮ, ತಪಸ್ಸು, ಇದರಿಂದುಂಟಾಗುವ ಕೀರ್ತಿ, ಎಲ್ಲವೂ ವ್ಯರ್ಥವಾಗುತ್ತದೆ. (ಯಜ್ಞದಾನಾದಿಗಳು ಪರಮಾತ್ಮನ ಅನುಗ್ರಹಕ್ಕೆ ಸಾಧನಗಳಾಗಿ ಅವನ ಆರಾಧನ ರೂಪವಾಗಿಯೇ ಶಾಸ್ತ್ರದಿಂದ ಬೋಧಿಸಲ್ಪಟ್ಟಿವೆ, ಇಂತಹ ಯಜ್ಞಾದಿಗಳನ್ನು ದ್ವೇಷಬುದ್ಧಿಯಿಂದ ಆಚರಿಸಿದಲ್ಲಿ ವಿರುದ್ಧವಾದ ಫಲ ವುಂಟಾಗಬಹುದೇ ಹೊರತು, ಅನುಗ್ರಹಕ್ಕೆ ಸಾಧಕವಾಗಲಾರದೆಂದು ತಾತ್ಪರ್ಯ) ಆ ಜನಾರ್ದನನಲ್ಲಿ ಭಕ್ತಿ ಹೊಂದಿರುವ ಪುಣ್ಯಶಾಲಿಗೆ, ಅನೇಕ ಮಹಾಮಂತ್ರಗಳಿಂದಲೂ ಸಹ ಆಗಬೇಕಾದುದೇನು, "ನಮೋನಾರಾಯಣಾಯ" ಎಂಬ ಮಹಾಮಂತ್ರವೊಂದೇ ಪರಮಾತ್ಮನ ಪ್ರೀತಿಯನ್ನು ಗಳಿಸುವ ಮೂಲಕ ಸರ್ವ ಪುರುಷಾರ್ಥಗಳಿಗೂ ಸಾಧನವಾದೀತು.

೫೯-೬೦. ಸರ್ವಜಯರೂಪನಾದ ವಿಷ್ಣುವು ಯಾವ ಭಕ್ತನಿಗೆ ವಶನಾಗಿರುವನೋ ಅಂತಹವನಿಗೆ ಪರಾಜಯವೆಂಬುದು ಎಲ್ಲಿಂದ ಬಂದೀತು. ನೈದಿಲೆಯಂತೆ ಶ್ಯಾಮಲಮೂರ್ತಿಯಾದ ಆ ಜನಾರ್ದನನು ಅವನ ಹೃದಯದಲ್ಲಿಯೇ ಯಾವಾಗಲೂ ನೆಲಸಿರುವನಷ್ಟೆ. ಸಮಸ್ತಮಂಗಳಗಳಿಗೂ ಮಾಂಗಲ್ಯಪ್ರದನಾಗಿಯೂ ಸೇವ್ಯನಾಗಿಯೂ ವರಪ್ರದನಾಗಿಯೂ ನಿಗ್ರಹಾನುಗ್ರಹಸಮರ್ಥನಾಗಿಯೂ ಇರುವ ಆ ನಾರಾಯಣನನ್ನು ಸ್ಮರಿಸಿಯೇ ಎಲ್ಲಾ ಕರ್ಮಗಳನ್ನೂ ನಡೆಸಬೇಕು. (ರಾಜಾಜ್ಞೆಯು ಪ್ರಜೆಗಳಿಗೆ ಹಿತವನ್ನುಂಟುಮಾಡುವುದಾದರೂ ಅದು ಆಜ್ಞಾನುವರ್ತನದಿಂದುಂಟಾಗುವ ಪ್ರಭುಪ್ರೀತಿಯನ್ನು ದ್ವಾರವನ್ನಾಗಿ ಅಪೇಕ್ಷಿಸುತ್ತದೆ. ಈ ವಿಧವಾದ ಲೋಕನ್ಯಾಯವನ್ನನುಸರಿಸಿ ಶ್ರುತಿಸ್ಮೃತಿ ವಿಹಿತಗಳಾದ ಕರ್ಮಗಳನ್ನು ಆಚರಿಸುವವರು, ಅಂತಹ

ವಿಷ್ಟವ್ಯೋ ವ್ಯತಿಪಾತಾಶ್ಚ ಯೇಽನ್ಯೇ ದುರ್ನೀತಿಸಂಭವಾಃ ।
ತೇ ನಾಮಸ್ಮರಣಾದ್ವಿಷ್ಣೋರ್ನಾಶಂ ಯಾಂತಿ ಮಹಾಸುರ ॥ ೬೧ ॥

ತೀರ್ಥಕೋಟಿಸಹಸ್ರಾಣಿ ತೀರ್ಥಕೋಟಿಶತಾನಿ ಚ ।
ನಾರಾಯಣಪ್ರಣಾಮಸ್ಯ ಕಲಾಂ ನಾರ್ಹಂತಿ ಷೋಡಶೀಂ ॥ ೬೨ ॥

ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ।
ತಾನಿ ಸರ್ವಾಣ್ಯವಾಪ್ನೋತಿ ವಿಷ್ಣೋರ್ನಾಮಾನುಕೀರ್ತನಾತ್ ॥ ೬೩ ॥

ಪ್ರಾಪ್ನುವಂತಿ ನ ತಾನ್ಲೋಕಾನ್ವ್ರತಿನೋ ವಾ ತಪಸ್ವಿನಃ ।
ಪ್ರಾಪ್ಯಂತೇ ಯೇ ತು ಕೃಷ್ಣಸ್ಯ ನಮಸ್ಕಾರಪರೈರ್ನರೈಃ ॥ ೬೪ ॥

ಯೋಽಪ್ಯನ್ಯದೇವತಾಭಕ್ತೋ ಮಿಥ್ಯಾರ್ಚಯತಿ ಕೇಶವಂ ।
ಸೋಽಪಿ ಗಚ್ಛತಿ ಸಾಧೂನಾಂ ಸ್ಥಾನಂ ಪುಣ್ಯಕೃತಾಂ ಮಹತ್ ॥ ೬೫ ॥

ಆಜ್ಞೆಯನ್ನು ಉಂಟುಮಾಡಿರುವ ಪ್ರಭುವಾದ ಸರ್ವೇಶ್ವರನ ಪ್ರೀತಿಯನ್ನು ಗಳಿಸಲೇಬೇಕೆಂದು ತಾತ್ಪರ್ಯ.)

೬೧-೬೩. ದುಷ್ಟವಾದ ನಡವಳಿಕೆಯಿಂದುಂಟಾದ ಅನಿಷ್ಟಗಳೂ, ನಿರ್ಬಂಧಗಳೂ ಆ ಮಹಾವಿಷ್ಣುವಿನ ಸ್ಮರಣಮಾತ್ರದಿಂದಲೇ ನಾಶಹೊಂದುವುವು. ಮಹಾತೀರ್ಥಗಳ ನೂರುಕೋಟಿಗಳೇ ಆಗಲಿ ಸಹಸ್ರಕೋಟಿಗಳೇ ಆಗಲಿ ನಾರಾಯಣನ ಪ್ರಣಾಮದಿಂದುಂಟಾದ ಫಲದ ಹದಿನಾರನೇ ಒಂದು ಭಾಗವನ್ನೂ ಹೋಲುವುದಿಲ್ಲ. ಈ ಭೂಮಂಡಲದಲ್ಲಿ ಎಷ್ಟು ತೀರ್ಥಗಳಿವೆಯೋ ಪುಣ್ಯಕರವಾದ ಎಷ್ಟು ದೇವಾಲಯಗಳಿವೆಯೋ ಅವುಗಳ ಸೇವನದಿಂದುಂಟಾಗುವ ಫಲವನ್ನು ವಿಷ್ಣುವಿನ ನಾಮಸಂಕೀರ್ತನದಿಂದಲೇ ಭಕ್ತನು ಹೊಂದುವನು.

೬೪-೬೫. ಭಕ್ತಿಯಿಂದ ಕೃಷ್ಣನ ನಮಸ್ಕಾರಾದಿಗಳಲ್ಲಿ ನಿರತರಾಗಿರುವವರು ಯಾವ ಪುಣ್ಯಲೋಕವನ್ನು ಹೊಂದುತ್ತಾರೆಯೋ ಅಂತಹ ಲೋಕವನ್ನು ವ್ರತಶಾಲಿಗಳೂ ತಪಸ್ವಿಗಳೂ ಸಹ ಹೊಂದಲಾರರು. *ಯಾವನು ಬೇರೆ ದೇವತೆಯಲ್ಲಿ ಪರಮಾರ್ಥವಾದ ಭಕ್ತಿಯನ್ನು ಹೊಂದಿ ನಾರಾಯಣನ್ನು ಕೇವಲ ಆಡಂಬರಕ್ಕಾಗಿ (ಮಿಥ್ಯಾದೃಷ್ಟಿಯಿಂದ) ಪೂಜಿಸುತ್ತಾನೆಯೋ, ಅಂತಹವನೂ ಸಹ ಅರ್ಚನಾಭಿನಯಮಾತ್ರದಿಂದಲೂ ಪುಣ್ಯಶಾಲಿಗಳಾದ ಸಾಧುಗಳ ಸ್ಥಾನವನ್ನು ಹೊಂದುತ್ತಾನೆ.

---

* "ಯೇಽಪ್ಯನ್ಯದೇವತಾಭಕ್ತಾಃ" ಎಂಬ ಗೀತಾವಾಕ್ಯದ ಅರ್ಥ ಇಲ್ಲಿ ಸಂಗ್ರಹಿಸಲ್ಪಟ್ಟಿದೆ.

ಸುಸತ್ಯೇನ ಹೃಷೀಕೇಶಂ ಪೂಜಯಿತ್ವಾ ತು ಯತ್ಫಲಂ ।
ನೃಣಾಂ ಸುಚೀರ್ಣೇ ತಪಸಿ ತತ್ಫಲಂ ನ ಕದಾಚನ ॥ ೧೬ ॥

ತ್ರಿಸಂಧ್ಯಂ ಪದ್ಮನಾಭಂ ತು ಯೇ ಸ್ಮರಂತಿ ಸುಮೇಧಸಃ ।
ಲಭಂತೇ ತೂಪವಾಸಸ್ಯ ಫಲಂ ನಾಸ್ತ್ಯತ್ರ ಸಂಶಯಃ ॥ ೧೭ ॥

ಸತತಂ ಶಾಸ್ತ್ರದೃಷ್ಟೇನ ಕರ್ಮಣಾ ಹರಿಮರ್ಚಯ ।
ತತ್ಪ್ರಸಾದಾತ್ಪರಾಂ ಸಿದ್ಧಿಂ ಬಲೇ ಪ್ರಾಪ್ಸ್ಯಸಿ ಶಾಶ್ವತೀಂ ॥ ೧೮ ॥

ತನ್ಮನಾ ಭವ ತದ್ಭಕ್ತಸ್ತದ್ಯಾಜೀ ತಂ ನಮಸ್ಕುರು ।
ತಮೇವಾಶ್ರಿತ್ಯ ದೇವೇಶಂ ಸುಖಂ ಪ್ರಾಪ್ಸ್ಯಸಿ ಪುತ್ರಕ ॥ ೧೯ ॥

ಆದ್ಯಂ ಹ್ಯನಂತಮಜರಂ ಹರಿಮವ್ಯಯಂ ಚ
ಸರ್ವತ್ರಗಂ ಪರಮಬ್ರಹ್ಮಪರಂ ಪುರಾಣಂ ।
ತೇ ಯಾಂತಿ ವೈಷ್ಣವಪದಂ ಧ್ರುವಮಕ್ಷಯಂ ಚ
ಯೇ ಮಾನವಾ ವಿಗತರಾಗಪರಾ ಭವಂತಿ ॥ ೨೦ ॥

೧೬-೧೮. ಸತ್ಯವ್ರತದಿಂದ (ಡಂಭಾಚಾರವಿಲ್ಲದೆ) ಆ ಹೃಷೀಕೇಶನನ್ನು ಪೂಜಿಸಿ ಯಾವ ಫಲವನ್ನು ಹೊಂದಬಹುದೋ ಅಂತಹ ಫಲವು ತೀವ್ರವಾದ ತಪಸ್ಸಿನಿಂದಲೂ ಮನುಷ್ಯನಿಗೆ ಉಂಟಾಗಲಾರದು. ಮೂರು ಸಂಧ್ಯಾಕಾಲಗಳಲ್ಲಿಯೂ (ಪ್ರಾತಃ ಮಧ್ಯಾಹ್ನ ಸಾಯಂಸಮಯ) ಆ ಪದ್ಮನಾಭನನ್ನು ಯಾವ ಬುದ್ಧಿಶಾಲಿಗಳು ಸ್ಮರಿಸುವರೋ ಅವರು ಉಪವಾಸದ ಫಲವನ್ನೇ ಹೊಂದುತ್ತಾರೆ. ಇದರಲ್ಲಿ ಸಂದೇಹವಿಲ್ಲ ಆದುದರಿಂದ ಎಲೈ ಬಲಿಯೇ, ಶಾಸ್ತ್ರಮಾರ್ಗವನ್ನನುಸರಿಸಿ ನೀನು ಯಾವಾಗಲೂ ಆ ಹರಿಯನ್ನು ಪೂಜಿಸು. ಅವನ ಅನುಗ್ರಹದಿಂದಲೇ ನೀನು ಉತ್ತಮವಾದ ಸ್ಥಿರವಾದ ಸಿದ್ಧಿಯನ್ನು ಹೊಂದುವೆ.

೧೯-೨೦. ಎಲೈ ಪುತ್ರನೇ ನೀನು ಯಾವಾಗಲೂ ಆ ವಿಷ್ಣುವಿನಲ್ಲೇ ಮನಸ್ಸಿಟ್ಟು ಅವನನ್ನೇ ಯಾವಾಗಲೂ ಧ್ಯಾನಮಾಡು. ಅವನಲ್ಲಿಯೇ ಭಕ್ತನಾಗು. ಅವನನ್ನೇ ಯಾವಾಗಲೂ ಆರಾಧಿಸು. ಅವನನ್ನೇ ನಮಸ್ಕರಿಸು. ದೇವನಾಥನಾದ ಅವನನ್ನೇ ಸರ್ವವಿಧದಲ್ಲೂ ಆಶ್ರಯಿಸಿದುದೇ ಆದರೆ ನೀನು ಸುಖಿಯಾಗುವೆ. ಯಾರು ಕಾಮಕ್ರೋಧಾದಿ ಮನೋದೋಷವನ್ನು ನೀಗಿ ಶಾಂತಿಯಿಂದ ಆ ವಿಷ್ಣುವನ್ನು ಸೇವಿಸುವರೋ ಅಂತಹ ಮನುಷ್ಯರು, ಜಗತ್ತಿಗೆ ಆದಿಕಾರಣನಾಗಿಯೂ ಅನಂತನಾಗಿಯೂ ಜರಾಮರಣರಹಿತನಾಗಿಯೂ ಸರ್ವವ್ಯಾಪಕನಾಗಿಯೂ ಪುರಾತನನಾಗಿಯೂ ಇರುವ ಪರಬ್ರಹ್ಮರೂಪನಾದ ಆ ಹರಿಯನ್ನೇ ಸೇರುತ್ತಾರೆ.

ನಾರಾಯಣಂ ಸುರವರಂ ಸತತಂ ಸ್ಮರಂತಿ
ತೇ ಧೌತಪಾಂಡರಪಟಾ ಇವ ರಾಜಹಂಸಾಃ ।
ಸಂಸಾರಸಾಗರಜಲಸ್ಯ ತರಂತಿ ಪಾರಂ
ಧ್ಯಾಯಂತಿ ಯೇ ಸತತಮಚ್ಯುತಮೀಶಿತಾರಂ ॥ ೭೧ ॥

ನಿಷ್ಕಲ್ಮಷಂ ಸಪದಿ ಪದ್ಮದಲಾಯತಾಕ್ಷಂ
ಧ್ಯಾನೇನ ತೇನ ಹತಕಿಲ್ಬಿಷಚೇತನಾಸ್ತೇ ।
ಮಾತುಃ ಪಯೋಧರರಸಂ ನ ಪುನಃ ಪಿಬಂತಿ
ಯೇ ಕೀರ್ತಯಂತಿ ವರದಂ ವರಪದ್ಮನಾಭಂ ॥ ೭೨ ॥

ಶಂಖಾಬ್ಜಚಕ್ರವರಚಾಪಗದಾಸಿಹಸ್ತಂ
ಪದ್ಮಾಲಯಾವದನಪಂಕಜಷಟ್ಪದಾಖ್ಯಂ ।
ನೂನಂ ಪ್ರಯಾಂತಿ ಸದನಂ ಮಧುಘಾತಿನಸ್ತೇ
ಶೃಣ್ವಂತಿಯೇ ಸುದೃಢಭಕ್ತಿಪರಾ ಮನುಷ್ಯಾಃ ॥ ೭೩ ॥

ಸಂಕೀರ್ತ್ಯನಾಮ ಭಗವಂತಮಾದ್ಯ
ಮಾಜನ್ಮಪಾಪಂ ಯದಕಾರಿಯೈಸ್ತು ।

೭೧-೭೨. ಸುರಾಧಿಪನಾದ ನಾರಾಯಣನನ್ನು ಯಾರು ಯಾವಾಗಲೂ ಸ್ಮರಿಸುತ್ತಾರೆಯೋ ಅವರು ಬಿಳುಪಾದ ಗರಿಗಳುಳ್ಳ ರಾಜಹಂಸಗಳಂತೆ ಸರ್ವಪಾಪ ನಾಶದಿಂದ ಶುದ್ಧರಾಗುತ್ತಾರೆ ಅಂತಹ ಸರ್ವನಿಯಾಮಕನಾದ ಅಚ್ಯುತನನ್ನು ಧ್ಯಾನಮಾಡಿದ್ದೇ ಆದರೆ ಅವರು ಸಂಸಾರವೆಂಬ ಅಪಾರವಾದ ಸಮುದ್ರವನ್ನೇ ದಾಟುತ್ತಾರೆ. ಪರಿಶುದ್ಧನಾಗಿಯೂ ತಾವರೆಯ ದಳದಂತೆ ವಿಶಾಲವಾದ ನೇತ್ರಗಳುಳ್ಳವನಾಗಿಯೂ ಇರುವ ಆ ಅಚ್ಯುತನ ಧ್ಯಾನದಿಂದ ಸರ್ವಪಾಪನಿವೃತ್ತಿಯನ್ನು ಹೊಂದಿದವರು ವರಪ್ರದನಾದ ಆ ಪದ್ಮನಾಭನ ಕೀರ್ತನದಿಂದಲೇ ಪುನಃ ತಾಯಿಯ ಸ್ತನ್ಯಪಾನಕ್ಕೆ ಅರ್ಹರಾಗುವುದೇ ಇಲ್ಲ. (ಪುನಃ ಅವರಿಗೆ ಜನ್ಮವೇ ಇರುವುದಿಲ್ಲವೆಂದರ್ಥ)

೭೩-೭೪. ಯಾರು ಧೃಢವಾದ ಭಕ್ತಿಯಿಂದ ಕೂಡಿ ಶಂಖ, ಚಕ್ರ, ಪದ್ಮ, ಚಾಪ, ಗದೆ ಮೊದಲಾದುವುಗಳಿಂದ ರಮಣೀಯನಾಗಿಯೂ ಲಕ್ಷ್ಮೀದೇವಿಯ ಮುಖವೆಂಬ ಕಮಲಕ್ಕೆ ದುಂಬಿಯಂತೆಯೂ ಇರುವ ಆ ಮಧುಸೂದನನನ್ನು ಸ್ತೋತ್ರ ಮಾಡುತ್ತಾ ಅವನ ಚರಿತ್ರೆಯನ್ನು ಕೇಳುತ್ತಾರೆಯೋ ಅವರು ಆ ಪ್ರಭುವಿನ ಸ್ಥಾನ

ತೇ ಮುಕ್ತಪಾಪಾಃ ಸುಖಿನೋ ಭವಂತಿ
ಯಥಾಽಮೃತ ಪ್ರಾಶನತರ್ಪಿತಾಶ್ಚ ॥ ೭೪ ॥

ತಸ್ಮಾದ್ಧ್ಯಾನಂ ಸ್ಮರಣಂ ಕೀರ್ತನಂ ವಾ
ನಾಮ್ನಾಮಪಿ ಶ್ರವಣಂ ಪಠತಾಂ ಸಜ್ಜನಾನಾಂ ।
ಕಾರ್ಯಂ ವಿಷ್ಣೋಃ ಶ್ರದ್ಧಧಾನೈರ್ಮನುಷ್ಯೈಃ
ಪೂಜಾ ತುಲ್ಯಂ ತತ್ಪ್ರಶಂಸಂತಿ ದೇವಾಃ ॥ ೭೫ ॥

ಬಾಹ್ಯೇನ ಚಾಂತಃಕರಣೇನ ಯೋಗಿ
ಷ್ವಥಾಽರ್ಚಯೇತ್ಕೇಶವಮೀಶಿತಾರಂ ।
ಪುಷ್ಪೈಶ್ಚ ಪತ್ರೈರ್ಋತುಸಂಭವೈಶ್ಚ
ನೂನಂ ಸ ಪೂಜ್ಯೋ ವಿಧಿವನ್ನರೇಣ ॥ ೭೬ ॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ ಭಗವತ್ಪ್ರಶಂಸಾ ನಾಮ ಚತುರ್ನವತಿತಮೋಽಧ್ಯಾಯಃ

ವನ್ನೇ ನಿಯತವಾಗಿ ಹೊಂದುತ್ತಾರೆ. ಹುಟ್ಟಿದ ಮೊದಲುಗೊಂಡು ಪಾಪಕಾರ್ಯ ದಲ್ಲಿಯೇ ನಿರತರಾಗಿದ್ದವರೂ ಸಹ ಆ ಆದಿಪುರುಷನಾದ ಭಗವಂತನ ಸಂಕೀರ್ತನ ಮಾತ್ರದಿಂದಲೇ ಪಾಪವಿಮುಕ್ತರಾಗಿ ಮೃತಸಂಜೀವಿನಿಯಿಂದ ತೃಪ್ತರಾಗುವಂತೆ ಶಾಂತಿಯಿಂದ ಸುಖಿಯಾಗುವರು.

೭೫-೭೬. ಆದುದರಿಂದ ಮನುಷ್ಯನಾಗಿ ಹುಟ್ಟಿದವನು ಶ್ರದ್ಧೆಯಿಂದ ಆ ಮಹಾವಿಷ್ಣುವಿನ ಧ್ಯಾನಸ್ಮರಣೆಗಳನ್ನೂ ಅಥವಾ ಅವನ ನಾಮಗಳ ಕೀರ್ತನವನ್ನೂ ಕೊನೆಗೆ ಪಠನಮಾಡುತ್ತಿರುವ ಸತ್ಪುರುಷರಿಂದ ಶ್ರವಣವನ್ನಾದರೂ ಮಾಡಿಯೇ ಮಾಡಬೇಕು. ಇದೂ ಅವನ ಪೂಜೆಗೆ ಸಮಾನವೆಂದು ದೇವತೆಗಳೂ ಹೇಳುತ್ತಾರೆ. ಮಹಾಯೋಗಿಯಾದ ಸರ್ವನಿಯಾಮಕನಾದ ಆ ಕೇಶವನನ್ನು ಅಂತಃಕರಣಗಳಿಂ ಸೇವಿಸಿ ಬಾಹ್ಯೇಂದ್ರಿಯಗಳಿಂದ ಆಯಾಯ ಋತುಗಳಲ್ಲಿ ಉಂಟಾದ ಹೂವುಗಳಿಂ ದಲೂ ಪತ್ರಗಳಿಂದಲೂ ಯಥಾವಿಧಿಯಾಗಿ ಮನುಷ್ಯನಾದವನು ಪೂಜಿಸಲೇ ಬೇಕು.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಭಗವತ್ಪ್ರಶಂಸೆಯೆಂಬ ತೊಂಭತ್ತನಾಲ್ಕನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಸುತಲವೆಂಬ ಪಾತಾಳ ಲೋಕಕ್ಕೆ ಹೋಗಿ ಬಲಿಯು ಪತ್ನಿಯೊಡನೆ ಅಲ್ಲಿ ನಿರ್ಮಿತವಾಗಿದ್ದ ರತ್ನಮಯವಾದ ರಾಜಗೃಹದಲ್ಲಿ ವಾಸಮಾಡುತ್ತಿದ್ದನೆಂದೂ, ಪತ್ನಿಯಾದ ವಿಂಧ್ಯಾವಲಿಯೊಡನೆ ಬಲಿಯು ಮಹಾಭೋಗದಿಂದ ಇರುವಾಗ ದಾನವರ ತೇಜೋಭಿವೃದ್ಧಿಯನ್ನು ನೋಡಿ ಅದನ್ನು ಅಪಹರಿಸಲು ವಿಷ್ಣು ಚಕ್ರವು ಅಲ್ಲಿಗೆ ಬರಲು ದೈತ್ಯರೆಲ್ಲರೂ ಭಯದಿಂದ ಮಾಡಿದ ಹಾಹಾಕಾರವನ್ನು ಕೇಳಿ ಬಲಿಯು ಖಡ್ಗಧಾರಿಯಾಗಿ ಅದನ್ನೆದುರಿಸಲು ಸಿದ್ಧನಾದಾಗ ಅದನ್ನು ನೋಡಿ ವಿಂಧ್ಯಾವಲಿಯು ಪತಿಯಾದ ಬಲಿಯನ್ನು ಸಮಾಧಾನಪಡಿಸಿ ಅವನ ಕೈಯ್ಯಲ್ಲಿದ್ದ ಕತ್ತಿಯನ್ನು ತೆಗೆದು ಒರೆಯಲ್ಲಿಟ್ಟು ಪತಿಯೇ, ದೈತ್ಯರ ತೇಜೋನಾಶಕ್ಕಾಗಿ ವಿಷ್ಣುಚಕ್ರವು ಬಂದಿದೆ. ಇದನ್ನು ಪೂಜಿಸಬೇಕೇ ಹೊರತು ಪರಾಕ್ರಮದಿಂದ ಫಲವಿಲ್ಲವೆಂದು ಹೇಳಿ ಹೊರಟು ಹೋದಳೆಂದೂ ಹೇಳಲಾಯಿತು. ಅನಂತರ ಆ ವಿಷ್ಣುಚಕ್ರವು ಬಂದಿತು. ಬಲಿಯು ಅದನ್ನು ಸ್ತೋತ್ರಮಾಡಿ ಯಥಾವಿಧಿಯಾಗಿ ಪೂಜಿಸಿದನು. ಆದರೂ ಆ ಚಕ್ರವು ದೈತ್ಯರ ತೇಜಸ್ಸನ್ನೆಲ್ಲಾ ಅಪಹರಿಸಿಕೊಂಡು ಹೊರಟಿತು. ಆಗ ಬಲಿಯು ಬಹಳ ವ್ಯಾಕುಲನಾಗಿ ಪ್ರಹ್ಲಾದನನ್ನು ಸ್ಮರಿಸಲು ಅವನೂ ಸ್ಮರಣಮಾತ್ರದಿಂದ ಸನ್ನಿಹಿತನಾದನು. ಆಗ ಬಲಿಯು ಪ್ರಹ್ಲಾದನನ್ನು ಸತ್ಕರಿಸಿ ಅವನನ್ನು ಕುರಿತು ತಾತನೇ ಸಂಸಾರದಲ್ಲಿ ಸಿಲುಕಿ ದುಃಖಪಡುವ ಮನುಷ್ಯನು ಈ ಬಂಧವನ್ನು ತಪ್ಪಿಸಿಕೊಳ್ಳಲು ಯಾವ ಕೆಲಸವನ್ನು ಮಾಡಬೇಕು. ಸಂಸಾರಸಮುದ್ರದ ಬಿಡುಗಡೆಗೆ ಉಪಾಯವೇನು ಎಂದು ಪ್ರಶ್ನೆಮಾಡಲು ಪ್ರಹ್ಲಾದನು ಮಹಾವಿಷ್ಣುವಿನ ಮಾಹಾತ್ಮ್ಯವನ್ನೂ ಅವನ ಸರ್ವವ್ಯಾಪಕತೆಯನ್ನೂ ಸರ್ವರಕ್ಷಕತ್ವವನ್ನೂ ಬಹುವಿಧವಾಗಿ ಉಪದೇಶಿಸಿ ಅವನ ಧ್ಯಾನಸ್ಮರಣೆ ಸಂಕೀರ್ತನಗಳಿಲ್ಲದೆ ಯಾವ ಕರ್ಮಗಳೂ ಸಫಲಗಳಾಗುವುದಿಲ್ಲವೆಂದೂ ಸರ್ವಕರ್ಮಗಳಿಂದಲೂ ಅವನನ್ನೇ ಪೂಜಿಸಬೇಕೆಂದೂ ಅವನಲ್ಲಿ ಭಕ್ತಿಯಿಂದ ಅವನ ಸೇವೆಯಲ್ಲಿಯೇ ಇದ್ದಲ್ಲಿ ಸರ್ವಪಾಪನಾಶವೂ ಶಾಶ್ವತವಾದ ಮೋಕ್ಷವೂ ಉಂಟಾಗುವುದೆಂದೂ ಹೇಳಿ ನೀನೂ ಸಹ ಆ ನಾರಾಯಣನನ್ನೇ ಆಶ್ರಯಿಸಿದಲ್ಲಿ ಸಂಸಾರಬಂಧದಿಂದ ಬಿಡುಗಡೆಹೊಂದುತ್ತೀಯೆ ಎಂದೂ ಉಪದೇಶಿಸಿದನೆಂದು ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಪಂಚನವತಿತಮೋಽಧ್ಯಾಯಃ

ಬಲಿರುವಾಚ

ಭವತಾ ಕಥಿತಂ ಸರ್ವಂ ಸಮಾರಾಧ್ಯ ಜನಾರ್ದನಂ ।
ಯಾ ಗತಿಃ ಪ್ರಾಪ್ಯತೇ ಲೋಕೇ ಸ ಚಾಽರಾಧ್ಯಃ ಕಥಂಚನ ॥ ೧ ॥

ಕೇನಾಽರ್ಚನೇನ ದೇವಸ್ಯ ಪ್ರೀತಿಃ ಸಮುಪಜಾಯತೇ ।
ಕಾನಿ ದಾನಾನಿ ಶಸ್ತಾನಿ ಪ್ರೀಣನಾಯ ಜಗದ್ಗುರೋಃ ॥ ೨ ॥

ಉಪವಾಸಾದಿಕಂ ಕಾರ್ಯಂ ಕಸ್ಯಾಂ ತಿಥ್ಯಾಂ ಮಹೋದಯಂ ।
ಕಾನಿ ಪುಣ್ಯಾನಿ ಶಸ್ತಾನಿ ವಿಷ್ಣುತುಷ್ಟಿಕರಾಣಿ ಚ ॥ ೩ ॥

ಯಚ್ಚಾನ್ಯದಪಿ ಕರ್ತವ್ಯಂ ಹೃಷ್ಟರೂಪೈರನಾಲಸೈಃ ।
ತದಸ್ಯಶೇಷಂ ದೈತ್ಯೇಂದ್ರ ಸಮಾಖ್ಯಾತುಮಿಹಾರ್ಹಸಿ ॥ ೪ ॥

ತೊಂಭತ್ತೈದನೆಯ ಅಧ್ಯಾಯವು

೧-೪. ಬಲಿಯು ಹೇಳುತ್ತಾನೆ. ಎಲೈ ದೈತ್ಯಶ್ರೇಷ್ಠನೇ, ನೀನು ಉಪದೇಶಿಸಿದಂತೆ ಜಗತ್ಪತಿಯಾದ ಆ ಜನಾರ್ದನನನ್ನು ಪೂಜಿಸಿ ಹೊಂದಬಹುದಾದ ಉತ್ತಮಗತಿಯಾವುದು? ಅಂತಹ ಗತಿಗೆ ಕಾರಣವಾದ ಅವನ ಆರಾಧನ ಕ್ರಮವೇನು? ಯಾವ ವಿಧವಾದ ಪೂಜೆಯಿಂದ ಅವನಿಗೆ ಪ್ರೀತಿಯುಂಟಾದೀತು? ಅವನ ಪ್ರೀತಿಗಾಗಿ ಮಾಡತಕ್ಕ ಪ್ರಶಸ್ತದಾನಗಳಾವುವು, ಅವನ ಪ್ರೀತಿಗಾಗಿ ಮಾಡಬೇಕಾದ ಉಪವಾಸವನ್ನು ಯಾವ ತಿಥಿಯಲ್ಲಿ ಮಾಡಬೇಕು. ಅವನಿಗೆ ಪ್ರೀತಿಕರವಾಗಿಯೂ ನಾವೂ ಸಂತೋಷದಿಂದ ಮಾಡಲು ಅರ್ಹವಾಗಿಯೂ ಇರುವ ಪುಣ್ಯಕರಗಳಾದ ಬೇರೆ ಕಾರ್ಯಗಳಾವುವು ಇದೆಲ್ಲವನ್ನೂ ನನಗೆ ದಯವಿಟ್ಟು ಹೇಳಬೇಕು.

ಪ್ರಹ್ಲಾದ ಉವಾಚ

ಶ್ರದ್ಧಧಾನ್ಯೈರ್ಭಕ್ತಿಪರೈಃ ಸಮುದ್ದಿಶ್ಯ ಜನಾರ್ದನಂ ।
ದೀಯಂತೇ ಯಾನಿ ದಾನಾನಿ ತಾನಿ ಯಾಂತಿ ನ ವೈ ಕ್ಷಯಂ ॥ ೫ ॥

ತಾ ಏವ ತಿಥಯಃ ಶಸ್ತಾ ಯಾಸ್ವಭ್ಯರ್ಚ್ಯ ಜಗತ್ಪತಿಂ ।
ತಚ್ಚಿತ್ತಸ್ತನ್ಮಯೋ ಭೂತ್ವಾ ಉಪವಾಸೀ ನರೋ ಭವೇತ್ ॥ ೬ ॥

ಪೂಜಿತೇಷು ದ್ವಿಜೇಂದ್ರೇಷು ಪೂಜಿತಸ್ತು ಜನಾರ್ದನಃ ।
ಯಸ್ತಾನ್ದ್ವೇಷ್ಟಿ ಸ ಮೂಢಾತ್ಮಾ ಸ ಯಾತಿ ನರಕಂ ಧ್ರುವಂ ॥ ೭ ॥

ತಾನರ್ಚಯೇನ್ನರೋ ಭಕ್ತ್ಯಾ ಬ್ರಾಹ್ಮಣಾನ್ವಿಷ್ಣುತತ್ಪರಃ ।
ಏವಮಾಹ ಹರಿಃ ಪೂರ್ವಂ ಬ್ರಾಹ್ಮಣಾ ಮಾಮಕೀ ತನುಃ ॥ ೮ ॥

೫-೬. ಪ್ರಹ್ಲಾದನು ಹೇಳುತ್ತಾನೆ ದೈತ್ಯರಾಜನೇ, ಜನಾರ್ದನನನ್ನು ಉದ್ದೇಶಿಸಿ ಅವನಲ್ಲಿ ಭಕ್ತಿಯಿಂದಲೂ ಶ್ರದ್ಧೆಯಿಂದಲೂ ಯಾವ ಯಾವ ದಾನಗಳನ್ನು ಮಾಡುತ್ತಾರೆಯೋ, ಅವೆಲ್ಲವೂ ಅಕ್ಷಯ ಫಲಗಳಾಗುತ್ತವೆ. (ಇದರಿಂದ ಭಗವತ್ಪ್ರೀತಿಯನ್ನಪೇಕ್ಷಿಸದೇ ಇತರ ಉದ್ದೇಶಗಳಿಗಾಗಿ ಮಾಡಿದ ದಾನಗಳು ನಶ್ವರವಾದ ಫಲಗಳನ್ನೇ ಉಂಟುಮಾಡುತ್ತವೆ ಎಂದು ಹೇಳಿದಂತಾಗುತ್ತದೆ) ಯಾವ ತಿಥಿಗಳಲ್ಲಿ ಜಗತ್ಪತಿಯು ಪೂಜೆಯಿಂದ ಸಂತುಷ್ಟನಾಗುವನೋ ಅಂತಹ ತಿಥಿಯಲ್ಲಿಯೇ ಆ ಭಗವಂತನ ಧ್ಯಾನದಿಂದ ತನ್ಮಯನಾಗಿ ಉಪವಾಸ ಮಾಡಬೇಕು. (ಇದರಿಂದ ಪೂಜಾದಿಗಳಿಂದ ಭಗವಂತನನ್ನು ಸಂತೋಷಪಡಿಸಲು ಅರ್ಹವಾದ ತಿಥಿಯೇ ಅವನ ಪ್ರೀತಿಗಾಗಿ ಮಾಡುವ ಉಪವಾಸಕ್ಕೂ ಅರ್ಹವೆಂದೂ ತಿಥಿಗಳಲ್ಲಿ ಸ್ವರೂಪತಃ ಯಾವ ಪ್ರಾಶಸ್ತ್ಯವನ್ನೂ ನಿರೀಕ್ಷಿಸಬಾರದೆಂದೂ ಹೇಳಿದಂತಾಯಿತು)

೭-೮. ದಾನಾದಿಗಳಿಂದ ಸತ್ಕಾರಹೊಂದಿದ ಬ್ರಾಹ್ಮಣರು ಸಂತುಷ್ಟರಾದಲ್ಲಿ ಆ ಜನಾರ್ದನನೂ ಸಂತುಷ್ಟನಾಗುತ್ತಾನೆ. ಯಾವ ಮೂಢನು ಆ ಬ್ರಾಹ್ಮಣರನ್ನು ದ್ವೇಷಿಸುತ್ತಾನೆಯೋ ಅವನು ಶಾಶ್ವತವಾದ ನರಕವನ್ನೇ ಹೊಂದುತ್ತಾನೆ. ಆದುದರಿಂದ ವಿಷ್ಣುತತ್ಪರನಾದ ಮನುಷ್ಯನು ಬ್ರಾಹ್ಮಣರನ್ನು ಭಕ್ತಿಯಿಂದ ಪೂಜಿಸಬೇಕು. ಏತಕ್ಕೆಂದರೆ ಆ ಬ್ರಾಹ್ಮಣರೇ ನನ್ನ ಶರೀರವೆಂದು ಪೂರ್ವದಲ್ಲಿ ಆ ಹರಿಯೇ ಹೇಳಿರು

ಬ್ರಾಹ್ಮಣೋ ನಾವಮಂತವ್ಯೋ ಬುಧೋ ವಾಪ್ಯಬುಧೋಽಪಿ ವಾ ।
ಸೋಽಪಿ ದಿವ್ಯಾ ತನುರ್ವಿಷ್ಣೋಸ್ತಸ್ಮಾತ್ತಂ ಹ್ಯರ್ಚಯೇನ್ನರಃ ॥ ೯ ॥

ತಾನ್ಯೇವ ಚ ಪ್ರಶಸ್ತಾನಿ ಕುಸುಮಾನಿ ಮಹಾಸುರ ।
ಯಾನಿಸ್ಯುರ್ವರ್ಣಯುಕ್ತಾನಿ ರಸಗಂಧಯುತಾನಿ ಚ ॥ ೧೦ ॥

ವಿಶೇಷತಃ ಪ್ರವಕ್ಷ್ಯಾಮಿ ಪುಣ್ಯಾನಿ ತಿಥಿಭಿಃ ಸಹ ।
ದಾನಾನೀಹ ಪ್ರಶಸ್ತಾನಿ ಮಾಧವಪ್ರೀಣನಾಯ ತು ॥ ೧೧ ॥

ಜಾತೀಶತಾಹ್ವಾಸುಮನಾಃ ಕುಂದಂ ಬಹುಪುಟಂ ತಥಾ ।
ಬಾಣಂ ಚ ಚಂಪಕಾಶೋಕಂ ಕರವೀರಂ ಚ ಯೂಥಿಕಾ ॥ ೧೨ ॥

ಪಾರಿಭದ್ರಂ ಪಾಟಲಾ ಚ ಬಕುಲಂ ಗಿರಿಶಾಲಿನೀ ।
ತಿಲಕಂ ಚ ಜಪಾಪುಷ್ಪಂ ಪೀತಕಂ ತಗರಂ ತ್ವಪಿ ॥ ೧೩ ॥

ಏತಾನಿ ಹಿ ಪ್ರಶಸ್ತಾನಿ ಕುಸುಮಾನ್ಯಚ್ಯುತಾರ್ಚನೇ ।
ಸುರಭೀಣಿ ತಥಾನ್ಯಾನಿ ವರ್ಜಯಿತ್ವಾ ತು ಕೇತಕೀಂ ॥ ೧೪ ॥

ವನು. ಬ್ರಾಹ್ಮಣನಾದವನು ಪಂಡಿತನಾಗಿರಲಿ ಪಾಮರನಾಗಿರಲಿ ಅವನನ್ನು ಅವಮಾನಿಸಬಾರದು. ಏತಕ್ಕೆಂದರೆ ಅವನೂ ಆ ಹರಿಯ ದಿವ್ಯದೇಹದಲ್ಲಿ ಸೇರಿದವನು. ಆದುದರಿಂದ ಮನುಷ್ಯನಾದವನು ಅವನನ್ನು ಪೂಜಿಸಲೇ ಬೇಕು.

೧೦-೧೪. ಅಸುರಶ್ರೇಷ್ಠನೇ, ಯಾವ ಹೂವುಗಳು ಒಳ್ಳೆಯ ವರ್ಣದಿಂದಲೂ ಒಳ್ಳೆಯ ವಾಸನೆಯಿಂದಲೂ ಕೂಡಿರುವುವೋ ಅಂತಹ ಹೂವುಗಳೇ ಆ ವಿಷ್ಣುವಿನ ಅರ್ಚನೆಗೆ ಪ್ರಶಸ್ತವಾಗುವುವು. ಆದರೂ ಆ ಮಾಧವನ ಪ್ರೀತಿಗಾಗಿ ಮಾಡಬೇಕಾದ ಪ್ರಶಸ್ತವಾದ ದಾನಗಳನ್ನೂ ಪುಣ್ಯಕರಗಳಾದ ತಿಥಿಗಳನ್ನೂ ಪುಷ್ಪಗಳನ್ನೂ ಸಹ ವಿವೇಚಿಸಿ ಹೇಳುತ್ತೇನೆ, ಕೇಳು. ಜಾಜಿಯ ಹೂವು, ಶತಾಹ್ವವೆಂಬ ಅದರ ಜಾತಿಗೆ ಸೇರಿದ ಹೂವು, ಮೊಲ್ಲೆ, ನಂದ್ಯಾವರ್ತ, ಗೋರಂಟೆ ಜಾತಿಯ ಹೂವು, ಸಂಪಿಗೆ, ಅಶೋಕ, ಕಣಿಗಿಲೆ, ಬೆಟ್ಟಮಲ್ಲಿಗೆ, ಕಂಚುವಾಳ, ಪಾದರಿ, ಸುರಗಿ, ಕಾಡುಮೊಲ್ಲೆ, ತಿಲಕ, ದಾಸವಾಳ, ಹಳದಿಯ ಜಾಜಿ, ಈ ಹೂವುಗಳು ಅಚ್ಯುತನ ಪೂಜೆಗೆ ಪ್ರಶಸ್ತವಾದುವು. ತಾಳೆಯ ಹೂವನ್ನು ಬಿಟ್ಟು ಸುವಾಸನೆಯುಳ್ಳ ಇತರ ಹೂವುಗಳೂ ಪ್ರಶಸ್ತಗಳೇ.

ಬಿಲ್ವಪತ್ರಂ ಶಮೀಪತ್ರಂ ಪತ್ರಂ ಭೃಂಗಮೃಗಾಂಕಯೋಃ ।
ತಮಾಲಮಾಲತೀಪತ್ರಂ ಶಸ್ತಂ ಚ ಹರಿಪೂಜನೇ ॥ ೧೫ ॥

ಏಷಾಮಪಿ ಹಿ ಪುಷ್ಪಾಣಿ ಪ್ರಶಸ್ತಾನ್ಯರ್ಚನೇ ವಿಭೋಃ ।
ಪಲ್ಲವಾನ್ಯಪಿ ತೇಷಾಂ ಸ್ಯುಃ ಪತ್ರಾಣ್ಯರ್ಚಾವಿಧೌ ಹರೇಃ ॥ ೧೬ ॥

ವೀರುಧಾಂ ಚ ಪ್ರವಾಲೇನ ಬರ್ಹಿಷಾಂ ಚಾರ್ಚಯೇನ್ನರಃ ।
ನಾನಾರೂಪೈಶ್ಚಾನುಭಾವ್ಯೈಃ ಕಮಲೇಂದೀವರಾದಿಭಿಃ ॥ ೧೭ ॥

ಪ್ರವಾಲೈಃ ಶುಚಿಭಿಃ ಸೂಕ್ಷ್ಮೈ ಜಲಪ್ರಕ್ಷಾಲಿತೈರ್ಬಲೇ ।
ವನಸ್ಪತೀನಾಮರ್ಚೇತ ತಥಾ ದೂರ್ವಾಗ್ರಪಲ್ಲವೈಃ ॥ ೧೮ ॥

ತಥೈವ ಪ್ರತಿಪೂಜ್ಯೋಽಸೌ ಪತ್ರಕುಡ್ಮಲಪಲ್ಲವೈಃ ।
ಚಂದನೇನಾನುಲಿಂಪೇತ ಕುಂಕುಮೇನ ಚ ಯತ್ನತಃ ॥ ೧೯ ॥

ಉಶೀರಪದ್ಮಕಾಭ್ಯಾಂ ಸ ತಥಾ ಕಾಲೀಯಕಾದಿನಾ ।
ಮಹಿಷಾಖ್ಯಂ ಕಣಂ ದಾರು ಸಿಲ್ಹಕಂ ನಾಗರಂ ತಥಾ ॥ ೨೦ ॥

೧೫-೧೮. ಬಿಲ್ವಪತ್ರ, ಶಮೀಪತ್ರ, (ಬನ್ನಿಯಪತ್ರ) ಭೃಂಗಪತ್ರ, ಮೃಗಾಂಕದ ಪತ್ರ, ಹೊಂಗೆಯಪತ್ರ, ಜಾಜಿಯಪತ್ರ, ಈ ಪತ್ರಗಳು ಹರಿಯ ಪೂಜೆಗೆ ಪ್ರಶಸ್ತಗಳು. ಇವುಗಳ ಹೂವುಗಳೂ ಹರಿಯ ಪೂಜೆಗೆ ಪ್ರಶಸ್ತಗಳು. ಪತ್ರಗಳಂತೆ ಇವುಗಳ ಚಿಗುರುಗಳೂ ಹರಿಯ ಅರ್ಚನೆಗೆ ಪ್ರಶಸ್ತವಾದುವು. ಲತೆಗಳ ಕುಡಿಗಳಿಂದಲೂ ಚಿಗುರುಗಳಿಂದಲೂ ಪೂಜಿಸಬೇಕು. ನಾನಾ ರೂಪಗಳಾದ ಅವತಾರಗಳನ್ನು ಭಾವಿಸಿ ಕಮಲ, ನೈದಿಲೆ ಮೊದಲಾದ ಹೂವುಗಳಿಂದಲೂ ಒಳ್ಳೆಯ ನೀರಿನಿಂದ ತೊಳೆದ ಶುಚಿಯಾದ ಚಿಗುರುಗಳಿಂದಲೂ ಎಳೆಯ ಗರಿಕೆಯ ಚಿಗರುಗಳಿಂದಲೂ, ಪೂಜಿಸಬೇಕು.

೧೯-೨೦. ಹಾಗೆಯೇ ಎಲೆಗಳಿಂದಲೂ ಮೊಗ್ಗುಗಳಿಂದಲೂ ಚಿಗರುಗಳಿಂದಲೂ ಪುನಃಪುನಃ ಪೂಜಿಸಬೇಕು. ಕುಂಕುಮಕೇಸರಿಯ ಚಂದನದಿಂದ ಲೇಪಿಸಬೇಕು ಲಾಮಂಚ, ಕಮಲಲತೆಯ ಕಾಷ್ಠ ಅಥವಾ ಗೆಡ್ಡೆ ಮರದರಿಶಿನ ಅಥವಾ ಕಾಡಿನ. ಮರದಿಂದಾಗುವ ಸುಂಗಂಧಿ ಚೂರ್ಣ ಇವುಗಳಿಂದಲೂ ಲೇಪಿಸಬೇಕು. ಆ ಹರಿಯ ಪ್ರೀತಿಗಾಗಿ ಮಾಹಿಷವೆಂಬ ಹಾಲುಮಡ್ಡಿಯ ಮಹ್ತು ದೇವದಾರುಮರದ ಮತ್ತು ಜಾಜೀಕಾಯಿನ ಧೂಪವನ್ನೂ ಅರ್ಪಿಸಬೇಕು.

ಶಂಖಜಾತೀಫಲಂ ಶ್ರೀಶೇ ಧೂಪನೇ ಸ್ಯುಃ ಪ್ರಿಯಾಣಿ ವೈ ।
ಹವಿಷಾ ಸಂಸ್ಕೃತಾ ಯೇ ತು ಯವಗೋಧೂಮಶಾಲಯಃ ॥ ೨೧ ॥

ತಿಲಮುದ್ಗಾದಯೋ ಮಾಷಾ ವ್ರೀಹಯಶ್ಚ ಪ್ರಿಯಾ ಹರೇಃ ।
ಗೋದಾನಾನಿ ಪವಿತ್ರಾಣಿ ಭೂಮಿದಾನಾನಿ ಯಾನಿ ಚ ॥ ೨೨ ॥

ವಸ್ತ್ರಾನ್ನಸ್ವರ್ಣದಾನಾನಿ ಪ್ರೀತಯೇ ಮಧು ಘಾತಿನಃ ।
ಮಾಘಮಾಸೇ ತಿಲಾಃ ಶಸ್ತಾಸ್ತಿಲಧೇನುಶ್ಚ ದಾನವ ॥ ೨೩ ॥

ಇಂಧನಾನಿ ಚ ದೇಯಾನಿ ಮಾಧವಃ ಪ್ರೀಯತಾಮಿತಿ ।
ಫಾಲ್ಗುನೇ ವ್ರೀಹಯೋ ವಸ್ತ್ರಂ ತಥಾ ಕೃಷ್ಣಾಜಿನಾದಿಕಂ ॥ ೨೪ ॥

ಗೋವಿಂದಪ್ರೀಣನಾರ್ಥಂ ಚ ದಾತವ್ಯ ಪುರುಷರ್ಷಭೈಃ ।
ಚಿತ್ರೇ ವಿಚಿತ್ರವಸ್ತ್ರಾಣಿ ಶಯನಾನ್ಯಾಸನಾನಿ ಚ ॥ ೨೫ ॥

ವಿಷ್ಣೋಃ ಪ್ರೀತ್ಯರ್ಥಮೇತಾನಿ ದೇಯಾನಿ ಬ್ರಾಹ್ಮಣೇಷು ಚ ।
ಗಂಧಶಾಲೀನಿ ವಸ್ತೂನಿ ವೈಶಾಖೇ ಸುರಭೀಣಿ ಚ ॥ ೨೬ ॥

೨೧-೨೪. ತುಪ್ಪದಿಂದ ಸಂಸ್ಕರಿಸಲ್ಪಟ್ಟ ಯವೆ, ಗೋದಿ, ಸಣ್ಣಭತ್ತ, ಎಳ್ಳು ಹೆಸರು, ಉದ್ದು, ಭತ್ತ ಇವುಗಳಿಂದಾದ ಭಕ್ಷ್ಯಭೋಜ್ಯಗಳು ಹರಿಗೆ ಪ್ರಿಯವಾಗುತ್ತವೆ. ಪಾವನವಾದ ಗೋದಾನ ಮತ್ತು ಭೂಮಿದಾನ ಮತ್ತು ವಸ್ತ್ರ, ಅನ್ನ, ಚಿನ್ನ ಇವುಗಳ ದಾನಗಳೂ ಆ ಮಧುಸೂದನನಿಗೆ ಪ್ರಿಯವಾಗುತ್ತವೆ. ಮಾಘಮಾಸದಲ್ಲಿ ಎಳ್ಳು ಮತ್ತು ಎಳ್ಳಿನೊಡನೆ ಗೋವನ್ನೂ ದಾನಮಾಡಿದಲ್ಲಿ ಅದೂ ಪ್ರಶಸ್ತವಾದುದು ಆ ಮಾಧವನು ಸಂತೋಷಪಡಲಿ ಎಂದು ಹೇಳಿ ಸೌದೆಯನ್ನು ದಾನಮಾಡಬೇಕು, ಫಾಲ್ಗುನಮಾಸದಲ್ಲಿ ಭತ್ತ ಮತ್ತು ವಸ್ತ್ರಗಳು ಹಾಗೆಯೇ ಕೃಷ್ಣಾಜಿನಾದಿಗಳನ್ನೂ ಸಹ ಗೋವಿಂದನ ಪ್ರೀತಿಗಾಗಿ ದಾನಮಾಡಬೇಕು.

೨೫-೨೬. ಚೈತ್ರಮಾಸದಲ್ಲಿಯೂ ನಾನಾವಿಧವಾದ ವಸ್ತ್ರಗಳನ್ನೂ ಹಾಸಿಗೆಗಳನ್ನೂ ಆಸನಗಳನ್ನೂ ಸಹ ಆವಿಷ್ಣುವಿನ ಪ್ರೀತಿಗಾಗಿ ಬ್ರಾಹ್ಮಣರಿಗೆ ದಾನಮಾಡಬೇಕು. ವೈಶಾಖಮಾಸದಲ್ಲಿಯೂ ಸುಗಂಧಿಗಳಾದ ಪದಾರ್ಥಗಳನ್ನು ಮಧುಸೂದನನ

ದೇಯಾನಿ ದ್ವಿಜಮುಖ್ಯೇಭ್ಯೋ ಮಧುಸೂದನತುಷ್ಟಯೇ ।
ಉದಕುಂಭಾಢ್ಯಧೇನುಂ ಚ ತಾಲವೃಂತು ಸಚಂದನಂ ॥
ತ್ರಿವಿಕ್ರಮಸ್ಯ ಪ್ರೀತ್ಯರ್ಥಂ ದಾತವ್ಯಂ ಸಾಧುಭಿಃ ಸದಾ ॥ ೨೭ ॥

ಉಪಾನದ್ಯುಗಲಂ ಛತ್ರಂ ಲವಣಾಮಲಕಾಧಿಕಂ ।
ಆಷಾಢೇ ವಾಮನಪ್ರೀತ್ಯೈ ದಾತವ್ಯಾನಿ ವಿಪಶ್ಚಿತಾ ॥ ೨೮ ॥

ಮಾಸಿ ಭಾದ್ರಪದೇ ದದ್ಯಾತ್ಪಾಯಸಂ ಮಧುಸರ್ಪಿಷೀ ।
ಹೃಷೀಕೇಶಪ್ರೀಣನಾರ್ಥಂ ಲವಣಂ ಸಗುಡೌದನಂ ॥ ೨೯ ॥

ನೀಲಂ ತುರಂಗಂ ವೃಷಭಂ ದಧಿ ತಾಮ್ರಾಯಸಾದಿಕಂ ।
ಪ್ರೀತ್ಯರ್ಥಂ ಪದ್ಮನಾಭಸ್ಯ ದೇಯಮಾಶ್ವಯುಜೇ ನರೈಃ ॥ ೩೦ ॥

ರಜತಂ ಕನಕಂ ದೀಪಾನ್ಮಣಿಮುಕ್ತಾಫಲಾದಿಕಂ ।
ದಾಮೋದರಸ್ಯ ತುಷ್ಟ್ಯರ್ಥಂ ಪ್ರದದ್ಯಾತ್ಕಾರ್ತಿಕೇ ನರಃ ॥ ೩೧ ॥

ತೃಪ್ತಿಗಾಗಿ ಬ್ರಾಹ್ಮಣರಿಗೆ ದಾನಮಾಡಬೇಕು ನೀರಿನಿಂದ ತುಂಬಿದ ಕುಂಭದೊಡನೆ ಗೋವನ್ನೂ ಚಂದನದೊಡಗೂಡಿದ ಬೀಸಣಿಗೆಯನ್ನೂ ಆ ತ್ರಿವಿಕ್ರಮನ ಪ್ರೀತಿಗಾಗಿ ಸತ್ಪುರುಷರು ದಾನಮಾಡಬೇಕು.

೨೮-೩೦. ಆಷಾಢಮಾಸದಲ್ಲಿ ಪಾದರಕ್ಷಾಯುಗ್ಮವನ್ನೂ ಛತ್ರಿ, ಉಪ್ಪು, ನೆಲ್ಲಿಕಾಯಿ ಮೊದಲಾದುವನ್ನು ವಾಮನನ ಪ್ರೀತಿಗಾಗಿ ಪ್ರಾಜ್ಞನಾದವನು ದಾನಮಾಡಬೇಕು. ಭಾದ್ರಪದಮಾಸದಲ್ಲಿ ಪಾಯಸ, ಜೇನುತುಪ್ಪ, ತುಪ್ಪ, ಉಪ್ಪು, ಬೆಲ್ಲದಿಂದ ಮಾಡಿದ ಅನ್ನ (ಗುಡಾನ್ನ) ಇವುಗಳನ್ನು ಆ ಹೃಷೀಕೇಶನ ಪ್ರೀತಿಗಾಗಿ ದಾನಮಾಡಬೇಕು. ಅಶ್ವಯುಜಮಾಸದಲ್ಲಿ ಕಪ್ಪಾದ ಕುದುರೆ, ಎತ್ತು, ಮೊಸರು, ತಾಮ್ರ, ಕಬ್ಬಿಣ ಮೊದಲಾದ ಲೋಹಗಳು ಇವುಗಳನ್ನು ಆ ಪದ್ಮನಾಭನ ಪ್ರೀತಿಗಾಗಿ ದಾನಮಾಡಬೇಕು.

೩೧-೩೨ ಕಾರ್ತಿಕಮಾಸದಲ್ಲಿ ಬೆಳ್ಳಿ, ಚಿನ್ನ, ದೀಪ, ರತ್ನ, ಮುತ್ತು ಇವನ್ನು ಆ ದಾಮೋದರ ಪ್ರೀತಿಗಾಗಿ ದಾನಮಾಡಬೇಕು. ಮಾರ್ಗಶಿರಮಾಸದಲ್ಲಿ ಕತ್ತೆ, ಒಂಟೆ,

---

* ಇಲ್ಲಿಂದ ಮೂಲಪುಸ್ತಕದ ಶ್ಲೋಕಸಂಖ್ಯೆಯು ಪ್ರಕರಣಕ್ಕೆ ವಿರುದ್ಧವಾಗಿದೆ ಶ್ಲೋಕಸಂಖ್ಯಾಕ್ರಮವನ್ನು ಈ ರೀತಿ ಬದಲಾಯಿಸಬೇಕು.

ಖರೋಷ್ಟ್ರಾಶ್ವತರಾನ್ನಾಗಾನ್ ಶಕಟಾದ್ಯಮಜಾವಿಕಂ ।
ದಾತವ್ಯಂ ಕೇಶವಪ್ರೀತ್ಯೈ ಮಾಸಿ ಮಾರ್ಗಶಿರೇ ನರೈಃ ॥ ೩೨ ॥

ಪ್ರಾಸಾದನಗರಾದೀನಿ ಗೃಹಪ್ರಾವರಣಾದಿಕಂ ।
ವಾಮನಸ್ಯ ಚ ತುಷ್ಟ್ಯರ್ಥಂ ಪೌಷೇ ದೇಯಾನಿ ಭಕ್ತಿತಃ ॥ ೩೩ ॥

ದಾಸೀ ದಾಸಮಲಂಕಾರಮನ್ನಂ ಷಡ್ರಸಸಂಯುತಂ ।
ಪುರುಷೋತ್ತಮತುಷ್ಟ್ಯರ್ಥಂ ಪ್ರದೇಯಂ ಸಾರ್ವಕಾಲಿಕಂ ॥ ೩೪ ॥

ಯದ್ಯದಿಷ್ಟತಮಂ ಕಿಂಚಿದ್ಯದ್ವಾಪ್ಯಸ್ಯ ಗೃಹೇ ಶುಚಿಃ ।
ತತ್ತದ್ಧಿ ದೇಯಂ ಪ್ರೀತ್ಯರ್ಥಂ ದೇವದೇವಸ್ಯ ಚಕ್ರಿಣಃ ॥ ೩೫ ॥

ಯಃ ಕಾರಯೇನ್ಮಂದಿರಂ ಕೇಶವಸ್ಯ
ಪುಣ್ಯಾನ್ಲೋಕಾನ್ಸ ಜಯೇ ಚ್ಛಾಶ್ವತಾನ್ವೈ ।
ದತ್ವಾರಾಮಾನ್ಪುಷ್ಪಫಲಾಭಿಪನ್ನಾನ್
ಭೋಗಾನ್ಸ ಭುಂಕ್ತೇ ಕಾಮತಃ ಶ್ಲಾಘನೀಯಾನ್ ॥ ೩೬ ॥

ಹೇಸರಗತ್ತೆ, ಆನೆ, ಗಾಡಿಗಳು, ಕುರಿ, ಮೇಕೆ ಮೊದಲಾದುವನ್ನು ಆ ಕೇಶವನ ಪ್ರೀತಿಗಾಗಿ ದಾನಮಾಡಬೇಕು.

೩೩-೩೫. ಪುಷ್ಯಮಾಸದಲ್ಲಿ ಉಪ್ಪರಿಗೆಗಳು, ನಗರಗಳು, ಮನೆ, ಅಂಗಳ ಪ್ರದೇಶ ಇವೇ ಮೊದಲಾದುವನ್ನು ಆ ವಾಮನನ ಪ್ರೀತಿಗಾಗಿ ಭಕ್ತಿಯಿಂದ ದಾನ ಮಾಡಬೇಕು ಮತ್ತು ಅವರವರ ಇಚ್ಛಾನುಸಾರವಾಗಿ ಆ ಪುರುಷೋತ್ತಮನ ಪ್ರೀತಿ ಗಾಗಿ, ದಾಸಿಯರು, ಭೃತ್ಯರು, ಅಲಂಕಾರಗಳು ಷಡ್ರಸೋಪೇತವಾದ ಅನ್ನವು ಇವು ಗಳನ್ನು ದಾನಮಾಡುತ್ತಲೇ ಇರಬೇಕು, ಮತ್ತು ಯಾವ ವಸ್ತುವು ತನಗೆ ಇಷ್ಟ ವಾಗಿಹುದೋ ಮತ್ತು ಮನೆಯಲ್ಲಿ ಯಾವ ವಸ್ತುಗಳು ಶುಚಿಯಾಗಿರುವುವೋ ಅವೆಲ್ಲವನ್ನೂ ಚಕ್ರಾಯುಧಧಾರಿಯಾದ ಆ ದೇವತೋತ್ತಮನ ಪ್ರೀತಿಗಾಗಿ ದಾನ ಮಾಡಬೇಕು.

೩೬-೩೭. ಯಾವನು ಆ ಕೇಶವನ ಪ್ರೀತಿಗಾಗಿ ಅವನ ದೇವಾಲಯವನ್ನು ನಿರ್ಮಿಸುವನೋ ಅಂತಹ ಪುಣ್ಯಶಾಲಿಯು ಪುಣ್ಯಕರಗಳಾದ ಶಾಶ್ವತಲೋಕಗಳನ್ನು ಗಳಿಸುತ್ತಾನೆ. ಪುಷ್ಪಫಲಗಳಿಂದ ಕೂಡಿದ ಹೂವಿನ ತೋಟಗಳನ್ನು ಅರ್ಪಿಸಿದವನು

ಪಿತಾಮಹಸ್ಯ ಪುರತಃ ಕುಲಾನ್ಯಷ್ಟೋತ್ತರಾಣಿ ತು ।
ಕಾರಯೇದಾತ್ಮನಾ ಸಾರ್ಧಂ ವಿಷ್ಣೋರ್ಮಂದಿರಕಾರಕಃ ॥ ೩೭ ॥

ಇಮಾಶ್ಚ ಪಿತರೋ ದೇವಾ ಗಾಥಾ ಗಾಯಂತಿ ಯೋಗಿನಃ ।
ಪುರತೋ ಯದುಸಿಂಹಸ್ಯ ಹ್ಯಮೋಘಸ್ಯ ತಪಸ್ವಿನಃ ॥ ೩೮ ॥

ಅಪಿ ನಃ ಸ್ವಕುಲೇ ಕಶ್ಚಿದ್ವಿಷ್ಣುಭಕ್ತೋ ಭವಿಷ್ಯತಿ ।
ಹರಿಮಂದಿರಕರ್ತಾ ಯೋ ಭವಿಷ್ಯತಿ ಶುಚಿವ್ರತಃ ॥ ೩೯ ॥

ಅಪಿ ನಃ ಸಂತತೌ ಜಾಯೇದ್ವಿಷ್ಣ್ವಾಲಯವಿಲೇಪನಃ ।
ಸಮ್ಮಾರ್ಜನಂ ಚ ಧರ್ಮಾತ್ಮಾ ಕರಿಷ್ಯತಿ ಚ ಭಕ್ತಿತಃ ॥ ೪೦ ॥

ಅಪಿ ನಃ ಸಂತತೌ ಜಾತೋ ಧ್ವಜಂ ಕೇಶವಮಂದಿರೇ ।
ದಾಸ್ಯತೇ ದೇವದೇವಾಯ ದೀಪಂ ಪುಷ್ಪಾನುಲೇಪನಂ ॥ ೪೧ ॥

ಇಚ್ಛಾನುಸಾರ ಶ್ಲಾಘ್ಯವಾದ ಭೋಗಗಳನ್ನು ಅನುಭವಿಸುತ್ತಾನೆ. ಈ ರೀತಿ ವಿಷ್ಣು ಮಂದಿರವನ್ನು ನಿರ್ಮಿಸಿದವನು ಬ್ರಹ್ಮನ ಎದುರಿಗೆ ತನ್ನೊಡಗೂಡಿದ ತನ್ನ ವಂಶದ ಹಿಂದುಮುಂದಿನ ಎಂಟು ತಲೆಗಳನ್ನೂ ಬಂಧದಿಂದ ತಪ್ಪಿಸಿ ಉದ್ಧರಿಸುತ್ತಾನೆ.

೩೮-೪೦. ಪಿತೃದೇವತೆಗಳೆಲ್ಲರೂ ಯೋಗದೃಷ್ಟಿಯಿಂದ ಇಂತಹ ಮಹಾಪುರುಷನನ್ನೇ ಅಪೇಕ್ಷಿಸಿ ಮಹಾತಪಸ್ವಿಯಾದ ಪರಮಾತ್ಮನ ಎದುರಿಗೆ ನಿಂತು ಈ ರೀತಿ ಆಶಂಸೆ ಮಾಡುತ್ತಾರೆ, ನಮ್ಮ ಕುಲದಲ್ಲಿ ವಿಷ್ಣುಭಕ್ತನಾದ ಮಹಾಪುರುಷನು ಹುಟ್ಟುವನೇ! ಅವನು ಶುಚಿವ್ರತನಾಗಿ ಹರಿಮಂದಿರವನ್ನು ನಿರ್ಮಾಣಮಾಡುವನೇ! ಆ ವಿಷ್ಣುವಿನ ಮಂದಿರವನ್ನು ಲೇಪನಾದಿಗಳಿಂದ ಅಲಂಕರಿಸುವ ಮಹಾತ್ಮನು ಕುಲದಲ್ಲಿ ಉದಯಿಸುವನೇ, ತೊಳೆಯುವುದೇ ಮೊದಲಾದ ಕಾರ್ಯಗಳನ್ನು ಆ ವಿಷ್ಣುಮಂದಿರದಲ್ಲಿ ಧರ್ಮದೃಷ್ಟಿಯಿಂದಲೂಭಕ್ತಿಯಿಂದಲೂ ಮಾಡುತ್ತಾನೆಯೇ!

೪೧-೪೨. ಯಾವನು ಕೇಶವನ ಆ ಮಂದಿರದಲ್ಲಿ ಧ್ವಜವನ್ನು ಪ್ರತಿಷ್ಠೆಮಾಡಿ ಆ ದೇವದೇವನ ಪ್ರೀತಿಗಾಗಿ ದೀಪವನ್ನು, ಪುಷ್ಪಗಳನ್ನೂ ಚಂದನವೇ ಮೊದಲಾದ ಲೇಪನದ್ರವ್ಯವನ್ನೂ ಸಮರ್ಪಿಸುವನೋ ಅಂತಹ ಭಾಗ್ಯಶಾಲಿಯೊಬ್ಬನು ನಮ್ಮ

ಅಪಿ ನಃ ಸ ಕುಲೇ ಭೂಯಾದೇಕಾದಶ್ಯಾಂ ಹಿ ಯೋ ನರಃ ।
ಕರಿಷ್ಯತ್ಯುಪವಾಸಂ ಚ ಸರ್ವಪಾತಕಹಾನಿದಂ ॥ ೪೨ ॥

ಮಹಾಪಾತಕಯುಕ್ತೋ ವಾ ಪಾತಕೀ ಚೋಪಪಾತಕೀ ।
ವಿಮುಕ್ತಪಾಪೋ ಭವತಿ ವಿಷ್ಣ್ವಾವಸಥಚಿತ್ರಕೃತ್ ॥ ೪೩ ॥

ಇತ್ಥಂ ಪಿತೄಣಾಂ ವಚನಂ ಶ್ರುತ್ವಾ ನೃಪತಿಸತ್ತಮಃ ।
ದೇವತಾಯತನಂ ಭೂಮ್ಯಾಂ ಸ್ವಯಂ ಚ್ಯಾಕಾರಯದ್ಬಲೀ ॥ ೪೪ ॥

ವಿಭೂತಿಭಿಃ ಕೇಶವಸ್ಯ ಕೇಶವಾಯತನಾನ್ಯಥ ।
ಚಿತ್ರಯಾಮಾಸ ಶುಚಿಭಿಃ ಪಂಚವರ್ಣೈಸ್ತು ಚಿತ್ರಕೈಃ ॥ ೪೫ ॥

ದೀಪಪಾತ್ರಾಣಿ ವಿಧಿವದ್ವಾಸುದೇವಾಲಯೇ ಬಲೀ ।
ಸುವರ್ಣಂ ತೈಲಪೂರ್ಣಾನಿ ಘೃತಪೂರ್ಣಾನಿ ಚ ಸ್ವಯಂ ॥ ೪೬ ॥

ವಂಶದಲ್ಲಿ ಹುಟ್ಟುವನೇ! ಯಾವನು ಆ ಹರಿಯ ಪ್ರೀತಿಗಾಗಿ ಸರ್ವಪಾಪನಾಶಕವಾದ ಏಕಾದಶ್ಯುಪವಾಸವನ್ನು ಮಾಡುವನೋ ಅಂತಹ ಪುಣ್ಯಶಾಲಿಯು ನಮ್ಮ ವಂಶದಲ್ಲಿ ಹುಟ್ಟುತ್ತಾನೆಯೇ!

೪೩-೪೪. ಆ ವಿಷ್ಣುವಿನ ಮಂದಿರವನ್ನು ಚಿತ್ರಕಾರ್ಯದಿಂದ ಚಿತ್ರಿಸುವವನು ಮಹಾಪಾತಕ ಉಪಪಾತಕಗಳಿಂದ ಕೂಡಿದ್ದರೂ ಆ ಎಲ್ಲಾ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ. ಎಲೈ ಬಲಿಯೇ ಪಿತೃಗಳ ಈ ರೀತಿಯಾದ ಹೆಬ್ಬಯಕೆಯನ್ನು ಕೇಳಿ ಜ್ಯಾಮಘನೆಂಬ ಧೊರೆಯು ಪೂರ್ವದಲ್ಲಿ ವಿಷ್ಣುಭಕ್ತನಾಗಿ ಆ ವಿಷ್ಣುವಿನ ದೇವಾಲಯವನ್ನು ಭೂಮಿಯಲ್ಲಿ ತಾನೇ ನಿರ್ಮಿಸಿದನು.

೪೫-೪೬. ಆ ಕೇಶವನ ವಿಭೂತಿಗಳಾದ ನಾನಾ ವಿಧವಾದ ಅವತಾರಗಳಿಗೂ ಬೇರೆ ಬೇರೆ ಮಂದಿರಗಳನ್ನೂ ನಿರ್ಮಿಸಿ ಆ ಮಂದಿರಗಳಲ್ಲಿ ಪಂಚವರ್ಣಗಳಿಂದ ರಮ್ಯವಾದ ಚಿತ್ರಗಳನ್ನೂ ಬರೆಸಿದನು ಮತ್ತು ಸುವರ್ಣಮಯವಾದ ದೀಪಪಾತ್ರೆಗಳನ್ನೇ ಮಾಡಿಸಿ ಆ ಪಾತ್ರೆಗಳಲ್ಲಿ ತುಪ್ಪವನ್ನೂ ಎಣ್ಣೆಯನ್ನೂ ತುಂಬಿ ತಾನಾಗಿಯೇ ಆ ದೀಪಗಳನ್ನು ಪರಮಾತ್ಮನಲ್ಲಿ ಅರ್ಪಿಸಿದನು, ಕುಸುಂಬೆಯ ವರ್ಣದಿಂದಲೂ, ಮಂಜಿಷ್ಠಾ

ನಾನಾವರ್ಣಾ ವೈಜಯಂತ್ಯೋ ಮಹಾರಜನರಂಜಿತಾಃ ।
ಮಂಜಿಷ್ಠಾ ನವರಂಗೀಯಾಃ ಶ್ವೇತಪಾಟಲಿಕಾಃ ಶ್ರಿತಾಃ ॥ ೪೭ ॥

ಆರಾಮಾ ವಿವಿಧಾ ಹೃದ್ಯಾಃ ಪುಷ್ಪಾಢ್ಯಾಃ ಫಲಶಾಲಿನಃ ।
ಲತಾಪಲ್ಲವಸಂಛನ್ನಾ ದೇವದಾರುಭಿರಾವೃತಾಃ ॥ ೪೮ ॥

ಕಾರಿತ್ಯಾಲಂಕೃತಾ ಮಂಚಾಧಿಷ್ಠಿತಾಃ ಕುಶಲೈರ್ಜನೈಃ ।
ಗಂಧರ್ವವಿದ್ಯಾರಾಗಜ್ಞೈಃ ರತ್ನಸಂಸ್ಕಾರಿಭಿರ್ದೃಢೈಃ ॥ ೪೯ ॥

ತೇಷು ನಿತ್ಯಂ ಪ್ರಪೂಜ್ಯಂತೇ ಯತಯೋ ಬ್ರಹ್ಮಚಾರಿಣಃ ।
ಶ್ರೋತ್ರಿಯಾ ದಾನಸಂಪನ್ನಾ ದೀನಾಂಧವಿಕಲಾದಯಃ ॥ ೫೦ ॥

ಇತ್ಥಂ ಸ ನೃಪತಿರ್ಭೂತ್ವಾ ಶ್ರದ್ಧದಾನೋ ಜಿತೇಂದ್ರಿಯಃ ।
ಜ್ಯಾಮಘೋ ವಿಷ್ಣುನಿಲಯಂ ಗತ ಇತ್ಯನುಶುಶ್ರುಮ ॥ ೫೧ ॥

ಧವಲ ರಕ್ತ ವರ್ಣದಿಂದಲೂ ರಂಜಿತಗಳಾದ ಮತ್ತು ಬಂಗಾರದಿಂದ ನಿರ್ಮಿಸಲಾದ ನಾನಾ ವರ್ಣದ ಧ್ವಜಗಳನ್ನು ನವರಂಗವೆಂಬ ವಿಷ್ಣುಮಂದಿರದ ಭಾಗಗಳಲ್ಲಿ ಏರ್ಪಡಿಸಿದನು.

೪೮-೫೦. ನಾನಾವಿಧವಾದ ಫಲಪುಷ್ಪಗಳಿಂದ ಕೂಡಿಯೂ, ದೇವದಾರು ವೃಕ್ಷಗಳಿಂದ ರಮ್ಯವಾಗಿಯೂ, ಅನೇಕ ಲತೆಗಳ ಚಿಗುರುಗಳಿಂದ ತಂಪಾಗಿಯೂ ಇರುವ ಉದ್ಯಾನಗಳನ್ನು ಅಲ್ಲಿ ಏರ್ಪಡಿಸಿದನು ಆ ರಮ್ಯವಾದ ಉದ್ಯಾನಗಳಲ್ಲಿ ಯತಿಗಳನ್ನೂ ಬ್ರಹ್ಮಚಾರಿಗಳನ್ನೂ, ಶ್ರೋತ್ರಿಯರನ್ನೂ, ನಾನಾವಿಧವಾದ ದಾನಗಳಿಂದ ಪ್ರಖ್ಯಾತರಾದ ಮಹಾಪುರುಷರನ್ನೂ, ದರಿದ್ರರನ್ನೂ, ಕುರುಡರು ಅಂಗವಿಕಲರು ಇಂತಹ ಜನರನ್ನೂ ಸಹ ಅಲ್ಲಿ ಏರ್ಪಡಿಸಿರುವ ಮಂಚಗಳಲ್ಲಿ ಕುಳ್ಳಿರಿಸಿ, ಅವರನ್ನು ಅಲಂಕರಿಸಿ ಗಂಧರ್ವವಿದ್ಯೆಯನ್ನು (ಸಂಗಿತ) ತಿಳಿದವರೂ, ರತ್ನಪರೀಕ್ಷೆಯನ್ನು ತಿಳಿದವರೂ ಸಹ ತಮ್ಮ ತಮ್ಮ ಶಿಲ್ಪಕೌಶಲದಿಂದ ನಿತ್ಯವೂ ಅವರನ್ನು ಪೂಜಿಸುತ್ತಾರೆ,

೫೧-೫೨. ಈ ರೀತಿಯಾಗಿ ಜ್ಯಾಮಘನೆಂಬ ಆ ದೊರೆಯು ಜಿತೇಂದ್ರಿಯನಾಗಿದ್ದು ಶ್ರದ್ಧೆಯಿಂದ ವಿಷ್ಣುವನ್ನು ಪೂಜಿಸಿ ಅದಕ್ಕೆ ಫಲವಾಗಿ ವಿಷ್ಣುಲೋಕವನ್ನೇ

ಸರ್ಷಪಸ್ಯ ಸತೈಲೇನ ಮಧುಕಾ ತಸಿಸಂಭವೈಃ ।
ದೀಪಪ್ರದಾನಾನ್ನರಕಾನಂಧತಾಮಿಸ್ರಸಂಜ್ಞಕಾನ್ ॥
ತೀರ್ತ್ವಾ ಸಭಾರ್ಯಯಾ ರಾಜಾ ವಿಷ್ಣುಲೋಕಮಗಾತ್ತತಃ ॥ ೫೨ ॥

ತಮೇವ ಚಾದ್ಯಾಪಿ ಬಲೇ ಮಾರ್ಗಂ ಜ್ಯಾಮಘಕಾರಿತಂ ।
ವ್ರಜಂತಿ ನರಶಾರ್ದೂಲಾ ವಿಷ್ಣುಲೋಕಂ ಜಿಗೀಷವಃ ॥ ೫೩ ॥

ತಸ್ಮಾತ್ತ್ವಮಪಿ ರಾಜೇಂದ್ರ ಕುರು ದೇವಾಲಯಂ ಹರೇಃ ।
ತಮರ್ಚಯಸ್ವ ಯತ್ನೇನ ಬ್ರಾಹ್ಮಣಾಂಶ್ಚ ಬಹುಶ್ರುತಾನ್ ॥ ೫೪ ॥

ಪೌರಾಣಿಕಾನ್ವಿಶೇಷೇಣ ಸದಾಚಾರರತಾನ್ ಶುಚೀನ್ ।
ವಾಸೋವಿಭೂಷಣೈರತ್ನೈರ್ಗೋಭಿರ್ಭೂಕನಕಾದಿಭಿಃ ॥ ೫೫ ॥

ವಿಭವೇ ಸತಿ ದೇವಸ್ಯ ಪ್ರೀಣನಂ ಕುರು ಚಕ್ರಿಣಃ ॥ ೫೬ ॥

ಹೊಂದಿದನೆಂದು ನಾವು ಕೇಳಿರುವೆವು. ಅವನು ಸಾಸವೆಯ ಮತ್ತು ಹಿಪ್ಪೆ, ಅಗಸಿ ಇವುಗಳ ತೈಲಗಳಿಂದ ಏರ್ಪಡಿಸಲಾಗಿದ್ದ ದೀಪಗಳನ್ನು ವಿಷ್ಣುವಿನ ಪ್ರೀತಿಗಾಗಿ ಅರ್ಪಿಸಿ ಅದರ ಫಲವಾಗಿ ಅಂಧತಾಮಿಸ್ರವೇ ಮೊದಲಾದ ನರಕಗಳೆಲ್ಲವನ್ನೂ ದಾಟಿ ಪತ್ನಿಯೊಡನೆ ವಿಷ್ಣುಲೋಕವನ್ನೇ ಹೊಂದಿದನು.

೫೩-೫೫. ಎಲೈ ಬಲಿಯೇ ಈಗಲೂ ಸಹ ವಿಷ್ಣುಲೋಕವನ್ನು ಅಪೇಕ್ಷಿಸುವ ಮಹಾಪುರುಷರೆಲ್ಲಾ ಆ ಜ್ಯಾಮಘಧೊರೆಯ ಮಾರ್ಗವನ್ನೇ ಆಶ್ರಯಿಸುತ್ತಾರೆ. ಆದುದರಿಂದ ರಾಜಾಧಿರಾಜನಾದ ನೀನೂ ಸಹ ಹರಿಯ ದೇವಾಲಯವನ್ನು ಏರ್ಪಡಿಸು ಆ ಹರಿಯನ್ನೇ ಆರಾಧಿಸು, ಅಲ್ಲಿ ಶಾಸ್ತ್ರಜ್ಞರಾದ ಬ್ರಾಹ್ಮಣೋತ್ತಮರನ್ನೂ ವಿಶೇಷವಾಗಿ ಪೌರಾಣಿಕರನ್ನೂ, ಶುದ್ಧರಾಗಿ ಸದಾಚಾರದಲ್ಲಿ ನಿರತರಾಗಿರುವವರನ್ನೂ ವಸ್ತ್ರಗಳಿಂದಲೂ, ಭೂಷಣಗಳಿಂದಲೂ ರತ್ನಗಳಿಂದಲೂ ಗೋವು ಭೂಮಿ ಸುವರ್ಣ ಮುಂತಾದುವುಗಳಿಂದಲೂ ತೃಪ್ತಿಪಡಿಸು.

೫೬-೫೮. ಐಶ್ವರ್ಯವಿರುವ ಕಾಲದಲ್ಲಿ ಈ ರೀತಿಯಾಗಿ ಸರ್ವವಿಧದಲ್ಲೂ ಚಕ್ರಾಯುಧಧಾರಿಯಾದ ಆ ಮಹಾವಿಷ್ಣುವನ್ನು ಸಂತೋಷಪಡಿಸು, ಈ ವಿಧವಾದ

ಏವಂ ಕ್ರಿಯಾಯೋಗರತಸ್ಯ ತೇಽದ್ಯ
ನೂನಂ ಸುರಾರಿಃ ಶುಭದೋ ಭವಿಷ್ಯತಿ ।
ನರಾ ನ ಸೀದಂತಿ ಬಲೇ ಸಮಾಶ್ರಿತಾ
ವಿಭುಂ ಜಗನ್ನಾಥಮನಂತಮಚ್ಯುತಂ ॥ ೫೭ ॥

ಪ್ರಹ್ಲಾದಃ ಸ ತದಾ ಚೋಕ್ತ್ವಾ ಪುನರ್ನಗರಮಧ್ಯಗಾತ್ ॥ ೫೮ ॥

ಇತ್ಯೇವಮುಕ್ತ್ವಾ ವಚನಂ ದಿತೀಶ್ವರೋ
ವೈರೋಚನಂ ಸತ್ಯಮನುತ್ತಮಂ ಹಿ ।
ಸಂಪೂಜಿತಸ್ತೇನ ವಿಮುಕ್ತಿಮಾಯಯೌ
ಸಂಪೂರ್ಣಕಾಮೋ ಹರಿಪಾದಭಕ್ತಃ ॥ ೫೯ ॥

ಗತೇ ಹಿ ತಸ್ಮಿನ್ಸ್ವದಿತೇ ಪಿತಾಮಹೇ
ಬಲೇರ್ಬಭೌ ಮಂದಿರಮಿಂದುವರ್ಣಂ ।
ಮಹೇಂದ್ರಶಿಲ್ಪಿಪ್ರವರೋಽಥ ಕೇಶವಂ
ಸ ಕಾರಯಾಮಾಸ ಮಹಾಮಹೀಯಾನ್ ॥ ೬೦ ॥

ಕ್ರಿಯಾಯೋಗದಲ್ಲಿ (ಕರ್ಮಯೋಗ) ನಿರತನಾಗಿರುವ, ನಿನ್ನ ವಿಷಯದಲ್ಲಿ ಆ ವಿಷ್ಣುವು ಶುಭಪ್ರದನಾಗಿಯೇ ಆಗುತ್ತಾನೆ, ಎಲೈ ಬಲಿಯೇ ಅಚ್ಯುತನಾಗಿಯೂ ಇರುವ ಆ ಪ್ರಭುವನ್ನು ಆಶ್ರಯಿಸುವ ಮನುಷ್ಯರಾರೂ ಕೆಡುವುದಿಲ್ಲ. ಹೀಗೆಹೇಳಿ ಪ್ರಹ್ಲಾದನು ಪುನಃ ಅಲ್ಲಿಂದ ತನ್ನ ನಗರಕ್ಕೆ ಹೊರಟು ಹೋದನು.

೫೯-೬೦. ಪುಲಸ್ತ್ಯರು ಹೇಳುತ್ತಾರೆ :—ದೈತ್ಯಶ್ರೇಷ್ಠನಾದ ಆ ಪ್ರಹ್ಲಾದನು ಬಲಿಯನ್ನು ಕುರಿತು ಸತ್ಯವಾಗಿಯೂ ಉತ್ತಮೋತ್ತಮವಾಗಿಯೂ ಇರುವ ಈ ರೀತಿಯಾದ ಉಪದೇಶವನ್ನು ಮಾಡಿ ಆ ಬಲಿಯಿಂದ ಸತ್ಕರಿಸಲ್ಪಟ್ಟು ತನ್ನ ಹರಿಪಾದ ಭಕ್ತಿಯಿಂದ ಪೂರ್ಣಕಾಮನಾಗಿ ಮುಕ್ತಿಯನ್ನು ಹೊಂದಿದನು. ಸತ್ಕಾರದಿಂದಲೂ ಬಲಿಯ ಹರಿಭಕ್ತಿಯಿಂದಲೂ ಸಂತುಷ್ಟನಾದ ಆ ಪ್ರಹ್ಲಾದನು ಹೊರಟುಹೋದ ಒಡನೆಯೇ ಬಲಿಯು ಚಂದ್ರನಂತೆ ರಮ್ಯವಾದ ಸೌಧವನ್ನು ಮಾಡಿಸಿದನು. ಇಂದ್ರನ ಶಿಲ್ಪಿಯಿಂದ ಉತ್ತಮವಾದ ಕೇಶವ ವಿಗ್ರಹವನ್ನು ಅಲ್ಲಿ ನಿರ್ಮಾಣಮಾಡಿಸಿದನು.

ಸ್ವಯಂ ಸ್ವಭಾರ್ಯಾಸಹಿತಶ್ಚಕಾರ
ದೇವಾಲಯೇ ಮಾರ್ಜನಲೇಪನಾದಿಕಾಃ ।
ಕ್ರಿಯಾ ಮಹಾತ್ಮಾ ಯವಶರ್ಕರಾದ್ಯಾ
ಬಲಿಂ ಚಕಾರಾಽಪ್ರತಿಮಂ ಮಧುದ್ರುಹಃ ॥ ೬೧ ॥

ದೀಪಪ್ರದಾನಂ ಸ್ವಯಮಾಯತಾಕ್ಷೀ
ವಿಂಧ್ಯಾವಲೀ ವಿಷ್ಣುಗೃಹೇ ಚಕಾರ ।
ಗೇಯಂ ಸಧರ್ಮಗ್ರಹಣಂ ಚ ಧೀಮಾನ್
ಪೌರಾಣಿಕೈರ್ವಿಪ್ರವರೈರಕಾರಯತ್ ॥ ೬೨ ॥

ತಥಾವಿಧಸ್ಯಾಽಸುರಪುಂಗವಸ್ಯ
ಧರ್ಮಾನುಮಾರ್ಗೇ ಪ್ರತಿಸಂಸ್ಥಿತಸ್ಯ ।
ಜಗತ್ಪತಿರ್ದಿವ್ಯವಪುರ್ಜನಾರ್ದನೆ
ಸ್ತಸ್ಥೌ ಮಹಾತ್ಮಾ ಬಲಿರಕ್ಷಣಾಯ ॥ ೬೩ ॥

೬೧-೬೨. ಮಹಾತ್ಮನಾದ ಆ ಬಲಿಯು ಆ ಹರಿಮಂದಿರದಲ್ಲಿ ತನ್ನ ಪತ್ನಿಯೊಡನೆ ತಾನೇ ವರ್ಣಲೇಪನ ಮತ್ತು ಮಾರ್ಜನವೇ ಮೊದಲಾದ ಎಲ್ಲಾ ಕೆಲಸಗಳನ್ನೂ ಮಾಡಿದನು. ಗೋಧಿ, ಸಕ್ಕರೆ ಮೊದಲಾದ ಸ್ವಾದ್ಯವಸ್ತುಗಳಿಂದ ಆ ಹರಿಯನ್ನು ಬಹಳವಾಗಿ ಪೂಜಿಸಿದನು. ಅವನ ಪತ್ನಿಯಾದ ವಿಂಧ್ಯಾವಲಿಯು ಆ ಹರಿಮಂದಿರದಲ್ಲಿ ತಾನೇ ದೀಪಪ್ರದಾನ ಮಾಡುತ್ತಿದ್ದಳು. ಆ ಹರಿಮಂದಿರದಲ್ಲಿ ಬಲಿಯು ಧಾರ್ಮಿಕಗಳಾದ ಪುರಾಣಗಳನ್ನು ಪೌರಾಣಿಕರಾದ ಬ್ರಾಹ್ಮಣೋತ್ತಮರಿಂದ ಗಾನಮಾಡುವಂತೆ ಏರ್ಪಡಿಸಿದನು.

೬೩-೬೪. ಆ ಪ್ರಕಾರ ಧರ್ಮಮಾರ್ಗದಲ್ಲಿ ನಿರತನಾಗಿ ಭಕ್ತಿಯಿಂದ ಹರಿಯನ್ನು ಸೇವಿಸುತ್ತಿರುವ ಆ ಬಲಿಯ ರಕ್ಷಣೆಗಾಗಿ ಜಗತ್ಪತಿಯಾದ ಜನಾರ್ದನನು ದಿವ್ಯದೇಹ ಧಾರಿಯಾಗಿ ಅಲ್ಲಿ ನಿಂತನು. ಹತ್ತುಸಾವಿರ ಸೂರ್ಯರಂತೆ ಜ್ವಲಿಸುತ್ತಿರುವ

ಸೂರ್ಯಾಯುತಾಭಂ ಮುಸಲಂ ಪ್ರಗೃಹ್ಯ
ನಿಘ್ನನ್ಸ ದುಷ್ಟಾನ್ನರಯೂಥಪಾಲಾನ್ ।
ದ್ವಾರಿ ಸ್ಥಿತೋ ನ ಪ್ರದದೌ ಪ್ರವೇಶಂ
ಪ್ರಾಕಾರಗುಪ್ತೌ ಬಲಿನೋ ಗೃಹೇತು ॥ ೬೪ ॥

ದ್ವಾರಿ ಸ್ಥಿತೇ ಧಾತರಿ ರಕ್ಷಪಾಲೇ
ನಾರಾಯಣೇ ಸರ್ವಗುಣಾಭಿರಾಮೇ ।
ಪ್ರಾಸಾದ ಮಧ್ಯೇ ಹರಿಮೀಶಿತಾರ
ಮಭ್ಯರ್ಚಯಾಮಾಸ ಸುರರ್ಷಿಮುಖ್ಯಂ ॥ ೬೫ ॥

ಸ ಏವಮಾಸ್ತೇಽಸುರರಾಡ್ಬಲಿಸ್ತು
ಸಮರ್ಚಯನ್ವೈ ಹರಿಪಾದಪಂಕಜೇ ।
ಸಸ್ಮಾರ ನಿತ್ಯಂ ಹರಿಭಾಷಿತಾನಿ
ಸ ತಸ್ಯ ಜಾತೋ ವಿನಯಾಂಕುಶಸ್ತು ॥ ೬೬ ॥

ಮುಸಲಾಯುಧವನ್ನು ಹಿಡಿದು ಬಲಿಯ ಗೃಹ ರಕ್ಷಣೆಗಾಗಿ ದ್ವಾರಪಾಲನಾಗಿ ನಿಂತ ಆ ಜನಾರ್ದನನು ಬಲಿಯ ವೈರಿಗಳಾದ ರಾಜಾಧಿರಾಜರನ್ನೂ ನಿಗ್ರಹಿಸುತ್ತ ಅವನ ಮನೆಯ ಪ್ರವೇಶಕ್ಕೆ ಅವಕಾಶಕೊಡದೆಯೇ ನಿಂತನು.

೬೫. ತನ್ನ ಸೇವೆಯಲ್ಲಿರುವ ಬಲಿಯನ್ನು ರಕ್ಷಿಸಲು ಜಗದ್ರಕ್ಷಕನಾಗಿಯೂ ಸಕಲಗುಣಾಭಿರಾಮನಾಗಿಯೂ ಇರುವ ನಾರಾಯಣನೇ ದ್ವಾರಪಾಲನಾಗಿ ನಿಂತುದರಿಂದ ಯಾವ ಆತಂಕವೂ ಇಲ್ಲದೆ ತನ್ನ ಉಪ್ಪರಿಗೆಯ ಮಧ್ಯದಲ್ಲಿ ಪ್ರಭುವಾಗಿಯೂ ಮಹಾತಪಸ್ವಿಯಾಗಿಯೂ ಇರುವ ಆ ನಾರಾಯಣನನ್ನು ಪ್ರತಿಷ್ಠೆಮಾಡಿ ಬಲಿಯು ಯಥಾವಿಧಿಯಾಗಿ ಅವನ ಪೂಜಾದಿಗಳನ್ನು ನಡೆಸಿದನು.

೬೬-೬೭. ಈರೀತಿ ಅಸುರರಾಜನಾದ ಆ ಬಲಿಯು ಹರಿಯ ಪಾದಾರವಿಂದಗಳಲ್ಲಿ ಭಕ್ತಿಯಿಂದ ಅವನನ್ನೇ ಪೂಜಿಸುತ್ತಿರುವನು. "ನ ಮೇ ಭಕ್ತಃ ಪ್ರಣಶ್ಯತಿ" ಎಂಬ ಹರಿಯ ವಚನವನ್ನೇ ಸ್ಮರಿಸುತ್ತಿರುವ ಆ ಬಲಿಗೆ ಅಂತಹ ಸ್ಮರಣೆಯೇ ವಿನಯಕ್ಕೆ ಶಿಕ್ಷಕವಾಗಿಯೂ ಪರಿಣಮಿಸಿತು. ಆ ಬಲಿಯು ದೇವೇಂದ್ರನಿಗೆ ಸಮಾನ

ಇದಂ ಚ ವೃತ್ತಂ ಸ ಪಪಾಠ ದೈತ್ಯರಾಟ್
ಸ್ಮರನ್ಸುವಾಕ್ಯಾನಿ ಗುರೋಃ ಶುಭಾನಿ ।
ತಥ್ಯಾನಿ ಪಥ್ಯಾನಿ ಪರತ್ರ ಚೇಹ
ಪಿತಾಮಹಸ್ಯೇಂದ್ರಸಮಸ್ಯ ವೀರಃ ॥೬೭॥

ಯೇ ವೃದ್ಧವಾಕ್ಯಾನಿ ಸಮಾಚರಂತಿ
ಶ್ರುತ್ವಾ ದುರುಕ್ತಾನ್ಯಪಿ ಪೂರ್ವತಸ್ತು ।
ಸ್ನಿಗ್ಧಾನಿ ಪಶ್ಚಾನ್ನವನೀತಶುದ್ಧಾ
ನ್ಮೋದಂತಿ ತೇ ನಾತ್ರ ವಿಚಾರ್ಯಮಸ್ತಿ ॥೬೮॥

ಆಪದ್ಭುಜಂಗದಷ್ಟಸ್ಯ ಮಂತ್ರಹೀನಸ್ಯ ಸರ್ವದಾ ।
ವೃದ್ಧವಾಕ್ಯೌಷಧಾನ್ಯೇವ ಕುರ್ವಂತಿ ಕಿಲ ನಿರ್ವಿಷಂ ॥೬೯॥

ಬೃಹದ್ವಾಕ್ಯಾಮೃತಂ ಪೀತ್ವಾ ತದುಕ್ತಾನ್ಯನುಮನ್ಯ ಚ ।
ಯಾ ತೃಪ್ತಿರ್ಜಾಯತೇ ಪುಂಸಾಂ ಸೋಮಪಾನೇ ಕುತಸ್ತಥಾ ॥೭೦॥

ನಾದ ತನ್ನ ತಾತನಾದ ಪ್ರಹ್ಲಾದನ ಉಪದೇಶವೆಲ್ಲವೂ ಸತ್ಯವೆಂದೂ ತಿಳಿದು ಗುರುವಿನ ಆ ವಾಕ್ಯಗಳನ್ನು ಬಾರಿಬಾರಿಗೂ ಸ್ಮರಿಸುತ್ತಾ ಪರಲೋಕದಲ್ಲಿಯೂ ಈ ಲೋಕದಲ್ಲಿಯೂ ಸಕಲ ಶ್ರೆಯಸ್ಸಿಗೂ ಈ ಹರಿಭಕ್ತಿಯೇ ಸಾಧನವೆಂದು ತಾನೂ ಈ ರೀತಿ ಪಠಿಸಲಾರಂಭಿಸಿದನು.

೬೮-೬೯. ಯಾರು ಮೊದಲು ಇತರರ ದುರ್ವಚನವನ್ನು ಕೇಳಿ ಮನೋದೋಷವನ್ನು ಹೊಂದಿರುವರೋ ಅಂತಹವರು ಸ್ನೇಹಪೂರ್ವಕವಾಗಿ ವೃದ್ಧರಿಂದುಪದೇಶಿಸಲ್ಪಡುವ ಸವಿಮಾತುಗಳನ್ನು ಕೇಳಿ ಬೆಣ್ಣೆಯಂತೆ ಮೃದುಹೃದಯರಾಗಿರುವರೋ ಅವರು ಕೊನೆಯಲ್ಲಿ ಶಾಂತಿಯಿಂದ ಸುಖಿಗಳಾಗುತ್ತಾರೆ. ಈ ವಿಚಾರದಲ್ಲಿ ಸಂದೇಹವಿಲ್ಲ. ವಿಪತ್ತುಗಳೆಂಬ ಸರ್ಪಗಳಿಂದ ಕಚ್ಚಲ್ಪಟ್ಟು ಅದಕ್ಕೆ ಪ್ರತೀಕಾರರೂಪವಾದ ವಿಷನಾಶಕ ಮಂತ್ರವನ್ನು ತಿಳಿಯದೆ ದುಃಖಪಡುವ ಸಂಸಾರಿಗೆ ವೃದ್ಧರ ವಾಕ್ಯಗಳೇ ಔಷಧಿಗಳಾಗಿ ಪರಿಣಮಿಸಿ ಅವನ ವಿಷಬಾಧೆಯನ್ನು ಹೋಗಲಾಡಿಸುತ್ತವೆ.

೭೦-೭೧. ವೃದ್ಧರ ವಚನಗಳೆಂಬ ಅಮೃತವನ್ನು ಆಸ್ವಾದಿಸಿ ಆ ವಚನಗಳ ಅರ್ಥವನ್ನು ಮೆಚ್ಚಿಗೆಯಿಂದ ಅನುಭವಿಸುವವನಿಗೆ ಮನಸ್ಸಿನಲ್ಲಿ ಯಾವ ವಿಧವಾದ ತೃಪ್ತಿಯುಂಟಾಗುತ್ತದೆಯೋ ಅಂತಹ ತೃಪ್ತಿಯು ಸೋಮಪಾನದಿಂದ ತಾನೆ

ಆಪತ್ಸು ಪತಿತಾನಾಂ ಯೇಷಾಂ ವೃದ್ಧಾ ನ ಸಂತಿ ಶಾಸ್ತಾರಃ ।
ತೇ ಶೋಚ್ಯಾ ಬಂಧೂನಾಂ ಜೀವಂತೋಽಪೀಹ ಮೃತತುಲ್ಯಾ ॥ ೭೧ ॥

ಆಪದ್ಗ್ರಾಹಗೃಹೀತಾನಾಂ ವೃದ್ಧಾಃ ಸಂತಿ ನ ಪಂಡಿತಾಃ ।
ಏಷಾಂ ಮೋಚಯಿತಾರೋ ವೈ ತೇಷಾಂ ಶಾಂತಿರ್ನ ವಿದ್ಯತೇ ॥ ೭೨ ॥

ಆಪಜ್ಜಲನಿಮಗ್ನಾನಾಂ ಹ್ರಿಯತಾಂ ವ್ಯಸನೋರ್ಮಿಭಿಃ ।
ವೃದ್ಧವಾಕ್ಯೈರ್ವಿನಾ ನೂನಂ ನೈವೋತ್ತಾರಃ ಕಥಂಚನ ॥ ೭೩ ॥

ಪುಲಸ್ತ್ಯ ಉವಾಚ

ತಸ್ಮಾದ್ಯೋ ವೃದ್ಧವಾಕ್ಯಾನಿ ಶೃಣುಯಾದ್ವಿದಧಾತಿ ವಾ ।
ಸ ಸದ್ಯಃ ಸಿದ್ಧಿಮಾಪ್ನೋತಿ ಯಥಾ ವೈರೋಚನಿರ್ಬಲಿಃ ॥ ೭೪ ॥

ಉಂಟಾಗುವುದೇ! ವಿಪತ್ತನ್ನು ಹೊಂದಿ ದುಃಖಪಡುತ್ತಿರುವ ಯಾವ ಜನರಿಗೆ ವೃದ್ಧರು ಶಿಕ್ಷಕರಾಗಿರುವುದಿಲ್ಲವೋ ಅಂತಹ ಜನರು ಬಂಧುಗಳಿಗೆಲ್ಲಾ ಶೋಚ್ಯ ರಾಗುತ್ತಾರೆ. ಅಂತಹವರು ಈ ಲೋಕದಲ್ಲಿ ಬದುಕಿದ್ದರೂ ಸತ್ತವರೇ ಎಂದು ಭಾವಿಸಬೇಕು.

೭೨. ವಿಪತ್ತೆಂಬ ಮೊಸಳೆಯಿಂದ ಹಿಡಿಯಲ್ಪಟ್ಟವರನ್ನು ಬಿಡಿಸಲು ಶಾಂತ ರಾದ ವೃದ್ಧರೇ ಸಮರ್ಥರೇ ಹೊರತು ಪಂಡಿತರಲ್ಲ. ಯಾವ ಪಂಡಿತರು ಇವನನ್ನು ಬಿಡಿಸಲು ಪ್ರಯತ್ನಿಸುತ್ತಾರೆಯೋ ಅವರು ಶಾಸ್ತ್ರಜ್ಞರಾಗಿದ್ದರೂ ಶಾಂತಿ ಇಲ್ಲದವ ರಾದುದರಿಂದ ಅವರಿಂದ ಇಂತಹವನ ಬಿಡುಗಡೆಯು ಸಾಧ್ಯವೇ ಅಲ್ಲ. ಆದುದರಿಂದ ವೃದ್ಧೋಪದೇಶವೇ ಇದಕ್ಕೆ ತಕ್ಕ ಪ್ರತೀಕಾರವೆಂದು ತಾತ್ಪರ್ಯ.

೭೩. ವಿಪತ್ತೆಂಬ ಸಮುದ್ರದಲ್ಲಿ ಮುಳುಗಿ ವಿಷಯಾಭಿಲಾಷೆ ಎಂಬ ತೆರೆ ಗಳಿಂದ ಒಯ್ಯಲ್ಪಡುತ್ತಿರುವವರಿಗೆ ವೃದ್ಧವಚನಗಳಲ್ಲದೆ ಬೇರೆ ಯಾವ ದೋಣಿಯೂ ಇರುವುದಿಲ್ಲ. ಈ ರೀತಿ ಬಲಿಯ ಪತನಕ್ರಮವನ್ನು ವಿವರಿಸಿ ಪುಲಸ್ತ್ಯರು ಹೇಳುತ್ತಾರೆ :—

೭೪. ಎಲೈ ನಾರದನೇ, ಆದುದರಿಂದ ಯಾವನೊಬ್ಬನು ವೃದ್ಧರ ವಚನ ಗಳನ್ನು ಪ್ರೀತಿಯಿಂದ ಕೇಳುತ್ತಾನೆಯೋ ಅದರಂತೆ ನಡೆಯುತ್ತಾನೆಯೋ (ಇಲ್ಲಿ ಶಾಸ್ತ್ರಜ್ಞಾನವೇ ಪಂಡಿತನ ಲಕ್ಷಣವಲ್ಲ. ಆ ಜ್ಞಾನವು ಆಚರಣಪರ್ಯಂತವಾಗಿ

ಏತನ್ಮಯಾ ಪುಣ್ಯತಮಂ ಪುರಾಣಂ
ತುಭ್ಯಂ ತಥಾ ನಾರದ ಕೀರ್ತಿತಂ ವೈ ।
ಶ್ರುತ್ವಾ ಚ ಕೀರ್ತ್ಯಾ ಪರಯಾ ಸಮೇತೋ
ಭಕ್ತ್ಯಾ ಚ ವಿಷ್ಣೋಃ ಪದಮಭ್ಯುಪೈತಿ ॥ ೭೫ ॥

ಸದಾ ಭವೇತ್ಪುತ್ರಧನೇನ ಭಾರ್ಯಯಾ
ಯುತಶ್ಚ ಯೋ ವಿಷ್ಣುಗತಃ ಸದಾ ಭವೇತ್ ।
ಶೃಣೋತಿ ನಿತ್ಯಂ ವಿಧಿವಚ್ಚ ಭಕ್ತ್ಯಾ
ಸಂಪೂಜಯನ್ಯಃ ಪ್ರಣತಶ್ಚ ವಿಷ್ಣುಂ ॥ ೭೬ ॥

ಸ ಚಾಶ್ವಮೇಧಸ್ಯ ಸದಕ್ಷಿಣಸ್ಯ
ಫಲಂ ಸಮಗ್ರಂ ಕಿಲ ಹೀನಪಾಪಃ ।

ಪರಿಣಮಿಸಿದಲ್ಲಿ ಅವನೇ ಪಂಡಿತನು. "ಶುನಃಪುಚ್ಛಮಿವಾನರ್ಥಂ ಪಾಂಡಿತ್ಯಂ ಧರ್ಮವರ್ಜಿತಂ" ಇತ್ಯಾದಿ ಅನೇಕ ಶಾಸ್ತ್ರಾರ್ಥಗಳೂ ಸೂಚಿತವಾಗುತ್ತವೆ.) ಅಂತಹವನು ಜಾಗ್ರತೆಯಾಗಿ ಸಿದ್ಧಿಮಾರ್ಗವನ್ನು ಹೊಂದುತ್ತಾನೆ. ಇದಕ್ಕೆ ವಿರೋಚನಪುತ್ರನಾದ ಬಲಿಯೇ ಉದಾಹರಣೆ.

೭೫. ಪುಲಸ್ತ್ಯರು ಪುರಾಣದ ಫಲಶ್ರುತಿಯನ್ನು ಆರಂಭಿಸುತ್ತಾರೆ:—ಎಲೈ ನಾರದನೇ, ಈ ವಿಧವಾದ ಪುಣ್ಯಕರವಾದ ಈ ವಾಮನಪುರಾಣವನ್ನು ನಿನಗೆ ಹೇಳಿದ್ದಾಯಿತು. ಇದನ್ನು ಕೇಳಿದವನು ಈ ಲೋಕದಲ್ಲಿ ಬಹಳ ಕೀರ್ತಿವಂತನಾಗಿದ್ದು ವಿಷ್ಣುಭಕ್ತನಾಗಿ ಆ ವಿಷ್ಣುವಿನ ಸ್ಥಾನವನ್ನು ಹೊಂದುತ್ತಾನೆ.

೭೬-೭೭. ಯಾವನು ಯಾವಾಗಲೂ ಆ ವಿಷ್ಣುವಿನಲ್ಲಿಯೇ ಆಶ್ರಯ ಹೊಂದಿರುವನೋ ಅವನು ಪುತ್ರರು, ಭಾರ್ಯೆ, ಧನ ಮುಂತಾದ ಇಹಲೋಕದ ಸುಖ ಸಾಧನಗಳಿಂದ ಯಾವಾಗಲೂ ಕೂಡಿರುತ್ತಾನೆ. ಯಾವನು ಆ ವಿಷ್ಣುವನ್ನು ಯಥಾವಿಧಿಯಾಗಿ ಭಕ್ತಿಯಿಂದ ಪೂಜಿಸುತ್ತ ಪ್ರಣಾಮಾದಿ ವ್ಯಾಪಾರಗಳಲ್ಲಿ ನಿರತನಾಗಿ ಭಕ್ತಿಯ ಅತಿಶಯದಿಂದ ಆ ವಿಷ್ಣುವಿನ ಚರಿತ್ರೆಯನ್ನೂ ಸಹ ಕೇಳುತ್ತಾನೆಯೋ ಅಂತಹ ಪುಣ್ಯಶಾಲಿಯು ನಿಷ್ಪಾಪನಾಗಿ ದಕ್ಷಿಣೆಯೊಡಗೂಡಿದ ಅಶ್ವಮೇಧಯಾಗದ

ಪ್ರಾಪ್ನೋತಿ ದತ್ತಸ್ಯ ಸುವರ್ಣಭೂಮೇ
ರಶ್ವಸ್ಯ ಗೋನಾಗರಥಸ್ಯ ಚೈವ ॥ ೭೭ ॥

ನಾರೀ ನರಶ್ಚಾಽಪಿ ಚ ಪಾದಮೇಕಂ
ಶೃಣ್ವನ್ ಶುಚಿಃ ಪುಣ್ಯತಮಃ ಪೃಥಿವ್ಯಾಂ ।
ಸ್ನಾನೇ ಕೃತೇ ತೀರ್ಥವರೇ ಸುಪುಣ್ಯೇ
ಗಂಗಾಜಲೇ ನೈಮಿಷಪುಷ್ಕರೇ ವಾ ॥ ೭೮ ॥

ಕೋಕಾಮುಖೇ ಯತ್ಪ್ರವದಂತಿ ವಿಪ್ರಾಃ
ಪ್ರಯಾಗಮಾಸಾದ್ಯ ಚ ಮಾಘಮಾಸೇ ।
ಸ ತತ್ಫಲಂ ಪ್ರಾಪ್ಯ ಚ ವಾಮನಸ್ಯ
ಸಂಕೀರ್ತಯನ್ನಾನ್ಯಮನಾಃ ಪದಂ ಹಿ ॥ ೭೯ ॥

ಗಚ್ಛೇನ್ಮಯಾ ನಾರದ ತೇಽದ್ಯ ಚೋಕ್ತಂ
ಯದ್ರಾಜಸೂಯಸ್ಯ ಫಲಂ ಪ್ರಯಚ್ಛೇತ್ ।

ಫಲವನ್ನೇ ಹೊಂದುತ್ತಾನೆ. ಮತ್ತು ಚಿನ್ನ, ಭೂಮಿ, ಕುದುರೆ, ಆನೆ, ರಥ ಇವು ಗಳನ್ನು ಯಥಾವಿಧಿಯಾಗಿ ಸತ್ಪಾತ್ರದಲ್ಲಿ ದಾನಮಾಡುವವನಿಗೆ ಉಂಟಾಗಬಹುದಾದ ಮಹಾಫಲವೂ ಇವನಿಗೆ ಉಂಟಾಗುತ್ತದೆ.

೭೮-೭೯. ಈ ಭೂಮಿಯಲ್ಲಿರುವ ಪುಣ್ಯಶಾಲಿಯಾದ ಮನುಷ್ಯನೇ ಆಗಲಿ ಸ್ತ್ರೀಯೇ ಆಗಲಿ ಈ ಪುರಾಣದ ಒಂದು ಪಾದವನ್ನಾದರೂ ಶುಚಿಯಾಗಿದ್ದು ಶ್ರವಣ ಮಾಡಿದ್ದೇ ಆದರೆ ಅಂತಹ ಸ್ತ್ರೀಪುರುಷರು ಇದರಲ್ಲಿ ಹೇಳಿರುವ ಪುಣ್ಯತೀರ್ಥಗಳಲ್ಲಿ ಹಾಗೂ ಗಂಗಾಜಲದಲ್ಲಿಯೂ ನೈಮಿಷತೀರ್ಥದಲ್ಲಿಯೂ ಪುಷ್ಕರತೀರ್ಥದಲ್ಲಿಯೂ ಕೋಕಾಮುಖದಲ್ಲಿಯೂ ಮಾಘಮಾಸದಲ್ಲಿ ಪ್ರಯಾಗದ ತೀರ್ಥದಲ್ಲಿಯೂ ಸಹ ಸ್ನಾನಮಾಡಿದವರಿಗೆ ಯಾವ ಮಹಾಫಲಗಳನ್ನು ಬ್ರಾಹ್ಮಣೋತ್ತಮರು ಹೇಳಿರುವರೋ ಅಂತಹ ಮಹಾಫಲವನ್ನು ಹೊಂದುತ್ತಾರೆ. ಮತ್ತು ಏಕಮನಸ್ಕತೆಯಿಂದ ಈ ವಾಮನನನ್ನು ಕೀರ್ತನೆಮಾಡಿ ಅವನ ಸ್ಥಾನವನ್ನೇ ಹೊಂದುತ್ತಾರೆ.

೮೦. ಎಲೈ ಮಹರ್ಷಿಯೇ ರಾಜಸೂಯ ಯಾಗದ ಫಲವನ್ನೂ ಕೊಡುವ ಯಾವ ಈ ಪುಣ್ಯಚರಿತ್ರೆಯನ್ನು ನಿನಗೆ ಹೇಳಿರುವೆನೋ, ಇಂತಹ ಈ ಚರಿತ್ರೆಯ

ಯದ್ಭೂಮಿಲೋಕೇ ಸುರಲೋಕಲಭ್ಯೇ
ಮಹತ್ಸುಖಂ ಪ್ರಾಪ್ಯ ನರಃ ಸಮಗ್ರಂ ॥ ೮೦ ॥

ಪ್ರಾಪ್ನೋತಿ ಚಾಸ್ಯ ಶ್ರವಣಾನ್ಮಹರ್ಷೇ
ಸೌತ್ರಾಮಣೇರ್ನಾಸ್ತಿ ಚ ಸಂಶಯೋ ಮೇ ।
ರತ್ನಸ್ಯ ದಾನಸ್ಯ ಚ ತತ್ಫಲಂ ಭವೇತ್
ಸೂರ್ಯಸ್ಯ ಚಂದ್ರೇ ಗ್ರಹಣೇ ಚ ರಾಹೋಃ ॥ ೮೧ ॥

ಅನ್ನಸ್ಯ ದಾನೇನ ಫಲಂ ಯಥೋಕ್ತಂ
ಬುಭುಕ್ಷಿತೇ ಪ್ರಾಪ್ತವರೇ ಚ ಸಾಗ್ನಿಕೇ ।
ದುರ್ಭಿಕ್ಷಸಂಪೀಡಿತಪುತ್ರಭಾರ್ಯೇ
ಜ್ಞಾತೌ ಸದಾ ಪೋಷಣತತ್ಪರೇ ಚ ॥ ೮೨ ॥

ದೇವಾಗ್ನಿವಿಪ್ರರ್ಷಿರತೇ ಚ ಪಿತ್ರೋಃ
ಸುತೇ ತಥಾ ಭ್ರಾತರಿ ಜ್ಯೇಷ್ಠಕೇ ಚ ।
ಯತ್ತೇ ಫಲಂ ತತ್ಪ್ರವದಂತಿ ದೇವಾಃ
ಸ ತತ್ಫಲಂ ಲಭತೇ ಚಾಸ್ಯ ಪಾಠಾತ್ ॥ ೮೩ ॥

ಶ್ರವಣದಿಂದ ಭೂಲೋಕದಲ್ಲಿಯೂ ದೇವಲೋಕದಲ್ಲಿಯೂ ಹೊಂದಬಹುದಾದ ಫಲಗಳನ್ನು ಪುಣ್ಯಶಾಲಿಯು ಹೊಂದುತ್ತಾನೆ. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ.

೮೧-೮೩. ಮತ್ತು ಸೂರ್ಯ ಚಂದ್ರರ ಗ್ರಹಣ ಕಾಲದಲ್ಲಿ ರತ್ನವನ್ನು ದಾನ ಮಾಡುವುದರಿಂದಲೂ ಹಸಿದು ಬಂದವನಿಗೆ ಅನ್ನದಾನ ಮಾಡುವುದರಿಂದಲೂ, ಅಗ್ನಿಸಹಿತನಾಗಿ ಬಂದ ಅರ್ಥಿಗೂ ದುರ್ಭಿಕ್ಷಕಾಲದಲ್ಲಿ ಪತ್ನಿಪುತ್ರರ ಭರಣಕ್ಕಾಗಿ ಕಷ್ಟಪಡುತ್ತಿರುವವನಿಗೂ, ಕುಟುಂಬ ಪೋಷಣದಲ್ಲಿರುವ ಜ್ಞಾತಿಗೂ, ತಂದೆತಾಯಿಗಳ ಪೋಷಣೆಗಾಗಿ ಕಷ್ಟಪಡುತ್ತಿರುವ ದೇವತೆಗಳ ಮತ್ತು ಬ್ರಾಹ್ಮಣ, ಅಗ್ನಿ, ಋಷಿಗಳು ಇವರ ಸೇವೆಯಲ್ಲಿ ನಿರತನಾಗಿರುವ ಮತ್ತು ಪುತ್ರನಿಗೂ, ದೊಡ್ಡ ಅಣ್ಣನಿಗೂ ಸಹ ಕಷ್ಟಕಾಲದಲ್ಲಿ ದಾನಮಾಡುವವನಿಗೆ ಯಾವ ಫಲವನ್ನು ದೇವತೆಗಳು ಹೇಳುತ್ತಾರೆಯೋ ಅಂತಹ ಫಲವನ್ನು ಈ ಉಪಾಖ್ಯಾನವನ್ನು ಪಠಿಸುವವನು ಹೊಂದುತ್ತಾನೆ.

ಚತುರ್ದಶಂ ವಾಮನಮಾಹುರಗ್ರ್ಯಂ
ಶ್ರುತೇ ಚ ಯಸ್ಯಾಃಘಚಯೋಽವಿನಾಶಂ ।
ಪ್ರಯಾಂತಿ ನಾಸ್ತ್ಯತ್ರ ಚ ಸಂಶಯೋ ಮೇ
ಮಹಾಂತಿ ಪಾಪಾನ್ಯಪಿ ನಾರದ್ಯಾಃಶು ॥ ೮೪ ॥

ಪಾಠಾತ್ಸಂಶ್ರವಣಾದ್ವಿಪ್ರ ಶ್ರವಣಾದಪಿ ಕಸ್ಯಚಿತ್ ।
ನಶ್ಯಂತಿ ಸರ್ವಪಾಪಾನಿ ವಾಮನಸ್ಯ ಸದಾ ಮುನೇ ॥ ೮೫ ॥

ಯಥಾ ಪಾಪಾನಿ ಪೂಯಂತೇ ಗಂಗಾವಾರಿವಿಗಾಹನಾತ್ ।
ತಥಾ ಪುರಾಣಶ್ರವಣಾದ್ದುರಿತಾನಾಂ ವಿನಾಶನಂ ॥ ೮೬ ॥

ನ ತಸ್ಯ ರೋಗಾ ಜಾಯಂತೇ ನ ವಿಷಂ ಚಾಭಿಚಾರಿತಂ ।
ಶರೀರೇ ಚ ಕುಲೇ ಬ್ರಹ್ಮನ್ಯಃ ಶೃಣೋತೀಹ ವಾಮನಂ ॥ ೮೭ ॥

ಇದಂ ರಹಸ್ಯಂ ಪರಮಂ ತವೋಕ್ತಂ
ನ ವಾಚ್ಯಮೇವಂ ಹರಿಭಕ್ತಿವರ್ಜಿತೇ ।

---

೮೪. ಈ ವಾಮನಾವತಾರವು ಹಿಂದಿನ ಕಲ್ಪಸಂಖ್ಯೆಯಿಂದ ಹದಿನಾಲ್ಕನೆಯದು, ಈ ಅವತಾರದ ಉಪಾಖ್ಯಾನ ಶ್ರವಣದಿಂದ ಎಲ್ಲಾ ಪಾಪಗಳೂ ಮಹಾಪಾತಕಗಳೂ ಜಾಗ್ರತೆಯಾಗಿ ನಾಶಹೊಂದುತ್ತವೆ. ಇದರಲ್ಲಿ ನನಗೆ ಸಂಶಯವಿಲ್ಲ.

೮೫. ಎಲೈ ಮುನಿವರ್ಯನೇ ವಾಮನನ ಈ ಉಪಾಖ್ಯಾನದ ಪಾಠದಿಂದಲೂ, ಅರ್ಥಸಹಿತವಾಗಿ ಅಥವಾ ಅರ್ಥವಿಲ್ಲದೆ ಕೇವಲ ಶಬ್ದರಾಶಿಯ ಶ್ರವಣದಿಂದಲೂ ಯಾವವನಿಗಾದರೂ (ಸರ್ವಸಾಮಾನ್ಯವಾಗಿ) ಸರ್ವಪಾಪಗಳೂ ನಾಶಹೊಂದುತ್ತವೆ.

೮೬. ಪಾಪಿಗಳೂ ಸಹ ಗಂಗಾಜಲದ ಸ್ನಾನದಿಂದ ಶುದ್ಧರಾಗುವಂತೆ ಈ ವಾಮನ ಪುರಾಣದ ಶ್ರವಣದಿಂದಲೂ ಪಾಪನಾಶಹೊಂದಿ ಶುದ್ಧರಾಗುತ್ತಾರೆ.

೮೭-೮೮. ಎಲೈ ಬ್ರಾಹ್ಮಣೋತ್ತಮನೇ, ಈ ವಾಮನಪುರಾಣವನ್ನು ಯಾವನು ಶ್ರವಣಮಾಡುತ್ತಾನೆಯೋ ಅವನ ಶರೀರದಲ್ಲಿಯೂ ವಂಶದಲ್ಲಿಯೂ ಸಹ ರೋಗ ಮತ್ತು ವಿಷ, ಆಭಿಚಾರಕ (ಮಾಟಕೂಟಗಳು) ಇವುಗಳ ಭಯವು ಎಂದಿಗೂ ಇರುವುದಿಲ್ಲ. ರಹಸ್ಯವಾದ ಈ ಉಪಾಖ್ಯಾನವನ್ನು ನಿನಗೆ ಹೇಳಿರುವೆನು, ನೀನೂ ಸಹ ಹರಿಭಕ್ತಿ ಇಲ್ಲದವನಿಗೆ ಇದನ್ನು ಹೇಳಕೂಡದು. ಅಂತಹ ಭಕ್ತಿ ಇಲ್ಲದವನು

ದ್ವಿಜಸ್ಯ ನಿಂದಾರತಿ ಹೀನತಾರತೇ
ಸಹೇತು ವಾಕ್ಯಾದ್ವೃತಪಾಪಸತ್ವೇ ॥ ೮೮ ॥

ನಮೋ ನಮಃ ಕಾರಣವಾಮನಾಯ
ನಾರಾಯಣಾಯಾಽಮಿತವಿಕ್ರಮಾಯ ।
ಶ್ರೀ ಶಾರ್ಙ್ಗಚಕ್ರಾಸಿಗದಾಧರಾಯ
ನಮೋಽಸ್ತು ತಸ್ಮೈ ಪುರುಷೋತ್ತಮಾಯ ॥ ೮೯ ॥

ಇತ್ಥಂ ವದೇದ್ಯೋ ನಿಯತಂ ಮನುಷ್ಯಃ ಕೃಷ್ಣಭಾವನಃ ।
ತಸ್ಯ ವಿಷ್ಣುಃ ಪದಂ ಮೋಕ್ಷಂ ದದಾತಿ ಸುರಪೂಜಿತಃ ॥ ೯೦ ॥

ವಾಚಕಾಯ ಪ್ರದಾತವ್ಯಂ ಗೋಭೂಸ್ವರ್ಣವಿಭೂಷಣಂ ।
ವಿತ್ತಶಾಠ್ಯಂ ನ ಕರ್ತವ್ಯಂ ಕುರ್ವನ್ ಶ್ರವಣನಾಶಕಃ ॥ ೯೧ ॥

ಬ್ರಾಹ್ಮಣನಿಂದೆಯಿಂದಲೂ ಪಾಪಕಾರ್ಯದಲ್ಲಿ ಆಸಕ್ತಿಯಿಂದಲೂ ಹೀನನಾಗಿರುವವನೆಂಬುದನ್ನು ಸಕಾರಣವಾದ ವಾಕ್ಯಪ್ರಮಾಣದಿಂದ ತಿಳಿದು ಅವನನ್ನು ವರ್ಜಿಸಬೇಕು.

೮೯-೯೦. ವಾಮನಾವತಾರಹೊಂದಿದ ಜಗತ್ಕಾರಣ ಮೂರ್ತಿಯಾಗಿಯೂ ಅಥವಾ ಬಲಿಬಂಧನ ವ್ಯಾಜದಿಂದ ಲೋಕಕಲ್ಯಾಣಕ್ಕಾಗಿ ವಾಮನನಾಗಿಯೂ, ಮಹಾ ಪರಾಕ್ರಮಶಾಲಿಯಾಗಿಯೂ ಇರುವ ಆ ನಾರಾಯಣನಿಗೆ ಅನಂತ ನಮಸ್ಕಾರಗಳು. ಶಾರ್ಙ್ಗವೆಂಬ ಧನುಸ್ಸನ್ನೂ, ಚಕ್ರ, ಖಡ್ಗ, ಗದೆ, ಇವುಗಳನ್ನೂ ಧರಿಸಿರುವ ಆ ಪುರುಷೋತ್ತಮನಿಗೆ ಅನಂತ ನಮಸ್ಕಾರಗಳು. ಯಾವ ಮನುಷ್ಯನು ಆ ಕೃಷ್ಣನ ಸತತ ಸ್ಮರಣೆಯಿಂದ ಈ ರೀತಿ ಹೇಳುತ್ತಾ ತತ್ಪರನಾಗಿರುವನೋ ಅಂತಹ ಭಕ್ತನಿಗೆ ದೇವವಂದಿತನಾದ ಆ ವಿಷ್ಣುವು ಮೋಕ್ಷವನ್ನು ಕೊಡುತ್ತಾನೆ.

೯೧. ಇದನ್ನು ಪಠನಮಾಡಿದವರಿಗೆ ಶ್ರವಣಮಾಡಿದವರು ಗೋವು, ಭೂಮಿ, ಸುವರ್ಣ, ಭೂಷಣ ಇತ್ಯಾದಿಗಳನ್ನು ದಾನಮಾಡಬೇಕು. ದಾನಮಾಡತಕ್ಕ ದ್ರವ್ಯದಲ್ಲಿ ಲೋಭದಿಂದ ವರ್ತಿಸಬಾರದು. ಹಾಗೆ ಮಾಡಿದ್ದೇ ಆದರೆ ಅವರು ಹೊಂದಬೇಕಾದ ಶ್ರವಣಫಲವೇ ನಾಶವಾದೀತು.

ತ್ರಿಸಂಧ್ಯಂ ಚ ಪಠನ್ ಶೃಣ್ವನ್ಸರ್ವಪಾಪಪ್ರಣಾಶನಂ ।
ಅಸೂಯಾರಹಿತಂ ವಿಪ್ರಃ ಸರ್ವಸಂಪತ್ಪ್ರದಾಯಕಂ ॥೯೨॥

ಇತಿ ಶ್ರೀ ವಾಮನಪುರಾಣೇ ವಾಮನಪ್ರಾದುರ್ಭಾವೇ
ಪುಲಸ್ತ್ಯ ನಾರದ ಸಂವಾದೇ ಪಂಚನವತಿತಮೋಽಧ್ಯಾಯಃ

॥ ವಾಮನಪುರಾಣಂ ಸಮಾಪ್ತಂ ॥

॥ ಓಂ ಶುಭಮಸ್ತು ॥ ಶ್ರೀಕೃಷ್ಣಾರ್ಪಣಮಸ್ತು ॥

---

೯೨. ಬ್ರಾಹ್ಮಣನಾದವನು ಅಸೂಯಾದಿದೋಷಗಳನ್ನು ಬಿಟ್ಟು ಪ್ರಾತಃ, ಸಾಯಂ, ಮಧ್ಯಾಹ್ನವೆಂಬ ಮೂರು ಸಂಧಿಕಾಲದಲ್ಲಿಯೂ ಇದರ ಶ್ರವಣದಿಂದಲೂ ಪಾಠದಿಂದಲೂ ಸರ್ವಪಾಪರಹಿತನಾಗಿ ಸಂಪತ್ತನ್ನು ಹೊಂದುತ್ತಾನೆ.

ಇಲ್ಲಿಗೆ ಪುಲಸ್ತ್ಯ ನಾರದರ ಸಂವಾದ ರೂಪವಾದ ಶ್ರೀ ವಾಮನಪುರಾಣದಲ್ಲಿ
ತೊಂಭತ್ತೈದನೆಯ ಅಧ್ಯಾಯವು ಮುಗಿದಿದೆ.

ಶುಭಮಸ್ತು ಶ್ರೀ ಕೃಷ್ಣಾರ್ಪಣಮಸ್ತು

ಶ್ರೀ ವಾಮನ ಪುರಾಣವು ಸಂಪೂರ್ಣವಾಗಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಪ್ರಹ್ಲಾದನಿಂದ ಸಮಗ್ರವಾದ ವೈಷ್ಣವಧರ್ಮವನ್ನು ಉಪದೇಶಹೊಂದಿದ ಬಲಿಯು ಪ್ರಹ್ಲಾದನನ್ನು ಕುರಿತು, ಗುರುವೇ ಜನಾರ್ದನ ರೂಪಿಯಾದ ಪರಮಾತ್ಮನ ಪೂಜೆಯೇ ಸದ್ಗತಿಗೆ ಕಾರಣವೆಂದು ತಮ್ಮಿಂದ ಉಪದೇಶವು ನನಗೆ ಲಭಿಸಿದೆ ಆದರೆ ಆ ಪೂಜೆಯಿಂದ ಲಭಿಸಬಹುದಾದ ಗತಿ ಎಂತಹುದು. ಆ ಪೂಜೆಯ ವಿಧಾನವೇನು, ಯಾವಯಾವ ಸಾಮಗ್ರಿಗಳಿಂದ ಹೇಗೆ ಪೂಜಿಸಬೇಕು. ಆದಕ್ಕೆ ಅರ್ಹವಾದ ತಿಥಿಯೂ ಯಾವುದು ಆ ಜಗದ್ಗುರುವಿನ ಪ್ರೀತಿಗಾಗಿ ಮಾಡ

ಬೇಕಾದ ದಾನಗಳಾವುವು. ಉಪವಾಸವನ್ನೂ ಯಾವ ತಿಥಿಯಲ್ಲಿ ಮಾಡಬೇಕು, ಇದೆಲ್ಲವನ್ನೂ ದಯವಿಟ್ಟು ಹೇಳಬೇಕು ಎಂದು ಪ್ರಶ್ನೆ ಮಾಡಲು ಪ್ರಹ್ಲಾದನು ಅದಕ್ಕೆ ಉತ್ತರವಾಗಿ ಮಹಾ ವಿಷ್ಣುವಿನಲ್ಲಿ ಭಕ್ತಿಶ್ರದ್ಧೆಗಳಿಂದ ಯಾವ ಕಾಲದಲ್ಲಿ ಅವನ ಪೂಜೆಯನ್ನೂ ಅವನಿಗೆ ಪ್ರಿಯವಾದ ದಾನಾದಿಗಳನ್ನೂ ಉಪವಾಸವ್ರತವನ್ನೂ ಆಚರಿಸುತ್ತಾನೆಯೋ, ಮತ್ತು ಆ ವಿಷ್ಣುವಿನ ಪ್ರೀತಿಗಾಗಿ ಬ್ರಾಹ್ಮಣರನ್ನು ಅವಮಾನಿಸದೆ ವಿಶೇಷವಾಗಿ ಪೂಜಿಸುತ್ತಾನೆಯೋ, ಅದೇ ಪ್ರಶಸ್ತವಾದ ತಿಥಿ ಬ್ರಾಹ್ಮಣರು ನನ್ನ ದೇಹವೆಂದು ಅವನೇ ಹೇಳಿರುವುದರಿಂದ ಅಂತಹ ಬ್ರಾಹ್ಮಣೋತ್ತಮರ ಪೂಜೆಯೇ ಆ ಜನಾರ್ದನನ ಪೂಜೆ ಎಂದು ತಿಳಿ. ಆದುದರಿಂದ ವೈಷ್ಣವನಾದ ನೀನು ಬ್ರಾಹ್ಮಣಾವಮಾನವನ್ನು ಯಾವಾಗಲೂ ಮಾಡಕೂಡದು ಎಂದು ಸಾಮಾನ್ಯವಾಗಿ ಹೇಳಿ. ಮತ್ತೂ ವಿಷ್ಣುವಿನ ಆರಾಧನಕ್ಕಾಗಿ ಉಪಯೋಗಿಸಲು ಅರ್ಹವಾದ ಫಲಪುಷ್ಪಗಳು ನೈವೇದ್ಯ ಧೂಪ ಇವುಗಳನ್ನೆಲ್ಲಾ ವಿಶೇಷರೂಪದಿಂದಲೂ ನಿರೂಪಿಸಿದನು. ಪೂಜೆಯ ಸಾದ್ಗುಣ್ಯಕ್ಕಾಗಿ ಅನೇಕ ದಾನಗಳನ್ನೂ ಆಯಾಯ ಮಾಸಭೇದದಿಂದ ಉಪಪಾದಿಸಿ ಏಕಾದಶಿಯ ಉಪವಾಸದ ಪ್ರಾಶಸ್ತ್ಯವನ್ನೂ ವಿವರಿಸಿ, ಸರ್ವಪ್ರಕಾರದಿಂದಲೂ ವಿಷ್ಣುಭಕ್ತಿಯ ಅತಿಶಯವನ್ನೂ ನಿರೂಪಿಸಿ ಜ್ಯಾಮಘನೆಂಬ ದೊರೆಯಂತೆ ನೀನೂ ಪರಮವೈಷ್ಣವನಾಗಿ ವಿಷ್ಣುಮಂದಿರವನ್ನು ನಿರ್ಮಿಸಿ, ಅಲ್ಲಿ ಪ್ರತಿಷ್ಠಿತನಾದ ಆ ಹರಿಯನ್ನು ಧೂಪದೀಪಾದಿಗಳಿಂದ ಆರಾಧಿಸು, ಶ್ರೋತ್ರಿಯರು ಪೌರಾಣಿಕರು, ದೀನರು, ಕುಟುಂಬಿಗಳು ಮೊದಲಾದವರನ್ನು ಆ ದೇವಮಂದಿರದ ಉದ್ಯಾನದಲ್ಲಿ ಕುಳ್ಳಿರಿಸಿ ಉಪಚರಿಸು, ಈ ರೀತಿಯಾದ ವೈಷ್ಣವವ್ರತವೇ ನಿನಗೆ ಶ್ರೇಯಸ್ಸಿಗೆ ಕಾರಣವೆಂದು ಉಪದೇಶಿಸಿ ತನ್ನ ಸ್ಥಳಕ್ಕೆ ಹೊರಟುಹೋದನೆಂದೂ ಹೇಳಲಾಯಿತು. ಅನಂತರ ಆ ಉಪದೇಶದಂತೆ ಬಲಿಯು ರಮ್ಯವಾದ ವಿಷ್ಣುಮಂದಿರವನ್ನೇರ್ಪಡಿಸಿ ಅಲ್ಲಿ ಪ್ರತಿಷ್ಠಿತನಾಗಿ ಬಲಿಯ ರಕ್ಷಣೆಯಲ್ಲೂ ಜಾಗರೂಕನಾಗಿ ನೆಲಸಿದ ಮಹಾವಿಷ್ಣುವನ್ನು ಪತ್ನಿಯಾದ ವಿಂಧ್ಯಾವಲಿಯೊಡನೆ ಧೂಪದೀಪಾದಿಗಳಿಂದಲೂ ದಾನಾದಿಗಳಿಂದಲೂ ಸೇವಿಸುತ್ತಾ ಬ್ರಾಹ್ಮಣಪೂಜಾದಿಗಳಲ್ಲಿ ತತ್ಪರನಾಗಿ ಬಲಿಯು ಶಾಂತಿಸುಖಗಳಿಂದಕೂಡಿ ತನಗೆ ಈ ವೈಷ್ಣವಧರ್ಮವನ್ನು ಉಪದೇಶಿಸಿದ ಪ್ರಹ್ಲಾದನನ್ನು ಸ್ಮರಿಸುತ್ತಾ ವೃದ್ಧರವಾಕ್ಯವು ಬಹಳಮಟ್ಟಿಗೂ ಆದರಣೀಯವೆಂದೂ ಅದನ್ನು ಅತಿಕ್ರಮಿಸುವವನಿಗೆ ಯಾವ ಶ್ರೇಯಸ್ಸೂ ಉಂಟಾಗುವುದಿಲ್ಲವೆಂದೂ ತಾನೂ ಘೋಷಿಸಿದನು ಎಂದು ಹೇಳ

ಲಾಯಿತು. ಅನಂತರ ಉಪಾಖ್ಯಾನದ ಮಾಹಾತ್ಮ್ಯವನ್ನು ಬಹುವಿಧವಾಗಿ ನಿರೂಪಿಸಿ ಪುಲಸ್ತ್ಯರು ಫಲಶ್ರುತಿಯೊಡನೆ ಹರಿನಾಮಸ್ಮರಣೆಮಾಡಿ ಉಪಾಖ್ಯಾನವನ್ನು ಉಪಸಂಹರಿಸಿರುತ್ತಾರೆ.

ಸ್ವಸ್ತಿ ಪ್ರಜಾಭ್ಯಃಪರಿಪಾಲಯಂತಾಂ
ನ್ಯಾಯ್ಯೇನ ಮಾರ್ಗೇಣಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತುನಿತ್ಯಂ
ಲೋಕಾಃ ಸಮಸ್ತಾಃಸುಖಿನೋಭವಂತು ॥ ೧ ॥

ಅನುವಾದಕನ ಮಂಗಳಾಶಂಸನ

ಹಯಮುಖವಿಭುಃದೇವಃ ಶ್ರೀಮಾನ್ ಸ ಏವ ಹೃದಿಸ್ಥಿತೋ
ವಿವೃತಿಮನಘಾಮೇವಂ ಕುರ್ವನ್ ಕೃತಾರ್ಥಯತಿಸ್ಮನಃ ।
ತದನಘಕೃಪಾದತ್ತಾನುಜ್ಞಃ ತದೀಯಪದಾಬ್ಜಯೋಃ
ಕೃತಿಮುಪಹರನ್ನೇತಾಂ ನಾಥಂ ತಮೇವಧಿನೋಮ್ಯಹಂ ॥ ೨ ॥

ಏವಂಮಯಾವಿವರಣಂಹಿ ಯಥಾಮನೀಷಂ
ಶ್ರೀವಾಮನೇ ರಚಿತಮಾದ್ಯತದೇಶಭಾಷಂ ।
ಪ್ರೀಣಾತ್ವನೇನ ಭಗವಾನ್ ಯದುವಂಶನೇತಾ
ತದ್ವಂಶಭೂಶ್ಚ ಜಯಚಾಮಮಹೀಮಹೇಂದ್ರಃ ॥ ೩ ॥

ಜೀಯಾಚ್ಛ್ರೀ ಜಯಚಾಮಭೂಪತಿಮಣಿಃ ಸದ್ಧರ್ಮಕಲ್ಪದ್ರುಮಃ
ತಸ್ಯಾಜ್ಞಾಂಶಿರಸಾವಹಂತು।ಸತತಂ ಲಬ್ಧೋಪಕಾರಾಃ ಪ್ರಜಾಃ
ನಿತ್ಯಂ ಸತ್ಯರತೈರಜಸ್ರಸುಖಿತೈಃಧರ್ಮಾಭಿವೃದ್ಧ್ಯಾಜನೈಃ
ನಿರ್ಧೂಯೈವಕಲಿಂ ಕೃತಾಂತಲಸಿತಂ ಭೂಯಃ ಕೃತಃ ಸೇವ್ಯತಾಂ ॥ ೪ ॥

ಇಲ್ಲಿಗೆ ಶ್ರೀಮಹೀಶೂರರಾಜಧಾನೀ ರತ್ನಸಿಂಹಾಸನಾಧಿರೂಢರಾಗಿ ದಯಮಾಡಿಸಿರುವ
ಶ್ರೀ ಜಯಚಾಮರಾಜ ಮಹಾಪ್ರಭುಗಳವರ ಉದಾರಾಶ್ರಯದಿಂದ ಆಸ್ಥಾನ
ಮಹಾವಿದ್ವಾಂಸನಾಗಿಯೂ ಸಂಸ್ಕೃತಮಹಾಪಾಠಶಾಲೆಯ ಸಾಹಿತ್ಯ
ಪ್ರಧಾನೋಪಾಧ್ಯಾಯನಾಗಿಯೂ ಇರುವ ಸಂಕೇಘಟ್ಟದ
ವೆಂಕಟಾಚಾರ್ಯನಿಂದ ವಿರಚಿತವಾದ ವಾಮನ
ಪುರಾಣದ ಕರ್ಣಾಟಕಭಾಷಾನುವಾದುವು
ಸಮಾಪ್ತಿಹೊಂದಿದೆ.

—॥ ಶ್ರೀರಸ್ತು ॥—